कर्मण्येवाधिकारस्ते मा फलेषु कदाचन



ಕರ್ಮವೀರ

ನಮ್ಮ ಪೋಷಕರಿಗೆಲ್ಲ ದೀಪಾವಳಿಯ ಶುಭೇಚ್ಛೆಗಳು . . . .

ಸಿನೇಮಾ ಮತ್ತು ನಾಟಕಗೃಹಗಳಲ್ಲಿ ಹಾಗೂ ಸಾರ್ವಜನಿಕ ಭಾಷಣಗಳ

ಪೂರ್ಣ ಧ್ವನಿ ಪ್ರಸರಣೆಗೆ ಹಾಗೂ ಸಿನೇಮಾ ಕಾರ್ಬನಗಳು

ಬಿಡಿಭಾಗಗಳು ಮತ್ತು ಇನ್ನಿತರ ಸಲಕರಣೆಗಳು

ಇತ್ಯಾದಿ ಬಗ್ಗೆ ಸಂಪರ್ಕಬೆಳೆಸಿರಿ

ಭಾರದ್ವಾಜ ಇಲೆಕ್ಟ್ರೋನಿಕ್ಸ

ಸ್ಟೇಶನ್ ರೋಡ, **ಹುಬ್ಬಳ್ಳಿ**

ಕಾಂತಾ ಮತ್ತು ಕಂಪನಿ ಘತ್ತರಗಲ್ಲಿ—**ಬನಾರಸ**

ದೀಪಾವಳಿಯು ಸರ್ವರಿಗೂ ಸುಖಪ್ರದವಾಗಲಿ!

ನಾವು ಪಕ್ಕಾ ರೇಷ್ಮೆಯ ಗ್ಯಾರಂಟೇ ಬಣ್ಣದ ಶುದ್ಧ ಜೆಳ್ಳೀಜ಼ುರಿಯ ರೇಷ್ಮೆ ಶೀರೆ, ಶಾಲು, ಖಣ, ಬ್ಲೌಜ ಪೀಸ್, ಪೀತಾಂಬರ ಹೊದೆಯುವ ಝುರೀವಲ್ಲಿಗಳು, ದಿನದಿಂದ ದಿನಕ್ಕೆ ಬದಲಾಗುವ ಡಿಝಾಯಿನುಗಳಿಂದಲೂ ಸದಾ ತೃಪ್ತಿಯನ್ನೀಯುವ ಯಾವತ್ತೂ ಮಾಲುಗಳನ್ನು ತಯಾರಿಸಿ, ವ್ಯಾಪಾರಸ್ಥರಿಗೆ ಠೋಕಾಗಿಯೂ ಗಿರಾಕಿಗಳಿಗೆ ಚಿಲ್ಲರೆಯಾಗಿಯೂ ಪೂರೈಸುತ್ತೇವೆ.

ಇದಲ್ಲದೆ ಉತ್ತಮ ಕಸ್ತೂರಿ, ಕೇಸರ, ಶಿಲಾಜಿತು, ಪಚ್ಚಕರ್ಪೂರ, ಶಂಖ, ಜೈಘಂಟಿ, ರುದ್ರಾಕ್ಷ್ಕಿ, ಶಿವಪಂಚಾಯತನ ಮುಂತಾದ ಸಾಮಾನುಗಳು ನಮ್ಮಲ್ಲಿ ಯೋಗ್ಯ ದರದಲ್ಲಿ ಶಿಗುತ್ತವೆ.

ಶಿರ್ಶಿ ಶಾಖೆ:— ಹೆಗಡೆ ದೇವರು ಭಟ್ಟರ ಅಂಗಡಿಯಲ್ಲಿ

ಕುಲಕರ್ಣಿ ಸ್ಟುಡಿಯೋ

ಬಾಗಲಕೋಟೆ

ಕಳೆದ ೨೦ ವರ್ಷಗಳಿಂದಲೂ ಉತ್ತರ ಕರ್ನಾಟಕದಲ್ಲೆಲ್ಲ ಉತ್ತಮ ಕಲಾವಿದರೆಂದು ಪ್ರಸಿದ್ಧ ಪಡೆದ **ಕುಲಕರ್ಣಿ ಸ್ಟುಡಿಯೋ**ದಲ್ಲಿ ನಿಮ್ಮ ಎನ್‌ಲಾರ್ಜಮೆಂಟ ಕೆಲಸಗಳನ್ನು ಕೊಟ್ಟು ಕಲೆಗೆ ಪ್ರೋತ್ಸಾಹಿಸಿರಿ. ಕಡಿಮೆ ಬೆಲೆಯ ಪ್ರಚಾರಕರ ಮಾತಿಗೆ ಮರುಳಾಗದೇ ನಮ್ಮ ಈ ಕೆಳಗಿನ ಸಾಯಿಜಗಳಲ್ಲಿ ನಿಮ್ಮ ಎನ್‌ಲಾರ್ಜಮೆಂಟದ ಆರ್ಡರುಗಳನ್ನು ಸಮಕ್ಷಮ ಇಲ್ಲವೆ ಪತ್ರದ್ವಾರಾ ಕಳುಹಿಸಿರಿ.

	B. W.	Oil Paint
10×12	12—0—0	20—0—0
15×12	15—0—0	25—0—0
16×20	30—0—0	40—0—0

ಸಂಯುಕ್ತ ಕರ್ನಾಟಕಕ್ಕೆ ಚಂದಾದಾರರಾಗಿರಿ



ಅಭಿನಂದನೆಗಳು

ಈ ಶುಭ ದಿನ ಹೊಸ ವರುಷದ ನಮ್ಮ ಶುಭೇಚ್ಛೆಗಳನ್ನು ಕಳಿಸಲು ಅತ್ಯಾನಂದವಾಗುತ್ತದೆ. ಹಿಂದಿನಂತೆ ಎಲ್ಲ ತರಹದ ಶ್ರೇಷ್ಠ ಸುಗಂಧ ದ್ರವ್ಯಗಳನ್ನು ಮುಂದಾದರೂ ಪೂರೈಸುತ್ತೇವೆಂದು, ಈ ಶುಭ ಸಮಯದಲ್ಲಿ ದೃಢೀಕರಿಸುತ್ತೇವೆ.

ESP

Patanwala

for PERFUMES AND COSMETICS

BOMBAY - 27.



ಜಾಹೀರಾತುದಾರರಿಗೆ ಬರೆಯುವಾಗ
ದಯವಿಟ್ಟು 'ಕರ್ಮವೀರ' ಪತ್ರಿಕೆಯ
ಹೆಸರನ್ನು ಬರೆಯಿರಿ.

ಪರಿವಿಡಿ

ವಿ. ಸೂ. :— ಸಂಸ್ಕೃತ ಸಾಹಿತ್ಯದಲ್ಲಿ " ಕಾಮಿನಿ ಕೌಶಲ " ಎಂಬ ಲೇಖನವು ೪೮ ನೆಯ ಪುಟದಿಂದ ೯೭ ನೆಯ ಪುಟದಲ್ಲಿ ಮುಂದುವರಿದಿದೆ. ೯೭ ನೆಯಪುಟದಲ್ಲಿ 'ಮುಂದುವರಿದದ್ದು' ಎಂದು ಹಾಕುವದು ತಪ್ಪಿಹೋಗಿದ್ದು ವಾಚಕರು ಇದನ್ನು ಗಮನಿಸಬೇಕೆಂದು ವಿನಂತಿ.

INDEX TO ADVERTISERS

ಕರ್ಮವೀರಕ್ಕೆ
ಚಂದಾದಾರರಾಗಿರಿ

ಕರ್ಮವೀರ

ಸಂಸ್ಥಾಪಕರು : ರಂ. ರಾ. ದಿವಾಕರ :: ದೀಪಾವಳಿ ಸಂಚಿಕೆ ೧೯೫೩ :: ಸಂಪಾದಕರು : ಹ. ರಾ. ಪುರೋಹಿತ

ನಮ್ಮ ನುಡಿ

ವಿಜಯ ಸಂವತ್ಸರದ ದೀಪಾವಳಿಯ ಈ ಸಂತೋಷದ ಸಮಯದಲ್ಲಿ, ನಾವು ನಮ್ಮ ವಾಚಕರಿಗೆ 'ಕರ್ಮವೀರ' ದ ವಿಶೇಷ ಸಂಚಿಕೆಯನ್ನು ಸಮರ್ಪಿಸುತ್ತೇವೆ. ಇದು ನಮ್ಮ ಆರನೆಯ ವಿಶೇಷ ಸಂಚಿಕೆಯು. ವಾಚಕರ ವಿವಿಧ ಅಭಿರುಚಿಗಳಿಗೆ ತಕ್ಕಂತೆ ವಿಚಾರ ಪರಿಪ್ಲುತ ಲೇಖಗಳು, ಕತೆ, ಕವನ, ಹರಟೆಗಳು, ಚಿತ್ರಗಳನ್ನು ಕೊಟ್ಟದ್ದಲ್ಲದೆ ವರ್ಷಭವಿಷ್ಯವನ್ನೂ ಕೊಟ್ಟಿರುವೆವು. ದೀಪಾವಳಿಯ ಸವಿಯೂಟದ ಶುಭ ಪ್ರಸಂಗದಲ್ಲಿ ನಮ್ಮ ವಾಚಕರು ಸಾಹಿತ್ಯದ ಸವಿಯನ್ನು ಸವಿದು ತಣಿಯುವರೆಂದು ನಂಬುತ್ತೇವೆ.

* * *

ಕಳೆದ ದೀಪಾವಳಿಯಿಂದ ಈ ದೀಪಾವಳಿಯ ವರೆಗೆ ನಮ್ಮ ರಾಷ್ಟ್ರದಲ್ಲಿ ನಡೆದ ಮಹತ್ವದ ಘಟನೆಗಳನ್ನು ಸಿಂಹಾವಲೋಕನ ಮಾಡುವುದು ಅಪ್ರಸ್ತುತವಾಗಲಾರದು. ನಮ್ಮ ಸ್ವತಂತ್ರ ಸರಕಾರವು ರಾಷ್ಟ್ರದ ಸಾರ್ವಾಂಗಿಕ ಉನ್ನತಿಗಾಗಿ ಬಗೆ ಬಗೆಯಿಂದ ಪ್ರಯತ್ನಿಸುತಿದೆ. ಪಂಚವಾರ್ಷಿಕ ಯೋಜನೆಯ ಪ್ರಗತಿಯೂ ಭರದಿಂದ ಸಾಗಿದೆ. ರಾಷ್ಟ್ರವನ್ನು ಸ್ವಾವಲಂಬಿ ಮಾಡುವುದೇ ಸರಕಾರದ ಮುಖ್ಯ ಉದ್ದೇಶವಾಗಿದೆ. ಭಾರತೀಯರು ಈ ಸಂದರ್ಭದಲ್ಲಿ ಸರಕಾರಕ್ಕೆ ಎಲ್ಲ ಬಗೆಯಿಂದ ಸಹಾಯ ಮಾಡುವದು ಅವಶ್ಯವಾಗಿದೆ.

* * *

ಕಳೆದ ಅಕ್ಟೋಬರ ಒಂದರಂದು ಆಂಧ್ರ ಸ್ವತಂತ್ರರಾಜ್ಯ ಸ್ಥಾಪನೆಯಾದುದು ಮಹತ್ವದ ಘಟನೆಯಾಗಿದೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಮ್ಮ ಸರಕಾರವು ಅನೇಕ ಜಟಿಲ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದದ್ದರಿಂದ ಭಾಷಾನ್ವಯ ಪ್ರಾಂತಗಳ ರಚನೆಗೆ ತಡೆಯಾಗಹತ್ತಿದೆ. ಈಗಲೂ ಆ ಸಮಸ್ಯೆಗಳು ಪೂರ್ಣವಾಗಿ ಬಗೆಹರಿದಿಲ್ಲ. ಪ್ರಾಂತಗಳ ರಚನೆಯ ಸಂಬಂಧದಲ್ಲಿ ಗಡಿಗಳ ಸಮಸ್ಯೆ ಭೂತಾಕಾರವಾಗಿ ನಿಲ್ಲುವುದೆಂಬ ಭೀತಿ ತೋರಹತ್ತಿದೆ. ಆಯಾ ಭಾಷಾನ್ವಯ ಪ್ರಾಂತವಾದಿಗಳು ಗಡಿಗಳ ಸಂಬಂಧದಲ್ಲಿ ಐಕಮತ್ಯ ಪ್ರಸ್ಥಾಪಿಸಿಕೊಂಡರೆ ಈ ಸಮಸ್ಯೆ ಸುಲಭಸಾಧ್ಯ.

* * *

ಇನ್ನುಳಿದ ಪ್ರಾಂತಗಳ ರಚನೆಯ ಸಂಬಂಧದಲ್ಲಿ ಉಚ್ಚಮಟ್ಟದ ಆಯೋಗವನ್ನು ನೇಮಿಸಲು ಸರಕಾರವು ನಿರ್ಧರಿಸಿದೆ. ಆ ಮಂಡಳದವರ ಸಲಹೆ ಸೂಚನೆಗಳನ್ನನುಲಕ್ಷಿಸಿ ಮುಂದಿನ ಕ್ರಮ ಕೈಕೊಳ್ಳಲಾಗುವದು. ಕರ್ನಾಟಕದ ಮಟ್ಟಿಗೆ ಹೇಳಬೇಕಾದರೆ ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳು ಈಗಾಗಲೆ ಮೈಸೂರಿನಲ್ಲಿ ಸೇರಿ ಸ್ವತಂತ್ರ ಕರ್ನಾಟಕ ಪ್ರಾಂತದ ನಾಂದೀಸ್ಥಾಪನವಾದಂತಾಗಿದೆ. ಇಡಿ ಜಿಲ್ಲೆಯನ್ನು ಘಟಕವೆಂದು ಬಗೆದು ಬಳ್ಳಾರಿ ಜಿಲ್ಲೆಯನ್ನು ಮೈಸೂರಿನಲ್ಲಿ ಸೇರಿಸಿದ್ದರೆ ಒಳಿತಾಗುತಿದ್ದಿತು. ಮುಂದೆ ಗಡಿಗಳ ಬಗ್ಗೆ ವಿಶೇಷ ತೊಡಕುಗಳಿಗೆ ಅವಕಾಶವಿರುತಿರಲಿಲ್ಲ. ಬಳ್ಳಾರಿ ಜಿಲ್ಲೆಯ ಮೂರು ತಾಲೂಕುಗಳು ಆಂಧ್ರಕ್ಕೆ ಜೋಡಿಸಲ್ಪಟ್ಟದ್ದು ಕನ್ನಡಿಗರಿಗೆ ಅನ್ಯಾಯ ಮಾಡಿದಂತಾಗಿದೆ.

* * *

ಕಾಶ್ಮೀರವು ಹೊಸ ಗಂಡಾಂತರದಿಂದ ಪಾರಾಗಿ ಸ್ವಾತಂತ್ರ್ಯವನ್ನುಳಿಸಿಕೊಂಡದ್ದು ಮಹತ್ವದ ಸಂಗತಿಯಾಗಿದೆ. ಅಲ್ಲಿನ ಹಿಂದಿನ ಪ್ರಧಾನ ಮಂತ್ರಿ ಶೇಖಅಬ್ದುಲ್ಲಾ ಇವರು ಪರಕೀಯರ ಕೈವಾಡದಿಂದ ಕಾಶ್ಮೀರದ ಸ್ವಾತಂತ್ರ್ಯದ ಹರಣಮಾಡುತ್ತಿದ್ದರು. ಕಾಶ್ಮೀರ ಪ್ರೇಮಿಗಳು ಈ ಒಳಸಂಚನ್ನು ಸಕಾಲದಲ್ಲಿಯೆ ಕಂಡುಹಿಡಿದು ಅವರನ್ನು ಪದಚ್ಯುತಗೊಳಿಸಿ ಬಕ್ಷಿ ಗುಲಾಮ ಮಹಮ್ಮದರ ಹಿರಿತನದಲ್ಲಿ ಹೊಸ ಮಂತ್ರಿಮಂಡಳ ಸ್ಥಾಪಿಸಿಕೊಂಡರು. ಕಾಶ್ಮೀರ ತಾನಾಗಿಯೇ ಭಾರತದಲ್ಲಿ ಸೇರ್ಪಡೆಯಾಗಿದ್ದು, ಭಾರತದಲ್ಲಿರುವದರಿಂದಲೆ ತನ್ನ ಉದ್ಧಾರವೆಂದು ಭಾವಿಸಿದೆಯೆಂದು ಸದ್ಯದ ಅಲ್ಲಿನ ಪ್ರಧಾನ ಮಂತ್ರಿಗಳು ಮುಕ್ತಕಂಠದಿಂದ ಹೇಳುತಿರುವರು. ಯುಕ್ತರಾಷ್ಟ್ರ ಸಂಘದವರು ಇನ್ನಾದರೂ ಈ ಹಿನ್ನೆಲೆಯಲ್ಲಿ ಈ ಪ್ರಶ್ನೆಯ ಇತ್ಯರ್ಥ ಮಾಡಲಿ.

* * *

ಪಾಕಿಸ್ತಾನದೊಡನೆ ಭಾರತದ ಸಂಬಂಧವು ಇನ್ನೂ ಅಷ್ಟೊಂದು ಸ್ನೇಹಮಯವಾಗಿರದಿದ್ದರೂ ಎರಡೂ ದೇಶಗಳ ಪ್ರಧಾನ ಮಂತ್ರಿಗಳು ಪ್ರತ್ಯಕ್ಷ ಭೆಟ್ಟಿಯಾಗಿ ವಿಚಾರವಿನಿಮಯ ಮಾಡಿದ ನಂತರ ಪರಿಸ್ಥಿತಿ ತಿಳಿಯಾಗಹತ್ತಿರುವದು.

* * *

ಕೊನೆಯದಾಗಿ ಈ ಸಂಚಿಕೆಗೆ ಸಹಾಯಕರಾದವರೆಲ್ಲರಿಗೆ ಅಭಿನಂದನೆಗಳನ್ನು ಸಲ್ಲಿಸುವದು ಅವಶ್ಯವಾಗಿದೆ. ಮೊದಲನೆಯದಾಗಿ ಲೇಖಗಳನ್ನು, ಕವನಗಳನ್ನು ಕಳಿಸಿದ ಹಿರಿ-ಕಿರಿಯರಿಗೆ, ಭವಿಷ್ಯಕಾರರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಈ ಸಲದ ಮುಖಚಿತ್ರವು ಹುಬ್ಬಳ್ಳಿಯ ಪ್ರಸಿದ್ಧ ಕಲಾವಿದರಾದ ಶ್ರೀ ಕೃಷ್ಣಾ ಕ್ಷತ್ರಿಯರದು. ಸಕಾಲದಲ್ಲಿ ಮುಖಚಿತ್ರವನ್ನು ತೆಗೆದುಕೊಟ್ಟದ್ದಕ್ಕೆ ಅವರನ್ನು ಅಭಿನಂದಿಸುತ್ತೇವೆ. ಮುಖಚಿತ್ರದ ಪಡಿಯಚ್ಚು ಮಾಡಿಕೊಟ್ಟ ಮುಂಬೈಯ ನಾಗಳೆ ಕಂಪನಿ ಇವರಿಗೆ ಹಾರ್ದಿಕ ಅಭಿನಂದನೆಗಳು. ಉಳಿದ ಪಡಿಯಚ್ಚುಗಳನ್ನು ಮಾಡಿಕೊಟ್ಟ ಹುಬ್ಬಳ್ಳಿಯ ಐಡಿಯಲ್ ಫೋಟೋ ಝಿಂಕೋ ವರ್ಕ್ಸ ಮತ್ತು ಧಾರವಾಡದ ಶ್ರೀನಿವಾಸ ಮತ್ತು ಕಂಪನಿಯವರಿಗೂ ಒಳಗಿನ ಚಿತ್ರಗಳನ್ನು ತೆಗೆದ ಶ್ರೀ ಮೂರ್ತಿ ಮತ್ತು ಪ್ರಭುಗಳಿಗೂ ಕೃತಜ್ಞರಾಗಿದ್ದೇವೆ. ಈ ಸಂಚಿಕೆಗಾಗಿ ಬಂದ ಕೆಲ ಲೇಖನಗಳನ್ನು ಪ್ರಕಟಿಸುವದಾಗದ್ದಕ್ಕೆ ಆಯಾ ಲೇಖಕರ ಕ್ಷಮೆ ಕೋರುವೆವು. ಎಂದಿನಂತೆ ನಮ್ಮ ಮೇಲೆ ಅಭಿಮಾನವನ್ನಿಟ್ಟು ಜಾಹೀರಾತುಗಳನ್ನು ಕೊಟ್ಟವರನ್ನೆಲ್ಲ ಅಭಿನಂದಿಸುವೆವು. ಕೊನೆಯದಾಗಿ ಈ ಸಂಚಿಕೆಗಾಗಿ ತುಂಬ ಪರಿಶ್ರಮದಿಂದ ದುಡಿದ ನಮ್ಮ ಸಹಕಾರಿಗಳನ್ನು, ಮುದ್ರಣ ಹಾಗು ಇತರ ವಿಭಾಗಗಳ ಕೆಲಸಗಾರರನ್ನು ಹಾರ್ದಿಕವಾಗಿ ಅಭಿನಂದಿಸದಿರಲಾರೆವು.

ಈ ದೀಪಾವಳಿಯು ಎಲ್ಲರಿಗೂ ಸಂತೋಷಪ್ರದವಾಗುವಂತೆ ಪರಮಾತ್ಮನು ಅನುಗ್ರಹಿಸಲೆಂದು ಆ ದಯಾಘನನನ್ನು ಪ್ರಾರ್ಥಿಸುತ್ತೇವೆ.

॥ ಸರ್ವೇ ಜನಾಃ ಸುಖಿನೋ ಭವಂತು ॥

ಶ್ರೀಚಂದ್ರಲಾಂಬಾ

ಲೇಖಕರು :
ಶ್ರೀ. ದ. ಲ. ಕೆರೂರ

[ಶ್ರೀಸನ್ನತಿ ಕ್ಷೇತ್ರವು ಹೈದರಾಬಾದ ರಾಜ್ಯದಲ್ಲಿ ಹುಟಗಿ-ರಾಯಚೂರ ರೇಲ್ವೆ ಮಾರ್ಗದ ವಾಡಿ ಜಂಕ್ಶನಿನ ಸಮೀಪದ ನಲ್ವಾರ ರೇಲ್ವೆ ನಿಲ್ದಾಣದಿಂದ ಹತ್ತು ಮೈಲು ದೂರದಲ್ಲಿದೆ. ಭೀಮಾತೀರದಲ್ಲಿರುವ ಈ ಪರಮಪಾವನ ಕ್ಷೇತ್ರದ ಅಧಿದೇವತೆ ಶ್ರೀಚಂದ್ರಲಾಂಬಿಕೆ. ಆಕೆಯ ಒಕ್ಕಲುಗಳು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಇಂದಿಗೂ ನೆಲಸಿದ್ದಾರೆ. ಆ ದೇವಿಯ ಯಥಾಮತಿ ಸ್ತೋತ್ರವೇ ಇದು.]

ನಮೋ ಎಂಬೆ ಶ್ರೀ ಚಂದ್ರಲಾಂಬೆ
ಸನ್ಮತಿಯನಿತ್ತು ಕಾಯೆ ।
ಹೊನ್ನಗುಂಟೆಯಲಿ ನೆಲಸಿ ಸನ್ನತಿಯ
ದೀನಗೊಲಿದೆ ತಾಯೆ ॥ ಪಲ್ಲ ॥

ದಂಡಕಾರಣ್ಯದೊಂದು ಭಾಗದಲಿ
ಪರಿವಳಲ್ಲಿ ಭೀಮೆ ।
ಚಂಡತಾಪಸರ ಹೋಮ ಧೂಮ
ದಿಂದಹಳು ಚಿತ್ರರಾಮೆ ॥ ೧ ॥

ನೇತಿ ನೇತಿ ಎಂದೆಂಬ ಚರ್ಚೆಯಲಿ
ಧರ್ಮಸೂಕ್ಷ್ಮವರಿಯೆ ।
ಜಾತ ತರ್ಕ ಸಾಹಿತ್ಯ ವೇದ ವೇ-
ದಾಂಗದೊಂದು ಪರಿಯೆ ॥ ೨ ॥

ಸಾಕು ಸಾಕೆಮ್ಮ ಬಾಳಿಗೇಕೆ
ಬರಬೇಕು ಜಗದ ಚಿಂತೆ ।
ಲೋಕಪಾಲಕನ ಕಂಡರಾಯ್ತು
ಎಂದೆನೋ ಅವರ ಚಿಂತೆ ॥ ೩ ॥

ಸಾಂದ್ರಸುಮನ ಸೌಂದರ್ಯದಿಂದ
ನಿಂತಿರುವ ಪರ್ಣಶಾಲೆ ।
ಚಂದ್ರವದನೆ ಸತಿ ಪತಿಯು ನಾರಾ
ಯಣಂಗೆ ಕರ್ಮಶಾಲೆ ॥ ೪ ॥

ಚಾರು ಚಂದ್ರಲೆಗೆ ಬೇರೆ ದೈವ
ವಿನ್ನಿಲ್ಲ ಪತಿಯಬಿಟ್ಟು ।
ಯಾರು ನಾರಾಯಣಂಗೆ ಕಣ್ಮಣಿಯು
ಚಂದ್ರಮುಖಿಯ ಬಿಟ್ಟು ॥ ೫ ॥

ಅವರ ಮಧುರ ದಾಂಪತ್ಯಕೊಂದು
ತನಿವಣ್ಣು ಕಾಣಲಿಲ್ಲ ।
ಅವರ ಪ್ರೀತಿ ವಾತ್ಸಲ್ಯಕೆಲ್ಲ
ಸಮಪಾಲು ಶಿಷ್ಯರೆಲ್ಲ ॥ ೬ ॥

ಇಂತು ಶಾಂತ ಸುಸ್ನೇಹಪೂರ್ಣ
ಮಾರ್ಗದಲಿ ಜೀವನೌಕೆ ।
ಕಂತುಪಿತನ ದಯೆಯಿಂದ ಸಾಗೆ
ಮುಂಬರುವ ಚಿಂತೆಯೇಕೆ ॥ ೭ ॥

ಮುಂದೆ ಒಂದಿನದೊಳೇನೊ ಬಂತು
ಕೆಂಧೂಳಿ ಮುಗಿಲಮುಟ್ಟಿ ।
ಹಿಂದೆ ಬರುವ ಬಿರುಗಾಳಿಗೊಂದು
ಕಣ್ಸನ್ನೆಯಂತೆ ತಟ್ಟೆ ॥ ೮ ॥

ಶ್ರಾಂತ ತುರಗವಾಶ್ರಮಕೆ ಸಾರಿ
ತಡೆದಾಗ ಬಾಗಿಲಲ್ಲಿ ।
ಕ್ಲಾಂತ ಸೇತು ಭೂಪತಿಯ ಹೊತ್ತು
ನಿಂತಿತ್ತು ಬೆನ್ನಿನಲ್ಲಿ ॥ ೯ ॥

ಬೆಂದು ಬಳಲಿ ಬಾಯಾರಿ ಬಂದ
ಸನ್ನತಿಯ ಸೇತು ಭೂಪ ।
ನಿಂದ ಸತಿಗೆ ತಣ್ಣೀರ ಕೇಳಿದನು
ಹರಿಸೆ ತನ್ನ ತಾಪ ॥ ೧೦ ॥

ಸಾರಿ ವಿನಯದಿಂದವನ ಕರೆದು
ಸತ್ಕರಿಸಿ ಧರ್ಮದಂತೆ ।
ದೂರನಿಂತ ಚಂದ್ರಲೆಯ ಕಂಡು
ಸೋತಿದ್ದ ಮೂಢನಂತೆ ॥ ೧೧ ॥

ಚಿತ್ತಜಂಗೆ ಸೆರೆಸಿಕ್ಕ ಭೂಪ
ಮುನಿಸತಿಯನಾಸೆಯಿಂದ ।
ಮತ್ತನಂತೆ ಬಿಡದೆತ್ತಿಕೊಂಡು
ಧಾವಿಸಿದ ವೇಗದಿಂದ ॥ ೧೨ ॥

ಬಂದ ಮುನಿಯು ಸ್ನಾನಾಹ್ನಿಕಾದಿ
ಗಳನೆಲ್ಲ ಮುಗಿಸಿಕೊಂಡು ।
ಬಂದರೇನು ? ಬರಸಿಡಿಲು ಬಂದೆರಗಿ
ದಂತೆ ನಿಂತುಕೊಂಡು ॥ ೧೩ ॥

ಕಣ್ಣು ಮುಚ್ಚಿ ಕಂಡಾನು ಚಿತ್ರಪಟ
ದಲ್ಲಿ ನಡೆದ ಘಟನೆ ।
ಹೆಣ್ಣಿನಾಸೆಯಿಂದೇನು ಸೇತು
ನೃಪ ಗೈದ ಘೋರ ನಟನೆ ॥ ೧೪ ॥

ದುಷ್ಟದಮನಕಿಂದೀಗ ಶಕ್ತಿಯ
ನ್ನಿರದೆ ಕರೆವೆನಿನ್ನು ।
ಇಷ್ಟತಪವನಾಚರಿಸಿ ಪಡೆದ
ನಿಷ್ಟಾರ್ಥ ಸಿದ್ಧಿಯನ್ನು ॥ ೧೫ ॥

ಮುಂದೆ ಮುನಿಯು ಬೆಂಬತ್ತಿ ತಾಯಿ
ಜಗದಂಬೆ ಬರುವ ರೀತಿ ।
ಸಂದ ಭಕುತರನು ಕಾಯಲೆಂದೆ
ಸನ್ನದ್ಧಳಾದ ರೀತಿ ॥ ೧೬ ॥

ಯಾವ ಶಂಕೆಯೊ ಏನೊ ಮುನಿಯು
ಹಿಂತಿರುಗಿ ನೋಡಿಬಿಟ್ಟ ।
ದೇವಿಯಲ್ಲಿಯೆ ನಿಂತು ಮುನಿಗೆ
ವರವಿತ್ತು ಕಳುಹಿಕೊಟ್ಟು ॥ ೧೭ ॥

ಭೀಮೆ ಕಾಕಿಣಿಯ ಸಂಗಮಸ್ಥಾನ
ದಲ್ಲಿ ಮೂರ್ತಿಯಾಗಿ ।
ಹಿಂಗುಲಾಂಬಿಕೆಯ ನಾಮ ತಾಳಿ
ನಿಂತಿಹಳು ದೈವವಾಗಿ ॥ ೧೮ ॥

ದೇವಿ ತಾನೆ ಒಲಿದಿತ್ತ ಪಂಚ
ಭ್ರಮರಂಗಳಿಂದ ಕೂಡಿ ।
ಹೇವದಿಂದ ಮುನಿ ಮುಂದೆ ನಡೆದ
ತನ್ನೊಂದು ಕಾರ್ಯ ನೋಡಿ ॥ ೧೯ ॥

ಈಗ ಸನ್ನತಿಯ ಸೇತು ಭೂಪತಿಯ
ಪ್ರಾಣಕಾಗಿ ಸಾಗಿ ।
ಬೇಗಿ ಬಂದ ಮುನಿ ತನ್ನ ದುಂಬಿ
ಗಳಿಗೆಂದ ಹೋಗಿ ಹೋಗಿ ॥ ೨೦ ॥

ದುಂಬಿ ದುಂಬಿ ಒಂದಲ್ಲ ಐದು
ಬಂದಾವು ಹಿಂಸೆಗೈದು ।
ತುಂಬಸೋತನೀ ಸೇತು ಜೀವ
ತೊರೆದಾನು ಮಡುವಿಗೈದು ॥ ೨೧ ॥

ಚಂದ್ರಿಕೋದ್ಧಾರವಿಂತು ನಿಂತು
ಗೈದಾವು ಪಂಚಭ್ರಮರ ।
ಚಂದ್ರಲಾಂಬಿಕೆಯ ಪಾದಪದ್ಮಗಳ
ಸೇರಿಹೋದ ಭ್ರಮರ ॥ ೨೨ ॥

ಕ್ಷೇತ್ರಸನ್ನತಿಯ ಚಂದ್ರಲಾಂಬಿಕೆಯ
ಪಾದಯುಗಳದಲ್ಲಿ ।
ಪಂಚಭ್ರಮರ ರಂಧ್ರಾಂಕಿತಂಗಳನು
ಕಾಣಬಹುದು ಅಲ್ಲಿ ॥ ೨೩ ॥

ಜಯತು ಜಯತು ಶ್ರೀ ಚಂದ್ರಲಾಂಬಿಕೆ । ತ್ರಾಹಿ ಪಾಹಿ ಜಗದಂಬಿಕೆ ॥ಅಸ್ತು॥

ಉಪನಿಷತ್ಕಾಲದ ಮಹಿಳೆ

ಲೇಖಕರು: ಶ್ರೀ ರಂಗನಾಥ ದಿವಾಕರ

ವೇದ-ಉಪನಿಷತ್ಕಾಲಗಳಲ್ಲಿ ಭಾರತೀಯ ಸಮಾಜವು ಸರಳ ಜೀವನವನ್ನು ಸಾಗಿಸುತಿದ್ದಿತು. 'ಸ್ತ್ರೀಯರು ಪುರುಷರಿಗಿಂತ ಕನಿಷ್ಠರು, ಅವರಿಗೆ ವೇದಾಭ್ಯಾಸಮಾಡಲ ಅಧಿಕಾರವಿಲ್ಲ' ಇವೇ ಮೊದಲಾದ ಅಪಾತ್ರತೆಗಳು ಆಗ ಸ್ತ್ರೀಯರಿಗೆ ಇರಲಿಲ್ಲ. ಸ್ತ್ರೀಯರಿಗೆ ಆಧ್ಯಾತ್ಮಿಕ ಮತ್ತು ತತ್ವಜ್ಞಾನದ ಕ್ಷೇತ್ರದಲ್ಲಿ ಮಹತ್ವದ ಸ್ಥಾನವಿದ್ದಿತು. ಸ್ತ್ರೀಯರು ಪುರುಷರಿಗೆ ಸಮಾನರೆಂದು ಭಾವಿಸಲಾಗುತಿದ್ದಿತು. ಮುಂದೆ ಪುರಾಣ. ಯುಗದಲ್ಲಿ ಈ ಅಪಾತ್ರತೆಗಳು ಬಂದವು.

ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನ ಮತ್ತು ಸ್ತ್ರೀ ಪುರುಷರ ನಡುವಿನ ಸಂಬಂಧದ ಅಭ್ಯಾಸವು ಎಂದಿನಿಂದಲೂ ಬಹಳ ಚಿತ್ತಾಕರ್ಷಕವಾಗಿದೆ. ವಿಶೇಷತಃ ಮಾನವ ಸಮಾಜದ ಅಭ್ಯಾಸಿಗಳು ಅತ್ಯಂತ ಆಸ್ಥೆಯಿಂದ ಇದನ್ನು ಅಭ್ಯಸಿಸುತ್ತಿರುವರು. ಪೃಥ್ವಿಯಲ್ಲಿ ಮಾನವನ ಉತ್ಪತ್ತಿಯಾದಂದಿನಿಂದ ಸ್ತ್ರೀ ಪುರುಷರ ದೇಹಯುಷ್ಟಿ ರಚನೆ ಮೊದಲಾದ ತಂತ್ರದಲ್ಲಿ ಅನೇಕ ಬದಲಾವಣೆಗಳಾಗಿದ್ದರೂ ಅವರ ಲಿಂಗಧರ್ಮಗಳಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲ. ನಾಗರಿಕತೆಯು ಅಭಿವೃದ್ಧಿ ಹೊಂದುತ್ತ ನಡೆದಂತೆ ಸಂತಾನೋತ್ಪಾದನೆ ಶಾರೀರಿಕ ಉದ್ದೇಶವನ್ನು ಹೊರತು ಪಡಿಸಿ ಸ್ತ್ರೀ ಪುರುಷರ ಸಂಬಂಧವು ಹೆಚ್ಚಾಗಿ ಪರಸ್ಪರ ಸಂತೋಷದ ಸಾಧನವಾಗಿ ಪರಿಣಮಿಸಿದೆಯೆಂಬುದು ನಿಜ. ಆಧುನಿಕ ವಿಜ್ಞಾನ, ಫ್ರಾಯಿಡನ ಮಾನಸಶಾಸ್ತ್ರ, (ಲೈಂಗಿಕ) ಮತ್ತು ಯುಕ್ತಿವಾದ ಇವು ಈ ಉದ್ದೇಶವನ್ನು ಕಡೆಗಣಿಸುತ್ತಿವೆಯೆಂದೂ ಕಂಡುಬರುವದು. ಇದೆಲ್ಲ ನಡೆಯುತ್ತಿದ್ದರೂ ಈ ವಿಷಯದ ಬಗೆಗೆ ಬುದ್ಧ್ಯತೀತವಾದ ಅವಶ್ಯಕತೆಯು ಬಲವತ್ತರವಾದ ಅಂಶವು ಇರುವದರಿಂದ, ಸಾವಿರಾರು ವರ್ಷಗಳ ಹಿಂದೆ ಇದ್ದಂತೆಯೆ ಈಗಲೂ ಪರಿಸ್ಥಿತಿ ಇದೆ.

ಇಂತು ಈ ಮೂಲ ಉದ್ದೇಶಗಳಲ್ಲಿ ವಿಶೇಷ ಬದಲಾವಣೆಗಳಾಗಿರದಿದ್ದರೂ ಸ್ತ್ರೀ-ಪುರುಷರಲ್ಲಿಯ ಸಾಮಾಜಿಕ ಮತ್ತು ಉಳಿದ ಸಂಬಂಧಗಳಲ್ಲಿ ಬಹಳ ಬದಲಾವಣೆಗಳಾಗಿವೆ. ಎಲ್ಲ ದೇಶಗಳಲ್ಲಿಯೂ ಈ ಬದಲಾವಣೆಗಳಲ್ಲಿ ಏಕತೆಯಿರುವುದಿಲ್ಲ, ಇಷ್ಟೇ ಅಲ್ಲ, ಒಂದೇ ದೇಶದಲ್ಲಿ ಕೂಡ ಈ ಬದಲಾವಣೆಯಲ್ಲಿ ಸಾಮ್ಯವಿಲ್ಲ. ಪ್ರಜಾಪ್ರಭುತ್ವದ ಆಧುನಿಕ ವಿಚಾರಗಳ ಮತ್ತು ವ್ಯಕ್ತಿಪ್ರತಿಷ್ಠೆಯ ವಿಕಾಸವಾಗುತ್ತ ನಡೆದಂತೆ ಸ್ತ್ರೀಪುರುಷರಿಬ್ಬರೂ ಸಮಾನವೆಂಬ ವಿಚಾರ ಪ್ರಬಲವಾಗಿದೆ. ಸ್ತ್ರೀ ಸ್ವಾತಂತ್ರ್ಯದ ಆಂದೋಲನವು ಇದನ್ನೇ ಆಧರಿಸಿ ನಿಂತಿದೆಯಲ್ಲದೆ ನವ-ಧರ್ಮದ ದೃಷ್ಟಿ ಮತ್ತು ಉತ್ಸಾಹ ಅದರಲ್ಲಿ ಕಂಡುಬರುತ್ತದೆ. ಪುರುಷನೇ ಪ್ರಜಾಪ್ರಭುತ್ವದ ಪುರಸ್ಕರ್ತನಾಗಿರುವುದರಿಂದ ಮತ್ತು ಅದನ್ನು ಸರ್ವಶಕ್ತಿಯಿಂದ ಸಮರ್ಥಿಸುತ್ತಿರುವುದರಿಂದ ಸ್ತ್ರೀಯರ ಈ ಆಂದೋಲನವನ್ನು ತಡೆಯಲು ಅವನಿಗೆ ಸ್ವಲ್ಪೂ ನೈತಿಕ ತಳಹದಿಯಿರುವದಿಲ್ಲ. ಇಂತು ಗಂಡು ಹೆಣ್ಣಿಗೆ ಸರ್ವತೋಮುಖವಾಗಿ ಸೋತಿದೆ. ಆ ಕ್ರಮ ಇನ್ನೂ ನಡೆಧಿದೆಯೆಂದು ಹೇಳಬಹುದು.

ಈ ವಿಷಯದ ಬಗ್ಗೆ ಬರೆಯುವ ಪಾಶ್ಚಾತ್ಯ ಲೇಖಕರೆಲ್ಲ ಗ್ರೀಕರ ಇತಿಹಾಸ ಕಾಲದಿಂದಲೆ ಪ್ರಾರಂಭಮಾಡುವರು. ಅವರಲ್ಲಿ ಹಲವರಿಗೆ ಅದಕ್ಕೂ ಪ್ರಾಚೀನವಾದ ಇಜಿಪ್ತ, ಬ್ಯಾಬಿಲೋನ, ಚೀನ ಮತ್ತು ಭಾರತದ ನಾಗರಿಕತೆಯ ಜ್ಞಾನ ಬಹುಶಃ ಇರುವುದು. ಆದರೆ ಸುಯೇಜದ ಪೂರ್ವಕ್ಕೆ ಸಂಭವಿಸಿದ ಮತ್ತು ಸಂಭವಿಸುವ ಸಂಗತಿಗಳು ಜಾಗತಿಕ ದೃಷ್ಟಿಯಿಂದ ಅಥವಾ ಮಾನವ ನಾಗರಿಕತೆಯ ದೃಷ್ಟಿಯಿಂದ ಅಷ್ಟೊಂದು ಮಹತ್ವದ್ದಲ್ಲವೆಂದು ಅವರು ಭಾವಿಸಿದಂತೆ ತೋರುವುದು. ಆದರೆ ಪ್ರಪಂಚದ ಈ ಭಾಗದಲ್ಲಿಯೆ ಜಗತ್ತಿನ ಜನಸಂಖ್ಯೆಯ ಅರ್ಧದಷ್ಟು ಮಾನವರಿರುವರು. ನಾಗರಿಕತೆ ಮತ್ತು ಸಂಸ್ಕೃತಿ ಭೌಗೋಲಿಕ ಸ್ಥಾನಮಾನಗಳನ್ನು ಲಕ್ಷಿಸುವುದಿಲ್ಲ ಎಂಬ ಮಾತನ್ನು ಅವರು ಕಡೆಗಣಿಸುತಿರುವರೆಂದು ನನ್ನ ಅಭಿಪ್ರಾಯ. ನಾಗರಿಕತೆ ಮತ್ತು ಸಂಸ್ಕೃತಿ ವಿಶೇಷ ತೊಂದರೆಗಳಿಲ್ಲದೆ ಭೂಖಂಡಗಳನ್ನು ದಾಟುವವು. ಪರ್ವತಗಳನ್ನು ಹತ್ತುವವು, ಗಾಳಿಯಿಂದ ಬೀಜಗಳು ಹಾರುತಿರುವಂತೆ, ಪಕ್ಷಿಗಳು ಸ್ವಚ್ಛಂದವಾಗಿ ಪಯಣ ಬೆಳೆಸುತಿರುವಂತೆ ಅವು ಸಂಚಾರ ಮಾಡಿ ಇಡಿ ಮಾನವ ಸಮಾಜವನ್ನೆ—ಅದು ಜಗತ್ತಿನ ಯಾವ ಭಾಗದಲ್ಲಿಯಾದರೂ ಇರಲಿ— ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಳ್ಳುವುವು. ವರ್ಣ ಇಲ್ಲವೆ ಜನಾಂಗಗಳ ಭೇದವನ್ನು ಅವು ನೋಡುವುದಿಲ್ಲ. ರಾಜಕೀಯ ಪ್ರತಿಷ್ಠೆಯನ್ನು ಇಲ್ಲವೆ ಪ್ರಭುತ್ವ—ದಾಸ್ಯಗಳನ್ನು ಅವು ಲಕ್ಷಿಸುವುದಿಲ್ಲ. ಆಧುನಿಕ ನಾಗರಿಕತೆಯಿರಲಿ ಪ್ರಾಚೀನ ನಾಗರಿಕತೆಯಿರಲಿ, ಸಮಾಜದಲ್ಲಿ ಸ್ತ್ರೀಯ ಸ್ಥಾನ-ಮಾನ ಅತ್ಯಂತ ಮಹತ್ವದ್ದಾಗಿವೆ. ಸಮಾಜದಲ್ಲಿ ಅರ್ಧ ಸಂಖ್ಯೆಯಲ್ಲಿ — ಶ್ರೇಷ್ಠ ಅರ್ಧಸಂಖ್ಯೆ— ಸ್ತ್ರೀಯರಿರುವದರಿಂದ ಮತ್ತು ಸ್ತ್ರೀ ಪುರುಷರ ಸಂಬಂಧವು ಅತ್ಯಂತ ಮಹತ್ವದ್ದಾಗಿರುವುದರಿಂದ ಮಾನವರ ಚಟುವಟಿಕೆಗಳ ಮೇಲೆ ಸ್ತ್ರೀಯರು ವಿಶೇಷ ಪರಿಣಾಮವನ್ನುಂಟುಮಾಡುವರು.

ಈ ದೃಷ್ಟಿಯಿಂದ ಈ ವಿಷಯದ ಅಭ್ಯಾಸವು ಅತ್ಯಂತ ಮಹತ್ವದ್ದಾಗಿದೆ. ಸುದೈವದಿಂದ ಭಾರತದ ಸಾಮಾಜಿಕ ಇತಿಹಾಸವು ಅತಿ ಪ್ರಾಚೀನ ಮತ್ತು ಅವಿಚ್ಛಿನ್ನವಾಗಿದೆ. ಅದರಲ್ಲಿ ಕೆಲ ಭಾಗ ಐತಿಹಾಸಿಕ ಸಂಗತಿಗಳುಳ್ಳದ್ದಾಗಿದ್ದರೆ, ಕೆಲಭಾಗ ಅದರ ಪ್ರಚಂಡ ಸಾಹಿತ್ಯದಲ್ಲಿ, ಕಾಯದೆ ಕಾನೂನು ಸಂಪ್ರದಾಯಗಳಲ್ಲಿ ಅಡಕವಾಗಿದೆ. ಆದರೆ ನಾನೀಗ ಸಮಾಜದ ಸಣ್ಣ ಭಾಗವನ್ನು ಅಂದರೆ ಉಪಷನಿತ್ಕಾಲದ ಸಮಾಜವನ್ನು ತೆಗೆದುಕೊಂಡು ಆ ಕಾಲಕ್ಕೆ ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಗಳೇನಿದ್ದವು, ವಿಶೇಷವಾಗಿ ಬೌದ್ಧಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಸ್ತ್ರೀಯರು ಯಾವ ಪಾತ್ರವನ್ನು ವಹಿಸುತ್ತಿದ್ದರು ಎಂಬುದನ್ನು ವಿಮರ್ಶಿಸುವೆ. ಇದಕ್ಕೆ ಬೇಕಾದ ಸಾಧನ ಸಾಮುಗ್ರಿ ಅಲ್ಪವಾಗಿದ್ದರೂ ಅರ್ಥಗರ್ಭಿತವಾಗಿದೆ. ಉಪನಿಷತ್ತುಗಳು ಭಾರತೀಯ ವೇದಾಂತದ ಉಗಮಸ್ಥಾನವಾಗಿವೆಂಬುದು ನಿಃಸಂದೇಹ. ಭಾರತೀಯ ದರ್ಶನಗಳಿಗೆಲ್ಲ ಅವೇ ಮೂಲ. ಶ್ರೇಷ್ಠ ಋಷಿಮುನಿಗಳ ಆಧ್ಯಾತ್ಮಿಕ ಸ್ಫೂರ್ತಿಸ್ಥಾನಗಳೂ ಇವೇ ಎಂದು ನಾವೆಲ್ಲ ಇವಕ್ಕೇ ಶರಣುಹೋಗುವೆವು. ಅನಂತರ ಬಂದ ಸಾಧುಸಂತರೂ ಉಪನಿಷತ್ತುಗಳಿಂದಲೆ ಆಧ್ಯಾತ್ಮಿಕ ಜ್ಞಾನವನ್ನು ಪಡೆದರು. ಉಪನಿಷತ್ತುಗಳೇನು ಇತಿಹಾಸವಲ್ಲ, ಸಮಾಜಶಾಸ್ತ್ರವಲ್ಲ. ಮನೋವಿಶ್ಲೇಷಣಶಾಸ್ತ್ರವೂ ಅಲ್ಲ. ಆದರೆ ಅದೇ ಕಾಲಕ್ಕೆ ಇಂಥ ಆಧ್ಯಾತ್ಮಿಕ ಪ್ರಯತ್ನದ ಮತ್ತು ಮಾನವೀವಿಚಾರದ ಪ್ರಗತಿಯ ಉಚ್ಚಕ್ಷೇತ್ರದಲ್ಲಿ ಸ್ತ್ರೀಯರು ಯಾವ ಬಗೆಯ ಪಾತ್ರವನ್ನು ವಹಿಸಿದರು ಮತ್ತು ಸಿದ್ಧಿಯನ್ನು ಪಡೆದರು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ.

ಭಾರತೀಯ ವಿಚಾರಪ್ರಣಾಲಿಯ ಅಭಿವೃದ್ಧಿಯನ್ನು ಲಕ್ಷಿಸಿ ಉಪನಿಷತ್ತುಗಳನ್ನು ಪ್ರತ್ಯೇಕವಾಗಿ ವಿಂಗಡಿಸಲಾಗಿದೆ. ಆದರೆ ಭಾರತದ ಪ್ರಾಚೀನ ಸಂಪ್ರದಾಯದಂತೆ ಉಪನಿಷತ್ತುಗಳು ವೇದಗಳ ಭಾಗಗಳು; ಶ್ರುತಿಗಳವು. ಅತಿ ಮಹತ್ವದ ಮತ್ತು ಪ್ರಾಚೀನ ಉಪನಿಷತ್ತುಗಳು ಪ್ರತ್ಯ-ಪ್ರತ್ಯೇಕವಾಗಿ ಬೇರೆ ಬೇರೆ ವೇದಗಳಿಗೆ ಸಂಬಂಧಿಸಿವೆ. ಆದುದರಿಂದ ವೇದಗಳಲ್ಲಿಯಂತೆಯೆ ಉಪನಿಷತ್ಕಾಲದ ಸ್ತ್ರೀಯರ ಸ್ಥಾನಮಾನಗಳಿರುವುದು ಸ್ವಾಭಾವಿಕ. ಆ ಕಾಲದಲ್ಲಿ ಭಾರತೀಯ ಸಮಾಜವು ಬಹಳ ಸರಳ ಜೀವನವನ್ನು ಸಾಗಿಸುತಿದ್ದಿತು. ಸ್ತ್ರೀಯರು ಪುರುಷರಿಗಿಂತ ಕನಿಷ್ಠರು, ವೇದಾಭ್ಯಾಸ ಮಾಡಲು ಅವರಿಗೆ ಅಧಿಕಾರವಿಲ್ಲ, ಇವೇ ಮೊದಲಾದ ಅಪಾತ್ರತೆಗಳು ಆಗ ಸ್ತ್ರೀಯರಿಗೆ ಇರಲಿಲ್ಲ. ಪುರಾಣಯುಗದಲ್ಲಿ ಈ ಅಪಾತ್ರತೆಗಳು ಬಂದವು. ಮುಂದಿನ ಕಾಲಮಾನ ಪರಿಸ್ಥಿತಿಗನುಸಾರವಾಗಿ ಸ್ತ್ರೀಯರ ಮೇಲೆ

ಈ ಬಗೆಯ ಅಪಾತ್ರತೆಗಳನ್ನು ಹೇರಲಾಯಿತು.

ವೇದಗಳ ಬಗ್ಗೆ ನಾನಿಲ್ಲಿ ಹೆಚ್ಚಿಗೆ ವಿವರಿಸಬಯುಸುವುದಿಲ್ಲ. ಆ ಕಾಲಕ್ಕೆ ಪಿತೃಪ್ರಭುತ್ವ ಕುಟುಂಬಪದ್ಧತಿ ಮತ್ತು ಅವಿಭಕ್ತ ಕುಟುಂಬ ಪದ್ಧತಿ ಜಾರಿಯಲ್ಲಿದ್ದವು. ಹೆಣ್ಣು ಮಗುವಿಗಿಂತ ಗಂಡು ಮಗುವಿಗೆ ಪ್ರಥಮ ಪ್ರಾಶಸ್ತ್ಯವಿದ್ದಿತು. ಅದೇ ಕಾಲಕ್ಕೆ ಸ್ತ್ರೀಯರನ್ನು ಗೌರವಭಾವದಿಂದ ನೋಡಲಾಗುತಿದ್ದಿತು. ಗರ್ಭಿಣೀ ಸ್ತ್ರೀಯರನ್ನು ಹೆಚ್ಚು ದಕ್ಷತೆಯಿಂದ ಪಾಲನಮಾಡುತಿದ್ದರು. ವೇದಸಾಹಿತ್ಯದಲ್ಲಿ ಬರುವ ದೇವತೆಗಳು ಅಷ್ಟೊಂದು ಪ್ರಭಾವಿಯಾಗಿರಲಿಲ್ಲವಾದರೂ ವಾಕ್ ಮತ್ತು ಉಷಾದೇವತೆಗಳು ಬಹಳ ಲೋಕಪ್ರಿಯವಾಗಿದ್ದವು. ಆ ದೇವತೆಗಳ ಬಗ್ಗೆ ಅತ್ಯಂತ ಗೌರವಾದರಗಳಿದ್ದವು. ವೇದ ಋಕ್ಕುಗಳನ್ನು ರಚಿಸಿದವರಲ್ಲಿ ಅನೇಕ ಸ್ತ್ರೀಯರಿದ್ದುದು ವಿಶೇಷ ಮಹತ್ವದ್ದಾಗಿದೆ. ವಾಗಾಂಭೃಣಿಯು ದೇವೀ ಸೂಕ್ತವನ್ನು ರಚಿಸಿದಳು. ಅಂಭರಣ ಋಷಿಯ ಮಗಳವಳು. ತನಗೆ ಆತ್ಮಸಾಕ್ಷಾತ್ಕಾರವಾಗಿದೆಯೆಂದು ಇವಳು ಹೇಳುತಿರುವಳು. ಇದುವೇ ಅತ್ಯಂತಿಕ ಅನುಭಾವವು. ರಾತ್ರೀದೇವಿಯು ರಾತ್ರೀಸೂಕ್ತವನ್ನು ರಚಿಸಿದಳೆಂದು ಪ್ರತೀತಿ. ಅನೇಕ ಯಜ್ಞಗಳಲ್ಲಿ ಅಧ್ವರ್ಯು ಆಗಿದ್ದ ಸಾರ್ಪರಾಜ್ಞಿಯು ಅಗ್ನಿಸೂಕ್ತವನ್ನು ರಚಿಸಿದಳು. ಅಗ್ನಿಯನ್ನುದ್ದೇಶಿಸಿ ವಿಶ್ವವಾರಾಸೂಕ್ತಗಳಿವೆ. ಇಂದನನ್ನುದ್ದೇಶಿಸಿ ಅಪಾಲಾ ಕನ್ಯೆಯು ರಚಿಸಿದ ಮಂತ್ರಗಳು ಇರುವವು. ಅವಳು ನೀರಿನ ಸಮೀಪದಲ್ಲಿದ್ದ ಸೋಮವನ್ನು ತೆಗೆದುಕೊಂಡು ಯಜ್ಞಕ್ಕಾಗಿ ಸೋಮರಸವನ್ನು ಸಿದ್ಧಪಡಿಸಲು ಮನೆಗೆ ಒಯ್ಯುತಿದ್ದಳೆಂದು ವರ್ಣಿಸಲಾಗಿದೆ. ಅವಳು ಇಂದ್ರನಿಗಾಗಿ, ಶಕ್ರನಿಗಾಗಿ ತಾನೇ ಸೋಮರಸವನ್ನು ಸಿದ್ಧಪಡಿಸುತ್ತಿದ್ದಳು. ಅವಳು ಸ್ವತಃ ಯಜ್ಞದಲ್ಲಿ ಭಾಗವಹಿಸುತ್ತಿದ್ದಳೆಂದು ಇದರಿಂದ ಗೊತ್ತಾಗುವದು. ಅದೇ ರೀತಿ ಲೋಪಾಮುದ್ರಾ ಮತ್ತು ಶಶೀಯಸೀ ಇವರ ಹೆಸರು ಪ್ರಸಿದ್ಧವಿರುವವು. ಘೋಷಾಕಾಕ್ಷೀವತೀ ಸೂರ್ಯಾ ಸಾವಿತ್ರಿ, ಇಂದ್ರಾಣಿ, ಶ್ರದ್ಧಾಕಾಮಾಯನೀ, ಶಚೀ, ಪೌಲೋಮಿ, ಊರ್ವಶೀ ಮೊದಲಾದವರೂ ಕೆಲ ಋಕ್ಕುಗಳನ್ನು ರಚಿಸಿದರೆಂದು ಪ್ರಸಿದ್ಧಿಯಿದೆ. ಈ ಎಲ್ಲ ಸ್ತ್ರೀಯರು ಸಾಕ್ಷಾತ್ತಾಗಿ ದೇಹಧಾರಣ ಮಾಡಿಕೊಂಡಿದ್ದರೊ ಅಥವಾ ಆಯಾ ಗುಣಗಳ ಇಲ್ಲವೆ ದೇವತೆಗಳ ಹೆಸರಿನಲ್ಲಿ ಇವೆಲ್ಲ ರಚಿತವಾದವೊ? ಅದೇನೆ ಇದ್ದರೂ ಆ ಕಾಲದಲ್ಲಿ ಸ್ತ್ರೀಯರನ್ನು ಅದರದಿಂದ ಗೌರವಿಸಲಾಗುತ್ತಿದ್ದಿತು. ಮಂತ್ರದ್ರಷ್ಟಾರರೆಂದು ಅವರನ್ನು ಸನ್ಮಾನಿಸಲಾಗುತಿದ್ದಿತು ಎಂಬುದು ಮಾತ್ರ ಸುಸ್ಪಷ್ಟವಿದೆ.

ಉಪನಿಷತ್ಕಾಲದಲ್ಲಿ ಸ್ತ್ರೀಯರಿಗೆ ಆಧ್ಯಾತ್ಮಿಕ ಮತ್ತು ತತ್ವಜ್ಞಾನದ ಕ್ಷೇತ್ರದಲ್ಲಿ ಮಹತ್ವದ ಸ್ಥಾನವನ್ನು ಕೊಡಲಾಗುತ್ತಿತ್ತೆಂಬುದನ್ನು ಈ ಮೊದಲು ವಿವರಿಸಿದ್ದಾಗಿದೆ. ಉಳಿದ ಕ್ಷೇತ್ರಗಳಿಗಿಂತ ಈ ಕ್ಷೇತ್ರದಲ್ಲಿ ಅವರಿಗೆ ಮರ್ಯಾದೆ ಹೆಚ್ಚು.

ತತ್ವಜ್ಞಾನ, ಆಧ್ಯಾತ್ಮಿಕ ಜೀವನ, ಆತ್ಮಾನುಭಾವದ ತೀವ್ರ ಚರ್ಚೆ ಸಮಾಜದಿಂದಾಗಲಿ, ಕುಟುಂಬಜೀವನದಿಂದಾಗಲಿ ಪ್ರತ್ಯೇಕಿಸಲ್ಪಟ್ಟಿರಲಿಲ್ಲೆಂಬುದು ಉಪನಿಷತ್ತುಗಳ ಅಭ್ಯಾಸಿಗಳಿಗೆ ಪ್ರಾರಂಭದಲ್ಲಿಯೆ ಕಂಡುಬರುವುದು. ಸಂಸಾರತ್ಯಾಗಮಾಡಿದ ಸಂನ್ಯಾಸಿನಿಗಳಿಗಷ್ಟೇ ತತ್ತ್ವಜ್ಞಾನದ ವಿಚಾರ ಮೀಸಲಾಗಿರಲಿಲ್ಲ. ಎಲ್ಲೆಡೆಯಲ್ಲಿ ವೇದಾಂತ ಚರ್ಚೆ ನಡೆಯುತ್ತಿದ್ದಿತು. ಅರಸರ ತುಂಬಿದ ದರ್ಬಾರಗಳಲ್ಲಿ, ಗುರುಕುಲದಂಥ ಶಿಕ್ಷಣ ಸಂಸ್ಥೆಗಳಲ್ಲಿ, ಆಕಳುಗಳನ್ನು ಇಟ್ಟುಕೊಂಡು ಅರಣ್ಯಗಳಲ್ಲಿ ಆಶ್ರಮ ಕಟ್ಟಿಕೊಂಡು ಸಂಸಾರ ಮಾಡುತ್ತಿದ್ದ ಮುನಿಗಳ ಪರ್ಣಕುಟಿರಗಳಲ್ಲಿ ಅಲ್ಲದೆ ಹಳ್ಳಿಗಳಲ್ಲಿ ರೈಕ್ವನಂಥ ಬಡ ಬಂಡಿಯುವನ ಬಂಡಿಯ ಕೆಳಗೆ ಕೂಡ ವೇದಾಂತ ಚರ್ಚೆ ನಡೆಯುತ್ತಿದ್ದಿತು; ಆಧ್ಯಾತ್ಮಿಕ ಜೀವನ ನಡೆಯುತ್ತಿದ್ದಿತು. ಈ ಚರ್ಚೆಗೆ ವಯೋನಿರ್ಬಂಧವಿರಲಿಲ್ಲ; ವೃತ್ತಿ ಇಲ್ಲವೆ ಸಾಮಾಜಿಕ ಸ್ಥಾನಮಾನಗಳ ನಿರ್ಬಂಧವೂ ಇರಲಿಲ್ಲ. ಸತ್ಯದ ಬಗ್ಗೆಯಾಗಲಿ, ಸತ್ಯಸಾಕ್ಷಾತ್ಕಾರಕ್ಕಾಗಿ ಸತತ ಜೀವನವನ್ನು ಸವಿಸುತ್ತಿರುವವರ ಬಗ್ಗೆಯಾಗಲಿ ಯಾವದೇ ಬಗೆಯ ಗೌಪ್ಯವಿರಲಿಲ್ಲ. ಇದು ಎರಡನೆಯ ಮಹತ್ವದ ಸಂಗತಿಯು. ಸ್ತ್ರೀಯರು ಪುರುಷರಿಗೆ ಸಮಾನರೆಂದು ತಿಳಿಯಲಾಗುತ್ತಿದ್ದಿತು. ಯಾವದೇ ಬಗೆಯ ಭೇದಭಾವವಿಲ್ಲದೆ ಸ್ತ್ರೀಯರನ್ನು ನೋಡಲಾಗುತ್ತಿತ್ತೆಂಬುದು ಮೂರನೆಯ ಮಹತ್ವದ ಸಂಗತಿಯು. ಆಧ್ಯಾತ್ಮಿಕ ಜೀವನದತ್ತ ಎಳಸಿದವರು ಮತ್ತು ಅತ್ತ ಒಲವಿಲ್ಲದವರೆಂದು ಮಾತ್ರ ಎರಡು ವರ್ಗಗಳನ್ನು ಮಾಡಲಾಗುತ್ತಿದ್ದಿತು. ಹಂದಿಯ ಮುಂದೆ ಮುತ್ತು ಚಲ್ಲಲು ಅವರು ಬಯಸಲಿಲ್ಲೆಂಬುದು ಸುಸ್ಪಷ್ಟ. ತಮ್ಮ ಹತ್ತರವಿದ್ದ ಮುತ್ತುಗಳು ರಾಜ್ಯಕೋಶಗಳಿಗಿಂತ ಹೆಚ್ಚು ಬೆಲೆಯುಳ್ಳವುಗಳೆಂಬುದು ಅವರಿಗೆ ಚೆನ್ನಾಗಿ ಗೊತ್ತಿದ್ದಿತು.

ಉಪನಯನ ಸಮಾರಂಭವು ವೇದಕಾಲದಿಂದ ಬಂದ ವಿಧಿಯು. ಬಾಲಬಾಲಿಕೆಯರಿಬ್ಬರಿಗೂ ಈ ದೀಕ್ಷೆಯನ್ನು ಕೊಡಲಾಗುತ್ತಿದ್ದಿತು. ಈ ದೀಕ್ಷೆಯನ್ನು ಪಡೆದ ಬಳಿಕವೆ ವೇದಾಧ್ಯಯನ ಪ್ರಾರಂಭವಾಗುತ್ತಿದ್ದಿತು. ಅಧ್ಯಾತ್ಮಿಕ ಜೀವನದ ದೀಕ್ಷೆಯಿದು. ಗಂಡಸರಂತೆ ಹೆಣ್ಣು ಮಕ್ಕಳಿಗೂ ಆಧ್ಯಾತ್ಮಿಕ ಸಾಧನದ ಮತ್ತು ವೇದಾಭ್ಯಾಸ ಮಾಡುವ ಅಧಿಕಾರವಿದ್ದಿತೆಂಬ ಬಗ್ಗೆ ವೇದದಲ್ಲಿ ಮತ್ತು ಅನಂತರದ ವೇದ ಸಾಹಿತ್ಯದಲ್ಲಿ ಉಪಯೋಗಿಸಲಾದ ಸಂಸ್ಕೃತ ಶಬ್ದಗಳಿಂದ ಸ್ಪಷ್ಟವಾಗುವದು. ಬ್ರಹ್ಮಚಾರಿಣಿ, ಬ್ರಹ್ಮವಾದಿನಿ, ತಾಪಸಿ, ಸಿದ್ಧಾ ಮೊದಲಾದ ವೇದ ಸಾಹಿತ್ಯದಲ್ಲಿ ಸಿಕ್ಕುವ ಅನೇಕ ಶಬ್ದಗಳು ಈ ಮಾತನ್ನು ಸ್ಪಷ್ಟಪಡಿಸುವವು. ಋಗ್ವೇದ ಕಾಲದಲ್ಲಿಯ ಮುನಿವೃತ್ತಿಯ ಸ್ತ್ರೀಯರನ್ನು ಬ್ರಹ್ಮವಾದಿನಿಗಳೆಂದು ಬೃಹದ್ದೇವತಾದಲ್ಲಿ ವರ್ಣಿಸಲಾಗಿದೆ. ಮದುವೆಯನ್ನು ಮಾಡಿಕೊಂಡು ಸಂಸಾರ ಮಾಡಬಯಸುವ ಸ್ತ್ರೀಯನ್ನು ಸದ್ಯೋವಧೂ ಎಂದು ಅನಂತರದ ಸ್ಮೃತಿಕಾರರು ಕರೆದಿದ್ದಾರೆ. ಇತ್ತೀಚೆಗೆ ಮಹಾಭಾರತ ಕಾಲದಲ್ಲಿ ಕೂಡ ಕುರುಕ್ಷೇತ್ರದ ಹತ್ತರ ಒಂದು ಆಶ್ರಮವಿದ್ದ ಉಲ್ಲೇಖವಿದೆ. ಆ ಆಶ್ರಮದಲ್ಲಿ ಬ್ರಾಹ್ಮಣ ಕನ್ಯೆಯೊಬ್ಬಳು ಸಂನ್ಯಾಸವೃತ್ತಿಯಲ್ಲಿದ್ದುಕೊಂಡು ಯೋಗಸಿದ್ಧಿಯನ್ನು ಪಡೆದು ತಪಃಸಿದ್ಧಾ ಎಂದೆನಿಸಿಕೊಂಡಳೆಂದು ವರ್ಣಿಸಲಾಗಿದೆ. ಶಾಂಡಿಲ್ಯ ರಾಜನ ಮಗಳು ಬ್ರಹ್ಮಚಾರಿಣಿ. ಆಶ್ರಮದಲ್ಲಿದ್ದುಕೊಂಡು ಅವಳು ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಿದಳೆಂದು ಹೇಳಲಾಗಿದೆ. ಬೌದ್ಧ ಸಂನ್ಯಾಸಿನಿಗಳಲ್ಲಿ ಸುಪ್ರಸಿದ್ಧರಾದ ಶ್ರಮಣೀಯರ ಬಗ್ಗೆ ಮತ್ತು ಅವರ ಉಪದೇಶಗಳನ್ನೊಳಗೊಂಡ ಥೇರಿಗಾಥಾದ ಬಗ್ಗೆ ಇಲ್ಲಿ ವಿವರಿಸುವ ಅವಶ್ಯಕತೆಯಿಲ್ಲ.

ಬ್ರಹ್ಮಚಾರಿಗಳು ಗುರುಕುಲದಲ್ಲಿ ಅಧ್ಯಯನ ಮುಗಿಸಿಕೊಂಡು ತಮ್ಮ ಮನೆಗೆ ಹೋಗುವಾಗ ನಡೆಯುವ ಸಮಾವರ್ತನ ಸಮಾರಂಭದ ಕಾಲಕ್ಕೆ ತೈತ್ತಿರೀಯ ಉಪನಿಷತ್ತು 'ಸತ್ಯಂ ವದ,' 'ಧರ್ಮಂಚರ' ಎಂಬ ಉಪದೇಶವನ್ನು ಮೊದಲಿಗೆ ಮಾಡುತ್ತಿದೆ. ಗುರುಗಳು ಅವರಿಗೆ ಉಪದೇಶ ಮಾಡುವಾಗ 'ಮಾತೃದೇವೋಭವ' 'ಪಿತೃದೇವೋಭವ' - 'ಆಚಾರ್ಯದೇವೋಭವ,' 'ಅತಿಥಿದೇವೋಭವ' ಎಂದು ಬೋಧಿಸುತ್ತಾರೆ. ಈ ಉಪದೇಶದಲ್ಲಿಯೂ ಮೊದಲನೆಯ ಮರ್ಯಾದೆಯು ತಾಯಿಗೆ ಇದೆಯೆಂಬುದು ಗಮನಿಸತಕ್ಕದ್ದಾಗಿದೆ. ಪಂಡಿತೆಯ ತಂದೆಯಾಗಬೇಕಾದರೆ ಏನು ಮಾಡಬೇಕೆಂದು ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲಾಗಿದೆ. ಪ್ರಸಿದ್ಧ ವೇದಪಂಡಿತನಾದ ಉಷಸ್ತಿ ಚಾಕ್ರಾಯಣನ ತರುಣ ಹೆಂಡತಿಯ ಕಥೆ ಇನ್ನೊಂದು ಕಡೆ ಬಂದಿದೆ. ತರುಣಿಯಾಗಿದ್ದರೂ ಬರಗಾಲದಲ್ಲಿ ಯಾವರೀತಿ ಸಂಸಾರ ಸಾಗಿಸಬೇಕೆಂಬುದು ಅವಳಿಗೆ ಗೊತ್ತಿದ್ದಿತು. ಕರ್ತವ್ಯದಕ್ಷ ಗೃಹಿಣಿಯಾಗಿದ್ದಳವಳು. ಮನೋಹಾರಿಣಿಯಾದ ಬಡದಾಸಿ ಜಬಾಲಾ ಇವಳ ಕತೆ ಸುಪ್ರಸಿದ್ಧವಿದೆ. ಅವಳು ಅತ್ಯಂತ ಸತ್ಯವಾದಿನಿಯಾಗಿದ್ದಳು. ನೀನು ಯಾರೆಂದು ಗುರುಗಳು ಕೇಳಿದಾಗ ಸತ್ಯಕಾಮ ಜಾಬಾಲ, ಜಬಾಲಾನ ಮಗನೆಂದು ಧೈರ್ಯವಾಗಿ ಹೇಳು ಎಂದು ಅವಳು ತನ್ನ ಮಗ ಸತ್ಯಕಾಮನಿಗೆ ನಿರ್ಭೀತಿಯಿಂದ ಹೇಳಿದಳು. ತರುಣಿಯಾಗಿದ್ದಾಗ ಕೆಲಸಕ್ಕಾಗಿ ಅತ್ತಿಂದಿತ್ತ ಅಡ್ಡಾಡುವಾಗ ಅವಳು ಸತ್ಯಕಾಮನನ್ನು ಹೆತ್ತಿದ್ದಳು. ಸತ್ಯ ಮಾತಾಡಿದ್ದಕ್ಕಾಗಿ ಗುರುಗಳು ಸತ್ಯಕಾಮನನ್ನು ಗೌರವಿಸಿದರು. ಸತ್ಯವು ಬ್ರಾಹ್ಮಣರ ಲಕ್ಷಣವಾಗಿದೆ. ನೀನು ಸತ್ಯವನ್ನು ಹೇಳಿರುತ್ತಿ ಅಂದ ಬಳಿಕ ನೀನು ಬ್ರಾಹ್ಮಣನೆ ಎಂದು ನುಡಿದರು. ಸತ್ಯಸಾಕ್ಷಾತ್ಕಾರವನ್ನು ಮಾಡಿಕೊಡುವ ಮಿಂಚಿನ ಒಂದು ದೈದೀಪ್ಯಮಾನವಾದ ಸೆಳಕಿಗೆ ಕೇನೋಪನಿಷತ್ತಿನಲ್ಲಿ ಹೊಂಬಣ್ಣದ ಉಮಾದೇವತಾ ಎಂದು ಕರೆಯಲಾಗಿದೆ. ಅವಳು ಇಂದ್ರನ ಹತ್ತರ ಬಂದು ಸೃಷ್ಟಿಕರ್ತನಾದ ಬ್ರಹ್ಮನ ಅಚಿಂತ್ಯಾದ್ಭುತಶಕ್ತಿಯನ್ನು ತಿಳಿಸಿಕೊಟ್ಟಳು.

ಉಪನಿಷತ್ತುಗಳಲ್ಲಿ ಬರುವ ಅತ್ಯಂತ ಅರ್ಥ ಬೋಧಕವಾದ ಉಲ್ಲೇಖಗಳು ಗಾರ್ಗಿವಾಚಕ್ನವಿ ಮತ್ತು ಮೈತ್ರೇಯಿ ಇವರವು. ಗಾರ್ಗಿವಾಚಕ್ನವಿಯು ವಾಚಕ್ನು ಋಷಿಯ ಮಗಳು. ಮೈತ್ರೇಯಿಯು ಯಾಜ್ಞವಲ್ಕ್ಯರ ಆಧ್ಯಾತ್ಮಿಕ-ಒಲವಿನ ಹೆಂಡತಿಯು. ಮೈತ್ರೇಯಿಯು ಉಪನಿಷತ್ತುಗಳ ದ್ರಷ್ಟಾರರಲ್ಲಿ ಸರ್ವಶ್ರೇಷ್ಠಳೆಂದು ಹೇಳಬಹುದು. ಗಾರ್ಗಿಯು ಜನಕರಾಜನ ಸಭಾಭವನದಲ್ಲಿ ಯಾಜ್ಞವಲ್ಕ್ಯರನ್ನುದ್ದೇಶಿಸಿ ಪ್ರಶ್ನೆಯನ್ನು ಕೇಳಿದಾಗ ಅತ್ಯಂತ ಆಹ್ವಾನಪೂರ್ವಕವಾಗಿ ಕೇಳಿದಳು, ಅವಳ ಮನಃಪ್ರವೃತ್ತಿಯೇ ಆ ಬಗೆಯದಾಗಿದ್ದಿತು. ಸುವರ್ಣ ನಿಷ್ಕಗಳಿಂದೊಡಗೂಡಿದ ಕೋಡುಗಳುಳ್ಳ ಸಾವಿರ ಆಕಳುಗಳನ್ನು ಹೊಡೆದು ಕೊಂಡು ಆಶ್ರಮಕ್ಕೆ ಹೋಗು ಎಂದು ಯಾಜ್ಞವಲ್ಕ್ಯರು ಸಾವಧಾನ ಚಿತ್ತದಿಂದ ಶಿಷ್ಯರಿಗೆ ಹೇಳಿದ್ದನ್ನು ಕೇಳಿ ಸಭೆಯಲ್ಲಿಯ ಇತರರಂತೆ ಗಾರ್ಗಿಗೂ ಬಹಳ ಅಸಮಾಧಾನವೆನಿಸಿತು. ಅಲ್ಲಿ ನೆರೆದಿದ್ದವರಿಗೆ ಪ್ರಶ್ನೆ ಕೇಳುವ ಅವಕಾಶವನ್ನು ಕೂಡ ಕೊಡದೆ ಯಾಜ್ಞವಲ್ಕ್ಯರು ಈ ರೀತಿ ತಮ್ಮ ಶಿಷ್ಯರನ್ನು ಆದೇಶಿಸಿದರು. ಪ್ರಶ್ನೆಗೆ ಉತ್ತರ ಕೊಡುವುದಂತೂ ದೂರೇ ಉಳಿಯಿತು, ಅಷ್ಟು ವಿನಯ ಕೂಡ ಯಾಜ್ಞವಲ್ಕ್ಯರಲ್ಲಿ ತೋರಲಿಲ್ಲ. ನಿಮ್ಮಲ್ಲಿ ಯಾರು ಎಲ್ಲರಿಗಿಂತ ಹೆಚ್ಚು ವಿದ್ವಾಂಸರಾಗಿರುವಿರೊ ಅವರು ಈ ಆಕಳುಗಳನ್ನು ಹೊಡೆದುಕೊಂಡು ಹೋಗಬೇಕು ಎಂದು ಜನಕರಾಜನು ಸಾರಿದ ಕೂಡಲೆ ಆಕಳುಗಳನ್ನು ಹೊಡೆದುಕೊಂಡುಹೋಗೆಂದು ಯಾಜ್ಞವಲ್ಕ್ಯರು ಶಿಷ್ಯನಿಗೆ ವಿಧಿಸಿದರು. ಇದನ್ನು ಆಕ್ಷೇಪಿಸಿದ ಗಾರ್ಗಿಯು ಸ್ಪರ್ಧೆಯಲ್ಲಿ ಸೋತಳು. ಋಷಿಯು ಅವಳ ಪ್ರಶ್ನೆಗೆ ಯೋಗ್ಯ ಉತ್ತರವನ್ನು ಕೊಟ್ಟನು. ಪರಾಜಯವನ್ನರಿಯದ ಯಾಜ್ಞವಲ್ಕ್ಯರೊಡನೆ ಸ್ಪರ್ಧಿಸಿ ವಿಜಯ ಸಂಪಾದಿಸುವ ಅವಕಾಶವನ್ನು ಅವಳು ಎರಡನೆಯವರಿಗೆ ಕೊಟ್ಟಳು. ಆದರೆ ಅವರೆಲ್ಲರೂ ಪರಾಜಯ ಹೊಂದಿದರೆಂಬುದು ಅವಳಿಗೆ ಅಲ್ಪಾವಧಿಯಲ್ಲಿ ಕಂಡುಬಂದಿತು. ಅವಳಲ್ಲಿ ಸ್ಪರ್ಧೆಯ ಕೆಚ್ಚು ಪುನಃ ಹೊರಹೊಮ್ಮಿತು. ಕೈಯಲ್ಲಿ ದೊಡ್ಡ ಧನುಷ್ಯವನ್ನೂ ಎರಡು ಬಾಣಗಳನ್ನೂ ತೆಗೆದುಕೊಂಡ ಕಾಶಿಯ ಶೂರ ಯೋದ್ಧನಂತೆ ಗಾರ್ಗಿಯು ಮತ್ತೊಮ್ಮೆ ಎದ್ದುನಿಂತು ಯಾಜ್ಞವಲ್ಕ್ಯರಿಗೆ ಎರಡು ಪ್ರಶ್ನೆಗಳನ್ನು ಕೇಳಿದಳು. ಈ ಎರಡು ಪ್ರಶ್ನೆಗಳಿಗೆ ಯಾಜ್ಞವಲ್ಕ್ಯರು ಉತ್ತರ ಕೊಟ್ಟರೆ ಈ ಸಭೆಯಲ್ಲಿ ಸಮ್ಮಿಲಿತರಾದವರಾರೂ ಅವರನ್ನು ಗೆಲ್ಲಲಾರರು ಎಂದು ಅವಳು ಸಾರಿದಳು. ಇದರಿಂದ ಗಾರ್ಗಿಯ ಸ್ವಾಭಿಮಾನ ಮತ್ತು ಆತ್ಮವಿಶ್ವಾಸ ಎಷ್ಟು ಬಲಿಷ್ಠವಾಗಿದ್ದವೆಂಬುದು ಗೊತ್ತಾಗುವದು. ವಿದ್ವಾಂಸರಿಂದ ಕೂಡಿದ್ದ ಇಂಥ ಸಭೆಯಲ್ಲಿ ಈಪ್ರಕಾರ ಘೋಷಣೆ ಮಾಡುವದರಿಂದ ಗಾರ್ಗಿಯು ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡಳಷ್ಟೇ ಅಲ್ಲ ಸ್ತ್ರೀಜಾತಿಯ ಗೌರವವನ್ನೂ ಉನ್ನತಗೊಳಿಸಿದಳು.

ಗಾರ್ಗಿಯಲ್ಲಿ ಪಾಂಡಿತ್ಯದ ಬಗ್ಗೆ ಆತ್ಮವಿಶ್ವಾಸ ಮತ್ತು ಆಹ್ವಾನಪೂರ್ವಕ ಪ್ರಶ್ನೆಯನ್ನು ಕೇಳುವ ಪ್ರವೃತ್ತಿಯಿದ್ದಿತು. ಮೈತ್ರೇಯಿಯು ಆಧ್ಯಾತ್ಮಿಕ ಸತ್ಯಸಾಕ್ಷಾತ್ಕಾರಕ್ಕಾಗಿ ಪ್ರಯತ್ನಿಸುವ ವಿಶಿಷ್ಟ ಬ್ರಹ್ಮವಾದಿನಿಯು. ಯಾಜ್ಞವಲ್ಕ್ಯರ ಇನ್ನೊಬ್ಬ ಹೆಂಡತಿ ಕಾತ್ಯಾಯನಿಯು ಅಧಿಭೌತಿಕ ಪ್ರವೃತ್ತಿಯವಳಾಗಿದ್ದಳು. ಆದರೆ ಮೈತ್ರೇಯಿಯು ತದ್ವಿರುದ್ಧವೃತ್ತಿಯವಳು. ಬಹುಕಾಲ ಸಾಂಸಾರಿಕ ಜೀವನವನ್ನು ಅನುಭವಿಸಿ ವೃದ್ಧರಾದಬಳಿಕ ಯಾಜ್ಞವಲ್ಕ್ಯರು ತಮ್ಮ ಸಂಪಾದನೆಯನ್ನೆಲ್ಲ ಇಬ್ಬರೂ ಹೆಂಡರಿಗೆ ಹಂಚಿಕೊಟ್ಟು ಆಶ್ರಮವಾಸಕ್ಕೆ ಹೋಗಬಯಸಿದರು. ಅವರ ಪ್ರಶ್ನೆಗೆ ಮೈತ್ರೇಯಿಯ ಉತ್ತರವು ಆಶ್ಚರ್ಯಕಾರಕವಾಗಿದ್ದರೂ ಅವರಿಗೆ ಸ್ವಾಗತಾರ್ಹವಾಗಿದ್ದಿತು. ಸಂಪತ್ತಿನಿಂದ ಅಮೃತತ್ವವು ಸಿಕ್ಕಲಾರದೆಂದು ಅವಳು ಬಗೆದಳು. (ಅಮೃತಸ್ಯ ತು ನಾಶಾಸ್ತಿ ವಿತ್ತೇನ) ಅವಳು ಆಶ್ಚರ್ಯಚಕಿತರಾಗಿದ್ದ ತನ್ನ ಗಂಡನನ್ನು ಕುರಿತು 'ಅಮೃತತ್ವದ ಸಮೀಪಕ್ಕೆ ನನ್ನನ್ನು ಒಯ್ಯಲಾರದ ಇದೆಲ್ಲ ವಿತ್ತದಿಂದ ನನಗೇನು ಪ್ರಯೋಜನ?' ಎಂದು ಕೇಳಿದಳು. ಇದನ್ನು ಕೇಳಿ ಯಾಜ್ಞವಲ್ಕ್ಯರಿಗೆ ಹೆಂಡತಿಯಲ್ಲಿ ಪ್ರೇಮ ಹೆಚ್ಚಿತು ಮತ್ತು ಅವರು ಅವಳನ್ನು ಸಮೀಪಕ್ಕೆ ಕರೆದರು. ಅನಂತರ ಯಾಜ್ಞವಲ್ಕ್ಯರು ಅವಳಿಗೆ ಆತ್ಮಜ್ಞಾನವನ್ನು ಬೋಧಿಸಿದರು. ಈ ಆತ್ಮಸಾಕ್ಷಾತ್ಕಾರದಿಂದಲೆ ಮನುಷ್ಯನು ಅಮೃತತ್ವವನ್ನು ಹೊಂದುವನು.

ಉಪನಿಷತ್ತುಗಳಲ್ಲಿಯ ಈ ಗಾರ್ಗಿ ಮತ್ತು ಮೈತ್ರೇಯಿಯು ಉಪನಿಷತ್ತುಗಳಷ್ಟೇ ಅಮರರಾಗಿರುವರು. ಸ್ತ್ರೀಪುರುಷರ ಸಂಬಂಧ ಮತ್ತು ಕಾರ್ಯಗಳನ್ನು ಆದರ್ಶವಾಗಿ ವರ್ಣಿಸುವ ವಾಕ್ಯಗಳು ಬೇರೆ ಉಪನಿಷತ್ತುಗಳಲ್ಲಿ ಇವೆ. ಆದರೆ ಉಪನಿಷತ್ಕಾಲದಲ್ಲಿಯ ಸ್ತ್ರೀಯರ ಸ್ಥಾನಮಾನಗಳನ್ನು ತಿಳಿಸುವದೇ ಈ ಚಿಕ್ಕ ಲೇಖನದ ಉದ್ದೇಶವಾಗಿದೆ. ವಿಶೇಷವಾಗಿ ಆಧ್ಯಾತ್ಮಿಕ ಮತ್ತು ಬೌದ್ಧಿಕ ವಿಷಯಗಳಲ್ಲಿ ಅವರ ಪಾತ್ರ ಯಾವ ಬಗೆಯದಿದ್ದಿತೆಂಬುದನ್ನು ಈವರೆಗೆ ವಿವರಿಸಿದ್ದಾಗಿದೆ. ಪುರುಷರಿಗೆ ಸಮಾನವಾದ ಮನ್ನಣೆ, ಮರ್ಯಾದೆ ಸ್ತ್ರೀಯರಿಗಿದ್ದಿತೆಂದು ನಾನು ಧೈರ್ಯದಿಂದ ಹೇಳುತ್ತೇನೆ. ಆಗಿನ ಕಾಲಕ್ಕೆ ಸಂಸ್ಕೃತಿಯು ಅತ್ಯುಚ್ಚ ಮಟ್ಟದ್ದಾಗಿದ್ದಿತೆಂದೂ ನಾನು ನಿರ್ಭೀತಿಯಿಂದ ಹೇಳುತ್ತೇನೆ

ಭಾರತೀಯ ರಾಜ್ಯಶಾಸ್ತ್ರದ ಉಗಮ

ಮತ್ತು

ಸದ್ಯದ ಒಲವು ನಿಲವುಗಳು

ಲೇಖಕರು: ಶ್ರೀ ಮೋಹರಿ ಹನುಮಂತರಾಯರು

[ಪ್ರಾಚೀನ ಕಾಲದಲ್ಲಿ ಭಾರತದ ರಾಜನೀತಿ ಶಾಸ್ತ್ರಕ್ಕೆ ದಂಡನೀತಿ ಶಾಸ್ತ್ರವೆಂತಲೂ ಕರೆಯುವ ಪರಿಪಾಠವಿತ್ತು. ಇಂದಿನ ಭಾರತದ ರಾಜನೀತಿ ಮತ್ತು ಘಟನೆ ಹಿಂದಿನ ಕಾಲದ ಆ ರಾಜನೀತಿಗೆಂತ ಬೇರೆ ಇದೆ. ಅದನ್ನು ಮತ್ತೆ ನಮ್ಮ ಶಾಸ್ತ್ರದಲ್ಲಿನ ರಾಜನೀತಿ ಶಾಸ್ತ್ರಕ್ಕೆ ಸಮ್ಮತವಾಗುವಂತೆ ಮಾರ್ಪಡಿಸಿಕೊಳ್ಳುವಲ್ಲಿಯೇ ಭಾರತದ ಹಿತವಿದೆಯೆಂದು ಲೇಖಕರ ಅಭಿಪ್ರಾಯವಾಗಿದೆ.]

ಭಾರತೀಯ ರಾಜ್ಯಶಾಸ್ತ್ರಕ್ಕೆ ದಂಡನೀತಿ ಶಾಸ್ತ್ರವೆಂಬ ಹೆಸರು. ಆ ಶಾಸ್ತ್ರವನ್ನು ಯಾರು ಮತ್ತು ಯಾಕೆ ರಚಿಸಿದರು? ಮತ್ತು ಅದನ್ನು ಆಚರಣೆಯಲ್ಲಿ ತರುವ ಭಾರವು ಯಾರ ಮೇಲೆ ಹೊರಿಸಲ್ಪಟ್ಟಿತು, ಮೊದಲಾದ ವಿಷಯಗಳನ್ನು ಆಳವಾಗಿ ಅಭ್ಯಸಿಸಿ ತಿಳಿದುಕೊಂಡರೆ ಭಾರತೀಯ ರಾಜ್ಯಶಾಸ್ತ್ರದ ಮೂಲತತ್ವಗಳ ಸ್ವರೂಪವು ಚನ್ನಾಗಿ ಕಂಡುಬರುವದು. ಈ ಮೂಲತತ್ವಗಳೇ ಪ್ರಸ್ತುತ ರಾಜಕಾರಣಕ್ಕೂ ತಳಹದಿಯಾಗಬೇಕು. ನಮ್ಮ ದೇಶವು ತನ್ನ ರಾಜ್ಯವನ್ನು ಕಳೆದುಕೊಂಡ ಮೇಲೆ ನಮ್ಮ ರಾಜ್ಯಶಾಸ್ತ್ರದ ಪ್ರಗತಿಯು ನಿಂತು ಹೋಯಿತು. ಮುಸಲ್ಮಾನರ ದಾಳಿಯ ಕಾಲದಿಂದ ಈಹೊತ್ತಿನ ವರೆಗೆ ನಾವು ಪರಕೀಯ ರಾಜ್ಯಸಂಸ್ಥೆಗಳ ಮಡುವಿನಲ್ಲಿ ಸಿಕ್ಕಿಕೊಂಡದ್ದರಿಂದ ನಮ್ಮ ಸಂಸ್ಥೆಗಳೂ ಮೂಲತತ್ವಗಳೂ ಕಣ್ಮರೆಯಾದವು. ಬ್ರಿಟಿಶರ ಆಳಿಕೆಯ ಕಾಲದಲ್ಲಿ ಆಂಗ್ಲಶಿಕ್ಷಣವು ಬೆಳೆದದ್ದರಿಂದ ಪಾಶ್ಚಾತ್ಯ ರಾಜ್ಯಶಾಸ್ತ್ರದ ಪರಿಚಯುವನ್ನು ನಾವು ಚನ್ನಾಗಿ ಮಾಡಿಕೊಂಡೆವು. ಕಾಂಗ್ರೆಸ ಸಂಸ್ಥೆಯು ಹುಟ್ಟಿ ಬೆಳೆದದ್ದು ಪಾಶ್ಚಾತ್ಯ ರಾಜ್ಯಶಾಸ್ತ್ರದ ವಾತಾವರಣದಲ್ಲಿಯೇ ಎಂದು ಹೇಳಬಹುದು. ಪ್ರಜಾಪ್ರಭುತ್ವ ರಾಜ್ಯಪದ್ಧತಿಯನ್ನು ಮುಖ್ಯ ಗುರಿಯನ್ನಾಗಿಟ್ಟುಕೊಂಡು ನಾವು ಈಹೊತ್ತಿನ ವರೆಗೆ ಹೋರಾಡಿ ಅವನ್ನು ಸಂಪಾದಿಸಿಕೊಂಡೆವು. ಅದರಲ್ಲಿಯ ಲೋಪದೋಷಗಳನ್ನು ಕಂಡುಹಿಡಿದು ನಮ್ಮ ಜನಾಂಗಕ್ಕೆ ಒಗ್ಗುವಂತಹ ರಾಜಕೀಯ ಸಂಸ್ಥೆಗಳನ್ನೂ ಘಟನೆಯನ್ನೂ ನಿರ್ಮಿಸಬೇಕಾದರೆ ಮರೆತು ಹೋದ ಭಾರತೀಯ ರಾಜ್ಯಶಾಸ್ತ್ರ ಅಥವಾ ದಂಡನೀತಿ ಶಾಸ್ತ್ರವನ್ನು ಸ್ಮರಣೆಗೆ ತಂದುಕೊಳ್ಳುವದು ಅತ್ಯಂತ ಅವಶ್ಯವಿದೆ. ಪ್ರತಿಯೊಂದು ಜನಾಂಗಕ್ಕೆ ಒಂದು ವಿಶಿಷ್ಟವಾದ ಸಂಸ್ಕೃತಿ ಇರುವಂತೆ ಆ ಜನಾಂಗದ ಗುಣದೋಷಗಳಿಗೆ ಹೊಂದಿಕೊಳ್ಳುವಂತಹ ರಾಜ್ಯಶಾಸ್ತ್ರವೂ ಇರುವದೆಂದು ಮರೆಯಲಾಗದು. ರಾಜ್ಯಶಾಸ್ತ್ರ ಅಥವಾ ದಂಡನೀತಿಯು ಶಾಸ್ತ್ರದ ಉದ್ದೇಶವು ಎಲ್ಲೆಡೆಯಲ್ಲಿ ಶಾಂತಿಯನ್ನು ನೆಲೆಗೊಳಿಸುವದಲ್ಲದೆ ಜನತೆಯನ್ನು ಸದಾಚಾರಿಗಳನ್ನಾಗಿ ಮಾಡುತ್ತ ಮಾನವನಲ್ಲಿಯ ದೇವಾಂಶವನ್ನು ವಿಕಾಸಗೊಳಿಸುವದು. ಈ ಉದ್ದೇಶವನ್ನು ನೆರವೇರಿಸಬೇಕಾದರೆ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ರಾಜರು ಮಾಡಬೇಕು. ಕೃಷ್ಣನು ಅರ್ಜುನನಿಗೆ ಗೀತೆಯನ್ನು ಉಪದೇಶಮಾಡುವಾಗ ಪರಮಾತ್ಮನ ದ್ವೇಷಿಗಳನ್ನು ನಿಗ್ರಹಿಸುವದು ಕ್ಷತ್ರಿಯರ ಪರಮ ಧರ್ಮವೆಂದು ತೋರಿಸಿಕೊಟ್ಟನು.

ದಂಡನೀತಿಶಾಸ್ತ್ರದ ಹುಟ್ಟು : ಕೃತಯುಗದಲ್ಲಿ ಮೊದಲು ರಾಜ್ಯಪದ್ಧತಿಯು ಆರಂಭಿಸಿತು. ಅದಕ್ಕೂ ಮೊದಲು ಯಾರಿಗೂ ದಂಡನೆಯಿದ್ದಿಲ್ಲ. ಪ್ರಜೆಗಳು ಧರ್ಮದಿಂದ ನಡೆದುಕೊಳ್ಳುತ್ತಿದ್ದರು. ಕಾಲಕ್ರಮೇಣ ಕಾಮ, ಮೋಹ, ರಾಗ ಮೊದಲಾದ ದುರ್ಗುಣಗಳು ಪ್ರಜೆಗಳಲ್ಲಿ ಸೇರಿಕೊಂಡದ್ದರಿಂದ ಲೋಕದಲ್ಲಿ ಧರ್ಮವೇ ನಷ್ಟವಾಗಹತ್ತಿತು. ದೇವತೆಗಳು ಕೂಡ ಹೆದರಿ ಬ್ರಹ್ಮದೇವರನ್ನು ಪ್ರಾರ್ಥಿಸಿಕೊಂಡರು. ಅವನು ಒಂದು ಲಕ್ಷ ಅಧ್ಯಾಯಗಳುಳ್ಳ ಶಾಸ್ತ್ರವೊಂದನ್ನು ರಚಿಸಿ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪ್ರತಿಪಾದಿಸಿದನು. ಮುಂದೆ ಈ ಶಾಸ್ತ್ರದ ಸಾರವನ್ನು ಸಂಗ್ರಹಿಸಿ ಇದು ಲೋಕರಕ್ಷಣೆಗೆ ಮುಖ್ಯ ಸಾಧನವಾಗುವದೆಂದು ಹೇಳಿ ಇದಕ್ಕೆ 'ದಂಡನೀತಿ' ಎಂಬ ಹೆಸರು ಪ್ರಸಿದ್ಧವಾಗುವದೆಂದು ನುಡಿದನು. ಮುಂದೆ ಬೃಹಸ್ಪತಿ, ಶುಕ್ರ ಮೊದಲಾದವರು ಈ ಶಾಸ್ತ್ರವನ್ನು ಸಂಕ್ಷೇಪಿಸಿ ಬರೆದರು. ಆ ನೀತಿಶಾಸ್ತ್ರವನ್ನೆ ಆಧಾರವನ್ನಾಗಿಟ್ಟುಕೊಂಡು ಚಾಣಕ್ಯನು ಅರ್ಥಶಾಸ್ತ್ರವನ್ನು ರಚಿಸಿದನು. ಭಾರತೀಯ ರಾಜ್ಯಶಾಸ್ತ್ರದ ಉಗಮವಿದು. ಲೋಕದಲ್ಲಿ ಇದನ್ನು ಆಚರಣೆಯಲ್ಲಿ ತಂದು ಪ್ರಜೆಗಳ ಸಂರಕ್ಷಣೆ ಹೇಗೆ ಮಾಡಬೇಕೆಂಬುದರ ಬಗ್ಗೆ ದೇವತೆಗಳು ಪರಮಾತ್ಮನನ್ನು ಪ್ರಾರ್ಥಿಸಿಕೊಂಡರು. ಅವನು ರಾಜನನ್ನು ನಿರ್ಮಾಣಮಾಡಿಕೊಟ್ಟನಂತರ ವೇನನೆಂಬ ಅರಸನು ರಾಗದ್ವೇಷಾದಿ ದುರ್ಗುಣಗಳಿಗೆ ನೆಲೆಯಾಗಿ ಧರ್ಮವನ್ನು ಮೀರಿ ನಡೆಯಹತ್ತಿದ್ದರಿಂದ ಅವನನ್ನು ಮುನಿಗಳು ದರ್ಭೆಗಳಿಂದ ಕೊಂದುಬಿಟ್ಟರು. ಮುಂದೆ ಅವನ ವಂಶದಲ್ಲಿ ಹುಟ್ಟಿದವರು ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಾ ಬಂದರು. ರಾಜರಲ್ಲಿ ವಿಷ್ಣುವಿನ ಅಂಶವಿರುತ್ತದೆಂದು ಹೇಳಲಿಕ್ಕೆ ಇದೇ ಆಧಾರವು. ರಾಜಧರ್ಮದ ತತ್ವಗಳನ್ನು ಮಹಾಭಾರತದ ಶಾಂತಿಪರ್ವದಲ್ಲಿ ಈ ರೀತಿ ಹೇಳಲಾಗಿದೆ. ಧರ್ಮಪರಿಪಾಲನೆಯೇ ರಾಜರ ಮುಖ್ಯ ಕರ್ತವ್ಯವಾಗಿದ್ದು ಅವರು ಅದನ್ನು ತಕ್ಕಮಟ್ಟಿಗೆ ನೆರವೇರಿಸುತ್ತಾ ಬಂದರು. ಪ್ರಜಾಪ್ರಭುತ್ವವು ನಮ್ಮ ದೇಶದಲ್ಲಿತ್ತೊ ಇಲ್ಲವೊ ಎಂಬುದರ ಬಗ್ಗೆ ಚರ್ಚೆ ನಡೆದು ಜಯಸ್ವಾಲ, ವೇಣೀಪ್ರಸಾದ, ಬಿನಯಕುಮಾರ ಸರಕಾರ ಮೊದಲಾದ ಬರಹಗಾರರು ಈ ವಿಷಯದಲ್ಲಿ ಅನೇಕ ಗ್ರಂಥಗಳನ್ನು ಬರೆದಿರುತ್ತಾರೆ.

ಪ್ರಜಾಪ್ರಭುತ್ವ : ಭಾರತೀಯ ರಾಜ್ಯಶಾಸ್ತ್ರದಲ್ಲಿ ಪ್ರಜಾಪ್ರಭುತ್ವವು ಅಡಕವಾಗಿತ್ತಲ್ಲದೆ ದುಷ್ಟ ರಾಜನನ್ನು ಕೊಲ್ಲುವ ಅಧಿಕಾರವು ಕೂಡ ಅವರಿಗಿತ್ತೆಂದು ವೇನನ ಕೊಲೆಯಿಂದ ಗೊತ್ತಾಗುತ್ತದೆ. ಆದರೆ ನಮ್ಮ ದೇಶದ ಪ್ರಜಾಪ್ರಭುತ್ವಕ್ಕೂ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನೆಲೆಗೊಂಡ ಪ್ರಜಾಪ್ರಭುತ್ವಕ್ಕೂ ಒಂದು ಮಹತ್ವವಾದ ಭೇದವುಂಟು. ಪ್ರಜೆಗಳಲ್ಲನೇಕರು ಅಧರ್ಮಮಾರ್ಗಿಗಳಾದ್ದರಿಂದಲೂ ಕಾಮ, ಮೋಹ, ರಾಗ

ಮೊದಲಾದ ದುರ್ಗುಣಗಳಿಗೊಳಗಾದ್ದರಿಂದಲೂ ಈ ದಂಡನೀತಿಶಾಸ್ತ್ರವನ್ನು ರಚಿಸಬೇಕಾಯಿತೆಂಬದನ್ನು ಮೇಲೆ ತೋರಿಸಿಕೊಟ್ಟದೆ. ಆದ್ದರಿಂದ ಪ್ರಜೆಗಳಲ್ಲಿ ದುಷ್ಟರೂ ಶಿಷ್ಟರೂ ಸಮ್ಮಿಳಿತರಾಗಿರುವರೆಂದು ಬೇರೆ ಹೇಳಲಿಕ್ಕೆ ಬೇಡ. ಈ ಪ್ರಪಂಚದಲ್ಲಿ ಸದ್ಯಕ್ಕೆ ಸಜ್ಜನರಿಗಿಂತ ದುರ್ಜನರ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತದೆಂದು ಹೇಳಿದರೆ ತಪ್ಪಾಗದು. ಸಜ್ಜನರ ಹೇಳಿಕೆಯನ್ನು ಕೇಳಿಕೊಂಡು ರಾಜನು ರಾಜ್ಯಭಾರ ಮಾಡುತ್ತಿದ್ದನಲ್ಲದೆ ಅನೇಕ ರಾಜಕೀಯ ಕಟ್ಟುಗಳಿಗೆ ಅಧೀನನಾಗಿರುತ್ತಿದ್ದನು. ಹಳ್ಳಿಪಳ್ಳಿಗಳಲ್ಲಿ ಈಹೊತ್ತಿಗೂ ದೈವದವರು ಹೇಳಿದಂತೆ ಕೇಳೋಣವೆಂಬ ಪರಿಪಾಠವಿದೆ. ದೈವದವರು ಅಥವಾ ಪಂಚರೆಂದರೆ ಊರೊಳಗಿನ ಪುಂಡರ ಅಥವಾ ದುರಾಚಾರಿಗಳ ಗುಂಪಲ್ಲ. ಪಾಪಭೀರುಗಳ ಮತು ದೇವರಲ್ಲಿ ವಿಶ್ವಾಸವಿದ್ದವರ ಗುಂಪಿಗೆ ದೈವದವರೆಂಬ ಹೆಸರು. ಈಗಿನ ಗ್ರಾಮಪಂಚಾಯತಗಳಲ್ಲಿ ಈ ಭೇದವಿಲ್ಲ. ವಯಸ್ಸಿಗೆ ಬಂದ ನಾಗರಿಕರೆಲ್ಲರೂ ಸಜ್ಜನರೆಂದೇ ಭಾವಿಸಲಾಗುತ್ತದೆ. ಯಾವ ಸಮಾಜದಲ್ಲಿ ದುರ್ಜನರು ಇಲ್ಲವೆಂದು ತಿಳಿಯಲಾಗುವದೊ ಆ ಸಮಾಜಕ್ಕೆ ದಂಡನೀತಿಯೇ ಬೇಡ. ಅಥವಾ ಸರಕಾರವೇ ಬೇಡ. ಅಂದ ಮೇಲೆ ಗ್ರಾಮಪಂಚಾಯತಿಗಳೇಕೆ ಬೇಕು? ಸದ್ಯದ ಪ್ರಜಾಪ್ರಭುತ್ವದ ಕಲ್ಪನೆಯಲ್ಲಿ ಒಂದು ಬಗೆಯ ಅವ್ಯವಸ್ಥೆಯು ಕಂಡುಬರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಪ್ರಜಾಪ್ರಭುತ್ವವು ಅಯಶಸ್ವಿಯಾಗಲಿಕ್ಕೆ ಇದೇ ಮುಖ್ಯ ಕಾರಣವು. ದುಷ್ಟಜನ ಅಥವಾ ದುರ್ಗುಣಗಳೇ ಭೂಯಿಷ್ಠವಾದ ಈ ಜಗತ್ತಿನಲ್ಲಿ ಪ್ರಜಾಪ್ರಭುತ್ವವೆಂದರೆ ದುರ್ಜನರ ರಾಜ್ಯವೆಂದೇ ಹೇಳಬೇಕಾಗುತ್ತದೆ. ಆದುದರಿಂದ ಸದ್ಯದ ಪ್ರಜಾಪ್ರಭುತ್ವದಲ್ಲಿ ಅನೇಕ ದೋಷಗಳು ಎದ್ದುಕಾಣಿಸುತ್ತವೆ. 'ಸತಾಂಹಿ ಸಂದೇಹಪದೇಷು ವಸ್ತುಷು ಪ್ರಮಾಣಮಂತಃಕರಣಪ್ರವೃತ್ತಯಃ' ಯಾವುದೊಂದು ಸಂದೇಹದ ಸನ್ನಿವೇಶದಲ್ಲಿ ಸಜ್ಜನರ ಅಂತಃಕರಣ ಪ್ರವೃತ್ತಿಗಳನ್ನೇ ಪ್ರಮಾಣವೆಂದು ಭಾವಿಸಬೇಕೆಂದು ಕಾಳಿದಾಸನು ಹೇಳಿದ್ದಾನೆ. ಸಜ್ಜನರು ಯಾರೆಂದು ತಿಳಿದುಕೊಳ್ಳುವದು ಕಠಿಣವೆಂದು ಭಾವಿಸಿ ಸಕಲರೂ ಸಜ್ಜನರೆಂದು ತಿಳಿದುಕೊಳ್ಳುವದರಿಂದ ಅನರ್ಥಗಳುಂಟಾಗುತ್ತವೆ. ರಾಜಧರ್ಮದ ಮರ್ಮವನ್ನು ತಿಳಿದುಕೊಂಡು ಅದರಂತೆ ರಾಜ್ಯಸೂತ್ರಧಾರಿಗಳು ನಡೆದರೆ ಲೋಕಕಲ್ಯಾಣವಾಗುವದು. 'ನೈವ ಕ್ಷಮಾ ಕುಜನತಾಸು ನೃಪಸ್ಯ ಧರ್ಮಃ' ಕುಜನರಲ್ಲಿ ಕ್ಷಮೆಯನ್ನು ತೋರಿಸುವದು ರಾಜರ ಧರ್ಮವಲ್ಲ. 'ಯದಿ ಕ್ಷಮಾ ಸರ್ವನರೇಷು ಧರ್ಮಃ ರಾಜ್ಞಾ ನ ಕೃತ್ಯಂ ನ ಚ ಲೋಕಯಾತ್ರಾ ಭವೇ ಜ್ಜಗತ್ಯಾಪದುಷ್ಟೈರ್ವಿನಶ್ಯೇತ್ ‖ ಕ್ಷಮೆಯು ಸಕಲ ಜನರಲ್ಲಿ ಧರ್ಮವಾದರೆ ದುಷ್ಟನಿಗ್ರಹವೇ ಇಲ್ಲದಂತಾಗಿ ಜಗತು ಚೋರ ಮೊದಲಾದ ದುಷ್ಟ ಜನರಿಂದ ವಿನಾಶವಾಗುವದುಂಟು. ಈ ಪ್ರಕಾರ ರಾಜಧರ್ಮದ ರಹಸ್ಯವನ್ನು ಮಹಾಭಾರತದಲ್ಲಿ ವಿಶದವಾಗಿ ಹೇಳಲಾಗಿದೆ. ಸದಾಚಾರ, ಶೀಲ, ನ್ಯಾಯನಿಷ್ಠುರತೆ, ನಿಃಸ್ವಾರ್ಥ, ಪಾಪಭೀರುತ್ವ ಮೊದಲಾದ ಸದ್ಗುಣಗಳುಳ್ಳ ಜನರೇ ರಾಜ್ಯಸೂತ್ರಗಳನ್ನು ಧರಿಸಬೇಕು; ಧರಿಸಲು ಅರ್ಹರು.

ಧರ್ಮಚಾರಿಗಳಿಗೆ ಆಶ್ರಯದಾತನು ಪರಮಾತ್ಮನು. 'ಐಕಾತ್ಮಂ ಮಾಮನುಗತಂ ವಿದ್ಧಿ ಪಾಂಡವೈರ್ಧರ್ಮಚಾರಿಭಿಃ' ಪಾಂಡವರು ಧರ್ಮಚಾರಿಗಳಾದ್ದರಿಂದ ನಾನು ಅವರ ಗೂಡ ಇರುತ್ತೇನೆಂದು ಶ್ರೀಕೃಷ್ಣನು ದುರ್ಯೋಧನನಿಗೆ ಹೇಳಿದನು. ಯಾವ ರಾಜ್ಯವು ಧರ್ಮಚಾರಿಗಳಿಗೆ ಆಶ್ರಯವಾಗಿರುವದಿಲ್ಲವೋ ಅದು ನಾಶವಾಗುವದು ಖಂಡಿತ. ಇಂದ್ರಿಯಲೋಲುಪರು, ಮೂಢರು, ಲುಬ್ಧರು, ಹಿಂಸಾಸ್ವಭಾವವುಳ್ಳವರು, ವಿದ್ಯಾಹೀನರು, ದುರ್ಬುದ್ಧಿಯುಳ್ಳವರು, ತಿಳಿವಳಿಕೆಯಿಲ್ಲದವರು ಜೇಟಿ ಜೂಜು, ಮದ್ಯ ಪರಸ್ತ್ರೀ ಮುಂತಾದ ವ್ಯಸನಗಳಲ್ಲಿ ಬಿದ್ದವರು ಇಂಥವರನ್ನು ದೊಡ್ಡ ಕಾರ್ಯದಲ್ಲಿ ನಿಯಮಿಸಿದರೆ ರಾಜನ ಸಂಪತ್ತು ಕೈಬಿಟ್ಟು ಹೋಗುವದೆಂದು ರಾಜಧರ್ಮದಲ್ಲಿ ಹೇಳಿದೆ. ಇದು ಲಕ್ಷದಲ್ಲಿಡತಕ್ಕ ವಿಷಯವಲ್ಲವೇ? ಪಾಶ್ಚಾತ್ಯ ರಾಜ್ಯಶಾಸ್ತ್ರದಲ್ಲಿ 'ಸತ್' ಶಬ್ದದ ಪ್ರಯೋಗವೇ ಕಂಡುಬರುವದಿಲ್ಲ. ನಮ್ಮ ದೇಶದ ಸಂವಿಧಾನವು ಪಾಶ್ಚಾತ್ಯ ರಾಜ್ಯಶಾಸ್ತ್ರದಲ್ಲಿ ಪಾರಂಗತರಾದವರಿಂದ ರಚಿತವಾಗಿರುತ್ತದೆಂದು ನಿರ್ವಿವಾದವಾಗಿ ಹೇಳಬಹುದು. ಬ್ರಿಟಿಶರು ಆಂಗ್ಲವಿದ್ಯಾಭ್ಯಾಸವನ್ನು ಇಲ್ಲಿ ಪ್ರಾರಂಭ ಮಾಡಿದಮೇಲೆ ಸಕಲರೂ ಅದೇ ವಿದ್ಯೆಯನ್ನು ಅಭ್ಯಾಸ ಮಾಡಬೇಕಾಯಿತು. ಸದ್ಯದ ಪೀಳಿಗೆಯು ಬ್ರಿಟಿಶರ ಮಾನಸಪುತ್ರರೆಂದು ಹೇಳಿದರೆ ವಿಶೇಷ ತಪ್ಪಾಗದು. ಅಂತೂ ಸದ್ಯದ ಸಂವಿಧಾನವು ನಮ್ಮ ಭಾರತೀಯ ರಾಜ್ಯನೀತಿಗೆ ಹೊಂದಿಲ್ಲೆಂಬದು ಖಂಡಿತ. ಪಾಶ್ಚಾತ್ಯಪ್ರಜಾ ಪ್ರಭುತ್ವದ ಮಾದರಿಯ ಮೇಲೆ ಕಟ್ಟಲ್ಪಟ್ಟ ನಮ್ಮ ಪ್ರಜಾಪ್ರಭುತ್ವವು ಯಶಸ್ವಿಯಾಗುವದೆಂದು ಹೇಳಲಿಕ್ಕಾಗದು. ಆದುದರಿಂದ ಸದ್ಯದ ರಾಜ್ಯಸೂತ್ರಧಾರರು ತಕ್ಕ ಮಾರ್ಪಾಟಗಳನ್ನು ಮಾಡಿದ ಹೊರತು ಗತ್ಯಂತರವಿಲ್ಲ. ಸಜ್ಜನ ದುರ್ಜನರನ್ನು ಹೇಗೆ ವಿಂಗಡಿಸಬೇಕೆಂಬದು ಬಳ್ಳೇ ಕಠಿಣವಾದ ಕಾರ್ಯ. ಸದ್ಗುಣಗಳನ್ನು ರಾಜರು ಪ್ರೋತ್ಸಾಹಿಸುತ್ತ ಹೋದರೆ ಸದ್ಗುಣಿಗಳಿಗೆ ಸಮಾಜದಲ್ಲಿ ಒಂದು ಸ್ಥಾನವು ಪ್ರಾಪ್ತವಾಗುತ್ತದೆ. ಅವರು ಆದರ್ಶನಾಗರಿಕರೆಂದು ತಿಳಿದು ಜನರು ಅವರನ್ನು ಹಿಂಬಾಲಿಸುವರು ಮತ್ತು ಅನುಕರಣ ಮಾಡುವರು. ಹೀಗಾಗಿ ಸಜ್ಜನರನ್ನು ದುರ್ಜನರಿಂದ ವಿಂಗಡಿಸಲು ಅನುಕೂಲವಾಗುವದು. ಈಗ ಪರಿಸ್ಥಿತಿಯು ವಿಪರೀತವಾಗಿ ಕಂಡು ಬರುತ್ತದೆ. ಹಳ್ಳಿ ಪಳ್ಳಿಗಳಲ್ಲಿ ಸಜ್ಜನರಿಗೆ ಸಮಾಜದಲ್ಲಿ ಸ್ಥಾನವಿಲ್ಲದಂತಾಗಿದೆ. ಅವರು ಸಾರ್ವಜನಿಕ ಜೀವನದಲ್ಲಿ ಕಾಲಿಡದಂತಾಗಿದೆ. ಸರಕಾರದ ಅನೇಕ ಯೋಜನೆಗಳಿಗೆ ಸಾಕಷ್ಟು ಸಹಕಾರ ಸಿಗದಿರುವದಕ್ಕೆ ಇದೇ ಮುಖ್ಯ ಕಾರಣವಾಗಿದೆ. ಸಮಾಜಕಂಟಕರೂ ಚಾರಿತ್ರ್ಯಹೀನರೂ ಸಾರ್ವಜನಿಕ ಜೀವನದಲ್ಲಿ ಧುರೀಣತ್ವವನ್ನು ವಹಿಸುವರೆಂಬ ಭಾವನೆಯು ಹೇಗೊ ಜನತೆಯಲ್ಲಿ ನೆಲೆಗೊಂಡಿದೆ. ವಿಧಾನಸಭೆಗಳ ಸದಸ್ಯತ್ವವು ಕೂಡ ಯೋಗ್ಯ ಜನರಿಗೆ ಸಿಗುವದೆಂಬ ಭರವಸೆಯಿಲ್ಲದಂತಾಗಿದೆ. ಅವರು ಎಂಥವರಿರಬೇಕೆಂಬುದರ ಬಗ್ಗೆ ಯಾವ ನಿರ್ಬಂಧವೂ ಇಲ್ಲ. ಪ್ರತಿಯೊಬ್ಬನು ಮುಂದಿನ ಚುನಾವಣೆಯಲ್ಲಿ ಮತಗಳು ಹೇಗೆ ಸಿಕ್ಕಾವೆಂಬದನ್ನೇ ವಿಚಾರಮಾಡುತ್ತ ತನ್ನ ನೀತಿಯನ್ನು ನಿರ್ಧರಪಡಿಸುತ್ತಾನೆ. ಈ ಮನೋವೃತ್ತಿಯು ಬೆಳೆಯುತ್ತ ನಡೆದಿರುತ್ತದೆ. ಇದರಿಂದ ರಾಷ್ಟ್ರಕ್ಕೆ ಹಾನಿಯಾಗುವದರಲ್ಲಿ ಸಂದೇಹವಿಲ್ಲ. ಭಾರತೀಯ ರಾಜನೀತಿ ಶಾಸ್ತ್ರದಲ್ಲಿ ಅರಸೊತ್ತಿಗೆಯ ಪ್ರಭಾವವಿರುವದೆಂದೂ ಪ್ರಜಾಪ್ರಭುತ್ವದ ಅಂಶಗಳು ಅದರಲ್ಲಿಲ್ಲವೆಂದೂ ನಮ್ಮ ಸುಶಿಕ್ಷಿತರ ತಪ್ಪುಕಲ್ಪನೆಯಾಗಿದೆ. ಸರ್ವಜನರೂ ಸುಖಿಯಾಗಿರಲೆಂಬ ಅಮೋಘತತ್ವವು ನಮ್ಮ ರಾಜನೀತಿಯ ಅಂಗವಾಗಿರುವದಲ್ಲದೆ ಧರ್ಮಶಾಸ್ತ್ರ, ಮೋಕ್ಷಶಾಸ್ತ್ರಗಳಲ್ಲಿ ಅದು ಅಂತರ್ಭೂತವಾಗಿದೆ.

ನಮ್ಮ ಪ್ರಾಚೀನ ರಾಜನೀತಿ ಶಾಸ್ತ್ರವನ್ನು ಬಿಟ್ಟು ನಾವು ಸದ್ಯದ ಹಸಿಬಿಸಿ ಪ್ರಜಾಪ್ರಭುತ್ವದ ಬೆನ್ನುಹತ್ತಬೇಕಾದ ಕಾರಣಗಳಾವುವೆಂಬದನ್ನು ಇಲ್ಲಿ ಸಂಕ್ಷೇಪವಾಗಿ ವಿವೇಚಿಸುವದು ಅಪ್ರಸ್ತುತವಾಗಲಿಕ್ಕಿಲ್ಲ. ನಾವು ಮೇಲೆ ಹೇಳಿದಂತೆ ೧೯ ನೇ ಶತಮಾನದ ಮುಂದಾಳುಗಳು ಪಾಶ್ಚಾತ್ಯ ಶಿಕ್ಷಣದ ಮೂಲಕ ಅಲ್ಲಿಯ ರಾಜ್ಯಶಾಸ್ತ್ರದ ಮೂಲತತ್ವಗಳಿಗೆ ಮನಸೋತರು. ಮತ್ತು ಬ್ರಿಟಿಶ್ ಜನತೆಯಿಂದ ಹಕ್ಕುಗಳನ್ನು (ರಾಜಕೀಯ ಸ್ವಾತಂತ್ರ್ಯ) ಪಡೆಯಬೇಕಾದುದರಿಂದ ಅವರ ರಾಜಕೀಯ ಧ್ಯೇಯವನ್ನು ನಮ್ಮ ರಾಷ್ಟ್ರದೆದುರಿಗಿಡಬೇಕಾಯಿತು. ಲೋಕಮಾನ್ಯ ಟಿಳಕ ಮತ್ತು ಮಹಾತ್ಮಾಗಾಂಧಿ ಮೊದಲಾದವರಿಗೆ ಪಾಶ್ಚಾತ್ಯ ಪ್ರಜಾಪ್ರಭುತ್ವವು ನಮ್ಮ ದೇಶಕ್ಕೆ ಅಷ್ಟೊಂದು ಹೊಂದಿಕೆಯಾಗುವದಿಲ್ಲೆಂದು ಗೊತ್ತಿದ್ದರೂ ಅನಿವಾರ್ಯವಾಗಿ ಅದನ್ನೇ ಅನುಸರಿಸಬೇಕಾಯಿತು. ಮಹಾತ್ಮಾ ಗಾಂಧಿಯವರು ರಾಮರಾಜ್ಯಬೇಕೆಂದು ಹೇಳುತ್ತಿದ್ದುದರ ಗುಟ್ಟು ಇದೇ. ಕಾಂಗ್ರೆಸ್ಸು ಸ್ಥಾಪಿತವಾದಂದಿನಿಂದ ರಾಜಕಾರಣದ ಒಲವು ಸಂಪೂರ್ಣವಾಗಿ ಪಾಶ್ಚಾತ್ಯ ರಾಜನೀತಿ ಶಾಸ್ತ್ರದತ್ತ ಹೊರಳಿತು. ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟದಲ್ಲಿ ಕೂಡ ಎರಡು ಪಂಗಡಗಳಾದವು. ಕೇವಲ ಘಟನಾತ್ಮಕ ಮಾರ್ಗದಿಂದ ಸ್ವರಾಜ್ಯವನ್ನು ಗಳಿಸಬೇಕೆನ್ನುವ ಮಂದಗಾಮಿಗಳದೊಂದು ಪಕ್ಷ, ಯಾವದೇ ಬಗೆಯ ಮಾರ್ಗದಿಂದ ಹೋರಾಡಿ ಸ್ವಾತಂತ್ರ್ಯವನ್ನು ಗಳಿಸಬೇಕೆನ್ನುವವರದೊಂದು ಎರಡನೆ ಉಗ್ರಪಕ್ಷ. ಬಂಗಾಲ ಮತ್ತು ಮಹಾರಾಷ್ಟ್ರದಲ್ಲಿ ಬಾಂಬುಗಳನ್ನುಪಯೋಗಿಸಿ ರಾಜಕೀಯ ಕೊಲೆಗಳನ್ನು (ಪರಕೀಯ ಅಧಿಕಾರಿಗಳ ಕೊಲೆಯನ್ನು) ಮಾಡಲೆತ್ನಿಸಿದರು. ಅಲ್ಲಿಯ ತರುಣರು ಒಳಸಂಚುಗಳನ್ನು ಹೂಡಿ ಅನೇಕರ ಕೊಲೆಯನ್ನು ಮಾಡಿದರು. ರಾಜ

ಕೀಯ ವಿರೋಧಿಗಳ ಕೊಲೆ ಮಾಡುವ ಪ್ರವೃತ್ತಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಶೇಷತಃ ರಶಿಯಾದಲ್ಲಿ ನೆಲೆಗೊಂಡಿತ್ತು. ಇದೊಂದು ರಾಜಕೀಯ ಪಂಥವೆಂದೇ ಪರಿಗಣಿಸಲ್ಪಡುತ್ತಿದೆ. ಮಹಾರಾಷ್ಟ್ರದ ಇತಿಹಾಸದಲ್ಲಿ ಈ ಪಂಥವು ಬೇರೂರಿತ್ತೆಂದು ಹೇಳಬಹುದು. ಚಂದ್ರರಾವ ಮೋರೆ, ಅಫಜಲ್ ಖಾನ್, ನಾರಾಯಣರಾವ ಪೇಶ್ವೆ, ಮೊದಲಾದವರು ಕೊಲೆ ಮಾಡಲ್ಪಟ್ಟರು. ಬ್ರಿಟಿಶರ್ ಆಳಿಕೆಯಲ್ಲಿ ಈ ಪರಂಪರೆಯು ಮುಂದರಿದು ಬಂದು ಸಾವರಕರ ಬಂಧುಗಳು ಆ ಪಂಥದ ಅಧ್ವರ್ಯುಗಳಾದರು. :ಪುಣೆಯ ಉಗ್ರವಾದಿ ಮುಂದಾಳುಗಳಾದ ಶ್ರೀ ಶಿವರಾಮ ಮಹಾದೇವ ಪರಾಂಜಪೆ, ಬಾಪಟ ಮೊದಲಾದವರು ಅಪ್ರತ್ಯಕ್ಷವಾಗಿ ಆ ಪಂಥಕ್ಕೆ ಸಹಾಯವನ್ನೀಡುತ್ತಿದ್ದರೆಂದು ಕಂಡು ಬರುತ್ತದೆ. ಕರ್ನಾಟಕದಲ್ಲಿ ಇದರ ಪ್ರಭಾವವು ಸಾವಕಾಶವಾಗಿ ಬೆಳೆಯಹತ್ತಿತು. ಖುದಿರಾಂ ಬೋಸನು ತಪ್ಪಿ ಯುರೋಪಿಯನ್ ಹೆಣ್ಣುಮಗಳನ್ನು ಬಾಂಬು ಹಾರಿಸಿ ಕೊಂದನು. ಈ ಪಂಥವು ಕರ್ನಾಟಕದ ತರುಣರಲ್ಲಿ ತಲೆಹಾಕಿತು. ದಿವಂಗತ ಹನುಮಂತರಾವ ಕೌಜಲಗಿಯವರು ಕೆಲವು ಗೆಳೆಯರೊಂದಿಗೆ ಬಾಂಬುಗಳನ್ನು ತಯಾರಿಸುವ ಕ್ರಮವನ್ನು ಕಲಿತುಕೊಂಡಿದ್ದರು. ಇದು ೧೯೦೭ ನೇ ಇಸ್ವಿಯು. ರಾಜಕೀಯ ಉದ್ದೇಶವನ್ನು ಸಾಧಿಸಿಕೊಳ್ಳಲು ಕೊಲೆ ಮಾಡುವ ಪಂಥದಿಂದ ರಾಷ್ಟ್ರಕ್ಕೂ ಸಮಾಜಕ್ಕೂ ಹಾನಿಯಾಗುತ್ತದೆ. ನಾಸಿಕ ಕಲೆಕ್ಟರರಾದ ಜಾಕ್ಸನ್‌ರ ಕೊಲೆ ೧೯೦೯ರಲ್ಲಿ ಆಯಿತು. ಈ ಪಂಥದವರಲ್ಲಿ ಕೆಲವರು ಶ್ರೀ. ಗೋಖಲೆಯವರನ್ನು ಕೂಡ ಕೊಲೆ ಮಾಡಬೇಕೆಂದು ಹೊಂಚು ಹಾಕಿದ್ದರೆಂದು ತಿಳಿಯುತ್ತದೆ. ಶ್ರೀ ಗೋಖಲೆಯವರು ಸೌಮ್ಯಪಕ್ಷದ ರಾಜಕಾರಣಿಗಳಿದ್ದರೆಂಬದೇ ಇದಕ್ಕೆ ಕಾರಣ. ಮಹಾತ್ಮಾ ಗಾಂಧಿಯವರ ಕೊಲೆಯಾದದ್ದು ಈ ಪಂಥದ ಮನೋವೃತ್ತಿಯ ಕುರುಹು. ಮ. ಗಾಂಧಿಯವರು ಹಿಂದೀ ರಾಜಕಾರಣದ ಧುರೀಣತ್ವವನ್ನು ವಹಿಸಿ ಈ ಪಂಥದ ಚಟವಟಿಕೆಗಳಿಗೆ ಅಹಿಂಸಾ ತತ್ವವನ್ನು ಜೀರಿ ತಡೆಹಾಕಿದರು. ರಾಜಕಿಯ ಕೊಲೆಗಡಕತನ ಪಂಥದಿಂದ ರಾಷ್ಟ್ರಕ್ಕೆ ಹಾನಿಯಾಯಿತೆಂದು ಅಸಂದಿಗ್ಧವಾಗಿ ಹೇಳಬಹುದು. ಅದರಂತೆ ರಾಜಕಾರಣದಲ್ಲಿ ಅತಿರೇಕತನದ ಅಥವಾ ಉಗ್ರ ಮನೋವೃತ್ತಿಯಿಂದಲೂ ಹಾನಿಯಾದದ್ದು ಕಂಡುಬರುತ್ತದೆ.

ಬ್ರಿಟಿಶ ಸರಕಾರವು ೧೯೪೬ ನೇ ಇಸ್ವಿಯಲ್ಲಿ ಹಿಂದುಸ್ತಾನದ ಸಲುವಾಗಿ ಸಂಯುಕ್ತರಾಜ್ಯ ಘಟನೆಯ ಕಾಯಿದೆಯನ್ನು ಮಾಡಿತು. ಆಗ್ಗೆ ಸಂಯುಕ್ತರಾಜ್ಯಘಟನೆಯನ್ನು ಸ್ವೀಕರಿಸಲು ಬ್ರಿಟಿಶ್ ಮುತ್ಸದ್ದಿಗಳು ಹಿಂದೀ ಮುಂದಾಳುಗಳಿಗೆ ಮನ ಒಲಿಸಹತ್ತಿದ್ದರು. ಆದರೆ ಇಲ್ಲಿಯ ಎಡಪಕ್ಷದವರು ವಿರೋಧಿಸುವರೆಂದು ಕಂಡುಬಂದದ್ದರಿಂದ ಸಂಯುಕ್ತರಾಜ್ಯಘಟನೆಯನ್ನು ಕಾಂಗ್ರೆಸ್ಸು ತಿರಸ್ಕರಿಸಿತು. ಅದನ್ನು ಸ್ವೀಕರಿಸಿದ್ದರೆ ಪಾಕಿಸ್ತಾನ ಚಳವಳಿಯು ಉದ್ಭವಿಸುತ್ತಿದ್ದಿಲ್ಲವೆಂದು ಹೇಳಲು ಅವಕಾಶವಿದೆ. ಇಂತಹ ಅನೇಕ ಪ್ರಸಂಗಗಳು ನಮ್ಮ ರಾಜಕಾರಣದಲ್ಲಿ ಆಗಿಹೋಗಿವೆ. ಸ್ವಾತಂತ್ರ್ಯಯುಗದ ಈಗಿನ ಕಾಲದಲ್ಲಿ ಉಗ್ರಮನೋವೃತ್ತಿಯು ನಮ್ಮ ರಾಜಕಾರಣದಲ್ಲಿ ಕಂಡುಬರುತ್ತದೆ. ಆದರೆ ಅದು ಅಧಿಕಾರಲಾಲಸೆ ಮತ್ತು ಸ್ವಾರ್ಥಸಾಧಕತೆಯ ಹೊದಿಕೆಯಾಗಿದೆ. ರಾಜ್ಯಾಡಳತೆಯಲ್ಲಿಯ ಲೋಪದೋಷಗಳನ್ನು ಎತ್ತಿ ತೋರಿಸಿ ಅದನ್ನು ತಿದ್ದುವ ಉಪಕ್ರಮವನ್ನು ತೋರಿಸಿಕೊಡುವ ಮಾರ್ಗವು ಸಮಂಜಸವಾದದ್ದು. ಅದನ್ನು ಬಿಟ್ಟು ಕೇವಲ ಜನರಲ್ಲಿ ಅಸಂತೋಷವನ್ನು ಹುಟ್ಟಿಸಿ ಅದರಿಂದ ತಮಗೆ ಬೆಂಬಲ ದೊರಕಿಸಿಕೊಳ್ಳಬೇಕೆಂಬ ಮನೋವೃತ್ತಿಯು ಹೇಯವಾದದ್ದು ರಾಷ್ಟ್ರಘಾತಕವಾದದ್ದು. ಸದ್ಯಕ್ಕೆ ಕಂಡುಬರುವ ರಾಜಕಾರಣದಲ್ಲಿಯ ಒಲವುಗಳು ನಮ್ಮ ದೇಶವನ್ನು ವೈಭವಶಾಲಿಯನ್ನಾಗಿ ಮಾಡಲಾರವು.

ಮಹಾಭಾರತ ಗ್ರಂಥವು ಸಕಲ ಶಾಸ್ತ್ರಗಳ ಕಣಿಯಾಗಿದೆ. ರಾಜನೀತಿಶಾಸ್ತ್ರವು ಕೂಡ ಆ ಗ್ರಂಥದ ಮುಖ್ಯ ಭಾಗವಾಗಿದೆ. ರಾಜಕಾರಣದಲ್ಲಿ ಕಾರ್ಯಮಾಡಬೇಕಾದ ಪ್ರತಿಯೊಬ್ಬ ಭಾರತೀಯ ನಾಗರಿಕನು ಮಹಾಭಾರತವನ್ನು ವಿಶೇಷತಃ ರಾಜಧರ್ಮ ಪರ್ವವನ್ನು ಅಭ್ಯಾಸ ಮಾಡಲೇಬೇಕು. ಶಾಸನ ಸಭೆಗಳಲ್ಲಿ ಕೆಲಸ ಮಾಡುವವರಿಗಂತೂ ಅದು ಪಠ್ಯಪುಸ್ತಕವಾಗಬೇಕಾದುದು ಅವಶ್ಯವಿದೆ. ಪುಣೆಯ ಡಾ. ಬೆಳವಲಕರರು ಮಹಾಭಾರತದ ಬಗ್ಗೆ ಹೀಗೆ ಬರೆಯುತ್ತಾರೆ: The Mahabharata is primarily a book for the kshatriyas, for administators and legislators and Rajaniti or the Science and Art of Governance is a topic to which the Epic returns whenever opportunity presents itself. It would not be an exaggeration to say that wellnigh a sixth part of the Epic deals with Politics: no conceivable phase or situation possessing a political bearing is passed over by the Epic without comment. We have historical discussions as to the origin and function of the State, its constituents, its departments, its resources, its dangers and drawbacks and whatnot: all conceived from the point of view of sturdy commonsense and genuine concern for the well-being of all.

ಮಹಾಭಾರತವು ಪ್ರಾಮುಖ್ಯವಾಗಿ ಕ್ಷತ್ರಿಯರಿಗಾಗಿ, ಆಡಳಿತೆಗಾರರಿಗಾಗಿ, ವಿಧಾನಸಭೆಗಳ ಸದಸ್ಯರಿಗಾಗಿದೆ. ಈ ಮಹಾಗ್ರಂಥದ ಒಂದು. ಆರಾಂಶ ಭಾಗವು ರಾಜನೀತಿಶಾಸ್ತ್ರಕ್ಕೆ ಸಂಬಂಧಪಟ್ಟಿದೆ. ರಾಜಕಾರಣದಿಂದ ಉದ್ಭವಿಸುವ ಪ್ರತಿಯೊಂದು ಸಮಸ್ಯೆಯನ್ನು ಬಿಡಿಸುವ ಕ್ರಮವನ್ನೂ ಇದರಲ್ಲಿ ಹೇಳಲಾಗಿದೆ. ರಾಜ್ಯದ ಉಗಮ ಮತ್ತು ಅದರ ವ್ಯವಹಾರ, ಲೋಪದೋಷಗಳು ಇವೇ ಮೊದಲಾದ ವಿಷಯುಗಳು ಲೋಕಕಲ್ಯಾಣ ದೃಷ್ಟಿಯಿಂದ ವಿವೇಚಿಸಲ್ಪಟ್ಟಿವೆ.

ನಾವು ಮೇಲೆ ವ್ಯಕ್ತಮಾಡಿದ ವಿಚಾರಗಳು ಕೆಲವರಿಗೆ ಒಳ್ಳೇ ಕ್ರಾಂತಿಕಾರಕ ಅಥವಾ ಪ್ರತಿಗಾಮಿಗಳೆಂದು ತೋರಬಹುದು. ನಮ್ಮ ದೇಶದ ರಾಜಕಾರಣವು ಪ್ರಜಾಪ್ರಭುತ್ವದ ಬಗ್ಗೆ ತಪ್ಪು ಕಲ್ಪನೆಯುಳ್ಳ ಅಪಕ್ವ ವಿಚಾರಿಗಳ ಕೈಗೇ ಸಿಗಹತ್ತಿದ್ದರಿಂದ ರಾಜ್ಯಶಾಸ್ತ್ರದ ಯೋಗ್ಯ ಕಲ್ಪನೆಯು ಜನರಿಗಾಗಬೇಕೆಂದು ಮೇಲಿನ ನಾಲ್ಕು ಪಂಕ್ತಿಗಳನ್ನು ಬರೆಯುಬೇಕಾಯಿತು. ನಮ್ಮೀ ವಿಚಾರಗಳೇನು ಹೊಸವಲ್ಲ. ಋಷಿಗಳು, ತಪಸ್ವಿಗಳು, ಸಂನ್ಯಾಸಿಗಳು, ನ್ಯಾಯನಿಷ್ಠುರರು ದ್ರಷ್ಟಾರರು, ಸ್ಮೃತಿಕಾರರು ಬರೆದಿಟ್ಟ ತತ್ವಗಳ ಸಾರವನ್ನು ನಾವು ಸಂಕ್ಷೇಪವಾಗಿ ಹೇಳಿದ್ದೇವೆ. ಮಹಾತ್ಮಾ ಗಾಂಧಿಯವರು ತಮ್ಮ 'ಹಿಂದ ಸ್ವರಾಜ್ಯ' ಎಂಬ ಗ್ರಂಥದಲ್ಲಿ ಕೂಡ ಇದೇ ಬಗೆಯ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ.

But, as a matter of fact, it is generally acknowledged that the members are hypocritical and selfish. When the greatest questions are debated, its members have been seen to stretch themselves and to dose. If India copies England, it is my firm conviction that she will be ruined.

ಬ್ರಿಟಿಶ್ ರಾಜ್ಯಪದ್ಧತಿಯನ್ನು ಅನುಕರಣ ಮಾಡಿ ಅದೇ ಪದ್ಧತಿಯನ್ನು ನಮ್ಮ ದೇಶದಲ್ಲಿ ರೂಪಗೊಳಿಸಿದ್ದೇವೆ. ಮಹಾತ್ಮಾಗಾಂಧಿಯವರು ಬ್ರಿಟಿಶ್ ಪಾರ್ಲಿಮೆಂಟರಿ ಪದ್ಧತಿಯನ್ನು ಕಟುವಾಗಿ ಟೀಕಿಸಿದ್ದಾರೆ. ಬ್ರಿಟಿಶ್ ಪಾರ್ಲಮೆಂಟದ ಸದಸ್ಯರು ಸಾಧಾರಣವಾಗಿ ಕಪಟವೇಷಧಾರಿಗಳು ಮತ್ತು ಸ್ವಾರ್ಥಿಗಳು. ಪ್ರತಿಯೊಬ್ಬನು ತನ್ನ ಕ್ಷುದ್ರ ಸ್ವಾರ್ಥದ ಬಗ್ಗೆ ವಿಚಾರಮಾಡುತ್ತಾನೆ. ಯಾವಾಗಲೂ ಹೆದರಿಕೊಂಡು ನಡೆಯುತ್ತಾನೆ. ಈ ಹೊತ್ತು ಮಾಡಿದ್ದನ್ನು ನಾಳೆ ಅಳಿಸಿಬಿಡಬಹುದು. ಯಾವದೂ ಶಾಶ್ವತವಲ್ಲ. ಮಹತ್ವದ ಸಮಸ್ಯೆಗಳನ್ನು ಚರ್ಚಿಸುವಾಗ ಸದಸ್ಯರು ತೂಕಡಿಸುವದು ಕಂಡುಬರುತ್ತದೆ. ಕೆಲವರು ತಿರಸ್ಕಾರ ಹುಟ್ಟುವಂತೆ ಉದ್ದ ಭಾಷಣ ಮಾಡುತ್ತಾರೆ. ಪಾರ್ಲಿಮೆಂಟೊಂದು ರಾಷ್ಟ್ರದ ಆಟಿಗೆಯ ವಸ್ತು. ಹಿಂದುಸ್ತಾನವು ಇಂಗ್ಲಂಡಿನ ಅನುಕರಣಮಾಡಿದರೆ ಅದು ನಾಶವಾಗುವದೆಂದು ನನ್ನ ಮನವರಿಕೆಯಾಗಿದೆ. ಮಹಾತ್ಮರ ಪ್ರತಿಯೊಂದು ನುಡಿಯು ಈಗಿನ ದಿಲ್ಲಿಯಲ್ಲಿಯ ನಮ್ಮ ಪಾರ್ಲಿಮೆಂಟಗೂ ಅನ್ವಯಿಸುತ್ತದೆ.

‘Scepticism....itself could not satisfy because, although its business was inquiry, it was unwilling sufficiently to inquire’

— *Sri. Aurobindo*

‘न नास्तिक्यवादो युज्यते । दर्शनात् तप आदि फलस्य’

— ಶ್ರೀ. ಮಧ್ವ

‘Atheism is the Vice of a few intelligent Men’

— *Voltaire*

‘Nature abhors a Vacuum in the Spiritual world no less than in the physical’

— *C. E. M. Joad*

‘A little philosophy inclineth a man’s mind to atheism but depth in philosophy bringeth men’s minds about to religion’

— *Francis Bacon*

ನಾಸ್ತಿಕವಾದದ ನಾನಾ ಪ್ರಕಾರಗಳು

ಬರೆದವರು: **ಶ್ರೀ. ಗು. ಭೀ. ಜೋಶಿ,** ಎಂ. ಎ., ಬಿ. ಟಿ.

ಸರ್ವದೋಷದೂರನೂ ಸರ್ವರಿಗೆ ಆಶ್ರಯನೂ ಸರ್ವಾಂತರ್ಯಾಮಿಯೂ ಸರ್ವಗುಣ ಪರಿಪೂರ್ಣನೂ ಆದ ಒಬ್ಬ ಮೂಲ ಪುರುಷನು ತಾತ್ವಿಕವಾಗಿ, ತತ್ವಭೂತವಾಗಿ ಈ ವಿಶ್ವದಲ್ಲಿ ಒಳಗೂ ಹೊರಗೂ ವ್ಯಾಪಿಸಿದ್ದಾನೆ. ಅವನನ್ನು ಯಾವ ಹೆಸರಿನಿಂದ ಕರೆದರೂ ಸರಿಯೆ. ಈ ಮೂಲ ತತ್ವವನ್ನು ಅರಿಯದಿದ್ದರೆ ಜೀವನದಲ್ಲಿ ಸಾಫಲ್ಯವೂ ಇಲ್ಲ, ಪೂರ್ಣತೆಯೂ ಇಲ್ಲ.

ಮಾನವನ ಪ್ರಗತಿಯ ಇತಿಹಾಸವನ್ನು ಓದಿದರೆ, ಅದೊಂದು ಮಂದಗತಿಯ ಜ್ಞಾನಪ್ರವಾಹವೆಂದು ಹೇಳಬಹುದು. ಈ ಪ್ರವಾಹವು ವಿಶ್ವಾಸ, ಭರವಸೆಗಳ ಮನೋಹರವಾದ ವನಾಂತರಗಳಲ್ಲಿ ಹರಿದು ಬಂದಂತೆ, ಸಂದೇಹ ನಿರಾಶೆಗಳ ಮರುಪ್ರದೇಶಗಳಲ್ಲಿಯೂ ಸೇರಿ, ಎಷ್ಟೋ ಸಾರೆ ಆ ಮಳಲಿನಲ್ಲಿ ನಷ್ಟವಾಗಿ, ಕೊನೆಗೆ ಹಟದಿಂದ ಕಾವ್ಯಕಲೆಗಳ ಹಸಿರು ಗದ್ದೆಗಳಲ್ಲಿಯೂ ಸಂಗೀತ ಶಿಲ್ಪಗಳ ಹೂದೋಟಗಳಲ್ಲಿಯೂ ಧರ್ಮ ತತ್ವಜ್ಞಾನಗಳ ಫಲದಿಂದ ಬಾಗಿದ ವೃಕ್ಷಖಂಡಗಳಲ್ಲಿಯೂ ಸ್ವಾನುಭವದ ವಿನೀತತೆಯಿಂದ, ಆತ್ಮವಿಶ್ವಾಸದ ಆಢ್ಯತೆಯಿಂದ ಹರಿದು ಬರುವದನ್ನು ನೋಡಿ ಯಾರಿಗೆ ಆನಂದವಾಗುವದಿಲ್ಲ!!

ಈ ಜ್ಞಾನಪ್ರವಾಹವು ಅನಾದಿಯಾಗಿದ್ದರೂ ಐತಿಹಾಸಿಕ ಕಾಲದಿಂದ ಇದಕ್ಕೆ ಬಂದ ಅಡೆತಡೆಗಳನ್ನು ನಾವು ತಿಳಿದುಕೊಂಡು, ಇದು ಅಖಂಡವಾಗಿಯೂ ಅವಿಚ್ಛಿನ್ನವಾಗಿಯೂ ಹರಿಯುವಂತೆ ಪ್ರಯತ್ನ ಮಾಡಬೇಕು. ಸಂದೇಹ, ಸಂಶಯಗಳು, ವಿಪರೀತ ಜ್ಞಾನವು ಹೇಗೆ ಮನುಷ್ಯನ ಜ್ಞಾನೋದಯಕ್ಕೆ ಪ್ರತಿಬಂಧವಾಗುವದೆಂದು ತಿಳಿಯಲಿಕ್ಕೆ ಜಗತ್ತಿನಲ್ಲಿ ನಾಸ್ತಿಕವಾದದ ನಾನಾ ರೀತಿಗಳು ಪ್ರಚಾರಹೊಂದಿದ್ದನ್ನು ಅಭ್ಯಾಸ ಮಾಡಬಹುದು.

ಭರತ ದೇಶದಲ್ಲಿ ಅತಿ ಪ್ರಾಚೀನ ಕಾಲದಲ್ಲಿ ಸಹ ನಾಸ್ತಿಕವಾದಗಳು ಅಕ್ರಿಯಾವಾದ, ಯದೃಚ್ಛಾವಾದ, ನಿಯತಿವಾದ ಮೊದಲಾದ ಹೆಸರುಗಳಿಂದ ಅಲ್ಲಲ್ಲಿ ಅಸ್ಪಷ್ಟವಾಗಿಯೂ ಸ್ಪಷ್ಟವಾಗಿಯೂ ನಿರ್ದಿಷ್ಟವಾಗಿವೆ. ಬುದ್ಧನ ಸಮಯದಲ್ಲಿ ೬೨ ಮತಗಳು ಪ್ರಚಲಿತವಿದ್ದವೆಂದು ದೀಘನಿಕಾಮದ ‘ಬ್ರಹ್ಮಜಾಲ ಸೂತ್ರ’ ದಲ್ಲಿ ವರ್ಣನೆ ಬಂದಿದೆ. ಜೈನದರ್ಶನದಲ್ಲಿ (नत्थि कम्मं न नत्थि किरियं) ಅಕ್ರಿಯಾವಾದದ ಉಲ್ಲೇಖವಿದೆ. ಶ್ವೇತಾಶ್ವತರ ಮತ್ತು ಮೈತ್ರಾಯಣಿ ಉಪನಿಷತ್ತುಗಳಲ್ಲಿ ಮೂಲ ಕಾರಣದ ಮೀಮಾಂಸೆಯನ್ನು ಮಾಡುತ್ತಿರುವಾಗ, ಕಾಲ, ಸ್ವಭಾವ, ನಿಯತಿ, ಯದೃಚ್ಛಾ ಭೂತ ಮೊದಲಾದವುಗಳು (कालः स्वभावो नियतिः यदृच्छा भूतानि योनिः श्वे,) ಜಗತ್ತಿಗೆ ಮೂಲ ಕಾರಣವೆಂದು ಕೆಲವರು ಒಪ್ಪಿದ್ದನ್ನು ಉಲ್ಲೇಖಿಸಿದ್ದಾರೆ. ಮಹಾಭಾರತದಲ್ಲಿಯೂ ಈ ನಾಸ್ತಿಕ ಮತಗಳ ನಿರ್ದೇಶವೂ ಖಂಡನವೂ ತೋರಿ ಬರುತ್ತದೆ. ಇದರಿಂದ ಮಹಾಭಾರತದ ಮೊದಲು ಈ ಅವೈದಿಕ ಮತಗಳು ಪ್ರಚಲಿತವಾಗಿ ಆಸ್ತಿಕ ಮತವನ್ನು ಹಿಂದೆ ನೂಕಲಿಕ್ಕೆ ಪ್ರಯತ್ನಿಸಿದಂತೆ ತೋರುತ್ತದೆ. ಇವರಲ್ಲಿ ಕೆಲವರ ಹೆಸರನ್ನೂ, ಅವರ ಮತವನ್ನೂ, ನಿವೇದಿಸಬಹುದು.

ಪೂರ್ಣ ಕಶ್ಯಪನೆನ್ನುವವನು ಅಕ್ರಿಯಾವಾದವನ್ನು ಪ್ರತಿಪಾದಿಸಿದನು. ಕಳವು, ಸುಲಿಗೆ, ಸುಳ್ಳುಹೇಳುವದು ಮೊದಲಾದ ಅಶುಭಕರ್ಮಗಳ ಫಲವನ್ನು ಮಾನವನು ಅನುಭವಿಸಬೇಕಾದುದಿಲ್ಲ. ಯಜ್ಞಯಾಗ, ದಾನಧರ್ಮರೂಪ ಶುಭ ಕರ್ಮಗಳ ಫಲವಾದ ಪುಣ್ಯವೂ ಅವನಿಗೆ ದೊರೆಯುವದಿಲ್ಲ.

ಅಜಿತ ಕೇಶಕಂಬಲನೆನ್ನುವವನು ವಿಚ್ಛೇದವಾದ ಅಥವಾ ಜಡವಾದವನ್ನು ಪ್ರತಿಪಾದಿಸಿದನು. ಮೃತ್ಯುವಿನಿಂದ ಎಲ್ಲ ಶರೀರವೂ ನಾಶಹೊಂದುವದು. ಅದರಲ್ಲಿರುವ ಪಂಚಮಹಾಭೂತಗಳು ತಮ್ಮ ಮೂಲರೂಪದಲ್ಲಿ ಲೀನ ಹೊಂದಿದ ಮೇಲೆ ಏನೂ ಉಳಿಯುವದಿಲ್ಲ. ಆತ್ಮನೆನ್ನುವದು ಸುಳ್ಳಿನ ಕಂತೆ.

ಪ್ರಕ್ರುಧ ಕಾತ್ಯಾಯನನು ಶಾಶ್ವತವಾದವನ್ನು ಪ್ರಚಾರಗೊಳಿಸಿದನು. ಪ್ರಥ್ವೀ, ಜಲ, ತೇಜ ವಾಯು, ಸುಖ ದುಃಖ ಮತ್ತು ಆತ್ಮಾ — ಈ ಏಳು ಪದಾರ್ಥಗಳು ನಿತ್ಯ; ಇವಕ್ಕೆ ಉತ್ಪತ್ತಿ ನಾಶಗಳು ಇಲ್ಲೆಂದು ಹೇಳುತ್ತಾನೆ.

ಸಂಜಯ ವೆಲ್ಲಟ್ಟಪುತ್ರನು ಅನಿಶ್ಚಿತತಾವಾದಕ್ಕೆ ಪ್ರಚೋದನೆಯನ್ನು ಕೊಟ್ಟನು. ಯಾವ ವಸ್ತುವಿನ ರೂಪವು ಯಾವ ಪ್ರಕಾರದಿಂದಲೂ ನಿಶ್ಚಿತವಿರುವದಿಲ್ಲ. ಇದೇ ಜೈನರ ಸ್ಯಾದ್ವಾದಕ್ಕೆ ಮೂಲವಿರಬಹುದು.

ಮಂಖಲಿಗೋಸಾಲಿಯೆನ್ನುವವನು ನಿಯತವಾದವನ್ನು ಸಮರ್ಥಿಸಿದನು. ಎಲ್ಲವೂ ದೈವದಿಂದ ಆಗುವದು. ಪ್ರಯತ್ನ, ಕರ್ಮಗಳು ಏನೂ ಮಾಡಲಾರವು. ಆದುದರಿಂದ ಶಾಸ್ತ್ರದಲ್ಲಿ ಹೇಳಿದ ಯಜ್ಞಯಾಗ ದಾನ ಧರ್ಮಗಳು ವ್ಯರ್ಥವೆನ್ನುವದೇ ಇವನ ಉಪದೇಶ. ‘ಮಂಖಲಿ’ ಇದರ ಸಂಸ್ಕೃತ ರೂಪವು ‘ಮಸ್ಕರಿ’. ಇವನ ಉಲ್ಲೇಖವು ಪಾಣಿನಿಯಲ್ಲಿಯೂ ಕಂಡು ಬರುತ್ತದೆ.

ಇದೇ ಕಾಲದಲ್ಲಿಯೇ ಭರತದೇಶದಲ್ಲಿ ಒಳ್ಳೆ ಪ್ರಸಿದ್ಧಿಯನ್ನು ಪಡೆದ ‘ಲೋಕಾಯತ’ ಮತವು ತಲೆದೋರಿರಬೇಕು. ಇದು ಜನಸಾಮಾನ್ಯರಲ್ಲಿ ಪ್ರಚಾರಹೊಂದಿ ಪ್ರಬಲ ಶಕ್ತಿಯಾಗಿ ಪರಿಣಮಿಸಿದ್ದನ್ನು ಪ್ರತಿಭಟಿಸಲಿಕ್ಕೇ ಮಹಾಭಾರತ ಮೊದಲಾದವುಗಳು ಪ್ರಣೀತವಾಗಿರಬೇಕು.

ಮಹಾಭಾರತಾಂತರ್ಗತ ಗೀತೆಯಲ್ಲಿ ಉಲ್ಲಿಖಿತವಾಗಿರುವ ಅಸುರೀವಾದವು ಈ ಲೋಕಾಯತವಾದವೆಂದು ಹೇಳುತ್ತಾರೆ. ಸಾಮಾನ್ಯ ವಿಚಾರಶೂನ್ಯ ಜನರಂತೆ ಇವರು ಆಚರಿಸುತ್ತಾರೆಂದು ಇವರಿಗೆ ಲೋಕಾಯತರೆಂದು ಹೆಸರು ಬಂದಿರಬೇಕು. ಚರ್ವ= ಊಟಮಾಡು. ಇದರಿಂದ ತಿಂದುಂಡು ಸುಖ ಬಡುವದೇ ಪುರುಷಾರ್ಥ

ವೆನ್ನುವವರು 'ಚಾರ್ವಾಕರು' ಎಂಬ ಹೆಸರೂ ಇವರಿಗೇ ಬಂದಿತು. ಬೃಹಸ್ಪತಿಯು ಈ ಮತ-ಪ್ರವರ್ತಕರೆಂದು ಪ್ರವಾದವಿರುವದರಿಂದ ಇವರಿಗೆ ಬಾರ್ಹಸ್ಪತ್ಯರೆಂದೂ ಹೆಸರು. ಬ್ರಹ್ಮಸೂತ್ರ ೩-೩-೫೪ ಭಾಸ್ಕರ ಭಾಷ್ಯದಲ್ಲಿ ಬೃಹಸ್ಪತಿ ರಚಿತ ಸೂತ್ರಗಳೆಂದು ೮ ಸೂತ್ರಗಳು ಉದಾಹರಿಸಲ್ಪಟ್ಟಿವೆ. ಅವುಗಳಲ್ಲಿ पृथिव्यप्तेजोवायुरिति तत्वानि । ते भ्यः चैतन्यम् । कमं एव एकः पुरुषार्थः । मरणमेवापवर्गः ಎಂಬ ಸೂತ್ರಗಳಿವೆ. ಇದರಿಂದ ಚಾರ್ವಾಕ ಮತವು ಪೂರ್ವಪಕ್ಷದ ಸಲುವಾಗಿ ಕಲ್ಪಿಸಿಕೊಂಡ ಕಾಲ್ಪನಿಕ ಮತವಲ್ಲ. ಅದೊಂದು ಸತ್ಯವಾಗಿಯೂ ಗುರುಶಿಷ್ಯರುಳ್ಳ ವಾದವಿತ್ತೆಂದು ಹೇಳಬಹುದು. ವಿಸ್ತಾರವಾಗಿ ಚಾರ್ವಾಕ ಮತದ ತತ್ವಗಳನ್ನು सर्वदर्शन संग्रह, नैषधकाव्य, (೧೭ ನೇ ಸರ್ಗ) प्रबोध चंद्रोदय नाटक (೨ ನೇ ಅಂಕ) ಇವುಗಳಲ್ಲಿ ದೊರೆಯುತ್ತವೆ.

ಚಾರ್ವಾಕರ ಮತವನ್ನು ಜ್ಞಾನಸಾಧನೆಯ ವಿಷಯದಲ್ಲಿ ಮೊದಲು ನಾವು ವಿಚಾರಮಾಡೋಣ. ಈ ಮತದಲ್ಲಿ ಪ್ರತ್ಯಕ್ಷ ಒಂದೇ ಪ್ರಮಾಣವೆಂದು ಒಪ್ಪುತ್ತಾರೆ. ಕಣ್ಣು ಕಿವಿ ಮೂಗು ಮೊದಲಾದ ಇಂದ್ರಿಯಗಳಿಂದ ಆಗುವ ಜ್ಞಾನ ಒಂದೇ ನಿಜವಾದ ಜ್ಞಾನ. ಬುದ್ಧಿಬಲದಿಂದ ವಿಚಾರಕ್ಕೆ ಆಸ್ಪದವೇ ಇಲ್ಲ. ಹೊಗೆಯನ್ನು ನೋಡಿ ಬೆಂಕಿಯನ್ನು ತರ್ಕಿಸುವದು ಸರಿಯಾದ ಜ್ಞಾನವಲ್ಲವಂತೆ. ಪ್ರತ್ಯಕ್ಷವಾಗಿ ಕಂಡದ್ದನ್ನೂ ಅನುಭವಿಸಿದ್ದನ್ನೂ ವಾಕ್ಯರೂಪದಿಂದ ಉದಾಹರಿಸಿದ ಆಪ್ತ-ವಾಕ್ಯವೂ ಪ್ರಮಾಣವಲ್ಲವಂತೆ. ಲೋಕದಲ್ಲಿ ಶಾಸ್ತ್ರಗಳಲ್ಲೆಲ್ಲ ವಿಶೇಷಗಳಿಂದ ಸಾಮಾನ್ಯವನ್ನು, ಸಾಮಾನ್ಯದಿಂದ ವಿಶೇಷವನ್ನೂ ಊಹಿಸುವ ರೀತಿಯನ್ನೇ ಅನುಸರಿಸುವದರಿಂದ ಅನೇಕ ಶಾಸ್ತ್ರಗಳು ಅಪ್ರಮಾಣಗ್ರಂಥಗಳಾಗುವವು. ಹಾಗೆಯೇ ಶಬ್ದಪ್ರಪಂಚವೇ ನಿರುಪಯುಕ್ತವಾಗುವದು. ಆದುದರಿಂದ युक्ति मल्लिका ದಲ್ಲಿ ಶ್ರೀ ವಾದಿರಾಜರು चार्वाकस्य न वाक् चार्वीकुर्वीतात्मबधं-यतः । अक्षैकमानता वाक्कि रक्षेदात्मप्रमाणतां । ಎಂದು 'ಪ್ರತ್ಯಕ್ಷ ಒಂದೇ ಪ್ರಮಾಣ' ಎಂಬ ಚಾರ್ವಾಕರ ವಾಕ್ಯವು ಪ್ರಮಾಣವಾದರೆ ಶಬ್ದವು ಪ್ರಮಾಣವೆಂದು ಒಪ್ಪಿದಂತಾಯಿತು. ಹಾಗಲ್ಲದೆ ಈ ವಾಕ್ಯವು ಅಪ್ರಮಾಣವಾದರೆ ಅದರ ವಿಷಯವಾದ 'ಪ್ರತ್ಯಕ್ಷ ಒಂದೇ ಪ್ರಮಾಣ' ಎನ್ನುವದು ಸುಳ್ಳಾಗುವದೆಂದು ಬಹುಮಾರ್ಮಿಕವಾಗಿ ಖಂಡಿಸಿದ್ದಾರೆ. 'ಪ್ರತ್ಯಕ್ಷ ಒಂದೇ ಪ್ರಮಾಣ'ವೆನ್ನುವದಕ್ಕೆ ಚಾರ್ವಾಕನು ಯುಕ್ತಿಯನ್ನು ಹೇಳಬೇಕು. ಹಾಗೆ ಹೇಳಿದರೆ ಯುಕ್ತಿಯನ್ನು ಹೇಳುವ ರೀತಿಯು ಸರಿಯಾದದ್ದೆಂದು ಒಪ್ಪಿದ್ದರಿಂದ ಅನುಮಾನವೂ ಪ್ರಮಾಣವೆಂದಂತಾಯಿತು. ಹಾಗೆ ಯುಕ್ತಿಯನ್ನು ಹೇಳದಿದ್ದರೆ ನಿರ್ಯುಕ್ತಿಕವಾದುದರಿಂದ ಪ್ರತ್ಯಕ್ಷ ಒಂದೇ ಪ್ರಮಾಣವೆನ್ನುವ ಮಾತನ್ನು ಯಾರು ಒಪ್ಪುತ್ತಾರೆ? ಆದುದರಿಂದ ಪ್ರತ್ಯಕ್ಷ, ಅನುಮಾನ, ಶಬ್ದಗಳು ಮೂರು ಪ್ರಮಾಣಗಳೆಂದು ಒಪ್ಪಿದರೇನೆ ವ್ಯವಹಾರವು ಸರಿಯಾಗಿ ನಡೆಯುತ್ತದೆ. ಹೀಗೆ ಚಾರ್ವಾಕನನ್ನು ಖಂಡಿಸಲಿಕ್ಕೆ ಜೈನ, ಬೌದ್ಧರೂ ವೈದಿಕರಿಗೆ ಕೈ ನೀಡುತ್ತಾರೆ.

ಇನ್ನು ತತ್ವಮೀಮಾಂಸದಲ್ಲಿಯೂ ಅವರ ಮತವು ಸರಿಯಲ್ಲವೆಂದು ಗೊತ್ತಾಗುವದು. ಭೂತ ಚತುಷ್ಟಯಗಳ ಅಣುಗಳಿಂದಲೇ ಜಗತ್ತಿನ ನಿರ್ಮಿತಿಯನ್ನು ಒಪ್ಪುತ್ತಾರೆ. ಆದರೆ ಆತ್ಮನನ್ನು ಒಪ್ಪುವದಿಲ್ಲ. ಜಗತ್ತಿನಲ್ಲಿ ತೋರುವ ಚೈತನ್ಯ ಶಕ್ತಿಯು ಶರೀರದ್ದೇ! चैतन्यविशिष्टः कायः पुरुषः ಜಡದಲ್ಲಿ ಚೈತನ್ಯ ತೋರುವ ಬಗೆ ಹೇಗೆ?

ಇದಕ್ಕೆ ಚಾರ್ವಾಕರು, ಯಾವ ಪದಾರ್ಥಗಳು ಕೂಡಿದರೆ ಮದಿರೆಯಾಗುತ್ತದೆಯೋ ಆ ಮೂಲ ಭೂತ ಪ್ರತಿಪದಾರ್ಥದಲ್ಲಿ ಮಾದಕತೆ ಇಲ್ಲದಿದ್ದರೂ ಅವೆಲ್ಲ ಕೂಡಿದಾಗ ಹೇಗೆ ಮಾದಕತೆಯು ಪ್ರಕಟವಾಗುವದೋ ಹಾಗೆ ಜಡಪದಾರ್ಥಗಳ ವಿಶೇಷ ಸಮ್ಮಿಲನದಲ್ಲಿ ಇಲ್ಲದೆ ಇದ್ದ ಚೈತನ್ಯ ಬಂದರೆ ಬಾಧಕವೇನೆಂದು ಕೇಳುತ್ತಾರೆ. ಇದಕ್ಕೆ ಶ್ರೀ. ವಾದಿರಾಜರು तथा योगविशेषेण जडस्यैव प्रमातृता । इतियो वक्तितस्यापि कुणपोऽs भणदुत्तरम् । ಎಂದು ಯುಕ್ತಿಮಲ್ಲಿಕೆಯಲ್ಲಿ ಹೇಳಿದ್ದಾರೆ. ಭೂತಸಂಯೋಗ ವಿಶೇಷವೇ ಚೈತನ್ಯಕ್ಕೆ ಕಾರಣವಾಗಿದ್ದರೆ ಹೆಣದಲ್ಲಿ ಭೂತಗಳ ಸಂಯೋಗವಿದ್ದರೂ ಚೈತನ್ಯ ಯಾಕೆ ತೋರುವದಿಲ್ಲ? ಆದುದರಿಂದ ಶರೀರವಲ್ಲದ ಆತ್ಮನೊಬ್ಬನು ಇದ್ದಾನೆಂದೂ ಅವನು ಮೃತ ಶರೀರದಲ್ಲಿ ಇಲ್ಲದ್ದರಿಂದ ಅಲ್ಲಿ ಚೈತನ್ಯ ವ್ಯಾಪಾರವಿಲ್ಲವೆನ್ನುವದೂ ಸರಿಹೋಗುವದು.

ಎಂದ ಮೇಲೆ ಇವರ ನೀತಿ ಆಚಾರಗಳು ಹೇಗೆ ನಿಂದ್ಯವೆನ್ನುವದನ್ನು ಗೀತೆಯಲ್ಲಿ ೧೬ ನೇ ಅಧ್ಯಾಯದಲ್ಲಿ ನೋಡಬಹುದು. ಅನೀತಿಯನ್ನು ತತ್ವವಾಗಿ ಕೆಲವರು ಇಟ್ಟುಕೊಳ್ಳದಿದ್ದರೂ ಜೀವನದಲ್ಲಿ ನಿತ್ಯಾಭಿರುಚಿಯಿಲ್ಲದೆ ಅನಶ್ವರವಾದ ಆತ್ಮತತ್ವವನ್ನು ಒಪ್ಪದೆ, ಹೀನ ಜೀವನದಲ್ಲಿ ಮನುಷ್ಯನು ಉಳಿದರೆ ಆಶ್ಚರ್ಯವೇನು? नशौचं नापि चाचारो नसत्यं तेषु विद्यते । 'ಈ ಜಗತ್ತು ಕಾಮಹೈತುಕವಲ್ಲದೆ ಮತ್ತೇನು' ಎಂದು ಹೇಳುವವರು ಹೇಗಾದರೂ ಹೆಣಗಾಡಿ ಹೆಚ್ಚಿನ ವಿಷಯಸುಖವನ್ನು ಸಂಪಾದಿಸಲಿಕ್ಕೆ ಹವಣಿಸುವವರು ಸರೋವರದಲ್ಲಿ ಅನ್ನವನ್ನು ಚಲ್ಲಿದಾಗ ಮುತ್ತುವ ಮೀನಗಳಂತೆ ಮನುಷ್ಯರೂ ನಷ್ಟಾತ್ಮರಾಗಿ काममाश्रित्यदुष्पूरं दंभमान-मदान्विताः ಎಂದು ಹೇಳಿದಂತೆ ಕಾಮೋಪಭೋಗರತರಾಗಿ इदमद्यमयालब्धं इमंप्राप्स्ये मनोरथं ಎಂದು ಸಂಸಾರಸುಖವೆಂಬ ಬಿಸಲ್ಗುದುರೆಯ ಬೆನ್ನುಹತ್ತಿ 'ಎಲ್ಲಿಯ ದೇವರು ಎಲ್ಲಿಯ ಆತ್ಮ' ಎಂಬ ಔದ್ಧತ್ಯದಿಂದ ನಿತ್ಯಸುಖವನ್ನು ಕಾಲ್ಗೆಳಗೆ ತುಳಿದು ಅನಿತ್ಯದ ಬೆನ್ನುಹತ್ತಿ ಹಾಳಾಗುವವರು ಅನೇಕರು ದೊರೆಯಬಹುದು.

ಈ ವಾದಿಗಳಿಗೆ ಮರಣದ ಹೊರತು ಬೇರೇ ಮೋಕ್ಷವೇ ಇಲ್ಲ. (मरणमेवापवर्गः) ಲೌಕಿಕ ಸುಖದ ಹೊರತು ಬೇರೇ ಪುರುಷಾರ್ಥವೇ ಇಲ್ಲ (काम एव एकः पुरुषार्थः) ಆಧಿಭೌತಿಕ ಸುಖವಾದವನ್ನೇ ಅಂತಿಮಧ್ಯೇಯವಾಗಿಟ್ಟುಕೊಂಡ ನಾಸ್ತಿಕರಿಗೆ ಮಾನವನ ಆತ್ಮಜೀವನ ಔನ್ನತ್ಯವೂ ವಿಶಾಲತೆಗಳೂ ಎಂದೂ

ದೊರೆಯವು. "I wish I could make you see how exciting the life of the spirit is and how rich in experience. It is illimitable. It is such a happy life" ಎಂದು ಲಾರಿಯು (Razor's Edge ದಲ್ಲಿ) ತನ್ನ ಭಾವೀಭಾಮಿನಿಗೆ 'ಆತ್ಮಜೀವನವು ಎಷ್ಟು ಉತ್ತೇಜಕವಾಗಿದೆ ಮತ್ತು ಎಂಥ ತುಂಬು ಜೀವನವಾಗಿದೆ' ಎಂದು ವರ್ಣಿಸುತ್ತಾನೆ. ಅದು ವಿಮಾನದಲ್ಲಿ ಒಬ್ಬನೇ ಕುಳಿತು ಹೋಗುವಾಗ ಕಾಣುವಂತೆ ಅನಂತವಾಗಿದೆ. ಅದರಲ್ಲಿ ಬೇರೆತಾಗ ಮಾನವನ ನೋಡಕ್ಕೆ ಮಿತಿಯಿಲ್ಲ. ಇದು ಇಲ್ಲದ ಜೀವನ ನಿಜವಾಗಿಯೂ ಬರಿದು.

ಆದುದರಿಂದಲೇ ಈಗ ಕಾಲದ ಹೈತುಕರಿಗೂ ಭೌತಿಕವಾದಿಗಳಾದ ವಿಜ್ಞಾನಿಗಳಿಗೂ ಸರ್ ರಾಧಾಕೃಷ್ಣರು ತಮ್ಮ Idealist view of life ದಲ್ಲಿ ಮೊದಲಿನ ಎರಡು ಪ್ರಕರಣಗಳಲ್ಲಿ ಪಾಶ್ಚಾತ್ಯ ನಾಸ್ತಿಕವಾದಗಳನ್ನು ಸಂಕ್ಷೇಪವಾಗಿ ಅನುವಾದಮಾಡಿ ಅವುಗಳಿಗೆ ಉತ್ತರಕೊಟ್ಟಿದ್ದಾರೆ.

ಮೊದಲು ಪಾಶ್ಚಾತ್ಯರಲ್ಲಿರುವ ಎಲ್ಲ ನಾಸ್ತಿಕವಾದಗಳನ್ನು (Naturalism, Atheism, Agnosticism, Scepticism, Humanism, Relativism, Modernism) ಅವಲೋಕಿಸಿದರೆ, ವಿವರಗಳಲ್ಲಿ ಪರಸ್ಪರ ಭೇದವಿದ್ದರೂ ಮುಖ್ಯವಾದ ಒಂದು ಮಾತಿನಲ್ಲಿ ಇವೆಲ್ಲಕ್ಕೂ ಐಕಮತ್ಯವಿರುವದೆಂದು ತೋರುತ್ತದೆ. ಈ ಮಾತು ಎಲ್ಲ ಧರ್ಮಗಳಿಗೂ ಬಹು ಘಾತಕವಾಗಿದೆ. ಅದೆಂದರೆ, ಧರ್ಮದಲ್ಲಿ ವಾಸ್ತವ ಸತ್ಯತೆಯ ನಿರೂಪಣೆಯಿಲ್ಲ. ಆದರಲ್ಲಿ ಅವನ ಹಂಬಲದ ನೆಳಲು ಮಾತ್ರ ತೋರುತ್ತಿದೆ; ಅವನ ಅಕಾಂಕ್ಷೆಗಳ ಪ್ರತಿಬಿಂಬ ಮೂಡಿದೆ. ಕಾಡು ಜನರು ಭೌತಿಕ ಶಕ್ತಿಗಳಿಗೆ ಪ್ರಾಣಕಳೆಯನ್ನು ತುಂಬಿ, ಅವುಗಳಿಗೆ ತಮ್ಮ ಆಕೃತಿಗಳನ್ನು ಆರೋಪಿಸಿ ನಿಸರ್ಗ ಸಂಗತಿಗಳ ಕರ್ತೃತ್ವವನ್ನು ಕೊಡುತ್ತಾರೆ. ಹೀಗೆ ಗುಡುಗಿನಲ್ಲಿ ದೇವರನ್ನೂ ಮಿಂಚಿನಲ್ಲಿ ದೇವರನ್ನೂ ಮೂಡಿಸಿದ್ದಾರೆ. ಸುಗ್ಗಿಗೆ ಸುಕಾಲಕ್ಕೆ ದೇವತೆಗಳಿದ್ದಾರೆ. ಈ ಎಲ್ಲ ದೇವತೆಗಳು ಕಾಲಾನುಗುಣವಾಗಿ ಒಬ್ಬ ದೇವನಲ್ಲಿ ಅಂತರ್ಭೂತರಾಗಿ ಪರತತ್ವವಾದದಲ್ಲಿ ಕೊನೆಗಂಡವು. ಈ ಸಂದರ್ಭದಲ್ಲಿ ಮಾನವನ ಅಲ್ಪತೆಯನ್ನು ಅರಿತುಕೊಳ್ಳಬೇಕು. ಈಗ ಜ್ಯೋತಿಷ್ಯಶಾಸ್ತ್ರಕ್ಕೆ ಗೊತ್ತಾಗಿದ್ದ ವಿಶ್ವವು ಬಹುದೊಡ್ಡದು. ನಮಗೆ ಗೊತ್ತಾಗದ ವಿಶ್ವವು ಅದಕ್ಕೂ ದೊಡ್ಡದಿದೆ. ಈ ದೃಶ್ಯಮಾನ ಪ್ರಪಂಚದಲ್ಲಿ ಆಕಾಶಗಂಗೆಯು (Milkyway) ಒಂದು ಸಣ್ಣ ಅಂಶ. ಈ ಆಕಾಶಗಂಗೆಯಲ್ಲಿ ಸೂರ್ಯಗ್ರಹಮಾಲೆಯು ಅತಿ ಚಿಕ್ಕದು: ಅದೊಂದು ಚುಕ್ಕೆ. ಈ ಚುಕ್ಕೆಯಲ್ಲಿ ನಮ್ಮ ಗ್ರಹ ಒಂದು ಸೂಜೀಮೊನೆ. ಈ ಮೊನೆಯ ಮೇಲೆ ರಸಾಯನಿಕ ಪದಾರ್ಥಗಳ ಮಿಶ್ರಣದಿಂದ ತಯಾರಾದ ಚಿಕ್ಕ ಚಿಕ್ಕ ಗೊಂಬೆಗಳು ಅತ್ತಿತ್ತ ಓಡಾಡಿ ಮತ್ತೆ ಮೂಲಭೂತಗಳಲ್ಲಿ ಮಾಯವಾಗುತ್ತವೆ. ಇದೇ ವಿಜ್ಞಾನಶಾಸ್ತ್ರಕ್ಕೆ ಕಂಡ ಮನುಷ್ಯಜೀವನ.

ತನ್ನ ಈ ಅಲ್ಪತ್ವವನ್ನೂ ವಿಶ್ವದ ಮಹತ್ವವನ್ನೂ ಕಂಡ ಮಾನವನು, ಮನುಷ್ಯನು ತನ್ನಂತೆ ಒಬ್ಬನನ್ನು ಹುಟ್ಟಿಸಿ ಅವನಲ್ಲಿ ಅನಂತಗುಣಗಳನ್ನು ಅರ್ಪಿಸಿ, ಅವನು ಒಳ್ಳೇ ಬಲಿಷ್ಠನೂ ದಯಾವಂತನೂ ಮಾನವನ ಹಿತರಕ್ಷಕನೂ ಎಂದು ಕಲ್ಪಿಸುವನು. ಹೀಗೆ ದೇವರು ಬರಿ ಮನುಷ್ಯನ ತಲೆಯಲ್ಲಿರುವ ಕಲ್ಪನೆಯು; ಸತ್ಯವಸ್ತುವಲ್ಲ. ವಾಸ್ತವವಾಗಿ ವಿಶ್ವವು ಬರಿದು. ಅದರಲ್ಲಿ ಚೈತನ್ಯವಿಲ್ಲ, ಆದಕ್ಕೆ ಪ್ರಯೋಜನವೂ ಇಲ್ಲ.

ಹೀಗೆ ಮನುಷ್ಯ ವಿಜ್ಞಾನಶಾಸ್ತ್ರವೂ ತುಲನಾತ್ಮಕ ಧರ್ಮಶಾಸ್ತ್ರವೂ ದೇವರ ಕಲ್ಪನೆಯ ಮೂಲವನ್ನು ಗುರುತಿಸಿವೆ. ಫ್ರಾಯಿಡರು ಮನೋವಿಶ್ಲೇಷಣ ಶಾಸ್ತ್ರಬಲದಿಂದ, ದೇವರು ಸುಪ್ತಚೈತನ್ಯದಲ್ಲಿ ಹುಟ್ಟಿದ್ದಾನೆಂದೂ ಅವನು ಶೈಶವದಲ್ಲಿ ಪ್ರೀತಿಸಿದ ಜನಕನ ಪ್ರತಿಬಿಂಬವೆಂದೂ ಹೇಳುತ್ತಾರೆ. ಇನ್ನು ಆಸ್ತಿಕರಿಗೆ ದೇವರ ಅಸ್ತಿತ್ವದಲ್ಲಿ ಅವರ ಭಾವನೆ ಬಿಟ್ಟರೆ ಬೇರೆ ಪ್ರಮಾಣಗಳೇ ಇಲ್ಲ. ಆದುದರಿಂದ ಜಗತ್ತಿನ ಧರ್ಮಗಳು ಮಾನವನ ಮನೋವೃತ್ತಿಯ ಅಭ್ಯಾಸಕ್ಕೆ ಮಾತ್ರ ಅನುಕೂಲವಾಗಿವೆ. ಅವುಗಳಲ್ಲಿ ವಿಶ್ವಾಸವಿಡಲಿಕ್ಕಲ್ಲ. ನಾವು ಬೆಳೆದ ಬಾಲಕರು. ಈ ಬಾಲಕರಿಗೆ ದೇವರು ನೊಲೆಯುಣಿಸುವ ತೊತ್ತು.

ಇದು ಆಧುನಿಕ ನಾಸ್ತಿಕವಾದದ ಧರ್ಮದ ಮೇಲಿನ ಗದೆ. ಇದಕ್ಕೆ ಸರ್ ರಾಧಾಕೃಷ್ಣನ್ನರು ಅದೇ ಗ್ರಂಥದಲ್ಲಿ ಉತ್ತರವನ್ನು ಕೊಟ್ಟಿದ್ದಾರೆ: ಮೊದಲಿಗೆ ದೇವರು ಕಟ್ಟುಕಥೆಯಲ್ಲ; ಕಲ್ಪನೆಯಲ್ಲ. ಮನುಷ್ಯನ ಜೀವನದಲ್ಲಿ ಆಸ್ತಿಕ್ಯಬುದ್ಧಿಯು ಧಾರ್ಮಿಕತೆಯು ಬೇರೂರಿವೆ. ಮಾನವನು ಹೊರಗಿನ ವಿಶ್ವದೊಡನೆ ವ್ಯವಹಾರ ಬೆಳೆಸಿದಾಗ ಈ ಸಮ್ಮಿಲನದಿಂದ ಮಾನವನಲ್ಲಿ ಈ ಆಕಾಂಕ್ಷೆ ಪ್ರಕಟವಾಗಿದೆ. ಆದುದರಿಂದ ಈ ಹಂಬಲವನ್ನು ಹುಸಿಯೆಂದು ಎಸೆಯುವದು ಬಹು ಅಪಾಯಕರವಾದುದು.

ನಮ್ಮ ಕಣ್ಣು ಕಿವಿ ಮೂಗುಗಳು ಜ್ಞಾನಸಾಧನಗಳಿದ್ದಂತೆ. ಅಂತಃಸಾಕ್ಷಿಯೂ ಒಂದು ಸೂಕ್ಷ್ಮಸಾಧನವು. ಮೊದಲಿನವುಗಳಿಂದ ದೊರೆತ ಜ್ಞಾನದಂತೆ ಇದರಿಂದ ದೊರೆತ ಅನುಭವವೂ ಅಷ್ಟೇ ಪ್ರಮಾಣಭೂತವಾದುದು. ಆದರೆ ಈ ಅಂತಃಸಾಕ್ಷಿಯು ಪರದೆಯ ಮರೆಗಿರುವದರಿಂದ ಅದರ ಸಂದೇಶಗಳು ಸರಿಯಾಗಿ ಮನೋಭೂಮಿಕೆಗೆ ಉಳಿಯುವದಿಲ್ಲ. ಆದರೂ ಈ ಅಂತಃಸಾಕ್ಷಿಯು ಆತ್ಮತತ್ವದ ಹಾಸುಹೊಕ್ಕಾದುದರಿಂದ ಇದನ್ನು ಅಲ್ಲಗಳೆಯುವದು ಸಾಧ್ಯವಿಲ್ಲ. ಬುದ್ಧಿ ಇಂದ್ರಿಯಗಳ ಆಚೆಗಿರುವ ಬೆಳಕಿನ ಕಿರಣಗಳನ್ನು ಇದೇ ಮನೋರಂಗದ ಮೇಲೆ ಇಳಿಸಬಲ್ಲದು. ಆದುದರಿಂದ ಎಲ್ಲ ಜೀವರುಗಳಲ್ಲಿಯೂ ಧಾರ್ಮಿಕತೆಯು ಆಸ್ತಿಕತೆಯು ಸಾಮಾನ್ಯವಾದುದು. ಇಂಥ ಅಂತರಂಗದ ಅನುಭವವು ಸ್ವಾಭಾವಿಕ; ಇದಕ್ಕೆ ವಿಪರೀತವಾದುದೇ ವಿಕೃತ; ಅದಕ್ಕೆ ಕಾರಣ ಪರಿಸ್ಥಿತಿ.

ಈ ಅಂತರಂಗದ ಅನುಭವವು ವಾಸ್ತವ ಸತ್ಯತೆಯುಳ್ಳ ಪದಾರ್ಥದ ಜ್ಞಾನವು. ಇದು ಬರಿ ಕಲ್ಪನೆಯಲ್ಲ. ನಮ್ಮ ಕಣ್ಣಿಗೆ ಕಾಣುವ ಹೂವಿನಷ್ಟೇ ಅಂತರಂಗದಲ್ಲಿ ಅನುಭವಿಸಿದ ಪರತತ್ವವು ಸತ್ಯವಾದುದು. ಯಾಕಂದರೆ ಅದನ್ನು ಅನುಭವಿಸುವಾಗ ಅದು ಸತ್ಯವೊ ಸುಳ್ಳೊ ಎಂಬ ಸಂದೇಹವೇ ಬರುವದಿಲ್ಲ. ಮೇಲಾಗಿ ಈ ಅನುಭವವು ಒಂದು ಇಂದ್ರಿಯದಿಂದ ಬಂದುದಲ್ಲ. ಇದು ಜೀವನ ಸಾರಸರ್ವಸ್ವದ ಅನುಭವವು. ಈ ಅನುಭವದ ಬಲದಿಂದಲೇ ಇತರ ಜ್ಞಾನಗಳಿಗೆ ಸಾಫಲ್ಯಪೂರ್ಣತೆ ದೊರೆಯುವವು. ಯಾಕಂದರೆ ಮಾನವನೆಂದರೆ ದೇಹವಲ್ಲ; ಕಣ್ಣಲ್ಲ; ಮನಸ್ಸಲ್ಲ; ಅವನು ಈ ಸಾಕ್ಷೀಭೂತನಾದ ಆತ್ಮನು. ಆದುದರಿಂದ ದೈವಿಕ ಅನುಭವವು ಕುತ್ಸಿತ ವಿಚಾರಗಳಿಂದ ತುಂಬಿದ ಸುಪ್ತಮನಸ್ಸಿನಲ್ಲಿ ಹುಟ್ಟದೇ, ಶುದ್ಧ ಆತ್ಮದ ಅನುಭವವು. ಆತ್ಮನು ತನ್ನ ಜ್ಞಾನ, ಕ್ರಿಯಾ, ಭಾವನೆ—ಎಲ್ಲವನ್ನೂ ಏಕಮುಖವಾಗಿ ಹರಿಸಿ ಆ ಅದೃಶ್ಯ ಅವ್ಯಕ್ತ ತತ್ವವನ್ನು ಅನುಭವಿಸುತ್ತಾನೆ. ಅನುಭವವು ಎಲ್ಲ ಚಿಂತೆಗಳನ್ನು ದೂರಮಾಡಿ ಶಾಂತಿಯನ್ನು ಬೀರಿ ಆನಂದದ ಉನ್ಮಾದದಲ್ಲಿ ನೂಕುವದು.

ಮೇಲಾಗಿ ಇತಿಹಾಸದಲ್ಲಿ ನಾಸ್ತಿಕವಾದವು ನಿಷೇಧಪರವಾಗಿ ಮಾತ್ರ ಇರುವದರಿಂದ ವಿಘಟಿಸುವ ಕೆಲಸವನ್ನು ತಕ್ಕಮಟ್ಟಿಗೆ ಮಾಡಿದ್ದರೂ ಸಂಘಟನೆ ಮತ್ತು ವಿಧಾಯಕ ಕೆಲಸಗಳನ್ನು

ಅದು ಮಾಡಿಲ್ಲ. ಯಾವಾಗಲೂ ಕೆಲವೊಂದು ವ್ಯಕ್ತಿಗಳ ಮತವು ಇದು; ಅಲ್ಲದೆ ಒಂದು ಜನಾಂಗದ ಅಥವಾ ಗುಂಪಿನ ಮತವು ಇದಾಗಲಾರದು. ಬುದ್ಧಿತೀಕ್ಷ್ಣತೆಯು ಬಲಿಗೆ ಬಿದ್ದು ವಿಚಾರದ ಕೊರಕಲಿನಲ್ಲಿ ಸಿಕ್ಕು ಅದರಿಂದ ಪಾರಾಗಲಿಕ್ಕಾಗದೆ ಸಂಶಯದ ಮಬ್ಬನ್ನು ಮೆಲಕಾಡಿಸುವದರಿಂದ ಬರಿ ಬರಿದು ಮಾತ್ರ ತೋರುವದು. ಮನುಷ್ಯನಿಗೆ ಈ ಶೂನ್ಯತೆಯಿಂದ ಹೊಟ್ಟೆ ತುಂಬುವದಿಲ್ಲ. ಅವನಿಗೆ ಅದೃಷ್ಟತತ್ವವು ಅತ್ಯಂತ ಸಮೀಪದ್ದು; ಇವನ ಅಸ್ತಿತ್ವವೇ ಅದರ ಮೇಲೆ ಅವಲಂಬಿಸಿದೆ. ಬುದ್ಧಿಕುಶಲರು ಸಾಮಾನ್ಯ ಮನುಷ್ಯನ ದೇವರನ್ನು ಅಲ್ಲಗಳೆದರೆ ಅವನ ಅಂತಃಕರಣವು ಮತ್ತೇನಾದರೂ ಅದರ ಸ್ಥಳದಲ್ಲಿಟ್ಟು ಪೂಜಿಸುವದು. ಅಲ್ಡಸ ಹಕ್ಸಲೆಯುವರು ತಮ್ಮ Brave New World ದಲ್ಲಿ ಒಂದು ಪಾತ್ರವು T ಚಿನ್ಹವನ್ನು ತನ್ನ ಹೊಟ್ಟೆ ಮೇಲೆ ಮಾಡಿಕೊಳ್ಳುವಂತೆ ತೋರಿಸುತ್ತಾರೆ. ಫೋರ್ಡರು ಯುಗಪುರುಷರೆಂದೂ ಅವರಾದ ಮೇಲೆ ೬೦೦ ವರ್ಷಗಳು ಗತಿಸಿಹೋದಾಗ ಕ್ರೈಸ್ತ ಮತವು ಹೋಗಿದ್ದರೂ X ಚಿನ್ಹವಿಲ್ಲದಿದ್ದರೂ ಫೋರ್ಡರ T model motor ಜ್ಞಾಪಕವಾಗಿ ಜನರು ಭಕ್ತಿಪೂರ್ವಕವಾಗಿ T ಚಿನ್ಹವನ್ನು ಉಪಯೋಗಿಸುವದು ಮಾನವನು ಅದೃಷ್ಟಭಕ್ತನೆನ್ನುವದನ್ನು ಸ್ಪಷ್ಟಗೊಳಿಸುತ್ತದೆ.

ಮನುಷ್ಯನು ತನ್ನ ದೇಹದಲ್ಲಿರುವ ಮೂಲ ಪ್ರವೃತ್ತಿಗಳನ್ನು ಅನುಸರಿಸುವದು ಮತ್ತೆ ಅವನನ್ನು ಕಾಡು ಸ್ಥಿತಿಗೆ ಒಯ್ಯುತ್ತದೆ. ಅದರ ಬದಲು ಅವನಲ್ಲಿರುವ ಸುಪ್ತವಾದ ದೈವೀಸ್ವಭಾವಕ್ಕೆ ಅವಕಾಶ ಕೊಟ್ಟು ಕ್ಷುಲ್ಲಕ ಸುಖಗಳಿಗೆ ಮುಗ್ಧರಾಗದೆ ಮೇಲೆ ಏಳಬೇಕು. "Our attachment to sensual pleasures which recall our origin affords the proof that we are still at the beginning of human evolution' ಎಂದು ಲೀ ಕೊಮೆಡುನಾಯರು ತಮ್ಮ Human destiny ಎಂಬ ಗ್ರಂಥದಲ್ಲಿ 'ವಿಕಾಸವು ನಿಶ್ಚಿತವಾದುದೆಂದೂ ಮಾನವಕುಲವು ಪೂರ್ಣ ಮನುಷ್ಯತ್ವವನ್ನು ಹೊಂದಲಿಕ್ಕೆ ತನ್ನ ದೈವೀಭಕ್ತಿಯನ್ನು ದೃಢಪಡಿಸಿಕೊಳ್ಳಬೇಕೆಂದೂ ಈ ಪ್ರಖ್ಯಾತ ಪ್ರಾಣಿ ಶಾಸ್ತ್ರಜ್ಞರು ಒತ್ತಾಯಪಡಿಸಿದ್ದಾರೆ. ಇಷ್ಟೇ ಅಲ್ಲ, ನಿಸರ್ಗದಲ್ಲಿ ಪ್ರಾಣದ ಅವತಾರವನ್ನು ಸೌಪಪತ್ತಿಕವಾಗಿ ಹೇಳಲಿಕ್ಕೆ ಬಾರದಿದ್ದುದರಿಂದ ಪರತತ್ವವಾದ ಈಶ್ವರನನ್ನು ಒಪ್ಪಲೇಬೇಕಾಗುವದೆಂದೂ (This is not an act of faith, but an undisputed scientific statement) ಇದು ಬರಿ ವಿಶ್ವಾಸದ ಮಾತಲ್ಲ. ಇದು ನಿರ್ವಿವಾದವಾದ ಶಾಸ್ತ್ರಸಿದ್ಧ ಸಂಗತಿಯು ಎಂದು ಹೇಳಿದ್ದಾರೆ.

ಇದರಿಂದ ಅಂಧ ಶ್ರದ್ಧೆಯನ್ನು ಬೆಳಿಸಬೇಕೆಂದು ಯಾರೂ ಗ್ರಹಿಸಬಾರದು. ಪ್ರಾಮಾಣಿಕ ಸಂಶಯವು, ಅಪ್ರಾಮಾಣಿಕ ಆಸ್ತಿಕತೆಗಿಂತ ಒಳ್ಳೇದು. ಶ್ರೀಅರವಿಂದರು The humun cycle ದಲ್ಲಿ ದೇವರಿಲ್ಲೆಂದು ಹೇಳಲಿಕ್ಕೂ ಎಲ್ಲರಿಗೂ ಸ್ವಾತಂತ್ರ್ಯವಿರಬೇಕು. ಏಕೆಂದರೆ ಈ ನಿಷೇಧಗಳೆಲ್ಲ ಪ್ರಾಮಾಣಿಕವಿದ್ದರೆ ಕೊನೆಗೆ ಪರತತ್ವದ ವಿಧಾನದಲ್ಲಿಯೇ ಪರ್ಯವಸಾನ ಹೊಂದಬೇಕು ಎಂದು ಹೇಳಿದ್ದಾರೆ. ವೇದವ್ಯಾಸರೂ ಈ ಧ್ಯೇಯವನ್ನೆ आलोडय सर्वशास्त्राणि विचार्यच पुनः पुनः इदमेकंसुनिष्पन्नं ध्येयो नारायणः सदा ಎಂಬ ತಮ್ಮ ಉಕ್ತಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ವಿಚಾರಮಾಡಿರಿ, ವಿಚಾರಮಾಡಿರಿ. ಸರಿಯಾದ ದಾರಿಯಿಂದ ವಿಚಾರಮಾಡಿದಾಗ ಸರ್ವದೋಷ ದೂರನೂ ಸರ್ವರಿಗೂ ಆಶ್ರಯನೂ ಸರ್ವಾಂತರ್ಯಾಮಿಯೂ ಸರ್ವಗುಣ ಪರಿಪೂರ್ಣನೂ ಆದ ಒಬ್ಬ ಮೂಲ ಪುರುಷನು ತಾತ್ವಿಕವಾಗಿ ತತ್ವಭೂತನಾಗಿ ಈ ವಿಶ್ವದಲ್ಲಿ ಒಳಗೂ ಹೊರಗೂ ವ್ಯಾಪಿಸಿದ್ದಾನೆ. ಅವನನ್ನು ಬೇಕಾದ ಹೆಸರಿನಿಂದ ಕರೆಯಿರಿ. ಎಲ್ಲ ಹೆಸರಗಳೂ ಅವನ ಹೆಸರುಗಳು. ಈ ಮೂಲ ತತ್ವವನ್ನು ಅರಿಯದಿದ್ದರೆ ಜೀವನದಲ್ಲಿ ಸಾಫಲ್ಯವೂ ಇಲ್ಲ, ಪೂರ್ಣತೆಯೂ ಇಲ್ಲ. ಜಗತ್ತು ಎಚ್ಚತ್ತು ತನ್ನ ಗುರಿಯನ್ನು ಅರಿತು ಮೂಲ ಪುರುಷನ ಮಹಾ ಸಂಕಲ್ಪದಲ್ಲಿ ಬೆರೆತು ಸುಖಿಯಾಗಲಿ.

॥ ಶಾಂತಿಃ ಪುಷ್ಟಿಃ ತುಷ್ಟಿಶ್ಚಾಸ್ತು ॥

ಸಮಾಜ ಮತ್ತು ಕಾನೂನು

ಲೇಖಕ: ಶ್ರೀ ನೆಗಳೂರ ರಂಗನಾಥ, ಎಂ.ಎ., ಎಲ್.ಎಲ್.ಬಿ. ಧಾರವಾಡ

ಸಮಾಜದ ಸುಖ, ನೆಮ್ಮದಿ, ಪ್ರಗತಿಯನ್ನು ಅನುಲಕ್ಷಿಸಿ ಕಾನೂನು ಮಾಡಿದಾಗ ಪ್ರಜಾಸತ್ತೆಯು ಯಥಾರ್ಥತೆಯನ್ನು ಪಡೆಯುವದು. ಹಾಗೆ ಮಾಡಿದಾಗ ಸಮಾಜಕ್ಕೂ ಕಾನೂನುಗಳಿಗೂ ಸಾಮರಸ್ಯವುಂಟಾಗುವದು. ಇಲ್ಲವಾದರೆ ಕಾನೂನುಗಳು ಕಾಗದದಲ್ಲಿ ಉಳಿಯುವವು. ಸಮಾಜವು ತನ್ನದೇ ಆದ ನೈಸರ್ಗಿಕ ರೀತಿಯಲ್ಲಿ ಮುಂದುವರಿಯುವದು.

ಸಮಾಜ ಎಂಬುದು ಒಂದು ಭಾವನೆ; ಬಹಳ ಪ್ರಭಾವಿಯಾದ ಭಾವನೆ. ಪ್ರತ್ಯಕ್ಷವಾಗಿ ಕಾಣದೆ ಇದ್ದರೂ ಅತ್ಯಂತ ಪ್ರಭಾವಿಯಾದುದು. ದೈವತ್ವದ ವಿಚಾರದಂತೆಯೆ. ದೇವನು ಕಣ್ಣಿಗೆ ಕಾಣದಿದ್ದರೂ ಭಾವನೆಗೆ ನಿಲುಕುವ ವಿಶಿಷ್ಟ ಶಕ್ತಿಯಾಗಿರುವಂತೆ, ಸಮಾಜವೂ ಭಾವನಾಲೋಕದ ವಿಶಿಷ್ಟ ಶಕ್ತಿಯಾಗಿದೆ. ಆದಕ್ಕೆಂದೆ ಏನೋ ಸಮಾಜಕ್ಕೆ 'ದೈವ' ಎಂದು ಸಂಕೇತಿಸುವ ರೂಢಿ ಬಂದಿರಬಹುದು. ದೈವಕ್ಕೆ ಅಂಜದವರು ಅತಿ ವಿರಳ. ಸಾಮಾನ್ಯ ಮಾನವನಿಗೆ ಸಮಾಜವು ಸಾಂಕೇತಿಕ ಸಂಕೋಲೆಗಳನ್ನು ಹಾಕಿರುವುದು. 'ನಾಲ್ಕು ಮಂದಿ' ಏನೆಂದಾರು ಎಂಬ ಭೀತಿಯೇ ಸಮಾಜದ ಭೀತಿ. ಈ 'ನಾಲ್ಕು ಮಂದಿ' ಯಾರು ಎಂದು ಯಾರಿಗೂ ನಿರ್ದಿಷ್ಟವಾಗಿ ಗೊತ್ತಾಗದಿದ್ದರೂ 'ನಾಲ್ಕೂ ಮಂದಿ'ಯ ಹೆದರಿಕೆ ಇದ್ದೇ ಇರುತ್ತದೆ. ಈ ರೀತಿಯ ಹೆದರಿಕೆಯನ್ನು ಉಂಟುಮಾಡುವ ವಿಶಿಷ್ಟಶಕ್ತಿ 'ನಾಲ್ಕು ಮಂದಿ' ಎಂದು ಸೂಚಿತವಾಗುವ ಸಮಾಜಭಾವನೆಯಲ್ಲಿ ಅಡಕವಾಗಿರುತ್ತದೆ. ಅದಕ್ಕೆಂದು ಅದು ಬಹು ಪ್ರಭಾವಿಯಾದ ವಿಶಿಷ್ಟಶಕ್ತಿಯೆಂದು ಹೇಳಲಾಗುತ್ತದೆ.

'ಸಮಾಜ' ಎಂಬುದನ್ನು ವರ್ಣಿಸಲು ಶಕ್ಯವಿದೆಯೆ ಹೊರತು ವ್ಯಾಖ್ಯೆ ಮಾಡಲು ಸಾಧ್ಯವಿಲ್ಲ. ವರ್ಣನೆಯಾದರೂ ಕಾಲಕಾಲಕ್ಕೆ, ದೇಶದೇಶಕ್ಕೆ ಬದಲಾಗುತ್ತಲೆ ಇರುವುದು. ಮಾನವನ ವಿಕಾಸವಾದಂತೆಲ್ಲ ಸಮಾಜದ ಕಲ್ಪನೆಯ ವಿಕಾಸವಾಗುತ್ತ ನಡೆದುದು ಕಂಡುಬರುತ್ತದೆ. ವಿಕಾಸವು ಪ್ರವಾಹಿಯಾದ ಘಟನೆಯಾಗಿರುವುದರಿಂದ ಸಮಾಜದ ವರ್ಣನೆಯು ಒಂದು ಐತಿಹಾಸಿಕ ಸಂಗತಿಯಾಗುವುದೇ ಹೊರತು ವರ್ತಮಾನ ಸ್ಥಿತಿಯ ಬಣ್ಣನೆಯಾಗದು. ಸಮಾಜವು ಸಾಮೂಹಿಕ ಜೀವನದ ಭಾವನೆಯು. ಸಾಮೂಹಿಕ ಜೀವನವು ಸಂಖ್ಯಾಬಲದ ಮೇಲೆ ಅವಲಂಬಿಸಿದುದು ಕಂಡುಬರುವುದು. ಯಾವುದೊಂದು ಸಮಾಜದಲ್ಲಿರುವ ಮಾನವ ಸಂಖ್ಯೆಯ ಮೇಲೆ ಆ ಸಮಾಜದ ಸ್ಥಿತಿ-ಗತಿಯು ಅವಲಂಬಿಸಿರುವುದು. ಅದು ಸಂಘಟಿತ ಸ್ವರೂಪದಲ್ಲಿಯೋ ಸತ್ವಾಂಶ ಸ್ವರೂಪದಲ್ಲಿದೆಯೋ ಎಂಬುದು ಆ ಸಮಾಜದ ಸದಸ್ಯರ ಸಂಖ್ಯೆಯನ್ನೇ ಹೆಚ್ಚಾಗಿ ಅವಲಂಬಿಸಿರುವುದು. ಈ ಸಂಖ್ಯಾವ್ಯಾಪ್ತಿಯೆ ಅದಕ್ಕೆ ಸಂರಕ್ಷಣೆ, ಸುಭದ್ರತೆಯನ್ನು ಒದವಿಸುವುದು. ಬಹುಸಂಖ್ಯೆಯ ಜೀವನ ರೀತಿ-ನೀತಿಗಳೇ ಸಮಾಜಕ್ಕೆ ಬಂಧನ ಕಾರಕಗಳಾಗುವುವು. ಅವೇ ರೂಢಿ-ಸಂಪ್ರದಾಯಗಳೆಂದು ಬಾಳುವುವು. ಸಮಾಜಕ್ಕೆ ರೂಢಿ ಸಂಪ್ರದಾಯಗಳು ಮಾರ್ಗದರ್ಶಕ ಚುಕ್ಕಾಣಿಗಳೆನ್ನಿಸುವುವು.

ಈ ರೂಢಿ ಸಂಪ್ರದಾಯಗಳು ಬಳೆದು ಬಂದುದಾದರೂ ಹೇಗೆ? "ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ" ಎಂಬ ಮಾತು ರೂಢಿ ಸಂಪ್ರದಾಯಗಳ ಉಗಮ ವಿಕಾಸಗಳನ್ನು ಸೂಚಿಸುವುದು. ಇಂತಹ ಬಗೆಯಾಗಿ ಆಚಾರಗಳನ್ನು ಪ್ರಸ್ಥಾಪಿಸುವ ಶ್ರೇಷ್ಠರು ಯಾರು? ಅವರು ಸಮಾಜದಲ್ಲಿಯ ಹಿರಿಯರು. ಇವರು ಯಾವ ದೃಷ್ಟಿಯಿಂದ ಆಚಾರಗಳನ್ನು ಪ್ರಸ್ಥಾಪಿಸುವರು? ಧರ್ಮದೃಷ್ಟಿಯಿಂದ. ಧರ್ಮವೆಂದರೆ ಯಾವುದು? ಎಂಬ ಪ್ರಶ್ನೆ ಇಂದು ನಮಗೆ ತಲೆದೋರಬಹುದಾಗಿದೆ. ಆದರೆ ಪ್ರಾಚೀನ ಕಾಲದಲ್ಲಿ ಸಮಾಜವು ಇನ್ನೂ ಇಂದಿನ ಜಟಿಲತೆಯನ್ನು ಪಡೆಯದೆ ಇದ್ದಾಗ ಸಕಲ-ಸಾದಾಸ್ಥಿತಿಯಲ್ಲಿದ್ದಾಗ, ಸಂಗಡದ ಹಿತ ಸಾಧಿಸುವಂತಹ ಕರ್ತವ್ಯಗಳೇ 'ಧರ್ಮದೃಷ್ಟಿ'ಯನ್ನು ಒದವಿಸುತ್ತಿದ್ದವು. ಸಂಗಡದ ಹಿತದ ದೃಷ್ಟಿಯಿಂದ ಕರ್ತವ್ಯಗಳನ್ನು ನಿರ್ಧರಿಸುವ ಕಾರ್ಯವು ಸಂಗಡದ ಹಿರಿಯನದಾಗಿರುತ್ತಿದ್ದಿತು. ಸಂಗಡವೇ ಸಮಾಜದ ಘಟಕವಾಗಿದ್ದಿತು. ಅದೇ ಒಂದು ಕುಲ; ಕುಲಧರ್ಮವೇ ಧರ್ಮ. ಕುಲಪತಿಯೆ ರೂಢಿ ಸಂಪ್ರದಾಯಗಳ, ಆಚರಣೆ ನಡೆವಳಿಕೆಗಳ ನಿರ್ಮಾತೃ. ಕುಲದ ಹಿತ ಸಾಧಿಸುವ ವಿಚಾರವೇ ಅವನಿಗೆ ಮಾರ್ಗದರ್ಶನ ಮಾಡುವ ಮೂಲಭಾವನೆಯಾಗಿರುತ್ತಿದ್ದಿತು. ಕುಲಪತಿಯಲ್ಲಿ ಕುಲದ ಸದಸ್ಯರ ಅಚಲ ವಿಶ್ವಾಸ-ಶ್ರದ್ಧೆಗಳಿರುತ್ತಿದ್ದುದರಿಂದ ಅವನು ಹಾಕಿದ ರೂಢಿ-ಸಂಪ್ರದಾಯ, ಬಂಧನಗಳು ಸರ್ವಮಾನ್ಯವಾಗಿರುತ್ತಿದ್ದವು. ಅವೇ ಮೂಲಸಮಾಜದ ಕಾನೂನುಗಳಾಗಿ ಬಾಳುತ್ತಿದ್ದವು.

ಕುಲವೇ ಸಮಾಜದ ಘಟಕವಾಗಿದ್ದಾಗ ಕುಲಧರ್ಮ-ಕುಲಾಚಾರಗಳು ಆ ಕುಲದ ಜೀವನ ರೀತಿ-ನೀತಿಗೆ ಸಂಬಂಧಪಟ್ಟ ಕಟ್ಟು-ಕಾನೂನುಗಳಾಗಿದ್ದವು. ಈ ಕಟ್ಟು-ಕಾನೂನುಗಳು ಆ ಕುಲದ ವ್ಯಕ್ತಿಗಳಿಗೆ ಸಂಬಂಧಪಟ್ಟವುಗಳಾಗಿರುತ್ತಿದ್ದವು. ಆ ಕುಲದ ಜನ ಎಲ್ಲಿಯೇ ಹೋಗಲಿ, ಅವರ ಜತೆಗೆ ಅವೂ ಸಾಗಿಬರುತ್ತಿದ್ದವು. ಆಗಿನ ಜೀವನವೇ ಸಂಚಾರಿ ಜೀವನವಾಗಿದ್ದಿತು. ಜನ ಒಂದೆಡೆಗೆ ನೆಲೆನಿಂತು, ಆ ಪ್ರದೇಶ ತಮ್ಮದೆಂದು ಹೇಳಿಕೊಂಡು, ಆ ಪ್ರದೇಶದೊಡನೆ ತನ್ಮಯರಾಗುವವರೆಗೆ ಆ ಕಟ್ಟು ಕಾನೂನುಗಳು ವ್ಯಕ್ತಿ ಸಂಬಂಧವಾದ ಕಾನೂನುಗಳಾಗಿದ್ದವು. ಆ ಕಾನೂನುಗಳಿಗೆ ಪ್ರಾದೇಶಿಕತೆ ಇರಲಿಲ್ಲ. ಕಾನೂನುಗಳಿಗೆ ಪ್ರಾದೇಶಿಕ ವ್ಯಾಪ್ತಿ ಬಂದುದು ಮಾನವ ಇತಿಹಾಸದಲ್ಲಿ ತೀರ ಇತ್ತೀಚಿನ ಕಾಲದ ಸಂಗತಿಯಾಗಿದೆ. ಇಂದಿಗು ಕೂಡ ಹಿಂದೂ ಕಾಯದೆ, ಮುಹಮ್ಮದಿಯಾ ಕಾಯದೆ ಇವು ವ್ಯಕ್ತಿಸಂಬಂಧ ಕಾಯಿದೆಗಳಾಗಿವೆ. ಆದರೆ ಈ ಕಾಯದೆಗಳಲ್ಲಿ ಎಷ್ಟೋ ಮಾತುಗಳು ಇಂದು ಹೊಸ ಸಮಾಜದ ರಚನೆಗೆ ವಿರೋಧವಾಗಿರುವದರಿಂದಲೂ ಧರ್ಮದೃಷ್ಟಿಯು ಬದಲು ದೇಶ-ರಾಷ್ಟ್ರವೆಂಬ ರಾಜಕೀಯ ದೃಷ್ಟಿಯು ಬೆಳೆದು ಬರುತ್ತಿರುವದರಿಂದಲೂ ನಾಗರಿಕತ್ವದ ವಿಚಾರವು ಊರ್ಜಿತಕ್ಕೆ ಬಂದಿರುವದರಿಂದಲೂ ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು; ರಾಷ್ಟ್ರದ ಕಾನೂನು ಎಲ್ಲ ನಾಗರಿಕರಿಗೂ ಸಮಾನ ಸಂರಕ್ಷಣೆಯನ್ನು ದಯಪಾಲಿಸುವ ಹೊಣೆ ಮತ್ತು ರಚನೆ ಪಡೆದಿರುವದರಿಂದಲೂ ವ್ಯಕ್ತಿ ಸಂಬಂಧವಾಗಿದ್ದ ಕಾನೂನುಗಳು ಪ್ರಾದೇಶಿಕತೆಯನ್ನು ಪಡೆದು ಆ ಪ್ರದೇಶ ವ್ಯಾಪ್ತಿಯಲ್ಲಿ ಬಾಳುವ ಎಲ್ಲ ಜನರಿಗೂ-ಅವರು ಯಾವುದೇ ಕುಲ, ಪಂಥ, ಸಂಗಡ, ಧರ್ಮ, ಜಾತಿಯವರಿರಲಿ- ಅನ್ವಯಿಸುವಂತಹ ಕಾನೂನುಗಳಾಗಿ ಪರಿಣಮಿಸತೊಡಗಿವೆ.

ಈ ಸ್ಥಿತ್ಯಂತರ ಬರಲು ಸಮಾಜಕ್ಕೆ ಮೂಲದಲ್ಲಿದ್ದ ಧರ್ಮದೃಷ್ಟಿಯಲ್ಲಿ ಕರ್ತವ್ಯಕ್ಕೆ ಪ್ರಾಶಸ್ತ್ಯವಿತ್ತು. ಸರ್ವಜನಹಿತ ಸಾಧಿಸುವ ದೃಷ್ಟಿಯು ಕರ್ತವ್ಯದ ಸ್ವರೂಪವಿದ್ದಿತು. ಆಗ ಆಶ್ರಮಧರ್ಮ ಪುರುಷಾರ್ಥ ವಿಚಾರಗಳಲ್ಲಿ ಆಯಾ ವಯೋಮಾನಕ್ಕೆ ತಕ್ಕಂತೆ ಆಯಾ ಉದ್ದೇಶ ಸಾಧನೆಗಾಗಿ ವಿಶಿಷ್ಟ ಕರ್ತವ್ಯಗಳನ್ನು ಹೇಳಲಾಗುತ್ತಿದ್ದಿತು. ಕರ್ತವ್ಯವಿಮುಖನಾದವನಿಗೆ ಪ್ರಾಯಶ್ಚಿತ್ತಾದಿ ದಂಡನೆಗಳು ಇರುತ್ತಿದ್ದವು- ಶ್ರದ್ಧೆ-ವಿಶ್ವಾಸ-ಸಂಪ್ರದಾಯ, ಕುಲಧರ್ಮ-ಕುಲಾಚಾರ ಮುಂತಾದ ಬಂಧನಗಳ ಮೂಲಕ ಕರ್ತವ್ಯಪಾಲನೆಯಲ್ಲಿ ಸಾಮಾನ್ಯವಾಗಿ ಚ್ಯುತಿಬರುತ್ತಿದ್ದಿಲ್ಲ. ಎಲ್ಲವೂ ವೈಯಕ್ತಿಕ ಆಚರಣೆಯ ಮೇಲೆ ಅವಲಂಬಿಸಿರುತ್ತಿದ್ದಿತು. ವ್ಯಕ್ತಿಗಳು ಕರ್ತವ್ಯಪಾಲನೆಯ ಬುದ್ಧಿಯುಳ್ಳವರಾಗಿದ್ದರಿಂದ ಸಾಮೂಹಿಕ ಜೀವನವು ಪ್ರತ್ಯೇಕವಾಗಿ ಕಂಡುಬರದೆ ವ್ಯಕ್ತಿಗಳ ಜೀವನದ ಸಾಮೂಹಿಕ ಭಾವನೆಯೆ ಸಮಾಜಭಾವನೆಯೆಂದಾಗಿರುತ್ತಿತ್ತು. "ತಾನು ಒಳ್ಳೆಯವನಾದರೆ ಜಗತ್ತು ಒಳ್ಳೆಯದಾಗುವದು" ಎಂಬ ತತ್ವದ ಹಿನ್ನೆಲೆಯಲ್ಲಿ ಅಂದಿನ ಜನಜೀವನವು ರೂಪಿಸಿತ್ತಾದುದರಿಂದ ಆಯಾ ಧರ್ಮ-ಮತ-ಪಂಥ-ಸಂಗಡಗಳ ರೂಢಿ ಸಂಪ್ರದಾಯ

ಗಳೇ ಅವರ ಜೀವನ ರೀತಿ-ನೀತಿಗಳನ್ನು ನಿರ್ಧರಿಸುವ ಕಾನೂನುಗಳಾಗಿದ್ದುವು. ಆಗಿನದು ಕರ್ತವ್ಯ ಪ್ರಧಾನವಾದ ಜೀವನವಾಗಿದ್ದಿತಾದುದರಿಂದ ಸಮಾಜದಲ್ಲಿ ಆರ್ಥಿಕ, ರಾಜಕೀಯ ಮುಂತಾದ ವಿಶಿಷ್ಟ ವರ್ಗೀಕರಣವಾಗದೆ ಸಮನ್ವಯದ ಸಮರಸದ ಸಮಾನ ಕರ್ತವ್ಯದ ವಿಚಾರ ಮೂಡಿ ನಿಂತಿರುತ್ತಿದ್ದಿತು.

ರಾಜಕೀಯವು ಸಮಾಜ ಜೀವನದ ಸಂರಕ್ಷಕಾಂಗವೆಂದಾಗಿ ಉಳಿಯದೆ, ಪ್ರಧಾನ ಪಾತ್ರ ವಹಿಸುವ ಸಂದರ್ಭ ಬಂದಹಾಗೆಲ್ಲ, ಕರ್ತವ್ಯ-ಪ್ರಧಾನತೆಯು ಮಾಯವಾಗಿ ಹಕ್ಕು-ಬಾಧ್ಯತೆ ಅಧಿಕಾರಗಳ ಪ್ರಧಾನತೆಯ ಉದಯವಾಗತೊಡಗಿತು. ಇದು ಆಧುನಿಕ ಕಾನೂನುಗಳು ಬೆಳೆಯುವುದಕ್ಕೆ ದಾರಿ ಮಾಡಿಕೊಟ್ಟಿತು. ಇಲ್ಲಿಯು ಕೂಡ ತಾತ್ವಿಕವಾಗಿ ಸಮಾಜದ ಹಿತ ಬಯಸುವ ದೃಷ್ಟಿಯೆ ಇದೆ. ಆದರೆ ಇಂದಿನ ಸಮಾಜವು ಅಂದಿನಕಿಂತ ಜಟಿಲತರವಾದ ರಚನೆಯುಳ್ಳದ್ದಾಗಿರುವುದರಿಂದ ವೈಯಕ್ತಿಕ ಜೀವನವೂ ಸಮಾಜ ಜೀವನವೂಬೇರೆಬೇರೆಯಾಗಿರುವುದರಿಂದ ಎರಡು ಕಾರ್ಯಕ್ಷೇತ್ರದ ಹಕ್ಕುಬಾಧ್ಯತೆಗಳಲ್ಲಿ ತಾಕಲಾಟವುಂಟಾಗುವ ಸಂದರ್ಭ ಹೆಚ್ಚಾಗಿ ಬರುತ್ತಲಿದೆ. ಸಾಮಾಜಿಕ ಜೀವನವು ರಾಜಕೀಯ ತತ್ವಪೋಷಿತವಾಗಿದೆ ; ವೈಯಕ್ತಿಕ ಜೀವನವು ಧರ್ಮಪೋಷಿತವಾಗಿದೆ. ಸಾಮಾಜಿಕ ಜೀವನದಲ್ಲಿ ಧಾರ್ಮಿಕ ವಿಚಾರಗಳಿಗೆ ಆಸ್ಪದವಿಲ್ಲದಂತಾಗಿದೆ; ವೈಯಕ್ತಿಕ ಜೀವನವು ರಾಜಕೀಯ ಪ್ರಭಾವದಲ್ಲಿ ಬೆಳೆಯುವಂತಹದಾಗಿದೆ; ಹಕ್ಕುಬಾಧ್ಯತೆಗಳು ಪ್ರಧಾನತೆಯನ್ನು ಪಡೆದು ಕರ್ತವ್ಯಬುದ್ಧಿಯು ಮಾಯವಾಗತೊಡಗಿದೆ. ಹಕ್ಕು ಹೊಣೆಗಾರಿಕೆ, ಕಾರ್ಯ ಕರ್ತವ್ಯಗಳ ಸಾಮರಸ್ಯವಿದ್ದರೆ, ಯಾವ ಕಾನೂನೂ ಸರ್ವಹಿತ ಸಾಧಿಸುವುದು. ಆದರೆ ಹಾಗೆ ಆಗದೆ, ಕರ್ತವ್ಯಗಳು ಕಾಗದದ ಮೇಲೆ ಉಳಿದು ಹಕ್ಕುಗಳು ಹೊಡೆದಾಟದ ಸ್ಫೂರ್ತಿ ಸ್ಥಾನಗಳಾಗಿವೆ. ಹೀಗಾಗಲು ಕಾರಣವೆಂದರೆ, ಕಾನೂನುಗಳು ಸಮಾಜದ ರಚನೆಯ ವಿಕಾಸವನ್ನು ಹಿಂಬಾಲಿಸುತ್ತ ಹೋಗದೆ, ರಾಜಕೀಯ ಧ್ಯೇಯಧೋರಣೆಗಳನ್ನು ಪೋಷಿಸಿ, ಬೆಳೆಯಿಸಿ, ಸಮರ್ಥಿಸುವುದಕ್ಕಾಗಿ ಅವತಾರ ತಾಳುತ್ತಿವೆ. ಅಂದರೆ ಕಾನೂನು ತನ್ನ ಸ್ಥಾನಮಾನವನ್ನು ತಿಳಿಯದೆ, ಅಧಿಕಾರದ ಆಧ್ಯತೆಯನ್ನು ಬೀರುವ ಯೋಗವನ್ನು ತಂದುಕೊಂಡಿದೆ, ಎಂದು ಹೇಳಿದರೆ ತಪ್ಪಾಗದು.

ಕಾನೂನು ನಿರ್ದಿಷ್ಟವಾದ ಮಾತಿನಲ್ಲಿ ನಿರ್ಧಾರವಾದ ಸಂಗತಿಯನ್ನು ತಿಳಿಯಪಡಿಸುವುದು. ಸಮಾಜವು ಬೆಳೆಯುತ್ತಿರುವ ಘಟನೆಯು. ಕಾನೂನು ಬಂಧನಕಾರಕವಾಗುವುದರಿಂದ ಬೆಳೆಯುತ್ತಿರುವ ಸಮಾಜಕ್ಕೆ ಕಟ್ಟುಹಾಕಿದಂತಾಗುವುದು. ಜನಸಾಮಾನ್ಯರ ಭಾವನೆಯಲ್ಲಿ ಅಂತಹ ಕಟ್ಟು ಅವಶ್ಯಕವೆಂದಾಗಿದ್ದರೆ, ಆ ಕಾನೂನು ಸರ್ವಮಾನ್ಯವಾಗಿರುವುದು. ಜನಸಾಮಾನ್ಯರಿಗೆ ಅಂತಹ ಕಟ್ಟು ಅನಾವಶ್ಯಕವೆಂಬ ಭಾವನೆಯಾಗುತ್ತಿದ್ದರೆ, ಆ ಕಾನೂನು ಅರ್ಥರಹಿತವಾಗುವುದು. ಏಕೆಂದರೆ ಕೊನೆಯದಾಗಿ ಅಧಿಕಾರಮನ್ನಣೆಯನ್ನು ಕೊಡುವ ಹಕ್ಕು ಜನಸಾಮಾನ್ಯರಿಗೆ ಇರುವುದು ; ಕಾನೂನು ಅವರ ಹಿತವನ್ನೇ ಸಾಧಿಸಬೇಕಲ್ಲವೆ ?

ಕಾನೂನಿನ ಮೂಲ ಉದ್ದೇಶವಾದರೂ ಅದೇ. ಒಂದು ಕಾಲಕ್ಕೆ ರೂಢಿ ಸಂಪ್ರದಾಯಗಳು ಮಾಡುತ್ತಿದ್ದ ಕಾರ್ಯವನ್ನು ಇಂದು ಕಾನೂನು ಮಾಡಬೇಕಾಗಿದೆ. ರೂಢಿ ಸಂಪ್ರದಾಯಗಳಲ್ಲಿ ಜನಸಾಮಾನ್ಯರ ವಿಶ್ವಾಸ-ಶ್ರದ್ಧೆ ಇರುತ್ತಿದ್ದಿತು. ರೂಢಿ ಸಂಪ್ರದಾಯಗಳಿಗೆ ಇದ್ದ ಮನ್ನಣೆಯು ಸ್ವಯಂಪ್ರೇರಿತವಾಗಿದ್ದಿತು. ಕಾನೂನಿನ ವಿಷಯ ಹಾಗಲ್ಲ. ಇದರಿಂದ ಶಾಸನಿಕ ಒತ್ತಾಯ ಉಂಟಾಗುವುದು. ರಾಜಕೀಯ ಅಧಿಕಾರವೇ ಒತ್ತಾಯದ ಸತ್ತಾಧಿಕಾರ. ಈ ಸತ್ತಾಧಿಕಾರದ ಅನ್ವಯವಾಗಿ ಮಾಡಲಾಗುವ ಕಾನೂನುಗಳು ಪರ್ಯಾಯವಾಗಿ ಸರಕಾರದ ಅಧಿಕಾರವನ್ನು ಪೋಷಿಸುವ ದೃಷ್ಟಿಯನ್ನೇ ಇಟ್ಟುಕೊಂಡಿರುತ್ತವೆ. ರಾಜಕೀಯ ದೃಷ್ಟಿಯಲ್ಲಿ ಇದು ಸಹಜ ಮತ್ತು ಸಮಂಜಸವೆಂದಾದರೂ ಸಮಾಜದ ದೃಷ್ಟಿಯಿಂದ, ಸಮಾಜದ ಬೆಳಗೆಯ ದೃಷ್ಟಿಯಿಂದ ಅದು ಒಮ್ಮೊಮ್ಮೆ ಮಾರಕವಾಗುತ್ತದೆ. ಸಮಾಜದ ಬೆಳೆಗೆಯು ಸಾವಿರಾರು ಕಾರಣಗಳನ್ನು ಅವಲಂಬಿಸಿರುತ್ತದೆ. ಕೆಲವು ಕಣ್ಣಿಗೆ ಕಾಣುವಂತಹ ಕಾರಣಗಳು ಇರುವವು; ಇನ್ನು ಕೆಲವು ತಿಳಿವಳಿಕೆಗೆ ನಿಲುಕಲಾರದಂತಹವಿರುವುವು. ಶಾಸನಿಕ ಕಾನೂನುಗಳು ಸಮಾಜದ ಪ್ರತ್ಯಕ್ಷ-ಅಪ್ರತ್ಯಕ್ಷ ಕಾರಣಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಲಾರವು. ಯಾವುವು ಸಂವೇದಯೋಗ್ಯವಾದ ಕಾರಣಗಳು ಇರುವುವೊ ಅಂತಹವನ್ನೇ ಲಕ್ಷ್ಯವಾಗಿಟ್ಟುಕೊಂಡು ಕಾನೂನುಗಳು ರಚಿತವಾಗುತ್ತಿರುತ್ತವೆ. ಆದಕಾರಣ ಕಾನೂನುಗಳು ಯಾವಾಗಲೂ ಸಮಾಜದ ಸತ್ವಪೋಷಣೆಯನ್ನೇ ಮಾಡುವುವು ಎಂದು ಹೇಳಲಾಗದು. ಅದಕ್ಕೆ, ಸಮಾಜದ ಜನತೆಯಲ್ಲಿ ರೂಢವಾದ ಭಾವನೆಗಳಿಗೂ ಸರಕಾರವು ಶಾಸನಿಕವಾಗಿ ಪ್ರಸ್ಥಾಪಿಸುವ ಕಾನೂನುಗಳಿಗೂ ಸಾಮರಸ್ಯದ ಹೊಂದಿಕೆಯಿರುವುದಿಲ್ಲ. ಒಮ್ಮೊಮ್ಮೆ ಸಮಾಜವು ಹಿಂದುಳಿದಿರುವುದು ; ಒಮ್ಮೊಮ್ಮೆ ಸಮಾಜದ ಪ್ರಗತಿ ಬೇರೆ ದಿಕ್ಕು ಹಿಡಿದಿರುವುದು. ಒಟ್ಟಿನಲ್ಲಿ ಸಮಾಜಕ್ಕೂ ಕಾನೂನಿಗೂ ತುರುಸು ಕಾಣುವುದೇ ಹೊರತು ಹೊಂದಿಕೆ ಕಾಣದು.

ಹೀಗೆ ಪರಿಸ್ಥಿತಿ ಉಂಟಾಗಲು ರಾಜಕೀಯ ಸತ್ತಾಧಿಕಾರದ ವಿಕಾಸದ ಇತಿಹಾಸವೇ ಕಾರಣ. ರಾಜಸತ್ತೆ, ಶಿಷ್ಟಸತ್ತೆಗಳ ಕಾಲದಲ್ಲಿ ಸಮಾಜವು ಸಂಪ್ರದಾಯಬದ್ಧವಾದಂತೆ ಸರಕಾರವೂ ಸಂಪ್ರದಾಯಗಳಿಂದ ಮಾರ್ಗದರ್ಶಿತವಾಗುತ್ತಿತ್ತು. ಪರಂಪರಾಗತವಾಗಿ ಬಂದ ಸಂಪ್ರದಾಯಗಳನ್ನು ಉಳಿದು ಪ್ರತ್ಯೇಕವಾಗಿ ಬೇರೆ ಕಾನೂನುಗಳನ್ನು ಮಾಡಬೇಕಾಗಿ ಬರುವ ಸಂದರ್ಭಗಳೇ ಕಡಿಮೆ ಇರುತ್ತಿದ್ದವು. ಸದಾಚಾರ, ಸಂಪ್ರದಾಯ, ಸಮಾಜಹಿತ ಇವುಗಳೇ ಸತ್ತಾಧಿಕಾರದಲ್ಲಿದ್ದ ರಾಜನಿಗಾಗಲೀ, ಮಂತ್ರಿಗಳಿಗಾಗಲಿ ದಾರಿಗಂಬಗಳಾಗಿರುತ್ತಿದ್ದವು. ಇವುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಕಾನೂನುಗಳನ್ನು ಮಾಡಲಾಗುತ್ತಿದ್ದುದರಿಂದ ಆಗ ಸಮಾಜದ ಸಂಪ್ರದಾಯಗಳಿಗೂ ಸರಕಾರದ ಕಾನೂನುಗಳಿಗೂ ವಿಶೇಷ ವ್ಯತ್ಯಾಸ ಕಂಡುಬರುತ್ತಿದ್ದಿಲ್ಲ. ಆದರೆ ಪ್ರಪಂಚದಲ್ಲಿಯ ಜನಸಂಖ್ಯೆಯು ಹೆಚ್ಚಾಗತೊಡಗಿದಂತೆಲ್ಲ ಔದ್ಯೋಗೀಕರಣದ ಮೂಲಕ ಸಾಮಾಜಿಕ ರಚನೆಯಲ್ಲಿ ಬದಲಾಗತೊಡಗಿದಂತೆಲ್ಲ, ಪರಂಪರಾನುಗತಿಯಿಂದ ನಡೆದುಬಂದ ಸ್ಥಾನ-ಮಾನಗಳು ಪಲ್ಲಟವಾಗಿ ಸಂಪತ್ತಿಯ ಸಂಗ್ರಹದ ಮೂಲಕ ಬೇರೆ ವರ್ಗವೇ ಪ್ರಾಶಸ್ತ್ಯಪಡೆಯುವಂತಾದ ಹಾಗೆಲ್ಲ, ರಾಜಸತ್ತೆಯ, ಶಿಷ್ಟಸತ್ತೆಗಳ ಬಗ್ಗೆ ಅನಾದರ ಉಂಟಾಗತೊಡಗಿತು. ಇದಕ್ಕೆ ಸತ್ತಾಧಿಕಾರಿಗಳಾದ ರಾಜರೂ ಶಿಷ್ಟರೂ ತಮ್ಮ ಅಧಿಕಾರದ ದುರುಪಯೋಗ ಮಾಡಿಕೊಂಡುದು ಸಬಲವಾದ ಕಾರಣವಾಗಿದೆ. ಒಟ್ಟಿನಮೇಲೆ ಸಂಪ್ರದಾಯಾದಿ ರೂಢವಾದ ಸತ್ತೆಗೆ ಅರ್ಧಚಂದ್ರ ಬಂದು ಜನಸಾಮಾನ್ಯರ ಸಂಖ್ಯಾಬಲವು, ಸಂಪತ್ತಿಯ ಬಲವು ಉದಯವಾಗತೊಡಗಿ ಪ್ರಜಾಸತ್ತೆಯ ಸರಕಾರದ ರಚನೆಗೆ ದಾರಿಮಾಡಿ ಕೊಟ್ಟವು. ಪ್ರಜಾಸತ್ತೆಯ ಯುಗವುಪ್ರಾರಂಭವಾಗಿ ತಳವೂರುವಂತಾಯಿತು. ಇದುವರೆಗೆ ಪ್ರಜೆಗಳಿಗೆ ಅಧಿಕಾರ—ಹಕ್ಕುಗಳು ಎಂಬುವು ಇಲ್ಲದ್ದರಿಂದ ಮಾನವ ಹಕ್ಕುಗಳು ಎಂಬ ಸದರಿನಲ್ಲಿ ಅವುಗಳ ವ್ಯಾಖ್ಯೆ ವರ್ಣನೆಗಳು ನಡೆಯಬೇಕಾಯಿತು. ಪರಂಪರೆಯನ್ನು, ಸಂಪ್ರದಾಯವನ್ನು ಅಲ್ಲಗಳೆದಮೇಲೆ ಪ್ರಜೆಗಳೆಂಬವರೆಲ್ಲರಿಗೂ ಸಮಾನ ಅಧಿಕಾರ-ಹಕ್ಕುಗಳನ್ನು ಕೊಡಬೇಕಾಯಿತು. ಅದೇ ಇಂದಿನ ನಾಗರಿಕತ್ವದ ಅಧಿಕಾರವಾಗಿದೆ. ನಾಗರಿಕನ ಮೂಲಭೂತ ಅಧಿಕಾರಗಳು ಎಂದು ಘಟನಾತ್ಮಕವಾಗಿ ಅವನ ಅಧಿಕಾರಗಳನ್ನು ಪ್ರಸ್ಥಾಪಿಸಲಾಗಿದೆ.

ಪ್ರಜಾಸತ್ತೆಯ ತತ್ವಕ್ಕನುಸರಿಸಿ ಪ್ರತಿಯೊಬ್ಬ ನಾಗರಿಕನಿಗೆ ಮೂಲಭೂತ ಹಕ್ಕುಗಳನ್ನು ದಯಪಾಲಿಸುವುದು ಸಹಜ ಮತ್ತು ಸಮಂಜಸವೆನ್ನಿಸಬಹುದು. ಆದರೆ ಹಕ್ಕು ಬಾಧ್ಯತೆಗಳ ಅರಿವು ನಾಗರಿಕನಿಗೆ ಆಗುವ ತನಕ, ಅದರ ಅವಶ್ಯಕತೆ ಅವನಿಗೆ ಅನ್ನಿಸುವತನಕ, ಅವನಿಗೆ ದಯಪಾಲಿಸಲಾದ ಹಕ್ಕು ಬಾಧ್ಯತೆಗಳ ವ್ಯಾಪ್ತಿಯು ತಿಳಿಯುವ ತನಕ, ಅವು ಅವನಿಗೆ ವರದಾನದ ಬದಲು ಶಾಪವಾಗಿಯೇ ಪರಿಣಮಿಸುವುವು. ಯಾವುದೊಂದು ವಸ್ತು ವಿಚಾರದ ಬೆಲೆಯು ಅದರ ಉಪಯುಕ್ತತೆಯ ಮೇಲಿಂದಲೇ ಅಳೆಯಬೇಕೆಂಬುದು ಸ್ಪಷ್ಟವದೆ. ಬೇಡಿಕೆ ಇಲ್ಲದೆ ಪೂರೈಕೆಯುಂಟಾದರೆ, ವಸ್ತುವಿನ ಬೆಲೆ ಕಡಿಮೆಯಾಗುವದೆಂಬ ನಿಯಮವು ಹಕ್ಕು ಬಾಧ್ಯತೆಗಳಿಗೂ ಅನ್ವಯಿಸುವುದು. ಸಮಾಜವು ಪ್ರಜಾಸತ್ತೆಯ ಹಕ್ಕುಬಾಧ್ಯತೆಗಳನ್ನು ಅರಗಿಸಿಕೊಳ್ಳುವಷ್ಟು ತಿಳಿದು ಆಚರಿಸುವಷ್ಟು ಬೆಳೆಯದೆ ಇದ್ದ ಅವಸ್ಥೆಯಲ್ಲಿರುವಾಗ ಅದಕ್ಕೆ ಅಧಿಕಾರ ದಾನವಾದರೆ ಅದು ನಿರರ್ಥಕವೆನ್ನಿಸು

ವುದು. ನಾಗರಿಕರು ಮತದಾನ ಮಾಡಿ ತಮ್ಮ ಪ್ರತಿನಿಧಿಗಳನ್ನು ಆರಿಸಿ, ಅವರಿಂದ ರಾಜ್ಯ ನಡಿಸಿ ತಾವೆ ಸತ್ತಾಧಿಕಾರವುಳ್ಳವರೆಂದು ಅರಿವು ಹುಟ್ಟಬೇಕಾದರೆ ಮತದಾನ ಮಾಡುವ ನಾಗರಿಕನಿಗೆ ಆ ಮತದ ಮರ್ಮವು ತಿಳಿಯಬೇಕಾಗುವುದು. ಮಹಾಪೂರ ಬಂದಕಾಲದಲ್ಲಿ ಸುತ್ತಲಿನ ಪ್ರದೇಶವನ್ನು ಕೊಚ್ಚಿಕೊಂಡು ಹೋದಂತೆ ಚುನಾವಣೆ ಕಾಲದಲ್ಲಿಯ ಮೋಹಜಾಲದ ರಭಸಕ್ಕೆ ಸಿಕ್ಕು ಕೈಯಲ್ಲಿನ ಮತಾಧಿಕಾರವನ್ನು ಕಣ್ಣುಮುಚ್ಚಿಕೊಟ್ಟು, ನಂತರ ಹಳಹಳಿ ಬಿಡುವ ಸ್ಥಿತಿ ಬರುವ ಪ್ರಸಂಗ ಉಂಟಾಗುವ ಪರಿಸ್ಥಿತಿಯು ಇರುವ ತನಕ ಪ್ರಜಾಸತ್ತೆಯು ನಾಮಮಾತ್ರವಾಗುವುದು. ಪ್ರಜಾಪ್ರತಿನಿಧಿಗಳು ಮತ ದೊರಕಿಸಿದ ಶಾಸನ ಸಭೆಯ ಸದಸ್ಯರಾಗುವರೇ ಹೊರತು ಸಮಾಜದ ಸದಸ್ಯರ ಹಿತವನ್ನು ಸದಾ ಲಕ್ಷ್ಯದಲ್ಲಿಟ್ಟುಕೊಂಡು ಅವರ ಪರವಾಗಿ ಅಧಿಕಾರ ನಡಿಸುವ ಪ್ರತಿನಿಧಿಗಳೆಂದು ಆಗುವದಿಲ್ಲ. ಈ ಕಾರಣದ ಸಲುವಾಗಿಯೆ ಇಂದಿನ ಕಾನೂನುಗಳು ಸರಕಾರದ ಅಧಿಕಾರದಲ್ಲಿದ್ದ ಪಕ್ಷದ ಕೆಲ ಜನರ ವಿಚಾರ ಪ್ರಣಾಲಿಯ ದ್ಯೋತಕಗಳಾಗಿರುವುವೇ ಹೊರತು ಸಮಾಜದ ವಿಕಾಸದ ಪೋಷಕವಾಗಿರುವುದಿಲ್ಲ. ತತ್ವ ಪ್ರಣಾಲಿಗಳಿಗೆ ಅಂಟಿಕೊಂಡು ಕಾನೂನುಗಳು ಆಗುವುವೇ ಹೊರತು, ಸಮಾಜದ ಸ್ಥಿತಿಗತಿಯನ್ನು ಅನುಲಕ್ಷಿಸಿ ಸಮಾಜದ ಪ್ರಗತಿಗೆ ಅವಶ್ಯಕವಾದ ಸಮಾಜದ ಸರ್ವಜನರು ಅಪೇಕ್ಷಿಸಿದಂತಹ ಕಾನೂನುಗಳು ಆಗುವುದಿಲ್ಲ. ಅದಕ್ಕಾಗಿ ಇಂತಹ ಕಾನೂನುಗಳಿಗೆ ಸತ್ತಾಧಿಕಾರದ ಮೂಲಕ ಮನ್ನಣೆ ದೊರೆವುದೇ ಹೊರತು, ಸಮಾಜದ ಸದಸ್ಯನ ಸ್ವಯಂಪ್ರೇರಣೆಯ ಸಮ್ಮತಿಯಿಂದಲ್ಲ. ಹೀಗಾಗಿ ಕಾನೂನುಗಳಿಂದ ಅಪೇಕ್ಷಿತವಾದ ಕಾರ್ಯವು ಆಗದೆ, ಸಮಾಜವು ಸುಮ್ಮಸುಮ್ಮನೆ ನೆಮ್ಮದಿಗೇಡಾಗುವುದು. ಸಂಪ್ರದಾಯಗಳಿಗೆ ಇದ್ದ ಮನ್ನಣೆಯು ಕೂಡ ಶಾಸನಗಳಿಗೆ ದೊರೆಯುವುದು ಕಠಿಣವಾಗುವುದು.

ಸಮಾಜವು ಎಷ್ಟೇ ಸುಧಾರಿಸಿದೆಯೆಂದರೂ ಅದು ಸಂಪ್ರದಾಯವನ್ನೇ ತನ್ನ ಮಾರ್ಗದರ್ಶನಕ್ಕಾಗಿ ನೋಡುವುದು. ಸಂಪ್ರದಾಯ, ರೂಢಿ, ಪದ್ಧತಿಗಳು ಸಮಾಜದ ಜೀವಾಳವೆನ್ನಬಹುದು. ಜನಸಾಮಾನ್ಯ ಜೀವನದಲ್ಲಿ ಬುದ್ಧಿಯಕಿಂತ ಭಾವನೆಯೆ ಪ್ರಬಲ ಜೀವನ ಸಾಧನವಾಗಿರುವುದರಿಂದ ಜನಜೀವನವು ಎಂದಿಗೂ ಸಂಪ್ರದಾಯ-ಪದ್ಧತಿ ರೂಢಿಗಳನ್ನೇ ಅವಲಂಬಿಸುವುದು. ಅದು ವೈಯಕ್ತಿಕ ಜೀವನದಲ್ಲಿ, ಕೌಟುಂಬಿಕ ಜೀವನದಲ್ಲಿ, ಸಾಮಾಜಿಕ ಜೀವನದಲ್ಲಿ ಪ್ರಕಟವಾಗುವುದು. ಈ ಪರಿಸ್ಥಿತಿಯು ಮಾನವ ಸ್ವಭಾವದ ಹೆಗ್ಗುರುತಾಗಿ ಬಾಳುವುದು. ಇದನ್ನು ತಿಳಿದು ಹಿಂದಿನ ಕಾಲದ ಶಾಸನಕಾರರು ರೂಢವಾಗಿದ್ದಂತಹ ಸಂಪ್ರದಾಯಗಳನ್ನೆ ಶಾಸನ ರೂಪದಲ್ಲಿ ಪರಿವರ್ತಿಸಿ ಪ್ರಸ್ತಾಪಿಸುತ್ತಿದ್ದರು. ಹಾಗೆ ಸಂಪ್ರದಾಯವು ಶಾಸನವಾದಾಗ ಅದಕ್ಕೆ ಸಾರ್ವಜನಿಕ ಮನ್ನಣೆ ಬರುತ್ತಿತ್ತು. "ಕಾರ್ಯಾಕಾರ್ಯ ವ್ಯವಸ್ಥಿತೌ ತಸ್ಮಾತ್ ಶಾಸ್ತ್ರಂ ಪ್ರಮಾಣಂ" ಎಂದು ಸಾರಿ ಹೇಳುತ್ತಿದ್ದರು; ಆದರೂ "ಶಾಸ್ತ್ರಾತ್ ರೂಢಿರ್ಬಲೀಯಸೀ" ಎಂದು ಸೂತ್ರಹೇಳಿ ಸದಾಚಾರ ಸಂಪನ್ನ ರೂಢಿಗೆ ಶಾಸನಕ್ಕಿಂತ ಹೆಚ್ಚು ಬೆಲೆಕೊಟ್ಟು, ಶಾಸನವನ್ನು ರೂಢಿಗಳನ್ನು ಸಮಾಜದ ರೀತಿ ನೀತಿಗಳಿಗೆ ಒಗ್ಗಿಸುತ್ತಿದ್ದರು. ಅಲ್ಲದೆ, ಈ ಪದ್ಧತಿಯನ್ನು ಅನುಸರಿಸಿ, ಕಾಲಕಾಲಕ್ಕೆ ಶಾಸನಗಳನ್ನು ಬದಲಿಸುತ್ತಿದ್ದರು. ಶಾಸನಗಳು ಸಮಾಜದ ಒಲವನ್ನು ಹಿಡಿದುಕೊಂಡೇ ಸಾಗುತ್ತಿದ್ದುವು. ಸಮಾಜದ ಒಲವಿಗೇನೇ ಶಾಸನಿಕ ಮುದ್ರೆಯನ್ನು ಒತ್ತಿ ಸತ್ತಾಧಿಕಾರವನ್ನು ದಯಪಾಲಿಸುತ್ತಿದ್ದರು. ಆದುದರಿಂದ ಶಾಸನವೆಂದಕೂಡಲೆ ಅದಕ್ಕೆ ಸಾರ್ವತ್ರಿಕ ಮನ್ನಣೆ ದೊರೆಯುತ್ತಿತ್ತು. ಅಲ್ಲಿನ ಪದ್ಧತಿಯೆಂದರೆ ಮೂಲದಲ್ಲಿ ಸಾಮಾಜಿಕ ಸಂಪ್ರದಾಯ; ಅದಕ್ಕೆ ಅನುವರ್ತಿಯಾಗಿ ಬರುತ್ತಿದ್ದಿತು ಶಾಸನ.

ಆದರೆ ಇಂದು ಪದ್ಧತಿ ವಿಪರೀತವಾಗಿದೆ. ಶಾಸನಕರ್ತರಾದ ಇಂದಿನವರಿಗೆ ಸಮಾಜದ ಸಂಪ್ರದಾಯಗಳು ಹಳೆಯವೂ ಕಾಲೋಪಯುಕ್ತತೆಯನ್ನು ಮೀರಿದುವೂ ಎಂದು ದೃಢ ನಂಬಿಕೆಯಾಗಿದ್ದಂತಿದೆ. ಹೀಗೆ ನಂಬಿಕೆ ಹುಟ್ಟಿದ ಜನರು ಜನಸಾಮಾನ್ಯರಲ್ಲ. ವಿದ್ಯಾ-ಬುದ್ಧಿ-ಸಂಸ್ಕೃತಿಯ ಪ್ರಭಾವದಿಂದ ಮುಂದುವರೆದವರೆಂದು ತಿಳಿದುಕೊಂಡವರು. ಯಾವುದೋ ಅಳತೆಗೋಲಿನಿಂದ ನೋಡಿದರೆ ಅವರು ಮುಂದುವರೆದವರಿರಬಹುದು. ಆದರೆ ಅವರು ಅಲ್ಪಸಂಖ್ಯಾಕರು. ಬಹುಸಂಖ್ಯಾಕ ಜನರಿಗೆ ಇವರಂತೆ ಸಮಾಜನ ಸ್ಥಿತಿಗತಿಯ ಬಗ್ಗೆ ನಂಬಿಕೆ ಹುಟ್ಟಿರುವುದಿಲ್ಲ. ಆದರೂ ಇವರು ಇಂತಹ ಜನತೆಯ ಪ್ರತಿನಿಧಿಗಳೆಂದು ಆಗಿರುವರು. ಯಾರ ಪ್ರತಿನಿಧಿಗಳು ಇವರು ಆಗಿರುವರು? ಅವರ ಮನದೊಲವನ್ನು ಇವರು ಪ್ರತಿಬಿಂಬಿಸುವರೆ? ಇಲ್ಲವೆ, ಅವರ ಹಿತ ತಾವು ಸಾಧಿಸುವವರು ಎಂದು ತಿಳಿದು ತಮ್ಮ ವಿಚಾರಗಳನ್ನು ಅವರ ಮೇಲೆ ಆರೋಪಿಸುತ್ತಿರಬಹುದೆ? ಜನಸಾಮಾನ್ಯರು ಅಜ್ಞರೆಂದು ಅವರ ಅಸ್ತಿತ್ವವನ್ನು ಅಲ್ಲಗಳೆಯುವಂತಿಲ್ಲ. ಏಕೆಂದರೆ ಇವರು ಅಂತಹರ ಪ್ರತಿನಿಧಿಗಳು. ಪ್ರತಿನಿಧಿಗಳಾಗಿ ಕಾರ್ಯಮಾಡುವುದರಿಂದ ಅವರ ಹಿತ ಸಾಧಿಸಬೇಕಲ್ಲವೆ? ತಮ್ಮ ಹಿತ ಸಾಧಿಸಲಾಗುತ್ತಿದೆ ಎಂಬ ಭಾವನೆ ಆ ಜನರಲ್ಲಿ ಮೂಡಬೇಡವೆ? ಆ ಬಗೆಯಾಗಿ ಸಾಮಾಜಿಕರ ಭಾವನೆ ಆಗಿದ್ದಾದರೆ, ಪ್ರತಿನಿಧಿಗಳು ಸೇರಿ ಮಾಡಿದ ಕಾನೂನುಗಳನ್ನು ಸಮಾಜವು ಒಪ್ಪುವುದು. ಸಮಾಜವು ಒಪ್ಪದೇ ಇದ್ದಂತಹ ಕಾನೂನು ಮಾಡಲಾದರೆ, ಪ್ರತಿನಿಧಿಗಳು ಯಾರ ಹಿತಕ್ಕಾಗಿ ಆ ಕಾನೂನನ್ನು ಪಾಸುಮಾಡಿದ ಹಾಗಾಗುವದು? ಪ್ರಜಾಸತ್ತೆಯ ಈಗಿನ ದಿನಗಳಲ್ಲಿ ಪಾಸುಮಾಡಲಾದ ಕಾನೂನುಗಳು ಶಾಸನಸಭೆಯಲ್ಲಿ ಬಹುಮತಗಳಿಸಿದರೆ ಕಾರ್ಯದ ಅರ್ಧಭಾಗವಾದಂತಾಯಿತು. ಜನಸಾಮಾನ್ಯರು ಅದನ್ನು ಮನಃಪೂರ್ವಕವಾಗಿ ಒಪ್ಪಿದರೆ ಕಾರ್ಯ ಪೂರ್ತಿಯಾದಂತಾಯಿತು. ಕಾರ್ಯ ಪೂರ್ತಿಯಾಗಬೇಕಾದರೆ, ಶಾಸನಕರ್ತರು ಸದಾ ಸಾರ್ವಜನಿಕರ ಸಂಪರ್ಕವಿಟ್ಟುಕೊಂಡು, ಅವರ ವಿಶ್ವಾಸ ಗಳಿಸಿ, ಅವರ ಮನದೊಲವನ್ನು ತಿಳಿದು, ಅವರ ಅವಶ್ಯಕತೆಗಳನ್ನು ಮನದಂದು, ಅವರ ಹಿತವನ್ನು ಮನದಂದು, ಸಮಾಜದ ಸಾರ್ವತ್ರಿಕ ಸುಖ, ನೆಮ್ಮದಿ, ಪ್ರಗತಿಯನ್ನು ಅನುಲಕ್ಷಿಸಿ, ಕಾನೂನು ಮಾಡಬೇಕಾಗುವುದು. ಹಾಗೆ ಮಾಡಿದಾಗ, ಪ್ರಜಾಸತ್ತೆಯು ಯಥಾರ್ಥತೆಯನ್ನು ಪಡೆಯುವುದು. ಹಾಗೆ ಮಾಡಿದಾಗ, ಸಮಾಜಕ್ಕೂ ಕಾನೂನುಗಳಿಗೂ ಸಾಮರಸ್ಯವುಂಟಾಗುವುದು.

ಹಾಗೆ ಮಾಡದಿದ್ದರೆ, ನೈಸರ್ಗಿಕ ರಚನೆಯಾದ ಸಮಾಜವು ತನ್ನ ಸಜೀವ ಅಂತಃಸ್ಸತ್ವದಮೂಲಕ ತನ್ನ ದಾರಿಯನ್ನು ಅದು ಹಿಡಿಯುವುದು. ಕೃತ್ರಿಮ ಸಂಘಟನೆಯಾಗಿರುವ ಪ್ರಜಾಸತ್ತೆಯ ಶಾಸನಾಂಗವು ಸಮಾಜದ ವಿರೋಧವನ್ನು ಎದುರಿಸಬೇಕಾಗುವುದು. ಈ ತುರುಸಿನಲ್ಲಿ ಕೊನೆಗೆ ನಿಸರ್ಗಶಕ್ತಿಗೇ ವಿಜಯವು ಕಟ್ಟಿಟ್ಟದ್ದು ಎಂದು ಇದುವರೆಗಿನ ಮಾನವೇತಿಹಾಸವು ಸಾರಿಸಾರಿ ಹೇಳುವುದು. ಆದುದರಿಂದ ಸಮಾಜವನ್ನೂ ಅದರ ರಚನೆಯನ್ನೂ ಅದರ ಗತಿಶಕ್ತಿಯನ್ನೂ ಅದರ ಅಂತಸ್ಸತ್ವವನ್ನೂ ಅದರ ಅಭಿವ್ಯಕ್ತಿಶಕ್ತಿಯನ್ನೂ ಮನದಂದು, ಅಳೆದು, ಅನುರೂಪವಾದ ಪ್ರಗತಿಪರವಾದ, ಸಾಮಾಜಿಕ ಮನ್ನಣೆ ಪಡೆಯಬಹುದಾದ, ಸಂಪ್ರದಾಯ, ರೂಢಿ, ಪದ್ಧತಿಗಳಿಗೆ ವಿರೋಧವಾಗದಂತಹ ಕಾನೂನುಗಳನ್ನು ಮಾಡುವುದು ಶಾಸನಕರ್ತರ, ಸಮಾಜದ ಹಿತದ ದೃಷ್ಟಿಯಿಂದ ಒಳ್ಳೆಯ ರೀತಿಯೆಂದು ಹೇಳಬಹುದು. ಸಮಾಜವು ಬಹು ವ್ಯಾಪಕವಾದ ಶಕ್ತಿಯು. ರಾಜಕೀಯವು ಅದರಲ್ಲಿನ ಒಂದು ಅಂಗವು; ಸಂರಕ್ಷಕಾಂಗವು ಎಂಬುದನ್ನು ಭ್ರಮೆಯಿಂದ ಮರೆಯದೆ ಸಾಗಬೇಕು. ಸಮಾಜದ ಸುಧಾರಣೆ ಮಾಡಬೇಕಾದರೂ ಸಮಾಜದ ಒಲವನ್ನು ಹಿಡಿದೇ ಮಾಡಬೇಕು; ಅದೇ ಕೊನೆಬಾಳುವುದು. ಸತ್ತಾಧಿಕಾರವಿದೆಯೆಂದು ಶಾಸನಗಳನ್ನು ಮಾಡಿದರೆ, ಸಮಾಜವು ತನ್ನ ಅಂತಃಸತ್ವವನ್ನು ಪ್ರಕಟಿಸಿ ಶಾಸನಗಳನ್ನು ನಿರರ್ಥಕ ಮಾಡುವುದು. ಏಕೆಂದರೆ ಸಮಾಜವು ಒಂದು ಸಾಮೂಹಿಕ ಭಾವನೆ. ಶಾಸನವು ಒಂದು ಬೌದ್ಧಿಕ ಪ್ರಕ್ರಿಯೆ. ಬುದ್ಧಿಭಾವನೆಗಳಲ್ಲಿ ತಾಕಲಾಟವುಂಟಾದರೆ, ಭಾವನೆಗೆ ಗೆಲವು ಎಂಬುದು ನಿರ್ಣಯಿತವಾದ ಸಂಗತಿ, ಅದು ಸರಿಯಿರಲಿ; ತಪ್ಪಿರಲಿ; ಭಾವನೆಯ ರಭಸವೇ ಮೇಲುಗೈ ಪಡೆವುದು. ಶ್ರದ್ಧೆಯೆ ಶಾಸನದ ಬೆನ್ನೆಲಬಾಗಬೇಕು. ಆಗ ಭಾವನಾಪೋಷಿತ ಸಮಾಜವು ಬುದ್ಧಿಪ್ರಚೋದಿತ ಶಾಸನಗಳಿಗೆ ಮನ್ನಣೆ ಕೊಡುವುದು. ಸಮಾಜಕ್ಕೆ ಕಾನೂನುಗಳು ಹಿತಕಾರಿಯಾಗುವುವು. ಇಲ್ಲವಾದರೆ, ಕಾನೂನುಗಳು ಕಾಗದದಲ್ಲಿ ಉಳಿವುವು; ಸಮಾಜವು ಮುಂದರಿಯುವುದು-ತನ್ನದೇ ಆದ ನೈಸರ್ಗಿಕ ರೀತಿಯಲ್ಲಿ.

ವೇಣು ಗಾನ



ಶ್ರೀ ಸಮಾಶ್ಲಿಷ್ಟ ಧರ್ಮಾವತಾರಂ ವರಂ ।
ವಾಸುದೇವಂ ಶ್ರಿತರ್ಗಾತ್ಮಸಾನ್ನಿಧ್ಯಮಂ ॥
ಆಶೆಯೋರೊರ್ವ್ವರುಂ ಪಟ್ಟವೊಲ್ ಸೃಷ್ಟಿಸಲ್ ।
ರಾಸಕವ್ಯಾಜದಿಂ ವೇಣುವಿಂ ಪಾಡಿದಂ ॥ ೧ ॥

ನೀರೆಯುಂ ನೀರೆಯುಂ ಮಧ್ಯದೊಳ್ ಶೌರಿಯುಂ ।
ಶೌರಿಯುಂ ಶೌರಿಯುಂ ಮಧ್ಯೆ ಸಿಂಗಾರಿಯುಂ ॥
ಈ ರಸಾವರ್ತದಾ ನಾಭಿಯೊಳ್ ನಿಂದು ಸಂ-
ಸಾರಸಾರಾಕರಂ ವೇಣುವಿಂ ಪಾಡಿದಂ ॥ ೨ ॥

ಮೇಘವೆಂದೊಲ್ದು ತದ್ವರ್ಣದಿಂ ಕೇಕಿಗಳ್ ।
ಸೋಗೆ ನೃತ್ಯಂ ಗೆಯಲ್ ಪದ್ಮಕಾಸಾರದಿಂ ॥
ಪೋಗಲೆಂದೇಳ್ದ ಹಂಸಂಗಳಂ ನಿಲ್ಲಿಪಾ ।
ರಾಗದಿಂ ಕೃಷ್ಣನಾ ವೇಣುವಿಂ ಪಾಡಿದಂ ॥ ॥ ೩ ॥

ಇತ್ತ ವೀಣಾಪ್ರವೀಣ ಸ್ವರಾಕಂಪನಂ ।
ಅತ್ತ ವೀಣಾನುಕೃತ್ಕಿಂಕಿಣೀ ನರ್ತನಂ ॥
ಮತ್ತಮಿನ್ನತ್ತ ವೀಣಾನುರಾಗಸ್ವನಂ ।
ಮುತ್ತುವೊಲ್ ಮಾಧವಂ ವೇಣುವಿಂ ಪಾಡಿದಂ ॥ ೪ ॥

ಹೇಮಭೂಷೋಲ್ಲಸತ್ಕಾಮಿನೀ ಲೋಕದಾ ।
ಪ್ರೇಮ ನೇತ್ರಂಗಳಿಂ ಚುಂಬಿತಂ ಸುಸ್ಮಿತಂ ॥
ಗೋಮುದಂ ಗೋಪಗೋಪೀಕುಲಾರಾಧಿತಂ ।
ಕಾಮುಕಂ ಮೋಹಕಂ ವೇಣುವಿಂ ಪಾಡಿದಂ ॥ ೫ ॥

ಮೌಳಿಪುಷ್ಪಂಗಳೊಳ್ ಪಾರ್ಶ್ವ ಭೃಂಗಾಳಿಯಿಂ ।
ಬಾಲೆ ತಾನಂಜಿ ಬಳ್ಕುತ್ತೆ ಬಂದಪ್ಪಿರಲ್ ॥
ಚೇಲ ಜಾರಿರ್ದ್ದರೋಜಾತ ಮೊತ್ತುತ್ತೆ ಹಾ ।
ಕೇಳಿಯೊಳ್ ಕೇಶವಂ ವೇಣುವಿಂ ಪಾಡಿದಂ ॥ ೬ ॥

ಹೊನ್ನಮೆಯ್ ಕಾಂತಿಯಾ ಕನ್ನೆಯರ್ ಚೆನ್ನೆಯರ್ ।
ನನ್ನಿಯಿಂ ಸೇರಿ ವೃಂದಾವನಂ ರಂಜಿಸಲ್ ॥
ತನ್ನುರಂ ವೈಜಯಂತೀ ಸರೋದ್ಭಾಸುರಂ ।
ಚೆನ್ನಿಗಂ ಕಣ್ಸೊಗಂ ವೇಣುವಿಂ ಪಾಡಿದಂ ॥ ೭ ॥

ಲಾಸಕೀ ನೃತ್ಯದಾ ಕಾಲವಿನ್ಯಾಸದಿಂ ।
ರಾಸ ಸಂಮೇಳ ಸಂಗೀತದಿಂ ಪ್ರೀತಿಯಿಂ ॥
ಸೂಸುತಂ ಪುರ್ಬ್ಬಿನಾ ಸನ್ನೆಯಿಂ ಮೆಚ್ಚುತಂ ।
ಕೇಶವಂ ಮಾಧವಂ ವೇಣುವಿಂ ಪಾಡಿದಂ ॥ ೮ ॥

ಇಂದಿರಾ ರೂಪ ತಾರುಣ್ಯದಾ ರಾಧೆಯಾ ।
ಮಂದಿರಾರಾಮದೊಳ್ ಪಾರಿಜಾತ ದ್ರುವಂ ॥
ತಂದು ನೆಟ್ಟಾತನಾ ಯಾಮುನೀ ಕುಂಜದೊಳ್ ।
ಸುಂದರಂ ಶ್ರೀಧರಂ ವೇಣುವಿಂ ಪಾಡಿದಂ ॥ ೯ ॥

ದೇವಕೀನಂದನಂ ವಿಶ್ವಹೃಚ್ಜೀವನಂ ।
ಪಾವನೋದ್ಗೇಯದಿಂ ವೈಣವಾಮ್ನಾಯದಿಂ ॥
ಭಾವಪೀಯೂಷ ವೀಚೀ ಪ್ರವಾಹಂಗಳೊಳ್ ।
ಜೀವರಂ ಮಜ್ಜನಂ ಗೆಯ್ಸಿದಂ ಚಿದ್ಘನಂ ॥ ೧೦ ॥

ಡಿ. ವಿ. ಜಿ.

ಅರಿಕೆ:— ೨ ರಿಂದ ೯ ರ ವರೆಗಿನ ಪದ್ಯಗಳು ಲೀಲಾಶುಕ ಯೋಗಿಯ ಸಂಸ್ಕೃತ " ಕೃಷ್ಣಕರ್ಣಾಮೃತ " ಪದ್ಯಗಳ ಛಾಯಾನುವಾದಗಳು.

ಕೊರತೆಯ ಹಣಕಾಸಿನ ಆಡಳಿತೆ

ಲೇಖಕರು:— ಶ್ರೀ. ಪಿ. ಎನ್. ನರಸಿಂಗರಾವ, ಎಂ. ಎ., ಪ್ರಿನ್ಸಿಪಾಲ, ರಾಣಿ ಪಾರ್ವತಿದೇವಿ ಕಾಲೇಜ, ಬೆಳಗಾವಿ

ಇತ್ತಿತ್ತಲಾಗಿ ಅರ್ಥಶಾಸ್ತ್ರಜ್ಞರ ಗಮನವನ್ನು ಹೆಚ್ಚಾಗಿ ಸೆಳೆಯುತ್ತಿರುವ ವಿಷಯವೆಂದರೆ ಕೊರತೆಯ ಹಣಕಾಸಿನ ಆಡಳತೆ. ವಿಷಯವೇನೂ ಹೊಸದಲ್ಲವಾದರೂ ಇತ್ತೀಚೆ ಅದರ ಚರ್ಚೆ ಬಹಳ ನಡೆಯುತ್ತಿದೆ. ಈ ವಿಷಯವಾಗಿ ಕ್ರೈಸ್ತವಾಸಿ ಲಾರ್ಡ ಕೈನ್ಸರವರು (Lord Keynes) ವಿಸ್ತಾರವಾಗಿ ಮಾತಾಡಿದ್ದಾರೆ. ಇದನ್ನು ಶಿಫಾರಸು ಮಾಡುವಲ್ಲಿ ಅವರೇ ಪ್ರಥಮ ಮತ್ತು ದೊಡ್ಡ ಅರ್ಥಶಾಸ್ತ್ರಜ್ಞರು. ಹಿಂದುಳಿದ ರಾಷ್ಟ್ರಗಳಲ್ಲಿ ವಿಕಾಸ ಯೋಜನೆಗಳಿಗೆ ಹಣಕಾಸನ್ನು ಸರಬರಾಜು ಮಾಡುವಲ್ಲಿ ಇದೊಂದು ಮಾರ್ಗ. ಇಂಥ ದೇಶಗಳಲ್ಲಿ ಬಂಡವಾಳದ ಕೊರತೆಗಾಗಿ ದೇಶದ ಆರ್ಥಿಕ ಬೆಳವಣಿಗೆಯನ್ನು ತಡೆಹಿಡಿಯಬಾರದು. ವಾರ್ಷಿಕ ಆಯವ್ಯಯ ಅಂದಾಜಪಟ್ಟಿಯಲ್ಲಿ ಕೊರತೆಯಿದ್ದರೂ ಚಿಂತೆಯಿಲ್ಲ. ಸರಕಾರವು ವಿಕಾಸಯೋಜನೆಗಳಲ್ಲಿ ಮುಕ್ತಹಸ್ತದಿಂದ ಹಣವನ್ನು ವೆಚ್ಚ ಮಾಡಬೇಕು. ಈ ಕೊರತೆಯನ್ನು ಕಾಗದ ಹಣವನ್ನು (ಕರೆನ್ಸಿ ನೋಟುಗಳನ್ನು) ವಿಸ್ತರಿಸಿ ತುಂಬಿಕೊಳ್ಳಬಹುದಾಗಿದೆ. ಹೀಗೆ ಒದಗಿಸಿದ ಹೆಚ್ಚಿನ ಹಣವು ಜನರ ಉತ್ಪನ್ನವನ್ನು ಹೆಚ್ಚಿಸುವುದು. ಇದರಿಂದಾಗಿ ಬಳಕೆಯ ವಸ್ತುಗಳ ಬಗೆಗೆ ಹೆಚ್ಚಿನ ಬೇಡಿಕೆ ಬರುವದು; ಉಪಯೋಗಿಸದಿರುವ ಸಾಧನ ಸಂಪತ್ತುಗಳು ಹೇರಳವಾಗಿರುವುದರಿಂದ ಹುಟ್ಟುವಳಿ ಬೆಳೆಯುವದು. ಇದರಿಂದಾಗಿ ಬಳಕೆಯ ವಸ್ತುಗಳ ಬೆಲೆಗಳು ಕೆಲಕಾಲದ ವರೆಗೆ ಬೆಳೆದುಹೋಗಬಹುದಾದರೂ ಕೊನೆಯಲ್ಲಿ ಬೆಲೆಗಳಲ್ಲಿ ಬದಲಾವಣೆ ಕಂಡುಬರುವುದಿಲ್ಲ; ಏಕೆಂದರೆ ಹುಟ್ಟುವಳಿಯೂ ಅತಿಯಾಗಿ ಬೆಳೆದು ಹೋಗುತ್ತದೆ.

ಕೊರತೆಯ ಹಣಕಾಸಿನ ಆಡಳತೆ ಮತ್ತೊಂದು ಎಡೆಯಲ್ಲಿ ಗ್ರಾಹ್ಯವಾಗಿದೆ. ನಿರುದ್ಯೋಗವು ಮಿತಿಯಿಲ್ಲದೆ ಬೆಳೆದು ಹೋದ ಸಮಯದಲ್ಲಿ ಎಲ್ಲ ಉಪಾಯಗಳನ್ನು ಕೈಕೊಂಡು ಉದ್ಯೋಗ ವ್ಯಾಪ್ತಿಯನ್ನು ಹೆಚ್ಚಿಸಲು ಸರಕಾರವು ಪ್ರಯತ್ನಿಸುವುದು ವಿಹಿತವು. ಉದಾಹರಣೆಗಾಗಿ, ಸರಕಾರವು ಸಾರ್ವಜನಿಕ ಕಾಮಗಾರಿಗಳನ್ನು ಪ್ರಾರಂಭಿಸಿ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿ ಕೊಡಬೇಕು. ಸರಕಾರವು ಮತ್ತು ಡಿಸ್ಟ್ರಿಕ್ಟ ಬೋರ್ಡುಗಳಂಥ ಸಾರ್ವಜನಿಕ ಸಂಸ್ಥೆಗಳು ಮಾರ್ಗಗಳನ್ನು, ಕಟ್ಟಡಗಳನ್ನು ಮತ್ತು ಸಂಕಗಳನ್ನು ಕಟ್ಟುವ ಕಾರ್ಯಗಳನ್ನು ಕೈಕೊಳ್ಳಬೇಕು. ಇವುಗಳಿಂದ ಉದ್ಯೋಗಗಳನ್ನು ಕಳೆದುಕೊಂಡವರಿಗೆ ಉದ್ಯೋಗವು ದೊರೆಯುವಂತಾಗುವದು. ಹೀಗೆ ಹೆಚ್ಚು ಜನರು ಉದ್ಯೋಗದಲ್ಲಿ ತೊಡಗಿದಂತೆ ಜೀವನಾವಶ್ಯಕ ವಸ್ತುಗಳಿಗಾಗಿ ಹೆಚ್ಚು ಬೇಡಿಕೆ ಬರುತ್ತದೆ. ಬೇಡಿಕೆಗೆ ಅನುಸಾರವಾಗಿ ವಸ್ತುಗಳ ಹುಟ್ಟುವಳಿ ಹೆಚ್ಚಬೇಕಾಗುತ್ತದೆ ಮತ್ತು ವಸ್ತುಗಳ ಹುಟ್ಟುವಳಿ ಬೆಳೆದಂತೆ ಉದ್ಯೋಗದ ವ್ಯಾಪ್ತಿಯೂ ಬೆಳೆಯುತ್ತದೆ. ಕಾರಣ, ನಿರುದ್ಯೋಗದ ಸಮಯದಲ್ಲಿ ಸರಕಾರ ಮತ್ತು ಸ್ಥಾನಿಕಸ್ವರಾಜ್ಯ ಸಂಸ್ಥೆಗಳು ಮುಕ್ತಹಸ್ತದಿಂದ ಹಣವನ್ನು ವೆಚ್ಚಮಾಡಲು ಮುಂದೆ ಬರಬೇಕು. ಇದಕ್ಕಾಗಿ ದೇಶದ ಆಯವ್ಯಯದ ಅಂದಾಜಪಟ್ಟಿಯೊಳಗಿನ ಕೊರತೆಯನ್ನು ಕಾಗದ ಹಣವನ್ನು (ಕರೆನ್ಸಿ ನೋಟುಗಳನ್ನು) ಹೊರಡಿಸಿ ತುಂಬಿಕೊಳ್ಳಬೇಕು. ಲಾರ್ಡ ಕೈನ್ಸರವರ ಅಭಿಪ್ರಾಯದ ಮೇರೆಗೆ ಮಿತಿಮೀರಿದ ನಿರುದ್ಯೋಗದ ಸಮಯದಲ್ಲಿ ಕೊರತೆಯ ಹಣಕಾಸಿನ ಆಡಳತೆಯು ಸಮರ್ಥನೀಯವು. ಅದುದರಿಂದ ಅಂತಹ ಸಮಯದಲ್ಲಿ ಸರಕಾರವು ಹೆಚ್ಚು ಕರೆನ್ಸಿ ನೋಟುಗಳ ಚಲಾವಣೆಯನ್ನು ವಿಸ್ತರಿಸುವಲ್ಲಿ ಹಿಂದೆ ಮುಂದೆ ನೋಡಬಾರದು. ಏಕೆಂದರೆ, ಈ ಸಂದರ್ಭದಲ್ಲಿ ಜನರಿಗೆ ಹೆಚ್ಚು ಉದ್ಯೋಗವನ್ನು ಕಲ್ಪಿಸಿಕೊಡುವುದೇ ಮುಖ್ಯ ಉದ್ದೇಶವಾಗಿದೆ. ಕೈನ್ಸರವರು ತಮ್ಮ ಒಂದು ಬಹಳ ಪ್ರಸಿದ್ಧವಾದ ಪುಸ್ತಕದಲ್ಲಿ ಹೀಗೆ ನುಡಿದಿದ್ದಾರೆ: “ಸರಕಾರದವರು ಹಳೇ ಬಾಟ್ಲಗಳಲ್ಲಿ ಕರೆನ್ಸಿ ನೋಟುಗಳನ್ನು ತುಂಬಿ ಅವುಗಳನ್ನು ನಿರುಪಯೋಗಿಯಾದ ಒಂದು ಗಣಿಯಲ್ಲಿ ಆಳವಾಗಿ ಹುಗಿದು ಅವುಗಳ ಮೇಲೆ ನಗರದ ಕಸಕಡ್ಡಿಗಳನ್ನು ಹಾಕಿ ತುಂಬಿಸಬೇಕು. ಆ ಮೇಲೆ ಸೂಕ್ತವಾದ ತಾಟಸ್ಥ್ಯವೃತ್ತಿಯಲ್ಲಿದ್ದುಕೊಂಡು ಆ ನೋಟಿನ ಬಾಟ್ಲಗಳನ್ನು ಅಗಿದು ತೆಗೆದುಕೊಳ್ಳುವ ಗುತ್ತಿಗೆಯನ್ನು ಖಾಸಗಿ ಉದ್ಯಮಿಗಳಿಗೆ ಬಿಟ್ಟುಕೊಡಬೇಕು. (ಹೀಗೆ ಅಗಿದು ತೆಗೆಯುವ ಗುತ್ತಿಗೆಯ ಸ್ವಾಮ್ಯವನ್ನು ಟೆಂಡರುಗಳ ಮೂಲಕ ಒಪ್ಪಿಸಿಕೊಡಬೇಕು) ಇದರಿಂದಾಗಿ ಮುಂದೆ ಹೆಚ್ಚು ನಿರುದ್ಯೋಗವು ಉಳಿಯುವ ಶಕ್ಯತೆಯೇ ಇಲ್ಲ. ಮತ್ತು ಅದರ ಪ್ರತಿಕ್ರಿಯೆಯಿಂದಾಗಿ ಸಮಾಜದ ನೈಜ ಉತ್ಪನ್ನವು ಮತ್ತು ಬಂಡವಾಳವು ಇದ್ದುದಕ್ಕಿಂತ ಎಷ್ಟೋ ಪಾಲು ಹೆಚ್ಚಾಗುವುದು. ಮನೆ ಮುಂತಾದವುಗಳನ್ನು ಕಟ್ಟುವುದು ಹೆಚ್ಚು ಯೋಗ್ಯ. ಆದರೆ ಇಂಥಲ್ಲಿ ರಾಜಕೀಯ ಮತ್ತು ಪ್ರಾಯೋಗಿಕ ತೊಂದರೆಗಳಿದ್ದರೆ ಏನೂ ಇಲ್ಲದಿರುವುದಕ್ಕಿಂತ ಮೇಲೆ ಹೇಳಿದ ಉಪಾಯವು ಹೆಚ್ಚು ಯೋಗ್ಯವೆಂದು ತಿಳಿಯಬೇಕು.”

> ಆರ್ಥಿಕ ಮುಗ್ಗಟ್ಟು, ಅದರ ದುಷ್ಪರಿಣಾಮ ಇವುಗಳಿಂದ ರಕ್ಷಿಸಿಕೊಳ್ಳಬೇಕಾದರೆ ಉದ್ಯೋಗ ವಿಸ್ತಾರವನ್ನು ಮಾಡುವದು ಅವಶ್ಯವಾಗುವದು. ಅಂಥ ಸಮಯದಲ್ಲಿ ಸರಕಾರವು ಕೊರತೆಯ ಹಣಕಾಸಿನ ಆಡಳತೆಯನ್ನು ಆಶ್ರಯಿಸಬಹುದು. ಉದ್ಯೋಗವನ್ನು ವಿಸ್ತರಿಸುವಲ್ಲಿ ಇದೊಂದೇ ಸಾಧನವಾಗಿದ್ದರೆ ಮಾತ್ರ ಇದು, ಸಮರ್ಥನೀಯವಾಗುತ್ತದೆ. ಕೊರತೆಯ ಹಣಕಾಸಿನ ಆಡಳತೆಯು ಕೊನೆಯದಾದ ಅಸ್ತ್ರವಾಗಿರಬೇಕು.

ಹಿಂದುಳಿದ ದೇಶಗಳಲ್ಲಿ ವಿಕಾಸ ಯೋಜನೆಗಳಿಗೆ ಹಣಕಾಸನ್ನು ಒದಗಿಸುವ ಮಾರ್ಗಗಳಲ್ಲಿ ಕೊರತೆಯ ಹಣಕಾಸಿನ ಆಡಳತೆಯು ಅಂಗೀಕೃತ ಮಾರ್ಗವೆಂದು ಈಗ ಎಷ್ಟೋ ಅರ್ಥಶಾಸ್ತ್ರಜ್ಞರು ಬಗೆಯುತ್ತಾರೆ. ಈ ಮಾರ್ಗಕ್ಕೆ ಗಂಭೀರವಾದ ಆಕ್ಷೇಪಣೆಗಳಿರಬಹುದಾಗಿದೆ. ಕೈನ್ಸರು ಈ ಸಂದರ್ಭದಲ್ಲಿ ತಮ್ಮ ಕೊನೆಯ ನಿರ್ಣಯವನ್ನಿತ್ತಿಲ್ಲ. ಕೆಲವು ದೇಶಗಳ ಇತ್ತೀಚಿನ ಆರ್ಥಿಕ ಇತಿಹಾಸವು ಕೊರತೆಯ ಹಣಕಾಸಿನ ಆಡಳತೆಯಲ್ಲಿರುವ ಗಂಡಾಂತರಗಳನ್ನು ಒತ್ತಿ ಹೇಳಿದೆ. ಆದರೆ ಕೈನ್ಸರ ವಿಧಾನವು ಕೆಲವು ಗ್ರಹಿಕೆಗಳನ್ನವಲಂಬಿಸಿದೆ. ಕಡಿಮೆ ವಿಕಾಸಗೊಂಡ ದೇಶದಲ್ಲಿ ವಿಕಾಸ ಯೋಜನೆಗಳಿಗೆ ಹೆಚ್ಚು ಹಣವನ್ನು ವೆಚ್ಚಮಾಡಿದರೆ ಅನುಪಯುಕ್ತ ಆರ್ಥಿಕ ಸಾಧನ ಸಾಮಗ್ರಿಗಳು ಸಂಪೂರ್ಣವಾಗಿ ಉಪಯೋಗಹೊಂದುತ್ತವೆ; ಹುಟ್ಟುವಳಿಯೂ ಅತಿಶಯ ಹೆಚ್ಚುತ್ತದೆ; ಜನರೂ ಪೂರ್ಣವಾಗಿ ಉದ್ಯೋಗಸ್ಥರಾಗುತ್ತಾರೆ. ಹುಟ್ಟುವಳಿಯ ಪ್ರಮಾಣವು ಹೆಚ್ಚಿದಂತೆ ಜೀವನಾವಶ್ಯಕ ವಸ್ತುಗಳ ಬೆಲೆ ಏರುವುದಿಲ್ಲ. ಇದು ಹಣದ ಹೆಚ್ಚಳದ ಪರಿಣಾಮ. ಕೊರತೆಯ ಹಣಕಾಸಿನ ಆಡಳತೆಯಿಂದ ಉಂಟಾದ ಹಣದ ಹೆಚ್ಚಳದಿಂದ ಹುಟ್ಟುವಳಿಯು ಬೆಳೆಯಲಾರದೆಂಬುದು ಅನುಭವದ ಮಾತು. ವಿಕಾಸವಾಗಬೇಕಾದ ಉದ್ಯಮಗಳಿಗೆ ಹೆಚ್ಚು ಹೆಚ್ಚು ಕೂಲಿಕಾರರು ಬೇಕಾಗಬಹುದು. ಆಗ ಸಾಕಷ್ಟು ಕೂಲಿಕಾರರು ದೊರೆಯದಿರಬಹುದು. ಎಷ್ಟೋ ಕೂಲಿಕಾರರು ನಿರುದ್ಯೋಗಿಗಳಾಗಿದ್ದರೂ ಈ ಉದ್ಯಮಗಳಲ್ಲಿ ದುಡಿಯಲು ಅವರು ಒಪ್ಪದಿರಬಹುದು. ಕೂಲಿಕಾರರು ಒಂದು ಉದ್ಯಮದಿಂದ ಮತ್ತೊಂದಕ್ಕೆ ಅಥವಾ ಒಂದು ಸ್ಥಳದಿಂದ ಮತ್ತೊಂದಕ್ಕೆ ಸುಲಭವಾಗಿ ಹೋಗುವುದಿಲ್ಲ. ಈ ಕಾರಣಗಳಿಂದ ಕೆಲವು ಉದ್ಯಮಗಳಲ್ಲಿ

ಹುಟ್ಟುವಳಿಯನ್ನು ಹೆಚ್ಚಿಸುವುದು ದುಸ್ತರವಾಗಬಹುದು. ಒಂದು ವೇಳೆ ಕೂಲಿಕಾರರು ದೊರೆಯುಬಹುದಾದರೆ ಯಾಂತ್ರಿಕ ಸಾಮುಗ್ರಿಗಳು ದೊರೆಯದೆ ಹೋಗಬಹುದು. ಎಷ್ಟೋ ಸಲ ಯಾಂತ್ರಿಕ ಸಾಮುಗ್ರಿಗಳ ಅಭಾವದಿಂದ ಔದ್ಯೋಗಿಕ ಬೆಳವಣಿಗೆಯು ನಿಂತು ಹೋಗುತ್ತದೆ. ಮತ್ತೊಂದು ಅವಶ್ಯಕ ಸಂಗತಿಯೆಂದರೆ, ತಾಂತ್ರಿಕ ನಿಪುಣತೆ. ಇದರ ಅಭಾವದಿಂದಲೂ ಹುಟ್ಟುವಳಿಯನ್ನು ಹೆಚ್ಚಿಸುವುದು ದುಸ್ತರವಾಗಬಹುದು. ಆದುದರಿಂದ ಆರ್ಥಿಕ ಬೆಳವಣಿಗೆಗಾಗಿ ಹೆಚ್ಚು ಹಣ ವೆಚ್ಚ ಮಾಡಿದರೆ ಹುಟ್ಟುವಳಿಯು ಹೆಚ್ಚಳವಾದಂತಾಗಲಿಲ್ಲ. ಹುಟ್ಟುವಳಿಯು ಹೆಚ್ಚಾಗದಿದ್ದರೆ ವಸ್ತುಗಳ ಬೆಲೆಗಳು ಏರುತ್ತವೆ. ನಿಯಮಿತ ವರಮಾನವಿರುವವರ ಸ್ಥಿತಿ ಕಷ್ಟಕ್ಕೀಟ್ಟು ಕೊಳ್ಳುತ್ತದೆ. ಆದುದರಿಂದ ಕಡಿಮೆ ವಿಕಾಸಗೊಂಡ ದೇಶಗಳಲ್ಲಿಯೂ ಕೊರತೆಯ ಹಣಕಾಸಿನ ಆಡಳಿತೆಯು ಗಂಡಾಂತರಗಳಿಂದ ತುಂಬಿಕೊಂಡಿರುವಂತಾಗಿದೆ.

ಇನ್ನು ಹಿಂದುಸ್ತಾನವನ್ನುದ್ದೇಶಿಸಿ ಕೊರತೆಯ ಹಣಕಾಸಿನ ಆಡಳಿತೆಯನ್ನು ಚರ್ಚಿಸೋಣ. ಈ ವಿಷಯವು ಈ ದೇಶದಲ್ಲಿ ಬಹಳ ಮಹತ್ವ ಪಡೆದಿದೆ. ಹಿಂದುಸ್ತಾನವು ಆರ್ಥಿಕದೃಷ್ಟಿಯಿಂದ ಬಹಳ ಹಿಂದುಳಿದಿದೆಯೆಂಬುದು ವಿದಿತವೇ. ಅದು ಪಾಶ್ಚಿಮಾತ್ಯ ದೇಶಗಳಿಗಿಂತ ಬಹಳ ಹಿಂದುಳಿದುದು. ಆದರೆ ಅದರ ಆರ್ಥಿಕ ಸಾಧನ ಸಾಮುಗ್ರಿಗಳು ಅಗಣ್ಯವಾಗಿವೆ. ಜನರು ಮತ್ತು ವಸುಗಳೆಂಬ ಸಾಧನಗಳ ಬಹುದೊಡ್ಡ ಭಾಗವು ಉಪಯೋಗಿಸಲಾಗಿರುವುದಿಲ್ಲ. ದೇಶವನ್ನು ವಿಕಾಸಗೊಳಿಸುವ ಮಾರ್ಗದಲ್ಲಿ ಬಹಳ ದೊಡ್ಡದೊಂದು ಅಡಚಣಿಯೆಂಡರೆ ಬಂಡವಾಳದ ಕೊರತೆ. ಅದನ್ನು ನೀಗಲು ಎಷ್ಟೋ ಜನರು ಕೊರತೆಯ ಹಣಕಾಸಿನ ಆಡಳಿತೆಯನ್ನು ಸಮರ್ಥಿಸಿದ್ದಾರೆ. ಇದನ್ನು ಮುಂಬಯಿ ಯೋಜಕರು (Authors of the Bombay Plan) ಶಿಫಾರಸು ಮಾಡಿದ್ದಾರೆ. ಅವರ ಯೋಜನೆಗೆ ಬಹಳಷ್ಟು ಹಣದ ವೆಚ್ಚ ಹಿಡಿಯುತ್ತದೆ. ಆ ವೆಚ್ಚದ ಒಂದು ಭಾಗವು ಕಾಗದ ಹಣದ (ಕರೆನ್ಸಿ ನೋಟಗಳ) ಏರ್ಪಾಡಿನಿಂದಾಗಬೇಕಾಗಿದ್ದಿತು. ಆದರೆ ಆ ಯೋಜನೆಯು ಕಾರ್ಯಗತವಾಗಲೇ ಇಲ್ಲ. ಆದರೆ ಈಗ ನಿಶ್ಚಿಷ್ಟವಾದೊಂದು ಆರ್ಥಿಕ ವಿಕಾಸ ಯೋಜನೆಯು ಮುಂದೆ ಬಂದಿದೆ. ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸಲು ಬೇಕಾಗುವ ಅಗಣ್ಯ ಬಂಡವಾಳವನ್ನು ಹೇಗೆ ಒದಗಿಸಲಾಗುತ್ತಿದೆಂಬುದನ್ನು ವಿಚಾರಿಸೋಣ. ಈ ಯೋಜನೆಗೆ ೨೦೬೯ ಕೋಟಿ ರೂಪಾಯಿಗಳ ವೆಚ್ಚವು ಹಿಡಿಯುತ್ತದೆ. ಇದರಲ್ಲಿ ೭೩೮ ಕೋಟಿ ರೂಪಾಯಿಗಳು ಕಂದಾಯದ ಉಳಿತಾಯಗಳಿಂದ ದೊರೆಯಬಹುದೆಂದು ಅಂದಾಜ ಮಾಡಲಾಗಿದೆ. ಸರಕಾರವು ಸಾಲರೂಪವಾಗಿ ೫೨೦ ಕೋಟಿ ರೂಪಾಯಿಗಳನ್ನು ಎತ್ತಬಹುದು. ಹೀಗೆ ೧೨೫೮ ಕೋಟಿ ರೂಪಾಯಿಗಳು ದೊರೆಯುಬಹುದು. ಅಮೇರಿಕೆಯ ಸಂಯುಕ್ತರಾಜ್ಯದಿಂದ ಮತ್ತು ಜಾಗತಿಕ ಬೇಂಕ (World Bank) ದಿಂದ ೫೨೧ ಕೋಟಿ ರೂಪಾಯಿಗಳು ದೊರೆಯುವಂತಿವೆ. ಹೀಗಾದರೂ ೨೯೦ ಕೋಟಿ ರೂಪಾಯಿಗಳ ಕೊರತೆ ಉಳಿಯುತ್ತಿದೆ. ಇದಕ್ಕಾಗಿ ಕೊರತೆಯ ಹಣಕಾಸಿನ ಆಡಳಿತೆಯನ್ನು ಅವಲಂಬಿಸಲೇಬೇಕಾಗುತ್ತದೆ

'ಈಗಿನ ಪರಿಸ್ಥಿತಿಯಲ್ಲಿ ಕೊರತೆಯ ಹಣಕಾಸಿನ ಆಡಳಿತೆಯು ಸಾಧುವಾದುದೊ?' ಎಂಬ ಪ್ರಶ್ನೆಯನ್ನು ಬಹು ಜಾಗರೂಕತೆಯಿಂದ ಪರಿಶೀಲಿಸಬೇಕಾಗಿದೆ. ಅದರಿಂದ ಉತ್ಪಾದನೆಯು ಹೆಚ್ಚಾಗುತ್ತಿದ್ದರೆ ಅದು ಇಷ್ಟವೂ ಯೋಗ್ಯವಾದುದೂ ಎಂದಾಗುತ್ತದೆ. ಪ್ರಚಾರಗೊಳಿಸಿದ ಎಲ್ಲ ಹೆಚ್ಚಿನ ಕಾಗದ ಹಣ (ಕರೆನ್ಸಿ ನೋಟು) ವನ್ನು ಉತ್ಪಾದನೆಗಾಗಿ ಉಪಯೋಗಿಸಿದರೆ ಮತ್ತು ಅದರ ಪರಿಣಾಮವಾಗಿ ಉತ್ಪಾದನೆಯು ಹೆಚ್ಚಾದರೆ ಅದು ದೇಶಕ್ಕೆ ಲಾಭವೇ. ಹೀಗಾದಲ್ಲಿ ದೇಶದ ಆರ್ಥಿಕ ಸಾಧನ ಸಾಮುಗ್ರಿಗಳು ಪೂರ್ಣವಾಗಿ ಬಳಸಲಾಗುವವು. ಮತ್ತು ಉದ್ಯೋಗಿಗಳ ವ್ಯಾಪ್ತಿಯು ಬೆಳೆಯುತ್ತದೆ. ಆದರೆ ನಮ್ಮ ದೇಶದಲ್ಲಿ ಕೊರತೆಯ ಹಣಕಾಸಿನ ಆಡಳಿತೆಯಿಂದ ಈ ಫಲವು ದೊರೆತೀತೆಂದು ಹೇಳಲಾಗದು. ಯುದ್ಧಕಾಲದ ಮತ್ತು ಯುದ್ಧಾನಂತರ ಕಾಲದ ಅನುಭವದಿಂದ ಉತ್ಪಾದನೆಯಲ್ಲಿ

ಹೆಚ್ಚಳವಾಗುವುದು ಅಸಾಧ್ಯವೆಂದು ಕಂಡುಬಂದಿದೆ. ಇದಕ್ಕೆ ಯಂತ್ರಗಳ ಅಭಾವ, ತಾಂತ್ರಿಕ ನಿಪುಣತೆಯ ಅಭಾವ, ಸಾರಿಗೆ ಸೌಕರ್ಯದ ಅಭಾವ ಮುಂತಾದವುಗಳೇ ಮುಖ್ಯ ತೊಂದರೆಗಳಾಗಿವೆ. ಈ ಕಾರಣಗಳಿಂದ ಉದ್ಯಮಗಳನ್ನು ಅತಿ ಪ್ರಯಾಸದಿಂದ ಆರಂಭಿಸಬಹುದಾಗಿದೆ. ಇದ್ದ ಉದ್ಯಮಗಳನ್ನು ಬೆಳೆಯಿಸಿಕೊಳ್ಳುವುದು ಅಷ್ಟೇ ದುಸ್ತರವಾಗಿದೆ. ಕೊರತೆಯ ಹಣಕಾಸಿನ ಆಡಳತೆಯೆಂದರೆ ಹೆಚ್ಚು ಕಾಗದ ಹಣದ (ಕರೆನ್ಸಿ ನೋಟು) ಚಲಾವಣೆ. ಇದರ ಪರಿಣಾಮದಿಂದ ಅನೇಕರಿಗೆ ಉದ್ಯೋಗ ದೊರೆಯಬಹುದು. ಆದರೆ ಇದರಿಂದ ಉತ್ಪಾದನೆ ಹೆಚ್ಚಾದೀತೆಂದು ಹೇಳಲಾಗುವುದಿಲ್ಲ. ಮಾತ್ರ ಹಣದ ಚಲಾವಣೆಯ ಮಿತಿಮೀರಿದ ಏರಿಕೆಯ ಭಯ ಇಲ್ಲಿದೆ. ಮೊದಲೇ ಹಣದ ಚಲಾವಣೆ ಮಿತಿಮೀರಿ ಏರಿದಾಗ ಈ ಭಯವನ್ನು ಎದುರಿಸಬಹುದೇ? ಹಣದ ಚಲಾವಣೆಯ ಏರಿಕೆಯಿಂದ ನಾವು ಎಷ್ಟು ಕಷ್ಟಕ್ಕೆ ಗುರಿಯಾಗಿದ್ದೇವೆಂಬುದು ನಮಗೆ ತಿಳಿದಿದೆ. ಬೆಲೆಗಳು ಇಳಿಮುಖವಾಗಲೊಲ್ಲವು. ಇದಕ್ಕೆ ಪ್ರತಿಯಾಗಿ ಈ ವರುಷದ ಆರಂಭದಿಂದಲೇ ಜೀವನ ವಸ್ತುಗಳ ಬೆಲೆಗಳಲ್ಲಿ ಸ್ಪಷ್ಟವಾದ ಏರಿಕೆ ಕಂಡುಬಂದಿದೆ. ಅದರಲ್ಲಿಯೂ ಆಹಾರ ವಸ್ತುಗಳ ಬೆಲೆ ಹೆಚ್ಚು ಏರಿದೆ. ಇಂತಹ ಸನ್ನಿವೇಶದಲ್ಲಿ ಕೊರತೆಯ ಹಣಕಾಸಿನ ಆಡಳತೆ ದೇಶದ ಆರ್ಥಿಕ ಸ್ಥಿತಿಗೆ ಬಹಳ ಕೇಡನ್ನು ಉಂಟುಮಾಡಬಹುದು.

ಆದರೂ ಹೀಗೆಯೇ ಎಂದು ನಿರ್ಣಯಿಸುವುದು ಕಷ್ಟ. ಏಕೆಂದರೆ ಆದರಲ್ಲಿ ಬೇರೆ ಕೆಲವು ವಿಚಾರಗಳಿವೆ. ನಮ್ಮ ದೇಶದಲ್ಲಿ ಪ್ರಾಮುಖ್ಯವಾಗಿ ಸುಶಿಕ್ಷಿತರಲ್ಲಿ ನಿರುದ್ಯೋಗವು ಅತಿಯಾಗಿ ಬೆಳೆದು ಬಂದಿದೆ. ಈ ನಿರುದ್ಯೋಗ ಸಮಸ್ಯೆ ಈಗಲೇ ಗಂಭೀರವಾಗಿಬಿಟ್ಟಿದೆ. ಅವರಿಗೆ ಉದ್ಯೋಗವನ್ನು ದೊರಕಿಸಿ ಕೊಡುವುದು ತೀರ ಆವಶ್ಯಕವಾಗಿದೆ. ಹೆಚ್ಚು ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೆ ಹೆಚ್ಚು ಬಂಡವಾಳವು ಬೇಕು. ಅಂದರೆ ಹೆಚ್ಚು ಹಣವನ್ನು ವೆಚ್ಚ ಮಾಡದೆ ಹೆಚ್ಚು ಉದ್ಯೋಗವನ್ನು ಕಲ್ಪಿಸಲು ಬರುವುದಿಲ್ಲ. ಆದುದರಿಂದ ಹೆಚ್ಚು ಕಾಗದ ಹಣ (ಕರೆನ್ಸಿ ನೋಟು) ವನ್ನು ಚಲಾವಣೆಗೊಳಿಸಿ ಅದನ್ನು ಸಾರ್ವಜನಿಕ ಕಾಮಗಾರಿಗಳಲ್ಲಿ ವೆಚ್ಚ ಮಾಡುವುದು ಆವಶ್ಯಕವಾಗಬಹುದು. ಇದರಿಂದ ನಿರುದ್ಯೋಗ ಸಮಸ್ಯೆಯನ್ನು ತಾತ್ಪೂರ್ತಿಕವಾಗಿ ಬಿಡಿಸಿದಂತಾಗಬಹುದು.

ಆದರೂ ಬಂಡವಾಳವನ್ನು ಒದಗಿಸಲು ಇದೊಂದೇ ಮಾರ್ಗವೆಂದು ಭಾವಿಸಲಾಗದು. ನಾವು ಬಂಡವಾಳದ ಎಲ್ಲ ಮೂಲಗಳನ್ನು ಶೋಧಿಸಬೇಕು. ಈ ಸಮಯದಲ್ಲಿ ನಮ್ಮ ದೇಶವು ಹೆಚ್ಚು ಹಣವನ್ನು ಒದಗಿಸಲಾರದೆಂದು ಬಗೆಯುವುದು ತಪ್ಪಾದೀತು. ಹೆಚ್ಚು ಕಾಗದ ಹಣವನ್ನು ಚಲಾವಣೆಗೆ ತರದೆ ಆರ್ಥಿಕ ವಿಕಾಸಯೋಜನೆಗೆ ಬಹಳ ಹೆಚ್ಚು ಹಣವನ್ನು ದೊರಕಿಸುವುದು ಸಾಧ್ಯವಿದೆ. ಬಹಳ ದೊಡ್ಡ ರಕಮನ್ನು ಸಾಲವಾಗಿ ಪಡೆಯುವುದು ದುಸ್ತರವೇನೂ ಅಲ್ಲ. ಮದ್ರಾಸ ಸರಕಾರವು ಹೀಗೆ ಇತ್ತೀಚೆ ಐದು ಕೋಟಿ ಸಾಲವನ್ನೆತ್ತಿದೆ. ಬಂಡವಾಳದ ಎಲ್ಲ ರಕಮು ದೇಶದಲ್ಲಿಯೇ ದೊರೆಯದಿದ್ದರೆ ನಾವು ಅದನ್ನು ಪರದೇಶಗಳಿಂದ ಪಡೆಯಬಹುದು. ಅಥವಾ ತಮ್ಮ ಬಂಡವಾಳವನ್ನು ಇಲ್ಲಿ ತೊಡಗಿಸಲು ಪರದೇಶದವರನ್ನು ಪ್ರೋತ್ಸಾಹಿಸಬಹುದು. ಪ್ರೇರಿಸಬಹುದು. ಅಮೇರಿಕಾ ಮತ್ತು ಇಂಗ್ಲಂಡಗಳ ಬಂಡವಾಳಗಾರರನ್ನು ತಮ್ಮ ಬಂಡವಾಳವನ್ನು ಇಲ್ಲಿ ತೊಡಗಿಸಲು ಒಲಿಸಬಹುದು. ಮತ್ತು ಅದರಿಂದ ನಮ್ಮ ಹುಟ್ಟುವಳಿಯ ವಿಸ್ತಾರವನ್ನೂ ಉದ್ಯೋಗ ಒದಗಿಸುವ ಸಾಮರ್ಥ್ಯವನ್ನೂ ಬೆಳೆಯಿಸಿಕೊಳ್ಳಬಹುದು.

ಸರಕಾರವು ಹೆಚ್ಚಾಗಿ ಹಿಂದುಸ್ಥಾನದೊಳಗಿನ ಹಣ ತೊಡಗಿಸುವವರ ಮೇಲೆಯೇ ಅವಲಂಬಿಸಬೇಕು. ಹಿಂದುಸ್ಥಾನದೊಳಗಿನ ಬಂಡವಾಳವು ಚೆದರುಬಡಕಾಗಿದೆ. ಇಲ್ಲಿಯ ಬಂಡವಾಳುಗಾರರಿಗೆ ಸಾಕಷ್ಟು ಆಮಿಷವನ್ನು ತೋರಿಸುವುದು ಅವಶ್ಯಕ. ಎಂತಾದರೂ ಹಣ ತೊಡಗಿಸುವ ಸಂದರ್ಭದಲ್ಲಿ ಧೈರ್ಯಗುಂದುವುದಕ್ಕೆ ಕಾರಣವಾಗುವಂತಹ ಯಾವ ಸಂಗತಿಗಳೂ ಜರುಗದಂತೆ ನೋಡಿಕೊಳ್ಳಬೇಕು. ಈ ಆರ್ಥಿಕ ವಿಕಾಸ ಯೋಜನೆಯ ಹಂತದಲ್ಲಿ ಭಾರವಾದ ಕಂದಾಯವನ್ನು ಹೇರುವ ಕ್ರಮವನ್ನು ಕೈಕೊಳ್ಳಬಾರದು.

ಸರಕಾರವು ನಿಜವಾಗಿ ಹಣ ತೊಡಗಿಸುವುದನ್ನು ಮತ್ತು ಹುಟ್ಟುವಳಿಯನ್ನು ಬೆಳೆಯಿಸುವ ಸಂದರ್ಭದಲ್ಲಿ ಉತ್ಸುಕವಾಗಿದ್ದರೆ ಕೆಲಸ ಕೊಡುವ ಸಂಸ್ಥೆಗಳ ಸಂದರ್ಭದಲ್ಲಿ ಹೆಚ್ಚು ವಾಸ್ತವವಾದ ನೀತಿಯನ್ನು ಅನುಸರಿಸಬೇಕು. ಬೇರೆ ಬೇರೆ ಕೈಗಾರಿಕೆಗಳಲ್ಲಿ ತೊಡಗಿದ ಕಾಮಗಾರರ ಬಗೆಗೆ ನಮ್ಮಲ್ಲಿ ತುಂಬ ಸಹಾನುಭೂತಿಯಿದೆ. ಸ್ವಪ್ರಯೋಜನಕ್ಕಾಗಿ ಅವರಿಂದ ಯಾರೂ ಲಾಭ ಪಡೆಯದಂತೆ ನೋಡಿಕೊಳ್ಳುತ್ತಿರಬೇಕು. ಆದರೆ ಅವರ ವೇತನದಂತಹ ವಿಷಯಗಳನ್ನು ಕಟ್ಟುನಿಟ್ಟಾಗಿ ಸರಕಾರವು ತನ್ನ ಅಧೀನದಲ್ಲಿ ಇಟ್ಟುಕೊಂಡರೆ ಉತ್ಪಾದಕರ ಸ್ಥಿತಿ ಕಷ್ಟಕ್ಕೀಡಾಗುತ್ತದೆ ಮತ್ತು ಅದರ ಪರಿಣಾಮದಿಂದ ಉತ್ಪಾದನೆ ಕುಗ್ಗುತ್ತದೆ. ನಿರುದ್ಯೋಗದ ಕಾಲದಲ್ಲಿ ಕಾಮಗಾರರು ನಿಜಕ್ಕೂ ಕೆಲಮಟ್ಟಿಗೆ ಕಡಿಮೆ ವೇತನವನ್ನು ಅಂಗೀಕರಿಸಬೇಕು. ಉತ್ಪಾದನೆಯ ವೆಚ್ಚವು ಕಡಿಮೆಯಾದರೆ ಹೆಚ್ಚು ಬಂಡವಾಳವನ್ನು ತೊಡಗಿಸಲು ಅದು ಪ್ರೇರಕವಾಗುತ್ತದೆ. ಅದರಿಂದಾಗಿ ಹೆಚ್ಚು ಜನರಿಗೆ ಉದ್ಯೋಗವು ದೊರೆಯುತ್ತದೆ. ಇದರ ಪರಿಣಾಮವಾಗಿ ಎಲ್ಲ ಕಾಮಗಾರರಿಗೆ ಹೆಚ್ಚು ವೇತನ ದೊರೆಯಬಹುದು. ಹೀಗೆ ಕಾಮಗಾರರಿಗೆ ಕೆಲಸ ಒದಗಿಸುವ ಸಮಸ್ಯೆ ತನ್ನಿಂದ ತಾನೇ ಪೂರ್ಣವಾಗುತ್ತದೆ. ಇದಕ್ಕಾಗಿ ಕೊರತೆಯ ಹಣಕಾಸಿನ ಆಡಳತೆಗೆ ಶರಣು ಹೋಗುವ ಅವಶ್ಯಕತೆ ಇಲ್ಲ.

ಬೆಲೆಗಳನ್ನು ಕೆಳಮಟ್ಟಕ್ಕೆ ತರುವುದೊಂದು ಸರಕಾರದ ಮುಂದಿರುವ ಬಹು ದೊಡ್ಡ ಸಮಸ್ಯೆಯಾಗಿದೆ. ನಿರುದ್ಯೋಗದ ಸಮಸ್ಯೆಗಿಂತ ಇದು ಬಹಳ ಗಂಭೀರವಾಗಿದೆ. ಬೆಲೆಗಳನ್ನು ಇಳಿಮುಖಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡಬೇಕಾಗಿದೆ. ಏನಾದರೂ ಇಲ್ಲಿಯ ಬೆಲೆಗಳ ಮಟ್ಟವನ್ನು ಏರಗೊಡಬಾರದು. ಕೊರತೆಯ ಹಣಕಾಸಿನ ಆಡಳತೆಯ ವಿಚಾರವೇ ಬೇಡವೆನ್ನುವುದಕ್ಕೆ ಇದೇ ಕಾರಣ.

ಆದರೆ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸುವುದು ಆವಶ್ಯಕವಾಗಿದೆ. ನಿರೀಕ್ಷಿಸಿದಂತೆ ಆರ್ಥಿಕ ಮುಗ್ಗಟ್ಟು ಈ ಮೊದಲೇ ಆರಂಭವಾಗಿ ಬಿಟ್ಟಿದೆ. ಬೆಲೆಗಳ ಮಟ್ಟವು ವಿಪರೀತವಾಗಿ ಏರಿರುವಾಗಲೇ ಕಠಿನವಾದ ಆರ್ಥಿಕ ಮುಗ್ಗಟ್ಟು ಬಂದು ಬಿಟ್ಟಿದೆ. ಇದು ಅಸಾಮಾನ್ಯವಾಗಿದ್ದು ಗಂಭೀರ ಪರಿಸ್ಥಿತಿಯನ್ನುಂಟುಮಾಡಿದೆ. ಈ ಪರಿಸ್ಥಿತಿಯು ಹೀಗೆಯೇ ಎಷ್ಟು ದಿನಗಳವರೆಗೆ ಮುಂದುವರಿಯುವುದೆಂಬುದನ್ನು ಹೇಳಲು ಬರುವಂತಿಲ್ಲ. ಆರ್ಥಿಕ ಮುಗ್ಗಟ್ಟಿನ ಪರಿಣಾಮವಾಗಿ ಬೆಲೆಗಳು ಎಂದು ಬೇಕಾದಂದು ಇಳಿದು ಹೋಗಬಹುದು. ಇದರ ಪರಿಣಾಮವು ದೇಶದೊಳಗಿನ ಉತ್ಪಾದನೆಯ ಮೇಲಾಗಿ ನಿರುದ್ಯೋಗವು ಬೆಳೆದು ಹೋಗಬಹುದು. ಆಗ ಎಲ್ಲ ರೀತಿಯಿಂದಲೂ ಉದ್ಯೋಗ ವಿಸ್ತಾರವನ್ನು ಬೆಳೆಯಿಸುವುದು ಅವಶ್ಯವಾಗುವುದು. ಆ ಸಮಯದಲ್ಲಿ ಮಾತ್ರ ಸರಕಾರವು ಕೊರತೆಯ ಹಣಕಾಸಿನ ಆಡಳತೆಯನ್ನು ಆಶ್ರಯಿಸಬಹುದು. ಆದರೆ ಉದ್ಯೋಗ ವಿಸ್ತಾರವನ್ನು ಮತ್ತಷ್ಟು ವಿಸ್ತರಿಸುವಲ್ಲಿ ಇದೊಂದೇ ಸಾಧನವಾಗಿದ್ದರೆ ಇದು ಸಮರ್ಥನೀಯವಾಗುತ್ತದೆ. ಆದುದರಿಂದ ಕೊರತೆಯ ಹಣಕಾಸಿನ ಆಡಳತೆಯು ಕೊನೆಯದಾದ ಬ್ರಹ್ಮಾಸ್ತ್ರವಾಗಿರಬೇಕು.

- ಜಗತ್ತಿನಲ್ಲಿ ಎರಡು ಬಗೆಯ ಸ್ತ್ರೀಯರಿದ್ದಾರೆ; ಮದುವೆಯಾಗಬಯಸುವವರು ಮತ್ತು ಮದುವೆಯಾಗದಿರುವ ಬಯಕೆ ತುಸುವಾದರೂ ಇಲ್ಲದಿರುವವರು.
- ನಾಯಕ ಖಲನಾಯಕನ ಹೃದಯಕ್ಕೆ ಗುರಿಯಿಟ್ಟು ಗುಂಡು ಹಾರಿಸಿದ. ಆದರೆ ಖಲನಾಯಕನಿಗೆ ಹೃದಯವೇ ಇಲ್ಲದ್ದರಿಂದ ಆತ ಗಾಯಗೊಂಡರೂ ಬದುಕುಳಿದ.

ಒಂದು ಹರಟೆ

ದೇವರುಗಳೂ ಡೆಮಾಕ್ರಸಿಯೂ

ಲೇಖಕರು:— ಗೋರೂರು ರಾಮಸ್ವಾಮಯ್ಯಂಗಾರ್

ಹಿಂದೆ ಮೈಲಿಗೆಯನ್ನು ಸಹಿಸಿಕೊಳ್ಳದಿದ್ದ ದೇವರುಗಳು ಕೂಡ ಇಂದು ಅದಕ್ಕೆ ಹೊಂದಿಕೊಂಡು ಡೆಮಾಕ್ರಾಟಿಕ್ ಆಗಿದ್ದಾರೆ. ಉಗ್ರ ನರಸಿಂಹ ಸ್ವಾಮಿ ಕೂಡ ತನ್ನ ರಥೋತ್ಸವದಲ್ಲಿ ಮಾಮೂಲು ಓಲಗದವರ ಸ್ಥಳದಲ್ಲಿ ಹೊಲೆಯರ ಓಲಗ ಊದಲು ಅವಕಾಶ ಕೊಟ್ಟ. ಆದರೆ ಇದ್ದಕ್ಕಿದ್ದಂತೆ ತಮಗೆ ಭಗವಂತನ ಸಾನ್ನಿಧ್ಯಕ್ಕೆ ಪ್ರಮೋಶನ್ ಆದರೂ ಹೊಲೆಯರ ಓಲಗದ ಗುಳ್ಳ, ಈರ, ದಾಸರಿಗೆ ತಲೆ ತಿರುಗಿದಂತೇನೂ ಕಂಡಿಲ್ಲ.

ಉನ್ನತಿ ಅವನತಿಗಳು ಮನುಷ್ಯರಿಗೆ ಹೇಗೋ ಹಾಗೆ ದೇವರಿಗೂ ಉಂಟು. ಹಾಗೆಯೇ ಮಡಿ ಮೈಲಿಗೆಗಳು ಸಹ. ಇದು ಕಲಿಕಾಲವಾದುದ್ದ ರಿಂದ ಮಡಿ, ಆಚಾರಗಳು ಕಡಿಮೆಯಾಗಿಬಿಟ ವೆಂದು ನಮ್ಮ ಹಿರಿಯರು ಹೇಳುವುದು ಪದ್ಧತಿ. ಆದರೆ ಹಿಂದೆ ಹೆಚ್ಚು ವೈದಿಕರಾದವರು ಸಹ ಇಂದಿನ 'ಅಮಡಿ' ಯನ್ನು ಸಹಿಸಿಕೊಂಡು ಹೋಗುತ್ತಿರುವಂತೆ, ಹಿಂದೆ ಮೈಲಿಗೆಯನ್ನು ಸಹಿಸದಿದ್ದ ದೇವರುಗಳೂ ಇಂದು ಅದಕ್ಕೆ ಹೊಂದಿಕೊಂಡಿದ್ದಾರೆ.



ಈಗ ಮುವ್ವತ್ತು ವರುಷಗಳ ಹಿಂದಲ ನಮ್ಮ ಊರ ನರಸಿಂಹಸ್ವಾಮಿಯ ವೈಭವವನ್ನು ಜ್ಞಾಪಿಸಿ ಕೊಂಡರೆ ದೇವರಿಗಿಂತ ಕಾಲವೇ ಪ್ರಬಲವಾದು ದೆಂದು ತೋರುತ್ತದೆ. ಅಗ ನರಸಿಂಹಸ್ವಾಮಿಯು ಒಂದು ಉತ್ಸವ ಹೊರಡಬೇಕಾದರೆ ಮೊದಲು ಊರಮುಂದಲ ಶೃಂಗಾರ ತೋಟದ ಹೂವಿನ ರಾಸಿರಾಸಿಯು ಆನೆ ಸೊಂಡಲಿನಂತಹ ಮಾಲೆ ಗಳನ್ನು ಹೊರಲಾರದೆ, ಮುದಿ ಅರ್ಚಕ ತಂದು ದೇವರ ಮೇಲೆ ಏರಿಸುತ್ತಿದ್ದನು. ಆ ಹೂವು ಗಳನ್ನು ಅರ್ಚಕನೇ ಶೃಂಗಾರತೋಟದಲ್ಲಿ ಬೆಳೆ ದಿರುತ್ತಿದ್ದನು. ನಿತ್ಯದ ಅರ್ಚನೆಗೆ ಹೂವು, ತುಳಸಿ; ವಿಶೇಷ ದಿನಗಳಿಗೆ ಇಂತಹ ಹಾರಗಳು. ಆ ಅರ್ಚಕ ಬ್ರಹ್ಮಚಾರಿಯಾಗಿ ತನ್ನ ಬಾಲ್ಯದಿಂದಲೂ ದೇವರ ಸೇವಕನೇ ಆಗಿದ್ದನು. ಅವನಿಗೆ ತಂದೆ, ತಾಯಿ, ಬಂಧುಬಳಗ ಯಾರೂ ಇರಲಿಲ್ಲ. ಎಲ್ಲರೂ ನರಸಿಂಹ ಸ್ವಾಮಿಯೇ ಆಗಿದ್ದನು. ಅವನು ಬದುಕಿರುವ ವರೆಗೆ ದೇವರಿಗೆ ಒಂದೇ ದಿನವೂ ಹೂವು ತುಳಸಿ ಇಲ್ಲದಿರಲಿಲ್ಲ. ಆದರೆ ಈಚೆಗೆ ಆ ಅರ್ಚಕ ಸತ್ತ ಮೇಲೆ ದೇವರಿಗೆ ಹೂವಿಗೇ ಗತಿ ಇಲ್ಲ. ತುಳಸಿ ಸಹ ಅಪರೂಪ ವಾಗಿದೆ. ಹಿಂದಲ ಅರ್ಚಕ ಇದ್ದಾಗ ಹೂವಿನ ವಿಷಯವಿರಲಿ, ತುಲಸಿಯ ಮಟ್ಟಿಗೂ ಇತರರು ಮುಟ್ಟಿದುದನ್ನು ಅವನು ವಿನಿಯೋಗಿಸುತ್ತಿರ ಲಿಲ್ಲ. ದೇವರ ಪೂಜೆಗೆ ತಾನು ಸ್ವತಃ ಹಾಕಿ ಬೆಳೆಸಿದ್ದ ಶೃಂಗಾರತೋಟದ ತುಳಸೀಗಿಡದಲ್ಲಿ ತಾನೇ ಕುಯಿದ ದಳಗಳಾಗಬೇಕಿತ್ತು. ಆ ಅರ್ಚಕ ಸಾಧ್ಯವಾದ ಮಟ್ಟಿಗೆ ಇತರರು ಮುಟ್ಟಿದ ಹೂವನ್ನು ಸಹ ದೇವರಿಗೆ ಮುಡಿಸಲು ಹಿಂದೆಗೆಯುತಿದ್ದನು. ಇತರರು ದೇವರಿಗಾಗಿ ತಂದುಕೊಟ್ಟ ಹೂವನ್ನು ಪುಣ್ಯಾಹದಿಂದ ಪವಿತ್ರ ಮಾಡಿದ ಹೊರತು ಆ ಅರ್ಚಕ ಅದನ್ನು ದೇವರಿಗೆ ಮುಡಿಸುತ್ತಿರಲಿಲ್ಲ. ಅವನ ಮಡಿಯ ಭಾವನೆ ಹಾಗಿತ್ತು.

ಆದರೆ ಈಚೆಗೆ ಶೃಂಗಾರತೋಟ ಪಾಳು ಬಿತ್ತು. ದೇವರಿಗೆ ತುಳಸಿ ಮರೆತೇ ಹೋಯಿತು. ಯಾರು ತಂದು ಕೊಟ್ಟ ಯಾವ ಒಂದು ಚೂರು ಹೂವು ದೊರೆತರೂ ಅರ್ಚಕ ಅದನ್ನು ಹಾಗೆಯೇ ದೇವರ ಮೇಲೆ ಹಾಕಿಬಿಡುತ್ತಾನೆ. ಅರ್ಚಕನಿಗೆ ಈಗ ಮಡಿಯ ಭಾವನೆ ಮರೆವಾಗಿ ಬಿಟ್ಟಿದೆ. ಹಿಂದೆ ದೇವರಲ್ಲಿ ಭಕ್ತಿ ಹೇಗೆ ಇತ್ತೋ ಅದಕ್ಕನುಸಾರ ವಾಗಿ, ಮಡಿ, ಪಾವಿತ್ರ್ಯ, ಪಾರಿಶುದ್ಧತೆಗಳೂ ಇದ್ದವು. ಆಗ ಅರ್ಚಕ ದೇವರಪೂಜೆಯ ಪಾತ್ರೆ ಗಳನ್ನು ಇತರರಿಂದ ಮುಟ್ಟಿಸುತ್ತಿರಲಿಲ್ಲ. ಮುವ್ವತ್ತೆರಡು ಮಡಿಗಳನ್ನೂ ಮಣ್ಣುಗಳನ್ನೂ ಹುಣಸೇ ಹಣ್ಣನ್ನೂ ಹಾಕಿ ತಾನೇ ಬೆಳಗಿ ಪಾತ್ರೆಗಳನ್ನು ಸೂರ್ಯನ ಮರಿಗಳಂತೆ ಇಟ್ಟಿದ್ದನು. ಈಗ ಯಾರಾದರೂ ಸಿಕ್ಕಿದರೆ ಅವರ ಕೈಲಿ ಬೆಳಗಿಸಿ ತಾನು ಶಾಸ್ತ್ರಕ್ಕೆ ಸುಣ್ಣದ ನೀರನ್ನು ಎರಚುತ್ತಾನೆ. ಬೆಳಗುವವರು ಸಿಕ್ಕದಿದ್ದರೆ ಹಾಗೆಯೇ ಇಡುತ್ತಾನೆ.

ಆದರೆ ಓಲಗದವರ ವಿಷಯದಲ್ಲಿ ದೇವರು ಡೆಮಾಕ್ರಾಟಿಕ್ ಆದ ಹಾಗೆ ಮತ್ತಾವುದರ ವಿಷಯದಲ್ಲಿಯೂ ಆಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ನಮ್ಮ ಊರ ಮಾಮೂಲ ಓಲಗದವರು ಅನೇಕ ತಲೆಮಾರುಗಳಿಂದ ನರಸಿಂಹ ಸ್ವಾಮಿಯ ಒಕ್ಕಲು. ಓಲಗದವರಿಗಾಗಿ ಸ್ವಲ್ಪ ಜಮೀನನ್ನು ಬಿಟ್ಟಿದ್ದಾರೆ. ಅವರ ಸಂಬಳ ತಿಂಗಳಿಗೆ ಎರಡಾಣೆ ಮಾತ್ರ. ಅವರು ಸಂಗೀತದಲ್ಲಿ ವಿದ್ಯಾವಂತರಲ್ಲ. ಅವರು ಓಲಗ ಊದುವುದೆಂದರೆ ಓಲಗದಿಂದ ಪೀ ಎಂದು ಧ್ವನಿ ಹೊರಡಿಸುವುದೆಂದರ್ಥ. ಅದು ಯಾವಾಗಲೂ ಒಂದೇ ಬಗೆ. ಮೋರಿ, ಶ್ರುತಿ ಎರಡನ್ನೂ ಊದುವವರು ಸುಮ್ಮನೆ ಪೀ ಧ್ವನಿ ಹೊರಡಿಸುವವರೇ. ಮೋರಿ ಹಿಡಿಯುವವನು ಹೇಗೋ ಕೈಬೆರಳುಗಳನ್ನು ಓಲಗದ ಮೇಲೆ ಆಡಿಸುತ್ತಾನೆ. ನಮ್ಮ ಊರಿನಲ್ಲಿ ಬೇರೆ ಯಾವ ಓಲಗದವರೂ ಇಲ್ಲದುದರಿಂದ ಊರಿನವರು ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳಿಗೂ ಆ ಓಲಗದವರನ್ನೇ ಕರೆಯುತ್ತಿದ್ದರು. ದೇವರಿಗೂ ಆ ಓಲಗವೇ ಸಾಕೆಂದು ಊರವರು ಭಾವಿಸಿದ್ದರು. ದೇವರಿಗೇ ಆಗಲಿ, ಅವರಪ್ಪನಿಗೇ ಆಗಲೀ ಬೇರೆ ಓಲಗಬೇಕೆಂದರೂ ನಮ್ಮ ಊರಿನಲ್ಲಿ ದೊರೆಯುವಂತೆ ಇರಲಿಲ್ಲ.

ಓಲಗದವರಿಗೆ ದೇವರುಗಳ ಪಕ್ಷಪಾತವಿರಲಿಲ್ಲ. ಅಲ್ಲಾ ದೇವರಿಗೂ ಅವರದೇ ಓಲಗ; ರಂಜಾನ್, ಬಕ್ರೀದ, ಅಲಾಬಿ, ಮೊಹರಮ ಎಲ್ಲದಕ್ಕೂ ಅವರದೇ ಓಲಗ. ಮುಸಲ್ಮಾನರ ಮದುವೆ, ಮುಂಜಿಗಳಿಗೂ ಇವರ ಓಲಗವೇ. ನಮ್ಮ ಊರಿನ ಮುಸಲ್ಮಾನರೂ ಆಗಿನ ಇತರ ಮುಸಲ್ಮಾನರಂತೆ ಬಹಳ ಜೋರಾಗಿದ[illegible]

ಹಿಂದೂ ದೇವರಿಗೂ ಹಿಂದೂ ಮದ[illegible] ಬರು

ಗಳಿಗೂ ಊದುವುದಕ್ಕಿಂತ [illegible]ದ ಜನರನ್ನು

[illegible]ಂಡು ಬಂದರು.

ಗಿಯೇ ಓಲಗದವರು

ಎಂದೂ ಇಲ್ಲದ ಗದ್ದಲ

ತ್ತಿದ್ದರು. ಇದರಿ[illegible]

ಹೊಲೆಯರು ಒಂದು

ಮುಸಲ್ಮಾನರಿಗ[illegible] ಕಾಯಿಸಿ ಬಡಿದರು. ಅದರ

ಅಭ್ಯಾಸವಾ[illegible]ಲ್ಲಿ ಮಲಗಿದ್ದವರಿಗೆಲ್ಲ ಎಚ್ಚರ

ರಿಗೂ ಉ[illegible]ವಿ, ನರಸಿಂಹಸ್ವಾಮಿಗೆ ಸಹ ಎಚ್ಚರ

ದರೆ ಅಲ್ಲಾ[illegible]ಕು. ನರಸಿಂಹಸ್ವಾಮಿಗೆ ಎಚ್ಚರ


ಓಲಗಕ್ಕೂ [illegible]ದರೆ ಆ ರಣಚಂಡಿ ವಾದ್ಯವೇ

ಓಲಗಕ್ಕೂ

? ಇಲ್ಲದಿದ್ದರೆ ಅತ ಈ ಜಗತ್ತಿನ

ಓಲಗಕ್ಕೂ ವ್ಯತ್ಯಾಸ ಗೊತ್ತಾಗುತ್ತಿರಲಿಲ್ಲ. ಎಲ್ಲವೂ ಮೊಹರಂ ಅಲ್ಬಿದಾಯದಂತೆಯೇ ಕೇಳುತ್ತಿದ್ದವು.

ಆದರೆ ನಮ್ಮೂರ ಓಲಗದವರ ಇಂತಹ ಕರ್ಣ ಕಠೋರವಾದ ಪೀಪಿಯ ಅಲ್ಬಿದಾಯದಲ್ಲಿ ಸುಧಾ ರಿಸಿಕೊಳ್ಳುತ್ತಿದ್ದ ನಮ್ಮವರಿಗೆ, ಹೊಲಗೇರಿಯ ಆದಿಕರ್ಣಾಟಕರ ವಾದ್ಯ, ನಮ್ಮ ಊರೊಳಗಿನ ಓಲಗಕ್ಕಿಂತ ಹೆಚ್ಚು ಮನೋಹರವೂ ಇಂಪಾದುದೂ ಆಗಿರುವುದೆಂಬುದು ತಿಳಿಯಲೇ ಇಲ್ಲ. ಊರೊಳಗಿನ ಓಲಗದವ ಗೊಳೋ ಎಂದು ಕೊರಗುತ್ತ ಊದುತ್ತಿರುವಾಗ ಅಲ್ಲಿ ಹೊಲಗೇರಿಯ ಓಲಗ 'ಝುಮ್ಮ ಚಕ್ಕ ಝುಮ್ಮ ಚಕ್ಕ' ಎಂದು ಒಳ್ಳೆ ರಣವಾದ್ಯದಂತೆ ಕೇಳುತ್ತಿದ್ದಿತು. ಊರೊಳಗಿನ ಓಲಗದಲ್ಲಿ ಇದ್ದುದೇ ಮೂರು. ಒಂದು ಮೋರಿ, ಒಂದು ಶ್ರುತಿ, ಒಂದು ಡಂಕ ಅಥವಾ ತಮಟೆ. ಒಂದಕ್ಕೊಂದಕ್ಕೆ ಅವು ಸಂಬಂಧವಿರಲಿಲ್ಲ. ಅವರ ಬಳಿ ಮೂರು ವಾದ್ಯಗಳಿದ್ದರೂ ಆ ಮೂರನ್ನೂ ಬಾರಿಸಲು ಜನ ಯಾವಾಗಲೂ ಮೂವರು ಇರುತ್ತಿರಲಿಲ್ಲ. ಒಬ್ಬನೇ ಡಂಕ ಅಥವ ತಮಟೆಯನ್ನು ಸೊಂಟಕ್ಕೆ ಕಟ್ಟಿಕೊಂಡು, ಹಾಗೂ ಹೀಗೂ ಶ್ರುತಿ ಊದುತ್ತಾ ತಮಟೆಯನ್ನೂ ಒಂದೊಂದು ಸಲ ಬಡಿಯುತ್ತಿದ್ದನು. ಆದರೆ ಹೊಲೆಯರ ಓಲಗ ಎಲ್ಲಿಯಾದರೂ ದೂರದಲ್ಲಿ ಆಗುತ್ತಿದ್ದರೆ ಅದು ರಣವಾದ್ಯದಂತೆ ಕೇಳುತ್ತಿದ್ದಿತು. ಅದು ಒಂದು ವಿಧವಾದ ಸ್ವರಮೇಳ. ಶ್ರುತಿ, ಮೋರಿ, ತಮಟೆ ಹರೆ, ಡೋಣು, ಕುಣಿಮಿಣಿ ತಾಳ, ಮಧ್ಯೆ ಮಧ್ಯೆ ಮಿಂಚಿನಂತೆ ಕೊಂಬು ಕಹಳೆ. ಕೇಳಿದವರ ಮೇಲೆ ಅದರ ಪರಿಣಾಮ ವಿಚಿತ್ರವಾಗುತ್ತಿತ್ತು. ಅವರನ್ನು ಅದು ಎದ್ದು ಕುಣಿಸುತ್ತಿತ್ತು. ಆ ವಾದ್ಯಗಳಲ್ಲಿ ತಾಳ-ಲಯ-ಮೇಳಗಳಿದ್ದುದರಿಂದ ಅದನ್ನು ಕೇಳಿದವರು ನಿಂತಲ್ಲಿಯೇ ಕುಣಿಯುತ್ತಿದ್ದರು; ಕೈ ಕಾಲು ತಲೆ ಕುಣಿಸುತ್ತಿದ್ದರು. ಆ ಓಲಗದ ಸ್ವಾರಸ್ಯವನ್ನು ಅನುಭವಿಸಲು ಯಾರೂ ಸಂಗೀತಜ್ಞನಾಗಿರಬೇಕಾಗಿರಲಿಲ್ಲ. ಅದರಲ್ಲಿ ವೈವಿಧ್ಯ ಇತ್ತು, ಜೀವವಿತ್ತು, ಜೀವನದ ಓಟ, ಕಾವು ಇತ್ತು. ಆಗಿನ ಕಾಲದಲ್ಲಿಯಂತೂ ಆ ಓಲಗ ಬ್ರಾಹ್ಮಣರ ಊರೊಳಕ್ಕೆ ಬರುತ್ತಿರಲಿಲ್ಲ. ದೂರದಲ್ಲಿ ಸುಗ್ಗಿ ಕುಣಿತ, ರಂಗದಕುಣಿತ, ಮಾರಿ ಜಾತ್ರೆ, ಒಕ್ಕಲಿಗರ ಮದುವೆ, ಹರಿಜನರ ಮದುವೆ, ಚಿಲ್ಲರೆ ದೇವರುಗಳ ಮೆರವಣಿಗೆ ಇಂತಹ ದಿನಗಳಲ್ಲಿ ಆ ಓಲಗ-ತಮಟೆ-ಹರೆ-ಡೋಣು-ಕುಣಿಮಿಣಿಗಳ ಕೋಲಾಹಲ; ಆಗಾಗ್ಗೆ ಮುಂಗಾರು ಮಳೆಯ ಮೋಡದ ನಡುವಿನ ಮಿಂಚಿನಂತೆ ಆಕಾಶವನ್ನು ಭೇದಿಸಿಕೊಂಡು ಹೋಗುತ್ತಿದ್ದ ಕೊಂಬು, ವೀರಾವೇಶದ ಅದರ ತಮಟೆಯ ಸದ್ದನ್ನು ದೂರದಲ್ಲಿ ಕೇಳಿದ ಕೂಡಲೆ ಬ್ರಾಹ್ಮಣರ ಕೇರಿಯ ಹುಡುಗರು ಸಹ ಬಾಗಿಲುಗಳ ಮೇಲೆ, ಕಂಬಗಳ ಮೇಲೆ ಅದೇ ರೀತಿ ತಮಟೆ ಹೊಡೆಯಲು ಪ್ರಾರಂಭಿಸುತ್ತಿದ್ದರು. ತಮ್ಮ ಮನೆಗಳಲ್ಲಿ ಆ ಹೊಲೆಯರ ತಮಟೆಯ ಅನುಕರಣೆಯನ್ನು ತಮ್ಮ ಮಕ್ಕಳಿಂದ ಕೇಳಿ ವೈದಿಕರಾದವರ ಮೈ ಉರಿಯುತ್ತಿತ್ತು.



ಈಗ ಕೆಲವು ವರುಷಗಳ ಹಿಂದೆಯೇ ನಮ್ಮ ಜನಕ್ಕೆ ಎಲ್ಲದರ ಮೇಲೆಯೂ ಉತ್ಸಾಹವುಡುಗಿದಂತೆ ದೇವರ ಮೇಲೆಯೂ ಉತ್ಸಾಹ ತಪ್ಪಿತು. ಆದರೆ ಶಾನುಭೋಗರು, ಪಟೇಲರು, ಒಬ್ಬಿಬ್ಬರು ಧರ್ಮದರ್ಶಿಗಳು, ಮಾತ್ರ ದೇವರು ವಿಶ್ರಾಂತಿ ಹೊಂದುತ್ತೇನೆಂದು ಮೊಂಡುಹಿಡಿದರೂ ಕೇಳದೆ ಅವರಿಗೆ ಮೆರವಣಿಗೆ ಮಾಡಿಸಿಯೇ ಮಾಡಿಸುತ್ತಾರೆ. ದೇವರ ಜವಾಬ್ದಾರಿಯನ್ನು ಅವರು ಪೂರ್ಣವಾಗಿ ಹೊತ್ತಂತೆ ಕಾಣುತ್ತೆ. ದೇವರು ಯಾವ ಯಾವ ದಿನ ಊರ ಸುತ್ತ ಮೆರವಣಿಗೆ ಮಾಡಬೇಕೆಂಬುದನ್ನು ನಿರ್ಣಯಿಸುವವರೂ ಅವರೇ. ಆದರೆ ಅದೂ ಅವರ ಸ್ವಂತ ಇಚ್ಛೆ ಅಲ್ಲ. ಹಿಂದಲಿಂದ ಬಂದ ಸಂಪ್ರದಾಯದಂತೆ. ಆದರೆ ಈಚೆಗೆ ಉತ್ಸವಾದಿಗಳಿಗೆ ಜನ ಸೇರುವುದೇ ಇಲ್ಲ. ಪಟೇಲರು ದೇವಸ್ಥಾನದ ಬಾಗಿಲಿನಲ್ಲಿ ಕುಳಿತು ಒಂದೇ ಉಸುರಿಗೆ ಅಡ್ಡೆಗಾರರನ್ನೂ ಓಲಗದವರನ್ನೂ ಪಂಜಿನವರನ್ನೂ ಕರೆಯುತ್ತಿರುತ್ತಾರೆ. ದೇವಸ್ಥಾನದ ಸುತ್ತಲೂ ಅವರ ಮನೆಗಳಿರುವುದರಿಂದ ಅವರ ಕೂಗು ಎಲ್ಲರಿಗೂ ಕೇಳಿಸುತ್ತೆ. ಆದರೆ ಪಟೇಲರು ಹತ್ತು ಇಪ್ಪತ್ತು ಸಲ ಹೋಗಿ ಕರೆದರೂ ಯಾರೂ ಬರುವುದಿಲ್ಲ. ರಾತ್ರಿ ಉತ್ಸವಗಳಿಗಂತೂ ದೇವರೇ ಗತಿ! ಅರ್ಧ ರಾತ್ರಿಯಾದರೂ ಯಾರೂ ಬರುವದಿಲ್ಲ. ಪಟೇಲರು ಹಾಗೂ ಹೀಗೂ ಹೋಗಿ ಓಲಗದವರು ಇಬ್ಬರನ್ನು ಮಾತ್ರ ಹಿಡಿದುಕೊಂಡು ಬರುತ್ತಾರೆ. ಪಂಜಿನವನು ಬರದಿದ್ದರೆ ತಾವೇ ಪಂಜು ಹಿಡಿಯುತ್ತಾರೆ. ಅಡ್ಡೆಯವರಿಗಾಗಿ ಅವರು ಊರಿನಲ್ಲಿ ಪ್ರತಿ ಮನೆಯ ಬಾಗಿಲಿನಲ್ಲಿಯೂ ಕೂಗುತ್ತಾರೆ. 'ಇದೇನಯ್ಯಾ, ಇಷ್ಟಾದರೂ ಭಕ್ತಿ ಬೇಡವೆ? ಅಡ್ಡೆ ಹೊರುವುದಕ್ಕೆ ಬನ್ನಿ. ನಿಮ್ಮ ಅಪ್ಪ, ಅಜ್ಜ, ಮುತ್ತಜ್ಜ ನಡೆಸಿಕೊಂಡು ಬಂದ ದೇವರು' ಎಂದು ಗದ್ದಲ ಮಾಡುತ್ತಾರೆ. ಅಧುನಿಕರೂ ಹೊಸದಾಗಿ ಮನೆಗೆ ಲಕ್ಷ್ಮಿ ಬಂದವರೂ ಅವರ ಮಾತನ್ನು ಲಕ್ಷ್ಯಮಾಡುವುದಿಲ್ಲ. ನಿದ್ರೆ ಬಂದಂತೆ ನಟಿಸುತ್ತಲೇ ಇರುತ್ತಾರೆ. ಸ್ವಲ್ಪ ವಯಸ್ಸಾದವರೂ 'ಪಾಪ! ಪಟೇಲರೊಬ್ಬರೇ ಹೀಗೆ ನಿದ್ರೆ ಕೆಟ್ಟು ರಾತ್ರಿ ರಾತ್ರಿ ತಿರುಗುತ್ತಾರಲ್ಲ' ಎಂದು ಕನಿಕರವುಳ್ಳವರೂ ಹಗಲು ನಿದ್ರೆಮಾಡಿದ್ದವರೂ ಎದ್ದು ಬರುತ್ತಾರೆ. ಖಾಲಿಬಿದ್ದ ಕೆಲಸವನ್ನೆಲ್ಲ ಪಂಜು,ಛತ್ರಿ, ಅಡ್ಡೆ ಯಾವುದಾದರೂ ಸರಿಯೆ — ಪಟೇಲರೇ ಮಾಡುತ್ತಾ, ಅಂತೂ ದೇವರ ಮೆರವಣಿಗೆ ಪಂಜಿನ ಮಬ್ಬು ಮಂಜು ಬೆಳಕಿನಲ್ಲಿ ಓಲಗದ ಅಲ್ಬಿದಾಯದ ಸ್ವರದೊಂದಿಗೆ ಹೊರಡುತ್ತದೆ. ಮನೆಯಲ್ಲಿ ಮಲಗಿರುವವರು ಓಲಗದ ಧ್ವನಿಯನ್ನು ರಾತ್ರಿಯ ಗುಳ್ಳೆನರಿಯ ಕೂಗಿನಂತೆ ಅರ್ಧ ನಿದ್ರೆಯಲ್ಲಿ ಕೇಳುತ್ತಾರೆ. ಧೈರ್ಯಮಾಡಿ ಎದ್ದು ನೋಡಿದವರಿಗೆ, ಅವರ ಅರನಿದ್ರೆಯಲ್ಲಿ ಅಂಧಕಾರದ ರಾತ್ರಿಯಲ್ಲಿ ಯಾವುದೋ ಒಂದು ಅದ್ಭುತಪಿಶಾಚ ಕೊಳ್ಳಿದೆವ್ವದ ನಿಕಟ ಮೆರವಣಿಗೆ ಕಣ್ಣೆದುರಿಗೆ ಹೋದಂತೆ ತೋರುತ್ತದೆ. ಓಲಗ ನಿದ್ರೆಯನ್ನು ಒಂದು ಗಳಿಗೆ ಕೆಡಿಸಿದಂತೆ ಮಾಡಿದರೂ ಆ ಓಟ ನಿದ್ರೆಯಕಡೆಗೇ ಇರುವುದರಿಂದ ಎದ್ದ...

ಸ್ವಾಭಾವಿಕವಾಗಿ ಹೆಚ್ಚು ಶ್ರಮವಿಲ್ಲದೆ ಮತ್ತೆ ನಿದ್ರೆಗೆ ಸಂದು ಮರೆಯಾಗುತ್ತಿರುವ ಕನಸಿನ ಮಬ್ಬು ಸೆರಗಿನಲ್ಲಿ ಹುದುಗಿಕೊಳ್ಳುತ್ತಾರೆ.

ಓಲಗ ಒಳ್ಳೇ ಜರ್ಬಾದರೆ, ಸಿಡಿಲು ಗುಡುಗು ಬಾಣ ಬಿರಿಸಿನಂತೆ ಕೊಂಬು ಕಹಳೆಗಳೊಂದಿಗೆ ಹೊಲೆಯರ ಓಲಗ ಬಂದರೆ ಉತ್ಸವ ಇನ್ನೂ ಚೆನ್ನಾಗಿ ಆಕರ್ಷಕವಾಗಿ ಜನ ಸೇರಬಹುದೆಂದು ನಾವು ಭಾವಿಸಿದ್ದುಂಟು. ಆದರೆ ಪಟೇಲರು ದೇವರ ಜವಾಬ್ದಾರಿ ವಹಿಸಿಕೊಂಡಿರುವ ವರೆಗೆ, ನರಸಿಂಹಸ್ವಾಮಿಗೆ ಹೊಲೆಯರ ಓಲಗ ಬೇಕೆಂದು ಹೇಳುವ ಧೈರ್ಯ ಸಹ ನಮಗೆ ಯಾರಿಗೂ ಇಲ್ಲ. ಉಗಾದಿ, ಸಂಕ್ರಾಂತಿ, ವಿಜಯದಶಮಿ, ದೀಪಾವಳಿ ಈ ದಿನಗಳಲ್ಲಿ ಅರ್ಧರಾತ್ರಿ—ಬೆಳಗಿನ ಜಾವವಾದರೂ ಸರಿಯೆ, ಪಟೇಲರು ನಮ್ಮೂರ ಮಾಮೂಲು ಓಲಗದವರನ್ನೇ ಹಿಡಿದುಕೊಂಡು ಬಂದು ದೇವರ ಉತ್ಸವ ಮಾಡುತ್ತಿದ್ದರು. ಬರ ಬರುತ್ತ ಜನ ಪಟೇಲರಿಗೆ "ಇನ್ನು ಈ ಓಲಗ ದವರನ್ನು ನೆಚ್ಚಿದರೆ ಉತ್ಸವವಾಗುವದಿಲ್ಲ. ನೀವೇ ಒಂದು ಜತೆ ಮೋರಿ, ಶ್ರುತಿ ತಂದುಬಿಡಿ· ನಿಮಗೆ ಒಂದು, ಶ್ಯಾನುಭೋಗರಿಗೆ ಒಂದು. ಅದಕ್ಕೆ ಚೆನ್ನಾಗಿ ನೂರಾರು ಸಲ ಹುಣಸೆಹಣ್ಣು ಹಾಕಿ ಪುಣ್ಯಾಹ ಮಾಡಿ ಇಟ್ಟುಕೊಂಡು ಬಿಡಿ" ಎನ್ನುತ್ತಿದ್ದರು. ವಾಸ್ತವವಾಗಿಯೂ ಬರಬರುತ್ತ ಪಟೇಲರಿಗೆ ಓಲಗದವರದು ಒಂದು ಪ್ರಶ್ನೆಯೇ ಆಗಿಬಿಟ್ಟಿತು. ಬ್ರಾಹ್ಮಣವೈದಿಕರೂ ಓಲಗ ಊದಬಹುದಾಗಿದ್ದರೆ ಅವರು ಅಷ್ಟು ಯೋಚಿಸು ತ್ತಿರಲಿಲ್ಲ. ಆದರೆ ದೇವರ ಉತ್ಸವಕ್ಕಾಗಿ ಸಹ ಯಾವ ಬ್ರಾಹ್ಮಣರೂ ಓಲಗ ಊದುವುದು ನಮ್ಮೂರಿನಲ್ಲಿ ಸಂಪ್ರದಾಯವಾಗಿರಲಿಲ್ಲ. ಹಿಂದಲ ಯಾವ ಆಚಾರ್ಯರೂ "ನಾನು ನಿನ್ನ ಸೇವೆ ಮಾಡ ಲಿಲ್ಲ. ಧ್ಯಾನ ಮಾಡಲಿಲ್ಲ. ನಿನ್ನ ಭಕ್ತರ ಪಾದ ಸೇವೆ ಮಾಡಲಿಲ್ಲ" ಎಂದು ಹೇಳಿದ್ದರೆ ವಿನಾ "ನಿನ್ನ ಉತ್ಸವಕ್ಕೆ ಓಲಗ ಊದಲಿಲ್ಲ" ಎಂದು ಹೇಳಿರಲಿಲ್ಲ.

ಹೀಗೆ ವೈದಿಕರ ಸ್ವತ್ತು ಆಗಿ 'ಹೈ ಕ್ಲಾಸ್' ದೇವರಾಗಿದ್ದ ನರಸಿಂಹಸ್ವಾಮಿ ಇದ್ದಕ್ಕಿದ್ದಂತೆ ಒಂದು ದಿನ ಡೆಮಾಕ್ರಸಿ ಅಥವಾ ಪ್ರಜಾತಂತ್ರಕ್ಕೆ ಹೊಂದಿಕೊಳ್ಳಬೇಕಾಯಿತು. ಅದಕ್ಕೆ ಮುಖ್ಯ ಕಾರಣ ನಮ್ಮೂರ ಮೀಸೆಗುಂಡನೆ. ನಮ್ಮ ಊರಿ ನಲ್ಲಿ ಮೀಸೆ ಬಿಟ್ಟವರು ಇನ್ನೂ ಅನೇಕರಿದ್ದರೂ ಗುಂಡನಿಗೆ ಮಾತ್ರ ಮೀಸೆಗುಂಡನೆಂದು ಹೆಸರು ಬರಲು ಕಾರಣ, ಶ್ರೀವೈಷ್ಣವರಲ್ಲಿ ಮೊದಲು ಮೀಸೆ ಬಿಟ್ಟವನು ಗುಂಡನೇ. ಆ ಕಾಲದಲ್ಲಿ ಶ್ರೀ ವೈಷ್ಣವರು ಮೀಸೆ ಬಿಡುವುದು ಬಹಳ ನೀತಿ ಗೆಟ್ಟ ಕಾರ್ಯವೆಂದೂ ಅದನ್ನು ಮಾಡಿದವನು ಯಾವುದನ್ನು ಮಾಡುವುದಕ್ಕೂ ಹೇಸುವುದಿಲ್ಲ ವೆಂದೂ ನಮ್ಮ ವೈದಿಕರು ಭಾವಿಸಿದ್ದರು. ನಮ್ಮ ಊರ ಕಮ್ಮಾರ ಸಿದ್ದಾಚಾರಿಯು, ಶ್ರೀವೈಷ್ಣವ ರನ್ನು ಸ್ತ್ರೀ ವೈಷ್ಣವರೆಂದುಕೊಂಡು ಅವರು ಸ್ತ್ರೀಗಳಾದುದರಿಂದ ಅವರಿಗೆ ಮೀಸೆ ಇಲ್ಲವೆಂದು ಹೇಳುತ್ತಿದ್ದನು. ಸಿದ್ದಾಚಾರಿ ಒಂದು ನಿಂಬೆ ಹಣ್ಣನ್ನು ಮೀಸೆಯ ಮೇಲೆ ಕುಣಿಸಬಹುದಾ ದಂತಹ ಗಿರಲುಮೀಸೆ ಬಿಟ್ಟಿದ್ದಾನೆ. ಇರಲಿ· ಹೀಗೆ ನೀತಿಗೆಟ್ಟ ಗುಂಡಯ್ಯನಿಂದ ಈಗ ಕೆಲವು ವರುಷಗಳ ಹಿಂದಲ ಒಂದು ಯುಗಾದಿ ದಿನ ಪಟೇಲರ ತಲೆಯ ಮೇಲೆ ಬಾಂಬು ಸಿಡಿದಂತೆ "ಇವತ್ತಿನ ಉತ್ಸವಕ್ಕೆ ಹೊಲೆಯರ ಓಲಗ ಕರಿಸಬೇಕೆಂಬ ಮಾತು ಹೊರಟಿತು. [ಆಗ ಹೊಲೆಯರು ಇನ್ನೂ ಆದಿಕರ್ಣಾಟಕರಾಗಿರಲಿಲ್ಲ] ಯುಗಾದಿ ಹಬ್ಬದ ದಿನ ರಾತ್ರಿ ಉತ್ಸವಕ್ಕಾಗಿ ನಮ್ಮೂರ ಓಲಗದವರನ್ನು ಕರೆದು ಕರೆದು, ಪಟೇಲರಿಗೆ ಸಾಕಾಗಿತ್ತು. ಅರ್ಧರಾತ್ರಿ ಮೀರುವ ಹೊತ್ತಾಯಿತು. ರೈತರೆಲ್ಲ ಯುಗಾದಿ ಫಲವನ್ನು ಕೇಳಲು ಬಂದು ಕುಳಿತಿದ್ದರು. ಜೋಯಿಸರು ಹೊಸ ಪಂಚಾಂಗವನ್ನೇ ತಲೆದಿಂಬಿಗೆ ಇಟ್ಟು ಕೊಂಡು ನಿದ್ರೆ ಮಾಡುತ್ತಿದ್ದರು. ಉತ್ಸವವಾದ ಹೊರತು ಪಂಚಾಂಗ ಪಠಣವಾಗುವಂತಿರಲಿಲ್ಲ. ಆಗ ಮೀಸೆಗುಂಡನು "ಹೋಗಿ ಹೊಲೇರ ಓಲಗ ಕರೆದುಕೊಂಡು ಬರುತ್ತೇನೆ" ಎಂದು ಹೊರಟೇ ಬಿಟ್ಟನು. ಪಟೇಲರು "ಬೇಡಯ್ಯ ಬೇಡಯ್ಯ" ಎಂದು ಕೂಗುತ್ತಲೇ ಇದ್ದರು. ಗುಂಡ ಅವರ ಮಾತನ್ನು ಕೇಳದೆ ಹೊರಟೇಹೋದನು.

ಸದ್ಯಕ್ಕೆ ಉತ್ಸವವಿಲ್ಲವೇನೋ ಎಂದುಕೊಂಡು ಜನ ತಮ್ಮ ತಮ್ಮ ಮನೆಗಳಿಗೆ ಹೋಗಿ ಮಲಗಿ ದರು. ದೇವಸ್ಥಾನದಲ್ಲಿದ್ದವರು ಅಲ್ಲಿಯೇ ತೂಕ ಡಿಸತೊಡಗಿದ್ದರು· ಆಗ ದೂರದಲ್ಲಿ ಹೊಲ ಗೇರಿಯ ಹತ್ತಿರ ಕೊಂಬಿನ ಧ್ವನಿ ಎದ್ದು, ರಾತ್ರಿಯ ನಿಶ್ಶಬ್ದತೆಯನ್ನು ಭೇದಿಸಿಕೊಂಡು ಆಕಾಶವನ್ನು ಮುಟ್ಟಿತು. ಗುಂಡನು ಹೊಲಗೇರಿ ಯಿಂದಲೇ ವಾದ್ಯಮಾಡಿಸುತ್ತಾ ಹೊರಟಿದ್ದನು. ಆ ವಾದ್ಯಧ್ವನಿ ಸಮುದ್ರ ಭೋರ್ಗರೆಯುವ ಗರ್ಜನೆಯಂತೆ ಪ್ರಾರಂಭವಾಯಿತು. ಹೊಲ ಗೇರಿಯ ಸ್ತ್ರೀಪುರುಷರೆಲ್ಲ-ಎಂದೂ ಯುಗಾದಿ ಉತ್ಸವ ನೋಡಲು ಬರದವರೆಲ್ಲ-ಹೊರಟು ಬಿಟ್ಟರು. ಕೊಂಬಿನ ಧ್ವನಿ ಕೇಳಿ ಒಂದೆರಡು ಮೈಲು ದೂರದ ಹಳ್ಳಿಯವರೆಲ್ಲಾ ನಮ್ಮೂರ ಕಡೆಗೆ ಧಾವಿಸಿದರು. ಹೊಲೆಯರ ಓಲಗ ಬರು ವಾಗಲೇ ನಾಲ್ಕು ಉತ್ಸವಕ್ಕೆ ಬೇಕಾದ ಜನರನ್ನು ಜತೆಯಲ್ಲಿ ಜಮಾಯಿಸಿಕೊಂಡು ಬಂದರು. ದೇವಸ್ಥಾನದ ಮುಂದೆ ಎಂದೂ ಇಲ್ಲದ ಗದ್ದಲ ಪ್ರಾರಂಭವಾಯಿತು. ಹೊಲೆಯರು ಒಂದು ಸಲ ತಮ್ಮ ತಮಟೆ ಕಾಯಿಸಿ ಬಡಿದರು. ಅದರ ಧ್ವನಿಗೆ ಊರಲ್ಲಿ ಮಲಗಿದ್ದವರಿಗೆಲ್ಲ ಎಚ್ಚರ ವಾಗುವುದಿರಲಿ, ನರಸಿಂಹಸ್ವಾಮಿಗೆ ಸಹ ಎಚ್ಚರ ವಾಗಿದ್ದಿರಬೇಕು. ನರಸಿಂಹಸ್ವಾಮಿಗೆ ಎಚ್ಚರ ವಾಗಬೇಕಾದರೆ ಆ ರಣಚಂಡಿ ವಾದ್ಯವೇ ಬೇಕೇನೋ? ಇಲ್ಲದಿದ್ದರೆ ಆತ ಈ ಜಗತ್ತಿನ

ಅನ್ಯಾಯಗಳನ್ನೆಲ್ಲ ನೋಡಿಕೊಂಡು ಹೀಗೆ ಕಿವಿ ಮುಚ್ಚಿಕೊಂಡು ಕುಳಿತುಬಿಡುತ್ತಿರಲಿಲ್ಲ. ಅಥವಾ ಅವನು ಕೂಡ ಏನೂ ಮಾಡಲಾರದವನಾಗಿ 'ನಾನು ಯೋಚಿಸಿದ್ದೇ ಒಂದು. ಇಲ್ಲಿ ಆಗುತ್ತಿರುವುದೇ ಒಂದು' ಎಂದು ಕರ್ತವ್ಯ ಮೂಢನಾಗಿ ಮಂಕಾಗಿರುವನೇನೋ ಬಲ್ಲವರು?

ದೇವಾಲಯದ ಮುಂದೆ ಓಲಗ ತಮಟೆ ಸದ್ದು ಕೇಳಿದ ಕೂಡಲೆ, ಆ ವೇಳೆಯಲ್ಲಿ ಎಂದೂ ಏಳದಿದ್ದ ಹುಡುಗರೆಲ್ಲ ಎದ್ದು ಬಿಟ್ಟರು. ತಾಳ ಲಯಬದ್ಧವಾಗಿ ಹೊಲೆಯರು ಹೊಡೆಯುತ್ತಿದ್ದ ತಮಟೆಗೆ ಸರಿಯಾಗಿ ಅವರು ಕುಣಿಯುವುದಕ್ಕೇ ಪ್ರಾರಂಭಿಸಿಬಿಟ್ಟರು. ಹೊಲೆಯರ ತಮಟೆಯ ತಾಳಕ್ಕೆ ತಮ್ಮವರು ಕುಣಿಯುತ್ತಿದ್ದುದನ್ನು ನೋಡಿ ಪುರೋಹಿತರಿಗೆ ಹೇಗೆ ಹೇಗೋ ಆಯಿತು. ಆದರೂ ಅವರು ಹೊಲೆಯರಿಗೆ 'ನೀವು ಸ್ವಲ್ಪ ಮುಂದೆ ಹೋಗಿ. ದೇವರಿಗೂ ನಿಮಗೂ ಮಧ್ಯೆ ಸ್ಥಳ ಬಿಟ್ಟಿರಲಿ. ಇಲ್ಲದಿದ್ದರೆ ಮಡಿವಂತರು ಎಲೆ ಅಡಿಕೆ ತಂದು ಕೊಡಲು ಹಿಂಜರಿಯುತ್ತಾರೆ' ಎಂದು ಹೇಳಿ ಅವರನ್ನು ಸ್ವಲ್ಪ ಮುಂದಕ್ಕೆ ತಳ್ಳಿದರು. ಅಂತೂ ಒಳ್ಳೆಯ ವಿಜೃಂಭಣೆಯಿಂದ ಯುಗಾದಿ ಹಬ್ಬ ನಡೆದು ಹೋಯಿತು. ಅದು ಆದ ಮರುದಿನ ಪಟೇಲರೂ ಧರ್ಮದರ್ಶಿಗಳೂ ದೇವರಿಗೆ ಒಂದು ಚಿಲ್ಲರೆ 'ಸಂಪ್ರೋಕ್ಷಣೆ' (ಶುದ್ಧಿ) ಮಾಡಿಸಿದರೆಂದು ವದಂತಿ.

ಅಲ್ಲಿಂದ ಮುಂದೆಯೂ ಕೆಲವು ದಿನಗಳು ನಮ್ಮ ದೇವರ ಮಾಮೂಲು ಓಲಗದವರು ಹಾಗೂ ಹೀಗೂ ಬರುತ್ತಿದ್ದರು. ಆದರೆ ಅವರಿಗೆ ಒಳ್ಳೆಯ ಮಾತು ಹೇಳಿ ಹೇಳಿ ಅವರನ್ನು ಆಶ್ರಯಿಸಿ ಪಟೇಲರಿಗೆ ಸಾಕಾಗಿ ಹೋಯಿತು. ನಮ್ಮ ಊರ ನರಸಿಂಹಸ್ವಾಮಿ ರಥೋತ್ಸವದ ದಿನ ಹೊಲೆಯರು ಬಂದು ಓಲಗ ಊದುವುದೂ ಹೆದ್ದ ಹಾಕುವುದೂ ಹಿಂದಲಿಂದ ಬಂದ ಪದ್ಧತಿ. ದೇಹ ಬಲವೂ ಕಲೆಯೂ ಒಟ್ಟಾಗಿ ಸೇರುವುದು ಅಪರೂಪವೆಂದು ಕೇಳಿದ್ದೇವೆ. ಆದರೆ ಅದಕ್ಕೆ ಅಪವಾದ ನಮ್ಮ ಊರ ಹೊಲೆಯರು. ಉದಾಹರಣೆಗೆ ಹೊಲೆಯರ ಗುಳ್ಳ. ಇವನಿಗೆ ಈಗ ಸುಮಾರು ಎಪ್ಪತ್ತಾರು ವಯಸ್ಸು. ಬೆಳಗಿನಿಂದ ಸಂಜೆವರೆಗೆ ಭೂಮಿ ಉಳುವುದು, ಗೋಡೆ ಹಾಕುವದು, ಅಗೆಯುವುದು, ಗೊಬ್ಬರ ಹೊರುವುದು ಮುಂತಾದುವನ್ನೆಲ್ಲ ಮಾಡುತ್ತಿರುತ್ತಾನೆ. ಓಲಗ ಊದಬೇಕಾಗಿ ಬಂದಾಗ ಆ ಕೆಲಸವನ್ನೂ ಮಾಡುತ್ತಾನೆ. ಮಂಡಿಯ ವರೆಗೆ ಮಣ್ಣು ಮಾಡಿಕೊಂಡು ಗೋಡೆ ಹಾಕುತ್ತಿರುವ ಅವನನ್ನು ನೋಡಿದರೆ ಅವನು ಇಂತಹ ಶ್ರಮಜೀವಿ ಎಂದು ಊಹಿಸುವುದಕ್ಕೇ ಆಗುವುದಿಲ್ಲ. ಅವನು ಮೋರಿ ಊದುವುದಕ್ಕೇ ಹುಟ್ಟಿದ್ದಾನೆಯೋ ಎಂದು ತೋರುವುದು. ಅವನು ಹೊಲೆಯನೇ ಆದರೂ ಹಾಗೆ ಮೋರಿ ಊದುವವರು ನಮ್ಮ ಸುತ್ತು ಮುತ್ತಲ ಪ್ರಾಂತದಲ್ಲಿ ಯಾರೂ ಇಲ್ಲ. ಇನ್ನು ದಾಸ; ಅವನಿಗೂ ಎಪ್ಪತ್ತು ವಯಸ್ಸು. ನನ್ನ ಬಾಲ್ಯದಿಂದಲೂ ಅವನು ಒಂದೇ ಸಮನಾಗಿದ್ದಾನೆ. ಅವನಿಗೆ ವಯಸ್ಸು ಆದಂತೆಯೇ ತೋರುವುದಿಲ್ಲ. ಅವನ ಗಡ್ಡಮೀಸೆಗಳಲ್ಲಿ ಒಂದಾದರೂ ಬಿಳಿಯ ಕೂದಲಿಲ್ಲ. ಅವನೂ ವ್ಯವಸಾಯದ ಕೆಲಸ ಮಾಡುತ್ತಾನೆ. ಭರ್ಜರಿ ಕಲ್ಲು ಕಟ್ಟಡ ಕಟ್ಟುತ್ತಾನೆ. ಯಾವ ಕಲ್ಲನ್ನು ಬೇಕಾದರೂ ಬಾಳೆಯ ನಾರನ್ನು ಸೀಳುವಂತೆ ಸೀಳಿಬಿಡುತ್ತಾನೆ. ಅವನಿಗೆ ಇಂಜನಿಯರಿಂಗ್ ಪರೀಕ್ಷೆ ಆಗಿಲ್ಲದಿದ್ದರೂ ಇಟ್ಟಿಗೆ, ಕಲ್ಲು, ಗಾರೆ ಸಿಮೆಂಟು ಕಟ್ಟಡಗಳನ್ನು ಓವರ್‌ಸಿಯರ್‌ಗಳಿಗಿಂತ ಹೆಚ್ಚು ನಿರ್ಣಯವಾಗಿ ಕಟ್ಟುತ್ತಾನೆ. ನಮಗಾರಿಗೂ ಅಂತಹ ನಿರ್ಣಯ ನೇರ ಗೊತ್ತಾಗುವುದಿಲ್ಲ. ಹೀಗೆ ಬೆಳಗಿನಿಂದ ರಾತ್ರಿಯ ವರೆಗೆ ಒಂದೇ ಸಮನಾಗಿ ದುಡಿದ ಅವನು, ರಾತ್ರಿ ತಮಟೆ ಹೊಡೆಯುವುದನ್ನು ನೋಡಬೇಕು. ಅದರಲ್ಲಿಯೂ ಅವನಿಗಿರುವ ಉತ್ಸಾಹ ಸಾಂಕ್ರಾಮಿಕವಾದುದು. ಅವನ ತಮಟೆ ಗತ್ತಿಗೆ ಹುಡುಗರೆಲ್ಲ ಕುಣಿಯುವುದಕ್ಕೆ ಪ್ರಾರಂಭಿಸುತ್ತಾರೆ. ಹೋದ ಯುಗಾದಿ ದಿನ ದಾಸ ದೇವಸ್ಥಾನದ ಮುಂದೆ ತಮಟೆ ಬಾರಿಸುತ್ತ ನಿಂತಾಗ ಊರಿನ ಹುಡುಗರೆಲ್ಲ ಆ ಮಟ್ಟಿಗೆ ಅನುಸಾರವಾಗಿ ಕುಣಿಯಲು ಪ್ರಾರಂಭಿಸಿಬಿಟ್ಟರು. ಹೊಲೆಯರ ತಮಟೆ ನಾದಕ್ಕೆ, ತಮಟೆ ಹೊಡೆಯುವವನ ಮುಖಭಾವಕ್ಕೆ ಅನುಸಾರವಾಗಿ ಅವನ ಮುಖದ

ಮುಂದೆ ಮಕ್ಕಳು ಕುಣಿದುದನ್ನು ಹಿರಿಯರು ಒಪ್ಪಲಿಲ್ಲ. ಆದರೆ ಕುಣಿಯುವುದು, ಹಾಡುವುದು ಮಕ್ಕಳ ಸ್ವಭಾವ. ಅವನ್ನು ಎಲ್ಲಿ ಕಂಡರೂ ಪುಂಗಿಯನ್ನು ಕೇಳಿ ನಲಿವ ಹಾವಿನಂತೆ ಹುಡುಗರು ನಲಿಯುತ್ತಾರೆ. ದಾಸನ ನಂತರ ಕೊಂಬಿನ ಈರ. ಅವನೂ ಗೊಬ್ಬರ ಹೊರುವ, ಭೂಮಿ ಉಳುವ ಮಣ್ಣಿನ ಹುಳ. ಆದರೆ ಅವನು ಕೊಂಬು ಹಿಡಿದುಬಿಟ್ಟರೆ ಅವನಿಗೆ ಆವೇಶ ಬಂದಂತೆ ಆಗುತ್ತೆ. ಇತರ ಎಲ್ಲ ಸದ್ದುಗಳನ್ನೂ ಮೀರಿ ಕೊಂಬು ಮಿಂಚಿನ ಹೊಳವಿನಲ್ಲಿ ಹೊರಟು ಸುರಳಿ ಸುರಳಿಯಾಗಿ ಅಲೆ ಅಲೆಯಾಗಿ ಅಂತರಿಕ್ಷಕ್ಕೆ ಸುರುಬಾಣದಂತೆ ಹೋಗಿ ಸೇರುತ್ತದೆ. ಆ ಕೊಂಬನ್ನು ಕೇಳಿದಾಗಲೆಲ್ಲ ಭಾರತದ ಹಿಂದಲ ರಾಜರ ದಿಗ್ವಿಜಯ, ಭಾರತಸಂಸ್ಕೃತಿ ಹಿರಿಮೆ ಇವು ನನ್ನ ಜ್ಞಾಪಕಕ್ಕೆ ಬರುತ್ತವೆ. ಆ ಕೊಂಬಿನಲ್ಲಿಯೇ ಒಂದು ವಿಧವಾದ ಗಾಂಭೀರ್ಯ, ರಮ್ಯತೆ, ಸೊಬಗು, ವಿಲಾಸ ಇವೆ. ಕೊಂಬನ್ನು ಹಿಡಿದ ಮನುಷ್ಯ ನೋಡುವುದಕ್ಕೆ ಒಬ್ಬ ಮಾಟಗಾರನಾಗಿ ಜಗತ್ತಿಗೇ ಮಂತ್ರಹಾಕುವವನಂತೆ ತೋರುತ್ತಾನೆ. ಅದರಿಂದಲೇ ಇರಬಹುದು, ಪ್ರಭಾತ್ ಚಲನ ಚಿತ್ರ ತಯಾರಕರು ತಮ್ಮ ಗುರುತಾಗಿ ಕೊಂಬನ್ನು ಹಿಡಿದಿರುವ ನಾರೀಮಣಿಯನ್ನು ಇಟ್ಟುಕೊಂಡಿದ್ದಾರೆ.

ಇಂತಹ ಮಹಾಮಹೋಪಾಧ್ಯಾಯರ, ಗಾನ ಗಜಪತಿ ವಿದ್ಯಾದಿಗ್ಗಜರ, ಗಾನಮಾರ್ತಾಂಡರ ಮುಂದೆ ನಮ್ಮೂರ ಆ ಬಡಪಾಯಿ ಮಡಿ ಓಲಗದವರು ಹಾಯುವುದುಂಟೆ? ನಯನಜ ಕ್ಷತಿಯರಾದ ಅವರನ್ನು ನೆಚ್ಚಿಕೊಂಡಿರುವವರ ಗಡ್ಡಗಳನ್ನು ಸಹ ಬೋಳಿಸಲು ಅವರಿಗೆ ಸಾಧ್ಯವಿಲ್ಲದೆ ನಮ್ಮೂರ ಹಿಂದುಗಳೆಲ್ಲ ಪಾಕಿಸ್ತಾನಿಗಳಾಗಿ ತೋರುತ್ತಿದ್ದಾರೆ. ಹೋದ ವರುಷದ ರಥೋತ್ಸವ ಹೊಲೆಯರ ಪ್ರಾಬಲ್ಯದ ಪರ್ವಕಾಲವಾಯಿತು. ಅಂದಿನ ಕೆಲಸಗಳೆಲ್ಲ ಮಿಂಚಿನ ವೇಗದಲ್ಲಿ ನಡೆದುಹೋಗಿ ಇದು ಹೇಗೆ ಸಂಭವಿಸಿತೆಂಬುದು ಇಂದಿಗೂ ವೈದಿಕರಾದವರಿಗೆ ಒಂದು ಸಮಸ್ಯೆಯೇ ಆಗಿದೆ.

ರಥೋತ್ಸವದ ದಿನ ನಮ್ಮೂರ ಹೊಲೆಯರು ಬಂದು ಹೆದ್ನಹಾಕಿದ ಹೊರತು ತೇರು ಮುಂದಕ್ಕೆ ಹೋಗುವುದಿಲ್ಲವೆಂದು ಹಿಂದೆಯೇ ಹೇಳಿದ್ದೇವೆ. ಆದಿನ ಅವರ ಓಲಗ ವಾದ್ಯಗಳದೂ ಅರ್ಭಟವೋ ಅರ್ಭಟ. ಆದರೂ ಇದುವರೆಗೂ ನಮ್ಮೂರ ನಯನಜ ಕ್ಷತ್ರಿಯ ಓಲಗದವರು ಸಹ ರಥೋತ್ಸವದ ದಿನ ಮಾಮೂಲಿನಂತೆ ಓಲಗ ಊದುತ್ತಾ ಎಲ್ಲೋ ಒಂದೆಡೆ ನಿಂತಿರುತ್ತಿದ್ದರು. ಸ್ವಾಮಿಯನ್ನು ರಥದ ಮೇಲೆ ಏರಿಸಿದನಂತರ ಮೇಲುಗಡೆ, ಅರ್ಚಕ, ಪರಿಚಾರಕ, ನಮ್ಮ ಊರು ಓಲಗದವರು ಕೂರುವುದು ಪದ್ಧತಿ. ಓಲಗದವರು ದೇವರ ಹಿಂದೆ, ಉಳಿದವರು ಮುಂದೆ. ಕೆಳಗ ದೂರದಲ್ಲಿ ಹೊಲೆಯರ ಓಲಗ ತಮಟೆ, ಹೆರೆ, ಡೋಣು, ಕುಣಿಮಿಣಿ, ತಾಳ, ಕೊಂಬು ಕಹಳೆ, ದಾಸಯ್ಯಗಳ ಜಾಗಟೆ, ಶಂಖು, ಭಾಂಕಿ ತುತ್ತುರಿ, ನಗಾರಿ ಮುಂತಾದ ಭಗವಂತನ ದಿಗ್ವಿಜಯ ಯಾತ್ರೆಯ ಭೋರ್ಗರೆಯುವ ನಿಸ್ಸಾಳತತಿ ಬ್ರಹ್ಮಾಂಡಕಟಾಹವನ್ನು ಒಡೆಯುವಂತೆ ಇದ್ದರೂ ರಥದಲ್ಲಿ ನಮ್ಮೂರ ನಯನಜ ಕ್ಷತ್ರಿಯ ಮಡಿ ಓಲಗದವರು ನರಸಿಂಹ ಸ್ವಾಮಿಯ ಹಿಂದೆ ಕುಳಿತುಕೊಂಡು ಆತ್ಮೀಯರಾಗಿ ಸ್ವಾಮಿಯೊಂದಿಗೆ ಗುಟ್ಟಿನ ಸಂಭಾಷಣೆ ನಡೆಸುತ್ತಿರುವಂತೆ ತಮ್ಮ ಪೀ ಊದುತ್ತಿದ್ದರು. ಆ ಶಬ್ದ ಬ್ರಹ್ಮಾಂಡದಲ್ಲಿ ಅದು ಜೀರುಂಬೆಯ ಹೀನ ಧ್ವನಿಯಂತೆ ಕೇಳಿಸುತ್ತಿತ್ತು.



ಹೀಗೆ ನಮ್ಮೂರ ಓಲಗದವರು ರಥೋತ್ಸವದ ದಿನ ತೇರಿನ ಮೇಲೆ ಆಸೀನರಾಗಿರುವುದು ಹಿಂದಲಿಂದ ಬಂದ ಪದ್ಧತಿ. ಆದರೆ ಈ ವರುಷದ ರಥೋತ್ಸವದ ದಿನ ಇದ್ದ ಇಬ್ಬರ ಪೈಕಿ ಒಬ್ಬನಿಗೆ ಕಾಹಿಲೆಯಾದುದರಿಂದ, ಮತ್ತೊಬ್ಬ ರಥದ ಸಮೀಪಕ್ಕೆ ಬರಲೇ ಇಲ್ಲ. ಇತರ ಕಾರ್ಯಗಳ ಅರ್ಭಟದಲ್ಲಿ ನಮ್ಮ ಓಲಗದವರು ಇಲ್ಲದುದನ್ನು ಯಾರೂ ಗಮನಿಸಲೇ ಇಲ್ಲ. ಸುಮಾರು ಎರಡು ಗಂಟೆಗೆ ನರಸಿಂಹಸ್ವಾಮಿಯ ರಥಾರೋಹಣವಾಯಿತು. ಕೂಡಲೆ ಅರ್ಚಕರೂ ನಮ್ಮೂರ ಮಡಿ ಓಲಗದವರೂ ಕ್ರಮವಾಗಿ ಭಗವಂತನ ಹಿಂದೆ, ಮುಂದೆ ಕುಳಿತುಕೊಳ್ಳಬೇಕಾಗಿತ್ತು. ಆದರೆ ಓಲಗದವರು ಎಲ್ಲಿಯೂ ಕಾಣಲಿಲ್ಲ. ಓಲಗದವರೆಲ್ಲಿ ಎಂಬ ಕೂಗು ಎಲ್ಲೆಲ್ಲಿಯೂ ಹೊರಟಿತು. ಧರ್ಮದರ್ಶಿಗಳ ಪೈಕಿ ಒಬ್ಬರು ಓಲಗದವರ ಮನೆಗೆ ಓಡಿದರು: 'ಒಬ್ಬನೇ ಇದ್ದಾನೆ' ಎಂದು ಹಿಂದಿರುಗಿದರು. 'ಹೊತ್ತಾಯಿತು, ಹೊತ್ತಾಯಿತು' ಎಂಬ ಕೂಗು ಎಲ್ಲೆಲ್ಲಿಯೂ. ಹೆದ್ನದವರು ಹೆದ್ನ ಹಾಕಲು ಸಿದ್ಧರಾಗಿ 'ಗೋವಿಂದೋ ಗೋವಿಂದ' ಎಂದು ಕೂಗಿಯೇ ಬಿಟ್ಟರು. ಆ ಸಮಯದಲ್ಲಿ ಅದು ಹೇಗೆ ಆಯಿತೋ ಈವತ್ತಿನವರೆಗೆ ಯಾರಿಗೂ ತಿಳಿಯದು—ಯಾರೋ ಮೋರಿಯ ಗುಳ್ಳನನ್ನೂ ಕೊಂಬಿನ ಈರನನ್ನೂ ಕರೆದುಕೊಂಡು ಹೋಗಿ ರಥದಲ್ಲಿ, ದೇವರ ಹಿಂದುಗಡೆ ನಮ್ಮೂರ ಓಲಗದವರು ಕುಳಿತು ಕೊಳ್ಳುತ್ತಿದ್ದ ಸ್ಥಳದಲ್ಲಿ ಕೂರಿಸಿದರು. ಅನಂತರ ಭಗವಂತನಿಗೆ ಪೊಂಗಲು ಪಾನಕ, ರಸಾಯನ, ಪನಿವಾರಗಳ ನೇವೇದ್ಯವಾಯಿತು. ಇದ್ದಕ್ಕಿದ್ದಂತೆ ರಥದ ಮೇಲಿನಿಂದ, ಏಳು ಅಂತಸ್ತಿನ ಹಂಗಾಮಿ ಬಿದಿರು ಬಟ್ಟೆಗಳ ಗೋಪುರದ ತುದಿಯ ಹಿತ್ತಾಳಿಯ ಕಲಶವನ್ನು ಭೇದಿಸಿಕೊಂಡು, ಈರನ ಕೊಂಬಿನ ಧ್ವನಿಹೊರಟಿತು. ಅನಂತರ ಅದೇ ಧ್ವನಿ ನಿಧಾನವಾಗಿ ಮುಂಗಾರಿನ ನೀರು ತುಂಬಿದ ಮೋಡದ ಗರ್ಜನೆಯಂತೆ, ಗಂಭೀರ ಧ್ವನಿಯಲ್ಲಿ ಹೊರಟಿತು. ಒಂದೊಂದು ಸಮಯದಲ್ಲಿಯಂತೂ ಆ ಕೊಂಬಿನ ಧ್ವನಿ ನಿಂತಕೂಡಲೇ ತೇರು ಮುಂದಕ್ಕೆ ಹೋಗುವುದೂ ನಿಂತು, ಅದು ಮತ್ತೆ ಪ್ರಾರಂಭವಾದ ಕೂಡಲೇ ಗಾಲಿಗಳೂ ಮುಂದೆ ಉರುಳುತ್ತಿದ್ದವು. ಹೀಗೆ ಕೊಂಬು ರಥವನ್ನು ತಳ್ಳಿ ತಳ್ಳಿ ಜನರ ಅಮಿತೋತ್ಸಾಹದೊಡನೆ ಅದರ ನೆಲೆಗೆ ನಿಲ್ಲಿಸಿತು.

ಹೀಗೆ ಹೊಲೆಯರ ಓಲಗದವರು 'ಮಾಮೂಲಿಗೆ' ವಿರೋಧವಾಗಿ ರಥವೇರಿದುದರಿಂದ ಊರಿಗೆ ಏನೋ ಅಪಾಯ ಸಂಭವಿಸಬಹುದೆಂದು ನಮ್ಮ ಕೆಲವು ಮಿತ್ರರೂ ನಮ್ಮೂರ ಮಡಿಓಲಗದವರೂ ಭೂಮ್ಯಾಕಾಶಗಳನ್ನು ನೋಡುತ್ತಾ ಕೆಲವು ಕಾಲ ನಿರೀಕ್ಷಿಸಿದರು- ಆದರೆ ಭಗವಂತನ ಕ್ರೋಧದ ಸೂಚನೆ ಯಾವುದೂ ಕಾಣಲಿಲ್ಲ. ಹೇಗಾದರೂ ಆಗಲಿ, ಹೊಲೆಯರ ಎದುರಿಗೆ ಭಗವಂತನಿಗೆ ಪೊಂಗಲು ಪನಿವಾರ ನಿವೇದನೆಯಾದುದು ಅನ್ಯಾಯವಾಯಿತೆಂದು ಧರ್ಮದರ್ಶಿಗಳೊಬ್ಬರು ಹೇಳಿದರು. ಗುಳ್ಳನೂ ಈರನೂ ದಾಸನೂ ಮಾಮೂಲಿನಂತೆ ಗೊಬ್ಬರ ಹೊರುತ್ತಾ ಗೋಡೆ ಹಾಕುತ್ತಾ ಕೆಸರು ತುಳಿಯುತ್ತಾ ತಮ್ಮ ನಿತ್ಯದ ಹೊಟ್ಟೆಪಾಡಿನ ಕಾರ್ಯದಲ್ಲಿ ತೊಡಗಿದ್ದಾರೆ. ಇದ್ದಕ್ಕಿದ್ದಂತೆ ತಮಗೆ ಭಗವಂತನ ಸಾನ್ನಿಧ್ಯಕ್ಕೆ 'ಪ್ರಮೋಶನ್' ಆದುದೂ ಭಗವಂತ ಆಹಾರವನ್ನು ಸೇವಿಸುವಾಗ ತಾವು ಪ್ರತ್ಯಕ್ಷದಲ್ಲಿದ್ದುದೂ ಅವರ ತಲೆ ತಿರುಗಿಸಿದಂತೆ ಕಾಣುವುದಿಲ್ಲ. 'ಊದಬೇಕಾದ ಓಲಗವನ್ನು ಇಲ್ಲಿ ಊದುವುದರ ಬದಲು ಅಲ್ಲಿ ಊದಿದೆ' ಎಂದು ಅವರು ಭಾವಿಸಿರುವಂತಿದೆ. ಆದರೆ ನಮ್ಮೂರ ನಯನಜ ಕ್ಷತ್ರಿಯ ಓಲಗದವರು ಮಾತ್ರ ತಮ್ಮ ಯಾವುದೋ ಆಸ್ತಿ ಹೋದಂತೆ ಸಿಡುಕುಮೋರೆಯುಳ್ಳವರಾಗಿ ನಮ್ಮ ಯಾವಕಾರ್ಯಕ್ಕೂ ಓಲಗ ಊದುವುದನ್ನೇ ಬಿಟ್ಟಿದ್ದಾರೆ. ನಾಳೆ ನಮ್ಮ ಪುರೋಹಿತರ ಮಗನಿಗೆ ಬ್ರಹ್ಮೋಪದೇಶವಾಗಬೇಕಾಗಿದೆ. ಈರನ ಕೊಂಬಿನ ಧ್ವನಿಯ ಮರೆಯಲ್ಲಿಯೋ ಅದೂ ಆಗಬೇಕಲ್ಲ! ಏನು ಮಾಡೋಣ, ಸ್ವಾಮಿ?

ಡಾಕ್ಟರ— (ರೋಗಿಗೆ) ನಿಮಗೆ ಎಲ್ಲರಿಗೆ ಆಗುವಂಥ ಸಾಮಾನ್ಯ ನೆಗಡಿಯಾಗಿದೆ. ವೈದ್ಯ ಶಾಸ್ತ್ರದಲ್ಲಿ ಅದಕ್ಕೆ ಔಷಧವಿಲ್ಲ. ಆದರೆ ಇದರಿಂದ ಮುಂದೆ ನಿಮಗೆ ನ್ಯುಮೋನಿಯಾ ಆದರೆ ತಿಳಿಸಿ. ಅದಕ್ಕೆ ಯಾವ ಔಷಧ ಕೊಡಬೇಕೆಂಬುದು ನನಗೆ ಗೊತ್ತಿದೆ.

ಪ್ರಾಚೀನ ಭಾರತದಲ್ಲಿ ಕರ ತೆರಿಗೆಗಳು

ಲೇಖಕರು :— ಶ್ರೀ. ನಾಯಕ ವೆಂಕಟರಾಯರು

ಭದ್ರವಾದ ಪ್ರಗತಿಪರ ರಾಷ್ಟ್ರದ ಅಭ್ಯುದಯ ನಿಃಶ್ರೇಯಸ್ಸುಗಳಿಗೆ ಅದರ ಹಣಕಾಸಿನ ಪರಿಸ್ಥಿತಿಯು ಕೂಡ ಭದ್ರವಾಗಿರುವದಗತ್ಯ. ಇದಕ್ಕಾಗಿ ರಾಷ್ಟ್ರದ ಪ್ರಜೆಗಳು ಸ್ವಸಂತೋಷದಿಂದ ಕರ-ಕಂದಾಯಗಳನ್ನು ತೆರುವ ಒಲವಿನವರಾಗುವದು ಅವಶ್ಯವಿದೆ. ಅರಸೊತ್ತಿಗೆ, ಸರ್ವಾಧಿಕಾರಿತ್ವ, ಪ್ರಜಾಪ್ರಭುತ್ವ ಮೊದಲಾದ ಯಾವ ಬಗೆಯ ಆಡಳಿತೆಯಿದ್ದರೂ ನಾಗರಿಕರಾದ ಪ್ರಜೆಗಳು ಸ್ವಯಂಪ್ರೇರಣೆಯಿಂದ ಕರ-ತೆರಿಗೆಗಳನ್ನು ಕೊಡುತ್ತಿರುವವರೆಗೆ ಆ ರಾಜ್ಯ ಪದ್ಧತಿಯು ಸಸೂತ್ರವಾಗಿ ಮುನ್ನಡೆಯುವದು. ಪ್ರಾಚೀನ ಭಾರತದಲ್ಲಿ ಈ ಸಿದ್ಧಾಂತದ ಮಹತ್ವದ ಅರಿವು ಜನರಿಗೆ ಚೆನ್ನಾಗಿ ಇದ್ದಿತೆಂಬುದನ್ನು ಈ ಲೇಖದ ಮೂಲಕ ತಿಳಿಯಬಹುದು.

ಯಾವುದೊಂದು ನಾಗರಿಕ ರಾಷ್ಟ್ರದ ಅಭ್ಯುದಯ ಭದ್ರತೆಗಳಿಗೆ ಅಲ್ಲಿಯ ಪ್ರಜೆಗಳು ಸ್ವಸಂತೋಷದಿಂದ ಕರಕಂದಾಯುಗಳನ್ನು ತೆರುವ ಒಲವಿನವರಾಗುವದು ಅತ್ಯವಶ್ಯವಾಗಿದೆ. ಅರಸೊತ್ತಿಗೆ, ಸರ್ವಾಧಿಕಾರಿತ್ವ, ಪ್ರಜಾಪ್ರಭುತ್ವ ಮೊದಲಾದ ಯಾವ ಬಗೆಯ ಆಡಳತೆಯಿದ್ದರೂ ನಾಗರಿಕರಾದ ಪ್ರಜೆಗಳು ಕರತೆರಿಗೆಗಳನ್ನು ಸ್ವಯಂ ಪ್ರೇರಣೆಯಿಂದ ಕೊಡುತ್ತಿರುವ ವರೆಗೆ ಆ ರಾಜ್ಯ ಪದ್ಧತಿಯು ಸುಸೂತ್ರವಾಗಿ ಮುನ್ನಡೆಯುವದು. ಪ್ರಜಾಪ್ರಭುತ್ವದ ಯಶಸ್ಸಿಗಂತೂ ಜನತೆಯ ಆತ್ಮ ಸಂತೋಷದ ಬೆಂಬಲವು ಹೆಚ್ಚಾಗಿ ಬೇಕು. ನಮ್ಮ ನಾಡು ಸ್ವತಂತ್ರವಾದಂದಿನಿಂದ ಪ್ರಜಾಪ್ರಭುತ್ವದ ಅದ್ಭುತರಮ್ಯವಾದ ಒಂದು ಮಹಾ ಪ್ರಯೋಗವನ್ನು ಕೈಕೊಂಡಿದೆ. ಪಂಚವಾರ್ಷಿಕ ಯೋಜನೆಯಂತಹ ಚಿತ್ತಾಕರ್ಷಕವಾದ ಯೋಜನೆಗಳ ನೂತನ ಪರಂಪರೆಯನ್ನು ಅದು ಆರಂಭಿಸಿದೆ. ಹಾಗೆಯೆ ಭೂಧಾರಣ ಸಮಸ್ಯೆಯ ಬೇರೆ ಬೇರೆ ಅಂಶಗಳನ್ನು ಕುರಿತು ಮಹತ್ವಪೂರ್ಣ ಮತ್ತು ಮೂಲಗ್ರಾಹಿಯಾದ ಸಿದ್ಧಾಂತಗಳನ್ನು ಜನತೆಯ ಮುಂದೆ ಇಟ್ಟಿದೆ. ಅಲ್ಲದೆ ಏಕಮುಖ, ದ್ವಿಮುಖ, ಬಹುಮುಖ ಮಾರಾಟದ ಕರಶುಲ್ಕ, ನೀರಾವರಿ ಮೊದಲಾದ ಸುಂಕಗಳ ಪದ್ಧತಿಯಲ್ಲಿ ಕ್ರಾಂತಿಕರವಾದ ವ್ಯತ್ಯಾಸಗಳನ್ನು ಮಾಡಲಿಚ್ಛಿಸಿದೆ. ಇಂತಹ ಸನ್ನಿವೇಶದಲ್ಲಿ ಕೇವಲ ಪರದೇಶಗಳಲ್ಲಿ ಪ್ರಚಲಿತವಿರುವ ಇಂದಿನ ಕರತೆರಿಗೆ, ಸುಂಕವರಿ ಮೊದಲಾದ ಪದ್ಧತಿಗಳ ವಿವರಗಳಿಂದ ಮುಗ್ಧರಾಗಿ ನಮ್ಮ ಪ್ರಾಚೀನ ಪರಂಪರೆಯಲ್ಲಿರುವ ಹಿತಕರವಾದ ತತ್ವಗಳನ್ನು ಮರೆತರೆ ಅದರಿಂದಾಗುವ ಹಾನಿಯು ಅಷ್ಟಿಷ್ಟಲ್ಲ. ಆದುದರಿಂದ ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿ, ಮನುಸ್ಮೃತಿ, ಕಾಮಂದಕೀಯ ನೀತಿಸಾರವೇ ಮೊದಲಾದ ರಾಜ್ಯಶಾಸ್ತ್ರ ಗ್ರಂಥಗಳ ಆಧಾರದಿಂದ ಮತ್ತು ಕೆಲ ಶಿಲಾಲಿಪಿತಗಳಲ್ಲಿ ಹೇಳಲಾದ ಹಿತೋಕ್ತಿಗಳ ಸಹಾಯದಿಂದ ಪ್ರಾಚೀನ ಕಾಲದ ಕರತೆರಿಗೆಗಳ ಪದ್ಧತಿಯ ರೂಪರೇಷೆಗಳನ್ನು ಇಲ್ಲಿ ಕೊಡುವದು ಅನುಚಿತವಾಗಲಾರದು.

ಭದ್ರವಾದ ಪ್ರಗತಿಪರ ರಾಷ್ಟ್ರದ ಅಭ್ಯುದಯ ನಿಶ್ಶ್ರೇಯಸ್ಸುಗಳಿಗೆ ಅದರ ಹಣಕಾಸಿನ ಪರಿಸ್ಥಿತಿಯು ಕೂಡ ಭದ್ರವಾಗಿರುವದಗತ್ಯ. ಈ ಸಿದ್ಧಾಂತದ ಮಹತ್ವವನ್ನು ನಮ್ಮ ಪ್ರಾಚೀನ ಭಾರತೀಯ ನಯಶಾಸ್ತ್ರಪಾರಂಗತರು ಚೆನ್ನಾಗಿ ಅರಿತಿದ್ದರು. ಅಂತೆಯೆ ಅವರು ರಾಜ್ಯದ ಸಪ್ತಾಂಗಗಳಲ್ಲಿ ಕೋಶಕ್ಕೆ ಒಂದು ಮಹತ್ವದ ಸ್ಥಾನವನ್ನು ಕೊಟ್ಟಿದ್ದರು. "ಕೋಶಮೂಲಾಃ ಕೋಶಪೂರ್ವಾಃ ಸರ್ವಾರಂಭಾಃ । ತಸ್ಮಾತ್ಪೂರ್ವಂ ಕೋಶಮವೇಕ್ಷೇತ" ಎಂದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿದ್ದುದನ್ನು ಇಲ್ಲಿ ಗಮನಿಸಬಹುದು. ಹಾಗೆಯೆ ಮಹಾಭಾರತದಲ್ಲಿ ಕೋಶಮೂಲಾಃ ಹಿ ರಾಜಾನಃ ಎಂದೂ ಕೋಶೋ ವೃದ್ಧಿಕರೋ ಭವೇತ್ ಅಂದರೆ ರಾಜರಿಗೆ ಕೋಶವು ಮುಖ್ಯ ಮತ್ತು ಅದು ಯಾವಾಗಲೂ ಬೆಳೆಯುವಂತಾಗಲಿ ಎಂಬ ಮಾತುಗಳುಂಟು. ಆದುದರಿಂದ "ತಸ್ಮಾನ್ನಿತ್ಯೋತ್ಥಿತೋ ರಾಜಾ ಕುರ್ಯಾದರ್ಥಾನುಶಾಸನಮ್ । ಅರ್ಥಸ್ಯ ಮೂಲಮುತ್ಥಾನಂ ಅನರ್ಥಸ್ಯ ವಿಪರ್ಯಯಃ" ಅಂದರೆ ಹಣವು ಜನತೆಯ ಏಳಿಗೆಯಿಂದ ದೊರೆಯುವದೆಂದೂ ಪ್ರಜೆಗಳ ಉನ್ನತಿಗೆ ಅದುವೇ ಕಾರಣವೆಂದೂ ಹೇಳಿದೆಯಲ್ಲದೆ ಅದಕ್ಕೆ ಜನತೆಯ ಉತ್ಥಾನಕ್ಕೆ ವಿನಿಯೋಗಿಸಿದ ಹಣವು ಅನರ್ಥಕ್ಕೆ ಮೂಲವೆಂದು ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಸ್ಪಷ್ಟವಾಗಿ ಹೇಳಿರುವನು.

ವೇದವಾಙ್ಮಯದಲ್ಲಿಯೂ ರಾಜರ ಪಟ್ಟಾಭಿಷೇಕದ ಬಗೆಗೆ ಇರುವ ಮಂತ್ರಗಳಲ್ಲಿ ರಾಜನು ಪ್ರಜೆಗಳನ್ನು ತಿನ್ನುವವ (ವಿಶಾಮತ್ತಾ ಸಮಜನಿ) ಎಂಬ ವರ್ಣನೆಯು ಬಂದಿರುವದನ್ನು ಲಕ್ಷಿಸಿದರೆ ರಾಜ್ಯಭಾರವನ್ನು ನಡೆಸಿಕೊಂಡು ಹೋಗಲು ಪ್ರಜೆಗಳು ಅರಸನಿಗೆ ಸ್ವಸಂತೋಷದಿಂದ ಕರಗಳನ್ನು ತೆರಬೇಕಾಗುತ್ತಿದ್ದಿತೆಂದು ತಿಳಿದುಬರುವದು. ಮೇಲಿನ ಮಂತ್ರದ ಅರ್ಥವನ್ನು ಅಕ್ಷರಶಃ ಮಾಡಿದರೆ ರಾಜನು ಪ್ರಜೆಗಳನ್ನು ತಿನ್ನುವವನೆಂದಾದರೂ ಪ್ರಜೆಗಳನ್ನು ಯಾವ ರಾಜರೂ ಹರಿದು ತಿನ್ನುತ್ತಿದ್ದಿಲ್ಲ. ಆದುದರಿಂದ ಅದರ ಲಾಕ್ಷಣಿಕ ಅರ್ಥವನ್ನೇ ನಾವು ಮಾಡಬೇಕು. ಅಂದರೆ ರಾಜನ ಉಪಜೀವಿತವು ಪ್ರಜೆಗಳಿಂದ ಬರುವ ಕರತೆರಿಗೆಗಳನ್ನೇ ಅವಲಂಬಿಸಿದ್ದಿತೆಂಬ ಸಂಗತಿಯು ಸ್ಪಷ್ಟವಾಗುವದು. ಮಂತ್ರದ ಈ ಅರ್ಥವನ್ನು ಸರಿಯಾಗಿ ತಿಳಿದುಕೊಳ್ಳದೆ ಕೆಲ ಪಾಶ್ಚಿಮಾತ್ಯ ಪಂಡಿತರು ವೈದಿಕ ಕಾಲದ ರಾಜರು ಪ್ರಜೆಗಳನ್ನು ಕರತೆರಿಗೆಗಳ ಮೂಲಕ ಬಹಳ ಹಿಂಸಿಸುತ್ತಿದ್ದರೆಂದು ಅರ್ಥಮಾಡಿರುವರು. ಅದು ಸಂಸ್ಕೃತ ಭಾಷೆಯ ಅವರ ಅಜ್ಞಾನವನ್ನು ವ್ಯಕ್ತಪಡಿಸುತ್ತದೆ. ಇರಲಿ.

ಬ್ರಾಹ್ಮಣರು ವೇದಕಾಲದಲ್ಲಿ ಕೇವಲ ಜ್ಞಾನೋಪಾಸಕರಾಗಿಯೂ ಜ್ಞಾನಪ್ರಸಾರಕರಾಗಿಯೂ ಕೆಲಸ ಮಾಡುತ್ತಿದ್ದುದರಿಂದ ಅವರು ಯಾವದೇ ಬಗೆಯ ಧನೋತ್ಪಾದಕ ವ್ಯವಸಾಯದಲ್ಲಿ ನಿರತರಾಗಿದ್ದಿಲ್ಲ. ಆದುದರಿಂದ ಅವರು ಕರಭಾರದಿಂದ ಮುಕ್ತರಾಗಿದ್ದರು. ಕ್ಷತ್ರಿಯರು ಹೊಸ ಹೊಸ ರಾಜ್ಯಗಳ ಮೇಲೆ ದಾಳಿಯನ್ನು ಮಾಡಿ ಅವುಗಳನ್ನು ಗೆಲ್ಲುವದರಲ್ಲಿ ಆಸಕ್ತರಾಗಿದ್ದುದರಿಂದ ಅವರ ಮೇಲೆಯೂ ಕರತೆರಿಗೆಯ ಭಾರವಿದ್ದಿಲ್ಲ. ಶೂದ್ರರಿಗಂತೂ ಆಸ್ತಿಯನ್ನು ಧಾರಣ ಮಾಡುವ ಅಧಿಕಾರವೇ ಇದ್ದಿಲ್ಲ. ಹೀಗಾಗಿ ವಾಣಿಜ್ಯ ಪ್ರಪಂಚದಲ್ಲಿ ತೊಡಗಿರುತ್ತಿದ್ದ ವೈಶ್ಯರ ಮೇಲೆಯೆ ಕರಭಾರವು ಹೆಚ್ಚಾಗಿ ಬೀಳುತ್ತಿದ್ದಿತು. ಒಕ್ಕಲತನ, ವಾಣಿಜ್ಯ, ಪಶುಪಾಲನ ಇವುಗಳೇ ವೈಶ್ಯರ ಮುಖ್ಯ ಉದ್ಯೋಗಗಳಾಗಿದ್ದವು. "ಕೃಷಿಗೋರಕ್ಷವಾಣಿಜ್ಯಂ ವೈಶ್ಯಕರ್ಮಸ್ವಭಾವಜಂ" ಎಂದು ಗೀತೆಯಲ್ಲಿ ಹೇಳಿದೆ. ಪ್ರಯುಕ್ತ ವೈಶ್ಯನನ್ನು ಕರಕಾಣಿಕೆಗಳನ್ನು ಕೊಡುವವನೆಂದು "ಅನ್ಯಾಸ್ಯ ಬಲಿಕೃತ್" ಎಂಬ ಮಾತುಗಳಿಂದ ಬಣ್ಣಿಸಲಾಗಿದೆ.

ಪ್ರಾಚೀನ ಕಾಲದಲ್ಲಿ ರಾಜನಿಗೆ ಆಡಳತೆಯಲ್ಲಿ ಸಲಹೆಯನ್ನು ನೀಡಲು ಒಂದು ಮಂಡಲವಿರುತ್ತಿದ್ದಿತು. ಆ ಮಂಡಲದ ಸದಸ್ಯರಿಗೆ ರತ್ನಿಗಳೆಂದು ಹೆಸರಿದ್ದಿತು. ಇವರಲ್ಲಿದ್ದ ಭಾಗಧುಕ್ ಮತ್ತು ಸಮಾಹರ್ತಾ ಎಂಬಿಬ್ಬರಲ್ಲಿ ಅರಸರಿಗೆ ಪ್ರಜೆಗಳಿಂದ ಸಲ್ಲಬೇಕಾದ ಭಾಗಧೇಯವನ್ನು ಸಂಗ್ರಹಿಸತಕ್ಕವನು ಮೊದಲನೆಯವನು. ಕಪ್ಪಕಾಣಿಕೆ ಕರ ತೆರಿಗೆಗಳನ್ನು ಕೂಡಿಸುವವನು ಸಮಾಹರ್ತನು. ಆಗಿನ ಕಾಲದ ರಾಜ್ಯ ಈಗಿನಂತೆ ವ್ಯಾಪಕ ಸ್ವರೂಪದ್ದಾಗಿದ್ದಿಲ್ಲ. ಪ್ರಜೆಗಳ ಮುಖ್ಯ ಉದ್ಯೋಗವೆಂದರೆ ಒಕ್ಕಲತನ ಮತ್ತು

ಗೋರಕ್ಷಣೆ. ಆದುದರಿಂದ ಒಕ್ಕಲತನದ ಉತ್ಪಾದನೆಯಲ್ಲಿ, ಕೆಲವೊಂದು ಅಂಶವನ್ನು ರಾಜನಿಗೆ ಅವರು ತೆರುತ್ತಿದ್ದರು. ಆದರೆ ಆ ಅಂಶವು ಯಾವ ಪ್ರಮಾಣದಲ್ಲಿದ್ದಿತೆಂಬ ವಿಷಯವು ವೇದವಾಙ್ಮಯದಲ್ಲಿ ಸುಸ್ಪಷ್ಟವಾಗಿಲ್ಲ. ವೇದಕಾಲದ ಸಮಾಜದಲ್ಲಿ ಗೋಪಾಲಕರು ಒಂದು ಮಹತ್ವದ ಅಂಗವಾಗಿದ್ದುದರಿಂದ ಅವರು ಆಕಳು, ಎತ್ತು, ಕುದುರೆಗಳನ್ನೇ ಕರಗಳೆಂದು ರಾಜನಿಗೆ ಕೊಡುತ್ತಿದ್ದರು. ಆದುದರಿಂದಲೇ ಶ್ರೀಸೂಕ್ತದಲ್ಲಿ ಲಕ್ಷ್ಮಿಯನ್ನು ಅಶ್ವದಾಗೋದಾ ಧನದಾ ಎಂದು ಸಂಬೋಧಿಸಲಾಗಿದೆ.

ಪ್ರಜೆಗಳಿಂದ ಬರುವ ಕರತೆರಿಗೆಗಳಲ್ಲದೆ ಪರಾಜಿತರಾದ ರಾಜರು ಗೆದ್ದ ಅರಸರಿಗೆ ಕಪ್ಪುಕಾಣಿಕೆಗಳನ್ನು ಕೊಡುತ್ತಿದ್ದರು. ಇದು ಒಂದು ರಾಜನ ಕೋಶಮೂಲವಾಗಿದ್ದಿತು.

ಮೌರ್ಯ ಕಾಲದಿಂದಲೇ ಕರತೆರಿಗೆಗಳ ಪದ್ಧತಿಯು ಒಂದು ಸುಸ್ಪಷ್ಟವಾದ ರೂಪವನ್ನು ಧರಿಸಿದಂತೆ ತೋರುತ್ತದೆ. ಅರ್ಥಶಾಸ್ತ್ರ, ಧರ್ಮಸೂತ್ರ, ಮತ್ತು ಸ್ಮೃತಿ ಗ್ರಂಥಗಳಲ್ಲಿ, ಇದರ ಬಗೆಗೆ ಸಾಕಷ್ಟು ವಿವರಗಳು ದೊರೆಯುತ್ತವೆ. ಅದರಂತೆಯೆ ಕಲ್ಬರೆಹ, ತಾಮ್ರಪಟ ಮೊದಲಾದವುಗಳೂ ಈ ವಿಷಯವನ್ನು ತಿಳಿದುಕೊಳ್ಳಲು ಉತ್ತಮ ಸಾಧನಗಳಾಗಿವೆ. ಇದುವರೆಗೆ ಅಲ್ಲಲ್ಲಿ ವ್ಯಕ್ತವಾಗಿರುವ ಮಾತುಗಳ ಆಧಾರದಿಂದ ಕರತೆರಿಗೆಗಳ ತತ್ವಗಳಾವುವಿದ್ದವೆಂಬುದನ್ನು ಸಂಗ್ರಹಿಸಿ ಹೀಗೆ ಹೇಳಬಹುದು.

(೧) ಕರಾಕರಣವು ನ್ಯಾಯಸಮ್ಮತವೂ ಸಮಂಜಸವೂ ಆಗಿರತಕ್ಕದ್ದು. ಅತಿಭಾರವಾದ ಕರವನ್ನು ಪ್ರಜೆಗಳ ಮೇಲೆ ಹೇರುವದರಿಂದ ರಾಜನು ತಿರಸ್ಕರಣೀಯನಾಗುವಂತೆ ಬೇರೆ ಯಾವುದರಿಂದಲೂ ಆತನು ಪ್ರಜಾದ್ವೇಷಕ್ಕೆ ಗುರಿಯಾಗಲಾರನೆಂಬುದನ್ನು ಮರೆಯಕೂಡದು.

(೨) ವೃಕ್ಷಗಳಿಗೆ ಅಪಾಯವಾಗದಂತೆ ತೋಟಗನು ಹೂ ಹಣ್ಣುಗಳನ್ನು ಹರಿಯುವಂತೆ ಇಲ್ಲವೆ ಹೂವಿನಲ್ಲಿಯ ಮಕರಂದವನ್ನು ಜೇನ್ನೊಣವು ಹೂವಿಗೆ ಅಪಾಯವಾಗದಂತೆ ಸವಿಯುವಂತೆ ರಾಜನು ಪ್ರಜೆಗಳಿಗೆ ತೊಂದರೆಯಾಗದಂತೆ ಕರಗಳನ್ನು ಅವರಿಂದ ತೆಗೆದುಕೊಳ್ಳಬೇಕು.

(೩) ಆಡನ್ನು ಕೊಂದು ತಿನ್ನುವವನು ಅದರ ಮಾಂಸದಿಂದ ಒಂದು ಊಟವನ್ನು ಮಾಡಬಹುದು; ಆದರೆ ಅದನ್ನು ಸಾಕಿ ಬೆಳೆಸುವವನು ಅನೇಕ ವರ್ಷಗಳ ವರೆಗೆ ದಿನಾಲು ಅದರ ಹಾಲನ್ನು ಕುಡಿಯುವನು.

(೪) ಪ್ರಭುತ್ವಕ್ಕೂ ಪ್ರಜೆಗಳಿಗೂ ಪರಸ್ಪರ ಮನಸ್ತಾಪವಾಗದಂತೆ ಕರತೆರಿಗೆಗಳ ಪದ್ಧತಿಯಿರತಕ್ಕದ್ದು.

(೫) ವಾಣಿಜ್ಯೋದ್ಯಮಗಳಲ್ಲಿ ಕರಾಕರಣೆಯು ಅವುಗಳ ನಿಕ್ಕಿ ಲಾಭದ ಮೇಲಾಗಬೇಕಲ್ಲದೆ ಹಸಿಬಿಸಿ ಗಳಿಕೆಯ ಮೇಲಾಗಕೂಡದು

(೬) ಯಾವುದೊಂದು ವಸ್ತುವಿನ ಮೇಲೆ ಒಮ್ಮೆ ಮಾತ್ರ ಕರವು ಹೇರಲ್ಪಡಬೇಕಲ್ಲದೆ ಹೆಚ್ಚು ಸಲವಲ್ಲ.

(೭) ಕರಾಕರಣೆಯಲ್ಲಿ ಹೆಚ್ಚಳವು ಅವಶ್ಯವಾದರೆ ಅದು ಕ್ರಮೇಣವಾಗಿರಬೇಕಲ್ಲದೆ ಒಮ್ಮೆಲೆ ಗಗನಕ್ಕೆ ನೆಗೆವಂತೆ ಇರಕೂಡದು.

(೮) ರಾಷ್ಟ್ರಕ್ಕೆ ವಿಪತ್ತು ಒದಗಿದಾಗ ಮಾತ್ರ ವಿಶೇಷ ಕರಭಾರವನ್ನು ಹಾಕಬೇಕಲ್ಲದೆ ಜನತೆಗೆ ಅದರ ಅವಶ್ಯಕತೆಯನ್ನು ಸ್ಫುಟವಾಗಿ ತಿಳಿಸಿಹೇಳಿ ಅವರ ಆತ್ಮಸಂತೋಷದ ಅನುಮತಿಯನ್ನು ಅದಕ್ಕೆ ಪಡೆಯಬೇಕು.

ಮೇಲೆ ಹೇಳಿದ ಈ ತತ್ವಾಷ್ಟಕವು ಈಗಿನ ಯುಗದಲ್ಲಿಯೂ ಅಷ್ಟೇ ನ್ಯಾಯ್ಯವೂ ಸಮಂಜಸವೂ ಆಗಿರುತ್ತದೆಂಬುದನ್ನು ಓದುಗರು ಮನಗಂಡಿರಲು ಸಾಕು.

ಈ ತತ್ವಗಳನ್ನು ಉಲ್ಲೇಖಿಸಿದ ಒಂದೆರಡು ಮಹತ್ವದ ಅವತರಣಿಕೆಗಳು ಹೀಗಿವೆ :

ಪ್ರದ್ವಿಷಂತಿ ಪರಿಖ್ಯಾತಂ ರಾಜಾನಮತಿಖಾದಿನಂ
— (ಮ. ಭಾ.)

ಫಲಾರ್ಥೀ ನೃಪತಿರ್ಲೋಕಾನ್
ಪಾಲಯೇದ್ಯತ್ನಮಾಸ್ಥಿತಃ
ದಾನ ಮಾನಾದಿ ತೋಯೇನ
ಮಾಲಾಕಾರೋಂಽಕುರಾನಿವ ॥ (ಪಂಚತಂತ್ರ)

ಅಜಾಮಿವ ಪ್ರಜಾಂ ಹನ್ಯಾದ್ಯೋ
ಮೋಹಾತ್ಪೃಥಿವೀ ಪತಿಃ ।
ತಸ್ಯೈಕಾ ಜಾಯತೇ ಪ್ರೀತಿರ್ನದ್ವಿತೀಯಾ
ಕದಾಚನ ॥
(ಪಂಚತಂತ್ರ)

ಲಾಭಂ ದೃಷ್ಟ್ವಾ ಹರೇಚ್ಛುಲ್ಕಂ
ಕ್ರೇತೃತಶ್ಚ ಸದಾನೃಪಃ ॥ (ಶುಕ್ರನೀತಿ)
ವಸ್ತುಜಾತಸ್ಯೈಕವಾರಂ
ಶುಲ್ಕಂ ಗ್ರಾಹ್ಯಂ ಪ್ರಯತ್ನತಃ ॥ (ಶುಕ್ರನೀತಿ)

ಸಾಹಸಿಗರಾದ ಜನರಾರಾದರೂ ಬೀಳು ನೆಲವನ್ನು ಸಾಗುಮಾಡಿದರೆ ಅಥವಾ ತಾವೇ ಕಟ್ಟಿದ ಕೆರೆ ಕಟ್ಟೆಗಳಿಂದ ನೀರನ್ನುಣಿಸಿ ಹೆಚ್ಚು ಬೆಳೆಯನ್ನು ಬೆಳೆದರೆ ಆರಂಭದಲ್ಲಿ ಅವರ ಮೇಲೆ ಅತ್ಯಲ್ಪ ಕರವನ್ನು ಹಾಕಬೇಕೆಂದೂ ಐದಾರು ವರ್ಷಗಳ ಅವಧಿಯಲ್ಲಿ ಅದರ ಪ್ರಮಾಣವನ್ನು ವಾಡಿಕೆಯ ದರಕ್ಕೆ ಏರಿಸಬೇಕೆಂದೂ ಶುಕ್ರನೀತಿ ಮತ್ತು ಅರ್ಥಶಾಸ್ತ್ರಗಳಲ್ಲಿ ಹೇಳಿದೆ.

ಕರಾಕರಣೆಯ ಸಾಮಾನ್ಯ ತತ್ವಗಳ ವಿಚಾರವು ಹೀಗಿದ್ದಿತೆಂಬುದನ್ನು ತಿಳಿದುಕೊಂಡ ಬಳಿಕ ಆಗಿನ ಕಾಲದ ಮುಖ್ಯವಾದ ಕರಗಳು ಯಾವುವೆಂಬುದನ್ನು ಅರಿತುಕೊಳ್ಳುವ ಕುತೂಹಲವುಂಟಾಗುವದು ಸಹಜ.

ಈಗಿನಂತೆ ಭೂಕಂದಾಯವೇ ಆಗಲಾದರೂ ಸರಕಾರದ ಆದಾಯದ ಮುಖ್ಯ ಸಾಧನವಾಗಿದ್ದಿತು. ಇದರ ಪ್ರಮಾಣವು ೧೦೦ ಕ್ಕೆ ೮ ರಿಂದ

೩೩ ರ ವರೆಗೆ ಬೇರೆ ಬೇರೆ ಬಗೆಯಾಗಿದ್ದಿತು. ಸಾಮ್ರಾಜ್ಯವಿಸ್ತರಣೆಯ ಧೋರಣವುಳ್ಳ ರಾಜ್ಯಗಳಿಗೆ ೧೦೦ ಕ್ಕೆ ೧೬ ರಂತೆ ಭೂಕಂದಾಯುವನ್ನು ತೆಗೆದುಕೊಂಡರೂ ಅದು ಸಾಲುತ್ತಿದ್ದಿಲ್ಲ. ಒಕ್ಕಲತನದ ಮೇಲೆ ೧೦೦ ಕ್ಕೆ ೨೫ ರಷ್ಟರವರೆಗೆ ಕರವು ಬೀಳುತ್ತಿದ್ದಿತೆಂಬುದಕ್ಕೆ ಕೌಟಲ್ಯನ ಅರ್ಥಶಾಸ್ತ್ರದಲ್ಲಿ ಆಧಾರವಿದೆ. ೧೧ ನೆಯ ಶತಮಾನದಲ್ಲಿ ಚೋಳರ ಕಾಲದಲ್ಲಿ ನೀರಾವರಿಯ ಭೂಮಿಗಳಿಗೆ ೧೦೦ ಕ್ಕೆ ೩೩ ರವರೆಗೆ ಕರವನ್ನು ತೆರಬೇಕಾಗುತ್ತಿದ್ದಿತೆಂದೂ ತಿಳಿಯುತ್ತದೆ. ಈ ಕರವನ್ನು ಹೊಲಗಳಲ್ಲಿ ಬೆಳೆದ ಧಾನ್ಯಗಳ ರೂಪದಲ್ಲಿಯೆ ಕೊಡಲಾಗುತ್ತಿದ್ದಿತು. ಅರಸರು ಆಗಿನಕಾಲಕ್ಕೆ ಅಲ್ಲಲ್ಲಿ ಇಂತಹ ಧಾನ್ಯಭಾಗವನ್ನು ಸಂಗ್ರಹಿಸಿ ಇಡಲು ದೊಡ್ಡ ದೊಡ್ಡ ಉಗ್ರಾಣಗಳನ್ನು ಕಟ್ಟಿಸಿದುತ್ತಿದ್ದರೆಂದು ಗ್ರಂಥಗಳಲ್ಲಿ ಉಲ್ಲೇಖವಿದೆ. ಇಂತಹ ಕಾಳು ಕಡಿಗಳನ್ನು ಹುಳಹತ್ತಿ ಇಲ್ಲವೆ ಬೇರೆಕಾರಣದಿಂದ ಕೆಡಲಾರಂಭವಾಗುವ ಮುಂಚೆಯೇ ಮಾರಾಟಮಾಡಿ ಬಿಡಲಾಗುತ್ತಿದ್ದಿತು. ಅರ್ಥಶಾಸ್ತ್ರದ ಮೇಲೆ ಭಾಷ್ಯವನ್ನು ಬರೆದ ಭಟ್ಟಸ್ವಾಮಿಯೆಂಬವನು ಭೂಮಿ, ಜಲ, ಕೆರೆ, ಕಟ್ಟೆಗಳು ಖಾಸಗಿ ಒಡೆತನಕ್ಕೆ ಒಳಪಡಲಾರವು; ಅವುಗಳಿಗೆ ರಾಜನೇ ಒಡೆಯನು ಎಂಬ ಮಾತನ್ನು 'ರಾಜಾ ಭೂಮೇಃ ಪತಿದೃಷ್ಟೋ ಶಾಸ್ತ್ರಜ್ಞೈರುದಕಸ್ಯ ತು । ತಾಭ್ಯಾಮನ್ಯತ್ತು ಯದ್ದ್ರವ್ಯಂ ತತ್ರಸ್ವಾಮ್ಯಂ ಕುಟುಂಬಿನಾಂ' ಎಂಬ ಶ್ಲೋಕದ ಆಧಾರದಿಂದ ತಿಳಿಸಿರುವನು. ಆದರೆ "ತತ್ತದ್ಗ್ರಾಮ ಕ್ಷೇತ್ರಾದೌ ಸ್ವತ್ವಂತು ತತ್ತದ್ಭೌಮಿಕಾನಾಮೇವ । ರಾಜ್ಞಾಂ ತು ಕರಗ್ರಹಣಮಾತ್ರಂ" ಎಂದರೆ ಆಯಾಯ ಗ್ರಾಮುಗಳಲ್ಲಿಯ ಹೊಲಗಳ ಒಡೆತನವು ಆಯಾಯ ಭೂಮಿಗಳ ಒಡೆಯರದೇ. ರಾಜನಿಗೆ ಕೇವಲ ಕರವನ್ನು ತೆಗೆದುಕೊಳ್ಳುವ ಅಧಿಕಾರವುಂಟು ಎಂಬ ವಾಕ್ಯಗಳು ಅಲ್ಲಲ್ಲಿ ಬರುತ್ತವೆ. ಇವುಗಳನ್ನು ನೋಡಿದರೆ ಕಾಲಾಂತರದಿಂದ ವಿಚಾರಗಳು ಬದಲಾಗಿರುತ್ತವೆಂಬ ಅಂಶವು ಸ್ಪಷ್ಟವಾಗದಿರದು.

ನೆಲಗಂದಾಯದ ತರುವಾಯ ವ್ಯಾಪಾರೋದ್ಯೋಗಗಳ ತೆರಿಗೆಯು ಮಹತ್ವದ್ದೆಂಬ ವಿಷಯವು ಆಗಿನ ಜನರಿಗೂ ಗೊತ್ತಿದ್ದಿತು. ಸುಂಕದಕಟ್ಟೆಯ ತೆರಿಗೆ, ಆಯಾತ ಶುಲ್ಕಗಳನ್ನು ತೆಗೆದು ಕೊಳ್ಳಲಾಗುತ್ತಿದ್ದಿತು. ತೂಕ, ಮಾಪು, ಅಂಗಡಿ ಕರ, ಮೊದಲಾದವುಗಳ ಪದ್ಧತಿಯು ಮಧ್ಯ ಯುಗದಲ್ಲಿ ಬಳಕೆಯಲ್ಲಿದ್ದಿತು. ಕರ, ತೆರಿಗೆಯ ತತ್ವಗಳು ಮತ್ತು ಪದ್ಧತಿ ಹೀಗಿದ್ದಿತೆಂದ ಮಾತ್ರಕ್ಕೆ ಆಗಿನ ಕಾಲದಲ್ಲಿ ಅನ್ಯಾಯದ ಕರ ತೆರಿಗೆಗಳನ್ನು ತೆರುವ ಪ್ರಸಂಗವು ಪ್ರಜೆಗಳಿಗೆ ಎಂದೂ ಬಂದಿರಲಿಲ್ಲೆಂದು ಮಾತ್ರ ಯಾರೂ ತಿಳಿಯಕೂಡದು. ಅಂತಹ ಕರತೆರಿಗೆಗಳ ವಿರುದ್ಧ ಜನರು ಸಂಘಟಿತರಾಗಿ ಹೋರಾಡುತ್ತಿದ್ದರೆಂಬ ಬಗೆಗೂ ಉಲ್ಲೇಖಗಳು ಶಾಸನಾದಿಗಳ ಬಂದಿವೆ. ಆದರೆ ಅವುಗಳ ವಿಚಾರವೀಗ ಅನವಶ್ಯಕ. ಕೊನೆಯದಾಗಿ ಅರಸರಿಗೆ ಸಲ್ಲುತ್ತಿದ್ದ ಕರತೆರಿಗೆಗಳೇ ಮೊದಲಾದ ಆದಾಯದಲ್ಲಿ ಅರ್ಧ ದಷ್ಟು ಹಣವು ಈಗಿನಂತೆಯೆ ಸೈನ್ಯಶಾಖೆಗಾಗಿ ವೆಚ್ಚವಾಗುತ್ತಿದ್ದಿತೆಂಬ ಅಂಶವು ಬಹಳ ಉದ್ಬೋಧಕವಾಗಿದೆ. ಮಾನವ ವರ್ಗವು ಸಾವಿರಾರು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯ ವಲ ನಕ್ಕೆ ಇದುವೇ ನಿದರ್ಶನವಲ್ಲವೆ?



ಕನ್ನಡಿಯಲ್ಲಿ ನೋಡಿಕೊಳ್ಳಿ!

ಓರ್ವ ಕುಶಲ ಚಿತ್ರಕಾರ ಚಿತ್ರಿಸುವಷ್ಟು ಮನುಷ್ಯದೇಹ ಪ್ರಮಾಣಬದ್ಧವಾಗಿದೆಯೆಂದು ನೀವು ನಿಜಕ್ಕೂ ನಂಬಿರುವಿರೇನು? ಇನ್ನೊಮ್ಮೆ ನೀವು ಒಂದು ಕಿರಿದಾದ ಸಂಕದ ಮೇಲೆ ನಡೆದುಹೋಗುತ್ತಿರುವಾಗ ಕಣ್ಣು ಕಟ್ಟಿಕೊಂಡು ನಡೆಯಲು ಪ್ರಯತ್ನಿಸಿರಿ. ಸಂಕ ನೇರವಾಗಿದ್ದರೂ ನೀವು ಸರಳರೇಖೆಯಲ್ಲಿ ಹೋಗುವದು ಸಾಧ್ಯವಾಗುವದಿಲ್ಲ. ಕಣ್ಣು ಕಟ್ಟಿಕೊಂಡು ೩೦ ಗಜದೂರ ಸರಳರೇಖೆಯಲ್ಲಿ ನಡೆಯುವದು ಮನುಷ್ಯನಿಗೆ ಸಾಧ್ಯವಾಗುವದಿಲ್ಲ. ಯಾಕೆ ಎಂದು ಗೊತ್ತೇ? ಮನುಷ್ಯನ ದೇಹ ಪ್ರಮಾಣಬದ್ಧವಾಗಿರುವದಿಲ್ಲ. ಕೈಕಾಲುಗಳು ಮುಖದ ಉದ್ದಳತೆ ಪ್ರಮಾಣಬದ್ಧವಿರುವದಿಲ್ಲ. ಕನ್ನಡಿಯಲ್ಲಿ ನೋಡಿ. ನೂರಕ್ಕೆ ೯೬ ಜನರಲ್ಲಿ ಮುಖದ ಬಲಭಾಗವು ಎಡಭಾಗಕ್ಕಿಂತ ಹೆಚ್ಚು ಬೆಳವಣಿಗೆ ಹೊಂದಿರುತ್ತದೆ.

ಐತಿಹಾಸಿಕ ಕಾದಂಬರಿಗಳು

ಕಾದಂಬರಿಯೆಂಬುದು ಎಷ್ಟು ಮಟ್ಟಿಗೆ ವ್ಯಕ್ತಿಗಳ ಶೀಲ, ಹೋರಾಟಗಳ ಕಥಾನಕವಾಗಿ ಇರಬಲ್ಲುದೊ, ಅಷ್ಟೇ ಮಟ್ಟಿಗೆ ಅದು ಆ ಕಥಾನಕ ನಡೆದ ಕಾಲ, ಕುಲ, ಆವರಣಗಳ ವಾಸ್ತವ ಚಿತ್ರವೂ ಆಗಿರಬೇಕು. ಈ ದೃಷ್ಟಿಯಲ್ಲಿ ಐತಿಹಾಸಿಕ ಕಾದಂಬರಿಗಳಲ್ಲಿರಬೇಕಾದ ಗುಣಗಳನ್ನು ಶ್ರೀ. ಕಾರಂತರು ಇಲ್ಲಿ ಎತ್ತಿ ತೋರಿಸಿದ್ದಾರೆ.

ಲೇಖಕ: **ಶ್ರೀ. ಶಿವರಾಮ ಕಾರಂತ**

ಸಾಹಿತ್ಯದಲ್ಲಿ ಇಂದು ಕಾದಂಬರಿಗಳಿಗೆ ವಿಶೇಷವಾದ ಸ್ಥಾನ ದೊರಕುತ್ತ ಬಂದಿದೆಯಾದರೂ ನಮ್ಮ ಕನ್ನಡದಲ್ಲಾಗಲಿ ಭಾರತದ ದೇಶಭಾಷೆಗಳಲ್ಲಾಗಲಿ ನಾವು ವಿಶೇಷವಾಗಿ ಐತಿಹಾಸಿಕ ಕಾದಂಬರಿಗಳನ್ನು ಕಾಣುತ್ತಲಿಲ್ಲ. ಹಾಗೆ ಬಂಕಿಮರ ಗ್ರಂಥಾನುವಾದಗಳಲ್ಲಿ, ಹರಿನಾರಾಯಣ ಆಪ್ಟೆಯವರ ಗ್ರಂಥಾನುವಾದಗಳಲ್ಲಿ ಅಥವಾ ಈಚೆಗಿನ ಕನ್ನಡ ಬರಹಗಾರರ ಕೆಲವೊಂದು ಬರವಣಿಗೆಗಳಲ್ಲಿ ಐತಿಹಾಸಿಕವೆನಿಸುವ ಕಾದಂಬರಿಗಳೇನೋ ಬಂದಿವೆ. ನಾವು ಕಾದಂಬರಿಯ ಕೆಲಸವು ಇತಿಹಾಸವಲ್ಲವೆಂದು ಒಪ್ಪಿಕೊಳ್ಳುವದಾದರೂ ಕೂಡ ಒಂದು ಬರಹವು ಐತಿಹಾಸಿಕ ಕಾದಂಬರಿ ಎನಿಸಬೇಕಾದರೆ, ಅದರ ವಸ್ತು ಯಾವುದೇ ಒಂದು ಕಾಲಮಾನದ ಹಿನ್ನೆಲೆಯಲ್ಲಿ ಬೆಳೆದ ವ್ಯಕ್ತಿಗಳ ಜೀವನಚಿತ್ರವನ್ನು ತೋರಿಸಬೇಕಷ್ಟೆ. ಅದರಲ್ಲಿನ ಹಿನ್ನೆಲೆಯು ನಮಗೆ ಆ ಇತಿಹಾಸಭಾಗದ ಜನಜೀವನವನ್ನು ಅತಿಸ್ಪಷ್ಟವಾಗಿ ತೋರಿಸಬೇಕಾಗುತ್ತದೆ. ಆ ಕಾಲಕ್ಕೂ ಆವರಣಕ್ಕೂ ಅದರ ಹಿಂದಿನದಕ್ಕೂ ಆದರ ಮುಂದಿನದಕ್ಕೂ ಇರುವ ವ್ಯತ್ಯಾಸಗಳು ಕಣ್ಮುಂದೆ ಸ್ಪಷ್ಟವಾಗಿ ಕಟ್ಟದೆ ಹೋದಲ್ಲಿ, ಅದು ಐತಿಹಾಸಿಕ ಕಾದಂಬರಿ ಎಂದೆನಿಸಬೇಕಾಗಿಲ್ಲ. ಬರಿಯ ಒಬ್ಬ ಶಿವಾಜಿ. ಅವರಂಗಜೇಬ, ರಾಮರಾಯ, ಅಥವಾ ಇನ್ನೊಬ್ಬ ವ್ಯಕ್ತಿಯನ್ನಾಗಲಿ ಇಲ್ಲವೆ ಉಪನಿಷದ್‌ಯುಗದ ಅಥವಾ ಆ ಮೇಲಿನ ಋಷಿಗಳನ್ನಾಗಲಿ ಬುದ್ಧನನ್ನಾಗಲಿ ಎತ್ತಿಕೊಂಡು ಬರಿಯ ಅವನ ಕಥೆ ಹೇಳುವುದರಿಂದಲೆ ಐತಿಹಾಸಿಕ ಕಾದಂಬರಿ ನಿರ್ಮಾಣವಾಗುವುದಿಲ್ಲ.

ವ್ಯಕ್ತಿಗಳ ಸಾಹಸವೃತ್ತಿ, ಶೌರ್ಯ, ಧೈರ್ಯ, ಕಾಮನೆಗಳು, ನಿರಾಶೆಗಳು ಬಹುಮಟ್ಟಿಗೆ ಎಲ್ಲ ಕಾಲಮಾನದಲ್ಲಿ ಒಂದೇ ತೆರನಾಗಿರುತ್ತವೆ. ಪ್ರಪಂಚದ ಬಹುಮುಖವಾದ ದುಃಖಗಳಿಂದ ವ್ಯಕ್ತಿಯಲ್ಲಿ ಅನುಕಂಪ, ಔದಾರ್ಯಗಳು ಉಂಟಾಗುತ್ತವೆ. ಪ್ರಪಂಚದ ಮೋಹಕವಸ್ತುಗಳ ದೆಸೆಯಿಂದ ಶೃಂಗಾರ, ಲಾಸ್ಯ, ಕಾಮ, ಕಾಮನೆಗಳುಂಟಾಗಿ ಕಾಮಿತ ವಸ್ತುವನ್ನು ಪಡೆಯುವ ಬಯಕೆಗಳೂ ಅವು ಸಾರ್ಥಕವಾಗದಲ್ಲಿ ವಿರಹಗಳೂ ಯಾತನೆಗಳೂ-ಇವೆಲ್ಲ ರೂಪುಗೊಳ್ಳುತ್ತವೆ. ಸಂಪತ್ತು, ಅಧಿಕಾರಗಳ ಸಲುವಾಗಿ ಇವೇ ಬಗೆಯಲ್ಲಿ ಮಾನವೀ ಕ್ಲೇಶಗಳೂ ಶೌರ್ಯಗಳೂ ಕ್ರೌರ್ಯಗಳೂ ಉಂಟಾಗುತ್ತವೆ. ಹೀಗೆ ನಮ್ಮೆಲ್ಲ ಈರ್ಷ್ಯೆ, ಕೋಪಾಟೋಪ, ಸುಖ-ದುಃಖ, ಪ್ರೇಮ-ಕಾಮ ಮೊದಲಾದವುಗಳು ಒಂದೊಂದು ವ್ಯಕ್ತಿಯಲ್ಲಿಯೂ ಅವನ ಸ್ವಭಾವ, ಅವನು ಬೆಳೆದ ಆವರಣ, ಅವನ ಮನೋಧರ್ಮ ಮೊದಲಾದವುಗಳಿಂದ ಪ್ರಕಟವಾಗುತ್ತವೆ. ಒಂದು ವ್ಯಕ್ತಿಯ ಶೀಲವು ಇನ್ನೊಂದು ವ್ಯಕ್ತಿಯ ಶೀಲದಿಂದ ಭಿನ್ನವಾಗಿರುವಂತೆ ಕಾದಂಬರಿಕಾರನ ಕಣ್ಣಿಗೆ ಅವು ಕಾಣಿಸಬೇಕು. ಈ ಸ್ವಭಾವ ವ್ಯತ್ಯಾಸದಿಂದಾಗಿ ಒಬ್ಬ ಮನುಷ್ಯನು ಇನ್ನೊಬ್ಬನಿಂದ ನಮಗೆ ·ಬೇರೆಯಾಗಿ ಕಾಣಿಸುತ್ತಾನೆ. ಹಾಗೇನೇ, ಮಾನವನ ಸ್ವಭಾವವನ್ನೂ ಭಾವರಸಗಳನ್ನೂ ಕೆರಳಿಸಿ, ರೂಪಿಸಿ, ಸಾಗಿಸಿಕೊಂಡು ಹೋಗುವ ಕೆಲಸದಲ್ಲಿ ಅವನ ಇತಿಹಾಸ ಅರ್ಥಾತ್ ಅವನ ಕಾಲದ ಸಂಸ್ಕೃತಿ, ಜನಜೀವನ ಸಮಸ್ಯೆ, ಪರಿಸ್ಥಿತಿ, ಆವರಣಗಳು ಕಾರಣವಾಗುತ್ತವೆ. ಇದರಿಂದ ಆಯಾಯ ಕಾಲದ ಜೀವನದ ಬಣ್ಣ ಬೆಡಗುಗಳೆಲ್ಲ ಬೇರೆಯಾಗಿ ಕಾಣುತ್ತವೆ. ಈ 'ಬಣ್ಣವೆಂಥದು ?' ಎಂದು ತುಂಬಿಸಿ ತೋರಿಸಿಕೊಡುವ ಕೆಲಸ ಐತಿಹಾಸಿಕ ಕಾದಂಬರಿಕಾರನ ಪಾಲಿಗೆ ಬೀಳುತ್ತದೆ. ಹಾಗೆ, ಅವನು ಹಿಂದಣ ಯಾವುದೇ ಕಾಲದ ಒಂದು ಐತಿಹಾಸಿಕ ಜೀವನ ಅಥವಾ ಕಥಾನಕವನ್ನು ಸಾರ್ಥಕವಾಗಿ ತೋರಿಸಬೇಕಾದರೆ ಪ್ರಚಾರದಲ್ಲಿರುವ ಬರಿಯ ಚರಿತ್ರೆಯ ಗ್ರಂಥಗಳನ್ನೋದಿ ಇಲ್ಲವೆ ಕತೆಗಳನ್ನು ಕೇಳಿ ವಸ್ತುಗಳನ್ನಾರಿಸಿಕೊಂಡರೆ ಸಾಲದು. ನಾವು ಭರತಖಂಡದ ಮಟ್ಟಿಗೆ ಈ ಪ್ರಶ್ನೆಯನ್ನು ತಿಳಿದುಕೊಳ್ಳಲೆತ್ನಿಸಿದರೂ ಅದಕ್ಕಿರುವ ಕಷ್ಟ ನಮಗೆ ಕಾಣಿಸಬಹುದಾಗಿದೆ. ಈ ದೇಶ ವಿಶಾಲವಾದದ್ದು. ಅನೇಕ ಜನಸಮುದಾಯಗಳಿಂದ ಕೂಡಿಕೊಂಡದ್ದು. ಸಂಸ್ಕೃತಿಯ ಬಣ್ಣಗಾರನಾದವನಿಗೆ — ಅಂದಿನಿಂದ ಇಂದಿನ ತನಕ ಈ ಎರಡೋ ಹೆಚ್ಚೋ ಸಾವಿರ ವರ್ಷಗಳಲ್ಲಿ, ಬದಲಾಗದೆ ಕಾಣಿಸುತ್ತಿರುವ ಅಥವಾ ಅತ್ಯಲ್ಪ ಬದಲಾವಣೆಯಿಂದ ಕಾಣಿಸುತ್ತಿರುವ ಭಾಗವೊಂದಿದ್ದರೆ ಅದು ನಿಸರ್ಗ. ಅದರ ಮೇಲೆ ಇವತ್ತಿನ ದಿನದಲ್ಲಿ ವಿಹರಿಸುತ್ತಿರುವ ವಿವಿಧ ಜನಗಳನ್ನು ಕಂಡರೆ ನಮಗೆ ನಾಡಿಂದ ನಾಡಿಗೆ, ಜಾತಿಯಿಂದ ಜಾತಿಗೆ, ಊರಿಂದ ಊರಿಗೆ ಇರುವ ಬಣ್ಣದ ಅಂತರವು ಬಹು ವಿಶೇಷವಾಗಿ ಕಾಣಿಸುತ್ತದೆ. ನಮ್ಮಲ್ಲೇ ಅಂದರೆ, ಕನ್ನಡದಲ್ಲಿಯೇ ಸಾಕಷ್ಟು ಯಶಸ್ವಿಯಾದ ಕಾದಂಬರಿಗಳನ್ನು ಹಿಡಿದುಕೊಂಡರೂ ಅಲ್ಲಿನ ಜೀವನದ ಆವರಣದ ರಂಗು ರೂಪಗಳನ್ನು ಚಿತ್ರಿಸುವ ಕೆಲಸದಲ್ಲಿ ಒಬ್ಬೊಬ್ಬನಿಗಿದ್ದ ಕೊರತೆಯೂ ಸ್ಪಷ್ಟವಾಗಿ ಕಾಣಿಸುತ್ತದೆ. ಬ್ರಾಹ್ಮಣ ವರ್ಗದವರು ಬ್ರಾಹ್ಮಣೇತರ ವರ್ಗದ ಮನೆ, ಮದುವೆ, ಹಬ್ಬ, ಹುಣ್ಣಿಮೆ, ಊಟ-ಉಡುಗೆ, ಉಪಚಾರಗಳ ಬಣ್ಣನೆಯನ್ನು ಅಲ್ಲೇ ಬೆಳೆದು ಬಂದವರಷ್ಟು ಯಶಸ್ವಿಯಾಗಿ ಕೊಟ್ಟಿಲ್ಲ. ಕೊಡುವದೂ ಕಷ್ಟ. ಆದರೆ ಅದರ ವಿರುದ್ಧವಾದ ಮಾತೂ ನಿಜ. ಅಂದರೆ ಬ್ರಾಹ್ಮಣೇತರರಾದವರು ಬ್ರಾಹ್ಮಣರ ಮನೆಯ ನಡವಳಿಕೆಯನ್ನು ಸಾಕಷ್ಟು ಚಿತ್ರಿಸಿಲ್ಲ. ಇದರಂತೆ ಜಾತಿ ಮತಗಳ ಬೇರೆ ಬೇರೆ ಗುಂಪಿನ ವ್ಯಕ್ತಿಗಳಲ್ಲಿ ಇರುವ ಸ್ಥಳಿಕವಾದ ಮತ್ತು ಸಾಮೂಹಿಕವಾದ ಆಚಾರ ವಿಚಾರಗಳ ಬಣ್ಣ ಸಾಕಷ್ಟು ಮೂಡಿದರೇನೆ, ಆ ಬಣ್ಣವನ್ನು ಕಟ್ಟಿಕೊಂಡು ನಲಿಯುವ ಕಾದಂಬರಿಯ ವ್ಯಕ್ತಿಗಳಾದ — ಸೆಟ್ಟಿ, ಭಟ್ಟ, ಅಯ್ಯ, ಸಾಹೇಬ, ಜೋರ, ಮೊದಲಾದವರು ಸ್ವಂತ ವ್ಯಕ್ತಿತ್ವವುಳ್ಳವರಾಗಿ ಕಾಣಿಸುತ್ತಾರೆ. ಈ ವ್ಯಕ್ತಿತ್ವದ ಕಲ್ಪನೆಯು, ನಾವು ಅವರ ಸ್ವಭಾವಗಳನ್ನು ಚಿತ್ರಿಸುವಾಗ ಇರಬೇಕಾಗುತ್ತದೆ. ವ್ಯಕ್ತಿ ನಡವಳಿಕೆ ಮತ್ತು ಆವರಣದ ಚಿತ್ರಣದಲ್ಲಿಯೂ ಇರಬೇಕಾಗುತ್ತದೆ. ಇವುಗಳನ್ನು ಉದ್ದುದ್ದವಾಗಿ ಬರೆದು ಚಿತ್ರಿಸಬೇಕೆಂಬ ಅವಶ್ಯಕತೆ ಇಲ್ಲವಾದರು ಕೂಡ, ಆ ವ್ಯಕ್ತಿಯ ಜಾತಿ, ಕುಲ, ಶೀಲಗಳ ಪರಿಚಯವುಳ್ಳ ಕಾದಂಬರಿಕಾರನು ಕೇವಲ ಒಂದೆರಡು ಸೂಚನೆಗಳಿಂದ ಅವುಗಳ ಚಿತ್ರ ಕೊಡಬಲ್ಲವನಾಗುತ್ತಾನೆ. ಅವನ ಕಣ್ಣೆದುರಿಗಂತೂ ಅವನು ಚಿತ್ರಿಸುವ ಸೆಟ್ಟಿ, ಭಟ್ಟ, ಅಯ್ಯರುಗಳು — ಯಾರೂ ಆಗಂತುಕ ಆಗಿರದೆ, ಸಮಾಜದ ಸ್ವತಂತ್ರವಾದ ಒಂದು ವ್ಯಕ್ತಿಯಾಗಿದ್ದು, ಕಲ್ಪನೆಯಲ್ಲಿ ಅವನ ರೂಪ, ಆಕಾರಗಳೆಲ್ಲ ಅವನಿಗೆ ಹೊಳೆಯುತ್ತಿರಬೇಕು.

ಮಹಾಭಾರತಕ್ಕಿಂತ ಪೂರ್ವದ ಕಾಲವನ್ನು ಎತ್ತಿಕೊಂಡರೂ ಮಾನವನ ಸ್ವಭಾವವು ಅಂದಿಂದ ಇಂದಿನ ತನಕ ಮುಖ್ಯ ವಿಷಯಗಳಲ್ಲಿ ಒಂದೇ ತೆರನಾಗಿ ಸಾಗಿದೆ— ಎನ್ನಬಹುದಾದರೂ ಅದೇ ಸ್ವಭಾವವು ತೊಟ್ಟು ನಲಿದ ಜನಜೀವನದ ರಂಗು, ಆವರಣ, ನಂಬಿಕೆ, ನಯ, ಭಯ, ಬೇರೆ ಬೇರೆಯೇ ಆಗಿವೆ. ಇದನ್ನು ಗುರುತಿಸಿಕೊಡುವ ಕೆಲಸ, ಇದು ಬೇರೆಯೆಂದು ತೋರಿಸಿಕೊಡುವ ಕೆಲಸ— ಒಂದು ಕಾದಂಬರಿಯ ಕೌಶಲ್ಯದಲ್ಲಿ ಕಂಡರೆ. ಆಗ ಅದು ಐತಿಹಾಸಿಕ ಕಾದಂಬರಿ ಎನಿಸುತ್ತದೆ.

ಇತ್ತೀಚೆಗೆ 'ಮಹಾಬ್ರಾಹ್ಮಣ' ದಂಥ ಒಂದು ಕಾದಂಬರಿ ನಮ್ಮಲ್ಲಿ ಬಂದಿತು. ಇದನ್ನು ಐತಿಹಾಸಿಕ ಕಾದಂಬರಿ ಅನ್ನಬಹುದೇ?— ಎಂದು ತೆಗೆದುಕೊಂಡಲ್ಲಿ, ನಮ್ಮ ಮನಸ್ಸು ವಿಚಾರಕ್ಕೊಳಗಾಗುತ್ತದೆ. ಅಲ್ಲಿ ಬರುವ ವಸಿಷ್ಠ, ವಿಶ್ವಾಮಿತ್ರರುಗಳು ನಿರ್ದಿಷ್ಟವಾದ ಐತಿಹಾಸಿಕ ಕಾಲದಲ್ಲಿ, ಬಾಳಿ ಬದುಕಿದವರಾಗಿ ನಮಗೆ ಕಾಣಿಸಿದರೆ ಆಗ ಮಾತ್ರ ಈ ಪ್ರಶ್ನೆಗೆ ನಾವು ಉತ್ತರ ಕೊಡಬಹುದು. ಅಂದರೆ ಈ ಇಬ್ಬರು ಋಷಿಗಳು ವೈದಿಕ ಯುಗದವರೇ? ಈ ಇಬ್ಬರ ಕಥೆಯ ಸುತ್ತಲೂ ಹೆಣೆದಿರುವ ವಸ್ತು ಮತ್ತು ನಂಬಿಕೆಗಳು, ಆಚರಣೆಗಳು, ಮತ್ತು ದೇವರುಗಳು ನಮಗೆ ದೊರಕುವ ವೈದಿಕ ಯುಗದ ಇತಿಹಾಸದ ಒಳಗೆ ಕುಣಿಯುವಂತೆ ಕಾಣಿಸುತ್ತದೆಯೇ? ಹಾಗಿಲ್ಲದೆ ಹೋದರೆ ಬೇಡ! ಅವರು ಉಪನಿಷದ್ ಯುಗದವರೇ? ಅಲ್ಲವೇ! ಹಾಗಿದ್ದರೆ ಐತಿಹಾಸಿಕ ದೃಷ್ಟಿಯಿಂದ ಇಲ್ಲಿನ ಕೆಲವೊಂದು ಋಷಿಗಳು ಯಾವ ನಿಶ್ಚಿತ ಕಾಲಕ್ಕೆ ಸಲ್ಲುವವರು— ಎಂದು ಅದು ಸ್ಪಷ್ಟವಾಗಿ ತೋರಿಸುವ ಶಕ್ತಿಯುಳ್ಳದ್ದಾಗಿರಬೇಕು. ಕಾದಂಬರಿಯು ಕೆಲವು ಸಾವಿರ ವರ್ಷಗಳಲ್ಲಿ, ಬೆಳೆದು ಬಂದ ಕಲ್ಪನೆಯ ಒಂದು ಕಥೆಯನ್ನು, ವ್ಯಕ್ತಿಗಳನ್ನು, ಒಂದು ಕಾಲದ ಒಂದೇ ಸಂಸ್ಕಾರದ ಒಂದು ಬಾಳ್ವೆಯ ಹೋರಾಟವಾಗಿ ತೋರಿಸಿದರೆ, ಆಗ ಅದೊಂದು ಪುರಾಣ ಕತೆಯಂತಾಗಿ, ಇತಿಹಾಸದ ತಿಳಿದ ದಾಖಲೆಗಳಿಗೆ ಒಪ್ಪದಂಥ ಒಂದು ಕಟ್ಟುಕತೆಯಾಗಿ ಬಿಡುತ್ತದೆ.

ಪಾಶ್ಚಾತ್ಯ ಕಾದಂಬರಿಗಳಲ್ಲಿ— ಕೆಲವೊಂದು ಪ್ರಸಿದ್ಧವಾದ ಐತಿಹಾಸಿಕ ಕಾದಂಬರಿಗಳು ಬಂದಿವೆ. ಅವುಗಳಲ್ಲಿ ಒಂದನ್ನು ನಾನು ಮಾದರಿಗಾಗಿ ಇಲ್ಲಿ ಹೇಳಬಹುದು. ಕಾರ್ಲ್ ಮಾರ್ಕ್ಸನ ಸಮಕಾಲೀನನಾದ, ಪ್ರೇರಕನಾದ, ಯ್ಯೂಜಿನ್‌ಸೂ ಎಂಬಾತನು, 'ಮನುಷ್ಯಕುಲವು ಒಂದನ್ನೊಂದು ಸುಲಿದೇ ಸಾಗಿದೆ.' ಎಂಬ ಐತಿಹಾಸಿಕ ಸತ್ಯವನ್ನು ಒಂದು ದೀರ್ಘ ಕಾದಂಬರಿಯಾಗಿ ಚಿತ್ರಿಸಿದ್ದಾನೆ. ರೋಮನರ ಪ್ರಾದುರ್ಭಾವಕ್ಕಿಂತಲೂ ಕೆಲವು ಶತಮಾನಗಳಿಂದಲೇ ಅವನ ಕತೆ ತೊಡಗಿ, ಫ್ರಾನ್ಸಿನ ಮಹಾಕ್ರಾಂತಿಯ ತನಕ ಹಬ್ಬುತ್ತದೆ. ಆತ ಅದನ್ನು ಇಪ್ಪತ್ತು ಬೇರೆ ಬೇರೆ ಕಾಲಮಾನದ ಸ್ವತಂತ್ರವಾದ-ಐತಿಹಾಸಿಕ ಘಟನೆಗಳ ಪಾತ್ರಗಳ ಬೇರೆ ಬೇರೆ ಗುಂಪಿನಿಂದ ಚಿತ್ರಿಸಿ, ನಮಗೆ ಯುಗಮಾನದ ಒಂದು ಸತ್ಯವನ್ನು ತೋರಿಸಲು ಯತ್ನಿಸಿದ್ದಾನೆ. ಆತ 'ಗಾಲ'ರ ದಂಡಯಾತ್ರೆ, ರೋಮನರ ದಂಡಯಾತ್ರೆ, ಯೇಸುವಿನ ಜೀವನ, —ಹೀಗೆ ಒಂದೊಂದು ಕಾಲದ ಐತಿಹಾಸಿಕ ಜೀವನವನ್ನೂ ಅಷ್ಟೊಂದು ವರ್ಣಪೂರಿತವಾಗಿ ಚಿತ್ರಿಸಿದ್ದಾನೆ. ಜನಗಳ ಆ ದಿನದ, ನಂಬಿಕೆ, ನಡತೆ, ಉಡುಗೆತೊಡಗೆ, ಕಟ್ಟಡ, ಹಬ್ಬ, ವಿಲಾಸ, ವಿನೋದ ಈ ಒಂದೊಂದು, ಬೇರೆ ಬೇರೆ ಜನಗಳದ್ದು, ಬೇರೆ ಬೇರೆ ಕಾಲದ್ದು, ಬೇರೆ ಬೇರೆ ಸಂಪ್ರದಾಯದ್ದು ಎಂದು ತೋರಿಸಿ ಕಥಾವಸ್ತುವನ್ನು ಬೆಳೆಯಿಸಿದ್ದಾನೆ. ಇತಿಹಾಸ, ಸಂಸ್ಕೃತಿಗಳ ಅಗಾಧ ಪರಿಚಯವೂ ಐತಿಹಾಸಿಕ ವಸ್ತು ಸಂಗ್ರಹಾಲಯಗಳಲ್ಲಿನ ಅವಶೇಷಗಳ ಪರಿಚಯವೂ ಅವನಿಗಿದ್ದು ಈ ಸಂಬಂಧವಾದ ಅನೇಕ ವೈಜ್ಞಾನಿಕ ಪರಿಕರಗಳ ಸಹಾಯದಿಂದ ಆತ ಚರಿತ್ರೆಯ ಬಣ್ಣವನ್ನೂ ವಿವಿಧ ಕಾಲದ ಜನಗಳನ್ನೂ ಜನಜೀವನವನ್ನೂ ಬಹು ಚೆನ್ನಾಗಿ ಕೊಟ್ಟಿದ್ದಾನೆ. ಅಂಥ ಕಾಲಮಾನದ ನಿರ್ದಿಷ್ಟ ಬಣ್ಣವಿಲ್ಲದೆ ಹೋದರೆ, ವಿಶ್ವಾಮಿತ್ರ ವಸಿಷ್ಠರನ್ನು- ಕ್ರಿ. ಪೂ. ೫೦೦೦ ವರ್ಷಗಳಿಗೂ ಹಿಂದೆ ನಾವು ಒಯ್ಯಬಹುದು. ಈ ಶತಮಾನಕ್ಕೂ ನಾವು ಮುಂದೆ ತರಬಹುದು. ಅದರಲ್ಲಿ ಐತಿಹಾಸಿಕತೆಯೆಂಬುದು ಉಳಿಯುವುದಿಲ್ಲ.

ಇಂದು ಭಾರತದಲ್ಲಿ ಇತಿಹಾಸ ಚಿತ್ರಣಕ್ಕೆ ಬೇಕಷ್ಟು ಕಥಾವಸ್ತುಗಳಿವೆ — ಎಂಬುದು ನಿಜವಾದರೂ ಆಯಾಯ ಕಾಲ, ದೂರಗಳ ಜನಜೀವನದ ಬಣ್ಣವಿಂಥದು ಎಂಬುದನ್ನು, ಕೊಡುವ ಕೆಲಸ ಮಾತ್ರ ಬಹು ಕಷ್ಟದ್ದು. ಇಷ್ಟೊಂದು ದೊಡ್ಡ ದೇಶ, ಇಷ್ಟೊಂದು ಜನಸಮುದಾಯದ ಜೀವನ. ಅದರಲ್ಲಿ ತಿಳಿದೂ ತಿಳಿಯದೆಯೂ ಆಗಿಹೋದ ಧಾರ್ಮಿಕ ಸಾಂಪ್ರದಾಯಕ ಕ್ರಾಂತಿಗಳು, ಇನ್ನು ಅಧಿಕಾರಕ್ಕಾಗಿ ಮಾಡಿದ ಯುದ್ಧಗಳು, ಇವೆಲ್ಲವುಗಳೂ ನಮಗೆ ಸಾಂಸ್ಕೃತಿಕ ವಿವರಗಳು ಕಳೆದುಕೊಂಡ ಘಟನೆಗಳಾಗಿ ನಮ್ಮ ಪಾಲಿಗೆ ಉಳಿದಿವೆ. ಎಷ್ಟೆಷ್ಟು ಹಿಂದೆ ಹಿಂದೆ ನಾವು ಸರಿಯುತ್ತೇವೋ ಆವರಣ ಕಲ್ಪನೆಗೆ ಅಷ್ಟಷ್ಟು ಸಹಾಯವಾಗುವ ಜನಜೀವನದ ಚಿತ್ರ ನಮಗೆ ಸಿಗುತ್ತಲಿಲ್ಲ. ಭಾಷೆಯ ಇತಿಹಾಸವೂ ದುರ್ಬಲವಾಗಿದೆ. ಗ್ರಂಥ, ಸಾಹಿತ್ಯಗಳಿಲ್ಲ. ನಾವಾಗಿ ಉಳಿಸಿಕೊಂಡ ದಾಖಲೆಗಳ ಸಂಖ್ಯೆಯೂ ಕಡಿಮೆ. ವಿದೇಶಿಯರಾಗಿ ನಮ್ಮ ದೇಶಕ್ಕೆ ಬಂದು, ಬಣ್ಣಿಸಿದಂಥ ಹ್ಯೂವೆನ್‌ತ್ಸಾಂಗ್, ಮೆಗಸ್ತನಿಸ್, ಪಾಯೆಸ್, ನ್ಯೂನಿಜ್‌ರಂಥ ಚರಿತ್ರಕಾರರಂತೆ ದೇಶೀಯ ಚರಿತ್ರಕಾರರು ನಮಗೆ ಸಿಗುತ್ತಲಿಲ್ಲ. ಅರಮನೆಯ ಉಡುಗೆ ತೊಡಗೆಗಳನ್ನು ಕಲ್ಪಿಸುವುದಕ್ಕೆ ಅಲ್ಲಿ ಇಲ್ಲಿ ಹತ್ತೆಂಟು ಚಿತ್ರಗಳು ಸಿಗಬಹುದು. ಪ್ರಾಚೀನ ಅರಮನೆಗಳೇ ಉಳಿದಿಲ್ಲ. ದೇವಾಲಯಗಳು, ಮೂರ್ತಿಗಳೇನೋ ಸಾಕಷ್ಟು ಇವೆ. ನಮ್ಮ ಮತ ಧರ್ಮಗಳು ಹೇಗೆ ಊರಿಂದ ಊರಿಗೆ ಹಬ್ಬಿ, ಬೇರೆಬೇರೆ ಜನವರ್ಗಗಳ ನಂಬಿಕೆಗಳನ್ನು ಕೆರಳಿಸಿ, ಬದಲಿಸಿ ಆ ಮೂಲಕ ಅವರಿಂದ ಸ್ವೀಕೃತವಾದವು ಅಥವಾ ತಿರಸ್ಕೃತವಾದವು ಎಂದು ತೋರಿಸುವ ಬರವಣಿಗೆಗಳು ಕಡಿಮೆ. ಜೈನಧರ್ಮ, ಬೌದ್ಧಧರ್ಮ, ವೀರಶೈವಧರ್ಮ, ದ್ವೈತಾದ್ವೈತ, ವಿಶಿಷ್ಟಾದ್ವೈತ, ತಾಂತ್ರಿಕ ಧರ್ಮಗಳು ಆ ಧರ್ಮಗಳ ಆಯಾಯ ಧರ್ಮಪ್ರಚಾರಕರೊಡನೆಯೇ ದಿಗ್ವಿಜಯ ಸಾಧಿಸಿದುವೇ? ಮೊದಲು ಅಲ್ಲಿ ಏನಿತ್ತು? ಹೊಸ ಧರ್ಮಗಳಿಂದ ಜನಗಳ ಮೇಲೆ ಏನು ಪರಿಣಾಮವುಂಟಾಯಿತು? ಎಂಬುದೆಲ್ಲ ನಮಗೆ ತಿಳಿಯುವಂತಿಲ್ಲ. ನಮ್ಮ ಕಲ್ಪನೆಯಲ್ಲಿ ಈ ನಮ್ಮ ಸ್ಥಳೀಕ ಆಚಾರ ಸಂಪ್ರದಾಯಗಳೆಲ್ಲ ಮೊಹೆಂಜೋದಾರೋ ಕಾಲದಿಂದಲೂ ಏಕಸಮವಾಗಿ ಬಂದಿವೆ ಎಂದಿರಬಹುದು.

ಮಾನವ ಕುಲಶಾಸ್ತ್ರ ಪರಿಶೀಲಕರು ಈ ಕುರುಡು ನಂಬಿಕೆಗೆ ಆಧಾರ ಕೊಡುತ್ತಲಿಲ್ಲ. ಸಂಸ್ಕೃತಿಯು ಮಾನವನ ಭಾವಾವೇಶಗಳಿಗೆ, ವ್ಯಥೆ, ಆನಂದಗಳಿಗೆ ಬಹು ದೊಡ್ಡ ಹಿನ್ನಲೆಯಾಗುತ್ತದೆ. ಸಮಾಜದ ಮನೋಧರ್ಮವೆಂಬುದನ್ನು ರೂಪಿಸುವ ಮತಾಚಾರಗಳು ಸಂಸ್ಕೃತಿಯ ಬಹುವಾದ ಕಾರಣಗಳು. ಅವುಗಳ ಬದಲಾವಣೆ, ಸಂಸ್ಕಾರ, ಅವನತಿಗಳೆಲ್ಲ — ಜನಜೀವನದ ಶೀಲದಲ್ಲಿ ಅನೇಕ ಸಮಸ್ಯೆಗಳನ್ನು ತಂದುಕೊಡುತ್ತವೆ. ನೀತಿ — ಅನೀತಿಗಳ ಮಾರ್ಮಿಕ ವೇದನಾಕಾರಿ ಪ್ರಶ್ನೆಗಳು ಜನರ ಸಂಸ್ಕಾರವನ್ನು ಹೊಂದಿವೆ. ಸಂಸ್ಕಾರದ ಹಿನ್ನಲೆ ಇಲ್ಲವಾದರೆ— ಜನರ ವರ್ತನೆಗಳಿಗೆ ತಕ್ಕ ಅರ್ಥ ಹುಟ್ಟುವುದಿಲ್ಲ. 'ವ್ಯಕ್ತಿ ಶೀಲ' ದ ಮಹತ್ವ ಹೊಳೆಯಲು ಆ ವ್ಯಕ್ತಿ ಬೆಳೆದ ಸಂಪ್ರದಾಯ, ಸಂಸ್ಕಾರದ ಅರಿವು ನಮಗೆ ಬೇಕು. ಹಿಂದುಸ್ಥಾನದ ಸಿಂಧನಿಂದ ಆಸ್ಸಾಮುದ ತನಕ, ನೇಪಾಲದಿಂದ ಕನ್ಯಾಕುಮಾರಿಯತನಕ ಹಾಸಿ ಹಬ್ಬಿದ ಭಾರತೀಯರೆನಿಸುವವರಲ್ಲಿ ಹಲವಾರು ವರ್ಣಗಳ ಸಂಕರವಾಗಿದೆ. ಗುಂಪುಗಳ ಸಂಕರವಾಗಿದೆ. ಈ ಹೊತ್ತು ಬರಿಯ ಒಂದು ಊರಿನ ಒಂದು ಜಾತಿ ಸಂಪ್ರದಾಯದ ಜನಗಳ ಭೌತರೂಪವನ್ನು ವೈಜ್ಞಾನಿಕವಾಗಿ ಅಳೆದಲ್ಲಿ — ಮಂಗೋಲ, ಆರ್ಯ, ದ್ರಾವಿಡ, ಹೂಣ, ದೇಶೀಯ ದ್ರಾವಿಡ, ಪೂರ್ಣ ದ್ರಾವಿಡ, ಇಷ್ಟೆಲ್ಲ ಚಿಹ್ನಗಳು ಕಾಣಿಸಬಹುದು. ಇದರಂತೆ ನಮ್ಮ ನಡವಳಿಕೆಯಲ್ಲಿ, ನಂಬಿಕೆಗಳಲ್ಲಿ, ಆಚಾರ ಸಂಪ್ರದಾಯಗಳಲ್ಲಿ ಅನೇಕ ಕಾಲ, ಕುಲ, ದೇಶಗಳ ಮುದ್ರೆ ಬೆರೆತು ಕಾಣುತ್ತದೆ.

ಇಷ್ಟೆಲ್ಲ ಸುಮಾರು ನಾಲ್ಕೈದು ಸಾವಿರ ವರ್ಷಗಳಲ್ಲೋ, ತುಸು ಹೆಚ್ಚು ಕಡಿಮೆ ಆಗಬೇಕಾದರೆ, ಅಸ್ಸಾಮಿನ ಜನರು ಕನ್ಯಾಕುಮಾರಿಗೆ ಹೋಗಿರಬೇಕಾದರೆ, ಬರಿಯ ಯಾತ್ರಾರ್ಥಿಗಳಾಗಿ ಹೋಗಿ, ದಾರಿತಪ್ಪಿ ಅಲ್ಲಿ ಸಿಕ್ಕಿಕೊಂಡು ಉಳಿದಿರಲಾರರು. ಅದಕ್ಕೂ ಹೆಚ್ಚಿನ ಘಟನೆಗಳು ಈ ದೇಶದಲ್ಲಾಗಿರಬೇಕು. ಈ ದೇಶದಲ್ಲಿ ಆಹಾರವನ್ನು ಬೆನ್ನಟ್ಟಿ ಹೋಗುವ ಪಶುಪಾಲಕರು ಸಾಕಷ್ಟು ಸಂಚಾರ ಮಾಡಿರಬೇಕು, ಅನ್ಯ ದೇಶಗಳಿಂದ, ಕಾರಣಾಂತರಗಳಿಂದ ಬಂದ ಜನವರ್ಗ ಮೆಲ್ಲ ಮೆಲ್ಲಗೆ—ನಮ್ಮ ಪಶ್ಚಿಮ ಕರಾವಳಿಯಿಂದ ಆಂಧ್ರದ ತನಕ ಹೋದುದು ಕಾಣುತ್ತದೆ. ಅರಸರುಗಳು ರಾಜ್ಯವಿಸ್ತಾರದ ಆಶೆಯಿಂದ ಜನಗಳ ವಲಸೆಗೆ ಕಾರಣವಾಗಬಹುದು. ಅರಸನ ಧರ್ಮ ಪರಿವರ್ತನೆ ಇಂಥ ವಲಸೆಗೆ ಕಾರಣವಾಗಬಹುದು. ಕಾಲಕಾಲಕ್ಕೆ ಪ್ರಾಪ್ತವಾಗುವ ಕ್ಷಾಮಗಳು ಇಂದಿಗೂ ಜನಗಳನ್ನು ಸ್ಥಳಾಂತರಗೊಳಿಸಿ ಎಲ್ಲೆಲ್ಲಿಗೋ ಸಾಗಿಸುತ್ತಿರುವುದನ್ನು ಕಾಣುತಿದ್ದೇವೆ. ಹೀಗಾಗಿ ನಮ್ಮ ನಂಬಿಕೆ, ನಡವಳಿಕೆ, ಸಂಸ್ಕಾರ ಮೊದಲಾದವುಗಳು ವಲಸೆ ಹೋಗುವ ಜನಗಳ ಜತೆಗೆ ಸಂಚರಿಸಿ, ಎಲ್ಲಿಂದಲೋ ಹೊರಟು ಎಲ್ಲಿಯೋ ಹೋಗಿ ಬೇರೂರಲು ಶಕ್ತವಾದವು. ಐತಿಹಾಸಿಕ ಕಾದಂಬರಿಕಾರನಿಗೆ ಜನಜೀವನದ ಹಿನ್ನಲೆಯ ಚಿತ್ರಕಲ್ಪನೆ ಅತಿ ಅವಶ್ಯವಾಗುವುದರಿಂದ, ಈ ಸಂಸ್ಕೃತಿಯ ಪರಿವರ್ತನೆ, ಆಗುಹೋಗುಗಳ ಅರಿವು ಚೆನ್ನಾಗಿ ಇರಬೇಕಾಗುತ್ತದೆ. ನಮ್ಮ ಪಾಲಿಗೆ ಅದನ್ನು ತೋರಿಸಿಕೊಡಬಲ್ಲ ವಿಜ್ಞಾನಾಂಶ, ಚರಿತ್ರಾಂಶಗಳು ಎಷ್ಟೆಷ್ಟು ಕಡಿಮೆಯಾಗಿ ಬಿಡುತ್ತವೋ-ಅಷ್ಟಷ್ಟು ಐತಿಹಾಸಿಕ ಕಾದಂಬರಿಯ ರಚನೆಗೆ, ಕಡಿಮೆ ಪುಷ್ಟಿ ಸಿಗುತ್ತದೆ.

ಹೀಗಾಗಿ ಐತಿಹಾಸಿಕ ಕಾದಂಬರಿಯ ಕೆಲಸ ಸುಲಭದ್ದಲ್ಲ. ಕತೆಗಳು ಎಷ್ಟೋ ಸಿಗಬಹುದು. ಪಾತ್ರಗಳ ಕಲ್ಪನೆ ನಮಗೆ ಮಾನವನ ಸ್ವಭಾವವನ್ನು ಕುರಿತಾಗಿ ಇರುವ ಇಂದಿನ ಅನುಭವಗಳಿಂದಾಗಿ ಚಿತ್ರಿಸಲು ಬರುತ್ತದೆ. ಆದರೆ ಆ ಸ್ವಭಾವಗಳು ಕುಣಿದಾಡಿದ ರಂಗಸ್ಥಳವು, ನಮ್ಮ ಮುಂದೆ ವಾಸ್ತವವಾಗಿ ಕಟ್ಟಿದರೇನೇ, ಐತಿಹಾಸಿಕ ಕಾದಂಬರಿ ಎಂಬುದಕ್ಕೆ ಒಂದು ಸ್ಥಾನ. ಅದು ಜನರ ನಡೆಯನ್ನೋ, ನುಡಿಯನ್ನೋ, ಮನೆಯನ್ನೋ, ಮಠವನ್ನೋ, ಅಲಂಕಾರವನ್ನೋ, ವಯ್ಯಾರವನ್ನೋ, ಬೇಸಾಯವನ್ನೋ, ವ್ಯವಸಾಯವನ್ನೋ, ಕಾಳಗವನ್ನೋ, ಸಂಧಾನವನ್ನೋ, ಚಿತ್ರಿಸುವಾಗಲೆಲ್ಲ ಕಣ್ಣೆದುರಿಗೆ ನಿಜವಾಗಿ ಕಾಣಿಸಬೇಕು ಇದನ್ನೇ ಹೇಳುತ್ತಿರುವುದು ಕಾದಂಬರಿಯ ಮುಖ್ಯ ಉದ್ದೇಶವಾಗಿರಬೇಕಿಲ್ಲವಾದರೂ ಅವು ತೋರಿಸುವ ಪಾತ್ರಗಳು ತಕ್ಕುದಾದ ಜಾತಿ, ಕುಲ, ಸಂಪ್ರದಾಯ, ನೆಲಗಳ ಹಿನ್ನೆಲೆ, ಸಂಸ್ಕಾರಗಳನ್ನು ಪಡೆದವರಾಗಿ ಕಾಣಿಸದೆ ಹೋದಲ್ಲಿ, ಆಗ ಆ ಚಿತ್ರ ಅಪೂರ್ಣವಾಗುತ್ತದೆ. ಈ ವ್ಯಕ್ತಿಗಳ ಹಿನ್ನೆಲೆ ಹೇಗೆ ಐತಿಹಾಸಿಕವಾಗಿ ಕಾಣಿಸಬೇಕೋ ಅದರಂತೆಯೇ ಕಾದಂಬರಿಯಲ್ಲಿ ಕಾಣಿಸಬಹುದಾದ ವಿಪ್ಲವ, ಹೋರಾಟದ ಹಿನ್ನೆಲೆಯಲ್ಲೂ ಆಯಾಯ ಕಾಲದ ಸಂಸ್ಕೃತಿಯ ಬಣ್ಣವು ಒಡಮೂಡಿ ಕಾಣಿಸಬೇಕಾಗುತ್ತದೆ. ಅದಿಲ್ಲದೆ ಹೋದ ಕಾದಂಬರಿಯು ಎಂದೂ ಐತಿಹಾಸಿಕ ಕಾದಂಬರಿಯಾಗಲಾರದು. ನಮಗೆ ದೊರಕುವ ಐತಿಹಾಸಿಕದ ಪರಿಚಯ ಬಹು ಕಡಿಮೆಯಾದರೂ ಇದ್ದುದೆಲ್ಲವನ್ನೂ ನಾವು ಬಳಸಿಕೊಳ್ಳಬೇಕು. ಅವುಗಳಿಗೆ ವಿರುದ್ಧವಾದ ರೀತಿಯಲ್ಲಿ ಹೋಗಬಾರದು. ಬರಿಯ ಊಹೆಗೆ ಎಂದೂ ಶರಣು ಹೋಗಬಾರದು. ಇಲ್ಲೊಂದು ಉದಾಹರಣೆ ಹೇಳಬಹುದಾದರೆ: ಬುದ್ಧನ ಒಂದು ಕಥಾನಕದಲ್ಲಿ ಒಬ್ಬ ಆಧುನಿಕ ಸಾಹಿತಿ 'ದೇವರ ಭಯವೇ ಜ್ಞಾನದ ಮೂಲ' ಎಂಬ ವಿಚಾರಸರಣಿ ಸಿದ್ಧಾರ್ಥನ ಮನಸ್ಸಿನಲ್ಲಿ ಹುಟ್ಟಿತೆಂದು ಬರೆಯುತ್ತಾನೆ. ಯಾವಾತ ದೇವರ ಸುದ್ದಿಯನ್ನೇ ಬಾಯಲ್ಲಿ ಎತ್ತಲಿಲ್ಲವೋ, ಯಾವಾತನ ವಿಷಯದಲ್ಲಿ ಅವನ ಕಾಲದ ಜನರು ಅವನ ಮೇಲೆ ನಾಸ್ತಿಕತ್ವದ ಆರೋಪಣೆ ಮಾಡಿದ್ದಾರೋ—ಅಂಥವನನ್ನು ಕುರಿತು ಈ ಮಾತು ಹೇಳಿದರೆ ಹೇಗೆ? ಅದು

ದರಿಂದಲೇ ನಮ್ಮ ಊಹೆಯು, ಇತಿಹಾಸದ ಸತ್ಯವನ್ನು ಮರೆತುಬಿಡುವಂತೆ ಎಂದೂ ತೋರ ಬಾರದು.

ನಾವು ಪಾಶ್ಚಾತ್ಯರಿಂದ ನಿರ್ಮಾಣಗೊಳ್ಳುತ್ತಿರುವ ಕೆಲವೊಂದು ಐತಿಹಾಸಿಕ ಚಲಚ್ಚಿತ್ರಗಳಿಗೂ ನಮ್ಮಲ್ಲಿಯೇ ಉಂಟಾಗುತ್ತಿರುವ ಐತಿಹಾಸಿಕ ಚಿತ್ರಗಳಿಗೂ ಇರುವ ವ್ಯತ್ಯಾಸವನ್ನು ಕಾಣ ಹೋದರೆ ನಮ್ಮ ಹೊಣೆಯು ಇನ್ನಷ್ಟು ಹೆಚ್ಚಾಗಿ ಕಾಣಿಸುತ್ತದೆ. ಅವರು ತಮಗೆ ದೊರಕಿರುವ ಐತಿಹಾಸಿಕ ವಿಚಾರಗಳನ್ನೆಲ್ಲ, ಆದಷ್ಟು ಚೆನ್ನಾಗಿ ಬಳಸಿಕೊಂಡು, ಒಂದೊಂದು ಯುಗಮಾನದ ಕಲ್ಪನೆಯನ್ನು ಕೊಡುತ್ತಿರುವುದು ಅವರ Quo Vadis ಮೊದಲಾದ ಚಿತ್ರಗಳಿಂದ ಗೊತ್ತಾಗುತ್ತದೆ. ನಮ್ಮ ನಾಡಿನ ಐತಿಹಾಸಿಕ ಚಿತ್ರಗಳಲ್ಲಿ ಪಾಂಡವರ ಕಾಲದಿಂದ ಪೇಶ್ವೆಯರ ಕಾಲದ ವರೆಗೂ ಉಡುಗೆ, ತೊಡುಗೆ, ಅಲಂಕಾರ, ಕಿರೀಟ, ಆಯುಧ, ಅರಮನೆಗಳ ವಾಸ್ತು, ಕಾಳಗದ ಬಗೆ — ಮೊದಲಾದ ಯಾವುವುಗಳಲ್ಲೂ ವ್ಯತ್ಯಾಸವಾಗಲಿ, ಕಾಲಮಾನದ ಮುದ್ರೆಯಾಗಲಿ ಕಾಣುವುದಿಲ್ಲವೇಕೆ? ಪಾಂಡವರು ತೊಟ್ಟ ಕಿರೀಟಕ್ಕೂ ಇದ್ದ ಅರಮನೆಗೂ ಉಟ್ಟ ಬಟ್ಟೆಗೂ ಒಂದೆರಡು ಶತಮಾನಗಳ ಹಿಂದೆ ಬದುಕಿದ ದೊರೆಮಗನೊಬ್ಬನ ಉಡುಗೆ ಅಲಂಕಾರಗಳಿಗೂ ವ್ಯತ್ಯಾಸವಿಲ್ಲವೇಕೆ? ಇಂಥ ಚಿತ್ರ ನಿರ್ಮಾಪಕರಂತೆ ಕಾದಂಬರಿಕಾರ ಬೇಜವಾಬ್ದಾರನಾಗಬಾರದು. ಸಾಹಿತ್ಯ ಇನ್ನೂ ದೀರ್ಘಕಾಲ ಉಳಿಯಬಹುದಾದ ಒಂದು ದಾಖಲೆ. ತನಗಿಂತ ಹಿಂದಿನಕಾಲದ ಒಂದು ದಾಖಲೆಯನ್ನು ಕೊಡುವುದು ನಮ್ಮಿಂದ ಅಸಾಧ್ಯವಾದರೂ ನಾವು ಸುಳ್ಳು ದಾಖಲೆಯನ್ನಂತೂ ಕೊಡುವುದಕ್ಕೆ ಹೋಗ ಬಾರದಷ್ಟೆ.

ಕಾದಂಬರಿಯೆಂಬುದು ಎಷ್ಟುಮಟ್ಟಿಗೆ ವ್ಯಕ್ತಿಗಳ ಶೀಲ, ಹೋರಾಟಗಳ ಕಥಾನಕವಾಗಿ ಇರಬಲ್ಲುದೋ, ಅಷ್ಟೇ ಮಟ್ಟಿಗೆ ಅದು ಆ ಕಥಾನಕ ನಡೆದ ಕಾಲ, ಕುಲ, ಆವರಣಗಳ ವಾಸ್ತವ ಚಿತ್ರವೂ ಆಗಿರಬೇಕು. ಇಂದಿನ ಕಾಲದ ಕಥೆಯನ್ನು ಹೇಳುವ ಕಾದಂಬರಿಯಾದರು ಕೂಡ, ನಾವು ಹಿನ್ನೆಲೆ ಮತ್ತು ಆವರಣಗಳ ಬಣ್ಣ ಬೆಡಗುಗಳನ್ನು, ಬರಿಯ ಕಲ್ಪನೆಯಿಂದ ತುಂಬಿಸಿಕೊಳ್ಳುವದೆಯೇ ಅನುಭವ, ಪರಿಶೀಲನೆಗಳಿಂದ ತುಂಬಿಸಿಕೊಳ್ಳಬೇಕಾಗುತ್ತದೆ. ಆವರಣದ ಬಣ್ಣ (Colour) ನಡವಳಿಕೆಗಳ ವಿವರಗಳ ಜೀವಂತ ವ್ಯಕ್ತಿಗಳನ್ನೂ ಘಟನೆಗಳನ್ನೂ ಕಲ್ಪಿಸಬಲ್ಲ ಸಾಮಗ್ರಿ ಶಕ್ತಿಯಿಂದಲೇ ಓದುಗನಲ್ಲಿ ಅನುಕಂಪವುಂಟಾಗಿ ಅವನ ಹೃದಯವನ್ನು ಬರಹಗಾರನೇ ಪ್ರವೇಶಿಸಿ ಸಹೃದಯತೆಯನ್ನೂ ತನ್ನ ವಾಸ್ತವಿಕತೆಯಿಂದ ಸಾಹಿತಿಯು ಸಾಧಿಸಬಲ್ಲ.

ಬಲಿ

ನೋಡು ನೋಡದೋ
ಕುಣಿವ ಜೀವಿಗಳ
ಆತ್ಮದೊಂದು ಬತ್ತಲೆಯಲಿ !
ದೇವನೊಲ್ಮೆ ಮಾ
ನವನ ನಲ್ಮೆ ಬೆಳ
ಗಿಸದ ಬಾಳಕತ್ತಲೆಯಲಿ !
ಹಾವಭಾವವಿದೆ-
ಅಂದಚಂದವಿದೆ-
ನಿಜವನಣಕಿಸುವ ಪರಿಯಿದೆ.
ತುಟಿಯ ಕಂಪುನಗೆ,
ಎದೆಯ ಬಿಸಿಯ ಹಗೆ,
ಒಂದನೊಂದು ಕವಳಿಸುತಿದೆ.

ತೊಗಲು ಮುಚ್ಚಿದೀ
ಎಲುಬು ಗೂಡುಗಳು
ಶೂನ್ಯತೆಯಲಿ ನೇಲುತ್ತಿವೆ!
ದೇಹಧರ್ಮಗಳೊ
ಪೂರ್ವಕರ್ಮಗಳೊ
ಮನುಜರೆಂಬ ಹೆಸರಿತ್ತಿವೆ.
ಹಾಳುಗೆಡೆದ ಬಾ
ಳುವೆಯ ಮಂದಿರದಿ
ನಿತ್ಯ ದಯೆಯನರಸುತ್ತಿವೆ.
ಪಾಪದೆಂಜಲಲಿ
ತುಂಬುತಂಜಲಿಯ
ಪ್ರಾಣದೇವನನು ಸುತ್ತಿವೆ.

ನೀತಿರೀತಿಗಳ
ಹೊಲಬ ಹೇಳದಿರು;
ಸಾಯದಿರುವುದದೆ ನೀತಿಯು.
ಜೀವ ಜೀವವನು
ತುತ್ತಿ ಬದುಕದೇ?
ಬದುಕೆ ಬದುಕಿಗಿಹರೀತಿಯು
ಬ್ರಹ್ಮ ಸೃಷ್ಟಿಯೀ
ದಿವ್ಯನಂದನದಿ
ಲೆಕ್ಕವಿರದ ತಬ್ಬಲಿಗಳು !
ಬಲುಹಿನಾಳಿಕೆಯ
ಭೂತ ತರ್ಪಣಕೆ
ಮಾನವೀಯತೆಯ ಬಲಿಗಳು !

— ಕಡೆಂಗೋಡ್ಲು ಶಂಕರಭಟ್ಟ

★

—'ಶಾಂತ, ಸುಖಮಯವಾದ ವಿವಾಹಿತ ಜೀವನಕ್ಕಾಗಿ ನಾನು ಆಗಾಗ ಬಯಸುತ್ತಿರುತ್ತೇನೆ' ಎಂದೊಬ್ಬ ಬ್ರಹ್ಮಚಾರಿಗಳು ಹೇಳುತ್ತಾರೆ. ವಿವಾಹಿತ ಪುರುಷರಲ್ಲೂ ಬಹಳ ಜನ ಅದನ್ನೇ ಬಯಸುತ್ತಾರೆಂಬುದು ಅವರಿಗೆ ಗೊತ್ತಿದ್ದಂತೆ ಕಾಣುವುದಿಲ್ಲ.

★

ನಾಡ-ನುಡಿಯ ತೊಡಕು

ಬರೆದವರು : ಶ್ರೀರಂಗ

'ನಮ್ಮ ದೇಶದಲ್ಲಿ ಭಾಷೆಯ ತೊಡಕು ಇದೆ' ಎಂದು ಕೆಲವರು ವಾದಿಸಿದರೆ, 'ನಮ್ಮ ಭಾಷೆಯಲ್ಲಿ ದೇಶದ ತೊಡಕು ಇದೆ' ಎಂದು ಬೇರೆ ಕೆಲವರು ವಾದಿಸುತ್ತಾರೆ.

ಈ ವಾದ ಮತ್ತು ತೊಡಕುಗಳನ್ನು ಪರಿಹರಿಸಲು ಶ್ರೀರಂಗರು ಸೂಚಿಸಿರುವ ಉಪಾಯವನ್ನು ಈ ಲೇಖದಿಂದ ತಿಳಿದುಕೊಳ್ಳಬಹುದು.

'ನಮ್ಮ ದೇಶದಲ್ಲಿ ಭಾಷೆಯ ತೊಡಕು ಇದೆ' ಎಂದು ಕೆಲವರು ವಾದಿಸಿದರೆ 'ನಮ್ಮ ಭಾಷೆಯಲ್ಲಿ ದೇಶದ ತೊಡಕು ಇದೆ' ಎಂದು ಬೇರೆ ಕೆಲವರು ವಾದಿಸುತ್ತಿದ್ದಾರೆ. ಇದು ದೊಡ್ಡ ವಿಷಯ, ರಾಜಕೀಯ ಮುಂದಾಳುಗಳು ತಜ್ಞರ ಸಮಿತಿಗಳನ್ನು ನಿಯಮಿಸಿ ಬಿಡಿಸಬೇಕೆನ್ನುತ್ತಿರುವ ವಿಚಾರ; ಆದುದರಿಂದ ಅದರ ಗೊಡವೆಗೆ ನಮ್ಮಂತಹ ಸಾಮಾನ್ಯರು ಹೋಗುವ ಹಾಗಿಲ್ಲ. ಆದರೂ ಅನೇಕ ಭಾಷೆಗಳಿದ್ದುದಕ್ಕೆ ಒಂದೊಂದು ಭಾಷೆಗೆ ಸರಿಯಾಗಿ ಒಂದೊಂದು ರಾಜ್ಯವಿರಬೇಕೆಂಬುದು ತೊಡಕೆನ್ನಿಸುವಂತೆ, ದೇಶ ಒಂದೇ ಇದ್ದುದಕ್ಕೆ ಭಾಷೆಯೂ ಒಂದೇ ಆಗಿರಬೇಕಾಗಿದೆ ಎಂಬುದೂ ತೊಡಕು ಎಂದು ನಾವು ಒಪ್ಪಬೇಕಾಗುವದು. ಅದರಂತೆಯೇ ಒಂದು ತೊಡಕನ್ನು ಬಿಡಿಸಲು ಒಂದು ತಜ್ಞರ ಸಮಿತಿಯನ್ನು ನಿಯಮಿಸಿದರೆ ಇನ್ನೊಂದು ತೊಡಕನ್ನು ಬಿಡಿಸಲು ಇನ್ನೊಂದು ತಜ್ಞರ ಸಮಿತಿಯನ್ನೂ ನಿಯಮಿಸಲೇಬೇಕಾಗುವುದು ಎಂಬುದೂ ಒಪ್ಪತಕ್ಕ ವಿಷಯವೆ. ಆದರೆ ಕೊನೆಗೆ ಈ ಎರಡೂ ತಜ್ಞ ಸಮಿತಿಗಳು ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ತಾಳಿದರೆ ಆ ಹೊಸ ತೊಡಕನ್ನು ಬಿಡಿಸಲು ಮತ್ತೊಂದು ತಜ್ಞರ ಸಮಿತಿಯನ್ನು ನಿಯಮಿಸಬೇಕಾದರೆ ಹೇಗೆ—ಎಂಬುದೂ ಒಂದು ವಿಚಾರಾರ್ಹವಾದ ತೊಡಕಲ್ಲವೆ? ಅಂತಹ ತೊಡಕು ಉದ್ಭವಿಸಬಾರದೆಂಬ ದೂರದರ್ಶಿತ್ವದಿಂದ ಕೆಲವು ವಿಚಾರಗಳನ್ನು ಹೇಳುವುದು ಅಗತ್ಯವಾಗಿದೆ. ಆ ಅಗತ್ಯವೆ ಈ ಲೇಖದ ಉದ್ದೇಶ ಎಂದು ಉಪೋದ್ಘಾತಿಸಿ ಇನ್ನು ಮುಂದಿನ ವಿಚಾರಗಳತ್ತ ನಮ್ಮ ಲೇಖನಿಯನ್ನು ತಿರುಗಿಸೋಣ.

ತಜ್ಞರ ಎರಡು ಬೇರೆ ಬೇರೆ ಸಮಿತಿಗಳಾದಲ್ಲಿ ಅವು ಪರಸ್ಪರ ವಿರುದ್ಧ ನಿರ್ಣಯಕ್ಕೆ ಬರುವುವೆಂಬುದು ನಿರ್ವಿವಾದದ ಮಾತು (ಹಾಗಾಗದಿದ್ದಲ್ಲಿ ಆಯಾಯ ಸಮಿತಿಯ ಸದಸ್ಯರು ಆಯಾಯ ವಿಷಯಗಳಲ್ಲಿ ತಜ್ಞರೆ ಅಲ್ಲ ಎಂದು ವಿಷಾದದಿಂದ ಹೇಳಬೇಕಾಗುವುದು. ನಮ್ಮಲ್ಲಿದ್ದ ಅನೇಕ ಭಾಷೆಗಳು ಅನಾದಿಕಾಲದಿಂದ ನಡೆದುಬಂದಿವೆ, ಪ್ರತಿಯೊಂದು ಭಾಷೆಗೂ ಸಾಹಿತ್ಯವಿದೆ (ಮಾರಾಟವಿಲ್ಲದಿದ್ದರೂ), ಲಿಪಿ ಇದೆ (ಲೇಖನವಿರಲಿ ಇಲ್ಲದಿರಲಿ), ಅದರಂತೆಯೆ ಉಜ್ವಲ ಭವಿತವ್ಯವಿದೆ (ಇಲ್ಲ ಎಂದು ಸಾಧಿಸುವ ಭವಿಷ್ಯತ್ಕಾಲದ ಮಾನವನಿದ್ದಾನೆಯೆ?), ಆದುದರಿಂದ ರಾಜ್ಯಗಳ ರಚನೆ ಭಾಷಾನ್ವಯವಾಗಿಯೆ ಆಗತಕ್ಕದ್ದು—ಎಂದು ಭಾಷಾ ತಜ್ಞರು ಖಂಡಿತವಾಗಿ ಹೇಳುವರು. ಅದರಂತೆಯೆ ವೇದ—ಉಪನಿಷತ್ತು—ಸಂಸ್ಕೃತಿಗಳನ್ನು ಮೊದಲ್ಮಾಡಿ ಇಂದಿನ ಅಜ್ಞಾನ—ಬಡತನಗಳನ್ನು ನೋಡಿದರೆ ನಮ್ಮ ದೇಶ ಒಂದು, ಅಖಂಡವಾಗಿ ಒಂದು—ಆದುದರಿಂದ ಹೆಚ್ಚು ರಾಜ್ಯಗಳ ತುಂಡುಗಳು ಬೇಡ ಎಂದು ದೇಶಾಭಿಮಾನದ ತಜ್ಞರು ಹೇಳುವರೆಂದು ನಿರ್ವಿವಾದವಾಗಿ ಒಪ್ಪಿಕೊಳ್ಳಬೇಕು. ಇದು ಗೊತ್ತಿದ್ದ ಮಾತು; ಗೊತ್ತಿದ್ದ ಮಾತನ್ನೇ ಎರಡು — ಮೂರು ವರ್ಷಗಳ ಅವಿಶ್ರಾಂತ ಪರೀಕ್ಷೆ-ಪರಿಶ್ರಮ-ಪ್ರಶ್ನೆ—ಪ್ರವಾಸಗಳ ನಂತರ ಹೇಳುವುದು ಸಮಿತಿಗಳ ಕರ್ತವ್ಯ. ಅಲ್ಲಿಯವರೆಗೆ ನಮಗಿದ್ದ ಅವಕಾಶದ ಸದುಪಯೋಗವನ್ನು ಮಾಡಿಕೊಳ್ಳುವ ದೃಷ್ಟಿಯಿಂದಲೆ ನಾವೀಗ ವಿಚಾರ ಮಾಡಬೇಕಾಗಿದೆ. ಎರಡು ಮೂರು ವರ್ಷಗಳ ತರುವಾಯ ಬರಲಿರುವ ತಜ್ಞಸಮಿತಿಗಳ ಭಿನ್ನಾಭಿಪ್ರಾಯವನ್ನು ಸಮೀಕರಿಸುವುದು ಹೇಗೆ—ಎಂಬುದೆ ಆ ವಿಚಾರ.

ಪ್ರಶ್ನೆ ಮಹತ್ವದ್ದಾಗಿದೆ. ಇಷ್ಟೇಕೆ? ಪ್ರಶ್ನೆ ದೊಡ್ಡದೂ ಆಗಿದೆ, ಅರ್ಥಾತ್ ಹಿನ್ನೆಲೆಯೂ ದೊಡ್ಡದಾಗಲೇಬೇಕಲ್ಲವೆ? ಉದೋದ್ಘಾತವೂ ಉಫ್—ಅಲ್ಲ, ಉಪೋದ್ಘಾತವೂ ಉದ್ದಾಗಬೇಕಲ್ಲವೆ? ಆದುದರಿಂದ ಹಿನ್ನೆಲೆಯನ್ನು ವ್ಯಾಪಕವಾಗಿ, ಘಾತವನ್ನು ಇನ್ನಿಷ್ಟು ಉದ್ದವಾಗಿ ಪರೀಕ್ಷಿಸೋಣ.

ದೇಶಾಭಿಮಾನದ ತಜ್ಞರ ಮುಂದೆ ಬರುವ ಮೊದಲ ವಿಚಾರವೆಂದರೆ ಇದು. ನಮ್ಮ ದೇಶ ಒಂದು, ನಿಜ; ಆದರೆ ಯಾವುದು? ಇಂಡಿಯ? ಭಾರತ? ಹಿಂದುಸ್ತಾನ? ನಾವೂ ಒಂದು ನಿಮಿಷ ತಜ್ಞರಾಗಿ ನಿರಭಿಮಾನದ ದೃಷ್ಟಿಯಿಂದಲೆ ಈ ಮೂರೂ ಪ್ರಶ್ನೆಗಳನ್ನು ಎದುರಿಸೋಣ. ಮೊದಲು, ನಮ್ಮ ದೇಶವೆಂದರೆ 'ಇಂಡಿಯ' ಅಹುದೇನು? ಸ್ವಾತಂತ್ರ್ಯಶಕದ ಈ ಏಳನೆಯ ಸಂವತ್ಸರದಲ್ಲಿ 'ಖಂಡಿತವಾಗಿ ಅಲ್ಲ' ಎಂದು ಬೇಕಾದ ನಾಗರಿಕನು ಉತ್ತರಿಸುವನು. 'ಇಂಡಿಯ' ಎಂಬುದು ಇಂಗ್ಲಿಶ ಶಬ್ದ, ಇಂಗ್ಲಿಶ ಜನರೊಡನೆ ಅವರ ಭಾಷೆಯೂ ಹೋಗಿದೆ, ಆದುದರಿಂದ 'ಇಂಡಿಯ' ಎಂಬುದು ಇಲ್ಲವೇ ಇಲ್ಲ. ಇದಲ್ಲದೆ ಯಾವುದಕ್ಕೆ ಇಂಗ್ಲಿಶ ಜನರು 'ಇಂಡಿಯ' ಎನ್ನುತ್ತಿದ್ದರೊ ಆ ಪ್ರದೇಶವೆಲ್ಲ ಈಗ ನಮ್ಮ ದೇಶವೆನ್ನಿಸುವದಿಲ್ಲ. ಆದುದರಿಂದ 'ಇಂಡಿಯ' ನಮ್ಮ ದೇಶ ಎನ್ನುವುದು ಸರಿಯಾದ ಉತ್ತರವಲ್ಲ.

ಹಾಗಾದರೆ 'ಭಾರತ' ಎಂಬುದು ನಮ್ಮ ದೇಶವೆ? ಕೆಲವರು 'ಅಹುದು' ಎಂದು ಉತ್ತರಿಸಬಹುದು. ಆದರೆ ಇನ್ನೂ ಅಷ್ಟೆ ಕೆಲವರು ಅಲ್ಲ ಎಂದು ಗಂಟೆಗೋಪುರವಾಗಿ (ಘಂಟಾಘೋಷವಾಗಿ ಅಲ್ಲ) ಹೇಳುತ್ತಾರೆ. ಎಂದೊ, ಯಾವ ಕಾಲದಲ್ಲಿಯೊ ಭರತ ಎಂಬವನೂ ಅವನ ತಂಡದವರೂ ಎಲ್ಲಿಯೊ ನಾಲ್ಕು ಗೇಣು ಜಾಗನ್ನು ಗೆದ್ದು ಆಳುತ್ತಿರಬಹುದೆಂಬುದಕ್ಕೆ ಇಡಿಯ ದೇಶವನ್ನೆ ಅವರ ಹೆಸರಿನಿಂದ ಕರೆಯುವುದು ಎಲ್ಲಿಯ ನ್ಯಾಯ? ಭರತನು ಆರ್ಯಜನಾಂಗದವನು; ಹೊರಗಿನಿಂದ ನುಗ್ಗಿ ದಾಳಿ ಮಾಡಿ ಒಳಹೊಕ್ಕ ಜನಾಂಗವಿದು. ಇಲ್ಲಿ ಮೊದಲು ಇದ್ದವರು ನಾವು (ಎಂದರೆ ಈ ವಾದದ ಪುರಸ್ಕರ್ತರಾದ), ದ್ರಾವಿಡರು. 'ಇಂಡಿಯ' ಎಂಬುದು ಹೇಗೆ ಪರಭಾಷೆಯಿಂದ ಬಂದ ದಾಸ್ಯಸೂಚಕ ಶಬ್ದವೊ ಹಾಗೆಯೆ 'ಭಾರತ' ಎಂಬುದೂ ಇದೆ. ಆದ್ದರಿಂದ 'ಭಾರತ' ಎಂಬುದು ನಮ್ಮ ದೇಶದ ಹೆಸರಾಗದು, ಹಾಗೆ ಹೇಳಿಕೊಳ್ಳುವವರ ಸಂಪರ್ಕವೂ ನಮಗೆ ಬೇಡ ಎಂದು ಅನೇಕರಾದ ಈ ಕೆಲವರು ವಾದಿಸುತ್ತಾರೆ. ಅಂತೂ ಭಾರತವೂ ನಮ್ಮ ದೇಶವಲ್ಲ ಎಂದು ವಿಷಾದದಿಂದ ಕೈ ಚೆಲ್ಲಬೇಕಾಗುವುದು.

ಕೊನೆಯದಾಗಿ, ನಮ್ಮ ದೇಶ 'ಹಿಂದುಸ್ತಾನ' ಎಂದು ಹೇಳಬಹುದೆ? ಛೇ! ಥೂ! ಪಾಪ! ಅಪರಾಧ! ಸ್ವಾತಂತ್ರ್ಯ ಘೋಷಣೆಯ, ಮತ್ತು ಗಣರಾಜ್ಯಘಟನೆಯ ದೃಷ್ಟಿಯಿಂದ ದ್ರೋಹ ಅದು! ಸಿಕ್ಕವರೆಲ್ಲರ-ಅಲ್ಲ-ಸೆಕ್ಯುಲರ್ ರಾಜ್ಯ ನಮ್ಮದು, ಅದಕ್ಕೆ ಧರ್ಮದ ಗಾಳಿ ಕೂಡ ಸೋಂಕುವುದು ಬೇಡ ಎನ್ನುವಾಗ ಅದು 'ಹಿಂದು'ಗಳ ಸ್ಥಾನ ಎಂದು ಹೇಳಬಹುದೆ? ಹಿಂದು-ಮುಸಲ್ಮಾನ-ಪಾರ್ಸಿ- ಯಹುದಿ-ಜೈನ-ಬೌದ್ಧ ಮೊದಲಾಗಿ ಸಿಕ್ಕವರೆಲ್ಲರ ದೇಶ ಇದು ಎಂದು ನಮ್ಮ ಘಟನೆ ಸ್ಪಷ್ಟವಾಗಿ ಹೇಳುತ್ತಿದೆ. ಇದೂ ಅಲ್ಲದೆ ಯಾವುದಕ್ಕೆ ನಮ್ಮ ದೇಶವೆನ್ನುವೆವೊ ಅದರ ಹೊರಗೆ ಕೂಡ ಲಕ್ಷಾವಧಿ 'ಹಿಂದು'ಗಳಿರುವಾಗ, ಅವರನ್ನು ಕಡೆಗಣಿಸಿ ನಾವಿದ್ದ ಪ್ರದೇಶಕ್ಕೆ ಮಾತ್ರ 'ಹಿಂದುಸ್ತಾನ' ಎಂದರೆ ಅದೂ ನಮ್ಮವರಿಗೆ ದ್ರೋಹ ಬಗೆದಂತಲ್ಲವೆ? ಇವೆಲ್ಲ ಕಾರಣಗಳಿಗಾಗಿ ಹಿಂದುಸ್ತಾನವೂ ನಮ್ಮ ದೇಶವಲ್ಲ ಎಂದು ಅನಿವಾರ್ಯವಾಗಿ ಹೇಳಬೇಕಾಗುವುದು.

ಹಾಗಾದರೆ ಯಾವುದು ನಮ್ಮ ದೇಶ? ಮೊದಲು ಇದನ್ನೆ ಗೊತ್ತುಪಡಿಸುವುದಕ್ಕಾಗಿ ತಜ್ಞರ ಸಮಿತಿಯು ತನ್ನದೊಂದು ಉಪಸಮಿತಿಯನ್ನು ನಿಯಮಿಸಿಕೊಳ್ಳುವುದೆಂಬ ಭರವಸೆ ನಮಗಿದೆ.

ಆ ಉಪಸಮಿತಿಯು ರಹಸ್ಯ ಸ್ಫೋಟವನ್ನು ಮಾಡುವ ಇಚ್ಛೆ ನಮ್ಮದಲ್ಲ; ಆದರೂ ಒಂದು ಮಾತನ್ನು ಇಲ್ಲಿ ಹೇಳಬಹುದು. ಈ ದೇಶದ ಹೆಸರನ್ನು 'ನಮ್ಮ ದೇಶ' ಎಂದು ಬದಲಾಯಿಸುವಂತೆ ಈ ಉಪಸಮಿತಿಯು ಘಟನೆಯಲ್ಲಿಯೆ ಬದಲಾವಣೆಯನ್ನು ಮಾಡಲು ಸೂಚಿಸಬಹುದೆಂದು ಪರಿಚಿತವರ್ಗಗಳಿಂದ ವಿಶ್ವಸನೀಯವಾಗಿ ತಿಳಿದುಬಂದಿದೆ. ಒಮ್ಮೆ 'ನಮ್ಮ ದೇಶ' ಎಂಬ ಹೆಸರು ನಿಶ್ಚಿತನಾದರೆ ಮುಂದಿನ ದಾರಿ ಸುಗಮವಾಗುವುದರಲ್ಲಿ ಸಂದೇಹವಿಲ್ಲ.

ದೇಶಾಭಿಮಾನ ತಜ್ಞರ ಸಮಿತಿಯ ಎದುರು ಮೇಲಿನ ಪ್ರಶ್ನೆನಿಂತಿದ್ದರೆ ಭಾಷಾಭಿಮಾನ ತಜ್ಞರ ಎದುರು ಮತ್ತೊಂದು ಪ್ರಶ್ನೆಯು ಅಷ್ಟೆ ವಿರಾಟ್ ಸ್ವರೂಪವನ್ನು ತಾಳಿ ನಿಂತಿದೆ. ದೇಶದಲ್ಲಿ ಅನೇಕ ಭಾಷೆಗಳಿವೆ ಎಂದು ಈ ತಜ್ಞರು ಹೇಳುತ್ತಿರುವರಷ್ಟೆ? ಆದರೆ 'ನಮ್ಮ ಭಾಷೆ' ಯಾವುದು ಎಂಬುವರ ಬಗ್ಗೆ ಮಾತ್ರ ಇನ್ನೂ ನಿರ್ಣಯವೆ ಇಲ್ಲ! ಮಾತೃಭಾಷೆ ಇದೆ, ಪ್ರಾದೇಶಿಕ ಭಾಷೆ ಇದೆ, ರಾಷ್ಟ್ರಭಾಷೆ ಇದೆ-ಆದರೆ ನಮ್ಮ ಹೆಸರಿನ ಭಾಷೆ ಮಾತ್ರ ಇಲ್ಲವೇ ಇಲ್ಲ! ಇಷ್ಟೆ ಅಲ್ಲ, ಒಬ್ಬ ನಾಗರಕನ ದೃಷ್ಟಿಯಿಂದ ನೋಡಿದಾಗ ಕೂಡ ಅವನ ಮಾತೃಭಾಷೆ ಒಂದು, ಪ್ರಾದೇಶಿಕ ಭಾಷೆ ಇನ್ನೊಂದು, ರಾಷ್ಟ್ರಭಾಷೆ ಮೂರನೆಯದಾಗಬಹುದಾಗಿದೆ. ಇನ್ನು ಕೆಲವರಿಗೆ ಹೇಳಲು ನೂರು ಹೆಸರುಗಳಾದರೂ ಆಡಲು ಒಂದೇ ಭಾಷೆಯಾಗಬಹುದಾಗಿದೆ! ಎಂತಹ ಅನಿಶ್ಚಯಾತ್ಮಕ ಪರಿಸ್ಥಿತಿ! ಅದೂ ಹೋಗಲಿ, ಎಂತಹ ಅನ್ಯಾಯ! ಮೂರು ಭಾಷೆಗಳನ್ನು ಕಲಿತರೂ ತನ್ನದೆಂಬ ಭಾಷೆ ಇಲ್ಲದವನೊಬ್ಬ, ತನ್ನದನ್ನೆ ಮೂರು ಹೆಸರುಗಳಿಂದ ಮೆರೆಯಿಸುವವ ಇನ್ನೊಬ್ಬ! ಇದೆಂತಹ ಸರಿಸಮಾನತೆ! ಎಲ್ಲರೂ ಸ್ವತಂತ್ರರು, ಎಲ್ಲರೂ ಸರಿಸಮಾನರು ಎಂದು ಸ್ವಾತಂತ್ರ್ಯದ ಪೀಠಿಕೆಯಾಗಿ ಹೇಳುವಾಗ ಇಂತಹ ವ್ಯತ್ಯಾಸವು ವ್ಯವಹಾರದಲ್ಲಿರುವುದು ಸರಿಯೆ? ಈ ಪರಿಸ್ಥಿತಿಯನ್ನು ಕಂಡು ನಿರ್ವಿಣ್ಣರಾದ ಕೆಲವರು ಇಂಗ್ಲಿಶನ್ನೆ ಇಟ್ಟುಕೊಳ್ಳೋಣ, ಅದು ಯಾರದೂ ಅಲ್ಲ, ಆದುದರಿಂದ ಎಲ್ಲರದೂ ಆಗಬಹುದಾಗಿದೆ ಎನ್ನುತ್ತಾರೆ; ಇನ್ನು ಕೆಲವರು ಇಂಗ್ಲಿಶ ನಮ್ಮದಲ್ಲ, ಇದಲ್ಲದೆ ಅದು ದಾಸ್ಯದ ಸಂಕೇತ; ಆದುದರಿಂದ ನಾವು ಸ್ವತಂತ್ರರಿದ್ದಾಗ ನಮ್ಮದಾಗಿರಬಹುದಾದ ಸಂಸ್ಕೃತವನ್ನೆ ಎಲ್ಲರ ಭಾಷೆಯಾಗಿ ಮಾಡೋಣ, ಈಗ ಯಾರಿಗೂ ಆ ಭಾಷೆಯ ಜ್ಞಾನವಿಲ್ಲ, ಆದಕಾಗಿ ಎಲ್ಲರೂ ಸರಿಸಮಾನರಾಗಿ ಅದನ್ನು ಕಲಿಯಬಹುದಾಗಿದೆ ಎನ್ನುತ್ತಾರೆ. ಬೇರೆ ಕೆಲವರು— ಹಳೆಯದಾದ ಯಾವುದೂ ಬೇಡ, ತೀರ ಇತ್ತೀಚಿನದಾದ, ಇನ್ನೂ ಬೆಳೆಯಬೇಕಾಗಿದ್ದ ಹಿಂದಿ ಭಾಷೆಯೆ ಎಲ್ಲರ ಭಾಷೆಯಾಗಲಿ ಎನ್ನುತ್ತಾರೆ. ಆದರೆ ಇವರೆಲ್ಲರೂ ಪರಸ್ಪರವಾಗಿ ತಿಳಿಯದ ಭಾಷೆಗಳಲ್ಲಿ ವಾದಿಸುತ್ತಿರುವುದರಿಂದ ನಿರ್ಣಯಕ್ಕೆ ಬರುವುದು ತೀರ ಕಠಿಣವಾಗಿದೆ; "ತೀರ" ಎಂದರೇನು?—ತೀರಾ ಮುಷ್ಕಿಲ್! Absolutely impossible!

ಭಾಷಾತಜ್ಞರ ಸಮಿತಿಯು ಈ ಪ್ರಶ್ನೆವನ್ನು ಮೊದಲು ಎದುರಿಸಬೇಕು ಮತ್ತು ನೇರವಾಗಿ ಎದುರಿಸಬೇಕು ಎಂದು ನಮ್ಮ ನಮ್ರವಾದ ಸೂಚನೆಯಿದೆ. ಇಷ್ಟೇ ಅಲ್ಲ, ದೇಶದ ಸ್ವಾತಂತ್ರ್ಯದ ದೃಷ್ಟಿಯಿಂದ ಭಾಷೆಯನ್ನು ನೋಡುವುದು ಅಗತ್ಯವಾಗಿದೆ ಎಂದು ನಾವಿಲ್ಲಿ ಹೇಳಬಯಸುತ್ತೇವೆ. ಸ್ವಾತಂತ್ರ್ಯದ ಮುಂಚೆ ನಾವು ಭಾಷೆಯನ್ನು ಒಂದು ದೃಷ್ಟಿಯಿಂದ ನೋಡುತ್ತಿದ್ದೆವು. ಮನುಷ್ಯನು ಮಿಕ್ಕ ಪ್ರಾಣಿಗಳಿಗಿಂತ ಬೇರೆ ಇದ್ದಾನೆ ಎನ್ನುತ್ತಾರೆ. ಯಾಕೆ-ಗೊತ್ತಿದೆಯೆ? ಮಿಕ್ಕ ಎಲ್ಲ ಪ್ರಾಣಿಗಳೂ ತಮ್ಮ ಶಕ್ತಿಯಿಂದಲೆ ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿವೆ, ತಮ್ಮ ಶಾರೀರಿಕ ಶಕ್ತಿಯಿಂದಲೆ ತಮ್ಮ ಜೀವನವನ್ನು ಸುರಕ್ಷಿತಗೊಳಿಸುತ್ತಿವೆ. ಇದಕ್ಕಾಗಿ ಅದು ಪಾಶವೀ ಶಕ್ತಿ, ಅಶಾಂತಿಯ ಜೀವನ ಎಂದು ನಾವು ತಿಳಿಯುತ್ತೇವೆ. ಆದರೆ ಮನುಷ್ಯನು ಹಾಗಲ್ಲ; ಸುಸಂಸ್ಕೃತನಾದಂತೆ ಶಾರೀರಿಕ ಶಕ್ತಿಯ ಬದಲಾಗಿ ಭಾಷೆಯ ಬಲದಿಂದಲೆ ತನ್ನ ಹೊಟ್ಟೆಯನ್ನು ಹೊರೆದುಕೊಳ್ಳಬಲ್ಲನು. ಕೇವಲ ಮಾತನಾಡುವ ಶಕ್ತಿಯಿಂದಲೆ ಸುಖವಾಗಿ ಹೊಟ್ಟೆಯನ್ನು ಹೊರೆದುಕೊಳ್ಳುವ ಅತಿಮಾನವರು (Supermen) ಉದಯವಾಗುತ್ತಿರುವ ಈ

ಕಾಲದಲ್ಲಿ ಈ ಮಾತನ್ನು ಹೆಚ್ಚಾಗಿ ವಿವರಿಸಿ ಹೇಳುವ ಅಗತ್ಯವಿಲ್ಲ. ಇಲ್ಲಿ ಹೇಳಬೇಕಾಗಿದ್ದ ಮುಖ್ಯ ಮಾತೆಂದರೆ, ನಾವು ಸ್ವತಂತ್ರರಾಗುವ ಮುಂಚೆ ಇಂಗ್ಲಿಶ ಭಾಷೆಯಿಂದ ನಾವು ಸುಸಂಸ್ಕೃತ ಉಪಜೀವನವನ್ನು ನಡೆಯಿಸಿಕೊಳ್ಳಬಲ್ಲೆ-ವಾದ್ದರಿಂದ ಆಗ ಇಂಗ್ಲಿಶು ನಮ್ಮ ಭಾಷೆ ಎನ್ನಿಸುತ್ತಿತ್ತು. ಆದರೆ ಪುರಾಣದ ಸತ್ಯವಾನನಂತೆ ಎಳೆವಯಸ್ಸಿಗೆ (ಎಂದರೆ ಹದಿನೈದೇ ವರುಷಕ್ಕೆ) ಸಾಯಬೇಕಾಗಿದ್ದ ಇಂಗ್ಲಿಶು ನಮ್ಮನ್ನು ಉಳಿಸಬಲ್ಲುದೆ? ಯಾವುದು ನಮ್ಮನ್ನು ಉಳಿಸಲಾರದೊ ಅದು ನಮ್ಮ ಭಾಷೆಯಾಗುವುದು ಹೇಗೆ?

ಭಾಷೆಯ ವಿಷಯವೆ ತೊಡಕಿನ ವಿಷಯವಾಗಿದೆ ಎಂಬುದನ್ನು ಮರೆಯುವಂತಿಲ್ಲ. ಅನೇಕ ಹೆಸರುಗಳಿಂದ ಭಾಷೆ ರೂಢವಾಗಿದ್ದರೂ ಮನುಷ್ಯನಿಗೆ ತನ್ನ ಹೆಸರಿನಿಂದ ಭಾಷೆ ಇಲ್ಲವೇ ಇಲ್ಲ ಎಂದು ಮೇಲೆ ಹೇಳಿದೆಯಷ್ಟೆ? ಈ ಅನ್ಯಾಯದ ಜೊತೆಗೆ ಅವಮಾನವೊಂದಿದೆ! ಅದೆಂದರೆ, ಮಾತೃಭಾಷೆಯೆ ತನ್ನ ಭಾಷೆ ಎಂದು ತಿಳಿಯಬೇಕು ಎಂಬುವುದು. ಇದೆಂತಹ ನ್ಯಾಯ? ಇನ್ನೊಬ್ಬರ ಭಾಷೆ ತನ್ನದಾದೀತು ಹೇಗೆ? ತಾಯಿಯಾದರೇನಾಯಿತು? ತನಗಿಂತ ಬೇರೆಯಾದ ವ್ಯಕ್ತಿಯಲ್ಲವೆ ಅದು? ತಾಯಿಯ ಭಾಷೆಯೆ ತನ್ನ ಭಾಷೆ ಎಂದು ಹಟ ಯಾಕೆ? ಈ ಸೂಕ್ಷ್ಮವನ್ನು ಅರಿಯದ ಅನೇಕರು "ಇದೇನು? ಮಾತೃಭಾಷೆಯಲ್ಲಿ ಕೂಡ ಮಾತನಾಡಲು ಬರುವುದಿಲ್ಲವಲ್ಲ!" ಎಂದು ತಮ್ಮ ಶಾಸನಸಭಾ ಪ್ರತಿನಿಧಿಗಳನ್ನು ಹಂಗಿಸುತ್ತಾರೆ. ಅದಕ್ಕೇ ಅನ್ಯಾಯದ ಜೊತೆಗೆ ಅವಮಾನ ಎಂದದ್ದು. ಮಾತೃಭಾಷೆ ತನ್ನ ಭಾಷೆ ಅಲ್ಲ, ತನ್ನ ಭಾಷೆ ಯಾವುದೆಂಬುದನ್ನು ಯಾರೂ ನಿರ್ಣಯಿಸಿಲ್ಲ; ಹಾಗೆ ನಿರ್ಣಯಿಸುವವರೆಗೆ ತಾವು ಮಾತನ್ನೆ ಆಡಬಾರದೆಂದು ಪ್ರತಿಜ್ಞೆಯನ್ನೇ ಕೈಕೊಂಡ ನಮ್ಮ ಅನೇಕ ಶಾಸನಸಭಾ ಪ್ರತಿನಿಧಿಗಳು ಅಭಿನಂದನಕ್ಕೆ ಪಾತ್ರರಾಗಿದ್ದಾರೆ. ನಾಗರಕನಿಗೆ ವೈಯಕ್ತಿಕ ಸ್ವಾತಂತ್ರ್ಯದಂತೆ ವೈಯಕ್ತಿಕ ಭಾಷೆಗೂ ಹಕ್ಕು ಇದೆ, ಆ ಹಕ್ಕನ್ನು ಪ್ರಸ್ಥಾಪಿಸಲು ಇವರು ಘೋರವ್ರತವನ್ನು ಕೈಕೊಂಡಿದ್ದಾರೆ. ಹೆಂಗಸಿಗೆ ಹಕ್ಕು-ವಾರಸದಾರಿಕೆ ಇಲ್ಲದ ಕಾಲದಲ್ಲಿ ತಾಯಿ ತನ್ನ ಭಾಷೆಯನ್ನು ಮಗನಿಗೆ ಆನುವಂಶಿಕವಾಗಿ ಕೊಡಬಲ್ಲಳೆಂಬ ವಿಚಾರ ಹುಟ್ಟುರುವುದೆ ಶಕ್ಯವಿಲ್ಲ. ಇದು ತಲೆತಿರುಕರ ಕಿಡಿಗೇಡಿತನವಾಗಿದೆ.

ಭಾಷೆಯ ವಿಷಯದಲ್ಲಿ ಇನ್ನೂ ಒಂದು ಅಂತಹ ಕಿಡಿಗೇಡಿತನದ ನಂಬುಗೆ ಇದೆ; ಒಂದು ದೃಷ್ಟಿಯಿಂದ ಅದನ್ನು ಮೂಢ ನಂಬುಗೆ ಎನ್ನಬಹುದು, ಯಾರೂ ಅದರ ಬಗ್ಗೆ ವಿಚಾರವನ್ನೆ ಮಾಡಿದಂತಿಲ್ಲ-ವಾದ್ದರಿಂದ ಭಾಷೆ ಎಂಬುದು ವಿಚಾರವಾಹಕ ಸಾಧನವಂತೆ! ಎಂದರೆ ತನ್ನ ವಿಚಾರವನ್ನೆ ಇನ್ನೊಬ್ಬರಿಗೆ ತಿಳಿಸಿಕೊಡಲು ಮನುಷ್ಯನು ಭಾಷೆಯನ್ನು ಹುಟ್ಟಿಸಿಕೊಂಡಿರುವನಂತೆ! ಹಾಗೆ ಸಾಧಿಸುವವರಿಗೆ ಮನುಷ್ಯಪ್ರಾಣಿಯ ಮರ್ಮವೆ ತಿಳಿದಿಲ್ಲ ಎಂದು ಹೇಳಬಹುದು. ವಿಚಾರ ಎಂದರೇನು? ಅದೂ ಒಂದು "ವಿಚಾರ" ಮಾತ್ರ ಎಂದೇ ಹೇಳಬೇಕಾಗುವುದು; ಎಂದರೆ ಆ ಶಬ್ದಕ್ಕೆ ಸಮರ್ಪಕವಾದ ಅರ್ಥವೇ ಇಲ್ಲ. ಇಂತಹ ವಿಚಾರವು ಮನುಷ್ಯಪ್ರಾಣಿಗೆ ಸಹಜವೂ ಅಲ್ಲ, ಅಗತ್ಯವೂ ಅಲ್ಲ; ಹೀಗಿರುವಾಗ ಅದನ್ನು ಇನ್ನೊಬ್ಬರಿಗೆ ತಿಳಿಸಿಕೊಡುವ ಪ್ರಶ್ನವೇ ಏಳುವುದಿಲ್ಲ. ಇದನ್ನೆಲ್ಲ ಮರೆತು, ಭಾಷೆಗೂ ವಿಚಾರಕ್ಕೂ ಸಂಬಂಧವನ್ನು ಕಲ್ಪಿಸಿಕೊಂಡು, "ನನ್ನ ವಿಚಾರಗಳ ಬಗ್ಗೆ ನಾಲ್ಕುಮಾತುಗಳನ್ನು ಹೇಳುವೆ" ಎಂದು ಗಂಟೆ-ಗಂಟೆ ಮಾತನಾಡುವವರನ್ನು ನಾವು ನೋಡಿಲ್ಲವೆ? ಆ ಅನುಭವ ಇರುವಾಗಲೂ ಭಾಷೆಗೂ ವಿಚಾರಕ್ಕೂ ಸಂಬಂಧವಿದೆ ಎಂದು ಹೇಳಲು ಯಾವನಿಗೆ ಧೈರ್ಯವಾಗುವದು? ನಿಜವಿದ್ದ ಮಾತೆಂದರೆ, ಇದು ಸಮಾಜ ಶೋಷಕರ ಕಲ್ಪನೆ. ಇನ್ನೊಬ್ಬರು ಮಾತನಾಡಬಾರದು ಎಂಬುದಕ್ಕೆ ಅವರು ಹೂಡಿದ ಯುಕ್ತಿ. ಇನ್ನೊಬ್ಬರಿಗಿಂತ ತಾವು ಮೇಲಿನವರು ಎಂದು ಸಾಧಿಸುವ—ಅದ್ದರಿಂದ ಸರಿಸಮಾನತೆಯ ತತ್ವಕ್ಕೆ ದ್ರೋಹವೆನ್ನಿಸುವ—ಕಿಡಿಗೇಡಿತನ ಇದು. ವಿಚಾರಕ್ಕೂ ಭಾಷೆಗೂ

ಸಂಬಂಧವಿದ್ದುದು ನಿಜವಾದರೆ ಮನುಷ್ಯನೆಂದರೆ ಮಾತನಾಡುವ ಮೂಕಪ್ರಾಣಿ ಎಂದು ಹೇಳಬೇಕಾದೀತು. ಆದರೆ ಆ ಸಂಬಂಧವೆ ಇಲ್ಲ ಎಂದು ನಾವು ಸಂತೋಷದಿಂದ ಸಾರಿಸಾರಿ ಹೇಳುತ್ತೇವೆ.

ಅಂತೂ ಭಾಷಾತಜ್ಞರ ಸಮಿತಿಯು ಇಂತಹ ಅನೇಕ ಪ್ರಶ್ನೆಗಳನ್ನು ಎದುರಿಸಬೇಕಾಗುವುದು. ಕೊನೆಗೆ ಪ್ರತಿಯೊಬ್ಬನಿಗೂ 'ನನ್ನ ಭಾಷೆ' ಯೊಂದನ್ನು ನಿರ್ಣಯಿಸಬೇಕಾಗುವದು. ಈ ತಜ್ಞರ ಕಾರ್ಯ ಎಂದು ಪ್ರಾರಂಭವಾಗುವದು ಇಲ್ಲವೆ ಅವರು ವರದಿಯನ್ನೊಪ್ಪಿಸಲು ಅವಧಿ ಎಷ್ಟು ಎಂಬುದು ಇನ್ನೂ ಪ್ರಕಟವಾಗಿರದಿದ್ದರೂ ಅವರ ನಿರ್ಣಯದ ಬಗ್ಗೆ ನಮಗೆ ಸಂದೇಹವಿಲ್ಲ. ದೇಶಾಭಿಮಾನ ತಜ್ಞ ಸಮಿತಿಯವರು 'ನಮ್ಮ ದೇಶ' ಎಂಬ ಹೆಸರನ್ನು ನಿರ್ಣಯಿಸುವಂತೆ ಭಾಷಾಭಿಮಾನ ತಜ್ಞ ಸಮಿತಿಯವರು 'ನನ್ನ ಭಾಷೆ' ಎಂಬ ಹೆಸರನ್ನು ಗೊತ್ತುಮಾಡುವರೆಂದು ಅವರ ನಿಕಟವರ್ತಿಗಳಿಂದ ತಿಳಿದು ಬಂದಿದೆ.

ಒಂದೆಡೆ 'ನಮ್ಮ ದೇಶ' ಇನ್ನೊಂದೆಡೆ 'ನನ್ನ ಭಾಷೆ'— ಹೀಗೆ ನಿರ್ಣಯಗಳು ಖಂಡಿತವಾದರಿಂದ ಹೊಸ ತೊಡಕು ಉದ್ಭವಿಸುವ ಸಂಭವವಿದೆ. ದೇಶವಾದರೂ 'ನನ್ನ' ದಾಗಬೇಕು, ಭಾಷೆಯಾದರೂ 'ನಮ್ಮ' ದಾಗಬೇಕು; ಇಲ್ಲದೆ ಹೋದಲ್ಲಿ ಮತ್ತೆ 'ನಮ್ಮ ದೇಶ' ದಲ್ಲಿ 'ನನ್ನ ಭಾಷೆ' ಗೆ, ಇಲ್ಲವೆ 'ನನ್ನ ಭಾಷೆ' ಯಲ್ಲಿ 'ನಮ್ಮ ದೇಶ' ಕ್ಕೆ ಸ್ಥಾನವಿಲ್ಲದೆ ಹೋಗಬಹುದಾಗಿದೆ. ಇದಕ್ಕಾಗಿ ಕೆಲವರು ಭಾಷೆಯ ಪ್ರಶ್ನವೆ ಬೇಡ ಎನ್ನುತ್ತಾರೆ. ಆದರೇನು? ಅವರ ಆ ಮಾತು ಇನ್ನೊಂದು ಭಾಷೆಯವರಿಗೆ ತಿಳಿಯುವುದೆ ಇಲ್ಲ. ಅದೇನೆ ಇರಲಿ— ಇವೆರಡೂ ಸಮಿತಿಗಳಿಂದ ಉದ್ಭವಿಸಬಹುದಾದ ತೊಡಕನ್ನು ಬಿಡಿಸಲು ಮೂರನೆಯ ತಜ್ಞರ ಸಮಿತಿಯೊಂದು ಅಗತ್ಯವಾಗಿ ಬೇಕಾಗುವದು; ಆ ಸಿದ್ಧತೆಯಲ್ಲಿ ನಾವು ಈಗಿನಿಂದಲೆ ತೊಡಗುವದು ಒಳ್ಳೆಯದು. ಎಲ್ಲರೂ ಒಪ್ಪುವ ಹಾಗಿದ್ದರೆ ಅದಕ್ಕೆ ಸಂಸ್ಕೃತಿ— ತಜ್ಞ ಸಮಿತಿ ಎಂದು ಹೆಸರಿಡಬಹುದು. ಅವಶ್ಯವೆನಿಸಿದರೆ ಪ್ರತಿಯೊಬ್ಬ ನಾಗರಕನನ್ನು ಆ ಸಮಿತಿಯ ಸದಸ್ಯ ಎಂದು ನಿಯಮಿಸಬಹುದು.

" ಗುಡಿಸಲಾದರೇನಾಯಿತು? ಅದರಲ್ಲಿರುವ ದಂಪತಿಗಳ ಪ್ರೇಮಕ್ಕೇನಾದರೂ ಕೊರತೆಯೆ ?" ಎಂದೊಬ್ಬ ಲೇಖಕರು ಹೇಳುತ್ತಾರೆ. ಗುಡಿಸಲು ಸ್ವಂತದ್ದಾದರೆ ಕೊರತೆಯಿರಬೇಕಾಗಿಲ್ಲ.

ಮಲಾಯಾ-ಅಲ್ಲಿಯ ನಿವಾಸಿಗಳ ವೈಶಿಷ್ಟ್ಯ

ಬರೆದವರು: ಶ್ರೀ ನೆಂ. ಮು. ಜೋಶಿ

ಮಲಾಯು ಕೊಂಚ ಕುಳ್ಳ ವ್ಯಕ್ತಿ. ಅಲ್ಲಿಯ ಹವೆಯ ಪರಿಣಾಮದಿಂದಲೊ ಏನೊ "ನಾಳೆ ಮಾಡಿದರಾಯಿತು ಬಿಡು" ಎನ್ನುವ ಸ್ವಭಾವ ಅವನದು. ಶಾಂತಿ ಪ್ರಿಯತೆ, ಅಲ್ಪ ಸಂತುಷ್ಟಿ, ಸರಳ ಸ್ವಭಾವ, ಅತಿಥಿ ಸತ್ಕಾರ ಮೊದಲಾದ ಸದ್ಗುಣಗಳು ಈತನಲ್ಲಿವೆ. ಮಲಾಯಾದ ಹೆಣ್ಣು ಕೇವಲ ಗಂಡಿನ ಭೋಗ್ಯವಸ್ತುವಲ್ಲ. ಅವಳು ಗಂಡಿನ ಜತೆಯಲ್ಲಿ ಗಂಡಾಗಿ ದುಡಿಯುತ್ತಾಳೆ. ಕಳೆದ ಮಹಾಯುದ್ಧಾ-ನಂತರದ ಕಾಲದಲ್ಲಿ ಭಾರತ ಸೈನ್ಯಶಾಖೆಯ ನೌಕರರಾಗಿ ಅಲ್ಲಿದ್ದು ಬಂದಿರುವ ಶ್ರೀ ಜೋಶಿಯವರು ಮಲಾಯಾ ಜನರ ವೈಶಿಷ್ಟ್ಯವನ್ನು ಈ ಲೇಖದಲ್ಲಿ ಬರೆದಿದ್ದಾರೆ.

ನಮ್ಮ ದೇಶದಿಂದ ಪೂರ್ವಕ್ಕೆ ಸುಮಾರು ಎರಡು ಸಾವಿರ ಮೈಲುಗಳ ಅಂತರದಲ್ಲಿರುವ ಮಲಾಯಾ ದೇಶ ಕುತೂಹಲ ಪಡುವಂಥ ನಾಡಾಗಿದೆ. ಒಂದಾನೊಂದು ಕಾಲಕ್ಕೆ ಮಲಾಯಾದಲ್ಲಿ ಹಿಂದೂ ಸಂಸ್ಕೃತಿ ತಲೆ ಎತ್ತಿ ನಿಂತಿತ್ತು ಎಂದು ಸಂಶೋಧಕರು ಕಂಡು ಹಿಡಿದಿದ್ದಾರೆ. ಅಲ್ಲಿಯ ಜನರ ಭಾಷೆಯಲ್ಲಿ ಸಿಗುವ ಕೆಲ ಸಂಸ್ಕೃತ ಶಬ್ದಗಳು, ಛಾಯಾ ನಾಟ್ಯಕಲೆ, ಅಲ್ಲಿಯ ಊರ ಹೆಸರುಗಳು ಇವೆಲ್ಲವುಗಳು ಈ ಮಾತನ್ನು ಪುಷ್ಟೀಕರಿಸುತ್ತವೆ.

ಪ್ರಸ್ತುತ ಲೇಖದಲ್ಲಿ ಕೇವಲ ಮಲಾಯಾ ಜನರ ವೈಶಿಷ್ಟ್ಯಗಳನ್ನು ಕೊಡಬೇಕೆನ್ನುವ ಉದ್ದೇಶವಿಟ್ಟುಕೊಂಡಿದ್ದರಿಂದ ಆ ದೇಶದ ಇತರ ಸಂಗತಿಗಳ ಉಲ್ಲೇಖ ಅನವಶ್ಯಕ. ಮಲಾಯಾದಲ್ಲಿ ಮುಖ್ಯವಾಗಿ ಮೂರು ಜನಾಂಗಗಳು ಇಂದು ವಾಸಿಸುತ್ತವೆ. ಮೂಲನಿವಾಸಿಗಳಲ್ಲದೆ ಹೊರದೇಶದವರೂ ಇಲ್ಲಿಗೆ ಬಂದು ನೆಲೆಸಿ ಮಲಾಯಾದ ನಾಗರಿಕರಾಗಿ ಬಿಟ್ಟಿದ್ದಾರೆ. ಹಾಗೆ ನೆಲೆಸಿದವರ ಸಂಖ್ಯೆಯೇ ಇಂದು ಮಲಯದ ಮೂಲನಿವಾಸಿಗಳ ಸಂಖ್ಯೆಯನ್ನು ಮೀರಿ ನಿಂತಿದೆ. ಇತ್ತೀಚೆಗೆ ಅಂದರೆ ೧೯೪೭ ರಲ್ಲಿ ನಡೆದ ಜನಗಣನೆಯ-ಅಂಕಿ ಸಂಖ್ಯೆಗಳನ್ನು ಪರಿಶೀಲಿಸಿದಾಗ ಈ ಮಾತಿನ ನಿಜತ್ವ ಕಂಡು ಬರುತ್ತದೆ. ಜನಗಣನೆಯ ಅಂಕಿ-ಸಂಖ್ಯೆ ಕೆಳಗಿನಂತಿದೆ:

೧. ಮಲಾಯುಗಳು	—	೨೨೦೯೬೧೩
೨. ಚೀನೀಯರು	—	೨೬೧೧೩೯೭
೩. ಹಿಂದೀಯರು	—	೬೦೫೪೪೮
೪. ಮಲೇಶಿಯನ್‌ರು	—	೩೦೯೮೧೧
೫. ಯುರೋಪಿಯನ್‌ರು	—	೧೭೯೪೫
೬. ಯುರೇಶಿಯನ್‌ರು	—	೧೯೦೦೧
೭. ಇತರರು (ಸಕಾಯು ಜಕೂನ್ಸ ಮತ್ತು ನಿಗ್ರೊಯಿಟ್ಸ)		೪೫೨೯
ಒಟ್ಟು	—	೫೮೧೮೪೩೪

ಮಲಾಯಾ (ಸಿಂಗಾಪೂರನ್ನೊಳಗೊಂಡು) ದ-ಕ್ಷೇತ್ರಫಲ ೫೧೦೬೭ ಚದುರು ಮೈಲು ಇದೆ. ಈ ಇಡೀ ಕ್ಷೇತ್ರದಲ್ಲಿ ಮೇಲ್ಕಾಣಿಸಿದ ೭ ಜನಾಂಗಗಳು ವಾಸಿಸುತ್ತಿದ್ದರೂ ಮೊದಲಿನ ಮೂರು ಜನಾಂಗಗಳು ಈಗ ಮುಖ್ಯವಾಗಿ ಪರಿಗಣಿಸಲ್ಪಡುತ್ತವೆ. ಮೇಲೆ ಕಾಣಿಸಿದ ಅಂಕಿ-ಸಂಖ್ಯೆಗಳನ್ನು ನೋಡಿದಾಗ ಚೀನೀಯರು ಮಲಾಯಾದಲ್ಲಿ ಬಹುಸಂಖ್ಯಾಕರಿದ್ದುದು ಗೊತ್ತಾಗುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಮಲಾಯಾದ ಜನರು ಹೋರಾಡದೆ ತೆಪ್ಪಗೆ ಕುಳಿತ ಕಾರಣಗಳಲ್ಲಿ ಇದೂ ಒಂದು ಮಹತ್ವದ ಕಾರಣವಿರಬಹುದು. ಜನಮತದಂತೆ ರಾಜ್ಯಕಾರಭಾರ ನಡೆಯುವ ಪ್ರಸಂಗ ಬಂದರೆ ತಮ್ಮ ಹಕ್ಕು ಬಾಧ್ಯತೆಗಳಿಗೆ ಎಲ್ಲಿ ಪೆಟ್ಟು ತಗಲುತ್ತದೊ ಎಂಬ ಅಂಜಿಕೆ ಮಲಾಯುಗಳನ್ನು ಕಾಡಿಸುತ್ತಿರಬಹುದು. ಅವರ ಈ ಅಂಜಿಕೆಯೇ ಬ್ರಿಟಿಶರ ಅಧಿಕಾರಭದ್ರತೆಗೆ ಜೀವನ ಶಕ್ತಿಯಾಗಿ ಪರಿಣಮಿಸಿದೆ. ಮಲಾಯಾದಲ್ಲಿ ಈಗ ಹೊರದೇಶದವರು ಬಹುಸಂಖ್ಯಾಕರಾಗಿ ಬೆಳೆದರೂ ಮಲಾಯಾದ ಮೂಲನಿವಾಸಿಗಳೆಂದರೆ ಮಲಾಯು ಮತ್ತು ಸಕಾಯುಗಳು.

ಮಲಾಯುಗಳು

ಮಲಾಯು ಜನರು ಮುಂಗೋಲಿಯನ್ ಕುಲಕ್ಕೆ ಸೇರಿದ ಜನಾಂಗ. ಮಲಾಯುಗಳು ಮೊದಲು ಹಿಂದು ಧರ್ಮದವರೇ ಆಗಿದ್ದರೆಂದು ಸಂಶೋಧಕರು ಕಂಡು ಹಿಡಿದಿದ್ದಾರೆ. ಈ ಜನ ನಂತರ ಬೌದ್ಧ ಧರ್ಮವನ್ನೂ ತದನಂತರ ಇಸ್ಲಾಮು ಧರ್ಮವನ್ನೂ ಅಂಗೀಕರಿಸಿದರು. ಮೇಲಿಂದ ಮೇಲೆ ಹೀಗೆ ಬೇರೆ ಧರ್ಮಗಳನ್ನು ಅಂಗೀಕರಿಸಿದರೂ ಅವರು ತಮ್ಮ ಹಳೆಯ ಆಚರಣೆಗಳನ್ನು ಬಿಟ್ಟು ಕೊಡಲಿಲ್ಲ. ಹಳೆ ಸಂಸ್ಕೃತಿಯು ಹೊಸ ಸಂಸ್ಕೃತಿಯ ಕೆಳಗೆ ಸಿಕ್ಕು ಹಾಳಾಗಿ ಹೋದರೂ ಸಮೂಲವಾಗಿ ನಷ್ಟವಾಗಲಿಲ್ಲ. ಎಷ್ಟೋ ಹಳೆಯ ಪದ್ಧತಿಗಳು ಹೊಸ ಛಾಯೆಯಲ್ಲಿ ಹಾಗೆಯೇ ಉಳಿದದ್ದನ್ನು ಈಗಲೂ ಕಾಣಬಹುದು.

ಮಲಾಯು ಕಾಣುವದಕ್ಕೆ ಕೊಂಚ ಕುಳ್ಳ ವ್ಯಕ್ತಿ. ಮೈ ಬಣ್ಣ ತಾಮ್ರದ ಬಣ್ಣದಂತೆ. ಮಲಾಯಾದ ನೈಸರ್ಗಿಕ ಹವೆಯ ಪರಿಣಾಮದಿಂದಲೊ ಏನೋ ಮಲಾಯುಗಳು ಕೊಂಚ ಆಲಸ್ಯ ಸ್ವಭಾವದವರು. ನಾಳೆ ಮಾಡಿದರಾಯಿತು ಬಿಡು ಎನ್ನುವ ಮನೋಭಾವ ಇವರನ್ನು ವ್ಯಾಪಿಸಿದೆ. ಇಂಥ ದುರ್ಗುಣದ ಜತೆಯಲ್ಲಿ ಎಷ್ಟೋ ಸದ್ಗುಣಗಳನ್ನು ನಾವು ಇವರಲ್ಲಿ ಕಾಣಬಹುದು. ಶಾಂತಿಪ್ರಿಯತೆ, ಅಲ್ಪಸಂತುಷ್ಟಿ ಸರಳ ಸ್ವಭಾವ, ಅತಿಥಿ ಸತ್ಕಾರ ಇವೆಲ್ಲ ಗುಣಗಳು ಒಂದೆಡೆಯಲ್ಲಿ ಸಿಗಬೇಕಿದ್ದರೆ ನಾವು ಮಲಾಯು ಜನರನ್ನೇ ನೋಡಬೇಕು. ಈ ಜನರ ಮೂಲ ಉದ್ಯೋಗವೆಂದರೆ ಒಕ್ಕಲುತನ ಮತ್ತು ಮೀನುಗಳನ್ನು ಹಿಡಿಯುವದು. ದೇಶದ ಬಹುಭಾಗ ದಟ್ಟಡವಿ, ರಬ್ಬರು ತೋಟ, ತವರಿನ ಖಣಿಗಳಿಂದಲೆ ತುಂಬಿಹೋಗಿದ್ದರಿಂದ, ಒಕ್ಕಲುತನಕ್ಕೆ ಸಾಕಷ್ಟು ಭೂಮಿ ಇಲ್ಲದೆ ಹೋಯಿತು. ಹೀಗಾಗಿ ಮಲಾಯುಗಳು ಇಂದು ತವರು ಖಣಿಗಳಲ್ಲಿಯೂ ರಬ್ಬರು ತೋಟಗಳಲ್ಲಿಯೂ ದುಡಿಯಬೇಕಾಗಿದೆ. ತಮ್ಮ ದೇಶದ ತೋಟಗಳಲ್ಲಿ ಇವರು ದುಡಿಯುತ್ತಿದ್ದರೂ ಅದರ ಯಾಜಮಾನ್ಯವೆಲ್ಲ ಪರಕೀಯರದೇ. ಇದಕ್ಕೆಲ್ಲ ಇವರ ಆಲಸ್ಯವೃತ್ತಿಯೇ ಕಾರಣ. ಇವರ ಈ ಆಲಸ್ಯವೃತ್ತಿಯ ಲಾಭವನ್ನು ಪಡೆದುಕೊಂಡೇ ಅಲ್ಲಿ ನೆಲೆಸಿದ ಚೀನೀಯರೂ ಭಾರತೀಯರೂ ಮಲಾಯಾದ ರಾಜಕಾರಣದಲ್ಲಿ ಪ್ರಾಮುಖ್ಯ ಪಾತ್ರವನ್ನು ವಹಿಸುತ್ತಿದ್ದಾರೆ. ಮಲಾಯುಗಳು ಪರಕೀಯರನ್ನು ಸೌಹಾರ್ದ ಭಾವನೆಯಿಂದಲೇ ಕಾಣುತ್ತಾರೆ. ಅತಿಥಿಗಳ ಸತ್ಕಾರ ಮಾಡುವದರಲ್ಲಂತೂ ಇವರು ಹೆಚ್ಚಿನ ಆಸಕ್ತಿ ವಹಿಸುತ್ತಾರೆ. ಇತರ ದೇಶದ ಮುಸಲ್ಮಾನರಂತೆ ಮಲಾಯು ಜನರು ತಮ್ಮ ಹೆಣ್ಣು ಮಕ್ಕಳನ್ನು ಪರದೆಯಲ್ಲಿಡುವದಿಲ್ಲ. ಪರದಾ ಪದ್ಧತಿಯೇ ಅವರಿಗೆ ಸೇರದು. ಮಲಾಯು ಹೆಣ್ಣು ಕೇವಲ ಗಂಡಿನ ಭೋಗ್ಯವಸ್ತುವಾಗಿ ನಿಂತಿಲ್ಲ. ಅವಳು ಗಂಡಿನ ಜತೆಯಲ್ಲಿ ಗಂಡಾಗಿ ದುಡಿಯುತ್ತಾಳೆ. ಮಲಾಯು ಜನರ ಉಡಿಗೆ ತೊಡಿಗೆಗಳು ಸಾದಾ ತರಗತಿಯದೇ ಇರುತ್ತವೆ. ಮುಂದಿನ ಚಿತ್ರವನ್ನು



ಮಲಾಯು ಜನರ ವಿಶಿಷ್ಟ ಉಡಿಗೆ

ನೋಡಿದಾಗ ಅವರ ಉಡಿಗೆ ತೊಡಿಗೆಯ ಕಲ್ಪನೆ ಬರುವಂತಿದೆ.

ಮಲಾಯು ಜನರನ್ನು ಅಭಿನಂದಿಸುವಾಗ, ಅವರ ಕೈ ಕುಲಕಿಸಲೇ ಬಾರದು. ಕೈಕುಲುಕಾಟ, ಅಥವಾ ಹೆಗಲು ಬಡಿಯುವದು ಅವರಿಗೆ ಸೇರುವದಿಲ್ಲ. ಅವರ ತಲೆಯನ್ನು ಯಾರಾದರೂ ಮುಟ್ಟಿದರಂತೂ ಕಿಡಿಕಿಡಿಯಾಗುತ್ತಾರೆ. ಈ ಜನರ ಒಂದು ದೊಡ್ಡ ದುರ್ಗುಣವೆಂದರೆ ಅಮುಕ್ ಪದ್ಧತಿ. ಅಪಮಾನಿತನಾದ ಮಲಾಯು ಸೇಡಿನ ಬುದ್ಧಿಯಿಂದ ಹುಚ್ಚನಾಗುತ್ತಾನೆ. ಆ ಹುಚ್ಚಿನ ಭರದಲ್ಲಿ ಅವನು ಕೈಯಲ್ಲಿ ಕ್ರಿಸ್ (ಒಂದು ಬಗೆಯ ಚೂರಿ)ನ್ನು ಹಿಡಿದು ಬೀದಿಗಿಳಿದು ಓಡತೊಡಗುತ್ತಾನೆ. ಹಾಗೆ ಓಡುವಾಗ ದಾರಿಯಲ್ಲಿ ಸಿಕ್ಕವರನ್ನು ಕೈಯಲ್ಲಿದ್ದ ಚೂರಿಯಿಂದ ಇರಿಯುತ್ತಾ ನಡೆಯುತ್ತಾನೆ. ಆವೇಶ ಇಳಿಯುವ ವರೆಗೆ ಇದು ಹೀಗೆಯೇ ಸಾಗುತ್ತದೆ. ಇದಕ್ಕೆ ಅವರಲ್ಲಿ 'ಅಮುಕ್' ಎಂದು ಕರೆಯುತ್ತಾರೆ. ಬ್ರಿಟಿಶ ಸರಕಾರ ಈಗ ಇದನ್ನು ಕಾಯದೆಯಿಂದ ನಿರ್ಬಂಧಿಸಿದೆ. ಅದರ ಪರಿಣಾಮವಾಗಿ 'ಅಮುಕ್' ಈಗ ಮಲಾಯಾದಲ್ಲಿ ಕಾಣದಂತಾಗಿದೆ. ಮಲಾಯು ಹೆಣ್ಣು ಮಕ್ಕಳಲ್ಲಿಯೂ ಇಂಥದೇ ಒಂದು ಮಾನಸಿಕ ರೋಗ ಇತ್ತು. ಶ್ರೀ. ಎ. ಆರ್. ಹೋಪ್ ಎಂಬ ಆಂಗ ಲೇಖಕರು "ಈ ವಿಚಿತ್ರ ಮಾನಸಿಕ ರೋಗಕ್ಕೆ "ಲತಾ" ಎನ್ನುತ್ತಾರೆ. ಈ ರೋಗಿ ತನ್ನೆದುರು ನಡೆದ ಸಂಗತಿಗಳನ್ನು, ಆಡಲ್ಪಟ್ಟ ಮಾತುಗಳನ್ನು ಅನುಕರಣೆಮಾಡುತ್ತ ತನ್ನ ಮನಃಸ್ವಾಸ್ಥ್ಯವನ್ನು ಕೆಡಿಸಿದ ವಸ್ತುವಿನ ಹೆಸರನ್ನು ಒಂದೇಸವನೆ ಕೂಗುತ್ತಿರುತ್ತಾಳೆ" ಎಂದು ಬರೆದಿದ್ದಾರೆ.

ಮಲಾಯು ಗಂಡುಗಳಿಗೆ ಮದುವೆಯು ಒಂದು ಪೇಚಿನ ಪ್ರಸಂಗವೇ. ಗಂಡಿನವರೇ ಹೆಣ್ಣಿನ ಸಲುವಾಗಿ ಕನ್ಯಾಶುಲ್ಕವನ್ನು

ತೆರಬೇಕಾಗುತ್ತದೆ. ಕನ್ಯಾಶುಲ್ಕದ ಹಣ ಕೂಡ ಸಣ್ಣದಾಗಿರುವದಿಲ್ಲ. ಒಂದು ವೇಳೆ ಕನ್ಯಾಶುಲ್ಕವನ್ನು ಸಲ್ಲಿಸಲು ಅಳಿಯ ಅಸಮರ್ಥನಾದರೆ ಅವನು ಮಾವನ ಮನೆಯಲ್ಲಿ ಜೀತದಾಳಾಗಿ ದುಡಿದು ಆ ಹಣವನ್ನು ತೀರಿಸಬೇಕಾಗುತ್ತದೆ. ಸಾಮಾನ್ಯ ಜನರ ಮದುವೆಯ ಸಡಗರ ಅಷ್ಟಕ್ಕಷ್ಟೆಯಾಗಿದ್ದರೂ ಅಲ್ಲಿಯ ಸುಲ್ತಾನರ ಮನೆತನದ ಮದುವೆಗಳ ವೈಭವ ನೋಡ ತಕ್ಕಂಥಾದ್ದಿರುತ್ತದೆ. ಮೂರು ವಾರಗಳವರೆಗೆ ಮದುವೆಯ ಉತ್ಸವ ನಡೆದಿರುತ್ತದೆ.

ಮಲಾಯು ಜನರಲ್ಲಿ ಲೋಕಪ್ರಿಯ ಆಟಗಳೆಂದರೆ ಜೂಜು ಮತ್ತು ಹುಂಜಗಳ ಕಾದಾಟ. ಹುಂಜಗಳ ಕಾದಾಟದಲ್ಲಿ ಜನ ನೀರಿನಂತೆ ಹಣವನ್ನು ವ್ಯಯಿಸುತ್ತಾರೆ. ಹಳ್ಳಿಹಳ್ಳಿಗಳಲ್ಲಿ ಈ ದೃಶ್ಯಗಳು ನೋಡಲು ಸಿಕ್ಕುತ್ತವೆ. ಪಾಪ! ಮೂಕ ಪ್ರಾಣಿಗಳು ತಮ್ಮಲ್ಲಿ ಬಡಿದಾಡಿ ಸಾಯುತ್ತಿರುವಾಗ ಆಯಾ ಪ್ರಾಣಿಗಳ ಕಡೆಯವರು ಉತ್ಸಾಹದಿಂದ ನಲಿಯುತ್ತಿರುತ್ತಾರೆ. ಜೂಜಿನ ಆಟವೂ ಹೀಗೆಯೇ. ರಾಜಕಾರಣ ಅವರಿಗೆ ಒಗ್ಗದ ವಿಷಯವಾದುದರಿಂದ ಅವರು ಉಳಿದ ವೇಳೆಯನ್ನು ವ್ಯಯಿಸುವದೆಂತು? ಜೂಜಿನಲ್ಲಿ ಹೆಚ್ಚಿನ ಆಸಕ್ತಿ. ಈ ಜನರು ಈ ಜೂಜಿನ ಆಟಗಳ ಪರಿಣಾಮವಾಗಿಯೇ ಬಹು ಶೀಘ್ರದಲ್ಲಿ ಸಾಲಿಗರಾಗಿ ಬಿಡುತ್ತಾರೆ. ಸಾಲ ಕೈಮೀರಿ ಹೋಯಿತೆಂದರೆ ಸಾವುಕಾರರ ಮನೆಯಲ್ಲಿ ಜೀತದಾಳಾಗಿ ದುಡಿದು ಹಣವನ್ನು ತಿರುಗಿ ಮುಟ್ಟಿಸುತ್ತಾರೆ. ಕಾಲಹೋದಂತೆ ಜನತೆ ಚೇತರಿಸಿಕೊಳ್ಳುತ್ತಿದೆ. ಹಿಂದಿನ ಇಂಥ ಪದ್ಧತಿಗಳು ಮೆಲ್ಲನೆ ಮಾಯವಾಗುತ್ತಲಿವೆ.

ಮಲಾಯು ಜನರ ಮನೆಗಳು ವಿಚಿತ್ರ ರೀತಿಯಲ್ಲಿ ಕಟ್ಟಲಾಗುತ್ತವೆ. ನಾಲ್ಕು ಕಂಬಗಳನ್ನು ನೆಡಿಸಿ ಅದರ ಮೇಲೆ ಹಲಿಗೆಗಳನ್ನು ಕೂಡಿಸಿ ಅದರ ಮೇಲೆ ಮನೆಯನ್ನು ಕಟ್ಟುತ್ತಾರೆ. ಸಾಮಾನ್ಯವಾಗಿ ರೇಲ್ವೆಯ ಸಿಗ್ನಲ ಬಾಕ್ಸ ಹೌಸ ಮಾದರಿಯಂತಿರುತ್ತವೆ ಈ ಮನೆಗಳು. ಮನೆಯ ಕೆಳಗಿನ ಭಾಗದಲ್ಲಿ ದನಕರುಗಳನ್ನು ಕಟ್ಟುತ್ತಾರೆ.

ಮಲಾಯು ಜನರು ಪುನರ್ಜನ್ಮದಲ್ಲಿ ನಂಬಿಕೆಯನ್ನಿಡುತ್ತಾರೆ. ಆದರೆ ಇದರ ಬಗ್ಗೆ ಅವರ ಅಂಧಶ್ರದ್ಧೆ ಮಾತ್ರ ತುಂಬಾ ವಿಚಿತ್ರವಾಗಿದೆ. ಮನುಷ್ಯ ಈ ಜನ್ಮದನಂತರ ಕಾಡುಪ್ರಾಣಿಯಾಗಿ ಹುಟ್ಟಿ ಬರುತ್ತಾನೆ ಎಂಬುದು ಅವರ ನಂಬಿಕೆ.

ಮಲಾಯುಗಳು ಕಥೆಗಳನ್ನು ಹೇಳುವದರಲ್ಲಿ ಪ್ರವೀಣರು. ಅವರ ಜಾನಪದ ಸಾಹಿತ್ಯದಲ್ಲಿಯ ಲೋಕಪ್ರಿಯವಾದ ಕಥೆಯೊಂದನ್ನು ಉದಾಹರಣೆಗೆ ಕೆಳಗೆ ಕೊಡುತ್ತಿದ್ದೇನೆ. ಈ ಕಥೆ ಮಲಾಯು ಜನರ ನಿತ್ಯ ಬಾಯ ಬಳಿಕೆಯಲ್ಲಿದೆ. ಕಥೆಯನ್ನು ಓದಿದಾಗ ಅವರ ಜಾನಪದ ಸಾಹಿತ್ಯ ನಮ್ಮ ದೇಶದಿಂದಲೇ ರಫ್ತಾಗಿರಬೇಕೆಂಬ ಸಂದೇಹ ಬರುತ್ತದೆ. ಕಥೆಯ ಹೆಸರು 'ಕರಡಿಗೆ ಬಾಲವೇಕಿಲ್ಲ?' ಎಂದು.

"ಒಂದು ಎಮ್ಮೆ ಅಡವಿಯಲ್ಲಿ ಮೇಯುತ್ತಿದ್ದಾಗ ಒಂದು ಹುಲಿ ಅದರ ಮುಂದೆ ಬಂದು ನಿಂತು "ನಾನು ನಿನ್ನನ್ನು ತಿನ್ನುತ್ತೇನೆ" ಎಂದಿತು. ಆಗ ಎಮ್ಮೆ ಅದಕ್ಕೆ "ಅಯ್ಯೋ! ನಾನು ಎಷ್ಟು ಬಡಕಲಾಗಿದ್ದೇನೆ! ಏಳು ದಿನ ತಡಿ. ತಿಂದುಂಡು ಕೊಬ್ಬಿ ಬೆಳಿಸಿಕೊಂಡು ಬರುತ್ತೇನೆ." ಎಂದಿತು. ಆ ಮಾತಿಗೆ ಹುಲಿ ಒಪ್ಪಿತು. ಮುಂದೆ ಏಳು ದಿನಗಳ ನಂತರ ಆ ಎಮ್ಮೆ ಅಡವಿಯತ್ತ ಹೊರಟಿತು. ಅದಕ್ಕೆ ದಾರಿಯಲ್ಲಿ ಒಂದು ಮಂಗ ಭೆಟ್ಟಿಯಾಯಿತು. ಮಂಗ ಲೋಕಾಭಿರಾಮವಾಗಿ ಎಮ್ಮೆಗೆ "ಎಲ್ಲಿಗೆ ಹೊರಟದ್ದೀಯಾ?" ಎಂದು


ರಾಜಮನೆತನದ ವಿವಾಹ ಸಮಯದಲ್ಲಿ ಭೋಜನ ಸಮಾರಂಭ

ಕೇಳಿತು. ಎಮ್ಮೆ ಎಲ್ಲ ಸಂಗತಿಯನ್ನು ಮಂಗನಿಗೆ ತಿಳಿಸಿತು. ಮಂಗ ಎಮ್ಮೆಗೆ ಬಂದ ಸ್ಥಿತಿಯನ್ನು ಕಂಡು ಕನಿಕರ ಪಟ್ಟುಕೊಂಡು "ನನ್ನನ್ನು ನಿನ್ನ ಬೆನ್ನ ಮೇಲೆ ಕೂಡಿಸಿಕೊಂಡು ನಡಿ. ನಿನ್ನ ಉಳಿಸ್ತ್ತೇನೆ" ಎಂದು ಹೇಳಿತು. ಅದಕ್ಕೆ ಎಮ್ಮೆ ಒಪ್ಪಿಕೊಂಡಿತು. ಮಂಗ ಕೂಡಲೆ ಒಂದು ದೊಡ್ಡ ಬದನೇಕಾಯಿಯನ್ನು ಕೈಯಲ್ಲಿ ಹಿಡಿದುಕೊಂಡು ತಿನ್ನುತ್ತ ಅದರ ಬೆನ್ನಮೇಲೆ ಕುಳಿತಿತು. ಎಮ್ಮೆ ಸಾಂಕೇತಿಕ ಸ್ಥಳಕ್ಕೆ ಬಂದಿತು. ಹುಲಿ ಅಲ್ಲಿ ಆಗಲೇ ಬಂದು ನಿಂತಿತ್ತು. ಆಗ ಆ ಮಂಗ ಬದನೇಕಾಯಿಯನ್ನು ಹಲ್ಲಿನಿಂದ ಚೂರು ಚೂರು ಮಾಡುತ್ತಾ ಆ ಹುಲಿಗೆ ಕೇಳಿಸುವ ಹಾಗೆ ಎಮ್ಮೆಗೆ "ಇಂದು ಮುಂಜಾನೆ ನಾನು ಹೊಡೆದ ಹುಲಿಯ ರುಂಡದ ಮಾಂಸ ಎಷ್ಟುರುಚಿಯಾಗಿದೆ, ನಿನಗೆ ಬೇಕೇನು ?" ಎಂದು ಕೇಳಿತು. ಹುಲಿ ಮಂಗನ ಬಾಯಲ್ಲಿದ್ದುದು ಹುಲಿಯ ರುಂಡನೇ ಎಂದೆಣಿಸಿ ಅಲ್ಲಿಂದ ಓಡಿತು. ಆ ಹುಲಿಗೆ ದಾರಿಯಲ್ಲಿಯೇ ಒಂದು ಕರಡಿ ಸಿಕ್ಕಿತು. ಹುಲಿ ಹೇಳಿದ ಸಂಗತಿಯನ್ನು ಕೇಳಿ ಕರಡಿ ಖೊಳ್ಳೆಂದು ನಕ್ಕು "ನಡೆ, ನಿನ್ನ ಜತೆಯಲ್ಲಿ ನಾನೂ ಬರುವೆ. ನಿನಗೆ ಧೈರ್ಯವಿರದಿದ್ದರೆ ನನ್ನ ಬಾಲ ನಿನ್ನ ಬಾಲಕ್ಕೆ ಗಂಟು ಹಾಕಿಕೊಂಡೇ ಹೋಗುವಾ" ಎಂದು ಹೇಳಿತು. ಹುಲಿ ಆಗ ಒಪ್ಪಿತು. ಹುಲಿ ಕರಡಿ ತಂತಮ್ಮ ಬಾಲಕ್ಕೆ ಗಂಟು ಹಾಕಿಕೊಂಡು ಮತ್ತೆ ಎಮ್ಮೆ ಇದ್ದ ಸ್ಥಳಕ್ಕೆ ಬಂದವು. ಆಗ ಮಂಗ ಸಮಯೋಚಿತವಾಗಿ ಎಮ್ಮೆಗೆ "ಹೊಟ್ಟೆ ತುಂಬಲಿಲ್ಲ. ಆಗಲೇ ತಪ್ಪಿಸಿಕೊಂಡು ಓಡಿ ಹೋದ ಹುಲಿಯನ್ನು ನನ್ನ ಮಿತ್ರ ಕರಡಿ ಉಪಾಯವಾಗಿ ಹಿಡಿದು ತಂದಿದ್ದಾನೆ" ಎಂದು ಹೇಳಿತು. ಇದನ್ನು ಕೇಳಿದೊಡನೆ ಹುಲಿ ಒಮ್ಮೆಲೇ ವಿರುದ್ಧ ದಿಕ್ಕಿಗೆ ಓಡಿತು. ಹುಲಿಯ ಓಟ ಹೆಚ್ಚಾದ್ದರಿಂದ ಕರಡಿಯ ಬಾಲವೇ ಕಳಚಿ ಹೋಯಿತು. ಅಂದಿನಿಂದ ಕರಡಿಗೆ ಬಾಲವೇ ಇಲ್ಲದಾಯಿತು."

ಈ ಮಲಾಯು ಜಾನಪದ ಕಥೆಯನ್ನು ಕೇಳಿದಾಗ ನಮಗೆ ನೆನಪಾಗುತ್ತಿದ್ದುದು ನಮ್ಮ ಪಂಚತಂತ್ರದ ಕಥೆಗಳು.

ಸಕಾಯುಗಳು

ಮಲಾಯು ಭಾಷೆಯಲ್ಲಿ ಸಕಾಯು ಎಂದರೆ ಗುಲಾಮರೆಂದರ್ಥ. ನಿಜವಾಗಿ ನೋಡಿದರೆ ಈ ಸಕಾಯುಜನ ಮಲಾಯಾದ ಕೈಮುಟ್ಟದ ದಟ್ಟ ಕಾಡುಗಳಲ್ಲಿ ಯಾರ ಹಂಗಿಲ್ಲದೆ ಸ್ವತಂತ್ರ ಜೀವನ ಸಾಗಿಸುವ ಸಾಹಸಿಗಳು. ಊರಲ್ಲಿ ಬಂದು ನೆಲೆಸುವದಕ್ಕೆ ಇವರಿಗೆ ಮನಸ್ಸೇ ಬಾರದು. ಅಡವಿಯ ಜನರೆಂದು ಕರೆದರೆ ತಪ್ಪಾಗಲಿಕ್ಕಿಲ್ಲ. ಬಿದಿರುಕೊಳವೆಗಳಿಂದ ತಯಾರಿಸಿದ ಊದಂಬು (Blow Pipe) ಗಳೇ ಇವರ ಆಯುಧ. ಇವರು ಹೆಚ್ಚಾಗಿ ಪೆರಾಕ, ಪಹಾಂಗ ಮತ್ತು ಕೆಲಂಟನ ಸಂಸ್ಥಾನಗಳ ಅಡವಿಯಲ್ಲಿ ವಾಸಿಸುತ್ತಾರೆ. ಇವರ ಊದಂಬುಗಳ ಉದ್ದಳತೆ ಸುಮಾರು ೬ ರಿಂದ ೭ ಫೂಟುಗಳವರೆಗಿರುತ್ತದೆ. ಅದರಿಂದಲೇ ಪ್ರಾಣಿಗಳನ್ನು ಕೊಂದು ಹಸಿ ಮಾಂಸವನ್ನೇ ತಿನ್ನುತ್ತಾರೆ. ಇವರು ತೀರಾ ಹಿಂದುಳಿದವರು. ಶಿಲಾಯುಗದ ಜನರಂತಿದ್ದಾರೆ. ಈಗೀಗ ಈ ಜನ ಸಾವಕಾಶವಾಗಿ ಹೊರಬರುತ್ತಿದ್ದಾರೆ. ಇವರನ್ನು ಸುಧಾರಿಸುವ ಸತ್ಕಾರ್ಯಗಳೂ ನಡೆಯುತ್ತಿವೆ.

ನಿಮ್ಮ ತಾಪತ್ರಯಗಳನ್ನು ಕೇಳಿ ಸಂತೋಷಪಡುವ ಜನರೆಂದರೆ ವಕೀಲರು ಮತ್ತು ಡಾಕ್ಟರರು ಮಾತ್ರ, ಏಕೆಂದರೆ ಅವುಗಳ ಮೂಲಕವಾಗಿಯೇ ಅವರಿಗೆ ಹಣ ಸಿಗುತ್ತದೆ; ಆದರೆ ನಮ್ಮ ತಾಪತ್ರಯಗಳನ್ನು ಹಿಂಗಿಸಲೂ ಸಹಾಯಕರಾಗುವರವರು.

ಈಗಿನ ಕಷ್ಟದ ದಿನಗಳು ಮುಂದೆ ಕೆಲವರ್ಷಗಳನಂತರ ನಾವು ಬಯಸುವ ಗತಿಸಿಹೋದ ಒಳ್ಳೆಯ ದಿನಗಳಾಗುವವು.

ಮೂಲಶಿಕ್ಷಣದ . . . ಆಗು-ಹೋಗುಗಳು

ಲೇಖಕ:— ಶ್ರೀ. ಶ್ಯಾಮರಾವ ಗಜೇಂದ್ರಗಡ, ಬಿ. ಎ., ಬಿ. ಟಿ.

ಮಕ್ಕಳು ರಾಷ್ಟ್ರದ ಸಜೀವವಾದ ಸಂಪತ್ತು. ಸ್ಥಿರಸೊತ್ತು. ಅವರ ಶಾರೀರಕ, ಮಾನಸಿಕ, ಆತ್ಮಿಕಶಕ್ತಿಗಳನ್ನು ಮೂಲೋದ್ಯೋಗದ ಮುಖಾಂತರ ಬೆಳಕಿಗೆ ತಂದು, ಬಲಿಸಿ ಅವರ ಸರ್ವತೋಮುಖವಾದ ವಿಕಾಸವನ್ನು ಸಾಧಿಸುವದೇ ಮೂಲಶಿಕ್ಷಣದ ಗುರಿ. ಸ್ವಾವಲಂಬನದ ಚರಿತಾರ್ಥವನ್ನೂ ಸುಸಂಸ್ಕೃತವಾದ ಚಾರಿತ್ರ್ಯವನ್ನೂ ಮೂಲಶಿಕ್ಷಣವು ಉದ್ಯೋಗದ ಉಸುರಿನೊಡನೆ ಹೊಂದಿಸಿಕೊಳ್ಳುವದು, ಕೂಡಿಸಿಕೊಳ್ಳುವದು. ಇದೇ ಮೂಲ-ಶಿಕ್ಷಣದ ಹಿರಿಮೆ, ಹೊಸತನ.

ಮೂಲಶಿಕ್ಷಣದ ಧ್ಯೇಯ— ಸಾಧನೆಗಳಲ್ಲಿ ಎಂದಿನಿಂದಲೂ ನನಗೆ ನೈಜವಾದ ನಿಷ್ಠೆ. ಅಂತೆಯೆ ಕೆಲ ಸಮಯವಾದರೂ ಇವರೆಲ್ಲರಂತೆ ಈ ಪ್ರವಾಹದಲ್ಲಿ ಈಜುವ ಸುಯೋಗವು ನನಗೂ ದೊರೆಯಿತು. ಹೊಳೆಯಲ್ಲಿ ಈಸಿ ಹೊರಗೆ ಬಂದವನು ತನ್ನ ಅನುಭವಗಳನ್ನು —ಅವುಗಳು ಎಷ್ಟೇ ಅಪೂರ್ಣವಾಗಿದ್ದರೂ— ಒಂದು ಬಗೆಯ ಆತ್ಮೀಯತೆಯಿಂದ, ವಿಶ್ವಾಸದಿಂದ ವಿವರಿಸಬಲ್ಲನು. ಅದರ ಸುಳಿವು—ಸೆಳವುಗಳು ಯಾವುವು? ಎಲ್ಲಿವೆಯೆಂಬುದನ್ನು ತೋರಿಸಬಹುದಷ್ಟೇ? ಅಂಥವನ ದೃಷ್ಟಿಯಿಂದಲೇ ಇಂದು ನಾವು ಮೂಲಶಿಕ್ಷಣದ ಕಡೆಗೆ ನೋಡಬೇಕಾಗಿದೆ. ಆ ರೀತಿಯಲ್ಲಿಯೇ ತಿಳಿದವರಾದ ಕೆಲವು ಜನರಾದರೂ ಶಿಕ್ಷಣ ಕ್ಷೇತ್ರದಲ್ಲಿಯ ಈ ಹೊಸ ಪ್ರಯೋಗವನ್ನು ತೂಗಿ ನೋಡುತಿದ್ದಾರೆ.

ಹೀಗೆ ತೂಗಿ ನೋಡುತ್ತಿರುವವರ ದೃಷ್ಟಿಯಲ್ಲಿ ಮೂಲಶಿಕ್ಷಣವು ಕೆಲವರಿಗೆ— 'ಒಂದು ಬಗೆಯ ಹುಚ್ಚು—ಕೇವಲ ಕಸಬರಿಗೆಯ ಶಿಕ್ಷಣ'. 'ಸಫಾಯಿ'ಯ ಸಮಾರಂಭದಲ್ಲಿ ಕಸಬರಿಗೆಗಳನ್ನು ಕೆಡಿಸುವದು, ಕದಿಯುವದು. ರಾಟಿಯ ರಾಜ್ಯಕ್ಕೆ ಒಳಪಟ್ಟ ಮೂಲಶಿಕ್ಷಣ ಶಾಲೆಗಳಲ್ಲಿ ಶಿಕ್ಷಕರ ಮೈಗಳ್ಳತನಕ್ಕೆ ಮರ್‍ಯಾದೆ. ಉತ್ಪತ್ತಿಯಾದರೂ ಅಷ್ಟೇ ವಿಚಿತ್ರ! ಹತ್ತಿಯನ್ನು ಅದೆಷ್ಟೋ ಕೆಡಿಸಿ ಕೆಲಸಕ್ಕೆ ಬಾರದ ನೂಲು ತೆಗೆಯುವದು. ಪಿಸುಗಿ ನೂಲಿನಿಂದ ಮಾಡಿದ ಬಟ್ಟೆ-ನಿಸರ್ಗದ ರೀತಿಯಂತೆ, ಮತ್ತೆ ತನ್ನ ಮೂಲ ಸ್ವರೂಪವನ್ನು ತಾಳುವದು, ಅರಳೆಯಾಗಿ ಅವತರಿಸುವದು. ಇಲ್ಲವೇ ಶಿಕ್ಷಕರು ಮೋಸ ತಗಲುಗಾರಿಕೆಗಳಿಗೆ ಅನಿವಾರ್ಯವಾಗಿ ಶರಣು ಹೋಗುವರು. ದೇವ ಮಂದಿರಗಳಿಂದ ತಂದ ಅಂಗಾರದಲ್ಲಿ ಮನೆಯ ಬೂದಿಯನ್ನಷ್ಟು ಬೆರೆಸಿ ಎಲ್ಲವನ್ನೂ ಪವಿತ್ರವಾದ ಅಂಗಾರವಾಗಿಯೇ ಭಾವಿಸುವಂತೆ, ಗಿರಣಿಯ ನೂಲನ್ನು ಕೊಂಡು ತಂದು ಅದರಲ್ಲಿ ಕೈನೂಲಿನ ನಾಲ್ಕು ಎಳೆಗಳನ್ನು ಕೂಡಿಸಿದರೆ ಅದಾದರೂ ಕೈನೂಲಿನ 'ಖಾದಿ'ಯೇ ಆಗಿಬಿಡಬೇಕು. ಇದೆಲ್ಲವೂ ಗೊತ್ತಿದ್ದರೂ (ಬಹಿರಂಗವಾಗಿ ಮಾತ್ರ ಅಲ್ಲ) ನಿಯಮಗಳು ಹಾಕಿಕೊಟ್ಟ ಪ್ರಮಾಣದಲ್ಲಿ ಕೆಲಸವನ್ನು ಮಾಡಿಸಿಯೇ ಬಿಟ್ಟೆವೆಂಬ ಅಭಿಮಾನ-ಆತ್ಮ ಪ್ರತಾರಣೆ ಮೇಲಧಿಕಾರಿಗಳಿಗೆ; ವಿವೇಕದ ಕೊರಳಿಗೆ ಉರುಲು ಹಾಕಿ, ಅದರ ಕಿರುದನಿಯು ಕೇಳದಂತೆ ಮಾಡಿ, ತಾತ್ಕಾಲಿಕವಾಗಿ ಬಂದ ಪ್ರಸಂಗದಿಂದ ಪಾರಾದೆವೆಂಬ ನಿಟ್ಟುಸುರು ಅಧೀನರಾದ ಶಿಕ್ಷಕರಿಗೆ. ನೈತಿಕ ಪುನರುತ್ಥಾನವನ್ನು ಮಾಡಿ ನೂತನ ಸಮಾಜವನ್ನು ಚಿಕ್ಕಮಕ್ಕಳ ಮುಖಾಂತರವಾಗಿ ಕಟ್ಟಲು ಕರ್ತವ್ಯಬದ್ಧರಾದವರೂ ಇವರೇ ಅಲ್ಲವೆ? 'The road to hell is paved with good intentions' ಎನ್ನುವ ಮಾತಿಗೆ ಇದಕ್ಕಿಂತಲೂ ಹೆಚ್ಚಿನ ಬೇರೆ ನಿದರ್ಶನವು ಬೇಕೆ? ಎಂದು ಈ ಬಗೆಯ ವಿಮರ್ಶಕರು ಕೇಳುವರು.

ಮೂಲಶಿಕ್ಷಣವನ್ನು ಇನ್ನೊಂದು ದೃಷ್ಟಿಯಿಂದ ನೋಡುವ 'ನೌಕರೀ ಪ್ರಿಯ' 'ನೌಕರೀ-ರತ'ರಾದ ಕೆಲವು ಜನರು ಇಂಥವರಿಗೆ ಸರಕಾರ-ಇಲ್ಲವೇ—ಸಂಸ್ಥೆಯ ವೆಚ್ಚದಿಂದ ದೊರೆಯುವ ಮೂಲಶಿಕ್ಷಣದ 'ತರಬೇತು' ತಾನಾಗಿ ಒದಗಿದ ದೈವಕೃಪೆ. ನೌಕರಿಯಲ್ಲಿ 'ಬಡತಿಗೆ' ತೆಗೆದಿಟ್ಟ ಬಾಗಿಲು- ಅರ್ಹತೆಯಿಲ್ಲದ ಸ್ಥಾನಮಾನಗಳಿಗೆ ಸುಲಭವಾದ ಸೋಪಾನ. ನಿಷ್ಠೆ, ನಂಬಿಕೆಗಳಿಲ್ಲದ ನಾಮಮಾತ್ರ ಸಮಾಜಸೇವೆ.

ಇನ್ನೂ ಬೇರೆ ಕೆಲ ಜನರಿರುವರು. ಕಾಂಗ್ರೆಸ್ಸ ಸರಕಾರದ 'ಅದೂರದರ್ಶಿತ್ವ'ವನ್ನೂ 'ಅಸಮರ್ಥತೆ'ಯನ್ನೂ ಸರಕಾರದ ಎಲ್ಲ ಯೋಜನೆಗಳಲ್ಲಿಯೂ ಕಾಣುವ ದೂರದರ್ಶಿಗಳು ಇವರಲ್ಲಿ ಕೆಲವರು. ಇವರ ದೃಷ್ಟಿಯಲ್ಲಿ ಇಂದಿನ ರೀತಿಯಲ್ಲಿ ಸಾಗಿದ ಮೂಲಶಿಕ್ಷಣವು ಬೆಳೆಯುವ ಮಕ್ಕಳಿಗೆ ಸರಕಾರವು ತಿಳಿಯದೆ ಮಾಡುತ್ತಿರುವ ಅಕ್ಷಮ್ಯವಾದ ಅನ್ಯಾಯ! ಮೂಲಶಿಕ್ಷಣವು ಸಾಧಿಸಬೇಕಾದ ಸರ್ವತೋಮುಖವಾದ ವ್ಯಕ್ತಿವಿಕಾಸವಂತೂ ದೂರದ ಮಾತು. ಸಾಮಾನ್ಯವಾದ ಬುದ್ಧಿವಿಕಾಸವು ಕೂಡ ಇದರಿಂದ ಸಾಧಿಸುವದಿಲ್ಲವೆಂದು ಇವರ ಅಭಿಪ್ರಾಯ. ಇದಲ್ಲದೆ ಮೂಲಶಿಕ್ಷಣಕ್ಕಾಗಿ ಸರಕಾರವು ಮಾಡುತ್ತಿರುವ ವೆಚ್ಚವು ಸಾರ್ವಜನಿಕ ಹಣದ ಅಪಾರವಾದ ಅಪವ್ಯಯ. ಸಮಾಜ-ರಚನೆ, ಸಹಕಾರ, ಸಂಸ್ಕೃತಿಗಳೆಂಬ ತಮಗೆ ತಿಳಿಯಲಾಗದ ತತ್ವಗಳ ಬಣ್ಣದ ಮಾತುಗಳಲ್ಲಿ ಮಕ್ಕಳ ಇಂದಿನ ವಾಸ್ತವಿಕ ಬೇಡಿಕೆಗಳನ್ನು ಶಿಕ್ಷಕರು ದುರ್ಲಕ್ಷಿಸುತ್ತಿರುವರೆಂದು ಇವರು ದೂರಿಕೊಳ್ಳುವರು.

ಸಾಮಾನ್ಯ ಜನತೆಯ ದೃಷ್ಟಿಯಲ್ಲಿ ಮೂಲ-ಶಿಕ್ಷಣವು ಹೇಗೆ ತೋರುವದು? ನಮ್ಮ ದೇಶದ ಬಹುಸಂಖ್ಯಾಕವಾದ ಸಾಮಾನ್ಯ ಜನತೆಗೆ ತನ್ನದೇ ಆದ ಒಂದು ದೃಷ್ಟಿಯಿರುವದೆ? ಸ್ವತಂತ್ರ ರೀತಿಯಿಂದ ವಿಚಾರಿಸಿ, ವಿಮರ್ಶಿಸಿ, ಮಕ್ಕಳ ಶಿಕ್ಷಣದ ಒಂದು ನೂತನ ಯೋಜನೆಯನ್ನು ಅವರು ತೂಗಿ ನೋಡಬಲ್ಲರೆ? ಅದರ ಆಗು-ಹೋಗುಗಳನ್ನು ಅರಿತುಕೊಳ್ಳಬಹುದೆ? ಎಂಬುದೂ ಒಂದು ಸಂದೇಹದ ಸಂಗತಿ. ನೂರಕ್ಕೆ ನೂರರಷ್ಟು ಸಾಕ್ಷರಿಗಳು ಹಾಗೂ ಸುವಿಚಾರಿಗಳು ಇರುವ ಪ್ರಗತಿಪರವಾದ ರಾಷ್ಟ್ರಗಳಲ್ಲಿ ಸರಕಾರದ ಯಾವ ಯೋಜನೆಗೇ ಆಗಲಿ, ಅಲ್ಲಿಯ ಸಾಮಾನ್ಯ ಜನತೆಯು ಅದಕ್ಕೆ ತೋರಿಸುವ ಪ್ರತಿಕ್ರಿಯೆಯು ಪ್ರಭಾವಶಾಲಿಯಾದುದು, ಪರಿಣಾಮಕಾರಿಯಾದುದು. ನಿರಕ್ಷರತೆಯ ನೆಲೆವೀಡಾದ ನಮ್ಮ ನಾಡಿನ ಜನತೆಗೆ ಮೂಲ ಶಿಕ್ಷಣದ ತಾತ್ವಿಕ ವಿಮರ್ಶೆಯು ತೀರ ನಿಲುಕದ ಮಾತು. ಮಕ್ಕಳ ಹಿತಾಹಿತಗಳನ್ನಾದರೂ ಇವರು ತಿಳಿದುಕೊಳ್ಳಬಹುದಲ್ಲವೆ? ಇಂಥ ಪಾಲಕರ ದೃಷ್ಟಿಯಲ್ಲಿ—'ಮೂಲ ಶಿಕ್ಷಣವು ತಮ್ಮ ಮಕ್ಕಳ ಶಿಕ್ಷಣವನ್ನು ಮೂಲೆಗುಂಪಾಗಿ ಮಾಡಿ ಬಿಟ್ಟದೆ. ಈ ಬಗೆಯ ಶಾಲೆಗಳಲ್ಲಿ ಕೇವಲ ಹುಡುಗಾಟಿಕೆ. ಸರಿಯಾಗಿ ಓದು ಇಲ್ಲ, ಬರೆಹವಿಲ್ಲ. ಸಫಾಯಿಯೆಂಬುದೊಂದು ಸೋಗು, ಸಾಂಘಿಕ ಜೀವನವೆಂಬುದೊಂದು ಸುಳ್ಳಿನ ಕಂತೆ, ಸಾಂಸ್ಕೃತಿಕ ಚಟುವಟಿಕೆಗಳೆಂಬುವದು ಅನಾ-ಯಾಸವಾಗಿ ದೊರೆಯುವ ಸೂಟಿಗಳಿಗೆ ಒಂದು ಒಂಬಣ್ಣದ ಹೊದಿಕೆ. ಏಕೆಂದರೆ, ಇವುಗಳಿಂದ

ಅಂದಿನ ದಿವಸ, ಶಾಲೆಯ ನಿತ್ಯದ ಕಾರ್ಯಕ್ರಮಕ್ಕೆ 'ಚಕ್ಕರ್'. "ಶಿಷ್ಯಾಗಮನೇ ಅನಾಧ್ಯಾಯ—"ವಾಗಬೇಕಲ್ಲವೆ? ದಿನ ಬೆಳಗಿದರೆ, ಒಂದು "ಜಯಂತಿ", ದಿನ ಬೆಳಗಿದರೆ ಒಂದು 'ಪುಣ್ಯತಿಥಿ' ತಮಗೆ ಬೇಕಾದವರನ್ನುವ್ಯಾಖ್ಯಾನದ ನೆಪದಲ್ಲಿ ಬರಮಾಡಿಕೊಳ್ಳಲು ಮುಂದೆ ಬೀಳಬೇಕೆನ್ನುವವರಿಗೆ ಈ ಜಯಂತಿ ಪುಣ್ಯತಿಥಿಗಳು ಒಳ್ಳೇ ಸಂದರ್ಭಗಳಾಗಿವೆ. ಇವುಗಳ ಕಾರ್ಯಕ್ರಮವೂ ಪಡಿಯಚ್ಚಿನದು. ಪರಿಚಯ ಉಪನ್ಯಾಸ, ಅಭಾರಮನ್ನಣೆ, ಸಮಯಸ್ಫೂರ್ತಿ-ಸಭಾಸ್ಫೂರ್ತಿಯಿಂದ ನೆನಪಿಗೆ-ಬಾಯಿಗೆ-ಬಂದುದನ್ನು ಅತಿಥಿಗಳು ಉಪನ್ಯಾಸರೂಪವಾಗಿ ಮಕ್ಕಳೆದುರು ಹೇಳುವದು. ಹೂವಿನ ಇಲ್ಲವೆ ನೂಲಿನ ಹಾರ, ಹೊಗಳಿಕೆ ಹಾಗೂ 'ಅಭಾರ'ದ ಹೊರೆಯೊಡನೆ ಅತಿಥಿಗಳಿಗೆ ನಿರೋಪ ಕೊಡುವದು. ಇದಲ್ಲದೆ ಸಾಂಪ್ರದಾಯಿಕ ವೇಳಾಪತ್ರಿಕೆಯನ್ನು ಪ್ರತಿಭಟಿಸುವ ಸಮವಾಯಪದ್ಧತಿಯಿಂದ ಮಕ್ಕಳು ಕಲಿಯಬೇಕು. ಈ ಪದ್ಧತಿಯಲ್ಲಿ ಶಿಕ್ಷಕನು ಸಂದರ್ಭಾನುಸಾರವಾಗಿ, ಹೂವಿನಿಂದ ಹೂವಿಗೆ ಹಾರುವ ಪತಂಗದಂತೆ, ವಿಷಯದಿಂದ ವಿಷಯಕ್ಕೆ ಜಿಗಿದುಹೋಗುವನು. ಒಂದು ವಿಷಯದ ಪೂರ್ತಿಯಾದ ತಿಳಿವಳಿಕೆಯಾಗುವ ಮೊದಲೇ ವಿಷಯಾಂತರ. ಈ ಜಿಗಿದಾಟದಲ್ಲಿ ಮಕ್ಕಳ ಚಿತ್ತವೂ ಚಂಚಲವಾಗುವದು; ಅವರ ಅವಧಾನಶಕ್ತಿಯೂ ಶಿಥಿಲವಾಗುವದು. ಮಕ್ಕಳ ವಿಷಯಜ್ಞಾನವು ತೀರ ಅಲ್ಪವೂ ಅಪೂರ್ಣವೂ ಆಗುವದು. ಮಕ್ಕಳು ಮನೆಯಲ್ಲಿ ಏನು ಓದಬೇಕು? ಏನು ಪಾಠಮಾಡಬೇಕು? ಇದೆಲ್ಲವೂ ಮೂಲಶಿಕ್ಷಣದಲ್ಲಿ ಮಾಯವಾಗಿದೆ.' ಮೂಲಶಿಕ್ಷಣದಲ್ಲಿ ಪಾಲಕರು ಕಾಣುವ 'ಸಾಕ್ಷಾತ್ಕಾರ'ವಿದು.

ಇನ್ನು ಬೇರೆ ಕೆಲ ಜನರಿರುವರು; ಇವರು ಯಾವ ವಿಷಯವನ್ನೂ ಆಳವಾಗಿ ವಿಚಾರಿಸುವ ಗೋಜಿಗೆ ಹೋಗುವದಿಲ್ಲ. ತಮ್ಮ ತಿಳಿಗೇಡಿತನವನ್ನು ಇವರು ಕಿಡಿಗೇಡಿತನವನ್ನಾಗಿ ಬಳಿಸಿ ಅದರಲ್ಲಿಯೇ ತೃಪ್ತಿಯನ್ನು ಪಡೆಯುವರು. ಎಲ್ಲರನ್ನೂ ಯಾವುದನ್ನೂ ಅಪಹಾಸಕ್ಕೀಡುಮಾಡುವದು ಇವರ ವಿಮರ್ಶೆಯ ವಿಧಾನ. ಇಂಥವರನ್ನು ದುರ್ಲಕ್ಷಿಸಲೂ ಬಾರದು. ವಿನೋದದ ಮೆರುಗಿನಲ್ಲಿ ಇವರು ತಮ್ಮ ದೂಷಿತ ವಿಚಾರಗಳನ್ನು ಸಂದರ್ಭಸನ್ನಿವೇಶಗಳನ್ನು ನೋಡದೆ ಪಸರಿಸುವದುಂಟು. ಇಂಥವರ ದೃಷ್ಟಿಯಲ್ಲಿ—ಇವರ ಭಾಷೆಯಲ್ಲಿ—ಮೂಲ ಶಿಕ್ಷಣವು 'ನಿರ್ಮೂಲ ಶಿಕ್ಷಣ', 'ಮೂರ್ಖ ಶಿಕ್ಷಣ!'

ಶ್ರೀಕೃಷ್ಣನು, 'ದಾನವರಲ್ಲಿ ಹಗೆಯಾಗಿ', 'ಯಾದವರಲ್ಲಿ ಬಾಂಧವನಾಗಿ' ಹಾಗೂ 'ಪಾಂಡವರಲ್ಲಿ ಅತಿಹಿತನಾಗಿ'.... ಹೀಗೆ ವಿವಿಧ ಜನರಿಗೆ ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದ್ದನಂತೆ. ಮೂಲಶಿಕ್ಷಣವು ಕೂಡ ಅದೇ ರೀತಿಯಲ್ಲಿ ವಿವಿಧ ಜನರ ಹೃದಯದಲ್ಲಿ ವಿಧವಿಧದ ಭಾವನೆಗಳನ್ನು ಹುಟ್ಟಿಸುವಂತೆ ತೋರುವದು. ಪ್ರಾರಂಭದಲ್ಲಿ ಈ ಹೊಸ ಯೋಜನೆಯ ಹೆಸರಿನ ಬಗ್ಗೆಯೂ ತಾಳಮೇಳವಿಲ್ಲದ ಗೊಂದಲವಿದ್ದಿತು. "ನಯೀತಾಲೀಮ" ಎನ್ನುವದು ಹಿಂದಿಯಲ್ಲಿ ಇದರ ಮೊದಲಿನ ಹೆಸರು. ನಯೀ ತಾಲೀಮ ಅಂದರೆ ಹೊಸ ಶಿಕ್ಷಣ. ಇಂಗ್ಲೀಷಿನಲ್ಲಿ ಇತ್ತೀಚಿನ ಶಿಕ್ಷಣಕ್ಕೆ "New Education" ಎಂದು ಹೇಳುವಂತೆ ಹೊಸ ಶಿಕ್ಷಣವೆನ್ನುವದು ಈ ಯೋಜನೆಗೆ ಯಥಾರ್ಥವಾಗುತ್ತಿತ್ತು. ಏಕೆಂದರೆ, ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲ. ಸಾಮಾನ್ಯವಾಗಿ ಪ್ರಪಂಚದ ಅನೇಕ ದೇಶಗಳಲ್ಲಿ ಶಿಕ್ಷಣವು ಇಂದು ಸಾಗಿರುವ ರೀತಿಗಿಂತಲೂ ಗಾಂಧೀಜಿಯವರು ತೋರಿಸಿದ ಈ ಶಿಕ್ಷಣ ವಿಧಾನವು ಆಮೂಲಾಗ್ರ ವಿಭಿನ್ನವಾಗಿದೆ. ಮಕ್ಕಳ ಶಿಕ್ಷಣದ ಉದ್ದೇಶವನ್ನೆ ಉನ್ನತವಾಗಿರಿಸಿ, ಶಿಕ್ಷಣದ ವಿಧಾನವನ್ನೆ ಸಂಪೂರ್ಣವಾಗಿ ಬದಲಿಸಿ ಹೊಸ ಹಾದಿಗೆ ಹಚ್ಚುವದರಿಂದ ಹೊಸತನವು ಈ ಯೋಜನೆಯಲ್ಲಿ ಹೆಜ್ಜೆಹೆಜ್ಜೆಗೆ ಹೊಳೆಯುವದು. ಆದರೆ ಈ ಯೋಜನೆಯ ಇಂಗಿತವನ್ನು ಸರಿಯಾಗಿ ತಿಳಿಯದವರು ಇಲ್ಲವೆ ಅರೆವಾಸಿಯಾಗಿ ತಿಳಿದವರು ಆರಂಭದಲ್ಲಿ ಇದನ್ನು ತಪ್ಪು ಹೆಸರಿನಿಂದ ಕರೆದಿರುವದು ಕಂಡುಬರುವದು. ಒಂದು 'ವೃತ್ತಿ"ಯನ್ನು,ಉದ್ಯೋಗವನ್ನು ಕಲಿಸುವ ವೃತ್ತಿಶಿಕ್ಷಣವೆಂದು ಕೆಲವರು ಇದನ್ನು ತಿಳಿದರು. ಬೌದ್ಧಿಕ ಶಿಕ್ಷಣದ ಜೊತೆಗೆ ಅದಕ್ಕೆ ಪೂರಕವಾಗಿ ಒಂದು ಕೈಗಾರಿಕೆಯನ್ನು ಕಲಿಸುವ ಮಿಶ್ರಶಿಕ್ಷಣದ ಯೋಜನೆಯೆಂದು ಮತ್ತೆ ಕೆಲವರು ಕಲ್ಪನೆಮಾಡಿಕೊಂಡರು. ಉಳಿದವರು ಈ ಯೋಜನೆಗೆ ಅದು ಹುಟ್ಟಿದ ಊರಿನ ಹೆಸರನ್ನೇ ಇಟ್ಟು "ವರ್ಧಾ ಯೋಜನೆ"ಯೆಂಬ ಹೆಸರನ್ನೇ ಬಳಸತೊಡಗಿದರು. ಇತ್ತೀಚಿಗಿನ "ಮೂಲಶಿಕ್ಷಣ"-ವೆನ್ನುವದು ಹಿಂದಿನ ಹೆಸರುಗಳ ತೊಡಕಿನಿಂದ ಬಿಡುಗಡೆಯಾಗಿದೆ. ಈ ಯೋಜನೆಯ ಸ್ವರೂಪವನ್ನು ಸ್ಪಷ್ಟವಾಗಿ ಸೂಚಿಸದಿದ್ದರೂ ಅದರ ಉದ್ದೇಶ ವ್ಯಾಪ್ತಿಗಳ ಬಗೆ ತಪ್ಪುತಿಳಿವಳಿಕೆಗೆ ಎಡೆಗೊಡದಂತೆ ಮಾಡುತ್ತಿದೆ. ರಾಷ್ಟ್ರದ ಎಲ್ಲ ಮಕ್ಕಳಿಗೂ ಇದು "ಮೂಲ.

ಭೂತ"ವಾದ, ಅವರ ಜೀವನಕ್ಕೆ "ಬುನಾದಿ"-ತಳಹದಿಯುಂತಿರುವ ಸಾರ್ವತ್ರಿಕ ಶಿಕ್ಷಣವು. ವೃತ್ತಿಮೂಲ ಶಿಕ್ಷಣವೆಂಬ ಹೆಸರೂ ಇದಕ್ಕೆ ಒಪ್ಪಬಹುದು. ಒಂದು ವೃತ್ತಿ-ಜೀವನೋಪಯೋಗಿಯಾದ ಚಟುವಟಿಕೆ ವ್ಯಕ್ತಿ-ವಿಕಾಸವೆಂಬ ವೃಕ್ಷಕ್ಕೆ ಮೂಲ (ಬೇರು) ದಂತಿರಬೇಕು. ಬೇರು ಗಿಡದ ಬೆಳವಣಿಗೆಗೆ ಬೇಕಾಗುವ ಸತ್ವವನ್ನೆಲ್ಲ ಒದಗಿಸುವದು. ಅದೇ ರೀತಿಯಾಗಿ ಶಿಕ್ಷಣದ ಮಾಧ್ಯಮವಾದ ಮೂಲೋದ್ಯೋಗವು ಮಗುವಿನ ಸರ್ವತೋಮುಖವಾದ ವಿಕಾಸಕ್ಕೆ ಅವಶ್ಯವಿರುವ ಸಂದರ್ಭ ಸಾಮರ್ಥ್ಯಗಳನ್ನು ತಂದು ಕೊಡುವದು. ಅಂತೆಯೇ ವೃತ್ತಿಮೂಲ ಶಿಕ್ಷಣವೆಂಬ ಹೆಸರು ಈ ಹೊಸ ಯೋಜನೆಗೆ ಹೆಚ್ಚಾಗಿ ಹೊಂದಿಕೊಳ್ಳುತ್ತಿದೆಯೆಂದು ಹೇಳಬಹುದು. ಈ ಹೊಸ ಯೋಜನೆಯು ಪೂರ್ವೇತಿಹಾಸವೇನು? ಪರಂಪರೆಗಳು ಯಾವವು? ಇದರ ತಾತ್ವಿಕವಾದ ನೆಲೆಗಟ್ಟು ಯಾವುದು? ಇದಕ್ಕೆ ಆಧುನಿಕ ಮಾನಸಶಾಸ್ತ್ರದ ಆಧಾರ-ಅನುಮತಿಗಳು ಇರುವವೆ? ವರ್ಗದ ಸಾಂಘಿಕ ಶಿಕ್ಷಣಕ್ಕೆ ಈ ನೂತನ ವಿಧಾನವು ಹೊಂದಿಕೊಳ್ಳಲು ಸಾಧ್ಯವೆ? ಇವುಗಳೆಲ್ಲ ಬೇಕಾದ ವಿಸ್ತೃತವಾದ ವಿವೇಚನೆಯು ಮೂಲಶಿಕ್ಷಣದ ಬಗ್ಗೆ ಬರೆದಿರುವ ಗ್ರಂಥಗಳಲ್ಲಿ ತಕ್ಕಮಟ್ಟಿಗೆ ಕಂಡು ಬರುವದು. ಈ ವಿವರವಾದ ಜ್ಞಾನವದಂತಿರಲಿ. ತಮ್ಮ ಮಕ್ಕಳ ಜೀವನವನ್ನು ಪರಂಪರೆಯ ಪಡಿಯಚ್ಚಿನಿಂದ ತೆಗೆದು ಹೊಸದಾಗಿ ರೂಪಿಸಲು ಹೊರಟಿರುವ ಮೂಲ ಶಿಕ್ಷಣದ ಬಗ್ಗೆ ತಾಯಿ-ತಂದೆಗಳನೇಕರಲ್ಲಿ ಸರಿಯಾದ ತಿಳಿವಳಿಕೆಯು ಕಂಡು ಬರುವದಿಲ್ಲ. ತಜ್ಞರೆನಿಸಿಕೊಳ್ಳುವವರು ಈ ಅತ್ಯಂತ ಸರಲವಾದ ಯೋಜನೆಗೆ ಸಾಮಾನ್ಯ ಬುದ್ಧಿಗೆ ನಿಲುಕದ ತಾತ್ವಿಕ ಮಂಜಿನ ಮುಸುಕನ್ನು ಹಾಕಿರುವರು. ಈ ಮಂಜು ಮಾಯವಾಗಬೇಕು. ಮೂಲಶಿಕ್ಷಣದ 'ತರಬೇತಿಯು' ಕೇಂದ್ರಗಳು ಶಿಕ್ಷಕರಿಗಾಗಿ ಹಾಕಿಕೊಡುವ ಶಿಕ್ಷಣ ವಿಧಾನವು ಕರ್ಮಕಾಂಡದ ಯಜ್ಞಯಾಗಾದಿಗಳನ್ನು ಹೋಲುವಂತಿದೆ. ಶಿಕ್ಷಣ ಕ್ರಮವು ಸರಿಯಾಗಿ ಸಾಗಲು ಒಂದು ಬಗೆಯ ತಾಂತ್ರಿಕತೆಯು ತಕ್ಕಮಟ್ಟಿಗೆ ಅನಿವಾರ್ಯವೆನಿಸಿದರೂ ಅದರಲ್ಲಿ ನಿರ್ಜೀವತೆಯು ತುಂಬಿರಬಾರದು. 'ಕುಲಪತಿ'ಗಳ ಕುಲುಮೆಯಲ್ಲಿ ಸ್ವತಂತ್ರ ವಿಚಾರ, ಸ್ವತಂತ್ರ ಪ್ರತಿಭೆಗಳೆಲ್ಲವೂ ಕರಗಿ ಏಕರೂಪವಾಗಬಾರದು.

ಸರ್ವೋದಯದ ಮೊದಲು ಹೆಜ್ಜೆಯಂತಿರುವ ಮೂಲಶಿಕ್ಷಣವು ಸಾಮಾನ್ಯ ಜನತೆಗಾಗಿ ಹಳ್ಳಿಯ ಜನಜೀವನಕ್ಕೆ ಹೊಂದಿಕೆಯಾಗುವಂತೆ ಕಲ್ಪಿಸಿದ ಒಂದು ಸಮಗ್ರ ಶಿಕ್ಷಣ ಯೋಜನೆಯಾಗಿದೆ. ಇಂದಿನ ಶಿಕ್ಷಣವು ಜೀವನಕ್ಕೂ ಹೆಚ್ಚಾಗಿ ಹಳ್ಳಿಯ ಜೀವನಕ್ಕೂ ಸಂಬಂಧಿಸಿರಲಿಲ್ಲ. ಹಳ್ಳಿಯ ಕುಟುಂಬದಲ್ಲಿ ಮೂರು ವರುಷದ ಮಗುವಿನಿಂದ ನೂರು ವರುಷದ ಮುದುಕರ ವರೆಗೆ ಎಲ್ಲರೂ ಒಂದಿಲ್ಲೊಂದು ರೀತಿಯಿಂದ ದುಡಿದು ಗಳಿಸಲೇಬೇಕು. ದೊಡ್ಡೂರಿನ ಸ್ಥಿತಿವಂತ ಮನೆತನದ ಮಕ್ಕಳು ತಮ್ಮ ಇಡೀ ದಿನವನ್ನೆಲ್ಲ ಶಾಲೆಯ ಶಿಕ್ಷಣಕ್ಕೆ ಮೀಸಲಾಗಿರಿಸಬಹುದು. ಆದರೆ ಒಕ್ಕಲಿಗರ ಮಕ್ಕಳು ತಮ್ಮ ತಾಯಿ-ತಂದೆಗಳಿಗೆ ಹೊಲಗೆಲಸ, ಮನೆಗೆಲಸಗಳಲ್ಲಿ ನೆರವಾಗಬೇಕು. ಸುಗ್ಗಿಯ ಸಮಯದಲ್ಲಿಯಂತೂ ಹಳ್ಳಿಯ ಶಾಲೆಗಳಿಗೆ ಅನಧಿಕೃತವಾದ ಹೆಚ್ಚಿನ ರಜೆ ದೊರೆತಂತೆ. ಕಲಿಯಲು ಪ್ರಾರಂಭಿಸಿದ ನೂರು ವಿದ್ಯಾರ್ಥಿಗಳಲ್ಲಿ ನಾಲ್ವರು ಕೂಡ ನಾಲ್ಕನೆಯ ಇಯತ್ತೆಯ ಮೆಟ್ಟಿಲನ್ನೇರುವದಿಲ್ಲ. ಸಾರ್ವಜನಿಕ ಹಣದ ಅಪಾರವಾದ ಅಪವ್ಯಯವು ಶಿಕ್ಷಣದ ಹೆಸರಿನಲ್ಲಿ ನಡೆಯುವದೆಂದು ಸರಕಾರದ ವರದಿಗಳೇ ಸಾರುತ್ತವೆ. ಶಿಕ್ಷಣವನ್ನು ಪಡೆದವರಾದರೂ ಸಾಮಾಜಿಕ ಜೀವನಕ್ಕೆ ಸತ್ಪಾತ್ರರೆ? ಸ್ವತಂತ್ರ, ಸ್ವಾವಲಂಬನ ಜೀವನವನ್ನು ನಡೆಸಲು ಸಮರ್ಥರೇ? ಸ್ವಾಭಿಮಾನವನ್ನು ಬದಿಗೆ ಇಟ್ಟು ನೌಕರಿಗಾಗಿ ಅಲೆದಾಡುವ ಸುಶಿಕ್ಷಿತ ಭಿಕ್ಷುಕರ ಹೊಸ ಹೊಸ ತಂಡಗಳು ವರುಷ-ವರುಷಕ್ಕೆ ನಿರ್ಮಾಣವಾಗುತ್ತಿವೆ. ಭಾವನೆಗಳ ಸಂಸ್ಕಾರಕ್ಕೆ ಶಿಕ್ಷಣದಲ್ಲಿ ಸ್ಥಾನವಿಲ್ಲ. ಬೆಳೆಯುವ ಮಕ್ಕಳ ಜೀವನವನ್ನು ಒಳ್ಳೆ ದಾರಿಯಲ್ಲಿ ನಡೆಸಿಕೊಂಡು ಹೋಗುವ ನಿಶ್ಚಿತವಾದ ಗೊತ್ತುಗುರಿಗಳಿರುವದಿಲ್ಲ. ತಿಳಿದು-ತಿಳಿಯದಂತೆ ಅವರ ವ್ಯಕ್ತಿತ್ವವನ್ನು ರೂಪಿಸುವ ಆದರ್ಶವಿಲ್ಲ. ಸರಿಯಾದ ಸಾಮಾಜಿಕ ಜೀವನಕ್ಕೆ ಪ್ರತಿಕೂಲವಾದ ಭಾವನೆಗಳನ್ನು ಬೆಳೆಯಗೊಡದೆ ತಡೆದು ಹಿಡಿಯುವ ನೇರವಾದ ನೈತಿಕ, ಧಾರ್ಮಿಕ ಶಿಕ್ಷಣವಂತೂ ಎಂದೋ ಮಾಯವಾಯಿತು. ಪರ್ಯಾಯದಿಂದಲಾದರೂ ಪ್ರಾಸಂಗಿಕವಾಗಿ ಭಾವನೆಗಳನ್ನು ತಿದ್ದುವ ಕಾರ್ಯವನ್ನು ಇಂದಿನ ಶಿಕ್ಷಣವು ಮಾಡುವದಿಲ್ಲ. ಇದರಿಂದ ಶಿಕ್ಷಣದ ಅಂತಿಮ ಗುರಿಯಾದ ಶೀಲಸಂವರ್ಧನೆಯು ಹೇಗಾಗಬೇಕು? ಸಹನೆ, ಸಹಕಾರಗಳ ಬದಲು ಸ್ಪರ್ಧೆ ಸ್ವಾರ್ಥಗಳು ವ್ಯಕ್ತಿ, ಸಂಸ್ಥೆ, ಸಮಾಜಗಳಲ್ಲಿ ನೆಲೆಸಿ ಸಾಮಾಜಿಕ ಜೀವನದ ಸ್ವಾಸ್ಥ್ಯವು

ಇಲ್ಲದಂತಾಗಿದೆ. ಈ ಬಗೆಯ ಸತ್ವಹೀನವಾದ ಜನಾಂಗದಿಂದ ಕೂಡಿದ ರಾಷ್ಟ್ರವು ಹೇಗೆ ಪ್ರಗತಿ ಪಥದಲ್ಲಿ ನಡೆಯಬಲ್ಲದು? ಶ್ರಮವಿಲ್ಲದೆ ಬರುವ ದುಡ್ಡಿಗಾಗಿ ಮನಸೋತ ಶ್ರೀಮಂತರೂ ಕಲಿತವರೆನಿಸಿಕೊಳ್ಳುವವರೂ ದುರ್ಬಲರನ್ನು ತಮ್ಮ ಸ್ವಾರ್ಥದ ಕೈಗೊಂಬೆಗಳಾಗಿ ದುಡಿಸಿಕೊಳ್ಳುವರು. ಆಗಾಗ್ಗೆ ಮಹಾಪುರುಷರೊಬ್ಬರು ಉಲ್ಕೆಗಳಂತೆ ತಮ್ಮ ದಿವ್ಯಚಾರಿತ್ರ್ಯದಿಂದ ಬೆಳಗಿ ಹೋಗಬಹುದು. ಆದರೆ ಸಾಮಾನ್ಯ ಜನತೆ ಕತ್ತಲೆಯಲ್ಲಿಯೇ ತಡವರಿಸುತ್ತ ಸಾಗಬೇಕಾಗುವದು. ಈ ಮಹಾಪುರುಷರ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ಹಿಂಬಾಲಿಸುವ ನಿಷ್ಠೆ, ಶಕ್ತಿ ಹಾಗೂ ತಿಳಿವಳಿಕೆಗಳು ಇವರಿಗೆ ಇಲ್ಲದಂತಾಗಿರುವವು.

ಅನೇಕಮುಖವಾದ ಆಂದೋಲನವನ್ನು ನಡೆಸುವಾಗ್ಗೆ ಮಹಾತ್ಮಾಜಿಯವರಿಗೆ ಈ ಮಾತಿನ ಮನವರಿಕೆಯಾಗಹತ್ತಿತು. ಜನತೆಯಲ್ಲಿ ನವ-ಜೀವನವನ್ನು ತುಂಬಬೇಕು. ಅವರು ಸಾತ್ವಿಕ ಭಾವನೆಗಳಿಂದ ಕೂಡಿದವರಾಗಬೇಕು. ಪರಸ್ಪರ ಪ್ರೇಮವಿಶ್ವಾಸಗಳಿಂದ ಪ್ರೇರಿತರಾಗಬೇಕು. ಒಳ್ಳೆ ಶಿಕ್ಷಣವೇ ಈ 'ಸರ್ವೋದಯ' ಸಮಾಜದ ಅಡಿಗಲ್ಲಾಗಬಲ್ಲುದು. ಸಮಾಜದ ಸ್ವಾಸ್ಥ್ಯ—ಸುಸ್ಥಿತಿಗಳು ವ್ಯಕ್ತಿಗಳ ಶೀಲ, ಸೌಜನ್ಯಗಳನ್ನೇ ಅವಲಂಬಿಸಿರುವವು. ಬೆಳೆಯುವ ಮಕ್ಕಳನ್ನು ಸರಿಯಾದ ಸಾಮಾಜಿಕ ಜೀವನಕ್ಕೆ ಅಣಿಗೊಳಿಸುವ ಕಾರ್ಯವನ್ನು ನಿರ್ಜೀವವಾದ ಪುಸ್ತಕಗಳೂ ಪರೀಕ್ಷೆಗಳೂ ಮಾಡಲಾರವು. ಅವರ ಶಾಲೆಯ ಜೀವನವೇ ಆಟಗೆಯದಾಗಿರಬೇಕು. ಇದು ಸರಿಯಾದ ಸಾಮಾಜಿಕ ಜೀವನದ ಕೇವಲ ಅಟ-ಅನುಕರಣಗಳಾಗಿರದೆ ನಿಜವಾದ ಪ್ರತಿಕೃತಿ ಪಡಿಯಚ್ಚಿನಂತಿರಬೇಕು. ಈ ಮಾತು ತೀರ ಹೊಸದಲ್ಲ. ಆಧುನಿಕ ಶಿಕ್ಷಣದ ಆದಿಪುರುಷನೆಂದು ಕರೆಯಬಹುದಾದ ರೂಸೋನು ಇದೇ ಮಾತನ್ನೇ ಅತ್ಯಂತ ಮಾರ್ಮಿಕವಾಗಿ ಹೇಳಿದ್ದಾನೆ. "No book but the world, not teaching but facts.— — —Stoop to the working man's position in order to rise above your own" ವ್ಯಕ್ತಿ ವಿಕಾಸಕ್ಕೆ ಪುಸ್ತಕವು ಸಾಧನವಲ್ಲ, ಆದರೆ ಜಗತ್ತಿನೊಡನೆ ಜೀವನದ ಕೂಡ ಒದಗುವ ನೇರವಾದ ಸಂಪರ್ಕ ಸಂಬಂಧಗಳು. ಹೇಳಿದ್ದನ್ನು ಕೇಳುವದರಿಂದಲ್ಲ, ಆದರೆ ಜೀವನದ ಏರಿಳಿತಗಳನ್ನು ತಾನೇ ಅನುಭವಿಸಿ, ಕಂಡುಕೊಂಡು ಮಗುವಿನ ಸರಿಯಾದ ಬೆಳವಣಿಯಾಗುವದು. ಜೀವನದ ಹಿರಿಮೆಯನ್ನು ಹೆಚ್ಚಿಸಬೇಕಿದ್ದರೆ ಶ್ರಮಜೀವಿಗಳೊಡನೆ ಬಾಗಿ ಬಾಳಲು ನಾವು ಕಲಿಯಬೇಕು. ರೂಸೋನ ಈ ಮಾತುಗಳು ಮೂಲಶಿಕ್ಷಣಕ್ಕೆ ಮೂಲಮಂತ್ರದಂತಿವೆ. ಮೂಲಶಿಕ್ಷಣದಲ್ಲಿ ಮಗುವು ಸ್ಥಳಿಕ ಪರಿಸ್ಥಿತಿಗೆ ಅನುರೂಪವಾದ, ಜೀವನೋಪಯೋಗಿಯಾದ ಮೂಲೋದ್ಯೋ-ಗದ ಮೇಲೆ ಕಾಲೂರಿ ನಿಲ್ಲುವದು. ಉದ್ಯೋಗದ ವಿವಿಧ ಅಂಗೋಪಾಂಗಗಳಲ್ಲಿ ನಿಸರ್ಗ-ಸಮಾಜಗಳ ನಿಕಟವಾದ ಸಂಪರ್ಕ ಸಂಬಂಧಗಳು ಆತನಿಗೆ ಅನ್ಯೋನ್ಯವಾಗಿ, ಅಪರಿಹಾರ್ಯವಾಗಿ ಒದಗುವವು. ಮಗುವಿನ ಜೀವನದ ಪರಿಸೀಮೆಯು ಮುಂದೆಮುಂದೆ ಸರಿಯುತ್ತ ಹೋಗುವದು. ಈ ಜೀವನವು ಅವನಿಗೆ 'ತಿಳಿಯಲಾರದ ಒಗಟ' ವಾಗದು. 'ಕಣ್ಣು ಕಟ್ಟಿ ಬಿಟ್ಟಂತೆ' ಎಂಬ ಭಾವನೆಯು ಆತನಿಗೆ ಬಾರದು. ಜೀವನದೊಡನೆ ಆತನು ಸಮರಸನಾಗಿ ಬೆಳೆದು ಬರುವದರಿಂದ ಅದನ್ನು ಸ್ವಾವಲಂಬಿಯಾಗಿ ಎದುರಿಸುವ ಆತ್ಮವಿಶ್ವಾಸವೂ ಆತನಲ್ಲಿ ಅಂಕುರಿಸುವದು. ಉದ್ಯೋಗದಲ್ಲಿ ತಾಳ್ಮೆ, ಸಾಮಾಜಿಕ ವ್ಯವಹಾರಗಳಲ್ಲಿ ಸಹಕಾರ-ಬಂಧುಭಾವಗಳು ತಿಳಿಯದೆಯೆ ಆತನ ಸ್ವಭಾವದಲ್ಲಿ ಒಂದುಗೂಡುವವು. ಜೀವನದಲ್ಲಿ ಪ್ರಾಪ್ತಿ ಪ್ರತಿಷ್ಠೆಗಳನ್ನು ಪಡೆಯಲು, ಜೀವನೋಪಯೋಗಿಯಾದ ಉದ್ಯೋಗವೇ ಆತನಿಗೆ ನೆಲೆ. ಹೀಗಾಗಿ ಉದ್ಯೋಗದಲ್ಲಿ ನಿಷ್ಠೆಯೂ ನೈಪುಣ್ಯವೂ ಆತನಿಗೆ ಅನಿವಾರ್ಯವಾಗುವವು. "ಬಾಯಿ ಮೊಸರಿಗೆ — ಕೈಕೆಸರೆ" ಸರಿಯಾದ ಸಾಧನವೆಂಬುದನ್ನು ಆತನು ಅರಿತುಕೊಳ್ಳುವನು. ಈ ರೀತಿಯಾಗಿ- "ಸ್ವೇ ಸ್ವೇ ಕರ್ಮಣಿ" ಅಭಿರತರಾದ, ಪ್ರೀತಿ ಸಹಕಾರಗಳೆಂಬ ಸದ್ಭಾವನೆಗಳಿಂದ ಪ್ರೇರಿತರಾದ, ಸ್ವಾವಲಂಬಿಗಳಾದ ವ್ಯಕ್ತಿಗಳು ಹೆಚ್ಚಿದಂತೆ ಸಮಾಜವೂ ಸತ್ವಶಾಲಿಯಾಗುವದು. ರಾಷ್ಟ್ರದ ಪ್ರಗತಿ, ಭದ್ರತೆಗಳು ಸತ್ವಶಾಲಿಯಾದ ಸಮಾಜವನ್ನೇ ಕೂಡಿಕೊಂಡಿರುವವು. ಈ ಬಗೆಯ ನೂತನ ಸಮಾಜವೇ ಗಾಂಧೀಜಿಯವರ ಅಚ್ಚು ಮೆಚ್ಚಿನ "ಸರ್ವೋದಯ ಸಮಾಜ, ಇದುವೇ ಜವಾಹರರ ಕನಸಿನ ಕಲ್ಯಾಣರಾಷ್ಟ್ರ."

ಮಕ್ಕಳು ರಾಷ್ಟ್ರದ ಸಜೀವವಾದ ಸಂಪತ್ತು. ಸ್ಥಿರವಾದ ಸೊತ್ತು. ಮಕ್ಕಳ ಶಾರೀರಿಕ, ಮಾನಸಿಕ, ಆತ್ಮಿಕಶಕ್ತಿಗಳನ್ನು ಮೂಲೋದ್ಯೋಗದ ಮುಖಾಂತರವಾಗಿ ಬೆಳಕಿಗೆ ತಂದು, ಬಲಿಸಿ, ಅವರ ಸರ್ವತೋಮುಖವಾದ ವಿಕಾಸವನ್ನು ಸಾಧಿಸುವದೇ ಮೂಲ ಶಿಕ್ಷಣದ ಗುರಿ. ಈ ಸದುದ್ದೇಶವೇ ಅದರ ಮೊದಲು, ಈ ಸತ್ಪರಿಣಾಮವೇ ಅದರ ಮುಕ್ತಾಯ. ಇಂದು ನಮ್ಮ ರಾಷ್ಟ್ರಕ್ಕೆ ಗಿಳಿಯೋದಿನ ಅರಗಿಳಿಗಳ ಕೊರತೆಯಿಲ್ಲ. ಕಾರ್ಯನಿರತರೂ ಕರ್ತೃತ್ವಶಾಲಿಗಳೂ ಬೇಕು. ಉತ್ಪಾದಕಶಕ್ತಿಯಿಂದ ಕೂಡಿದ ಕಲಾವಿದರು ಬೇಕು. ಕ್ರಿಯಾತ್ಮಕವಾದ ಶಿಕ್ಷಣವು ಮಾತ್ರ ಮಕ್ಕಳಲ್ಲಿ ಹುದುಗಿದ ಕಲಾತ್ಮಕವಾದ ಕಲ್ಪನಾಶಕ್ತಿಗೆ, ಕ್ರಿಯಾಶಕ್ತಿಗೆ ಹೊರಗೆ ಬರಲು ಅನುವು ಅವಸರಗಳನ್ನು ಒದಗಿಸುವದು. ಸಮಾಜದಲ್ಲಿ ರೂಢವಾದ ರೀತಿನೀತಿಗಳನ್ನು ಬದಲಿಸಿ ಜೀವನವನ್ನು ಹೊಸ ಹಾದಿಗೆ ಹಚ್ಚುವ ಕಾರ್ಯವು ಈ ಬಗೆಯ ಶಿಕ್ಷಣದಿಂದಲೇ ಮಾತ್ರ ಸಾಧ್ಯವಿದೆ. ಗ್ರಾಂಥಿಕ ಶಿಕ್ಷಣದಲ್ಲಿ ಗುರುವಿನ ಬೆಲೆಯು ತಗ್ಗಿದೆ. ಗುರುಶಿಷ್ಯರ ನಡುವೆ ಸಂಪರ್ಕ ಸಾಹಚರ್ಯಗಳಿಲ್ಲ. ಶೀಲಸಂವರ್ಧನೆಯಲ್ಲಿ ಒಳ್ಳೇ ಕೃತಿಗಳ ಅನುಕರಣದಷ್ಟೇ ವಿಚಾರ ಹಾಗೂ ಭಾವನೆಗಳ ಅನುಕರಣವೂ ಮಹತ್ವದಾಗಿವೆ. ಗುಣಗ್ರಾಹಕತೆಯೂ ಗುಣಗೌರವವೂ ಈ ಬಗೆಯ ಭಾವಾನುಕರಣದಿಂದಲೇ ಸಾಧಿಸುವವು. ಓದು-ಬರೆಹಗಳ ಶಿಕ್ಷಣದಲ್ಲಿ ಮಗುವು ತಾನಾಯಿತು, ತನ್ನ ಹಸ್ತಪುಸ್ತಕಗಳಾಯಿತು. ಆತನ ಜೀವನ ಶಕ್ತಿಗಳೆಲ್ಲವೂ ಪರೀಕ್ಷೆಗಾಗಿ ಮೀಸಲು. ಕ್ರಿಯಾತ್ಮಕ ಶಿಕ್ಷಣದಲ್ಲಿ ಮಗುವಿನ ಸಹಜ ಶಕ್ತಿಗಳಿಗೆಲ್ಲ ಜೀವನದ ಸನ್ನಿವೇಶಗಳೇ ಪ್ರಚೋದಕ. ಗುರುವೇ ನಿರ್ದೇಶಕ. ಮಾರ್ಗದರ್ಶಕ. ಗುರುವಿನ "ಮಾದರಿ ಕೃತಿ"ಯು ಪ್ರತಿಯೊಂದು ಮೆಟ್ಟಲನ್ನು ಮಗುವು ನೋಡಿ ತಿಳಿದುಕೊಳ್ಳಬೇಕು. ಏಕೆ? ಹೇಗೆ? ಎಂದು ವಿವರಗಳನ್ನು ಅರಿತುಕೊಳ್ಳಬೇಕು. ಗುರುವು ಮಾಡಿದಂತೆ ಮಾಡಿ ನೋಡಬೇಕು. ಈ ರೀತಿಯ ಸಂಪರ್ಕ ಸಾಹಚರ್ಯಗಳಿಂದ ಮಗುವು ಗುರುವಿನಲ್ಲಿ ಒಳ್ಳೆಯದಾಗಿರುವದನ್ನು, ಆದರ್ಶವಾಗಿರುವದನ್ನು ಆತ್ಮಸಾತ್ ಮಾಡಿಕೊಳ್ಳುವದು. ಈ ರೀತಿಯಾಗಿ ಒಂದು ಆದರ್ಶದ ಪಡಿಯಚ್ಚಿನಲ್ಲಿ ಮಗುವಿನ ಜೀವನವನ್ನು ನಿಸರ್ಗದ ಕ್ರಮಕ್ಕೆ ಬಾಧೆಬಾರದಂತೆ ರೂಪುಗೊಳಿಸುವದೇ ನಿಜವಾದ ಶಿಕ್ಷಣವು.

ಮೂಲಶಿಕ್ಷಣ ಕೇಂದ್ರಗಳು ಇಂದು ಈ ಉನ್ನತವಾದ ಆದರ್ಶವನ್ನು ಎಷ್ಟರಮಟ್ಟಿಗೆ ಅನುಸರಿಸುತ್ತಿರುವವೆಂಬುದು ವಿಚಾರಣೀಯವಾದ ಮಾತು. ಆದರ್ಶವೇನೋ ಗ್ರಾಂಥಿಕವಾಗಿ, ತಾತ್ವಿಕವಾಗಿ, ವರ್ಗದಲ್ಲಿ ಉಪನ್ಯಾಸ ರೂಪವಾಗಿ ಉಳಿದಿದೆ. "ಅರ್ಚಕಸ್ಯ ತಪೋ ಬಲಾತ್" ಎಂದು ಹಿರಿಯರು ಹೇಳಿರುವದುಂಟು. ಮಹಾಮಂತ್ರಗಳ ಶಕ್ತಿಯು ಕೂಡ ಅರ್ಚಕನ ಪಾತ್ರತೆಯನ್ನು ಅವಲಂಬಿಸಿರುವದಂತೆ. ಸದ್ಧೇತುವಿನಿಂದ ಪ್ರೇರಿತವಾದ ಎಂತಹ ಶ್ರೇಷ್ಠವಾದ ಯೋಜನೆಯೇ ಆಗಿರಲಿ, ಅದರ ಯಶಾಪಯಶಗಳು ಅದನ್ನು ಕಾರ್ಯಾಚರಣೆಯಲ್ಲಿ ತರುವವರ ತತ್ಪರತೆ, ತತ್ವನಿಷ್ಠೆಗಳನ್ನೇ ಹೆಚ್ಚಾಗಿ ಅವಲಂಬಿಸುವವು. ಶಿಕ್ಷಣದ ಒಂದು ಪದ್ಧತಿಯನ್ನು ಯಾಂತ್ರಿಕವಾಗಿ ಹೇಗಾದರೂ ಅನುಸರಿಸಬಹುದು. ಅದಕ್ಕೆ ತತ್ವನಿಷ್ಠೆಯ ಇಲ್ಲವೆ ವಿಶುದ್ಧ ಜೀವನದ ಆವಶ್ಯಕತೆಯು ಕಾಲ್ತೊಡಕಾಗುವದಿಲ್ಲ. ಆದರೆ ಜೀವನದೊಡನೆ ಸಮವ್ಯಾಪ್ತಿಯಾದ ಸಮರಸವಾಗಬೇಕಾದ ಒಂದು ದೊಡ್ಡ ದೇಶಕ್ಕೆ 'ರಾಷ್ಟ್ರಪಿತ' ನೆಂದು ಹೆಸರಾಂತ ಒಬ್ಬ ಮಹಾಪುರುಷನ ಅಂತರಿಕ ಸ್ಫೂರ್ತಿಯಿಂದ ನಿರ್ಮಿತವಾದ ಶಿಕ್ಷಣದ ಒಂದು ಮಹಾ: ಯೋಜನೆಯನ್ನು ಸರಿಯಾಗಿ ತಿಳಿದುಕೊಳ್ಳಲು, ಯಶಸ್ವಿಯಾಗಿ ನಿರ್ವಹಿಸಲು ಅದಕ್ಕೆ ತಕ್ಕ ಶಕ್ತಿ-ಪಾತ್ರತೆಗಳುಳ್ಳ ಶಿಕ್ಷಕರೇ ಬೇಕು. ಇಂದು ಮೂಲಶಿಕ್ಷಣದ ವಿಷಯದಲ್ಲಿ ಕಂಡುಬರುವ ಅಪಾರ್ಥಕ್ಕೆ, ಅಪಪ್ರಚಾರಕ್ಕೆ, ಅಪಯಶಸ್ಸಿಗೆ ಅಪಾತ್ರರಾದ ಶಿಕ್ಷಕರ ಕೈಯಲ್ಲಿ ಅದನ್ನು ಒಪ್ಪಿಸಿರುವದೇ ಕಾರಣವೆಂದು ಹೇಳಬಹುದು. ದುರ್ದೈವದ ಸಂಗತಿಯೆಂದರೆ, ಒಬ್ಬರು ಮತ್ತೊಬ್ಬರ ತಲೆಯ ಮೇಲೆ ಈ ದೋಷದ ಆರೋಪವನ್ನು ಹೇರಲು ಮಾಡುತ್ತಿರುವ ಹುಚ್ಚು ಹವ್ಯಾಸ. ಶಿಕ್ಷಕರು-ಮುಖ್ಯಾಧ್ಯಾಪಕರಲ್ಲಿ, ಮುಖ್ಯಾಧ್ಯಾಪಕರು ಮೇಲಧಿಕಾರಿಗಳಲ್ಲಿ, ಮೇಲಧಿಕಾರಿಗಳು-ಸಂಬಂಧಿಸಿದ ಮಂತ್ರಿಗಳಲ್ಲಿ 'ನಿಷ್ಠೆ-ವಿಶ್ವಾಸ' ಗಳಿಲ್ಲವೆಂದು ಹೇಳುವದು ಕಂಡುಬರುವದು. ನಿಷ್ಠೆ-ವಿಶ್ವಾಸಗಳು ಕಡತರುವ ಪೇಟೆಯ ವಸ್ತುಗಳಲ್ಲ. ಪ್ರತಿಯೊಬ್ಬನು ಆತ್ಮನಿರೀಕ್ಷಣೆಯಿಂದ ಈ ಯೋಜನೆಯಲ್ಲಿ ತನಗಿರುವ ನಿಷ್ಠೆ-ವಿಶ್ವಾಸಗಳನ್ನು ತಾನೇ ತೂಗಿ ನೋಡಿಕೊಳ್ಳಬೇಕು. ಒಪ್ಪಿಸಿದ ಕಾರ್ಯವನ್ನು ಮಾಡುವದರಲ್ಲಿ 'ನನ್ನ ನಿಷ್ಠೆ ನನಗೆ ಸಾಕು' ಎನ್ನುವ ತತ್ವವು ಸರ್ವಮಾನ್ಯವಾದುದು. ನಿಷ್ಠೆ ಸುವಾಸನೆಯಂತೆ. ಸಂಪರ್ಕದಿಂದ ಅದು ತಿಳಿಯದೆಯೆ ಉಳಿದವರಲ್ಲಿಯೂ ಪಸರಿಸುವದು.

ಎರಡನೆಯದಾಗಿ ಮೂಲಶಿಕ್ಷಣವು ಒಂದು ಹೊಸ ಯೋಜನೆಯೆಂಬುದನ್ನು ಇದರಲ್ಲಿ ತೊಡಗಿದ ಎಲ್ಲ ಶಿಕ್ಷಕರೂ ನೆನಪಿನಲ್ಲಿಡಬೇಕಾದ ಸಂಗತಿಯಾಗಿದೆ. ಬಹುಕಾಲದಿಂದ ನಡೆದುಬಂದಿರುವ ಶಿಕ್ಷಣದ ಪರಂಪರೆ ಪದ್ಧತಿಗಳನ್ನು ಅದು ಬಿಟ್ಟುಕೊಟ್ಟಿದೆ. ಹಿಂದಿನ ಹಾದಿಯನ್ನು ಬಿಡಲಾರದ ಶಿಕ್ಷಕರಿಗೆ ಈ ಹೊಸ ಯೋಜನೆಯ ತತ್ವವೂ ತಂತ್ರವೂ ಸರಿಯಾಗಿ ತಿಳಿಯಲಾರದು. ಪಾಟಪುಸ್ತಕಗಳಿಗೆ ಮೆಚ್ಚಿದ ಮಕ್ಕಳ ಮನಸ್ಸು ರಾಟ ಮೇಟಗಳ ಕಡೆಗೆ ಕೂಡಲೇ ಒಲಿಯಲಾರದು. ಸ್ವತಂತ್ರ ವಿಚಾರ ಮಾಡಲಾಗದ ಸಮಾಜವು ಹೊಸದೆಲ್ಲವನ್ನೂ ಸಾಶಂಕದೃಷ್ಟಿಯಿಂದ ನೋಡುವದು. ಮೂಲಶಿಕ್ಷಣದಲ್ಲಿ ಪ್ರಾರಂಭದ ಈ ಸನ್ನಿವೇಶವು ಶಿಕ್ಷಕರ ಸತ್ವಪರೀಕ್ಷೆ ಮಾಡುವದೆಂದು ಹೇಳಿದರೆ ತಪ್ಪಾಗದು. ಶೈಕ್ಷಣಿಕವಾಗಲಿ, ಸಾಮಾಜಿಕವಾಗಲಿ, ರಾಜಕೀಯವಾಗಲಿ-ಕ್ರಾಂತಿಕಾರಕ ಯೋಜನೆಯೊಂದನ್ನು ಕಾರ್ಯಕಾರಿಯಾಗಿ ಮಾಡುವಾಗ್ಗೆ ಅನೇಕ ಅಡಚಣಿಗಳು ಒದಗುವವು. ಬಯಸಿದಂತೆ ಎಲ್ಲವೂ ಅನುಕೂಲವಾಗಿದ್ದರೆ ಯಾವ ಯೋಜನೆಯನ್ನಾದರೂ ಯಾಂತ್ರಿಕವಾಗಿ, ಅನಾಯಾಸವಾಗಿ ಕೈಕೊಳ್ಳಬಹುದು. ನಾವು ಇಲ್ಲದ್ದನ್ನು ಬಯಸುವಂತೆ ಮಾಡುವದೇ ಕ್ರಾಂತಿಯ ಗುರಿ. ಕ್ರಾಂತಿಯ ದಾರಿ ಪ್ರಯೋಗ ಪರಿಶ್ರಮಗಳ ದಾರಿ. ಕ್ರಾಂತಿಕಾಲದ ಪ್ರಯೋಗ ಪರಿಶ್ರಮಗಳಿಗೆ ಮೂಲಶಿಕ್ಷಣದ ಆದಿಶಿಕ್ಷಕರು ಅಂತಃಕರಣಪೂರ್ವಕವಾಗಿ ಸಿದ್ಧರಾಗಿರಬೇಕು. 'ಮಕ್ಕಳು ತಮ್ಮ ಮಾತಿಗೆ ಕಿವಿಗೊಡುವದಿಲ್ಲ', 'ಮೇಲಧಿಕಾರಿಗಳು ತಮ್ಮ ಪರಿಶ್ರಮವನ್ನು ಮನ್ನಿಸುವದಿಲ್ಲ', 'ಜನತೆಗೆ ಇದು ಬೇಕಾಗಿಲ್ಲ' ಇವೇ ಮೊದಲಾದ ಆತಂಕಗಳು ತಮ್ಮ ದಾರಿಯಲ್ಲಿ ಅಡ್ಡವಾಗಿ ನಿಂತಿರುವವೆಂಬುದನ್ನು ಅರಿತುಕೊಂಡೇ ಅವರು ಕಾರ್ಯಪ್ರವೃತ್ತರಾಗಬೇಕು. ಇವುಗಳನ್ನೆಲ್ಲ ಎದೆಗೊಟ್ಟು ಎದುರಿಸುವ ತಾಳ್ಮೆ-ನಿಷ್ಠೆಗಳು ಅವರಿಗೆ ಅತ್ಯವಶ್ಯಕವಾದವುಗಳು. ನಿರಕ್ಷರತೆಯ ನಿರ್ಮೂಲನಕ್ಕಾಗಿ, ಜನತೆಯ ತಿಳಿವಳಿಕೆಯನ್ನು ಹೆಚ್ಚಿಸುವದಕ್ಕಾಗಿ ಇಂದು ಸರಕಾರವು 'ಸಮಾಜ ಶಿಕ್ಷಣ'ವೆಂಬ ಯೋಜನೆಯನ್ನು ಕೈಕೊಂಡಿದೆ. ನೀರಿನಂತೆ ಹಣವನ್ನು ವೆಚ್ಚ ಮಾಡುತ್ತಿದೆ. ಸಮಾಜ ಶಿಕ್ಷಣದ ವಿಷಯದಲ್ಲಿಯು ಕೂಡ ಶಿಕ್ಷಕರಲ್ಲಿ ಇದೇ ಬಗೆಯ ಭಾವನೆ ಬೇರೂರಿದೆ. 'ಕಲಿಯುವವರಲ್ಲಿ ಆಸ್ಥೆಯಿಲ್ಲ-ವರ್ಗಗಳಿಗೇ ಅವರು ಬರುವದಿಲ್ಲ'-ಎಂದು. ಹೌದು—ನಿಜವಿದೆ. ನೂರಾರು ವರುಷಗಳ ದಾಸ್ಯಜೀವನ ಜನತೆಯನ್ನು ಈ ದುರ್ದೆಸೆಗೆ ಈಡುಮಾಡಿದೆ. ಅವರ ಜೀವನದಲ್ಲಿ ಅನಾಸ್ಥೆ-ಅಂಜಿಕೆಗಳನ್ನು ತುಂಬಿದೆ. ಈ ಪರಿಸ್ಥಿತಿಯನ್ನು ಕಳೆದು ಹಾಕುವದಕ್ಕಾಗಿಯೇ ಕ್ರಾಂತಿಕಾರಕ ಯೋಜನೆಗಳು ಬೇಕಾಗುವವು. ತಾತ್ಕಾಲಿಕ ಪರಿಣಾಮ, ಕೂಡಲೆ ಫಲಾಪೇಕ್ಷೆ-ಇವುಗಳನ್ನು ಬಯಸಿದರೆ ನಿರಾಶೆ ನಿರುತ್ಸಾಹಗಳಿಗೆ ನಾವು ಬಲಿಯಾಗಬೇಕಾಗಬಹುದು. ಪರಿಶ್ರಮ ಪ್ರಯೋಗಗಳಿಂದ ನಮ್ಮ ದಾರಿಯೂ ಸುಗಮವಾಗುವದು. ಯೋಜನೆಯ ವಿವಿಧ ವಿಧಾನಗಳಲ್ಲಿ ನೂತನ ಶೋಧಗಳನ್ನು ಮಾಡಿದ ಶ್ರೇಯಸ್ಸೂ ನಮ್ಮದಾಗುವದು.

ಇನ್ನೊಂದು ಸಂಗತಿಯಲ್ಲಿ ಮೂಲಶಿಕ್ಷಣವು ಅಸದೃಶವಾಗಿದೆ. ಇದು ವರೆಗೆ ಸಾಗಿಬಂದ ಶಿಕ್ಷಣವು 'ಗೇಣು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ'. ಕೇವಲ ಚರಿತಾರ್ಥದ ಶಿಕ್ಷಣದೊಡನೆ ಚಾರಿತ್ರ್ಯವನ್ನು ಹೇಗೆ ಜೋಡಿಸಬೇಕು? ಆಹಾರ ಪ್ರಾಪ್ತಿಯಕೂಡ ಆತ್ಮೋನ್ನತಿಯನ್ನೂ ಹೇಗೆ ಹೊಂದಿಸಿಕೊಳ್ಳಬೇಕೆಂಬುದು ಶಿಕ್ಷಣಪ್ರಪಂಚದಲ್ಲಿ ಒಂದು ಜಟಿಲವಾದ ಸಮಸ್ಯೆಯಾಗಿತ್ತು. ಮೂಲಶಿಕ್ಷಣದ ಮಾಟಗಾರಿಕೆಯಿಂದ ಗಾಂಧೀಜಿಯವರು ಈ ತೊಡಕನ್ನು ಬಿಡಿಸಿರುವರು. ಆಹಾರಾದಿ ದೇಹದ ಪ್ರಾಥಮಿಕ ಬೇಡಿಕೆಗಳನ್ನೂ ಪೂರೈಸಬೇಕು, ಆತ್ಮದ ಸೌರಭವಾದ ಸಂಸ್ಕೃತಿಯನ್ನೂ ಸಾಧಿಸಬೇಕು, ಸುಶಿಕ್ಷಿತರಾದ ಯುವಕರು ಮನೆಗೆಲಸವನ್ನಾಗಲಿ ಯಾವ ಕಸಬನ್ನಾಗಲಿ ಮೇಲು-ಕೀಳೆಂಬ ಭಾವನೆಯಿಂದ ಕಡೆಗಾಣಿಸದಂತಾಗಬೇಕು. ಇತ್ತ ಕಡೆಗೆ ಜೀವನೋಪಯೋಗಿಯಾದ ವಿಷಯಜ್ಞಾನವನ್ನು ಪಡೆದು, ಉದಾತ್ತವಾದ ಭಾವನೆಗಳಿಂದ ಪ್ರೇರಿತರಾಗಿ ಅವರು ಸುಸಂಸ್ಕೃತರೆಂದೆನಿಸಿಕೊಳ್ಳಬೇಕು. ಉತ್ತರ ದಕ್ಷಿಣ ಧ್ರುವಗಳಂತೆ ಇದುವರೆಗೆ ದೂರದೂರವಾಗಿ ತೋರಿದ ಸ್ವಾವಲಂಬನದ ಚರಿತಾರ್ಥವನ್ನೂ ಸುಸಂಸ್ಕೃತವಾದ ಚಾರಿತ್ರ್ಯವನ್ನೂ ಮೂಲಶಿಕ್ಷಣವು ಉದ್ಯೋಗದ ಉಸುರಿನೊಡನೆ ಹೊಂದಿಸಿಕೊಳ್ಳುವದು, ಕೂಡಿಸಿಕೊಳ್ಳುವದು. ಇದುವೆ ಮೂಲಶಿಕ್ಷಣದ ಹಿರಿಮೆ, ಹೊಸತನ.

- ಅವಳು ತನ್ನ ಗಂಡನ ಗುಣ-ವರ್ಣನೆಯನ್ನು ನೆರೆಮನೆಯವಳೆದುರಿಗೆ ಮಾಡುತ್ತಿದ್ದಳು. "ಹೌದು. ಒಂದು ವಿಷಯದಲ್ಲಿ ನನ್ನ ಗಂಡ ಬಹಳ ಒಳ್ಳೆಯವರಾಗಿದ್ದಾರೆ. ಅವರು ತಪ್ಪಿ ಕೂಡ ಒಮ್ಮೆಯಾದರೂ 'ನಾನು ನಿನಗೆ ಮೊದಲೇ ಹೇಳಿರಲಿಲ್ಲವೆ?' ಎನ್ನುವದಿಲ್ಲ." ಎಂದವಳು ಹೇಳಿದಳು.

- ತುಸು ತಡೆದು "ಅದೆಲ್ಲ ನಿಜ. ಆದರೆ ಅವರು ಹೀಗೆ ಹೇಳುವದಿಲ್ಲ ಎಂಬ ಮಾತಿನ ಅರಿವು ಮಾತ್ರ ನನಗೆ ಮೇಲಿಂದ ಮೇಲೆ ಆಗುತ್ತದೆ." ಎಂದಳು.

ಕಾಮಿನೀ ಕೌಶಲ

ಲೇಖಕ: ಶ್ರೀ. ಪಂಢರೀನಾಥಾಚಾರ್ಯ ಗಲಗಲಿ
ಸಂಸ್ಕೃತ ಪಂಡಿತರು, ಸಕ್ರಿ ಹಾಯಸ್ಕೂಲ, ಬಾಗಲಕೋಟೆ

ಸಂಸ್ಕೃತ ಲಾಕ್ಷಣಿಕರ ದೃಷ್ಟಿಯಲ್ಲಿ ಕಾವ್ಯ ನಿಜವಾದ ಕಾವ್ಯವಾಗಬೇಕಾದರೆ ಅದರಲ್ಲಿ ಕಾಂತೆಯರ ಸರಸಾಲಾಪದ ಸೊಗಸು ಸ್ವಾರಸ್ಯಗಳು ತುಂಬಿ ತುಳುಕಬೇಕು. ಹೀಗೆ ಭಾಮಿನಿಯರ ಭಾವ ಬುಗ್ಗೆಯೊಡೆದು, ರಸಕಾರಂಜಿ ಪುಟಿದು ಮಾಧುರ್ಯವೆ ಮೈದಾಳಿ ನಿಂತಿರುವ ಹಲವಾರು ಪ್ರಾಚೀನ ಕಾಮಿನೀ ಕೃತಿಕಲಶಗಳು ಕೊಹಿನೂರ ರತ್ನದಂತೆ ಇಂದಿಗೂ ಭಾರತದಲ್ಲಿ ಮಿನುಗುತ್ತಿರುವವು.

ಕಾಮಿನೀಕೌಶಲ ಎಂದ ಕೂಡಲೆ ಆ ಹೆಸರಿನ ಸಿನೇಮಾ ತಾರೆಯೆಂದು ಮಾತ್ರ ಇಲ್ಲಿ ಯಾರೂ ಭಾವಿಸಬಾರದು. ಸಂಸ್ಕೃತ ಸಾಹಿತ್ಯಾಂಗಣವನ್ನು ತಮ್ಮ ಹೃದಯಂಗಮವಾದ ಸರಸೋಕ್ತಿಗಳಿಂದ ಶೃಂಗರಿಸಿದ ಕೆಲವು ಕಾವ್ಯಾಂಗನೆಯರ ಕಲಾಕೌಶಲ್ಯವನ್ನು ತೋರಿಸುವದೇ ಈ ಕಿರಿ ಬರಹದ ಗುರಿ.

'ನ ಸ್ತ್ರೀಸ್ವಾತಂತ್ರ್ಯಮರ್ಹತಿ' ಎಂದು ಮಾನವಕುಲ ಮೂಲಪುರುಷನಾದ ಮನು ನಿಷ್ಠುರವಾಗಿ ನುಡಿದಿದ್ದರೂ ಯಾವ ಶ್ರುತಿಸ್ಮೃತಿಗಳಲ್ಲಿಯೂ 'ನ ಸ್ತ್ರೀ ಶಿಕ್ಷಣಮರ್ಹತಿ' ಎಂದು ಮಾತ್ರ ಹೇಳಿದುದು ಕಂಡುಬರುವದಿಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಸಾಮಾಜಿಕ ಸುವ್ಯವಸ್ಥಿತೆಯನ್ನು ಉಳಿಸಿ ಬೆಳೆಸಿಕೊಳ್ಳುವದಕ್ಕಾಗಿ ಹೆಣ್ಣು ಹೃದಯದ ಸ್ವೈರವೃತ್ತಿ ಸ್ವಚ್ಛಂದ ಪ್ರವೃತ್ತಿಗಳಿಗೆ ಕೆಲವೊಂದು ಪ್ರತಿಬಂಧ ಮಾಡಿದ್ದರೂ ಶಾರದೆಯ ಸಂಸಾರದಲ್ಲಿ ಮಾತ್ರ ನಾರಿಯರಿಗೇ ಅಗ್ರಪೂಜೆ. ಸಾಹಿತ್ಯಕ್ಕಾದರೂ ಕಾಂತಾಸಮ್ಮಿತೋಪದೇಶವೆಂತಲೇ ಸರಸತೆ. ಕಾಂತೆಯ ಉಪದೇಶದಿಂದ ಸಮ್ಮಿತವಾಗದಿದ್ದರೆ ಆ ಕಾವ್ಯದಲ್ಲಿ ಭಾವ ಅಭಾವವಾಗಿ ಅರ್ಥದ ಅನರ್ಥದಿಂದ ರಸವೇ ನೀರಸವಾಗುವದು. ಸಂಸ್ಕೃತ ಲಾಕ್ಷಣಿಕರ ದೃಷ್ಟಿಯಲ್ಲಿ ಕಾವ್ಯ ನಿಜವಾದ ಕಾವ್ಯವಾಗಬೇಕಾದರೆ ಅದರಲ್ಲಿ ಕಾಂತೆಯರ ಸರಸಾಲಾಪದ ಸೊಗಸು ಸ್ವಾರಸ್ಯಗಳು ತುಂಬಿ, ತುಳುಕಬೇಕು. ಗಂಡಿನ ವಾಗ್ವಿಲಾಸ ಕಾವ್ಯದ ಹಂತಕ್ಕೆ ಹತ್ತಿ, ಸಾಹಿತ್ಯಶಿಖರವನ್ನು ಮುಟ್ಟಿ, ರಸಗಬ್ಬವಾಗುವದು, ಅಲ್ಲಿ ನಲ್ಲೆಯರ ಲಲ್ಲೆಮಾತಿನ ಸೊಲ್ಲುಕೇಳಿ ಬಂದಾಗ ಮಾತ್ರ. ಹೀಗೆ ನಾರಿಯರ ನಲ್ಮಾತುಗಳ ಬರಿಹೋಲಿಕೆಯಿಂದ ಮಾತಿನ ಮೈಯಲ್ಲಿ ಚಿದ್ರಸ ಚಿಮ್ಮಿದರೆ ಭಾವಭೂಮಿಯಾದ ಆ ಹೆಣ್ಣಿನ ರಸಿಕಹೃದಯವೇ ವಾಣಿಯ ವೀಣೆಯಾಗಿ ಭಾವತಂತಿಗಳನ್ನು ಮಿಡಿಯುತ್ತಿರುವಾಗ ಅದೆಂಥ ರಸದೋಕುಳಿಯಾಗಬೇಡ! ಹೀಗೆ ಭಾಮಿನಿಯರ ಭಾವಬುಗ್ಗೆಯೊಡೆದು ರಸಕಾರಂಜಿ ಪುಟಿದು ಮಾಧುರ್ಯವೇ ಮೈದಾಳಿ ನಿಂತಿರುವ ಹಲವಾರು ಪ್ರಾಚೀನ ಕಾಮಿನೀ ಕೃತಿಕಲಶಗಳು ಕೊಹಿನೂರ ರತ್ನದಂತೆ ಇಂದಿಗೂ ಭಾರತದ ಭೂತಾಕಾಶದಲ್ಲಿ ಮಿನುಗುತ್ತಿರುವವು.

ವಿಜಯನಗರ ಸಮ್ರಾಜ್ಞಿಯಾದ ಗಂಗಾದೇವಿಯ ವೀರಕಂಪಣಚರಿತೆಯೊಂದು ನವರಸಗಳ ಅವಿರತ ಒರತೆ. ಕಾವ್ಯದುದ್ದಕ್ಕೂ ಹೊಂದಿಕೊಂಡು ಬಂದಿರುವ ಕಾಲಿದಾಸನ ವೈದರ್ಭೀ ರೀತಿಯು ಹಿತಮಿತವಾದ ಮಾತಿನ ಮಾಲೆಗಳನ್ನು ಮಲ್ಲಿಗೆ ಮಂಟಪವನ್ನಾಗಿರಿಸಿ ಕಾವ್ಯಸೌರಭ ಸೂಸುವಂತೆ ಮಾಡುತ್ತದೆ. 'ಯಾ ವೈದರ್ಭ ಗಿರಾಂ ವಾಸಃ ಕಾಲಿದಾಸಾದನಂತರಮ್' ಎಂಬ ಉಕ್ತಿ ಅವಳಲ್ಲಿ ಚರಿತಾರ್ಥವಾಗುವದು.

ಇನ್ನು ಭಟ್ಟ, ಬಾಣ, ಭವಭೂತಿ, ಮಾಘ ಮುರಾರಿಯವರ ದರ್ಪೋದ್ಧತವಾದ ಗಂಡುಗಾಡಿಯನ್ನೂ, ನಾರಿಕೇಲಪಾಕವನ್ನೂ ಕಾಣಬೇಕಾದರೆ ಇನ್ನೊಬ್ಬ ವಿಜಯನಗರ ಸಮ್ರಾಜ್ಞಿಯ ಚಂಪೂಕಾವ್ಯವೊಂದರ ವಚನಗುಂಫನವನ್ನು ನೋಡಬೇಕು. ವಿಜಯನಗರದರಸು ಅಚ್ಯುತರಾಯನ ಪಟ್ಟದರಸಿಯಾದ ತಿರುಮಲಾಂಬೆಯು ರಚಿಸಿದ 'ವರದಾಂಬಿಕಾ ಪರಿಣಯಚಂಪೂ' ಕಾವ್ಯದಲ್ಲಿ ಪದವಿನ್ಯಾಸಪಾಟವವನ್ನೂ ಅಪ್ರತಿಮ ವಾಗ್‌ವೈಖರಿಯನ್ನೂ ನಾಲ್ಕೆಂಟು ಉಸಿರುಗಳಲ್ಲಿಯೂ ಓದಿಮುಗಿಸಲು ಬಾರದಂಥ ದೊಡ್ಡ ದೊಡ್ಡ ವಾಕ್ಯಗಳನ್ನೂ ಓದಿನೋಡಿದಾಗ 'ಬಾಣೋಚ್ಛಿಷ್ಟಮಿದಂ ಸರ್ವಂ" ಎಂಬಲ್ಲಿ ಬಾಣೋಚ್ಛಿಷ್ಟ ಎಂದರೆ ಬಾಣನ ಉಚ್ಛಿಷ್ಟ ಎನ್ನುವದಕ್ಕಿಂತಲೂ ಬಾಣನೇ ಉಚ್ಛಿಷ್ಟ ಎಂದು ಬಹುವ್ರೀಹಿಸಮಾಸವನ್ನು ಮಾಡುವದೇ ಉಚಿತವೆಂದೆನಿಸುವದು. ಗ್ರಂಥದ ಕೊನೆಗೆ ತನ್ನ ಬುದ್ಧಿವೈಭವವನ್ನು 'ಏಕವಾರಾಕರ್ಣನಮಾತ್ರದೃಢಾವಧಾರಿತ ನವ್ಯ ಕಾವ್ಯ ನಾಟಕಾಲಂಕಾರ ಪುರಾಣಾಗಮ ರಹಸ್ಯ ಸಾರಸ್ಯಾನುಬಂಧಸಮಿಂಧಾನ ಸ್ವಾಭಾವಿಕಪ್ರತಿಭಾನುಭಾವಯಾ,' ಎಂದು ಹೇಳಿಕೊಂಡಿದ್ದಾಳೆ. ತನ್ನ ಕಂಠವು ಒಳ್ಳೆ ಮಧುರವಿದ್ದಿತೆಂಬುವದನ್ನು ಕೂಡ ಎಷ್ಟು ಸರಸವಾಗಿ ಲಲಿತಪದಗಳ ದ್ರಾವಿಡ ಪ್ರಾಣಾಯಾಮದಿಂದಲೇ ಬಣ್ಣಿಸುತ್ತಾಳೆ: 'ವಿರಿಂಚಿಚಂಚಲ ನಯನಾನಖಾಂಚಲಸಮುದಂಚಿತವಿಪಂಚೀಪ್ರಪಂಚಿತ ಪಂಚಮಮಧುರಿಮೋದಂಚನವಿಕಸ್ವರಕಂಠಸ್ವರಯಾ' ಎಂದು. ಈ ವರ್ಣನೆಯನ್ನು ಓದುವಾಗ ಸಹೃದಯರ ಕಿವಿಯಲ್ಲಿಯೇ. ವಿರಿಂಚಿಯ ಚಂಚಲ ನಯನೆಯು-ಅರ್ಥಾತ್ ಶಾರದೆಯು ತನ್ನ ಉಗುರಂಚಿನಿಂದ ವಿಪಂಚಿಯ-ವೀಣೆಯ, ತಂತಿಗಳನ್ನು ಮೀಟಿ ಪಂಚಮದ ಇಂಚರವನ್ನು ಹೊಮ್ಮಿಸುವಂತೆ ಭಾಸವಾಗುವದು. 'ವಿರಿಂಚಿ ಚಂಚಲನಯನಾ ನಖಾಂಚಿಲೋದಂಚಿತವಿಪಂಚೀ ಪ್ರಪಂಚಿತಪಂಚಮ' ಈ ಪದಪುಂಜಗಳಿಂದಲೇ ವಾಣಿಯ ವೀಣಾಝುಂಕಾರವು ಹೊರಹೊಮ್ಮಿ ದೀರ್ಘಸಮಾಸದ ಶಬ್ದಜ್ಞಾನವಾಗುವದಕ್ಕಿಂತಲೂ ಮೊದಲು ಭಾವವು ಬುದ್ಧಿಗಮ್ಯವಾಗಿ ಅರ್ಥವು ಅನುಭವರಮ್ಯವಾಗುವಂತೆ ಮಾಡುತ್ತದೆ. ರಸಿಕಳಾದ ಈ ಕನ್ನಡಿಗ ಅರಸಿಯು ತನ್ನ ದಾಸಿಯರಿಗೆ ಹೇಳುವ ವಿಲಾಸಿ ಕಾರ್ಯಕಲಾಪಗಳನ್ನೂ ಆ ಆದೇಶದಲ್ಲಿಯ ಮಧುರವಾದ ವಾಣೀವಿಲಾಸವನ್ನೂ ಕೇಳಿರಿ: "ತಮಾಲಿಕೆ! ಸಮಾಕಲಯ ತಮಾಲತರುಕೋಮಲದಲ ಮಾಲಿಕಾಭಿಃ ವಂದನಮಾಲಿಕಾಮ್. ಮಾಧವಿಕೆ! ಮಾಕಂದಧೂಲಿಧೂಸರಿತಾಃ ಶೋಧಯ ಶಿರೀಷ ಕೇಸರ ಪಿಚ್ಛಿಕಯಾ ಕಾಂಚನವೇದಿಕಾಃ. ಮಂಜರಿಕೆ! ರಂಜಯ ಮಣಿದರ್ಪಣಾನ್ ಅಂಜಸಾ ಕಂಜನವನರೇಣುಪುಂಜೇನ." ಮಾಧವಿಕೆಯು ಅರಮನೆಯ ಅಂತಃಪುರದಲ್ಲಿಯ ಬಂಗಾರದ ಜಗುಲಿಯ ಮೇಲೆ ಮಾಮರದ ಗೊನೆಗೊಂಚಲಿನಿಂದ ಉದುರಿದ ಹೂಹುಡಿಯನ್ನು ಶಿರೀಷ ಕುಸುಮದ ಗರಿಯ ಕಸಬರಿಗೆಯಿಂದ ಉಡುಗಬೇಕಂತೆ ಮತ್ತು ಮಂಜರಿಕೆಯು ಶಯ್ಯಾಗೃಹದ ರನ್ನಗನ್ನಡಿಗಳನ್ನು ಕುಂಜವನದ ಪರಾಗ ಪುಂಜದಿಂದ ರಂಜಿಸಬೇಕಂತೆ. ಇಲ್ಲಿಯ ದಾಸಿಯರ ಹೆಸರುಗಳಲ್ಲಿಯೂ ಅವರ ಕಾರ್ಯ ವಿಧಾನಗಳಿಲ್ಲಿಯೂ ಎಂಥ ರಸಿಕತೆ, ತುಂಬು ಜೀವನ ಎದ್ದು ನಿಂತಿವೆ, ಕಾಣಬಹುದು. ಈ ಕಾವ್ಯದಲ್ಲಿಯ ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು. ಆದರೆ ಸ್ಥಲಸಂಕೋಚದಿಂದ ಹಾಗೆ ಮಾಡದೆ ಮುಂದೆ ಸಾಗೋಣ. ಇದಲ್ಲದೆ ಎಜ್ಜಕಾ, ರಾಮಭದ್ರಾಂಬಾ, ಮಧುರವಾಣಿ, ತುಕ್ಕಾ, ವೈಜಯಂತಿ, ಪ್ರಿಯಂವದಾ, ಮೋಹಿನಿ, ವಿಕಟನಿತಂಬಾ, ಜಘನಚಪಲಾ, ಲೀಲಾವತಿ, ಖನ್ನಾ, ವಿದ್ಯಾವತಿ ಮೊದಲಾದ ಅನೇಕ ಕಾವ್ಯಕನ್ನಿಕೆಯರು ಸಂಸ್ಕೃತ ಸಾಹಿತ್ಯಪ್ರಪಂಚದಲ್ಲಿ ಪ್ರವಹಿಸುವ ಅನೇಕ ರಸದೊರತೆಗಳಿಗೆ ನಿತ್ಯನೆಲೆಯಾಗಿ ಸತ್ಯಸೆಲೆಯಾಗಿ ಅಮೃತಶಿಲೆಯಾಗಿ ಕಲೆಯ ಬಲೆಯಾಗಿ ನಿಂತುಕೊಂಡಿದ್ದಾರೆ.

ಆದರಲ್ಲಿಯೂ ಕೆಲವು ಕವಿಯಿತ್ರಿಯರಂತೂ ಉದ್ದಾಮ ಪ್ರತಿಭಾ ಪಾಂಡಿತ್ಯ ಕವಿತ್ವಗಳ ಉದ್ರಿಕ್ತವಾದ ಆತ್ಮವಿಶ್ವಾಸದಿಂದ ಹೊಗರೇರಿ ಹರ್ಷ ಭವಭೂತಿ ಜಗನ್ನಾಥರಂತೆ 'ಕೋಸ್ತಿ ಧನ್ಯೋಮದನ್ಯಃ' ಎಂದು ಹೂಂಕರಿಸಿದ್ದಾರೆ. ಪುಷ್ಪದಿಂದ ಪರಿಮಳವು ಹೊರಸೂಸುವಂತೆ ಹೃದಯ ತುಂಬಿ ಹೊರಹೊಮ್ಮಿದೆ ಈ ಕವಿ-ಕಾಮಿನಿಯರ ಕಾವ್ಯಮುದ. ನಿಜವಾಗಿ ನೋಡಿ-ದರೆ ಈ ಕಾವ್ಯಾಂಗನೆಯರ ಭಾವಪೂರ್ಣವಾದ ಇಂಥ ಭುಜವಲ್ಗನೆಯಲ್ಲಿಯೂ ಒಂದು ತೆರನಾದ ಮಧುರ ಕಲಾವಿಲಾಸವುಂಟು.

"ಏಕೋಽಭೂನ್ನಲಿನಾತ್ ತತಶ್ಚ ಪುಲಿನಾತ್
ವಲ್ಮೀಕತಶ್ಚಾಪರಃ
ತೇ ಸರ್ವೇ ಕವಯೋ ಭವಂತು ಗುರವಃ
ತೇಭ್ಯೋಽನಮಸ್ಕುರ್ಮಹೇ ॥
ಅರ್ವಾಂಚೋಯದಿ ಗದ್ಯಪದ್ಯ ರಚನೈ-
ಶ್ಚೇತಶ್ಚಮತ್ಕುರ್ವತೇ
ತೇಷಾಂ ಮೂರ್ಧ್ನಿದಧಾಮಿ ವಾಮಚರಣಂ
ಕರ್ಣಾಟರಾಜಪ್ರಿಯಾ ॥

ಕಮಲದಿಂದುದಿಸಿದವ (ಬ್ರಹ್ಮ) ನಾಗಲಿ ಉಸುಕಿ-ನಲ್ಲಿ ಅವತರಿಸಿದವನಾಗಲಿ (ವ್ಯಾಸ) ಹುತ್ತಿನಲ್ಲಿ ಹುಟ್ಟಿದವ (ವಾಲ್ಮೀಕಿ) ನಾಗಲಿ ಕವಿಯೂ ಆಗಬಹುದು, ಗುರುವೂ ಆಗಬಹುದು. ಕವಿ ಗುರುಗಳಾದ ಈ ತ್ರಿಮೂರ್ತಿಗಳಿಗೆ ನಾನು–ಅಲ್ಲ. ನಾವು ನಮಸ್ಕರಿಸುವೆವು- ಆದರೆ ಅರ್ವಾಚೀನ ಪಂಡಿತರಾರಾದರೂ ಗದ್ಯಪದ್ಯಗಳಿಂದ ಚಿತ್ತ-ಚಮತ್ಕಾರವನ್ನುಂಟುಮಾಡಲು ಹೊರಟರೆ ಅವರ ತಲೆಯಮೇಲೆ ಈ ನನ್ನ ಎಡಗಾಲನ್ನೇ ಇರಿಸು-ವೆನು. ಇದೆಂಥ ಕಾವ್ಯದರ್ಪ! ಇದೆಂಥ ಮಧುರ-ವಾದ ರಸಾಹಂಕಾರ! ನಿಜವಾಗಿ ಇಂಥ ಪಂಡಿತ ಪ್ರಮದೆಯರು 'ಅವರು ಸಕ್ಕರೂ ಒಂದು ರುಚಿ, ಅವರ ಸೊಕ್ಕುಕ್ಕಿದರೂ ಒಂದು ರುಚಿ!' ಕನ್ನಡ-ದರಸನ ಪ್ರಾಣಪ್ರೇಯಸಿಯಾದ ಈ ವಿಜಯಾಂ-ಕೆಯು "ಸರಸ್ವತೀವಕರ್ಣಾಟೀ ವಿಜಯಾಂಕಾ-ಜಯತ್ಯಸೌ ಯಾ ವೈದರ್ಭಗಿರಾಂ ವಾಸಃ ಕಾಲಿ-ದಾಸಾದನಂತರಮ್" ಎಂದು ಕಾಲಿದಾಸನ ತರು-ವಾಯ ವೈದರ್ಭೀ ರೀತಿಯಲ್ಲಿ ವಚೋವಿಕಾಸ, ಕಾವ್ಯವಿಲಾಸಗಳನ್ನು ಮಾಡಲು ತಾನೊಬ್ಬಳೇ ಸಮರ್ಥಳೆಂದು ಹೇಳಿಕೊಂಡಿರುವಳು. ಅವಳಾಡಿದ ಈ ಮಾತು ವಸ್ತುಸ್ಥಿತಿಯೇ ಹೊರತು ಆತ್ಮಸ್ತುತಿ ಯಲ್ಲ ಎಂಬವಿಷಯ ಅವಳ ಕೃತಿಗಳ ರಸದಾಳಕ್ಕೆ ಇಳಿದಾಗ ಮಾತ್ರ ಸಹೃದಯರ ರಸದೃಷ್ಟಿಗೆ ಗೋಚರವಾಗುವದು.

ಪ್ರಾಚೀನ ಭಾರತದಲ್ಲಿ ಗುರುಮನೆ ಅರಮನೆ ಅಂತಃಪುರಗಳ ಆವಾರದಲ್ಲಿ ಮಾತ್ರ ಈ ಸ್ಫೂರ್ತಿ-ಕುಸುಮವು ಅರಳುತ್ತಿತ್ತೆಂದಲ್ಲ. ಪಟ್ಟಣದ ವೇಶ್ಯೆಯಿಂದ ಪಟ್ಟದರಸಿಯವರೆಗೆ, ಒಕ್ಕಲ-ಮಕ್ಕಳಿಂದ ಪಂಡಿತಪುತ್ರಿಯರವರೆಗೆ ಎಲ್ಲೆ-ಲ್ಲಿಯೂ ಈ ಕಾವ್ಯದ ಸೊಲ್ಲು ಕೇಳಿಬರುತ್ತಿತ್ತು. ಅಂದಿನ ಸಮಾಜದಲ್ಲಿ ಘಟಕವಾದ ಎಲ್ಲ ಜಾತಿಯ ಜನರ ಭಿನ್ನಭಿನ್ನ ಮನೋಭಾವನೆಗಳು ಈ ಸಂಸ್ಕೃತ ಸಾಹಿತ್ಯದ ರನ್ನಗನ್ನಡಿಯಲ್ಲಿ ಒಡಮೂಡಿ ಭವ್ಯ-ವಾಗಿಯೂ ಕೆಲವು ಮಡಿವಂತರಿಗೆ ಬೀಭತ್ಸ-ವಾಗಿಯೂ ಕಾಣುತ್ತವೆ. ಆದುದರಿಂದಲೇ ರಾಜ-ಶೇಖರನು ತನ್ನ ರಾಜತರಂಗಿಣಿಯಲ್ಲಿ "ಪುರುಷ-ವತ್ ಸ್ತ್ರಿಯೋಽಪಿವೀಭವೇಯುಃ ಸಂಸ್ಕಾರೋ ಹಿ ಆತ್ಮನಿ ಸಮನ್ವೈತಿನಸ್ತ್ರೈಣಂ ಪೌರುಷಂ ವಾ ವಿಭಾಗಮಪೇಕ್ಷತೇ। ಶ್ರೂಯಂತೇ ದೃಶ್ಯಂತೇಚ ರಾಜಪುತ್ರ್ಯಃ ಮಹಾಮಾತ್ಯ ದುಹಿತರಃ ಗಣಿ ಕಾಶ್ಚ ಕೌತುಕಿ ಭಾರ್ಯಾಶ್ಚ ಶಾಸ್ತ್ರಪ್ರಹತಬು ದ್ಧಯಃ ಕವಯಶ್ಚ'ಸಮಾನವಾದ ಸಂಸ್ಕಾರದಿಂದ ಪುರುಷರಂತೆ ಸ್ತ್ರೀಯರೂ ಕವಿಗಳಾಗುವರು ಜ್ಞಾನಕ್ಷೇತ್ರದಲ್ಲಿ ಸ್ತ್ರೀಪುರುಷ ವಿಭಾಗವೆಂಬು-ವದಿಲ್ಲ. ಆದ್ದರಿಂದಲೇ ಎಷ್ಟೋ ರಾಜಕುಮಾರಿ-ಯರೂ ವೇಶ್ಯೆಯರು ಕೂಡ ಕವಿಗಳೂ ದಾರ್ಶ-ನಿಕರೂ ಆದದ್ದನ್ನು ನಾವು ಕೇಳುತ್ತಿದ್ದೇವೆ. ಅಷ್ಟೇ ಅಲ್ಲದೆ ನಾವಿಂದು ಪ್ರತ್ಯಕ್ಷವಾಗಿ ನೋಡು-ತ್ತಿದ್ದೇವೆ ಎಂದು ಕೀಳುಜಾತಿಯವರಲ್ಲಿಯೂ ಕಾವ್ಯದೇವತೆಯ ಪ್ರಸಾದವನ್ನು ಹೇಳಿದ್ದಾನೆ.

ವೇಶ್ಯಾವೃತ್ತಿಯನ್ನೇ ವಂಶಪರಂಪರೆಯಿಂದ ಕುಲಕಸಬನ್ನಾಗಿ ಮಾಡಿಕೊಂಡಿರುವ ಒಬ್ಬ ವೃದ್ಧ ಕುಲಟೆಯು ತನ್ನ ಮಗಳು ಗರತಿಯಾಗಿ ಒಬ್ಬನೇ ಪ್ರಿಯಕರನನ್ನು ನೆಚ್ಚಿಕೊಂಡು ನೆಮ್ಮದಿಯಿಂದ ಬಾಳಿ ಬದುಕುವದನ್ನು ಕಂಡು ಮರುಗಿ ಕೊರಗಿ ಮಗಳಿಗೆ ಬುದ್ಧಿವಾದವನ್ನು ಹೇಳುತ್ತಾಳೆ. (ವಿದ್ಯಾ ವತಿ ಎಂದು ಈ ವೇಶ್ಯೆಯ ಹೆಸರು).

ವಯಂ ಬಾಲ್ಯೇ ಬಾಲಾನ್ ತರುಣಿಮನಿ ಯೂನಃ
ಪರಿಣತಾ-
ನವೇಚ್ಛಾಮೋ ವೃದ್ಧಾಂಸ್ತದಿಹ ಕುಲರಕ್ಷಾ
ಸಮುಚಿತಾ ॥
ತ್ವಯಾರಬ್ಧಂ ಜನ್ಮಕ್ಷಪಯಿತುಮನೇನೈಕ
ಪತಿನಾ।
ನ ನೋಗೋತ್ರೇಪುತ್ರಿಕ್ವಚಿದಪಿಸತೀಲಾಂಛನ
ಮಭೂತ್ ॥

ಮಗಳೇ ನಾವು ಬಾಲ್ಯದಲ್ಲಿ ಚಿಕ್ಕವರನ್ನೂ ತಾರು ಣ್ಯದಲ್ಲಿ ಯುವಕರನ್ನೂ ಮುಪ್ಪಿನಲ್ಲಿ ಮುದುಕ ರನ್ನೂ ಬಯಸಿ ಬರಮಾಡಿಕೊಂಡು ಇಂದಿನ ವರೆಗೆ ನಮ್ಮ ಕುಲಗೌರವವನ್ನು ಕಾಯ್ದುಕೊಂಡು ಬಂದಿದ್ದೇವೆ. ಆದರೆ ನಮ್ಮ ಕುಲಕ್ಕೆ ಹೊರತಾಗಿ ನೀನು ಮಾತ್ರ ಒಬ್ಬನೇ ಗಂಡನನ್ನು ನಂಬಿ ಕೊಂಡು ಜನ್ಮಕಳೆಯಹೊರಟಿರುವೆ. ಇಂದಿನ ವರೆಗೆ ನಮ್ಮ ವಂಶದಲ್ಲಿ ಇಂಥ ಕುಲಕಲಂಕಿನಿಯೂ ವಂಶಘಾತಕಿಯೂ ಯಾರೂ ನಿನ್ನಂತೆ ಹುಟ್ಟಿರ ಲಿಲ್ಲ. ಸತಿಯೆಂದರೆ ನಮ್ಮ ಕುಲಕ್ಕೆ ಲಾಂಛನ.

ಇಲ್ಲಿ ಆ ಕುಲಟೆಯ ಮಾತನ್ನು ಕೇಳಿದಾಗ ಎಂಥ ಶೀಲವಂತರಿಗೂ ನಗೆಬಾರದೆ ಇರದು. ಮತ್ತು ಇಂಥ ಕೀಳುಕುಲದಲ್ಲಿ ಹುಟ್ಟಿದರೂ ಕುಲ ಬಂಧುಗಳೆಲ್ಲರೂ ಜೈಯುತ್ತಲಿದ್ದರೂ ಸಿಡಿದೆದ್ದು ವೇಶ್ಯಾವಾಟದ ವಿರುದ್ಧ ಹೋರಾಡಿ ಗರತಿಗಂಗೆ

(—೯೭ ನೇ ಪುಟಕ್ಕೆ ಮುಂದುವರಿದಿದೆ.)




ಆಧುನಿಕ ನಾಗರಿಕತೆಯ ಸೋಂಕಿಲ್ಲದೆ
ಸರಳ ಜೀವನ ಸಾಗಿಸುತ್ತಿರುವ
ಕಾಶ್ಮೀರದ ಸುಂದರಿಯರು

ಕಾಶ್ಮೀರದಲ್ಲಿ ಗುಲ್ಮಾರ್ಗದಿಂದ
ಖಿಲನ್ಮಾರ್ಗಕ್ಕೆ ಹೋಗುವ
ನಯನಮನೋಹರ
ಹಿಮಮಾರ್ಗದ ದೃಶ್ಯ



IDEAL
PHOTO ZINCO WORKS
HUBLI



ನಮ್ಮ ಎಲ್ಲ ಗ್ರಾಹಕರಿಗೂ,
ಹಿತಚಿಂತಕರಿಗೂ


ದೀಪಾವಳಿಯು
ಸುಖದಾಯಕವಾಗಲಿ!

★

ಐಡಿಯಲ್
ಫೋಟೋ ಝಿಂಕೋ ವರ್ಕ್ಸ
(ಸಂಯುಕ್ತ ಕರ್ನಾಟಕ ಆವಾರದಲ್ಲಿ)

ಹುಬ್ಬಳ್ಳಿ

ಆಯಿಲ್ ಎಂಜಿನ್ನುಗಳು



ನಮ್ಮಲ್ಲಿ

ವ್ಹಿಟೆ, ವ್ಯೂಜ, ಇಂಪೀರಿಯಲ್ ಕೇಲಿ, ರಸ್ಟನ್
ಬ್ಲಾಕಸ್ಟೋನ, ನ್ಯಾಶನಲ್, ಪಿಟ್ಟರ, ಯುನ್‌ಬಕ್,
ಸ್ಕೋಡಾ, ಎನ್‌ವೂರ, ನಾಗಾಸೆ

ಇತ್ಯಾದಿ ಆಯಿಲ್ ಎಂಜಿನ್ನುಗಳು ಹಾಗು ಅವುಗಳ ಬಿಡಿಭಾಗಗಳೂ
ಎಲ್ಲ ಹಾರ್ಸಪಾವರಗಳಲ್ಲಿ ದೊರೆಯುತ್ತವೆ. ಇವಲ್ಲದೇ
ಇನ್ನಿತರ ಕಂಪನಿಗಳ ಆಯಿಲ್ ಎಂಜಿನ್ನುಗಳು ನಮ್ಮಲ್ಲಿ ಲಭ್ಯ


ಪಾಟೀಲ ಮತ್ತು ಕಂಪನಿ

ಎಂಜಿನಿಯರರು, ಕಂಟ್ರಾಕ್ಟರರು ಮತ್ತು ಮಶಿನರೀ ಡೀಲರರು
೯೬ ಮುರಾರಜಿಪೇಟ . . ಸೊಲ್ಲಾಪೂರ

ನಮ್ಮ ಗ್ರಾಹಕರಿಗೆ ದೀಪಾವಳಿಯ ಅಭಿನಂದನೆಗಳು

ಕ್ಯಾಟರ ಪಿಲ್ಲರ ಮತ್ತು ಜಾನ್ ಡೀಅರ

ಟ್ರ್ಯಾಕ್ಟರುಗಳ ಒಡೆಯರಿಗೆ ದೀಪಾವಳಿಯ ನಮ್ಮ ಅಭಿನಂದನೆಗಳು



ಪ್ರಸಿದ್ಧ **ಜಾನ್ ಡೀಅರ** ಮತ್ತು **ಕ್ಯಾಟರ ಪಿಲ್ಲರ** ಟ್ರ್ಯಾಕ್ಟರಗಳ ಬಗ್ಗೆ
ನಮ್ಮೊಡನೆ ಸಂಪರ್ಕ ಬೆಳೆಸಿರಿ

ಸ್ಟಾಕಿಸ್ಟರು:

ಸಿದ್ದಪ್ಪ ಚನಬಸಪ್ಪ ಜಿಗಜಿನ್ನಿ

ಸ್ಟೇಶನ ರೋಡ · ಬಾಗಲಕೋಟ

ಇಂದಿನ ವ್ಯಕ್ತಿಯ ಮೇಲೆ ಧರ್ಮದ ಪ್ರಭಾವ

ಲೇಖಕ: ಪ್ರೊ. ಬಿ. ಎಚ್. ಶ್ರೀಧರ, ಎಂ. ಎ.

ಧರ್ಮವು ವ್ಯಕ್ತಿ ವ್ಯಕ್ತಿಸಮೂಹಗಳ ನಡುವಣ ತಾದಾತ್ಮ್ಯ ತಂತು, ವಿಶ್ವಾಸಸೇತು; ವ್ಯಕ್ತಾವ್ಯಕ್ತಗಳನ್ನು ಪೋಣಿಸುವ ಚಿತ್ಸೂತ್ರ, ಹೃನ್ನೇತ್ರ. ಕ್ರಾಂತಿಯು ವ್ಯಕ್ತಿಗಳ ಚಾರಿತ್ರ್ಯಶುದ್ಧಿಗೆ ಮಾರ್ಮಿಕವಾದ ಮದ್ದು. ಅದು ಧಾರ್ಮಿಕವಾದರೆ ಎಲ್ಲಕ್ಕಿಂತ ಹೆಚ್ಚು ಕಾಲ ಪರಿಣಾಮ ಕರವಾಗಿ ಉಳಿಯುವದು. ರಾಜಕೀಯ ಮತ್ತು ಶೈಕ್ಷಣಿಕ ಕ್ರಾಂತಿಗಳು ಭಾರತದಂಥ ಕುಧರ್ಮಪಂಕಲಗ್ನ ಬಹುಸಂಖ್ಯರಿರುವ ನಾಡಿನಲ್ಲಿ ಕೇವಲ ತಾತ್ಕಾಲಿಕಗಾಧಪರಿಣಾಮಕಾರಿಗಳಾದವಷ್ಟೆ. ಭಾರತದ ಧುರೀಣರಿಂದು ಹಳಿಯದಾದ "ಸಂಗಚ್ಛಧ್ವಂ, ಸಂವದಧ್ವಂ" ಎಂಬುದರ ಮುಂದಿನ "ಸಂವೋಮನಾಂಸಿ ಜಾನತ" ಎಂಬ ಸಂದೇಶವನ್ನು ಅರ್ಥಮಾಡಿಕೊಂಡು ಅರಗಿಸಿಕೊಳ್ಳಬೇಕಾಗಿದೆ.

ಜಗತ್ತಿನ ಎಲ್ಲ ಖಂಡಗಳಲ್ಲಿಂದು ಒಟ್ಟಿಗೆ ಸುಮಾರು ಇನ್ನೂರು ಕೋಟಿ ಜನಗಳಿರಬಹುದು. ಅವರ ಜೀವಿತಕ್ಕೆ ಭಿನ್ನ ಕಾಲಾವಧಿಯಲ್ಲಿಯ ಭಿನ್ನ ಭಿನ್ನ ಆನುವಂಶಿಕ, ಐತಿಹಾಸಿಕ, ಭೌಗೋಲಿಕ, ಸಾಮಾಜಿಕ, ಮಾನಸಿಕ ಮತ್ತು ಆರ್ಥಿಕ ಹಿನ್ನೆಲೆಯಿದೆ. ವರ್ತಮಾನಕಾಲ ಭೂತಕಾಲದ ಗರ್ಭದಿಂದ ಧುಮ್ಮಿಕ್ಕಿರುವುದರಿಂದ ವರ್ತಮಾನ ಜೀವಿಗಳಲ್ಲಿ ಹಳ-ಹೊಸ ಆಚಾರ-ವಿಚಾರ, ಭಾವ-ಭಾವನೆಗಳ ಸಂಮಿಶ್ರಣ ಭಿನ್ನ ಭಿನ್ನ ಪರಿಮಾಣ ಪ್ರಕಾರಗಳಲ್ಲಿರುವುದು ಸಹಜ. ಇಂಥ ಭೇದತರಂಗದಿಂದ ತುಂಬಿದ ಸಕಲ ಮಾನವರಲ್ಲಿ ಸರ್ವರಿಗೂ ಪ್ರತಿನಿಧಿಯಾಗಬಲ್ಲ ಒಬ್ಬ ಸರಾಸರಿ ಮನುಷ್ಯನನ್ನು ಕಲ್ಪಿಸುವುದು ಅಸಾಧ್ಯವೆಂದೇ ಹೇಳಬಹುದು.

ಆದರೆ ವಿಚಾರಚೈತನ್ಯವನ್ನು ಬೆನ್ನು ಹತ್ತುವ ಅಭ್ಯಾಸ ಹಿಡಿದವರಿಗೆ ಗಾಣಿತಿಕ ಅಥವಾ ತಾರ್ಕಿಕ ಮಾರ್ಗವೊಂದೇ ದಾರಿ. ಅದರ ದೇವರೆಂದರೆ ಅನುಮಾನ (Inference). ಪ್ರತ್ಯಕ್ಷದಿಂದ ದೂರವಾಗುತ್ತ ಹೋದಹಾಗೆ ಅನುಮಾನವು ಅನುಮಾನಾಸ್ಪದವಾಗುತ್ತ ನಡೆಯುತ್ತದೆ. ಅದುದರಿಂದಲೇ ಇಂದಿನ ಸರಾಸರಿ ಲೆಕ್ಕದ ಅಂಕೆಸಂಖ್ಯೆಗಳ ಸಂಗ್ರಹ ಎಷ್ಟೋ ವೇಳೆ ಹಾಸ್ಯಾಸ್ಪದವಾಗುವಷ್ಟು, ಪ್ರತ್ಯಕ್ಷ ಬಾಧಿತವಾಗಿರುವುದು ಆಗೀಗ ಕಂಡುಬರುತ್ತದೆ.

ಸುಮಾರು ಎಪ್ಪತ್ತರಷ್ಟಿರುವ ರಾಷ್ಟ್ರಗಳ ನಾಗರಿಕತೆಯ ಸ್ವರೂಪ, ಸ್ವಭಾವ, ಮಟ್ಟಗಳು ಬಹಳ ಭಿನ್ನವಾಗಿರುತ್ತವೆ. ಆ ಎಲ್ಲ ನಾಗರಿಕತಾ-ಪ್ರಭೇದಗಳನ್ನು ಒಟ್ಟಿಗೆ ಆಧುನಿಕ ನಾಗರಿಕತೆ ಎಂದು ಹೆಸರಿಸುವುದು ಕಲ್ಪನೆಗೆ ನುಂಗಲಾರದ ತುತ್ತು. ಜೊತೆಗೆ ಆಧುನಿಕತೆ ಎಂಬುದು ನಾಗರಿಕತೆಯ ವಿಶೇಷಣವಾಗಿರುವುದು ಕೇವಲ ನಿರ್ವಿಕಲ್ಪ ಕಾಲರೂಪದಲ್ಲೋ ಅಥವಾ ವೈಕಲ್ಪಿಕ ಸಂಸ್ಕೃತಿ ಬಾಹ್ಯಾಂಗದಲ್ಲೋ ಎಂಬ ಪ್ರಶ್ನೆಯೂ ಏಳುತ್ತದೆ. ಆದುದರಿಂದ ಕಾಲದೇಶೋಪಾಧಿಗತರಾದ ನಾವು ವಿಶಾಲ ವಿಶ್ವದ ಲಕ್ಷಣವನ್ನು ಹೇಳಹೋಗುವ ಅವ್ಯವಹಾರ್ಯವೂ ಅಪ್ರಯೋಜಕವೂ ಆದ ಗುರಿಯನ್ನು ಬಿಟ್ಟು ನಮ್ಮ ಅನುಭವಕ್ಕೆ ಗೋಚರವಾದ ಪ್ರಾದೇಶಿಕದ ಸಾಮಾನ್ಯ ಲಕ್ಷಣಗಳತ್ತ ಲಕ್ಷ್ಯ ಹಾಕುವುದು ಪ್ರಸ್ತುತವಾದೀತು.

ನಮ್ಮ ಸುತ್ತುಮುತ್ತಲಿನ ಇಂದಿನ ವ್ಯಕ್ತಿಗಳನ್ನು ಅತ್ಯಂತ ಸ್ಥೂಲಮಾನದಿಂದ ಮನೋಧರ್ಮಾನುಗುಣವಾಗಿ ಪಾಶ್ಚಾತ್ಯ, ಆಭಾಸಿಕ ಪಾಶ್ಚಾತ್ಯ, ಕುಪೌರಸ್ತ್ಯ ಎಂದು ಮೂರು ಬಗೆಗಳಾಗಿ ವಿಂಗಡಿಸಬಹುದು. ಶುದ್ಧ ಪಾಶ್ಚಾತ್ಯ ಅಥವಾ ಚಾರ್ವಾಕ ಸಿದ್ಧಾಂತಿಗಳ ಸಂಖ್ಯೆ ಭಾರತದಲ್ಲಿ ಅತ್ಯಲ್ಪ. ಆದರೆ ಅವರ ಕೂಗು ಕೆಲಮಟ್ಟಿಗೆ ಗಣ್ಯವಾಗಿದೆ. ಪಾಶ್ಚಾತ್ಯಬುದ್ಧಿ ಧರ್ಮಶತ್ರು. ನಮ್ಮಲ್ಲಿ ಪ್ರವೇಶಿಸಿದ ಆಂಗ್ಲವಿದ್ಯಾಭ್ಯಾಸ ಪದ್ಧತಿಯಿಂದ ರೂಪಿಸಲ್ಪಟ್ಟ ಕೆಲ ತಲೆಗಳು ಐತಿಹಾಸಿಕ, ಸಾಮಾಜಿಕ ಮತ್ತು ಅಂಧಶ್ರದ್ಧಾಜನ್ಯ ಕಾರಣಗಳ ಮೂಲಕ ವಿಜ್ಞಾನವೆಂಬ ಅನವಚ್ಛಿನ್ನ ಪದದ ಹೆಸರಿನಲ್ಲಿ ಧರ್ಮವನ್ನು ಸಾರ್ವಾಂಗಿಕವಾಗಿ ನಿಂದಿಸುವುದನ್ನೂ ತ್ಯಜಿಸುವದನ್ನೂ ಕಲಿತವು. ತದ್ಗತ ಬುದ್ಧಿಗೆಪಾಶ್ಚಾತ್ಯಬುದ್ಧಿ ಎಂದು ಅನುಕೂಲಕ್ಕಾಗಿ ಇಲ್ಲಿ ಕರೆಯಲಾಗಿದೆ. ಅದು ತೋರಿಕೆಗೆ ಧರ್ಮಾಚಾರಗತ ಅಂಧಶ್ರದ್ಧಾನಿವಾರಕವಾಗಿದ್ದರೂ ಮಾನವತ್ವದ ಮೂಲ ಸೆಲೆಯಾದ ಧರ್ಮಕ್ಕೆ ಕುಠಾರಪ್ರಾಯವಾಗಿದೆ. ಧರ್ಮವಿಲ್ಲದ ಮನುಷ್ಯ ಜಗತ್ತಿನಲ್ಲಿಲ್ಲ. ಆದುದರಿಂದ ಧರ್ಮಶತ್ರುವಾದ ಬುದ್ಧಿ ಎಂದರೆ ಸ್ವಾರ್ಥಧರ್ಮವುಳ್ಳ ಹಠಬುದ್ಧಿ ಎಂದಿಷ್ಟೇ ಅರ್ಥ! ಧರ್ಮವು ವ್ಯಕ್ತಿ ವ್ಯಕ್ತಿಸಮೂಹಗಳ ನಡುವಣ ತಾದಾತ್ಮ್ಯತಂತು, ವಿಶ್ವಾಸಸೇತು; ವ್ಯಕ್ತಾವ್ಯಕ್ತಗಳನ್ನು ಪೋಣಿಸುವ ಚಿತ್ಸೂತ್ರ, ಹೃನ್ನೇತ್ರ. ಆದುದರಿಂದ ಇಂಥ ಹೃನ್ನೇತ್ರವನ್ನು ಕಳೆದುಕೊಂಡ ಈ ಅಲ್ಪಸಂಖ್ಯರು ಭಾರತದ ಶೈಕ್ಷಣಿಕ, ಆರ್ಥಿಕ, ಉತ್ಪಾದಕ, ಔದ್ಯಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಅಭಾರತೀಯವೂ ಅಪ್ರಗತಿಪರವೂ ಆದ ಕಲ್ಪನೆಗಳನ್ನೂ ಕಾರ್ಯಯೋಜನೆಗಳನ್ನೂ ವಿಜ್ಞಾನದ ಹೆಸರಿನಲ್ಲಿ ಬಿತ್ತಿ ಬೀಸಿ, ಸಾಮಾನ್ಯರ ತಲೆಕೆಡಿಸಿ, ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಈ ವರ್ಗದ ಮೇಲೆ ಧರ್ಮದ ಪ್ರಭಾವ ಆಗಿಯೇ ಇಲ್ಲ. ಇದಕ್ಕೆ ಧರ್ಮದ ದೇವಮುಖವೂ ಇಲ್ಲ, ನೀತಿಮುಖವೂ ಶೂನ್ಯ. ನಗರವಾಸ, ಕೇವಲ ಪಾಶ್ಚಾತ್ಯ ವಿದ್ಯಾಭ್ಯಾಸ, ಸುಖಲೋಲುಪತೆ, ಆಂತರಿಕ ಅತೃಪ್ತಿ-ದ್ವೇಷಗಳು, ಅಹಂಕಾರ-ಕಠೋರ ಅಂಧಶ್ರದ್ಧೆಗಳು ಇಂಥ, ಅಲ್ಪಸಂಖ್ಯರ ಚಾರ್ವಾಕತೆಗೆ ಕಾರಣ. 'ನಾನು ಈಗ ಬದುಕಿಲ್ಲ' ಎಂದು ಬದುಕಿರುವ ಯಾವನೂ ಹೇಗೆ ಹೇಳಲಾರನೋ ಹಾಗೆಯೇ ನಾನು ನಾಸ್ತಿಕ ಅರ್ಥಾತ್ ಶ್ರದ್ಧಾಶತ್ರು ಎಂದು ಯಾವನೂ ಹೇಳಲಾರ. ಆದುದರಿಂದ ಈ ವರ್ಗದ್ದೂ ಒಂದು ಧರ್ಮವೇ; ಆದರದು ಕುಧರ್ಮ, ಅಷ್ಟೆ. ಇದರ ಅನುಯಾಯಿಗಳ ನೀತಿಪಾಲನೆ ಕೇವಲ ಭಯನಿಯಂತ್ರಿತ, ಭೌತಿಕ ಲಾಭಾಲಾಭನಿಬದ್ಧ, ಸದ್ಯಃಸ್ವಾರ್ಥಸಂಘಟಿತ, ದೂರದರ್ಶನರಹಿತ, ಆಭಾಸಿಕ ವಿಶ್ವಕುಟುಂಬಿತ್ವ ಲಕ್ಷಿತ. ಗಾಂಧೀಯ ಆರ್ಥಿಕ ಜೀವನಮಾರ್ಗವನ್ನು ವಿರೋಧಿಸಿ ಶಾಸನಬದ್ಧವಾಗಿ ಕಾರ್ಯರೂಪಕ್ಕೆ ಬರದಂತೆ ಮಾಡಿದ ಗಣ್ಯ ಧುರೀಣರನೇಕರು ಪೂರ್ವೋಕ್ತ ಮನೋಧರ್ಮವುಳ್ಳವರು. ಹೊರಗಿನ ನಾಟಕ ಏನಿದ್ದರೂ ಒಳಗಿನ ಹೂರಣ ಇಷ್ಟೇ. ನಿರ್ಲಜ್ಜತೆ, ಆತ್ಮಾಧಮಭಾವನೆ, ಶಾಠ್ಯ, ಸರ್ವಾಧಿಕಾರಿತ್ವ, ಪರಾಚಾರವ್ಯಾಮೋಹ ಇವನ್ನು ಇಂಥ ವ್ಯಕ್ತಿಗಳು ತಮ್ಮ ಮನೋವಾಕ್ಕಾಯ ಕರ್ಮಗಳಲ್ಲಿ ಪ್ರಕಟಿಸುತ್ತಾರೆ.

ಎರಡನೆಯ ವರ್ಗ ಆಭಾಸಿಕ ಪಾಶ್ಚಾತ್ಯರದು. ಈ ಬುದ್ಧಿ ಕೇವಲ ಕುಪೌರಸ್ತ್ಯತೆಗೆ ಹೇಸಿ ಹುಟ್ಟಿದ್ದು. ಮೊದಲ ವರ್ಗ ಭಾರತದಲ್ಲಿ ಕೇವಲ ನೂರಕ್ಕೆ ಐದರಷ್ಟಿರಬಹುದಾದರೆ, ಈ ವರ್ಗ ನೂರಕ್ಕೆ ಹತ್ತರಷ್ಟಿದೆ ಎಂದು ಅಂದಾಜು ಮಾಡ

ಬಹುದು. ಅಂಥ ವಿಚಾರದಾಸ್ಯದ ಆರಾಧನೆ ಮೊದಲಿನ ವರ್ಗದಂತೆ ಈ ವರ್ಗದಲ್ಲಿಲ್ಲ ಎಂಬು ದೇನೋ ನಿಜ. ಆದರೆ ಪ್ರವಾಹಪತಿತಚಿತ್ತ ವ್ಯಕ್ತಿತ್ವದ ದೆಸೆಯಿಂದ ಸಹವಾಸ-ಆವರಣಗಳ ಬಣ್ಣವನ್ನು ಈ ವರ್ಗದ ಬುದ್ಧಿ ತಳೆದು ಹೊರ ಬಾಳು ಸಾಗಿಸುತ್ತದೆ. ಇದರ ಹೃದಯ ಧರ್ಮ್ಯ ವಾಗಿದೆ. ಆದರೆ ಶಾತ್ರ್ಯಾಭಾವದ ಜೊತೆಗೆ ಸತ್ಯಾ-ಗ್ರಹಾಭಾವವೂ ಇರುವುದರಿಂದ ಈ ವರ್ಗದ ದರ್ಶನಶಕ್ತಿ ಭಾರತೀಯ ಸಮಾಜದ ಮೇಲೆ ಪರಿಣಾಮಕಾರಿಯಾಗದ್ದಾಗಿತ್ತು. ಇದರಿಂದಲೇ ನಾಳಿನ ಭಾರತ ಬೆಳಕು ಕಾಣಬೇಕಾಗಿದೆ, ನಾಳಿನ ಪೌರಸ್ತ್ಯ ಹುಟ್ಟಬೇಕಾಗಿದೆ. ಸುಧರ್ಮದ ಪ್ರಭಾವವನ್ನಷ್ಟೇ ಮನಗೂಡಿಸಿಕೊಂಡು ದುರ್ಧರ್ಮವನ್ನು ದೂರ ವಿಟ್ಟು ಪ್ರಾಮಾಣಿಕವಾಗಿ ರಾಷ್ಟ್ರದ ಅಭ್ಯುದಯದ ಕನಸನ್ನು ಕಾಣುತ್ತ ನಿತ್ಯಕರ್ಮತತ್ಪರರಾದ ಜನರು ಪ್ರಸ್ತುತ ವರ್ಗದಲ್ಲಿ ದೊರಕುತ್ತಾರೆ. ಕಲೆ ರಾಜಕೀಯಾದಿ ಕ್ಷೇತ್ರಗಳಲ್ಲಿ ಇವರಿರುವುದ ರಿಂದಲೇ ಭಾರತವು ಭಾರತವಾಗಿ ಉಳಿದಿದೆ. ಇವರ ಚೈತನ್ಯಶಕ್ತಿ ಘನೀಭೂತವಾಗಿ ಗಾಂಧೀಯ ಪಾಕಕ್ಕೆ, ರವೀಂದ್ರ ಮುಟ್ಟಕ್ಕೆ, ಸುಭಾಷಶೌರ್ಯಕ್ಕೆ ಬಂದು ಮುಟ್ಟದಾಗ ಭಾರತದ ಭವಿತವ್ಯ ಸುಸಂಬದ್ಧವಾಗುವುದು; ಯಾವ "ಇಜಂ" ಸ್ವೀಕರಿಸಿದರೂ ಅದಕ್ಕೆ ದಾಸಭಾವದಿಂದ ಅಡಿಯಾಳಾಗದೆ ಈಶಭಾವದಿಂದ ವರ್ತಿಸಿ ಭಾರತಧರ್ಮ ಅಥವಾ Indianismನ್ನು ರೂಪಿಸಿ ಸ್ವಪರ ಹಿತ ಸಾಧನೆಯ ಹಿತಮನೋಹರ ಜೀವನನೀತಿ ಪ್ರಾರಂಭಿಸಲ್ಪಡುತ್ತದೆ. ಈ ವರ್ಗದಲ್ಲಿ ದೇವ ಮುಖರು ನೀತಿಮುಖರು ಮತ್ತು ಉಭಯ ಮುಖರು ಸೇರಿದ್ದಾರೆ. ಯಾವ ಜಾತಿಯಲ್ಲಿದ್ದರೂ ಇವರ ದೃಷ್ಟಿ ಜಾತ್ಯತೀತ ಧರ್ಮಸಾರ ಬಲ್ಲ ಶ್ರದ್ಧಾವಂತಿಕೆಯುದು. ಧರ್ಮದ ಬಾಹ್ಯಾಡಂಬರ ಗಳನ್ನಿವರು ಮನ್ನಿಸರು, ಗಣಿಸರು, ಅನುಸರಿಸರು. ಭಾರತಧರ್ಮ ಇವರ ಮೇಲೆ ಅಂತರಿಕ ವಾಗಿ ಯಶಸ್ವಿಯಾದ ಪ್ರಭಾವವನ್ನು ಬೀರುತ ಬಂದಿದೆ. ಭಾರತ ಮಾನವೀಯತೆಯ ತಿರುಳರಿತೆ ಇವರ ನಡೆನುಡಿಗಳನ್ನು ಸಮಾಜ ಪೂಜ್ಯ ದೃಷ್ಟಿಯಿಂದ ನೋಡಬೇಕಾಗಿದೆ.

'An elite composed of individuals who find their ways into it solely for their individual pre-eminence, the differences of background will be so great that they will be united only by their common interests and separated by everything else. An elite must therefore be attached to some class, whether higher or lower; but so long as there are classes at all it is likely to be the dominant class that attracts this elite to itself.

—'ಕೇವಲ ಸ್ವೀಯೋದ್ಧಾರಕ್ಕಾಗಿ ಪ್ರವೇಶ ದೊರಕಿಸಿಕೊಂಡವರ ಗುಂಪು ಸಮಾಜದ ಉತ್ತಮಾಂಗ ವೆನಿಸುತ್ತದೆ. ವೈಯಕ್ತಿಕ ಸಮ್ಯಗ್ಜೀವನ ಸಿದ್ಧಿಗಾಗಿ ದುಡಿದು ಮುಂದೆ ಬಂದವರಾದುದರಿಂದ ಈ ಉತ್ತಮವಲಯದವರಲ್ಲಿ ಇಷ್ಟಸಾಮ್ಯವನ್ನುಳಿದರೆ ಮತ್ತಾವ ಐಕ್ಯಸೂತ್ರವೂ ಇಲ್ಲ. ಅವರ ಸಾಂಸ್ಕೃತಿಕ ಹಿನ್ನೆಲೆಯ ಭೇದ ಅಗಾಧ ವಾಗಿರುತ್ತದೆ. ಆದುದರಿಂದ ಅಂಥ ಉತ್ತಮಾಂಗವು ಯಾವುದಾದರೊಂದು ವರ್ಗಕ್ಕೆ ಸೇರಬೇಕಾಗುತ್ತದೆ—ಅಂಥ ವರ್ಗ ಮೇಲಿನದಿದ್ದರೂ ಸರಿ, ಕೆಳಗಿನದಿದ್ದರೂ ಸರಿಯೆ. ಆದರೆ ಅನೇಕ ವಾದ ಉಚ್ಚನೀಚ ವರ್ಗಗಳಿರುವ ಸಮಾಜದಲ್ಲಿ ಸಾಮಾನ್ಯವಾಗಿ ಉಚ್ಚವರ್ಗವು ಅಂಥ ಉತ್ತಮಾಂಗಕ್ಕೆ ಸೇರಿದವರನ್ನು ತನ್ನ ಕಡೆಗೆಳೆದುಕೊಂಬ ಸಂಭವ ಹೆಚ್ಚು' ಎಂಬ ಟೀ. ಎಸ್. ಈಲಿಯಟ್ಟನ ಸವರ್ಗಸಮಾಜವಿವೇಕದಲ್ಲಿಯ ಒಂದು ವಿಚಾರ ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸುತ್ತದೆ.

ಪೂರ್ವೋಕ್ತಪ್ರಚ್ಛನ್ನ ಪೌರಸ್ತ್ಯರು ತಮ್ಮ ಆಸ್ತಿಯ, ಜಾತಿಯ, ಉಪಪ್ರದೇಶದ, ರಾಜಕೀಯ "ಇಜಂ"ನ ಭಿನ್ನ ಆವರಣಗಳು ಒಡ್ಡುವ ಅಡ್ಡಿಗಳನ್ನು ಮೀರಿ, ದೇಶ-ಪ್ರದೇಶ ಹಿತಗಳ ಸಾಧನೆಗಾಗಿ ಒಂದಾಗಿ ಏಕವರ್ಗೀಯರಂತೆ ದುಡಿಯಲು ಮುಂದೆ ಬಂದರೆ ಮಾತ್ರ ಭಾರತದ ಭಾರತತ್ವ ಉಳಿಯುತ್ತದೆ. ಜಾತಿ ಮತ್ತು ರಾಜಕೀಯ ಪಕ್ಷನಿಷ್ಠೆಗಳ ದಾಸ್ಯದಿಂದ ಸಾರ್ವಜನಿಕ ಹಿತಕಾರ್ಯಗಳಲ್ಲಿ ಮುಕ್ತರಾಗಿ ನಿಲ್ಲುವ ಧೈರ್ಯ ಈ ವರ್ಗದಲ್ಲಿ ಉಂಟಾದರೇ ಉಂಟಾದೀತು, ಇಲ್ಲ ವಾದರೆ ಇನ್ನೆಲ್ಲೂ ಉಂಟಾಗಲಾರದು. ಕರ್ನಾಟಕ ಏಕೀಕರಣಕ್ಕಾಗಿ ಸರ್ವಾನುಮತವಿರುವಂತೆ ಇಂಥ ಸಮ್ಯಗ್ಜೀವಿಗಳು ಪ್ರಕಟ ಪೌರಸ್ತ್ಯರಾಗಲು ಕಾರ್ಯರಂಗಕ್ಕಿಳಿಯಬೇಕು. ಅಂಥ ಕಾಲವಿಂದು ಭಾರತೇತಿಹಾಸದ ದಿಗಂತದಲ್ಲಿ ಮೂಡಿಬಂದಿದೆ. ಧರ್ಮಕ್ಕಾಗಿ ಮಡಿಯಬೇಕೆಂದ ಶಿವಾಜಿತ್ವವೊಂದೇ ಈ ವರ್ಗದ ನಿಜವಾದ ಆತ್ಮೋನ್ನತಿ-ಸಾಧನ.

ನೂರಕ್ಕೆ ಎಂಭತ್ತೈದರಷ್ಟಿರುವ ಕುಪೌರಸ್ತ್ಯರಲ್ಲಿ ಅನಂತ ಭೇದಗಳಿವೆ. ಅಂಧಶ್ರದ್ಧೆ, ಆಲಸ್ಯ, ಕುಜ್ಞಾನ, ಕುಭಾರತೀಯತೆ, ಕಪಟಸಂನ್ಯಾಸಿತ್ವ ಅಲ್ಪ ಪಾಪಭೀರುತ್ವ, ಅಜ್ಞಾತ ಮನೋಭಾಗದಲ್ಲಿ ದೈವಶ್ರದ್ಧೆ, ಸ್ವಾರ್ಥತೆ, ಕ್ಷುದ್ರತೆ, ಸನಾತನ ಸಂಪ್ರದಾಯವಂತಿಕೆಯ ವಿರೂಪ, ನಾಟಕೀಯ ಆಧುನಿಕತೆ, ಜಾತೀಯಾಹಂಕಾರ, ಪರಜಾತಿದ್ವೇಷ, ಅನುಕೂಲಸಿಂಧು ನೀತಿಶಾಸ್ತ್ರೋಪದೇಶ, ಅಂಜುಬುರುಕತನ, ಆಡಂಬರ, ಧಾರ್ಮಿಕ ಪ್ರಚ್ಛಾದನದೊಳಗಿನ ಅಧಾರ್ಮಿಕತೆ ಮುಂತಾದ ಹಲವು ಗುಣರತ್ನಗಳು ಮೆರೆಯುತ್ತಿವೆ. ಹಳ್ಳಿ, ಪಟ್ಟಣ ಗಳಲ್ಲೂ ಶಿಕ್ಷಿತಾಶಿಕ್ಷಿತರಲ್ಲೂ ಎಲ್ಲೆಂದರಲ್ಲಿ ಇಂಥ

ವರ ಸಾಕ್ಷಾತ್ಕಾರವಾಗುತ್ತದೆ. ಧರ್ಮ ಪತಿತವಾಗಿ ಬೀರಿದ ಪ್ರಭಾವ ಇಂಥದು. ಜಗತ್ತಿನ ಯಾವ ಜನಾಂಗದಲ್ಲೇ ಆದರೂ ಇರುವುದೆರಡೇ: ಧರ್ಮ ಮತ್ತು ಅಧರ್ಮ. ಧರ್ಮಾಧರ್ಮಾತೀತತೆ ಶುಷ್ಕ ವಿಜ್ಞಾನಿಯ ಅವಾಸ್ತವಕಲ್ಪನಾವಿಲಾಸವಷ್ಟೇ. ಹಿಂದಿನ ನಾಗರಿಕತೆಗಳನ್ನು ಕಟ್ಟಿದ್ದು ಧರ್ಮ; ನಾಶ ಮಾಡಿದ್ದು ಅಧರ್ಮ. ಇಂದಿನ ನಾಗರಿಕತೆಗಳಲ್ಲಿ ಉಚ್ಛ್ರಾಯಹೊಂದುತ್ತಿರುವುವಿದ್ದರೆ ಅವು ಧರ್ಮದಿಂದ; ಅಧಃಪತನಹೊಂದುವವಿದ್ದರೆ ಅಧರ್ಮದಿಂದ. "ಧರ್ಮ"ಪದ ತ್ಯಾಗದಿಂದ ಧರ್ಮ ತ್ಯಾಗವಾಗದು. ಅದು ಶಬ್ದಮಾಡುವ ಮೋಸವಷ್ಟೇ. ನಾಗರಿಕರೆಂದುಕೊಂಬವರು ತಮ್ಮ ತತ್ವ ಸಂಶೋಧನದಲ್ಲಿ ಇದನ್ನು ಕಾಣಲಾರದವರಾದರೆ ಅವರಿನ್ನೂ ಜ್ಞಾನಸಾಧನೆಯ ಶೈಶವಾವಸ್ಥೆಯಲ್ಲಿದ್ದಾರೆ ಎನ್ನಬೇಕು. ಸಂಕುಚಿತಾರ್ಥದ ಧರ್ಮ ಧರ್ಮವೇ ಅಲ್ಲ; ಅದು ಅಲ್ಪ ಅಥವಾ ಬಹು ಜನರ ಅಪಕ್ವಬುದ್ಧಿ ಸಾರುವ ಅಧರ್ಮ ಅಥವಾ ಅಲ್ಪಧರ್ಮ. ಧರ್ಮವೆಂದರೆ ಒಂದು "Way of life" ಎಂಬರ್ಥದಲ್ಲಿಯೇ ನಮ್ಮಲ್ಲಿ "ದೇಶ ಧರ್ಮ" ಎಂಬ ಪದ ಬಳಕೆಗೆ ಬಂದಿದೆ.

ಜಾತೀಯತೆಯಿಂದ ಹುಟ್ಟಿದ ಅಸೂಯೆ, ಅಸಹಕಾರ, ದ್ವೇಷ, ಪಕ್ಷಪಾತ ಮುಂತಾದವುಗಳನ್ನು ನಿವಾರಿಸಲೆಂದು ನಮ್ಮ ರಾಜ್ಯಪುರುಷ ಲೌಕಿಕತೆಯ ವೇಷವನ್ನು ಧರಿಸಿದನು. ಶಿಕ್ಷಣವಂತೂ ಮೊದಲಿಂದಲೂ ಲೌಕಿಕವಾಗಿಯೇ ಸಾಗಿಬಂದಿದೆ. ಸಮಾಜಸುಧಾರಣೆಗಾಗಿ ಕಾಯದೆಗಳನ್ನೂ ರಚಿಸುತ್ತ ಬರಲಾಗಿದೆ. ಆದರೂ ಭಾರತದ ನೂರಕ್ಕೆ ಎಂಭತ್ತೈದರಷ್ಟು ಜನರ ಮನೋಧರ್ಮ ಸುಧಾರಿಸುತ್ತಿಲ್ಲ; ಅದಕ್ಕೆ ಹತ್ತಿದ ಅಧರ್ಮಕಲಂಕ ತೊಳೆದಿಲ್ಲ. ಏಕೆಂದರೆ ಮೊದಲು ಹೇಳಿದಂತೆ ನಮ್ಮ ಕೆಲ ಧುರೀಣರಲ್ಲಿ ಧರ್ಮಶತ್ರುಭಾವನೆ ಅಡಗಿದೆ. ಆದ್ದರಿಂದ ಅವರ ಶಾಸನವಾಣಿಗೆ ಭಾರತದ ಬಹುಸಂಖ್ಯರ ಹೃದಯ ಬಗ್ಗುತ್ತಿಲ್ಲ. ಯಾವ ದೇಶದಲ್ಲೂ ತೋರಿಕೆಗೆ ಕೂಡ ಧರ್ಮನಿರ್ಮೂಲನವಾಗಿಲ್ಲ. ಧರ್ಮದ ಬಗ್ಗೆ ಔದಾಸೀನ್ಯ ಕೆಲವೆಡೆ ಬೆಳೆದಿರಬಹುದು. ರಾಜಕೀಯ ನೇತೃಗಳಲ್ಲಿ, ನಗರಸ್ಥ ವಿದ್ಯಾವಂತಹಂಮನ್ಯರಲ್ಲಿ, ಸರಕಾರದ ಕಾಯದೆಯಲ್ಲಿ ಮತ್ತು ಸಾರ್ವಜನಿಕ ಉತ್ಪಾದನಕಾರ್ಯಗಳಲ್ಲಿ—ಅಲ್ಲೂ ಧರ್ಮದ ದೇವಮುಖತೆಯ ಬಗ್ಗೆ ಮಾತ್ರ; ನೀತಿಮುಖತೆಯ ಬಗ್ಗೆ ಅಲ್ಲ.

ಭಾರತದ ಬಹುಸಂಖ್ಯರು ಅನೇಕ ಶತಮಾನಗಳಿಂದ ಕುಪೌರಸ್ತ್ಯರಾಗುತ್ತ ಬಂದಿದ್ದರು. ಆಮೂಲಾಗ್ರ ಸ್ವಾತಂತ್ರ್ಯ ಕಳೆದುಕೊಂಡು ಬ್ರಿಟಿಶರಾಡಳಿತೆಗೊಳಪಟ್ಟದ್ದು ಅದರ ದೊಡ್ಡ ದುಷ್ಫಲ. ಆದರೆ ಭಾರತದ ಐಕ್ಯಭಂಗ, ಅಂತಃಕಲಹ, ಜಾತೀಯವಾದಗಳೆಲ್ಲವಕ್ಕೂ ಧರ್ಮಶರಣತೆಯೇ ಕಾರಣವೆಂದು (Sweeping Generalisation) ಸರ್ವಗ್ರಾಸಿ ಮಹಾವಾಕ್ಯವನ್ನಾಡಿ ಸುಧಾರಣೆಗೆ ಹೊರಟದ್ದುದರಿಂದ ಮೊದಲೇ ಅಧಃಪತನದ ದಾರಿ ಹಿಡಿದಿದ್ದ ಭಾರತಜನಾಂಗ ಮತ್ತಷ್ಟು ನೈತಿಕ ಅಧಃಪತನ ಹೊಂದಿತು. ಇತಿಹಾಸವನ್ನು ಒಂದು ರಬ್ಬರ್ ತುಂಡಿನಿಂದ ಅಳಿಸಿ ಒಗೆಯಲು ಸಾಧ್ಯವಾಗದೆಂಬ ಮಾತೀಗ ಪದೇ ಪದೇ ನೆನಪಿಗೆ ಬರುತ್ತಿದೆ. Nature and Nurture ನಿಸರ್ಗಸಂಸ್ಕಾರಗಳ ಬಲಾಬಲ ವಿಚಾರದಲ್ಲಿ ನಿಸರ್ಗನಿರ್ಮೂಲನವನ್ನು ಮನಃಶಾಸ್ತ್ರ ಸಿದ್ಧಾಂತಿಸಿಲ್ಲ. ಹೀಗಿರುವಾಗ ನಮ್ಮ ಹತ್ತಾರು ಸಾವಿರ ವರ್ಷಗಳ ನಾಗರಿಕತೆಗೆ ಶುದ್ಧ ಲೌಕಿಕತೆಯನ್ನು ವ್ಯವಹಾರದ ಪ್ರತ್ಯಂಗದಲ್ಲೂ ಕಸೆಕಟ್ಟಲು ಹೊರಟದ್ದು ಸ್ವಾತಂತ್ರ್ಯದ ಈ ಆರು ವರ್ಷಗಳಲ್ಲೂ ನಮ್ಮ ಜನ ನಿರುತ್ಸಾಹ, ನಿರಾಶೆ, ನಿರುದ್ಯೋಗಗಳಿಂದ ಬಳಲುತ್ತ ಉಳಿದಿರಲು ಕಾರಣ. "ಧರ್ಮ" ಪದದಿಂದ ಭಾರತೀಯ ಹೃದಯದ ಮೇಲೆ ಆಗುವ ಪರಿಣಾಮ ಇಂದಿಗೂ "ಕಾಯದೆ" ಎಂಬ ಪದದಿಂದ ಆಗಿಲ್ಲ. ಧರ್ಮಾತೀತತ್ವವೆಂಬೊಂದು ಕಾಲ್ಪನಿಕ ಮುಚ್ಚಿನಿಂದ ಕುಧಾರ್ಮಿಕತೆ ನಾಶವಾಗಲಾರದು. 'Religion' ಎಂಬ ಪದದಿಂದ ಹೊರಡುವ ಧರ್ಮದ ಅರ್ಥ ಸಂಕುಚಿತವಿರಬಹುದು. ಆದರೆ ಭಾರತದ ಆ 'Religion'ಗೂ ತತ್ವಶಾಸ್ತ್ರದ ಬೆಂಬಲವಿದೆ. ಇಂಥ ಸಂಬಂಧ ಬೇರೆಯ ಧರ್ಮಗಳಿಗಿಲ್ಲ. ಭಾರತದಲ್ಲಿ ಅಧಾರ್ಮಿಕತೆ ತೊಲಗಿ ಸುಧಾರ್ಮಿಕತೆ ಬೆಳೆದುಬಂದರೆ ಈ ಮೂರನೆಯ ವರ್ಗದ ಮನುಷ್ಯರಲ್ಲಿ ಹೃದಯಪರಿವರ್ತನೆಯಾದೀತಲ್ಲದೆ ಬರಿ ಅನುತ್ಪಾದಕ ಕಲಾನಿಧಾನವಾದ ಲೌಕಿಕ ಶಿಕ್ಷಣ, ಸಾಮಾಜಿಕ ಕಾಯದೆಗಳಿಂದಲ್ಲ.

ಅಧಾರ್ಮಿಕವೆನಿಸುವ ಹಲವಾರು (Superstitions, harmful practices) ಅಂಧ ವಿಶ್ವಾಸ, ಅಪಾಯಕರ ಆಚಾರಗಳು ಧರ್ಮದ ಹೆಸರಲ್ಲಿ ನಡೆಯುತ್ತಿದ್ದರೆ, ಅವುಗಳ ನಿವಾರಣೆಗೆ Finality ಆತ್ಯಂತಿಕತೆಯಿಲ್ಲದ ವಿಜ್ಞಾನ ಮದ್ದರೆಯಲು ಭಾರತದಲ್ಲಂತೂ ಎಂದೂ ಸಮರ್ಥವಾಗಲಾರದು. ಅದರಲ್ಲೂ ಪರದೇಶಗಳಲ್ಲಿ ಮಾಡಿದ ಪ್ರಯೋಗಗಳಿಂದ ಗಾಳಿ ಹಾರಿಸಿಕೊಂಡು ಬಂದ ಕೆಲ ದೇಹಶಾಸ್ತ್ರೀಯ ಮತ್ತು ಮಾನಸಶಾಸ್ತ್ರೀಯ ಕಲ್ಪನೆಗಳಿಂದ ಅಂಥ ಕಾರ್ಯ ಸಾಧ್ಯವೆಂದು ತಿಳಿಯುವುದು ಅಲ್ಪಜ್ಞತೆಯೇ ಸರಿ. Third class people—ತೃತೀಯ ವರ್ಗೀಯರ ಸುಧಾರಣೆಗೆ ದ್ವಿತೀಯ ವರ್ಗೀಯರಲ್ಲದೆ ಪ್ರಥಮವರ್ಗೀಯರು ಸಮರ್ಥರಾಗಲಾರರು.

ಒಂದುಕಡೆ ಆಧುನಿಕತೆಯ ಹೆಸರಿನಲ್ಲಿ ಶಿಕ್ಷಣ, ವ್ಯವಹಾರ, ಕಲೆಗಳ ಮೂಲಕ ಧರ್ಮಶ್ರದ್ಧೆ ಸಡಿಲುತ್ತಿದ್ದರೆ ಮೊದಲಿಂದ ಇದ್ದ ಅಧಾರ್ಮಿಕತೆ ಅಥವಾ ಕುಧಾರ್ಮಿಕತೆಯ ದೆಸೆಯಿಂದ ಬ್ರಾಹ್ಮಣ-ಬ್ರಾಹ್ಮಣೇತರ, ಶೈವ-ವೈಷ್ಣವ, ಸ್ತ್ರೀ-ಪುರುಷ ಮುಂತಾದ ದ್ವಂದ್ವಘರ್ಷಣಗಳು ಅತಿರೇಕವಾಗುತ್ತ ಹೋಗಿವೆ. ಹಾಗಾದರೆ ಹಿಂದುಸ್ತಾನದಲ್ಲಿಯ ನೂರಕ್ಕೆ ತೊಂಭತ್ತರಷ್ಟು ಜನರ ಮುಕ್ತಿಯ ಮಾರ್ಗವೆಲ್ಲಿದೆ? ನಿಜ ಸ್ವಾತಂತ್ರ್ಯಸಿದ್ಧಿ ಎಂತಾದೀತು? ಇಂದಿನ ವ್ಯಕ್ತಿ ಹಿಡಿದಿರುವ ಪ್ರಕಟ ತಾರಕತೆಯ ಮತ್ತು ಪ್ರಚ್ಛನ್ನ ಕುಧಾರ್ಮಿಕತೆಯ ಪರಿಹಾರವೆಲ್ಲಿದೆ?

ಸರಕಾರದ ಲೌಕಿಕತೆಗೆ ಸದಸದರ್ಥಗಳೆರಡೂ ಹುಟ್ಟಿವೆ. ಸರ್ವಧರ್ಮ ಸಮಾನಭಾವನೆಯೆಂಬ ಅರ್ಥದಲ್ಲಿ ಅದು ಸತ್. ಆದರೆ ಪೂರ ಸತ್ ಅಲ್ಲ. ಧರ್ಮಗಳ ಬಗ್ಗೆ ಅಲಕ್ಷ್ಯ, ಔದಾಸೀನ್ಯ ಎಂಬರ್ಥ ಹೊರಟರೆ ಅದರಿಂದ ಒಳ್ಳೆಯದಾಗದು. ವ್ಯವಹಾರದಲ್ಲಿ ನಮ್ಮ ಧುರಂಧರರು ತೋರುತ್ತಿರುವ ವೀರಾವೇಶದ ಪಾಶ್ಚಾತ್ಯತೆಗೆ ಧೈರ್ಯವಿದ್ದರೆ ಅದು ಹಿಂದು ಕಾಯದೆ ಕ್ರೋಢೀಕರಣದಂತಹ (ಹಿಂದೀಯರೆಲ್ಲರೂ ಒಂದೇ ಬಗೆಯ ಅನ್ನ ತಿನ್ನಬೇಕೆಂಬುದಕ್ಕೆ ಸದೃಶವಾದ) ಸುಧಾರಣೆಗೆ ಪ್ರಯತ್ನಿಸುವ ಮೊದಲು ಭಾರತದಲ್ಲಿಯ ಹಿಂದು, ಮುಸಲ್ಮಾನ, ಪಾರಸೀಕ, ಕ್ರೈಸ್ತ ಮುಂತಾದ ಎಲ್ಲ ಜಾತಿಗಳ ಮಠ, ಮಸೀದೆ, ಚರ್ಚು ಮುಂತಾದವುಗಳನ್ನು ಕೇವಲ Museums — ವಸ್ತುಸಂಗ್ರಹಾಲಯಗಳನ್ನಾಗಿ ಪರಿವರ್ತಿಸಲಿ. ಎಷ್ಟು ಜನ ಧುರೀಣರಿತ್ತ ಆಲೋಚನೆ ಮಾಡಿದ್ದಾರೆ? ಯಾರೀ ಅಭಿಪ್ರಾಯವನ್ನು ಆಡಲು ಎದೆ ತಂದುಕೊಂಡಿದ್ದಾರೆ? ಹಾಗೆ ಮಾಡಿದರೆ ಧರ್ಮಜವಾದ Worship—ಪೂಜಾವಿಧಾನದಿಂದ ಉಂಟಾಗಿರುವ ದೃಷ್ಟಿವಿಕಾರವನ್ನು ತೊಡೆದುಹಾಕಲು ಹಾದಿ ಸಿಕ್ಕೀತು. ಜನತೆಯಲ್ಲಿ ಉಪನಿಷತ್ತುಗಳಿಗೆ ಆಚಾರ್ಯತ್ರಯದ ಅಭಿಪ್ರಾಯಗಳನ್ನು ಲೆಕ್ಕಿಸದೆ ಸ್ವತಂತ್ರವಾಗಿ ಅರ್ಥ ಬರೆದ ರಾಜ್ಯಪಾಲರೂ ತತ್ವಜ್ಞಾನಿಗಳೂ ಆದ ರಂಗನಾಥ ರಾಮಚಂದ್ರ ದಿವಾಕರರಂತಹ ಸ್ವತಂತ್ರ ಸಾಧಕರಾದ ನೇತೃಗಳು ಧರ್ಮಕ್ಕೂ ಸಮಾಜಕ್ಕೂ ರಾಷ್ಟ್ರಕ್ಕೂ ಆಗ ಹೆಚ್ಚಾಗಿ ದೊರಕುವಂತಾಗಿ ದೇಶದಲ್ಲಿಯ ದುರ್ಮತಾಚಾರನಿಯಂತ್ರಿಕ ಜೀವನ ವ್ಯವಹಾರ ರಾಜಕೀಯ, ಸಾಮಾಜಿಕ, ಆರ್ಥಿಕ, ಅಧಿಕಾರಿಕ ಕ್ಷೇತ್ರಗಳಲ್ಲಿ ಕಡಿಮೆಯಾಗುತ್ತ ಹೋದೀತು. ತತ್ವಜ್ಞಾನಿರತ್ನರಾದ ಸರ್ವಪಲ್ಲಿ ರಾಧಾಕೃಷ್ಣನ್ನರಂಥವರಾಗ ಶಿಕ್ಷಣದ ಸುಧಾರಣೆಗೆ ಕೈಯಿಕ್ಕಿದರೆ ಭಾರತೀಯತೆ ಪುನಃ ಉಜ್ವಲವಾಗಿ ಪರದೇಶದ ರಾಜಕೀಯ "ಇಜಂ" ಮತ್ತು ಚಾರ್ವಾಕಲಾಭ — ಲುಬ್ಧತೆಗಳ ಬಡಿತದಿಂದ ಜನತೆಯಲ್ಲಿ ಬುದ್ಧಿಭೇದವುಂಟಾಗುತ್ತಿರುವದು ನಿಂತೀತು.

ಎರಡನೆಯದಾಗಿ, ಅಂಥ ಮೂಲಭೂತ ಕ್ರಾಂತಿಗೆ ಎದೆ ಮುಂದಾಗದಿದ್ದರೆ, ಭಾರತಸ್ಥ ಧಾರ್ಮಿಕ ಸಂಸ್ಥೆಗಳ ಎಲ್ಲ ಅಧಿಪತಿಗಳೂ ಸಂಮಿಳಿತರಾಗಿ ಯಾವುದಾದರೊಂದು ಶಾಸನಬದ್ಧ ನ್ಯಾಯನಿರ್ಣಾಯಕ ತತ್ವದ ಅನುಸಾರವಾಗಿ ಇಂತಿಷ್ಟು ತಿಂಗಳೊಳಗೆ ಭಾರತದ ೩೫ ಕೋಟಿಗೂ ಸಾಧಾರಣವಾದ ಬಾಹ್ಯಪೂಜಾ ವಿಧಾನವನ್ನೂ ಸಾಮಾಜಿಕ ನೀತಿಗಳನ್ನೂ ನಿರ್ಣಯಿಸಿ ಶಾಸನ ಸಮಿತಿಗೆ ಒಪ್ಪಿಸಬೇಕು. ಇಲ್ಲವಾದರೆ ಅವರಿಗೆ ಸ್ಥಾನಭ್ರಂಶ ಸಿದ್ಧ ಎಂಬ ಆದೇಶವನ್ನು ನಮ್ಮ ಸಂಸತ್ತು ಕೊಡಬೇಕು. ದೇಶಕ್ಕೊಂದು ಸ್ಥೂಲವಾದ ಒಮ್ಮತದ ಶ್ರದ್ಧಾರಾಧ್ಯ ಧ್ಯೇಯವೆದುರಿಲ್ಲದಾಗ ಈಗಿನಂತೆ ಸರ್ವ ಕ್ಷೇತ್ರದಲ್ಲೂ ನೈತಿಕ ಅಧೋಗತಿ ತಲೆದೋರುವುದು ಸ್ವಾಭಾವಿಕ; ಜನ

ಜೀವನದಲ್ಲಿ ಒಡಕು ತೊಡಕು, ಅಸಹಕಾರ ಅಸೂಯೆಗಳು ತಲೆಹಾಕುವುದು ಸಹಜ; ಕಾಯದೆಯಲ್ಲಾದ ಸುಧಾರಣೆ ಕಾರ್ಯಗತವಾಗದಿರುವುದು ನೈಸರ್ಗಿಕ.

ಲೌಕಿಕತೆ ದೇವರನ್ನು ಕಲಿತವರ ಮನದಿಂದ ಹೆಚ್ಚಾಗಿ, ಕಲಿಯದ ಮತ್ತು ಅರೆಗಲಿಕೆಯವರ ಮನದಿಂದ ಸ್ವಲ್ಪ ಕಡಿಮೆಯಾಗಿ ತೆಗೆದು ಹಾಕಲು ಯತ್ನಿಸಿ, ಅವನ ಬದಲು ಕಾಯದೆಯನ್ನು "ಕೋ" ಎಂದು ಕೃತಕೃತ್ಯವಾಗದಾಗಿದೆ. ಈ ವಿಸಂಗತ ಪರಿಸ್ಥಿತಿಯಲ್ಲಿ ಕೊನೆಯ ಪಕ್ಷ ಗಾಂಧಿಯವರಂತೆ ಗೀತೆ, ಬೈಬಲ್, ಕುರಾಣಗಳಲ್ಲಿಯ ತತ್ವಸಾಧಾರಣತೆಯನ್ನಾದರೂ ಸರಕಾರವೂ ಶಿಕ್ಷಣಾಲಯುಗಳೂ ಸಾರುತ್ತ ಬರಬೇಕು. ಆಯ್ದ ಸದೃಶತತ್ವಗಳ ಕೈಪಿಡಿ ಮೂವತ್ತೈದು ಕೋಟಿಯ ನಿತ್ಯ ಪಠನಕ್ಕೊದಗಬೇಕು; ಅವುಗಳ ಸಾರ್ವಜನಿಕ ಪಠನ—ಪಾಠನಗಳು ಸುನಿ-ರ್ದಿಷ್ಟ ವಾಚ್ಯಾರ್ಥನಿಯಂತ್ರಿತವಾಗಿ ಆಸೇತು ಹಿಮಾಚಲ ಪರ್ಯಂತ ನಡೆಯುವಂತೆ ಕೇಂದ್ರ ಸರಕಾರ (ಆಕಾಶವಾಣಿಗೆ ತೆಗೆದಿಡುವ ಹಣವನ್ನಾದರೂ ಬಳಿಸಿ) ವ್ಯವಸ್ಥೆ ಮಾಡಬೇಕು. Community Projects ಗಳಂತೆ Religious Improvement Campಗಳು ಉಪಪ್ರಾದೇಶಿಕ ಮಠಾಧೀಶರೆಲ್ಲರ ಸಂಘಟಿತ ಪ್ರಯತ್ನದಿಂದ ಅಲ್ಲಲ್ಲಿ ಸ್ಥಾಪಿಸಲ್ಪಡುವಂತೆ ಆದೇಶವೀಯುವುದು ವ್ಯಕ್ತಿಯ ಎಲ್ಲ ಖಾಸಗಿ ಜೀವನಕ್ಷೇತ್ರಗಳಲ್ಲೂ ಕಾಯದೆಯ ಕೈಯನ್ನು ಚಾಚುತ್ತ ಬಂದ ಸರಕಾರಕ್ಕೆ ಅಸಾಧ್ಯವಾದದ್ದಲ್ಲ. ಇಂಥ ಯಾವ ಪ್ರಯತ್ನವನ್ನೂ ಮಾಡದೆ ಕೇವಲ ಹೋದಲ್ಲಿ ಬಂದಲ್ಲಿ ಧರ್ಮನಿಂದೆ ಮಾಡುತ್ತಿರುವುದನ್ನು ನಮ್ಮ ಧುರೀಣರು ಮುಂಬರಿಸಿದರೆ ಇಂದಿನ ವ್ಯಕ್ತಿಯ Sense of insecurity ಅರಕ್ಷಿತತಾಭಾವ, Infidelity ಅಪ್ರಾಮಾಣಿಕತೆ, ಧ್ಯೇಯಾಭಾವ, ಅನಿಶ್ಚಯಾತ್ಮಕ ಬುದ್ಧಿ, ಕೇವಲಾದಿತ್ವ, ಕಾಪಟ್ಯ, ಭೀರುತ್ವಗಳು ಸಾಯುವವರೆಗೆ ಯೂನಿವರ್ಸಿಟಿ ಡಿಗ್ರಿ ಪರೀಕ್ಷೆಗಳಿಗೆ ಒಂದಾದಮೇಲೊಂದರಂತೆ ಕೂಡ್ರಿಸುತ್ತ ಹೋದರೂ ಅಳಿಯಲಾರವು.

ಶಾಸನರಚನೆಯ ಮೂಲಭೂತ ಆವಶ್ಯಕತೆ ಮತ್ತು ಫಲಕಾರಿತ್ವಗಳನ್ನಿಲ್ಲಿ ನೆನೆದುಕೊಳ್ಳಬೇಕು. ಬಹುಸಂಖ್ಯರಲ್ಲಿ ಶಾಸನಬದ್ಧ ವರ್ತನೆ ಪ್ರಾಮಾಣಿಕವಾಗಿ ಸಾಗುತ್ತಿದ್ದಾಗ ಮನೋರೋಗಿಗಳಿಗೆ ಸದೃಶರಾದ ಅಲ್ಪಸಂಖ್ಯರ ವರ್ತನೆಯ ನಿಯಂತ್ರಣಕ್ಕಾಗಿ ಶಾಸನ ರಚಿತವಾಗುತ್ತದೆಯಲ್ಲದೆ, "ಎಲ್ಲರೂ ಎಲ್ಲ ಕಾಲದಲ್ಲೂ ಎಲ್ಲ ಕಾರ್ಯಗಳಲ್ಲೂ ಅಪ್ರಾಮಾಣಿಕರು" ಎಂಬ ಪೂರ್ವಕಲ್ಪನೆಯಿಂದ ರಚಿತವಾಗಿಲ್ಲ; ಅಪ್ರಾಮಾಣಿಕತೆ ಸಾರ್ವತ್ರಿಕವಾದಾಗ ಬೇಲಿ ಎದ್ದು ಹೊಲ ಮೇಯುವುದು ಸ್ವತಃಸಿದ್ಧ. ಇಂಥ ಪರಿಸ್ಥಿತಿಯಲ್ಲಿ ಭಾರತವಿಂದು ಕಾಲಿಕ್ಕುತ್ತಿದೆ. ಇದು ಧರ್ಮ ವ್ಯಕ್ತಿಯ ಮೇಲೆ ಬೀರಿದ ಪ್ರಭಾವದಿಂದ ಉಂಟಾದುದಲ್ಲ; ನೇತೃಗಳ ಧರ್ಮದರ್ಶನ ರಾಹಿತ್ಯ, ಧರ್ಮನಿಂದೆ ಮತ್ತು (ಅಧಾರ್ಮಿಕ) ಆದರ್ಶಗಳ ಗಾಢತೆಗಳಿಂದ ಉಂಟಾದುದು. 'ಅಪ್ರಾಮಾಣಿಕತೆಯ ರೋಗಕ್ಕೆ ಶಾಸನ ಮದ್ದೆರೆಯಲಾರದು ಕೇವಲ ವ್ಯಾವಹಾರಿಕ ನೀತಿ ನಿಯಂತ್ರಣ ಮಾಡಿ' ಎಂಬುದನ್ನು ಕ್ರಾಂತಿ ನಡೆಸಿದ ದೇಶಗಳೆಲ್ಲ ಬಲ್ಲವು. ಕ್ರಾಂತಿಯು ವ್ಯಕ್ತಿಗಳ ಚಾರಿತ್ರಶುದ್ಧಿಗೆ ಮಾರ್ಮಿಕವಾದ ಮದ್ದು. ಅದು ಧಾರ್ಮಿಕವಾದರೆ ಎಲ್ಲಕ್ಕಿಂತ ಹೆಚ್ಚು ಕಾಲ ಪರಿಣಾಮಕರವಾಗಿ ಉಳಿಯುವುದು. ರಾಜಕೀಯ ಮತ್ತು ಶೈಕ್ಷಣಿಕ ಕ್ರಾಂತಿಗಳು ಭಾರತದಂಥ ಕುಧರ್ಮಪಂಕಲಗ್ನ ಬಹುಸಂಖ್ಯರಿರುವ ನಾಡಿನಲ್ಲಿ ಕೇವಲ ತಾತ್ಕಾಲಿಕ ಗಾಢಪರಿಣಾಮಕಾರಿಗಳಾದವಷ್ಟೇ.

ಧರ್ಮನಿರಪೇಕ್ಷತೆ ಮತ್ತು ಧಾರ್ಮಿಕತೆಗಳ ಹೆಸರಿನಲ್ಲಿಂದು ಅಧರ್ಮವು ವ್ಯಕ್ತಿ ಮತ್ತು ವ್ಯಕ್ತಿ ಸಮೂಹಗಳ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿದೆ. ಅದೇ ಜಾತೀಯತೆ, ದುರ್ಬಲ ಶೋಷಣ, ಅನುದಾರತೆ, ಅಸಹಕಾರ, ಆಲಸ್ಯ, ಸ್ವಾರ್ಥಸಾಧನೆಗಳಿಗೆ ಕಾರಣವಾಗಿದೆ; ಶಾಸನ ನಿಷ್ಠೆಯ ಶಿಥಿಲತೆಗೆ ಹೇತುವಾಗಿದೆ. ನಮ್ಮ ಸಂವಿಧಾನ ನಮಗಿಂದು ವೇದವಾಗಿಲ್ಲ; ಹಾಗಾಗಬೇಕಾದ್ದು ನಮಗೆ ಆವಶ್ಯಕ. ನಮ್ಮಲ್ಲಿಯ ಬಹುಸಂಖ್ಯರಿಗೆ ಪೌರುಷೇಯವಾದುದರಲ್ಲಿ ನಂಬಿಗೆ ಇಡುವುದು ಗೊತ್ತಿಲ್ಲ. ಅದನ್ನು ಕಲಿಸುವುದು ದುಃಸಾಧ್ಯ. ಸಾಕ್ಷರತೆ ಅದನ್ನು ಸಾಧಿಸದು. ವಿದ್ಯಾವಂತಿಕೆ ಇಂದು ಅಪೌರುಷೇಯ-ಪೌರುಷೇಯವೆರಡರಲ್ಲೂ ನಂಬಿಗೆ ಕಡಿಮೆಮಾಡಿದೆ. ಅದರಿಂದ ಸ್ವಾರ್ಥಸಾಧನೆ, ಪರಸ್ಪರ ಅವಿಶ್ವಾಸ ಹೆಚ್ಚಿದೆ. ಮನಸ್ಸು ಮಾನಸಿಕ-ದೈಹಿಕ (ಭೌತಿಕ) ಪ್ರಭಾವಗಳಿಗೆ ವಶವಾಗತಕ್ಕದ್ದು. ಭಾರತದ ಭಿನ್ನ ನಿಸರ್ಗಾವರಣ ಬುದ್ಧಿದ್ರವಣಕಾರಿ. ಶ್ರದ್ಧಾವಜ್ರಬಂಧವಲ್ಲದೆ ಇನ್ನಾವುದೂ ನಮ್ಮ ಜನಕ್ಕೆ ಸ್ಥೈರ್ಯವೀಯಲಾರದು. ಶ್ರದ್ಧೆಯಳಿದರೆ ಅಶ್ರದ್ಧೆ (=ಕುಶ್ರದ್ಧೆ) ನಮ್ಮ ಬಹುಸಂಖ್ಯರಲ್ಲಿ ಬೇರೂರುತ್ತದೆ. ಅದರಿಂದಲೇ ಈಗ ಧನ-ಅಧಿಕಾರಶ್ರದ್ಧೆಯಿಂದ ಬಹುಜನರು ಹೀನತೆಗಿಳಿದಿದ್ದಾರೆ, ದೇಶೋಪಕಾರಕ ಕಾರ್ಯಕ್ಕೆ ಮುಂದಾಗದಾಗಿದ್ದಾರೆ; ಮುಂದಾದಲ್ಲಿ ಚೆನ್ನಾಗಿ ಸ್ವಾರ್ಥಸಾಧನೆ ಮಾಡುತ್ತಾರೆ. ಯಾವ ಸಾರ್ವಜನಿಕ ಸಂಸ್ಥೆ ಇಂದು ಮೋಸವಿಲ್ಲದೆ ನಡೆಯುತ್ತಿದೆ? ಮೋಸದ ಪ್ರಮಾಣ ಪ್ರಕಾರಗಳು ಭಿನ್ನವಾಗಿರಬಹುದು, ಅಷ್ಟೇ. "The science which I learnt in my youth assured me that all the wonders I saw, the thoughts which I thought, were the products of a turmoil of energy matter working to no purpose and conforming to no plan. But the answer it gave me was nonsense. ನಾ ಕಂಡ ಅದ್ಭುತಗಳೂ ನನ್ನ ವಿಚಾರಗಳೆಲ್ಲವೂ ನಿರುದ್ದಿಷ್ಟವೂ ನಿರ್ಯೋಜನಾಪರವೂ ಆದ ಶಕ್ತಿ ಮೂರ್ತದ್ರವ್ಯಗಳ ಕ್ಷೋಭೆ ಎಂದು ನಾನು ತಾರುಣ್ಯದಲ್ಲಿ ಕಲಿತ ವಿಜ್ಞಾನ ನನಗೆ ಆಶ್ವಾಸನವಿತ್ತಿತು. ಆದರೆ ಅದು ಇತ್ತ ಉತ್ತರ ಅರ್ಥವಿಲ್ಲದ್ದು" ಎಂದು ಪ್ರಸಿದ್ಧ ವಿಚಾರ ವಿಜ್ಞಾನಿ ಕೆನೆಥ್ ವಾಕರ್ ಸಾರಿರುವುದು ನಮ್ಮ ಕಣ್ಣನ್ನು ತೆರೆಯಿಸಬೇಕಾಗಿದೆ. ಆದುದರಿಂದ ನಿಜ ಧರ್ಮದ ಪ್ರಭಾವದ ಅಭಾವದಿಂದ ನಮ್ಮಲ್ಲಿ ನೂರಕ್ಕೆ ತೊಂಭತ್ತು ಜನರು ಅಧೀರ ಪ್ರಕೃತಿಗಳಾಗಿ ಚಿಕ್ಕದೊಡ್ಡ ಅನೈತಿಕ ವರ್ತನೆಗಳಿಗಿಳಿದಿದ್ದಾರೆ ಎಂಬುದು ಸಿದ್ಧ.

"Father, hear the prayer we offer,
Not for ease that prayer shall be,
But for strength that we may ever
Live our lives courageously—

ತಂದೆ, ನಮ್ಮ ಪ್ರಾರ್ಥನೆಯನ್ನು ಕೇಳು: ಸುಖಕ್ಕಾಗಿ ನಾವು ಪ್ರಾರ್ಥನೆ ಮಾಡುತ್ತಿಲ್ಲ, ಆದರೆ ನಾವು ಯಾವಾಗಲೂ ಧೀರರಾಗಿ ಬಾಳಲೆಂದು ಪ್ರಾರ್ಥಿಸುತ್ತೇವೆ" ಎಂಬ ಸದ್ಬುದ್ಧಿಯೊಂದೇ ಕುಧರ್ಮಪ್ರಭಾವಜನ್ಯವಾದ ಇಂದಿನ ವ್ಯಕ್ತಿಯ ಚಾರಿತ್ರ್ಯವನ್ನು ಉದ್ಧರಿಸಬಲ್ಲುದು. ಆತನಿಗೆ ತನ್ನ ಮತ್ತು ದೇಶದ ಕಾರ್ಯದಲ್ಲಿ ಧೈರ್ಯ, ಸ್ಥೈರ್ಯ, ಉತ್ಸಾಹಗಳನ್ನು ಕೊಡಬಲ್ಲುದು—ಹಳ್ಳಿಗರ ಮೋರೆಯನ್ನು ಕಂಡರಂತೂ ಇದನ್ನು ಸುಳ್ಳೆಂಬ ಮನೋವಿಜ್ಞಾನಿ ದೊರಕಲಾರನು. ಆದುದರಿಂದ ಭಾರತ ಧುರೀಣರಿಂದು ಹಳೆಯದಾದ "ಸಂಗಚ್ಛಧ್ವಂ, ಸಂವದಧ್ವಂ" ಎಂಬುದರ ಮುಂದಿನ "ಸಂವೋ ಮನಾಂಸಿ ಜಾನತ" ಎಂಬ ಸಂದೇಶವನ್ನು ಪುನಃ ಅರ್ಥ ಮಾಡಿಕೊಂಡು ಅರಗಿಸಿಕೊಳ್ಳಬೇಕಾಗಿದೆ.


ಬುಶ್ ಕೋಟು

—ಎನ್ಕೆ

ಪಾತ್ರಗಳು :

ಶ್ಯಾಮಣ್ಣ

ರಮಾ (ಅವನ ಹೆಂಡತಿ)



(ಶ್ಯಾಮಣ್ಣ ತನ್ನ ಕೋಣೆಯಲ್ಲಿ ನಿಲುವುಗನ್ನಡಿ ಎದುರಿಗೆ ತನ್ನ ಹೊಸ ಬುಶ್‌ಕೋಟ ಹಾಕಿಕೊಂಡು ನೋಡಿಕೊಳ್ಳುತ್ತಿದ್ದಾನೆ.)

ಶ್ಯಾಮಣ್ಣ :— ಹುಂ! ಏನು ಬುಶ್‌ಕೋಟು ಹೊಲದಿಟ್ಟಾನಿವಾ ಅಂತೀನಿ... ಎಂಥಾ ಕಿಮ್ಮತ್ತಿನ ಅರಿವಿ ಕೆಡಿಸಿ ಹಾಳಮಾಡಿಬಿಟ್ಟಾನ.... ನನ್ನ ಲಾಯಿಫಿನೊಳಗ ನನ್ನ ಮನಸಿನತಕ್ಕ ಒಮ್ಮೆನೂ ಅರಿವಿ ಹೊಲದು ಕೊಟ್ಟಿಲ್ಲ ನನಗ ಯಾರೂ.... ಈ ಮಾರಾಯಾ ನನ್ನ 'ಬಾಡಿ'ನ ಹಾಂಗದ ಅಂತಾನ..... ಹೊಟ್ಟಿ ತಕ್ಕ ಎದಿ ಇಲ್ಲಂತ, ಎದಿ ತಕ್ಕ ಹೊಟ್ಟಿ ಇಲ್ಲಂತ... ಎಲೆ ಇವನ! ಹೊಟ್ಟಿ ಇದ್ದಷ್ಟು ಹೊಟ್ಟಿ ಅಳತಿ ಇಡಬೇಕು, ಎದಿ ಇದ್ದಷ್ಟು ಎದಿ ಅಳತಿ ಇಡಬೇಕು.... ಬಾಡಿ ಪ್ರೊಪೋರ್ಶನೇಟ ಇಲ್ಲಾಂತ ನನಗ ಏನು ಹೇಳತಾನ.... ಆ ಬ್ರಹ್ಮನ ಮುಂದೆ ಹೋಗಿ ಹೇಳ್ಳಿ ಈ ಕಂಪ್ಲೇಂಟು! ಬಾಡಿ ಪ್ರೊಪೋರ್ಶನೇಟ ಇಲ್ಲಂತ!.... ನಿನ್ನ ಬುದ್ಧಿ, ನಿನ್ನ ಕೈ ಪ್ರೊಪೋರ್ಶನೇಟ ಇದ್ದಿರಲಿಕ್ಕಿಲ್ಲ!.... ಅಲ್ಲ ಮತ್ತ!... ಹಿಂದಕೊಮ್ಮೆ ಕೋಟಿಗೆ ಕಿಸೆ ಎಡಗಡೆ ಹಚ್ಚೂ ಬದ್ಲಿ ಬಲಗಡೆ ಹಚ್ಚಿದಾ! ಹೀಂಗ್ಯಾಕೊ ಅಂದರ 'ಇಸ್ತ್ರಿ ಮಾಡಿಸಿರಿ ಒಮ್ಮೆ, ಅದೆಲ್ಲ ತಾನ ಸರಿಹೋಗತದ' ಅಂತಾನ! ಇಸ್ತ್ರಿ ಮಾಡಿಸಿದರ ಎಡಕ ಇದ್ದ ಕಿಸೆ ಬಲಗಡೆ ಬರತದೇನೊ ಅಂದರ.... ಇಲ್ರಿ ಬಲಗಡೆ ಕಿಸೆ ಇಡೋದು ಹೊಸಾ ಹೋಲಿವುಡ್ ಫ್ಯಾಶನ್ನು ಅಂತಾನ.... ತಾ ನೋಡಿದರ ಕೊಂಪ್ಯಾಗ ಕೂತಗೊಂಡು, ನನಗ ಹಾಲಿವುಡ್ ಫ್ಯಾಶನ್ ಹೇಳ್ಳಿಕ್ಕ ಬರತಾನ.... ಅಲ್ಲಾ ತನಗ ನೋಡಿದರ ಬುಶ್‌ಕೋಟ ಅಂದರೇನು ಬುಶ್‌ಶರ್ಟ ಅಂದರೇನು ಇದರ ಡಿಫರನ್ಸ ಗೊತ್ತಿಲ್ಲಾ. ಲಂಡ ತೋಳಿದ್ದರೇನೊ ಬುಶ್‌ಶರ್ಟ ಅಂತ, ಉದ್ದ ತೋಳಿದ್ದರೇನೊ ಬುಶ್ ಕೋಟ ಅಂತ!....ಅಲ್ಲಾ ಎದಿ ಸಡಿಲ ಇಟ್ಟಾನ, ಹೊಟ್ಟಿ ಜಿಗಿ ಇಟ್ಟಾನ, ಸ್ಲೀವ್ಸ್ ಅತಿ ಸಡಿಲ ಅವ. ಕಫ್ಸ ಅತಿ ಟಾಯಿಟ್ ಇಟ್ಟಾನ...... ನಾಯೇನು ಗರಡೀಮನಿ ಪೈಲವಾನ ಅಂತ ತಿಳದಾನೊ ಏನೊ... ಅಲ್ಲಾ ನನ್ನ ಕುತಿಗಿ ಸ್ವಲ್ಪ ಸೀರ ಅದ. ಅಂದ ಮ್ಯಾಲೆ ಕಾಲರಿನ ಕಿವಿ ಮ್ಯಾಲೆ ಮಾಡಿಕೊಂಡರ ನೆಟ್ಟಗ ತುಂಬಿಧಾಂಗ ಕಾಣಸ್ತದ, ಅಂತ ಹೇಳೀನಿ ಅಂಥಾದ್ದು ಓಪನ್ ಕಾಲರ ಮಾಡಿಟ್ಟಾನ! ಹೌದು, 'ಶಾ'ನ ಕಾಲದವ ಇವಾ, ಶೆಕ್ಸಪಿಯರ ಕಾಲರ ಹಳೇದನಿಸಿರಬೇಕು. ಕಿಸೆ ಸಾದಾ ಹಚ್ಚೊ ಅಂದರ ಅಷ್ಟಪೈಲ ನಮೂನಿ ಹಚ್ಚಿ ಇಟ್ಟಾನ, ಓಬಿರಾಯನ ಕಾಲದ ಮನಶ್ಯಾ ತಾನು. ಹೀಂಗ್ಯಾಕೊ ಅಂದರ ಅದಕ್ಕೂ ಒಂದು ಅಪ್‌ಟು ಡೇಟ ಫ್ಯಾಶನದ ಯಾವುದಾದರೂ ಒಂದು ಹೆಸರು ಹೇಳ್ತಾನಿನ್ನ; ಕೀನಿಯಾದಾಗೊ, ಕೋರಿಯಾದಾಗೊ ಹೊನೊಲುಲುದಾಗೊ ಇದೇ ಇವೊತ್ತಿನ ಫ್ಯಾಶನ್ ಅಂತ....ಅಲ್ಲಾ ಯಾವ ದೇಶದಾಗ ಹ್ಯಾಂಗಿದ್ದ ಫ್ಯಾಶನ ತಗೊಂಡ ನಮಗೇನ ಮಾಡೋದದ. ನಮಗ ಹ್ಯಾಂಗ ಛಂದ ಕಾಣಸತದೊ ಹಾಂಗ ಹೊಲಿಸಿಗೋತಿವಿ.... ಎಲ್ಲಾ ಈ ಫ್ಯಾಶನ್‌ದ ಹಾಡೂ ಒಂದೇ ಥರಾ! ಮೊದಲ ಬಗಲಕಸಿ ಅಂಗಿದ್ದವು. ಅವು ಹೋಗಿ ಡಬಲ್‌ಬ್ರೆಸ್ಟ ಕೋಟ ಬಂದವು. ಮೊದಲ ಉದ್ದನ್ನ ಫಾರ್ಸಿ ಕೋಟು ಫ್ಯಾಶನೆಬಲ್ ಆಗಿದ್ದವು. ಆಮೇಲೆ ಶಾರ್ಟಕೋಟ ಬಂದವು. ಅವ ಮತ್ತ ಲಾಂಗಕೋಟ ಆದವು. ಕಟ್‌ಪಾಕೆಟ್ ಹೋಗಿ ಪ್ಯಾಚ್‌ಪಾಕೆಟ್ ಬಂದುವು; ಆ ಮ್ಯಾಲ ಮತ್ತ ಮ್ಯಾಲಿನ ನಾಲಗಿ ಇಲ್ಲದ ಕಟ್‌ಪಾಕೆಟ್ ಬಂದುವು. ಅಂತೂ ಅದಕ್ಕ ಹೇಳೋದು ದಿ ಹಿಸ್ಟರಿ ಆಫ್ ಫ್ಯಾಶನ್ಸ್ ರಿಪೀಟ್ಸ ಇಟ್ಸೆಲ್ಫ ಆ್ಯಂಡ್ ಸೇಸ ದಿ ಅರ್ಥ ಈಜ ರೌಂಡ ಅಂತ. ಸದ್ಯಾ ಈಗ ಇದು ನನಗ ಹ್ಯಾಂಗ ಕಾಣಸ್ತದ ಅಂಬೂದು ನನಗ ತಿಳೀವಲ್ಲದಲ್ಲ? ಒಳ್ಳೇದು ನಮ್ಮವರ್ನ ಕೇಳೋಣು.

(ರಮಾ ನಡುಮನೆಯಲ್ಲಿ ಅದೇ ಹೊಸತಾಗಿ ಹೊಲಿದು ಬಂದ ತನ ಝುಂಪರ ಪರೀಕ್ಷಿಸುತ್ತಿದ್ದಾಳೆ.)

ರಮಾ :— ಅಲ್ಲಾ ಟೊಂಕದ ತೆಳಗ ಬರ್ಲಿ ಅಂತ ಹೇಳಿ ಕಳಿಸಿದರು ಮತ್ತೂ ಈಕೆ ಟೊಂಕದ ಮ್ಯಾಲೆ ಹೊಲದ ಇಟ್ಟಾಳ. ಕೇಳಿದರ ಮತ್ತ ಅದ ಪ್ಯಾಶನ್ನು ಅಂತಾಳ. ಏನು ಪ್ಯಾಶನ್ನೊ ಏನೊ. ಈಗ ಸುಧಾರಿಸಿದವರು ಸುದ್ಧಾ ಇಳಕಲ್ಲ ಖಣದ ಕುಬಸಾ ಹೊಲಿಸಿಗೋಳಿಕ್ಕೆ ಹತ್ಯಾರ. ನಮ್ಮವ್ವ ಇಳಕಲ್ಲ ಖಣದ ಕುಬಸಾ ತೊಟ್ಟರ ನಾನ ಖೊಳ್ಳಂತ

ನಕ್ಕಿದ್ದೆ. ಅಂಥಾದೀಗ ಇಳಕಲ್ಲ ಖಣದ ಕುಬಸಾ ಹಾಕತಾರ, ಅದ ಖಣದ್ದ ಫರ್ಸ್ಟ ಹೊಲಸ್ತಾರ. ಏನೀಪ್ಯಾಶನ್ನೊ ಏನೊ! ನಮ್ಮ ಅವ್ವ ಉದ್ದ ಕುಂಕುಮಾ ಹಚ್ಚಬೇಕಾದರ ನನಗ ನಗೀ ಬರತಿತ್ತು. 'ನೀನೂ ಉದ್ದ ಕುಂಕುಮಾ ಹಚ್ಚು' ಅಂತ ನನಗ ಚಾಲುವರಿತರೂ ನನಗ ಹಚ್ಚಲಿಕ್ಕೆ ನಾಚಿಗಿ ಅನಿಸತಿತ್ತು. ಈಗೇನು ಉದ್ದ ಕುಂಕಮಾ, ನಾಗರ ಹಾವಿನ ಕುಂಕಮಾ, ಸ್ವಸ್ತಿಕಕುಂಕಮಾ— ಹೋಗಲಿನಿನ, ಕುಂಕಮದಾಗ ನಾನಾ ಥರದ ಸ್ಟೆನ್ಸಿಲ್ ಬ್ಯಾರೆ ತಯಾರಾಗ್ಯಾವ— ಮದಿವಿ ಆದವರು ಕಚ್ಚಿ ಹಾಕದಿದ್ದರ ಅವಲಕ್ಷಣಾ ಅಂತಿದ್ದರು, ಅಭದ್ರತನಾ ಅಂತಿದ್ದರು. ಈಗ ತುಟ್ಟಿ ದಿನದಾಗ ಗೋಲು ಉಟ್ಟರ ಸೋವಿ ಅನಿಸಿತು. ಅದ ಒಂದು ಪ್ಯಾಶನ್ ಆಗಿಬಿಟ್ಟಿತು. ಸೋವಿದರೊಳಗ ಶ್ಯಾಣ್ಯಾತನಾ ಅದ, ಶ್ಯಾಣ್ಯಾತನದಾಗ ಫ್ಯಾಶನ್ ಅದ.... ಮೊದಲ ಮನ್ಯಾಗ ಕೌದಿ ಹೊರೋದು ಅಂದರ ದರಿದ್ರತನದ ಲಕ್ಷಣಾ ಅಂತಿದ್ದರು. ಈಗ ನಾನಾ ತರಹದ ನಾನಾಬಣ್ಣದ ಅರಿವಿಕೂಡಿಸಿ ಕೌದಿ ಹೊಲದಇಟ್ಟರ ಸಾಹೇಬರು ಬಂದರ ಟೇಬಲ್‌ಕ್ಲಾತಲೂ, ಕರ್ಟನ್ ಊ, ಮಾಡಿಹಾಕತಾರ ಅದ ಒಂದು ಫ್ಯಾಶನ್ನು!.... ಹಾಂಗ ಟೊಂಕದ ತೆಳಗ ಝುಂಪರು ಹೊಲಿಸೋದ ಒಂದು ಫ್ಯಾಶನ್ ಆತು. ಆಮ್ಯಾಲೆ ಕುಬಸ ಅಸ್ಸೆಯರ್ ಅಂತ ಮೂಗು ಮುರಿಲಿಕ್ಕೆ ಹತ್ತಿದರು. ಟೊಂಕದ ತೆಳಗೆ ಹೊಲಿಸಿದರ ದೀಡವಾರ ಅರಿವಿ ಬೇಕಾತು. ಅದಕ್ಕಂತ ಹೇಳಿ ಟೊಂಕದ ಮ್ಯಾಲ ಅಡರಲಿಕ್ಕೆಹತ್ತಿ ಮತ್ತು ಕುಬಸದ ಆಕಾರಕ್ಕ ಬಂದಿಳದವ್ರ ಝುಂಪರು. ಅಂತೂ ಯಾವ ಕಾಲಕ್ಕ ಯಾವ ಪ್ಯಾಶನ್ನು ಚಾಲತಿಯೊಳಗ ಇರತದ ಅಂಬೋದನ್ನು ತಿಳಕೊಂಬೂದೆ ಕಠಿಣ ಆತು. ಫ್ಯಾಶನ್ ಸಲುವಾಗೇ ಒಂದು ಪತ್ರಿಕಾ ಹೊರಟರ ಒಳ್ಳೇದ ಮತ್ತ.... ಅಲ್ಲಾ ಧಡಧಡೀತ ದೀಡವಾರ ಅರಿವಿ ಕೊಡಸೀದರೂ ಮತ್ತೂ ಈಕಿ ಟೊಂಕದ ಮ್ಯಾಲೆ ಹೊಲದು ಇಟ್ಟಾಳ. ಮತ್ತ ಇದ ಫ್ಯಾಶನ್ನು ಅಂತ ಕಲಿಸಲಿಕ್ಕೆ ಬಂದಾಳ. ಅರ್ಧಾವಾರ ಅರಿಬಿ ತನ್ನ ಕಿಸೇಕ ಹೋಗಬೇಕಾದರ ಹೊಸಾ ಫ್ಯಾಶನ್ನು ಬರಲಿಕ್ಕೇ ಬೇಕಲ್ಲ. ಇವರ ಫ್ಯಾಶನ್ನು ಅಂದರ ಇನ್ನೊಬ್ಬರ ಕಿಸೇಕತ್ತರಿಸೂ ಕೆಲಸಾನ. ಸದ್ಯಾ ಇದನ್ನು ಯಾರಿಗೆ ಹಾಕಿಕೊಂಡು ತೋರಿಸಲಿ? ಯಾರಿಗೇನು ಇದ್ದಾರಲ್ಲ ಇವರ. ಖೋಲ್ಯಾಗ ಇದ್ದಾರೇನೊ ನೋಡಿಬರತೀನಿ. ಹೆಂಡಂದರು ಮಾಡೋ ಛಂದಾಚಾರಾ ಎಲ್ಲಾ ಗಂಡಂದರ ಸಲುವಾಗಿ ಅಲ್ಲ....

ಶ್ಯಾಮು :— ಹುಂ! ನಿನ್ನಕಡೆ ಅಂತ ನಾಬಂದರ ನೀ ಹೊರಗ ಹೊರಟೇನು?

ರಮಾ :— ಹೊರಗ ಯಾರು ಹೋಗತಾರ? ನಿಮ್ಮಕಡೇನ ಹೊರಟದ್ದೆ.

ಶ್ಯಾಮು :— ನಾನು ನಿನ್ನ ಕಡೇನ ಹೊರಟದ್ದೆ.

ರಮಾ :— ಯಾಕ?

ಶ್ಯಾಮು :— ನೀ ಯಾಕ ಹೊರಟದ್ದಿ?

ರಮಾ :— ನೀವು ಯಾಕ ಹೊರಟದ್ದಿರಿ!

ಶ್ಯಾಮು :— ನೀ ಯಾಕ ಹೊರಟದ್ದಿ ಹೇಳು.

ರಮಾ :— ನೀವು ಯಾಕ ಹೊರಟದ್ದಿರಿ ಹೇಳ್ರಿ.

ಶ್ಯಾಮು :— ಯಾಕ ಅಂದರ ಈ ಬುಶ್‌ಕೋಟು ನನಗ ಹ್ಯಾಂಗ ಕಾಣಸ್ತದ ಹೇಳು.

ರಮಾ :— ಈ ಬ್ಲೋವ್ಸ್ ನನಗ ಹ್ಯಾಂಗ ಕಾಣಿಸ್ತದ ಹೇಳ್ರಿ.

ಶ್ಯಾಮು :— ನಿನಗ ಹ್ಯಾಂಗ ಕಾಣಸ್ತದ ಹೇಳಬೇಕಾದರ ನೀ ಹಕ್ಕೋ. ಬೇಕಾತಲ್ಲ.

ರಮಾ :— ಮತ್ತ ನಿಮ್ಮ ಕೋಟು ನೀವು ಹಕ್ಕೊಳದ ನಾ ಹೇಳಬೇಕೇನು?

ಶಾಮು :— ಅರಿವಿ ಹ್ಯಾಂಗ ಅದ ಮೊದಲ ಹೇಳು.

ರಮಾ :— ಹೂಂ! ಅರಿವಿ ಹ್ಯಾಂಗ ಅದ! ಎಂಥಾ ಛಲೋ ಎರಡು ಬ್ಲೌಸ್ ಆಗತಿದ್ವು ನನಗೆ ಅದರಾಗ. ಕಡೀಕೆ ಒಂದಾರೆ ಆಗೋ ಅಷ್ಟು ಅರಿವಿ ಕೊಡ್ರಿ ಅಂದರ ಕೊಡಲಿಲ್ಲಾ. ಅರಿವಿ ಹ್ಯಾಂಗದ ಅಂತ!

ಶ್ಯಾಮು :— ಅಂತೂ ನಳದಮಯಂತಿ ಹಾಂಗ ಆದರ್ಶ ದಂಪತಿಗಳು ತೋರಿಸಲಿಕ್ಕೆ ನಿನಗೂ ಇದೇ ಥರದ ಅರಿವಿ ಕೊಡಿಸತೀನಿ ಅತ...,.

ಇನ್ನ ಅರ್ಧಾಂಗಿ ಅಂತ ಇದರಾಗ ಒಂದು ತೋಳು ನೀ ಕತ್ತರಿಸಿಗೊಂಡರ ಫಜೀತಿ ಅದೆ....

ರಮಾ :— ಆದರ ಇದೇನ ಫ್ಯಾಶನ್ನಿದು, ಹೆಂಗಸರ ಬ್ಲೌಜಿನ ಅರಿವಿ ಎಲ್ಲಾ ನೀವು ಕೋಟು ಹೊಲಸಿಗೋಳಿಕ್ಕೆ ಹತ್ತಿದರ ಅಸ್ಸೆಯರ್?

ಶ್ಯಾಮು :— ಇದಕ್ಕ ಬುಶ್‌ಕೋಟು ಅಂತಾರ, ಬುಶ್‌ಕೋಟು ಅಂತ.

ರಮಾ :— ಸಾಕು ಮುದಮುದಕರ ಆದಾಥಾಂಗೆಲ್ಲಾ ಒಂದೊಂದ ಸುರುವಾಗತಾದ ನಿಮ್ಮವೂ ಪ್ಯಾಶನ್ನು.

ಶ್ಯಾಮು :— ಪ್ಯಾಶನ್ನೊ ಫ್ಯಾಶನ್ನೊ? ಹ್ಯಾಂಗ ಕಾಣಸ್ತದ ನೋಡ್ಯಾರ ನೋಡಿದು.... ಹಕ್ಕೊಂಡು ತೋರಿಸ್ತೀನಿ ತಡಿ.....

ರಮಾ :— (ನಕ್ಕು) ಅಯ್ಯ ಸುಡ್ಲಿ, ಒಡ್ಡರ ಹಾಂಗ ಇದೇನಿದು ಬರೇ ಮೈಮ್ಯಾಲ ಕೋಟು ಹಕ್ಕೋತೀರೆಲ್ಲಾ.

ಶ್ಯಾಮು :— ಅದಕ್ಕ ಹೇಳೋದು ಈ ಫ್ಯಾಶನ್ ಬಹಾಳ ಇಕೊನಾಮಿಕಲ್ ಅದ ಅಂತ, ಬಹಾಳ ಸೋವಿದರಾಗ ಆಗತದಿದು. ಕೋಟು ಶರ್ಟು, ಒಂದರಾಗ.

ರಮಾ :— (ನಕ್ಕು) ಇನ್ನೊಂದು ಸ್ವಲ್ಪ ಉದ್ದ ಇರಿಸಿದ್ದರ ಪ್ಯಾಂಟೂ ಇದರಾಗ ಆಗತಿತ್ತೇನೊ..... ಹ-ಹ-ಹ! ಹಿಂದಕ ನಮ್ಮಜ್ಜ ಒಂದು ಫಾರ್ಸಿ ಕೋಟು ಹೊಲಿಸಿಬಿಟ್ಟದ್ದಾ. ಒಳಗ ಶರ್ಟು ಹಾಕತಿದ್ದೆ ಇಲ್ಲ ಅನಾ.... ಅದ ನೆನಪಾತು ನನಗ.... ಅಲ್ಲಾ. ಅದರಕ್ಕಿಂತಾ ಥಣ್ಣಗ ಮೈಮೇಲ ಒಂದು ಶಾಲು ಹೊತುಗೊಂಡಬಿಡಬೇಕು. ಸಾಧು ಜನರು ಅಂತಾರೆ ತಿಳಕೋತಾರ ಜನಾ.

ಶ್ಯಾಮು :— ಹುಂ! ಫ್ಯಾಶನ್ ಅಂದರೇನು ಗೊತ್ತಿದ್ದರ ಚಿಂತಿಲ್ಲಾ. ಬರೇ ಗಂಜೀಫ್ರಾಕಿನ ಮ್ಯಾಲೆ ಇದನ್ನ ಹಾಕ್ಕೊಳ್ಳೋದು..... ನೋಡು ಹ್ಯಾಂಗ ಕಾಣಸ್ತದ?

ರಮಾ :— (ಜೋರಾಗಿ ನಕ್ಕು) ಸಾಕು ತಗೀರಿ ನಾವೊಲ್ಲೆ. ಥೇಟ ಹುಚ್ಚರ ಹಾಂಗ ಕಾಣಸ್ತೀರಿ.... ಛಂದ ಕಂಡರ ಮಾಡಬೇಕು ಫ್ಯಾಶನ್ನು... ಅದೆಲ್ಲಾ ಬಿಟ್ಟು ಹುಚ್ಚರ ಹಾಂಗ ಅಸ್ಸೆಯರ್ ಸುರೀತಿದ್ದರೂ ಮಾಡೂದೇನದು ಫ್ಯಾಶನ್ನು.

ಶ್ಯಾಮು :— ನಿನ್ನ ಈ ಬೀಟಿಂಗ ಅಬೌಟ ದಿ ಬುಶ್‌ಕೋಟ ಎಲ್ಲಾ ತಿಳೀತು ನನಗ. ಇನ್ನಾದರೂ ಇದರ ಬ್ಲೌಸ್ ಮಾಡಿಸಿಕೋಬೇಕು ಅಂತ ಹೌದಲ್ಲೊ, ನಿನ್ನ ಟ್ರಿಕ್ ಇದೆಲ್ಲಾ?

ರಮಾ :— ಖರೇ ಹೇಳ್ಲ್ಯಾ?.... ನೀವು ಜರಕರ್ತಾ ಈ ಬುಶ್‌ಕೋಟು ಹಕ್ಕೊಂಡ ನನ್ನ ಕನ್ಯಾ ಪರೀಕ್ಷಾಕ್ಕ ಬಂದಿದ್ದರ ನಾಯೇನು ನಿಮಗ 'ಹೂಂ' ಅಂತಿದ್ದಿಲ್ಲಾ.

ಶ್ಯಾಮು :— ಹೀಂಗೇನು? ಹಾಂಗಾರ ಇಂಥಾ ಬುಶ್‌ಕೋಟೊಂದು ಆವಾಗ ಸಿಕ್ಕಿದ್ದರ ಎಂತಹಾ ಪುಣ್ಯವಂತ ಆಗತಿದ್ದೆ ನಾನು. ಹೋಗ್ಲಿ ಇನ್ನೇನ್ನ ಮಾಡೋದು, ನಿನ್ನ ಬ್ಲೋವ್ಸ್ ಹಕ್ಕೊ ನೋಡೋಣು.

ರಮಾ :— ನಾಯೇನದನ್ನ ಹಕ್ಕೊಂಬಾಕಿ ಅಲ್ಲಾ. ಸುಡ್ಲಿ ಟೊಂಕದ ಮ್ಯಾಲೆ ಅಡರತದ. ಕಡೀಕೆ ಅಂಥಾದ ಅರಿವಿ ತಕ್ಕೊಂಡು ಪತಿ ಹಚ್ಚಿ ಉದ್ದ ಮಾಡಿಕೊಂಡು ಹಾಕ್ಕೋತೀನಿ. ಇಲ್ಲಾ ನಮ್ಮ ತಂಗಿಗೆ ಕೊಟುಬಿಡತೀನಿ.

ಶ್ಯಾಮು :— ಹೂಂ. ಎಷ್ಟು ಸುಲಭ ಹೇಳತಾಳ ನೋಡು. ತಂಗಿಗೆ ಕೊಡತೀನಿ ಅಂತ. ಅದs ಸ್ವತಃ ಫುಳಿಸಿ ತಂದಿದ್ದರ ಹೇಳತಿದ್ದೆ ಅದರ ವ್ಯಥಾ.

ರಮಾ :— ಆದರ ವ್ಯಥಾ ಪಟ್ಟಕೋತ ಫ್ಯಾಶನ್ನು ಅಂತ, ಹಕ್ಕೊಂಬೂದರಾಗ ಏನು ಸಂಭ್ರಮ ಅದ ಹೇಳ್ಳ್ಯಾರೆ.

ಶ್ಯಾಮಣ್ಣ :— ಈಗ ನನಗ ಬುಶ್‌ಕೋಟು ಛಂದ ಕಾಣೂದುಲ್ಲಾ ಅಂದೆಲ್ಲಾ, ಯಾಕ ಕಾಂಬೂದುಲ್ಲಾ ಹೇಳು. ನಾ ಛಂದಿಲ್ಲೊ ಏನು ಬುಶ್‌ಕೋಟು ಛಂದಿಲ್ಲೊ?...ನಿನ್ನ ಕಣ್ಣಾರೆ ಬರಾಬರಿ ಅವ ಇಲ್ಲೊ ಮತ್ತ.

ರಮಾ :— ಯಾಕೊ ಏನೊ. ಸೂಟು-ನೆಕ್‌ಟಾಯಿ ಹಾಕ್ಕೊಂಡರ ಹ್ಯಾಂಗ ಛಂದ ಕಾಣಸ್ತೀರಿ ಹಾಂಗ ಇದನ್ನ ಹಾಕ್ಕೊಂಡರ ಛಂದ ಕಾಣಿಸೋ. ದುಲ್ಲಾ ಅಂದೆ.

ಶ್ಯಾಮಣ್ಣ :— ಅಂತೂ ಸೂಟು ಹಾಕ್ಕೊಂಡರಾರೆ ಛಂದ ಕಾಣಸ್ತೀನಿ ಅಂತ ಒಪ್ಪಿಕೊಂಡಿ.

ರಮಾ :— ಹಾಂಗ ಕೇಳೀದರ ಸ್ವಚ್ಛ, ಧೋತರಾ ಟೊಪ್ಪಿಗೀನ ಛಂದ ಕಾಣಸ್ತಾವ ನಿಮುಗ. ಇತ್ತಿತ್ತಲಾಗ ಈ ಸೂಟು ಬೂಟು ಸುರುವಾಗೇದ ನಿಮ್ಮದು, ಈ ಹೊಸಾ ನೌಕರಿ ಜೋಡಿ.

ಶ್ಯಾಮಣ್ಣ :— ಅಂತೂ ಅಂಗಿ ಟೊಪ್ಪಿಗಿ ಹಾಕ್ಕೊಂಡರಾರೆ ಛಂದ ಕಾಣಸ್ತೀನಿ ಅನ್ನು.

ರಮಾ :— ಅದೂ ವಿಚಾರ ಮಾಡೂ ಅಂಥಾ ಪ್ರಶ್ನೀನ ಅದ ಅನ್ರಿ… ಆದರೂ ಇಂಥಾ ಬುಶ್‌ಕೋಟಿಲ್ಲಾ, ಸ್ಯಾಂಡೋ ಇದ್ದಾಂಗ ಇರತಾರಲ್ಲಾ ಅವರಿಗೆ ನೆಟ್ಟಗ ಕಾಣತಾವ. ಬೆದರಿನ್ಹಾಂಗ ಇರುವವರಿಗೆ ಇವೇನು ಛಂದಲ್ಲಾ…ಅಲ್ಲಾ, ಧೋತರಾ ಅಂಗಿ ಹಕ್ಕೊಂಡು ಹೋದರ ಸಿಪಾಯರು ನಿಮುಗ ಸಾಹೇಬರು ಅನಲಿಕ್ಕಿಲ್ಲಾ ಅಂತ ನಿಮುಗ ಅನುಮಾನ ಏನು?

ಶ್ಯಾಮಣ್ಣ :— ಸೂರಿ! ಅಂತೂ ನಿನ್ನ ಕಣ್ಣಾಗ ನಾನು ಛಂದ ಕಾಣೋದಿಲ್ಲಾ ಅನ್ನು. ತಿಳೀತು ನಿನ್ನ ಗೂಢಾರ್ಥ.

ರಮಾ :— ಹ್ಯಾಂಗ ಕಂಡರೇನದ ನನ್ನ ಕೈಹಿಡಿದವರೇನರ ಸುಳ್ಳೇನು ನೀವು?

ಶ್ಯಾಮಣ್ಣ :— ಸರಿ ಹಾಂಗಾರ. ಇವೊತ್ತು ನೀ ಈ ಹೊಸಾ ಬ್ಲೌಜ್ ಹಾಕಿಕೊ, ನಾ ಈ ಹೊಸಾ ಬುಶ್‌ಕೋಟ ಹಕ್ಕೋತೀನಿ.

ರಮಾ :— ಹಕ್ಕೊಂಡು? ಮನ್ಯಾಗ ಕೂಡಬೇಕಂದಿರ್‍ಯಾ?

ಶ್ಯಾಮು :— ಊಹೂಂ! ಪಾಣಿಗ್ರಹಣ ಮಾಡಿಕೊಂಡು—

ರಮಾ :— ಅಂ?

ಶ್ಯಾಮು :— ಅಂದರ ಹ್ಯಾಂಡ್ ಇನ್ ಹ್ಯಾಂಡ ಇಬ್ಬರೂ ಕೂಡಿ ವಾಕಿಂಗಿಗೆ ಹೋಗತಕ್ಕದ್ದು. ಭೆಟ್ಟಿ ಆದವರ ಮುಂದೆಲ್ಲಾ ನನಗ ಈ ಬುಶ್‌ಕೋಟು ಬಹಳ ಒಪ್ಪತದ ಅಂತs ನೀ ಹೇಳಬೇಕು . . . . ತಿಳೀತಿಲ್ಲೊ.

ರಮಾ :— ಅಂತೂ ಒಂದು ದಿವಸಾರೆ ಅಡ್ಡಾಡಲಿಕ್ಕೆ ಕರಕೊಂಡು ಹೋಗತೀರಿ ಸಾಕು. ಜರೂರ ಅಂತೀನಿ . . . . ಆತಿಲ್ಲೊ, ಈ ಬುಶ್‌ಕೋಟು ನಿಮುಗ ಒಪ್ಪತದ.

ಶ್ಯಾಮು :— ಈ ಬ್ಲೌಜು ನಿನಗ ಒಪ್ಪತದ ಅತ?

ರಮಾ :— ನಾ ಎಲ್ಲಿ ಕೇಳೀನೀಗ ನಿಮ್ಮ ಅಭಿಪ್ರಾಯ?

ಶ್ಯಾಮು :— ಛಲೋ ಅಭಿಪ್ರಾಯ ಕೊಟ್ಟರೂ ನಿನ್ನ ಆಕ್ಷೇಪೇನು?

ರಮಾ :— ನೀವು ಅಭಿಪ್ರಾಯಕೊಡೂದಕ್ಕ ಯಾರು ಬ್ಯಾಡ ಅಂತಾರ, ಆದರ ನಾ ಕೇಳಿಲ್ಲಾ ಅಂತ ಹೇಳಿದೆ, ನಿಮ್ಮಹಾಂಗ. ಎಲ್ಲಿ ನಿಮ್ಮ ಬುಶ್‌ಕೋಟಿನ ಅರಿವಿ ಛಂದ ಅದನೊ ನನ್ನ ಝುಂಪರಿನ ಅರಿವಿ ಛಂದ ಅದನೊ ನೋಡೂಣು ತರ್‍ರಿಲ್ಲೆ.

ಶ್ಯಾಮು :— ಎಲ! ಇದೇನಿದು? ನಿನ್ನ ಝುಂಪರಿಗೂ ಶೆಕ್ಸಪಿಯರ ಕಾಲರ ಇಟ್ಟಾರಲ್ಲ?

ರಮಾ :— ನೋಡ್ರಿ ನಾನೂ ಅದs ಅಂತೀನಿ. ಹಾಂಗ ನೋಡಿದರ ನಿಮ್ಮ ಬುಶ್‌ಕೋಟಿನ ಅರಿವಿ ಝುಂಪರಿನ ಅರಿವಿ ಇದ್ದಾಂಗ ಅದ, ಮ್ಯಾಲೆ ಹೂ ಹೂ ಆಗಿ. ನನ್ನ ಝುಂಪರ ನಿಮ್ಮ ಶರ್ಟಿನ ಥರಾ ಆಗೇದ ಕಾಲರ ಗೀಲರ ಹಚ್ಚಿ . . . . ಹಡಗಾ ನಡಸವರು ಹಾಕಿರತಾರಲ್ಲ ಮತ್ತ ಟೊಂಕದ ಮ್ಯಾಲೆ, ಸೇಲರ ಸೂಟಂತ?

ಶ್ಯಾಮು :— ಓಹೋ ಸ್ಪ್ಲೆಂಡಿಡ್ ಐಡಿಯಾ! ಹಾಂಗಾರ ಹೀಂಗ ಮಾಡೂಣು - ನನ್ನ ಬೂಶ್‌ಕೋಟು ನೀ ಹಾಕಿಬಿಡೂ—ನಿನ್ನ ಝುಂಪರ ನಾ ಹಾಕಿಬಿಡತೀನಿ. ದಿನಕ್ಕದಿನಾ ಫ್ಯಾಶನ್ ಚೇಂಜ ಆಗೋ ಈ ಬದಲತೀ ದುನಿಯಾದೊಳಗ ಇವೊತ್ತೇ ನ್ಯೂಫೌಂಡಲಂಡದೊಳಗ ಇಂಟ್ರೊಡ್ಯೂಸ್ ಆದ ಹೊಸಾ ಫ್ಯಾಶನ್ ಇದು ಅಂತ ಹೇಳೋಣಂತ.

ರಮಾ :— (ನಕ್ಕು) ಅಂತೂ ನೋಡ್ರಿ ನಿಮ್ಮ ಬುಶ್‌ಕೋಟಿನ ಅರಿವಿ ನನ್ನ ಬ್ಲೋಜಿಗೆ ನೆಟ್ಟಗದ ಅಂತ ಹೇಳಿದ್ನ್ಯೋ ಇಲ್ಲೊ.

ಶ್ಯಾಮು :— ತಿಳೀತು ಅಂದೆ, ನಿನ್ನ ಬೀಟಂಗ ಅಬೌಟ ದಿ ಬುಶ್‌ಕೋಟ ತಿಳೀತು.... ಒಳ್ಳೇದು ಪ್ರಿಯೆ, ಇಂದಿನ ಸಮಾನಾಧಿಕಾರದ ಹೊಸ ಯುಗದಲ್ಲಿ ನಾವಿಬ್ಬರೂ ಸಮಾನ ಅರ್ಧಾಂಗಿಗಳು ಅಂತ ತೋರಿಸಲಿಕ್ಕೆ ಇದೋ ನನ್ನ ಬುಶ್‌ಕೋಟನ್ನ ನಿನ್ನ ಬ್ಲೌಜ್ ಮಾಡಿಕೊ. ನಿನ್ನ ಬ್ಲೌಜು ನನ್ನ ಹಾಫ್‌ಶರ್ಟ ಅಂದರ ಅರ್ಧಾಂಗಿ ಮಾಡಿಕೋತೀನಿ.


(ಇಬ್ಬರೂ ನಗುವರು)

ವಿವಾಹವಿಚ್ಛೇದನ ಕಾಯದೆ ಬಂದ ಕೆಲ ದಿನಗಳಲ್ಲಿ ಓರ್ವಳು ವಕೀಲರಲ್ಲಿ ಬಂದು "ವಿವಾಹವಿಚ್ಛೇದನ ಮಾಡಿಕೊಳ್ಳಲು ನನಗೆ ಸಾಧ್ಯವಿದೆಯೆ ಎಂಬುದನ್ನು ತಿಳಿದುಕೊಳ್ಳಲು ಬಂದಿದ್ದೇನೆ" ಎಂದಳು.

"ನಿಮ್ಮ ಲಗ್ನವಾಗಿದೆಯೆ!"

"ಹೌದು."

"ಹಾಗಾದರೆ ವಿವಾಹವಿಚ್ಛೇದನ ಮಾಡಿಕೊಳ್ಳಲು ನಿಮಗೆ ಸಾಧ್ಯವಿದೆ." ಎಂದರು ವಕೀಲರು.



ಕರ್ನಾಟಕದ ಸಂಗೀತಕ್ಕೆ ಹರಿದಾಸರ ಕಾಣಿಕೆ

ಲೇಖಕ :

ಗಾನವಿದ್ಯಾವಿಶಾರದ, ವೈಣಿಕ ವಿದ್ವಾನ್

ಎಲ್. ರಾಜಾರಾವ್

ದ್ವೈತಮತ ಸಿದ್ಧಾಂತದ ಪ್ರಚಾರಕಾರ್ಯದಲ್ಲಿ ಕನ್ನಡ ಭಾಷಾಭಿವೃದ್ಧಿಯೊಂದೇ ಅಲ್ಲದೆ ದಾಕ್ಷಿಣಾತ್ಯ ಸಂಗೀತ ಪದ್ಧತಿಯ ಸುವ್ಯವಸ್ಥೆಯೂ ಅನಿವಾರ್ಯವಾಗಿ ನಡೆಯಿತು. ಪರಮಾತ್ಮನತ್ತ ಮನುಷ್ಯನ ಒಲವನ್ನುಂಟುಮಾಡಲು ಸಂಗೀತವು ಒಂದು ಶ್ರೇಷ್ಠ ಸಾಧನ ಎಂಬುದನ್ನು ಹರಿದಾಸರು ಕಂಡುಕೊಂಡರು. ಸಂಗೀತಸಾಧನವು ಸಕ್ರಮವೂ ಸಶಾಸ್ತ್ರೀಯವೂ ಆಗಿದ್ದ ಹೊರತು ಭಗವತ್ಕೃಪೆ ಅಸಾಧ್ಯವೆಂದು ಪುರಂದರದಾಸರು ನಂಬಿ ಆ ದಿಸೆಯಲ್ಲಿ ತುಂಬಾ ಪ್ರಯತ್ನಿಸಿ ಯಶಸ್ವಿಗಳಾದರು.

ಕ್ರಿ. ಶ. ಹನ್ನೆರಡನೆಯ ಶತಮಾನದ ಆದಿಯಲ್ಲಿ ಮಹಾಮಹಿಮರಾದ ಶ್ರೀಮನ್ಮಧ್ವಾಚಾರ್ಯರು ಅವತರಿಸಿ, ಭಗವದ್ಗೀತಾದಿ ಮಹದ್ಗ್ರಂಥಗಳಿಗೆ ಭಾಷ್ಯವನ್ನು ಬರೆದು, ಶ್ರೀವಿಷ್ಣುಸರ್ವೋತ್ತಮ ತತ್ವವನ್ನು ಪ್ರಪಂಚಕ್ಕೆ ಸಾರಿ, ಆ ತತ್ವವನ್ನು ಸ್ಥಿರಪಡಿಸಲು ದ್ವೈತಮತ ಸಿದ್ಧಾಂತವನ್ನು ಸ್ಥಾಪಿಸಿದರು. ಈ ದ್ವೈತಮತ ಶಿಷ್ಯಪರಂಪರೆಯಲ್ಲಿ ಉಡುಪಿಯೇ ಮೊದಲಾದ ಹಲವಾರು ಕ್ಷೇತ್ರಗಳು ನಿರ್ಮಿಸಲ್ಪಟ್ಟು, ಆ ಕ್ಷೇತ್ರಗಳಲ್ಲಿ ಸ್ಥಾಪಿಸಲ್ಪಟ್ಟ ವೈಷ್ಣವ ದೇವರುಗಳ ಆರಾಧನೆಗಾಗಿಯೂ ದ್ವೈತಮತ ಸಿದ್ಧಾಂತದ ಪ್ರಚಾರಕ್ಕಾಗಿಯೂ ಹಲವಾರು ಮಠಗಳು ಸ್ಥಾಪಿಸಲ್ಪಟ್ಟವು. ಉಡುಪಿಯ ಅಷ್ಟಮಠಗಳೂ ಶ್ರೀ ಅಕ್ಷೋಭ್ಯತೀರ್ಥರ ಉತ್ತರಾದಿ ಮಠವೂ ಆಗಲೇ ಜನ್ಮತಾಳಿದವು. ದ್ವೈತಮತ ತತ್ವಗಳು ದೇವಭಾಷೆಯಾದ ಸಂಸ್ಕೃತ ಗ್ರಂಥರೂಪದಲ್ಲಿ ಇದ್ದು, ಸಂಸ್ಕೃತ ಭಾಷೆಯನ್ನು ತಿಳಿಯದ ಜನಸಮೂಹದಲ್ಲಿ ಆ ಮತಪ್ರಚಾರ ಕಾರ್ಯವು ಸುಗಮವಾಗಿ ನೆರವೇರುವ ಚಿಹ್ನೆಗಳು ಸಾಕಷ್ಟು ಕಂಡುಬರಲಿಲ್ಲ. ಇಂತಹ ಸ್ಥಿತಿಯಲ್ಲಿ ಭಗವತ್ಕೃಪೆಯಿಂದ ಶ್ರೀಬ್ರಹ್ಮಣ್ಯತೀರ್ಥರಿಗೆ ಶ್ರೀ ವ್ಯಾಸರಾಯಸ್ವಾಮಿಗಳೆಂಬ ಮಹಾನುಭಾವರು ಶಿಷ್ಯರಾಗಿ ಬಂದು ಸೇರಿದರು. ಶ್ರೀ ವ್ಯಾಸರಾಯಸ್ವಾಮಿಗಳು ದ್ವೈತಮತ ಸಿದ್ಧಾಂತದ ಪ್ರಚಾರ ಕಾರ್ಯಗಳು ಅವ್ಯಾಹತವಾಗಿ ನಡೆಯಬೇಕೆಂಬ ಮಹದುದ್ದೇಶದಿಂದ ವ್ಯಾಸಕೂಟ, ದಾಸಕೂಟಗಳೆಂಬ ಎರಡು ಪಂಥಗಳನ್ನು ನಿರ್ಮಿಸಿ ಈ ಎರಡು ಪಂಥಗಳ ದ್ವೈತಮತ ಸಿದ್ಧಾಂತದ ಪ್ರಚಾರಕಾರ್ಯಕ್ಕೆ ತಾವೇ ಅಧ್ಯಕ್ಷರಾಗಿ ನಿಂತರು. ಶ್ರೀ ವ್ಯಾಸರಾಯ ಸ್ವಾಮಿಗಳ ಶಿಷ್ಯವರ್ಗಕ್ಕೆ—ವ್ಯಾಸಕೂಟ ದಾಸಕೂಟ ಪಂಥಗಳಿಗೆ—ಭಕ್ತಾಗ್ರಣಿಗಳಾದ ಶ್ರೀ ವಾದಿರಾಜರು, ಶ್ರೀ ಕನಕದಾಸರು, ದಾಸಶ್ರೇಷ್ಠರೆನಿಸಿದ ಶ್ರೀ ಪುರಂದರದಾಸರೇ ಮುಂತಾದ ಮಹನೀಯರು ಸೇರಿ ದ್ವೈತಮತ ಸಿದ್ಧಾಂತದ ಪ್ರಚಾರಕಾರ್ಯಕ್ಕೆ ಕಂಕಣ ತೊಟ್ಟು ನಿಂತರು.

ಪ್ರಚಾರಕಾರ್ಯವು ಸರ್ವತೋಮುಖವಾಗಿ ಬೆಳೆದು, ದ್ವೈತಮತ ಸಿದ್ಧಾಂತದ ಶ್ರೀಹರಿ ಸರ್ವೋತ್ತಮ ತತ್ತ್ವವು ಜನತೆಗೆ ಸುಲಭವಾಗಿ ಮನಹೊಕ್ಕು ಪರಿಣಾಮಕಾರಿಯಾಗಿ ಜನತೆಯ ಮನಸ್ಸು ಸರ್ವೋತ್ತಮನಾದ ಶ್ರೀಹರಿಯ ಕಡೆಗೆ ತಿರುಗುವಂತೆ ಮಾಡಲು ಶ್ರೀ ವ್ಯಾಸರಾಯ ಸ್ವಾಮಿಗಳಿಗೂ ಅವರ ಶಿಷ್ಯಪರಂಪರೆಗೂ ಕೆಲವು ಸಾಧನಗಳು ಅತ್ಯಾವಶ್ಯಕವೆಂದು ಕಂಡುಬಂತು; ಮುಖ್ಯವಾಗಿ ಭಾಷೆ ಮತ್ತು ಸಂಗೀತ, ಇವೆರಡೇ ಆ ಸಾಧನಗಳು. ಜನತೆಯ ಮನಸ್ಸು ಭಗವಂತನ ಕಡೆಗೆ ತಿರುಗುವ ಮುನ್ನ ಅದರ ದೈಹಿಕ, ಸಾಮಾಜಿಕ, ಮತ್ತು ನಿತ್ಯಜೀವನ ಕ್ರಮಗಳು ಮಾರ್ಪಾಡು ಹೊಂದಬೇಕು; ಅದರ ಲೋಪದೋಷಗಳು ಅದಕ್ಕೇ ಗೊತ್ತಾಗಬೇಕು; ಮಾನವತ್ವದ ತಿರುಳನ್ನು ಕಾಣಬೇಕು; ಅದರ ಬೆನ್ನು ಅದಕ್ಕೇ ತೋರಬೇಕು. ಇಷ್ಟು ಕಾರ್ಯವೂ ಸುಗಮವಾಗಿಯೂ ಪರಿಣಾಮಕಾರಿಯಾಗಿಯೂ ನಡೆಯಬೇಕಾದಲ್ಲಿ ಕರ್ನಾಟಕ ಜನತೆಯಲ್ಲಿ ಸರ್ವಗ್ರಾಹ್ಯವಾದ ಭಾಷೆಯು ಒಂದು ಮುಖ್ಯ ಸಾಧನ. ಎರಡನೆಯದಾಗಿ, ಇನ್ನೂ ಮುಖ್ಯವಾದ ಸಾಧನ ಸಂಗೀತ. ದೈವಿಕ ಸಂಬಂಧವಾದ ಮಹದ್ವಿಷಯಗಳನ್ನು ಪದೇ ಪದೇ ಸರ್ವಗ್ರಾಹ್ಯವಾಗುವಂತೆ ತಿಳಿಭಾಷೆಯಲ್ಲಿ ಎಷ್ಟು ಬೋಧಿಸಿದರೂ ಜೀವಮಾನದ ಹಲವು ವಿಷಯ ತೊಡಕುಗಳಲ್ಲಿ, ಕಷ್ಟಪರಂಪರೆಯಲ್ಲಿ ಓಲಾಡುತ್ತಿರುವ ಮಾನವನ ಮನಸ್ಸು ಖಚಿತವಾಗಿ ಭಗವದ್ವಿಷಯದಲ್ಲೇ ಲೀನವಾಗುವುದು ಅಸಂಭವ. ಆದ್ದರಿಂದಲೇ, ಶ್ರೀ ಪುರಂದರದಾಸರು "ಮನವ ನಿಲಿಸುವುದು ಬಲುಕಷ್ಟ, ಈ ಕೋತಿ ಮನವ ನಿಲಿಸುವುದು ಬಲು ಕಷ್ಟ" ಎಂದು ಹೇಳಿದ್ದಾರೆ. ಈ 'ಕೋತಿಮನ'ವನ್ನು, ತಿಳಿಭಾಷೆಯು ಪ್ರತಿಪಾದಿಸುವ ಮಹದ್ವಿಷಯದ ಕಡೆಗೆ ಜಗಿದು ನಿಲ್ಲುವಂತೆ ಮಾಡುವ ಸಾಧನವೆಂದರೆ ಸಂಗೀತವೇ. ಈ ಸಾಧನವಾದ ಸಂಗೀತದ ವ್ಯಾಮೋಹದಿಂದಲಾದರೂ.... 'ಮರೆತಾದರೂ ಒಮ್ಮೆ ಶ್ರೀಕೃಷ್ಣಾ ಎನಬಾರದೇ' ಎಂದು ಶ್ರೀ ಪುರಂದರದಾಸರು ಹೇಳುವಂತೆ—ಮನುಷ್ಯನು ಭಗವಂತನ ನಾಮೋಚ್ಚಾರಣೆಯನ್ನು ಮಾಡಬೇಕಾಗುತ್ತದೆ. ಆ ಕಾರಣ ಸಂಸ್ಕೃತಭಾಷೆಯಲ್ಲಿದ್ದ ಶ್ರುತಿಸ್ಮೃತಿಗಳ ಸಾರಸತ್ವವು ಕರ್ನಾಟಕ ಜನತೆಗೆ ಅರ್ಥವಾಗಿ, ಸತ್ಯ, ಧರ್ಮ, ನಿಷ್ಠೆ ಇವುಗಳ ಅರಿವಾಗಿ, ಬಾಳು ಹಸನಾಗಿ, ಜನ್ಮಸಾರ್ಥಕ್ಯ ಹೊಂದಲು ಮನಸ್ಸು ಸರ್ವೋತ್ತಮನಾದ ಶ್ರೀಹರಿಯ ಕಡೆಗೆ ಹರಿಯಲು ಸರ್ವಕರ್ನಾಟಕ ಜನರಿಗೂ ತಿಳಿದ, ಕನ್ನಡ ಭಾಷೆಯಲ್ಲಿ ಕೃತಿಗಳನ್ನು ರಚಿಸಿ, ಆ ಕೃತಿಗಳಲ್ಲಿನ ಭಾವಾರ್ಥವು ಮನನಾಟುವಂತೆ ಮಾಡಲು ಸಶಾಸ್ತ್ರೀಯ ದಾಕ್ಷಿಣಾತ್ಯ ಸಂಗೀತದಲ್ಲಿ ಸುಮಧುರವಾಗಿ ಹೊಂದಿಸಿ, ಲಕ್ಷಾಂತರ ಸಂಖ್ಯೆಯಲ್ಲಿ ಕೃತಿಧಾರೆ ಸುರಿಸಿ ಮಹೋಪಕಾರ ಮಾಡಿ, ಶ್ರೀ ಪುರಂದರದಾಸರು ಮತ್ತು ಇತರ ಹರಿದಾಸ ಪೀಳಿಗೆಯವರು ನಮ್ಮ ಕನ್ನಡ ಜನತೆಯ ನಿರಂತರ ಕೃತಜ್ಞತೆಗೂ ಪೂಜ್ಯತೆಗೂ ಪಾತ್ರರಾಗಿದ್ದಾರೆ.

ದ್ವೈತಮತ ಸಿದ್ಧಾಂತದ ಈ ಪ್ರಚಾರಕಾರ್ಯದಲ್ಲಿ ಕನ್ನಡ ಭಾಷಾಭಿವೃದ್ಧಿಯೊಂದೇ ಅಲ್ಲದೆ, ದಾಕ್ಷಿಣಾತ್ಯ ಸಂಗೀತ ಪದ್ಧತಿಯ ಸುವ್ಯವಸ್ಥೆಯೂ ಅನಿವಾರ್ಯವಾಗಿ ನಡೆಯಬೇಕಾಯಿತು. ಭಗವಂತನ ಗಾನರೂಪದ ಸ್ತೋತ್ರದಿಂದ ಭಗವತ್ಕೃಪೆಯು ಕಟ್ಟಿಟ್ಟ ಬುತ್ತಿ; ಶ್ರೀಹರಿಯು ಗಾನಲೋಲ, ಗಾನವಿನೋದಿ—ಸರ್ವ ವೇದಗಳ ಉಕ್ತಿಯೇ ಇದು. ಭಕ್ತಿಸೂತ್ರಗಳಲ್ಲಿ ಅಡಕವಾದ ಕಾಂತಾಸಕ್ತಿ ಭಾವದಿಂದ ಗಾನಲೋಲನಾದ ಶ್ರೀಹರಿಗೆ ಶ್ರೀವ್ಯಾಸರಾಯ ಸ್ವಾಮಿಗಳು

"ಕಾಯಹೊಳವು ಮಾಡಿ ಕುಚವ
ಸೋರೆಯಮಾಡಿ
ಮನನೆಂಬ ತಂತಿಯ ಹೂಡಿಕೊಂಡು

ಎರಡು ಕಂಗಳನ್ನು ಎರಡು ತಾಳವ ಮಾಡಿ
ಮೇಳಕೊಳ್ಳುವೆ, ರಂಗ ಬಾರ ಕಾಣಕ್ಕ "

ಎಂದು ತಮ್ಮನ್ನೇ ಶ್ರೀಹರಿಗೆ ಅರ್ಪಿಸಿಕೊಂಡಿದ್ದಾರೆ. ಈ ಮಹಾಮಹಿಮರ ಶಿಷ್ಯಂದಿರಾದ ಶ್ರೀ ಪುರಂದರದಾಸರು "ಹರಿಸ್ಮರಣವಿಲ್ಲದ ಹಾಡಿಕೆಯು ಅರಣ್ಯರೋದನವೋ ಪುರಂದರ ವಿಠಲ", "ಗಾನಲೋಲ ತನ್ನ ಧ್ಯಾನಿಸುವರನೆಲ್ಲ ಮಾನದಿಂದ ಕಾಯ್ವ ಶ್ರೀನಿಧಿಪರನೆಂದು, ಹೊಡಿ ನಗಾರಿ ಮೇಲೆ ಕೈಯ", "ಮಲಗಿ ಪಾಡಿದರೆ ಕುಳಿತುಕೇಳುವನು, ಕುಳಿತು ಪಾಡಿದರೆ ನಿಂತು ಕೇಳುವನು, ನಿಂತು ಪಾಡಿದರೆ ನಲಿದು ಕೇಳುವನು, ನಲಿದು ಪಾಡಿದರೆ ಸ್ವರ್ಗ ಸೂರೆ ಬಿಟ್ಟೆನೆಂಬ ಪುರಂದರ ವಿಠಲ", "ತಂಬೂರಿ ಮೀಟಿದವ, ಭವಾಬ್ಧಿ ದಾಟಿದವ, ತಾಳವ ತಟ್ಟಿದವ, ಸುರರೊಳು ಸೇರಿದವ, ಗೆಜ್ಜೆಯ ಕಟ್ಟಿದವ, ಖಳರೆದೆ ಮೆಟ್ಟಿದವ, ಗಾಯನ ಪಾಡಿದವ, ಹರಿಮೂರ್ತಿ ನೋಡಿದವ, ಪುರಂದರ ವಿಠಲನ ನೋಡಿದವ, ವೈಕುಂಠಕೋಡಿದವ" ಎಂದೂ ಶ್ರೀ ವಾದಿರಾಜರು "ಲಕ್ಷ್ಮೀನಾರಾಯಣನ ಗಾಯನದಿ ಕೊಂಡಾಡಿ ಪೊಗಳುತ್ತ ದಿನಗಳನು ಕಳೆವ ಜನರೇ ಸುಜನರು" ಎಂದೂ ಘೋಷಿಸಿ ಭಗವತ್ಕೃಪೆಗೆ ಗಾಯನರೂಪದ ಸ್ತೋತ್ರವೇ ಉತ್ತಮೋತ್ತಮ ಮಾರ್ಗವೆಂದು ಸಾರಿಹೇಳಿದ್ದಾರೆ. ಆದರೆ ಶ್ರೀ ಪುರಂದರದಾಸರಿಗೆ ಈ ಸಂಗೀತ ಸಾಧನವು ಸಕ್ರಮವೂ ಸಶಾಸ್ತ್ರೀಯವೂ ಆಗಿದ್ದ ಹೊರತು ಭಗವತ್ಕೃಪೆಯು ಅಸಾಧ್ಯವೆಂಬ ದೃಢ ನಂಬಿಕೆ. ಅದಕ್ಕಾಗಿಯೇ ಶ್ರೀ ದಾಸರಾಯರು,

ತಾಳ ಬೇಕು ತಕ್ಕ ಮೇಳ ಬೇಕು ॥ ಪ ॥
ಶಾಂತ ವೇಳೆ ಬೇಕು ಗಾನಪಾಡುವಗೆ ॥ ಅ ॥
ಯತಿಪ್ರಾಸವಿರಬೇಕು ಗತಿಗೆ ನಿಲ್ಲಿಸಬೇಕು
ರತಿಪತಿಪಿತನೊಳು ಅತಿಪ್ರೇಮವಿರಬೇಕು ॥ ೧ ॥
ಗಳಶುದ್ಧ ವಿರಬೇಕು ತಿಳಿದುಪೇಳಲುಬೇಕು
ಕಳವಳ ಬಿಡಬೇಕು ಕಳೆಮುಖವಿರಬೇಕು ॥ ೨ ॥
ಅರಿತವರಿರಬೇಕು ಹರುಷಹೆಚ್ಚಲು ಬೇಕು
ಪುರಂದರವಿಠಲನೆ ಪರದೈವನೆನಬೇಕು ॥ ೩ ॥

ಎಂದು ಸಶಾಸ್ತ್ರೀಯವಾದ ಗಾಯನಪದ್ಧತಿಯನ್ನು ವಿವರಿಸಿ

ಕೇಳನೋ ಹರಿ ತಾಳನೋ
ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ ॥ ಪ ॥
ತಂಬೂರಿ ಮೊದಲಾದ ಅಖಿಳ ವಾದ್ಯಗಳಿದ್ದು
ಕೊಂಬು ಕೊಳಲು ಧ್ವನಿ ಸ್ವರಗಳಿದ್ದು
ತುಂಬುರು ನಾರದರ ಗಾನ ಕೇಳುವ ಹರಿ
ನಂಬಲಾರ ಈ ಡಂಭಕದ ಕೂಗಾಟ ॥ ೧ ॥
ನಾನಾ ಬಗೆಯ ರಾಗ ಭಾವ ತಿಳಿದು ಸ್ವರ
ಜ್ಞಾನ ಮನೋಧರ್ಮ ಜಾತಿಯಿದ್ದು
ದಾನವಾರಿಯ ದಿವ್ಯನಾಮರಹಿತವಾದ
ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು ॥ ೨ ॥
ಅಡಿಗಡಿಗಾನಂದಬಾಷ್ಪಪುಳಕದಿಂದ
ನುಡಿನುಡಿಗೆ ಶ್ರೀಹರಿಯೆನ್ನುತ
ದೃಢ ಭಕ್ತರನುಕೂಡಿ ಹರಿಕೀರ್ತನೆ ಪಾಡಿ
ಕಡೆಗೆ ಪುರಂದರವಿಠಲನೆಂದರೆ ಕೇಳ್ವ ॥ ೩ ॥

ಎಂದು ಅಶಾಸ್ತ್ರೀಯ ಹಾಡಿಕೆಯಿಂದ ಭಗವಂತನನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲವೆಂದು ನುಡಿದಿದ್ದಾರೆ. ಶ್ರೀ ಪುರಂದರದಾಸರು ಈ ದೃಷ್ಟಿಯಿಂದ ಅವರ ಕಾಲದಲ್ಲಿದ್ದ ಸಂಗೀತ ಪದ್ಧತಿಯ ಅವ್ಯವಸ್ಥೆಯನ್ನು ಕಂಡು ಗಾಯನದ ಅಭ್ಯಾಸ ಕ್ರಮವನ್ನು ಸುವ್ಯವಸ್ಥೆಗೊಳಿಸಿದರು. ಮಾಯಾಮಾಳವರಾಗವನ್ನು ಕಂಡುಹಿಡಿದು ಅಭ್ಯಾಸಿಗಳಿಗೆ ಗಾನಕಲಾಭ್ಯಾಸವು ಸಕ್ರಮವಾಗಿಯೂ ಸುಗಮವಾಗಿಯೂ ನಡೆಯಲು ಅನುಕೂಲವಾಗುವಂತೆ ಆ ರಾಗದಲ್ಲಿ ಸರಳೆ ಮತ್ತು ಜಂಟಿವರಸೆಗಳು, ಸಪ್ತತಾಳದಲ್ಲಿಯೂ ಅದರ ಐದು ಜಾತಿಗಳಲ್ಲಿಯೂ ತಾಳದ ಸ್ವರೂಪವು ಸುಲಭವಾಗಿ ತಿಳಿಯುವಂತೆ ಅಲಂಕಾರಗಳನ್ನೂ ಅವರ ಕಾಲದಲ್ಲಿ ಪ್ರಚಾರದಲ್ಲಿದ್ದ ರಾಗಗಳ ಸ್ವರೂಪವನ್ನು ತೋರಿಸುವ ಲಕ್ಷಣಗೀತಗಳನ್ನೂ ತಮ್ಮಿಂದಲೇ ಕಂಡು ಹಿಡಿಯಲ್ಪಟ್ಟ ಮಾಯಾ-ಮಾಳವಗೌಳದ ಜನ್ಯರಾಗವಾದ ಮಲಹರಿ ರಾಗದಲ್ಲಿ ಪಿಳ್ಳಾರಿ ಗೀತಗಳನ್ನೂ ಇಷ್ಟೇ ಅಲ್ಲದೆ, ಶ್ರೀ ಪುರಂದರದಾಸರಿಂದಲೇ ಕೃತಿರಚನಾಕಾರ್ಯಕ್ಕೆ ಪ್ರಚೋದಿತರಾದ ಶ್ರೀ ವಿಜಯದಾಸರು ಹೇಳುವಂತೆ "ಹರುಷದಿಂದ ಸ್ವರವನೆತ್ತಿ ಮೂವತ್ತೆರಡು ರಾಗದಲಿದಿರುನಿಂದು," ಅವರ ಕಾಲದಲ್ಲಿ ಬಳಕೆಯಲ್ಲಿದ್ದ ಆ ಮೂವತ್ತೆರಡು ರಾಗಗಳಲ್ಲಿಯೂ 'ಪದ'ಗಳೆಂದು ವಿಶೇಷ ಗುಣವುಳ್ಳ ಲಕ್ಷಾಂತರ ಕೃತಿಗಳನ್ನು ರಚಿಸಿ ಹಾಡಿದ್ದಾರೆ. ಶ್ರೀ ಪುರಂದರದಾಸರ ಕಾಲದಲ್ಲಿ ರೂಢಿಯಲ್ಲಿದ್ದ ಕೆಲವು ರಾಗಗಳನ್ನು ಶ್ರೀ ದಾಸರಾಯರೆ "ಅಂಗನೆಯರೆಲ್ಲ ನೆರೆದು ಚಪ್ಪಾಳಿಕ್ಕುತ ದಿವ್ಯಮಂಗಳ ನಾಮವ ಪಾಡಿ ರಂಗನ ಕುಣಿಸುವರು" ಮುಂತಾದ ಕೃತಿಗಳಲ್ಲಿ ಹೆಸರಿಸಿದ್ದಾರೆ. ಶ್ರೀ ಪುರಂದರದಾಸರ ಸಂಗೀತ ಪದ್ಧತಿಯ ಸುಧಾರಣೆಯೇ ಈಗಿನ ಸಂಗೀತ ಪದ್ಧತಿಗೆ ಭವ್ಯವೂ ಭದ್ರವೂ ಆದ ಅಸ್ತಿಭಾರವಾಗಿ 'ಕರ್ನಾಟಕ ಸಂಗೀತ'ವೆಂದು ಹೆಸರಾಂತಿದೆ; ಶ್ರೀ ದಾಸರಾಯರು 'ಕರ್ನಾಟಕ ಸಂಗೀತ ಪಿತಾಮಹ' ರೆನಿಸಿ ಕೊಂಡಿದ್ದಾರೆ. ಶ್ರೀ ಪುರಂದರದಾಸರ ಕೃತಿಗಳು ಅವರ ಕಾಲದಿಂದಲೂ ಮೇಲೆ ಹೇಳಿದಂತೆ "ಪದ" ಗಳು ಎಂಬ ವಿಶೇಷ ನಾಮದಿಂದ ರಾಜಿಸುತ್ತಿವೆ. ಸಂಗೀತಶಾಸ್ತ್ರದ ಪ್ರಕಾರ ಕೃತಿಸಮೂಹದಲ್ಲಿ "ಪದ" ಗಳು ಅಗ್ರಸ್ಥಾನವನ್ನು ಪಡೆಯುತ್ತವೆ. ಭಾವಾರ್ಥದಲ್ಲೂ ತಾಳವೈಶಿಷ್ಟ್ಯದಲ್ಲೂ "ಪದ" ಗಳು ವಿಶೇಷ ಗುಣಹೊಂದಿ ಅವುಗಳ ಸಕ್ರಮ ಹಾಡಿಕೆಗೆ ಗಾಯಕನಲ್ಲಿ ಉನ್ನತ ಮಟ್ಟದ ವಿಶೇಷ ಪಾಂಡಿತ್ಯವನ್ನು ಬಯಸುತ್ತವೆ. ಶ್ರೀ ಪುರಂದರದಾಸರು ಲಕ್ಷ ಸಂಖ್ಯೆಯಲ್ಲಿ "ಪದ" ಗಳ ರಚನೆಯೊಂದೇ ಅಲ್ಲದೆ "ಸುಳಾದಿ"ಗಳೆಂಬ ಮತ್ತೂ ಕ್ಲಿಷ್ಟತರವಾದ ಕೃತಿಸಮೂಹವನ್ನು ನಮಗೆ ಒದಗಿಸಿದ್ದಾರೆ. ಏಳು ಅಥವಾ ಐದು ತಾಳಗಳಲ್ಲಿ ಚರಣಗಳೂ ಕೊನೆಯಲ್ಲಿ "ಜೊತೆ" ಎಂಬ ಎರಡುಸಾಲಿನ ಸಾಹಿತ್ಯದಿಂದಲೂ ಈ "ಸುಳಾದಿ" ಗಳು ಶೋಭಿಸುತ್ತವೆ. ಈ "ಜೊತೆ"ಯು ಮೇಲಿನ ಚರಣಗಳಿಗೆ ಉಪಯೋಗಿಸಲ್ಪಟ್ಟ ಏಳು ಅಥವಾ ಐದು ತಾಳಗಳಲ್ಲಿಯೂ ಹಾಡಲ್ಪಡಬೇಕು. ಇದು "ಸುಳಾದಿ" ಯ ಹಾಡಿಕೆಯ ಲಕ್ಷಣ. ಇದುವರೆಗೆ "ಸುಳಾದಿ"ಯ ಸಕ್ರಮ ಹಾಡಿಕೆಯು ಅಪರೂಪವೆಂದೇ ಹೇಳಬೇಕು.

ಶ್ರೀ ಕನಕದಾಸರೂ ಶ್ರೀ ವಾದಿರಾಜ ಸ್ವಾಮಿಗಳೂ ಶ್ರೀ ಪುರಂದರದಾಸರ ಸಮಕಾಲೀನರಾಗಿದ್ದು ಶ್ರೀ ವ್ಯಾಸರಾಯ ಸ್ವಾಮಿಗಳಲ್ಲಿಯೆ ಶಿಷ್ಯವೃತ್ತಿ ಮಾಡಿದವರು. ಈ ದಾಸೋತ್ತಮರೂ ತಮ್ಮ ಗುರುಗಳು ಹಾಕಿಕೊಟ್ಟ ಕ್ರಮದಲ್ಲಿ ಶ್ರೀ ಪುರಂದರದಾಸರಂತೆಯೇ ಗಾನರೂಪದಲ್ಲಿ

ಸಹಸ್ರಾರು ಭಗವದ್ವಿಷಯವಾದ ಕೃತಿಗಳನ್ನು ರಚಿಸಿ ಮಹೋಪಕಾರ ಮಾಡಿದ್ದಾರೆ. ಶ್ರೀ ವಿಜಯದಾಸರು ತಮ್ಮ ಗುರುಗಳಾದ ಶ್ರೀ ಪುರಂದರದಾಸರಿಂದ ಪ್ರೇರೇಪಿತರಾಗಿ ಅವರ ಮಾರ್ಗವಲ್ಲಿಯೇ ಅನೇಕ ಸಹಸ್ರ ಗಾಯನ ರೂಪದ ಕೃತಿಗಳನ್ನು ರಚಿಸಿ ಸಂಗೀತ ಸಾಹಿತ್ಯ ಸೇವೆಯನ್ನೂ ದ್ವೈತಮತ ಸಿದ್ಧಾಂತದ ಪ್ರಚಾರ ಕಾರ್ಯವನ್ನೂ ಮುಂದುವರಿಸಿದ್ದಾರೆ. "ಶ್ರೀಶ ಕೊಳಲನೂದಿದನಂದು" ಎಂಬ ಕೃತಿಯಲ್ಲಿ, ತಮ್ಮ ಕಾಲದಲ್ಲಿ ರೂಢಿಯಲ್ಲಿದ್ದ ಕೆಲವು ರಾಗಗಳನ್ನು ಹೆಸರಿಸಿದ್ದಾರೆ. ಶ್ರೀ ವಿಜಯದಾಸರ ಶಿಷ್ಯಪರಂಪರೆಯಲ್ಲಿ ಶ್ರೀ ಗೋಪಾಲದಾಸರು, ಶ್ರೀ ಮೋಹನದಾಸರು, ಶ್ರೀ ಜಗನ್ನಾಥದಾಸರು ಮುಂತಾದವರು ತಮ್ಮ ಗುರುಗಳ ಗಾಯನ ರೂಪದ ಕೃತಿರಚನಾ ಕಾರ್ಯವನ್ನೂ ದ್ವೈತಮತ ಸಿದ್ಧಾಂತದ ಪ್ರಚಾರಕಾರ್ಯವನ್ನೂ ಮುಂದುವರಿಸಿದ್ದಾರೆ.

ಶ್ರೀ ಪುರಂದರದಾಸರಿಂದ ಸುವ್ಯವಸ್ಥೆಗೊಂಡ ದಾಕ್ಷಿಣಾತ್ಯ ಗಾಯನಪದ್ಧತಿಯು ಅವರ ಶ್ರೀ ಹರಿದಾಸ ಶಿಷ್ಯಪೀಳಿಗೆಯಿಂದ ಸಾಗಿ ಬಂದು ಶ್ರೀ ತ್ಯಾಗರಾಜಾದಿ ಸಂಗೀತ ತ್ರಿಮೂರ್ತಿಗಳಿಗೂ ಸಂಗೀತ ಶಾಸ್ತ್ರಜ್ಞಾನವನ್ನೂ ಸ್ಫೂರ್ತಿಯನ್ನೂ ಕೊಟ್ಟಿತೆಂದರೆ ಅತಿಶಯೋಕ್ತಿಯಾಗಲಾರದು. ಶ್ರೀ ಹರಿದಾಸರ ಪೀಳಿಗೆಯು ಈ ಸಂಗೀತ ಕೃತಿರಚನಾ ಕಾರ್ಯದಲ್ಲಿ ತೊಡಗಿ ತನ್ಮೂಲಕ ಜ್ಞಾನ ಭಕ್ತಿ ವೈರಾಗ್ಯಗಳ ಪ್ರಸಾರ ಕಾರ್ಯವನ್ನು ಇತೋಪ್ಯತಿಶಯವಾಗಿ ನಡೆಸಿಕೊಂಡು ಬರದೆ ಇದ್ದಲ್ಲಿ ಈಗಿನ ಜನಾಂಗಕ್ಕೆ ನಮ್ಮ ಹಿಂದಿನ ತಲೆಮಾರುಗಳ ಜ್ಞಾನ ಭಂಡಾರದ ಮತ್ತು ಸಂಸ್ಕೃತಿಯ ವೈಶಾಲ್ಯದ ಅರಿವು ಆಗುತ್ತಿರಲಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಶ್ರೀ ಹರಿದಾಸಪಂಥದ ಮುಖ್ಯದೃಷ್ಟಿಯು ದ್ವೈತಮತ ಪ್ರಚಾರದ ಮೂಲಕ ಜನತೆಯ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸುವುದೇ ಆದರೂ ಅದರೊಡನೆ ಅನಿವಾರ್ಯವಾಗಿ ಸಂಬಂಧಪಟ್ಟ ಗಾನಕಲೆಯೂ ಸುವ್ಯವಸ್ಥಿತವಾಗಿ ಪುನರುದ್ಧಾರವಾಯಿತು; ಕೃಷಿಯು ಒಂದಾದರೂ ಫಲವು ಹಲವಾಯಿತು. ಮೇಲೆ ಹೇಳಿದಂತೆ ಗಾನ ತ್ರಿಮೂರ್ತಿಗಳಲ್ಲಿ ಶ್ರೀಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ರೀಶ್ಯಾಮಾಶಾಸ್ತ್ರಿಗಳು ಶ್ರೀಪುರಂದರದಾಸರ ಕಾಲದಲ್ಲಿದ್ದು ಅವರ ಶಿಷ್ಯಪೀಳಿಗೆಯಿಂದ ಸಾಗಿ ಬಂದ "ಬತ್ತೀಸ" ಎಂದರೆ "ಮೂವತ್ತೆರಡು" ರಾಗಗಳ ಮತ್ತು ತಾಳಾದಿ ಸುವ್ಯವಸ್ಥಿತ ಸಂಗೀತಸಂಪ್ರದಾಯದ ಪರಿಚಯಮಾಡಿಕೊಂಡು ಅದರ ಸಹಾಯದಿಂದ ತಮ್ಮ ಸಂಗೀತಕಲಾ ಸೌಧವನ್ನು ನಿರ್ಮಿಸಿದರೆಂಬುದಕ್ಕೆ ಅಡ್ಡಿ ಏನೂ ಇರಲಾರದು. ಶ್ರೀ ತ್ಯಾಗರಾಜರು ಶ್ರೀಪುರಂದರದಾಸರ 'ಮಾತು', 'ಧಾತು'ಗಳೆರಡನ್ನೂ ಸಮಯೋಚಿತವಾಗಿ ಬಳಸಿಕೊಂಡು ತಮ್ಮ ಗಾಯನ ಸೌಧವನ್ನು ನಿರ್ಮಿಸಿರುವುದೇ ಅಲ್ಲದೆ

"ದುರಿತವ್ರಾತಮುಲೆಲ್ಲನು ಪರಿಮಾರ್ಚೆದಿ
ಹರಿಗುಣಮುಲ ಪಾಡುಚುನೆಪುಡುನ್
ವೆಲಯು ಶ್ರೀಪುರಂದರದಾಸುನಿ ಮಹಿಮಮುಲನು
ದಲಚೆದ ಮದಿಲೋನ್"

ಎಂದು ಶ್ರೀಪುರಂದರದಾಸರಿಗೆ ತಮ್ಮ ಭಕ್ತಿಕಾಣಿಕೆಯನ್ನು ಸಲ್ಲಿಸಿದ್ದಾರೆ.

ಸಂಗೀತಕಲೆಯ ಪುನರುದ್ಧಾರಕ್ಕಾಗಿ ಶ್ರೀ ಪುರಂದರದಾಸರು ಕಾರಣರಾಗಿ ಇತರ ಹರಿದಾಸರು ಅದರ ಪುಷ್ಟೀಕರಣಕ್ಕೆ ಅಹರ್ನಿಶಿ ದುಡಿದರೂ ಶ್ರೀಹರಿದಾಸರ ಕೃತಿಗಳಿಗೆ ನಿಜವಾಗಿ ಸಲ್ಲಬೇಕಾದ ಗೌರವಾದರಗಳು ಸಾಕಷ್ಟು ಸಲ್ಲುತ್ತಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಕೆಳಗೆ ಕಂಡುಬರುವ ಪ್ರಯತ್ನಗಳು ಅತಿ ಶೀಘ್ರದಲ್ಲಿಯೂ ಬಿರುಸಿನಿಂದಲೂ ನಡೆದಲ್ಲಿ ಶ್ರೀಹರಿದಾಸರ ಕೃತಿಗಳು ತಮ್ಮ ಹಕ್ಕಿನ ಗೌರವಾದರದ ಅಂತಸ್ಥನ್ನು ಪಡೆಯಬಹುದೆಂದು ಊಹಿಸಬಹುದು...

೧. ಕನ್ನಡ ಭಾಷೆಯಲ್ಲಿ ನೈಜವಾದ ಅಭಿಮಾನವುಳ್ಳ ಕನ್ನಡಿಗರು ಅವಿಚ್ಛಿನ್ನವಾಗಿ ಶ್ರೀಹರಿದಾಸರ ಕೃತಿಗಳನ್ನೇ ಸಶಾಸ್ತ್ರೀಯ ಗಾಯನರೂಪದಲ್ಲಿ ಕೇಳಬೇಕೆಂಬ ದೃಢಸಂಕಲ್ಪ ಮಾಡಬೇಕು. ಈ ಹಂಬಲ ಬೇರೂರಿದರೆ ಗಾಯಕರು ಸಹ ಶ್ರೋತೃಗಳಿಗೆ ನೈಜವಾದ ಕರ್ಣಾನಂದವಾಗುವ ರೀತಿಯಲ್ಲಿ ಶ್ರೀ ಹರಿದಾಸರ ಕೃತಿಗಳ ಹಾಡಿಕೆಯನ್ನು ಸಶಾಸ್ತ್ರೀಯ ರೀತಿಯಲ್ಲಿ ಅಭ್ಯಾಸಮಾಡಲು ಉಪಕ್ರಮಿಸುವರೆಂದು ನಿರೀಕ್ಷಿಸಬಹುದು.

೨. ಶ್ರೀಹರಿದಾಸರ ಕೃತಿಗಳು ಸಹಸ್ರ ಮತ್ತು ಲಕ್ಷ ಸಂಖ್ಯೆಯಲ್ಲಿವೆ. ಈ ಕಾರಣದಿಂದ ಕೃತಿಗಳು ಸಾವಧಾನದಿಂದ ನಡೆಯಬೇಕಾದ ಸ್ವರಸಂಯೋಜನ ಕಾರ್ಯಕ್ಕೆ, ಕೃತಿಪ್ರವಾಹದ ಒತ್ತಡದಲ್ಲಿ, ಸಿಕ್ಕಿ ಬರಲು ಸಾಧ್ಯವಲ್ಲದ ವಿಷಯ. ಆದ್ದರಿಂದ ಶ್ರೀಹರಿದಾಸರ ಕೃತಿಗಳು ಶಿಷ್ಯಪೀಳಿಗೆಯಲ್ಲಿ, ತಲೆಮಾರಿನಿಂದ ತಲೆಮಾರಿಗೆ, ಬಾಯಿಪಾಠದ ಮೂಲಕವೂ ಅನುಕರಣದ ಮೂಲಕವೂ ಸಾಗಿ ಬಂದು, ಪ್ರಯೋಗಿಸಲ್ಪಟ್ಟ ರಾಗಸ್ವರೂಪದಲ್ಲಿ ಏನು ವ್ಯತ್ಯಾಸವಾಗದಿದ್ದರೂ ಕಾಲಾನುಕ್ರಮದಲ್ಲಿ, ಹಾಡುವ 'ಧಾಟಿ'ಯೂ 'ಧಾತು' ಮತ್ತು 'ಸಾಹಿತ್ಯ'ವೂ ವ್ಯತ್ಯಾಸ ಹೊಂದುವುದಾಗಲಿ ಮಾಸಿಹೋಗುವುದಾಗಲಿ ಆಗದೆ ವಿಧಿಯಿಲ್ಲ. ಹೀಗೆ ನಡೆದು ಬಂದು ಶ್ರೀ ಹರಿದಾಸರ ಕೃತಿಗಳ 'ಧಾಟಿ' ಅಥವಾ 'ಧಾತು', 'ಮಾತು'ಗಳು ಹೀಗೆ ಇರಬೇಕೆಂದು ನಿರ್ಧರಿಸುವುದು ಕಷ್ಟ. ಆ ಕಾರಣ, ಶ್ರೀ ಹರಿದಾಸರ ಕೃತಿಗಳಲ್ಲಿ ಕರ್ನಾಟಕ ಜನತೆಯು ಹೆಚ್ಚಿನ ಅಭಿಮಾನ ತೋರಿ, ಶ್ರೀ ಹರಿದಾಸರ ಕೃತಿಗಳ ಸಂಶೋಧನ ಕಾರ್ಯವನ್ನು ನಡೆಸಿ, ಶ್ರೀ ಹರಿದಾಸರ ಕೃತಿಗಳಿಗೆ, ಅನುಭಾವಿಗಳೂ ಭಾವರಸಜ್ಞರೂ ಭಾಷಾಜ್ಞಾನಿಗಳೂ ಸಂಗೀತಶಾಸ್ತ್ರಕೋವಿದರೂ ಆದ ಉತ್ತಮ ಗಾಯಕರಿಂದ ಸ್ವರಸಂಯೋಜನೆ ಮಾಡಿಸಿ ಗ್ರಂಥರೂಪದಲ್ಲಿ ಪ್ರಕಟಿಸಬೇಕು.

ಈ ಎರಡು ಕಾರ್ಯಗಳೂ ಆಸಕ್ತಿಯಿಂದಲೂ ಭರದಿಂದಲೂ ಸಾಗಿದಲ್ಲಿ ಶ್ರೀಹರಿದಾಸರ ಕೃತಿಗಳು ತಮ್ಮ ನೈಜ ಪ್ರತಿಭೆಯಿಂದ ರಾಜಿಸುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ರಸಾಯನಶಾಸ್ತ್ರಜ್ಞನ ವಿಶ್ವಾಮಿತ್ರಸೃಷ್ಟಿ

ಲೇಖಕ:
ಪ್ರೊ. ಜೆ. ಅ. ಅಷ್ಟಪುತ್ರೆ, ಎಮ್. ಎಸ್ಸಿ.
ಕೆ. ಇ. ಬೋರ್ಡ ಕಾಲೇಜ, ಧಾರವಾಡ

ಸೃಷ್ಟಿ ಸೌಂದರ್ಯದ ಅನುಭವದಲ್ಲಿ ಸಂತೋಷವಿದೆ ಎಂಬ ಮಾತನ್ನು ವಿಜ್ಞಾನಿ ಒಪ್ಪಿದರೂ ಅದೇ ಜೀವನದ ಸಾರ್ಥಕತೆ ಎಂಬ ಮಾತನ್ನು ಮಾತ್ರ ಆತ ಸರ್ವಥಾ ಒಪ್ಪುವದಿಲ್ಲ. ಒಬ್ಬ ಮನುಷ್ಯನ ಜೀವನ ಮುಕ್ತಾಯವಾದ ಮಾತ್ರಕ್ಕೆ ಮಾನವ ಜನಾಂಗದ ಜೀವನ ಮುಕ್ತಾಯವಾಗುವದಿಲ್ಲ. ತಲೆತಲಾಂತರಗಳಿಂದ ನಿಸರ್ಗದೊಡನೆ ಅವ್ಯಾಹತ ಹೋರಾಟ ಸಾಗಿಸಿ ಮಾನವ ಜನಾಂಗಕ್ಕೆ ವಿಶ್ವದ ಒಗಟನ್ನು ಸಂಪೂರ್ಣವಾಗಿ ಬಿಡಿಸುವದು ಸಾಧ್ಯ ಎಂದು ವಿಜ್ಞಾನಿ ಖಂಡಿತ ನಂಬುತ್ತಾನೆ.

ನಿಸರ್ಗವು ಎಂತಹ ವೈವಿಧ್ಯಪೂರ್ಣವಾದುದು! ಪ್ರಕೃತಿಯ ಸೃಷ್ಟಿಸೌಂದರ್ಯದೆಡೆಗೆ ಸ್ವಲ್ಪಾದರೂ ಗಮನವಿತ್ತವರಿಗೆ ಈ ವಿಷಯವಾಗಿ ಅನುಮಾನ ಪಡಬೇಕಾದುದಿಲ್ಲ. ಪ್ರಕೃತಿಯನ್ನು ಅರ್ಥಮಾಡಿಕೊಳ್ಳಬೇಕೆಂದು ಪ್ರಯತ್ನಿಸುವ ಮಾನವನ ಜ್ಞಾನೇಂದ್ರಿಯಗಳನ್ನೆಲ್ಲ ಕ್ಷಣ ಮಾತ್ರದಲ್ಲಿ ತಲ್ಲಣಿಸಿ ಮುಗ್ಧಗೊಳಿಸುವ ಸಾಮರ್ಥ್ಯ ನಿಸರ್ಗದ ವೈವಿಧ್ಯತೆಯಲ್ಲಿ ಅಡಕವಾಗಿದೆ ಎಂದು ನಿಃಸಂದೇಹವಾಗಿ ಹೇಳಬಹುದು. ಅಂತೆಯೇ ಅನೇಕ ತಾತ್ವಿಕರು ನಿಸರ್ಗದ ಈ ಬಾಹ್ಯ ವೈವಿಧ್ಯತೆಯನ್ನು ಅರಿತುಕೊಳ್ಳುವದು ಅಸಾಧ್ಯವೂ ನಿಷ್ಪ್ರಯೋಜಕವೂ ಎಂದು ಕಂಡುಕೊಂಡು ಸೃಷ್ಟಿಸೌಂದರ್ಯದ ಅನುಭವವೇ ಜೀವನದ ಸಾರ್ಥಕತೆ ಎಂದು ಸಾರಿದ್ದಾರೆ. ನಿಸರ್ಗವು ವೈವಿಧ್ಯಪೂರ್ಣವಾದಾಗ್ಯೂ ಅದರಲ್ಲಿ ಅಡಗಿಕೊಂಡಿರುವ ಒಂದು ತರಹದ 'ಕ್ರಮಬದ್ಧತೆ' ಮಾತ್ರ ಅಂತಹ ತಾತ್ವಿಕರನ್ನೂ ಕೆಣಕದೆ ಬಿಟ್ಟಿಲ್ಲ. ನಿಸರ್ಗದಲ್ಲಿ ವೈವಿಧ್ಯತೆ ಇದ್ದಷ್ಟೂ ಕ್ರಮಬದ್ಧತೆಯೂ ಇದೆ ಎಂಬುದನ್ನು ಯಾವ ವಿಚಾರವಂತನೂ ಒಪ್ಪತಕ್ಕ ಮಾತೇ ಸರಿ. ಆ ಕ್ರಮಬದ್ಧತೆಯ ನಿಷ್ಕೃಷ್ಟವಾದ ಅರ್ಥವಿವರಣೆ ಸುಲಭವಾಗಿರಲಿಕ್ಕಿಲ್ಲ ಅಥವಾ ಮಾನವನ ವಿಚಾರಶಕ್ತಿಗೆ ತಟ್ಟನೆ ಆಕಲನವಾಗಲಿಕ್ಕಿಲ್ಲ. ಆ ಮಾತೇ ಬೇರೆ. ಆದ್ದರಿಂದ ವೈವಿಧ್ಯತೆಯ ಸಂಪೂರ್ಣದ ಆಕಲನ ಸಾಧ್ಯವಾಗದಿದ್ದರೂ ಆ ವೈವಿಧ್ಯತೆಯ ಕ್ರಮಬದ್ಧತೆಗೆ ಮೂಲಾಧಾರವಾಗಿ ಒಂದೇ ಕಾರಣವಿರುವದು ಸಾಧ್ಯ ಎಂಬುದು ಮಾತ್ರ ಕುಶಾಗ್ರಮತಿ ಮಾನವನಿಗೆ ಸಹಜವಾಗಿ ಹೊಳೆಯಬಹುದು. ಈ ಮೂಲಕಾರಣವನ್ನೇ ಆ ತಾತ್ವಿಕರು 'ಪರಮಾತ್ಮ', 'ದೇವರು', 'ಬ್ರಹ್ಮ' . . . ಇತ್ಯಾದಿ ಯಾವದೊಂದು ಹೆಸರಿನಿಂದ ಕರೆದು 'ಪರಮಾತ್ಮನ ಸೃಷ್ಟಿಯ ಅಗಾಧತೆಯನ್ನು ಕೊಂಡಾಡುವದರಲ್ಲಿಯೇ ಜೀವನದ ಪ್ರಾಮುಖ್ಯವಾದ ಮೂಲ್ಯವನ್ನು ಕಲ್ಪಿಸಿಕೊಂಡರು.

ಅನಂತವೆನ್ನಿಸುವಷ್ಟು ನಿಸರ್ಗವು ವೈವಿಧ್ಯಪೂರ್ಣವಾಗಿದ್ದರೂ ಸಹ ಆ ವಿವಿಧತೆಗೊಂದು ನಿಷ್ಕೃಷ್ಟವಾದ ಅರ್ಥವಿವರಣೆಯನ್ನು ಶೋಧಿಸಿಯೇ ತೀರುವೆ ಎಂದು ದೃಢಸಂಕಲ್ಪಮಾಡಿ ಆ ಶೋಧನೆಯನ್ನೇಜೀವನದ ಧ್ಯೇಯವನ್ನಾಗಿಟ್ಟುಕೊಂಡು ಸಾಗಿದ ಉದ್ದಾಮ ತಾತ್ವಿಕನೇ ವಿಜ್ಞಾನಿ. ಸೃಷ್ಟಿಸೌಂದರ್ಯದ ಅನುಭವದಲ್ಲಿ ಸಂತೋಷವಿದೆ ನಿಜ. ಈ ಮಾತನ್ನು ವಿಜ್ಞಾನಿ ಒಪ್ಪುತ್ತಾನೆ. ಆದರೆ ಅದೇ ಜೀವನದ ಸಾರ್ಥಕತೆ ಎಂಬ ಮಾತನ್ನು ಮಾತ್ರ ಅತ ಸರ್ವಥಾ ಒಪ್ಪುವದಿಲ್ಲ. ನಿಸರ್ಗದಲ್ಲಡಕವಾದ 'ಕ್ರಮಬದ್ಧತೆಗೆ' ನಿಷ್ಕೃಷ್ಟವಾದ ಅರ್ಥವಿವರಣೆಯನ್ನು ಶೋಧಿಸುವ ಕಾರ್ಯ ಸುಲಭವಲ್ಲದೆ ಇರಬಹುದು. ಆದರೆ ಅದು ಅಸಾಧ್ಯವೆಂದು ವಿಜ್ಞಾನಿ ಒಪ್ಪುವದಿಲ್ಲ. ಒಬ್ಬ ಮನುಷ್ಯನ ಜೀವಮಾನದಲ್ಲಿ ಅದು ಅಸಾಧ್ಯವಾಗಿ ಪರಿಣಮಿಸಬಹುದು. ವಿಜ್ಞಾನಿಯ ದೃಷ್ಟಿ 'ಸಂಕುಚಿತ ವೈಯಕ್ತಿಕ ದೃಷ್ಟಿ'ಯಲ್ಲ; ಅದು 'ಸಮಗ್ರವಿಶ್ವಸಮನ್ವಯ ದೃಷ್ಟಿ'! ಒಬ್ಬ ಮನುಷ್ಯನ ಜೀವನ ಮುಕ್ತಾಯವಾದ ಮಾತ್ರಕ್ಕೆ ಇಡಿಯ ಮಾನವಜನಾಂಗದ ಜೀವನ ಮುಕ್ತಾಯವಾಗುವದಿಲ್ಲ. ತಲೆತಲಾಂತರಗಳಿಂದ ನಿಸರ್ಗದೊಡನೆ ಅವ್ಯಾಹತ ಹೋರಾಟ ಸಾಗಿಸಿ, ಮಾನವ ಜನಾಂಗಕ್ಕೆ ವಿಶ್ವದ ಒಗಟನ್ನು ಸಂಪೂರ್ಣವಾಗಿ ಬಿಡಿಸುವದು ಸಾಧ್ಯ ಎಂದು ವಿಜ್ಞಾನಿ ಖಂಡಿತ ನಂಬುತ್ತಾನೆ ಮತ್ತು ನಿಸರ್ಗದೊಡನೆ ಸಾಗಿಸುವ ಈ ಅವ್ಯಾಹತ ಹೋರಾಟದಲ್ಲಿಯೇ ಮಾನವ ಜನಾಂಗದ ಉನ್ನತಿ ಅಡಕವಾಗಿದೆ ಎಂದು ಅತ ನಂಬಿದ್ದಾನೆ. ನಿಸರ್ಗದೊಡನೆ ಮಾನವಜನಾಂಗ ಅವ್ಯಾಹತವಾಗಿ ಸಾಗಿಸಿರುವ ಈ ಹೋರಾಟದ ಕತೆಯೇ 'ಮಾನವಜನಾಂಗದ ನಾಗರಿಕತೆಯ ಚರಿತ್ರೆ'ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದರೆ ಈ ಹೋರಾಟದ ಪಥ ಸುಗಮವಲ್ಲ, ಸರಳವೂ ಅಲ್ಲ. ಏರು-ತಗ್ಗುಗಳಿಂದ ಕೂಡಿದ ಪ್ರದೇಶದಲ್ಲಿ ಹರಿಯುವ ನದಿಯ ಪ್ರವಾಹದಂತೆ ಅಂಕುಡೊಂಕಾಗಿ, ಹಿಂದೆ ಮುಂದಾಗಿ, ಮಡುವುಗಟ್ಟಿ, ಒಮ್ಮೊಮ್ಮೆ ನಿಧಾನವಾಗಿ, ಮತ್ತೊಮ್ಮೆ ರಭಸವಾಗಿ ಈ ಮಾರ್ಗ ಇರಬಹುದು. ಈ ತರಹದ ವಿಲಕ್ಷಣ 'ಗತಿ'ಯ ಸಂಪೂರ್ಣ ಲಕ್ಷಣಗಳನ್ನು ಯಾವ ಗಣಿತಶಾಸ್ತ್ರದ ತರ್ಕಶುದ್ಧ ವಿವೇಚನೆಯೂ ಸಂಪೂರ್ಣವಾಗಿ ಗುಣಿಸಲಾರದು. ಈ ತರಹದ 'ಗತಿ'ಯಲ್ಲಿ ಯಾವಾಗಲೂ ಗಮನಕ್ಕೆ ಬರುವ ಒಂದು ಲಕ್ಷಣವೆಂದರೆ 'ಪ್ರಗತಿ'. ಈಗ ಮೂರು ಶತಮಾನಗಳ ವಿಜ್ಞಾನದ ಚರಿತ್ರೆಯಲ್ಲಿ ವಿಜ್ಞಾನವು ಅದೆಷ್ಟು ಮಾನವಸಂಹಾರಕ ಅಸ್ತ್ರಗಳನ್ನು ನಿರ್ಮಿಸಿಲ್ಲ! ಇತ್ತೀಚಿನ ಪರಮಾಣು ಬಾಂಬು (Atom bomb), ಜಲಜನಕ ಬಾಂಬು (Hydrogen bomb)ಗಳ ಸಂಹಾರಕ ಶಕ್ತಿಯ ಬಗ್ಗೆಯಂತೂ ಹೆಚ್ಚಿಗೆ ಹೇಳಲೇಬೇಕಾಗಿಲ್ಲ. ಇವಕ್ಕೆಲ್ಲ ವಿಜ್ಞಾನಿಯ ಉತ್ತರವೇನು? ವಿಜ್ಞಾನಿಯ ಉತ್ತರ ಸ್ಪಷ್ಟವಿದ್ದಷ್ಟೇ, ಕಠೋರವೂ ಇದೆ. ಇಂದು ಮಾನವಜನಾಂಗ ಒಂದಾಗಿಲ್ಲ, ಅದು ವಿವಿಧ ಪಗಂಡಗಳಾಗಿ (ರಾಷ್ಟ್ರಗಳು) ಜೀವಿಸುತ್ತಿದೆ. ಈ ಪಂಗಡಗಳ ನಾಯಕರು ವಿಜ್ಞಾನಿಗಳಲ್ಲ, ರಾಜಕಾರಣಿಗಳು. ಅರ್ಥಾತ್ ವಿಜ್ಞಾನಿಗಳಿಗಿರುವಷ್ಟು 'ವಿಶ್ವಸಮನ್ವಯ ದೃಷ್ಟಿ' ರಾಜಕಾರಣಿಗಳಲ್ಲಿ ಇರುವಂತೆ ತೋರುವದಿಲ್ಲ. 'ದೃಷ್ಟಿ ಸಂಕುಚಿತತನ'ದಿಂದ (ರಾಷ್ಟ್ರದ ಹಿತದ ದೃಷ್ಟಿಯಿಂದ ಎನ್ನಿ!) ವಿಜ್ಞಾನಿಗಳು ಶೋಧಿಸಿದ 'ಸೃಷ್ಟಿಜ್ಞಾನ'ವನ್ನೇ ರಾಜಕಾರಣಿಗಳು 'ವಿಶ್ವಾಮಿತ್ರ ಸೃಷ್ಟಿ'ಯನ್ನು ನಿರ್ಮಿಸುವದರಲ್ಲಿ ಉಪಯೋಗಿಸುತ್ತಾರೆ. ಇದಕ್ಕೆ ವಿಜ್ಞಾನಿಯಾಗಲಿ ವಿಜ್ಞಾನವಾಗಲಿ ಹೊಣೆ ಹೊರುವದು ಸಾಧ್ಯವಿಲ್ಲ. 'ಯಾರಿಗೆ ಗೊತ್ತು, ಚಿಕ್ಕದೊಡ್ಡ ಪ್ರಮಾದಗಳಾಗಿಯೇ ಮಾನವಜನಾಂಗವು 'ಪ್ರಗತಿ' ಹೊಂದುತ್ತಿರಬಾರದೇಕೆ?'—ಒಬ್ಬ ಸಮಾಜವಿಜ್ಞಾನಿಯ ಶಂಕೆ! ದೇವಾಸುರರು ಅಮೃತವನ್ನು ತೆಗೆಯಲು ಸಮುದ್ರಮಥನ ಮಾಡಿದಾಗ್ಗೆ ಕಾಳಕೂಟ ವಿಷವೂ ಹೊರಡಲಿಲ್ಲವೇ? ಘೋರ ವಿಷ ಬರುತ್ತದೆ ಎಂದು ಹೆದರಿದ್ದರೆ ಅಮೃತವೂ ಸಿಕ್ಕುತ್ತಿರಲಿಲ್ಲ. 'ಮಾನವಜನಾಂಗ ಪ್ರವಾಹ'ದ ಇಲ್ಲಿಯವರೆಗಿನ 'ಗತಿ'ಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ 'ಪ್ರಗತಿ' ಲಕ್ಷಣವೊಂದೇ ಸ್ಪಷ್ಟವಾಗಿ ಕಾಣುತ್ತದೆ. 'ಗತಿ'ಯ ಬಗ್ಗೆ ಉಳಿದ ವಿಚಾರಗಳೆಲ್ಲ ಬರಿಯ ಊಹೆ ಅಥವಾ ತರ್ಕ. ಹಾಗಾದರೆ ಈ 'ಪ್ರವಾಹ'ದ ಭವಿಷ್ಯತ್ತಿನ ಗತಿಯ 'ಗತಿ'?—'ಪ್ರಗತಿ'. ಇದು ವಿಜ್ಞಾನಿಯ ನಂಬುಗೆ, ಶ್ರದ್ಧೆ. ಉಳಿದ ವಿವರಗಳು?—ಗಣಿತವಿಜ್ಞಾನಿ ನಿಷ್ಕೃಷ್ಟವಾಗಿ ಗುಣಿಸಲಾರ. ಅದರೂ ಅತ್ಯಂತ ಸಂಭಾವನೀಯ ವಿವರಗಳನ್ನು ಊಹಿಸಲು ಶಕ್ತನಾಗುತ್ತಿದ್ದಾನೆ (Statistics).

ನಿಸರ್ಗದೊಡನೆ ಎಡಬಿಡದೆ ಹೋರಾಟ ಸಾಗಿಸುವ ವಿಜ್ಞಾನಿಯ ಸಾಧನಗಳೇನು? ಜ್ಞಾನೇಂದ್ರಿಯಗಳು (Observation), ಕರ್ಮೇಂದ್ರಿಯಗಳು (Experiment) ಹಾಗೂ ಬುದ್ಧಿ ಶಕ್ತಿ (Mathematical corelating capacity). 'ಇಂದ್ರಿಯಾತೀತವಾದದ್ದು ಯಾವದೂ ನಿಸರ್ಗದಲ್ಲಿ ಇಲ್ಲವೇ?' ಈ ಪ್ರಶ್ನೆಗೆ ವಿಜ್ಞಾನಿ 'ಖಂಡಿತವಾಗಿ ಇಲ್ಲ' ಎಂದು ಹೇಳಲಾರ. 'ಇರಬಹುದು. ಆದರೆ ಇಂದು ಜ್ಞಾನೇಂದ್ರಿಯಗಳಿಗೆ ನಿಲುಕದ್ದು ನಾಳೆ ನಿಲುಕಬಹುದು. ದೂರದರ್ಶಕ (Telescope) ನಿರ್ಮಿತಿಯ ಮೊದಲು ದೂರದ ಗ್ರಹ, ಉಪಗ್ರಹ, ನಕ್ಷತ್ರಗಳೆಲ್ಲ ಜ್ಞಾನೇಂದ್ರಿಯಕ್ಕೆ ನಿಲುಕದ ವಸ್ತುಗಳಾಗಿದ್ದವು. ಆದರೆ ದೂರದರ್ಶಕ ನಿರ್ಮಿತಿಯಿಂದ ನಮ್ಮ ಜ್ಞಾನೇಂದ್ರಿಯದ ಸಾಮರ್ಥ್ಯ ಬೆಳೆದು ಆ ದೂರದ ವಸ್ತುಗಳೆಲ್ಲ ಈಗ ನಮ್ಮ ಜ್ಞಾನೇಂದ್ರಿಯಗಳಿಗೆ ನಿಲುಕುವಂತಹವಾಗಿವೆ. ಅದರಂತೆ ಅತ್ಯಂತ ಸೂಕ್ಷ್ಮವಾದ ಜೀವಾಣುಗಳು ಸೂಕ್ಷ್ಮದರ್ಶಕ (Microscope)ದ ನಿರ್ಮಿತಿಯ ಮೂಲಕ ನಮ್ಮ ಜ್ಞಾನೇಂದ್ರಿಯದ ಅವಲೋಕನೆಗೆ ಒಳಪಟ್ಟವೆ. ಮಾನವ ದೇಹದಲ್ಲಿರುವ ಜ್ಞಾನೇಂದ್ರಿಯಗಳ ಸಾಮರ್ಥ್ಯಕ್ಕೆ ಮಿತಿ ಇದೆ—ಅದಕ್ಕೆ ಕಾರಣವೂ ಇದೆ. ಆದರೆ ಆ ಮಿತಿಯ ಎಲ್ಲೆಗಳನ್ನು ವಿಜ್ಞಾನಿಯು ತನ್ನ ಯಂತ್ರೋಪಕರಣಗಳ ಸಹಾಯದಿಂದ ಅನಂತವಾಗಿ ವಿಸ್ತರಿಸಲಾರನೇಕೆ?—ಇದು ವಿಜ್ಞಾನಿಯ ಮರುಸವಾಲು. ಮಾನವಜನಾಂಗದ ಇಂದಿನ ಪೀಳಿಗೆ ಸಾಧಿಸದ್ದನ್ನು ಮುಂದಿನ ಪೀಳಿಗೆ ಸಾಧಿಸಬಹುದು. ವಿಜ್ಞಾನಿ ಜೀವನದಲ್ಲಿ ಅತ್ಯಂತ ಆಶಾವಾದಿ. ಜೊತೆಗೆ ನಿಸರ್ಗದೊಡನೆ ಅದರ ಗೌಪ್ಯಗಳನ್ನು ಹೊರಗೆಡಹುವ ಹೋರಾಟದಲ್ಲಿ ಆಗುವ ನಿಸರ್ಗದ 'ವಿರಾಟ ದರ್ಶನ'ದ ಅನುಭವಾನಂದ ಸಾಮಾನ್ಯ ಸೃಷ್ಟಿಸೌಂದರ್ಯದ ಅನುಭವಾನಂದಕ್ಕಿಂತಲೂ ಉಚ್ಚಮಟ್ಟದ್ದು ಎಂಬುದನ್ನು ಆತ ಸಾಪೇಕ್ಷ ಅನುಭವದಿಂದ ಕಂಡುಕೊಂಡಿದ್ದಾನೆ. ಒಂದರಲ್ಲಿ ಬರಿಯ ಸೌಂದರ್ಯದರ್ಶನವಿದ್ದರೆ, ಇನ್ನೊಂದರಲ್ಲಿ 'ಸತ್ಯ-ಸೌಂದರ್ಯ'ಗಳ ಏಕರೂಪ ದರ್ಶನ ಸಾಧ್ಯವಿದೆ.

ಇನ್ನೂ ಒಂದು ಪ್ರಶ್ನೆ ವಿಜ್ಞಾನಿಗೆ ಎದುರಾಗುತ್ತದೆ? 'ಮಾನವನ ಬುದ್ಧಿಸಾಮರ್ಥ್ಯಕ್ಕೆ ಮಿತಿ ಇಲ್ಲವೆ? ಮಾನವನ ಬುದ್ಧಿಶಕ್ತಿಗೆ ನಿಸರ್ಗದ ಸಕಲ ವ್ಯಾಪಾರಗಳೂ ನಿಲುಕಬಲ್ಲುವೇ?' ಈ ಪ್ರಶ್ನೆಗೂ ವಿಜ್ಞಾನಿಯ ಉತ್ತರ ಅದೇ ಬಗೆಯದು. 'ಒಂದು ವ್ಯಕ್ತಿಯ ಬುದ್ಧಿಸಾಮರ್ಥ್ಯಕ್ಕೆ ಮಿತಿಯಿದೆ. ಆದರೆ ಮಾನವಜನಾಂಗದ ಬುದ್ಧಿಸಾಮರ್ಥ್ಯಕ್ಕೆ ಮಿತಿಯಿಲ್ಲ. ಅದು ಸಂಚಯ ಸ್ವರೂಪದ್ದು. ಅದು ಅನಂತವಾಗಿ ವರ್ಧಿಸುತ್ತಲೇ ಹೋಗುವದು.'

ವಿಜ್ಞಾನಿಗೆ ತನ್ನದೇ ಆದ ಕಾರ್ಯಪದ್ಧತಿಯೂ ಇದೆ. ಮೊದಲು ಜ್ಞಾನೇಂದ್ರಿಯಗಳಿಂದ ಸೃಷ್ಟ ವಸ್ತುಗಳ ಬಗ್ಗೆ ಹಾಗೂ ಸೃಷ್ಟಿವ್ಯಾಪಾರಗಳ ಬಗ್ಗೆ ಕೂಲಂಕಷವಾದ ವಿವರಗಳನ್ನು ಸಂಗ್ರಹಿಸುವದು. ಅವಶ್ಯ ಬಿದ್ದರೆ ಪ್ರಯೋಗಶಾಲೆಯಲ್ಲಿ ವಿಶಿಷ್ಟ ವಾತಾವರಣವನ್ನು ಕಲ್ಪಿಸಿ ಅವೇ ಸೃಷ್ಟಿವ್ಯಾಪಾರದ ಕ್ರಿಯೆಗಳನ್ನು ಇನ್ನಿಷ್ಟು ಸೂಕ್ಷ್ಮವಾಗಿ ನಿರೀಕ್ಷಿಸಿ ಇನ್ನೂ ಹೆಚ್ಚು ನಿಸ್ಪೃಷ್ಟವಾದ ವಿವರಗಳನ್ನು ಸಂಗ್ರಹಿಸುವದು. ಆ ಬಳಿಕ ಸಂಗ್ರಹವಾದ ವಿವರಗಳನ್ನು ಗಣಿತಶಾಸ್ತ್ರದ ಬಲದಿಂದ ಒಂದು ಸಾಮಾನ್ಯ ನಿಯಮಕ್ಕನುಸಾರವಾಗಿ ಸಮನ್ವಯಗೊಳ್ಳುವಂತೆ ಮಾಡಲು ಸಾಧ್ಯವೇ ಎಂಬುದನ್ನು ಪರೀಕ್ಷಿಸುವದು. ಸಾಧ್ಯವಾದ ಪಕ್ಷದಲ್ಲಿ ಆ 'ನಿಯಮ'ವು ಎಷ್ಟರಮಟ್ಟಿಗೆ 'ವಿಶ್ವವ್ಯಾಪಿ'ಯಾಗಿದೆ ಎಂಬುದನ್ನು ಒರೆಗೆ ಹಚ್ಚಲು ಮತ್ತೆ ಹೊಸ ಪ್ರಯೋಗಗಳನ್ನು ಕೈಕೊಂಡು ಹೊಸ ವಿವರಗಳನ್ನು ಕಲೆಹಾಕುತ್ತ ಹೋಗುವದು. ಹೀಗೆ ಪುನಃ ಸಂಗ್ರಹವಾದ ಹೊಸ ವಿವರಗಳ ಬೆಳಕಿನಲ್ಲಿ ಹಳೆಯ ನಿಯಮವನ್ನು ವಿಸ್ತರಿಸಿ (ಅವಶ್ಯಬಿದ್ದರೆ ಮೂಲಭೂತ ಮಾರ್ಪಾಟುಗೊಳಿಸಿ) ಹೆಚ್ಚು 'ವಿಶ್ವವ್ಯಾಪಿ' ನಿಯಮವನ್ನು ಸ್ಥಾಪಿಸುವದು. ಈ ಪ್ರಕಾರ ಈ ಕಾರ್ಯ ಕೊನೆಯಿಲ್ಲದೆ ಮುಂದುವರೆಯುತ್ತದೆ. ಈ ವಿಷಯವಾಗಿ ಬರೆಯುತ್ತ ಇಂದಿನ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬರಾದ ಡಾ. ಐನಸ್ಟೀನರು "…. The grand aim of all science is to cover the greatest number of empirical facts by logical deduction from the smaller and number of hypotheses or axioms' ಎಂದು ಒಂದೆಡೆ ಹೇಳಿದ್ದಾರೆ.

ನಿಸರ್ಗದ ಕೂಲಂಕಷ ಪರಿಶೀಲನೆ ಸಾಗಿದಂತೆ ಕಾರ್ಯಕ್ಷೇತ್ರವು ಮಹಾಸಾಗರದಂತೆ ವಿಶಾಲವಾಗಿ ಬೆಳೆಯುತ್ತ ಬಂದು ಅನುಕೂಲಕ್ಕಾಗಿ ವಿಜ್ಞಾನವು ಅನೇಕ ಶಾಖೆ, ಉಪಶಾಖೆಗಳಾಗಿ ವಿಂಗಡಿಸಲ್ಪಟ್ಟಿತು. ಇದು ಇಷ್ಟವಾಗಿದ್ದಷ್ಟೇ ಅನಿವಾರ್ಯವೂ ಆಗಿದ್ದಿತು. 'ವಿಜ್ಞಾನ' ಕೆಲವು ವ್ಯಕ್ತಿಗಳ ಸೊತ್ತಲ್ಲ. ಅದು ಇಡಿಯ ಮಾನವ ಜನಾಂಗದ ಹೋರಾಟದ ಕುರುಹು. ಈ ಹೋರಾಟದಲ್ಲಿ ಲೆಕ್ಕವಿಲ್ಲದಷ್ಟು ಜನರು ಭಾಗವಹಿಸಬೇಕಾದುದು ಅವಶ್ಯಕವೇ ಸರಿ. ಅನೇಕರ ಸಹಕಾರ ಯತ್ನದಿಂದಲ್ಲದೆ ಈ ಹೋರಾಟವು ಯಶಸ್ವಿಯಾಗಿ ಕೊನೆಗೊಳ್ಳಲಾರದು. ವಿಜ್ಞಾನದ ಹೊಸ ಹೊಸ ಶಾಖೋಪಶಾಖೆಗಳು ಇನ್ನೂ ಅಸ್ತಿತ್ವದಲ್ಲಿ ಬಂದೇ ಬರುತ್ತಿವೆ. ಇಂದು ವಿಜ್ಞಾನವೊಂದು ಮಹಾವೃಕ್ಷವಾಗಿ ನಿಂತಿದೆ.

ಸೃಷ್ಟಿಯಲ್ಲಿ ನಾವು ದಿನಾಲೂ ಅನೇಕ ಬಗೆಯ ಪದಾರ್ಥಗಳನ್ನು ಕಾಣುತ್ತೇವೆ. ಮನುಷ್ಯನನ್ನು ಮೊದಲುಮಾಡಿಕೊಂಡು ಅನೇಕ ಪ್ರಾಣಿಗಳು, ಸಸ್ಯಗಳು, ಕ್ರಿಮಿಕೀಟಕಗಳು ಖನಿಜಗಳು, ಕಲ್ಲು, ಮಣ್ಣು, ನೀರು. . . . ! ಸೃಷ್ಟವಸ್ತುಗಳಿಗೆ ಕೊನೆಯುಂಟೆ! ಅನೇಕ ಪದಾರ್ಥಗಳ ಗುಣಧರ್ಮಗಳೂ ನಮಗೆ ಪರಿಚಿತವಾಗಿವೆ. ಸಕ್ಕರೆ ಸಿಹಿಯಾಗಿದೆ, ಮೆಣಸು ಖಾರವಾಗಿದೆ, ಬಂಗಾರ ಹಳದಿ ವರ್ಣದಿಂದ ಹೊಳೆಯುತ್ತದೆ, ತಾಮ್ರ ಕೆಂಪು ಬಣ್ಣದಿಂದ ಹೊಳೆಯುತ್ತದೆ, ಕೆಲವು ಕಲ್ಲುಗಳು ತರತರದ ಬಣ್ಣದವುಗಳಾಗಿವೆ, ಇನ್ನು ಕೆಲವು ವರ್ಣರಹಿತವಾದವುಗಳು. ಕೆಲವು ಹೂವುಗಳ ಬಣ್ಣ ಚಿತ್ತಾಕರ್ಷಕವಾಗಿದ್ದರೆ, ಇನ್ನು ಕೆಲವು ಹೂವುಗಳ ವಾಸನೆ ಮನಸನ್ನು ಪ್ರಸನ್ನವಾಗಿಸುತ್ತದೆ. ಮತ್ತೆ ಕೆಲವು ಹೂಗಳ ವಾಸನೆಯಿಂದ ದೂರ ಇರಬೇಕೆಂದೆನಿಸುತ್ತದೆ. ಬಂಗಾರ, ಬೆಳ್ಳಿ, ತಾಮ್ರ, ಕಬ್ಬಿಣ ಇವು ಕೈಯಲ್ಲಿ ಜಡವೆನಿಸಿದರೆ ಇದ್ದಲು, ಗಂಧಕ ಮೊದಲಾದ ವಸ್ತುಗಳು ತೀರ ಹಗುರೆನಿಸುವವು….ಇತ್ಯಾದಿ….ಇತ್ಯಾದಿ… .

ಈ ವಸ್ತುಗಳ ಗುಣಧರ್ಮಗಳು ಇಷ್ಟು ಬೇರೆ ಬೇರೆ ತರಹ ಏಕೆ ಇರಬೇಕು? ಸಕ್ಕರೆ ಸಿಹಿ ಏಕೆ? ಹೂವುಗಳಿಗೆ ಇಷ್ಟು ಬಗೆಯ ಬಣ್ಣ, ಇಷ್ಟು ಬಗೆಯ ವಾಸನೆ ಏಕೆ? ಸಾಮಾನ್ಯ ಮನುಷ್ಯನಿಗೆ ಈ ಪ್ರಶ್ನೆಗಳೆಲ್ಲ ವಿಚಿತ್ರವೆನಿಸುವದರಲ್ಲಿ ಆಶ್ಚರ್ಯವೇನಿಲ್ಲ. ಹುಚ್ಚುತನದ್ದೂ ಎನ್ನಿಸಬಹುದು. 'ಸಕ್ಕರೆ ಸಿಹಿ ಏಕೆ ಎಂದರೆ ಏನು ತಾನೆ ಹೇಳಬೇಕು? ದೇವರು ಆ ರೀತಿ ಅದನ್ನು ಹುಟ್ಟಿಸಿದ್ದಾನೆ; ಅದಕ್ಕೆ ಅದು ಹಾಗೆ ಇದೆ' ಎಂದು ಇನ್ನು ಕೆಲವರು ಉತ್ತರಿಸಬಹುದು. ಈ ಬಗೆಯ ಉತ್ತರವನ್ನು ಎಲ್ಲ ಪ್ರಶ್ನೆಗಳಿಗೂ ಕೊಡಬಹುದು. ಆದರೆ ಅದು ವಿಜ್ಞಾನಿಗೆ 'ಉತ್ತರ' ವೆನಿಸಲಾರದು.

ಈ ಹಾಗೂ ಇಂತಹ ಪ್ರಶ್ನೆಗಳಿಗೆ ಉತ್ತರ ಶೋಧಿಸುವದರಲ್ಲಿ ಮಗ್ನನಾಗಿರುವ—ರಸಾಯನ ಶಾಸ್ತ್ರಜ್ಞ. ವಿವಿಧ ವಸ್ತುಗಳ ಗುಣಧರ್ಮಗಳಿಗೆ ಸರಿಯಾದ ವಿವರಣೆ ಬೇಕಿದ್ದರೆ ಆ ವಸ್ತುಗಳ ಮೂಲ ಸ್ವರೂಪದ ಸರಿಯಾದ ಕಲ್ಪನೆ ಅವಶ್ಯವಾಗಿ ಬೇಕು ಎಂಬುದು ರಸಾಯನ ಶಾಸ್ತ್ರಜ್ಞನ ಅನುಭವಜನಿತ ಮಾತು. 'ಸಕ್ಕರೆ ಸಿಹಿ ಏಕೆ' ಎಂಬುದಕ್ಕೆ ವಿವರಣೆ ಬೇಕಾದರೆ 'ಸಕ್ಕರೆ ಈ ವಸ್ತುವಿನ ಮೂಲ ಸ್ವರೂಪವೇನು ಎಂಬುದು ತಿಳಿಯಬೇಕಾದ ವಿಷಯ. ಸೃಷ್ಟಿಯಲ್ಲಿಯ ಹೂವುಗಳಿಗೆ ಇಷ್ಟು ಬಗೆಯ ಬಣ್ಣ, ಇಷ್ಟು ಬಗೆಯ ವಾಸನೆ ಏಕೆ ಎಂಬುದು ತಿಳಿಯಬೇಕಾದರೆ ಆ ಬಣ್ಣ ವಾಸನೆಗಳಿಗೆ ಕಾರಣೀಭೂತವಾದ ಹೂವಿನಲ್ಲಡಗಿದ ವಸ್ತುಗಳ ಸ್ವರೂಪಜ್ಞಾನ ಅವಶ್ಯವಾದುದು. ಹಾಗಾದರೆ ರಸಾಯನ ಶಾಸ್ತ್ರಜ್ಞನಿಗೆ ಈ ಶೋಧನೆಯಲ್ಲಿ ಯಶ ದೊರಕಿದೆಯೆ? ಎಂದು ಕೇಳಬಹುದು. ಪದಾರ್ಥಗಳ ಮೂಲ ಸ್ವರೂಪ ದರ್ಶನ ಆತನಿಗಾಗಿದೆಯೆ? ಬಹಳ ಮಟ್ಟಿಗೆ 'ಹೌದು' ಎಂದೇ ಉತ್ತರ ಹೇಳಬೇಕಾಗುತ್ತದೆ. ರಸಾಯನಶಾಸ್ತ್ರವೂ ವಿಜ್ಞಾನದ ಒಂದು ಬೇರೆ ಉಪಶಾಖೆಯಾಗಿ ಪರಿಣಮಿಸಿದ್ದು ೩೦೦ ವರುಷಗಳ ಹಿಂದೆ ಮಾತ್ರ. ಇಷ್ಟು ಅಲ್ಪಾವಧಿಯಲ್ಲಿಯೇ ರಸಾಯನಶಾಸ್ತ್ರಜ್ಞ ಕಲ್ಪನಾತೀತ ಯಶಸ್ಸನ್ನು ಸಂಪಾದಿಸಿದ್ದಾನೆ. ಅಂತೆಯೇ ಆತ ಇಂದು ತನ್ನ ಪ್ರಯೋಗಶಾಲೆಯಲ್ಲಿ ಸಕ್ಕರೆಗಿಂತಲೂ ಸಾವಿರಾರುಪಟ್ಟು ಸಿಹಿಯಾದ ಅನೇಕ ವಸ್ತುಗಳನ್ನು ನಿರ್ಮಿಸಿದ್ದಾನೆ; ಹೂವುಗಳ

ವೈವಿಧ್ಯತೆಯನ್ನು ಮೀರಿಸುವಷ್ಟು ವಿವಿಧ ಬಣ್ಣಗಳನ್ನೂ ವಾಸನೆಗಳನ್ನೂ ತಯಾರಿಸಿದ್ದಾನೆ. ರಸಾಯನ ಶಾಸ್ತ್ರಜ್ಞನನ್ನು ಇಂದು ಚಕಿತಗೊಳಿಸುವದು ನಿಸರ್ಗದ ವೈವಿಧ್ಯತೆ ಅಲ್ಲ—ಆದರೆ ನಿಸರ್ಗವು ಇಷ್ಟು ಅಲ್ಪ ವೈವಿಧ್ಯತೆಯನ್ನು ಮಾತ್ರ ಹೊಂದಿದೆಯಲ್ಲ, ಇದಕ್ಕೂ ಅದೆಷ್ಟೋ ಪಾಲು ಹೆಚ್ಚು ಅದು ವೈವಿಧ್ಯತೆಯನ್ನು ಹೊಂದಬಹುದಾಗಿತ್ತಲ್ಲ ಎಂಬ ವಿಷಯ !


ಸೃಷ್ಟಿಯಲ್ಲಿ ಕಂಡುಬರುವ ಸಕಲ ಪದಾರ್ಥಗಳಿಗೂ ಮೂಲವಾಗಿರುವ ವಸ್ತುಗಳು ೯೨ ಮಾತ್ರ ಎಂದು ರಸಾಯನ ಶಾಸ್ತ್ರಜ್ಞ ಕಂಡು ಹಿಡಿದಿರುವ. ಇವಕ್ಕೆ ಆತ ಮೂಲವಸ್ತುಗಳು (Elements) ಎಂದು ಕರೆದಿರುವನು. ಈ ೯೨ ವಸ್ತುಗಳು ತಮ್ಮೊಳಗೆ ವಿವಿಧ ರೀತಿಯಲ್ಲಿ ರಸಾಯನ ಸಂಯೋಗ ಹೊಂದಿ ಸೃಷ್ಟಿಯಲ್ಲಿಯ ಎಲ್ಲ ವಸ್ತುಗಳನ್ನೂ ನಿರ್ಮಾಣಮಾಡಿರುವವು. ಈ ಸಂಗತಿ ನಾವು ನಂಬುಗೆ ಇಡಲೇಬೇಕಾದುದು. ಏಕೆಂದರೆ ರಸಾಯನ ಶಾಸ್ತ್ರಜ್ಞ ಈ ೯೨ ವಸ್ತುಗಳನ್ನು ಮಾತ್ರ ಉಪಯೋಗಿಸಿಕೊಂಡು ಸೃಷ್ಟಿಯೊಳಗಿನ ಯಾವದೇ ಪದಾರ್ಥವನ್ನು ತನ್ನ ಪ್ರಯೋಗಶಾಲೆಯಲ್ಲಿ ನಿರ್ಮಿಸಿ ತೋರಿಸಬಲ್ಲವನಾಗಿದ್ದಾನೆ. ೯೨ ಮೂಲ ವಸ್ತುಗಳಿಂದ ಮಾತ್ರ ಸೃಷ್ಟಿಯಲ್ಲಿ ಕಾಣುವ ಕೋಟಿಗಟ್ಟಲೆ ವಿವಿಧ ವಸ್ತುಗಳೆಲ್ಲ ನಿರ್ಮಾಣವಾಗಿರುವದು ಸಾಧ್ಯವೇ ? ಎಂದು ಕೆಲವರಿಗೆ ಸಂದೇಹ ಎನಿಸಬಹುದು. ಆದರೆ ಈ ವಿಷಯ ಗಣಿತಶಾಸ್ತ್ರಜ್ಞನನ್ನು ಕೇಳಿ. ಆತ ತನ್ನ ಲೆಕ್ಕಾಚಾರ (Permutations, combinations) ಉಪಯೋಗಿಸಿ ಈ ೯೨ ಮೂಲ ವಸ್ತುಗಳಿಂದಲೇ ಈಗ ಸೃಷ್ಟಿಯಲ್ಲಿ ನಮಗೆ ದೊರಕಿರುವ ವಸ್ತುಗಳ ಒಟ್ಟು ಮೊತ್ತದ ಕನಿಷ್ಠ ನೂರ್ಮಡಿಯಷ್ಟಾದರೂ ವಸ್ತುಗಳ ನಿರ್ಮಿತಿ ಸಹಜ ಸಾಧ್ಯವಿದೆ ಎಂದು ಹೇಳುತ್ತಾನೆ. ಅಲ್ಲಿಯೂ ಸಂದೇಹಕ್ಕೆ ಆಸ್ಪದವಿಲ್ಲ.


ಹಾಗಾದರೆ ರಸಾಯನ ಶಾಸ್ತ್ರಜ್ಞನಿಗೆ ನಿಸರ್ಗದ 'ಸೃಷ್ಟಿಕೌಶಲ್ಯ'ದ ಗುಟ್ಟಿನ ಕೀಲಿಕೈ ದೊರಕಿದಂತಾಗಿದೆಯೇ ಎಂದು ಕೇಳಿದರೆ 'ಹೌದು' ಎಂದೇ ಪುನಃ ಹೇಳಬೇಕಾಗುವದು. ಅಂತೆಯೇ ಆತ ಇಂದು 'ಹೊಸವಸ್ತುಗಳನ್ನು ನಿರ್ಮಿಸುವ ಕಾರ್ಯದಲ್ಲಿ ನಿಸರ್ಗದೊಂದಿಗೇ ಪೈಪೋಟಿಗೆ ನಿಲ್ಲಲು ಶಕ್ತನಾಗಿರುವ. ಸಾಮಾನ್ಯವಾಗಿ ಸೃಷ್ಟಿಯಲ್ಲಿ ಕಂಡುಬಾರದ ಅನೇಕ ಹೊಸ ವಸ್ತುಗಳ ನಿರ್ಮಿತಿ ಜಗತ್ತಿನ ವಿವಿಧ ಭಾಗದಲ್ಲಿರುವ ರಾಸಾಯನಿಕ ಪ್ರಯೋಗಶಾಲೆಗಳಲ್ಲಿ ದಿನವೂ ಸಾಗುತ್ತಿದೆ. ಈ ಹೊಸವಸ್ತುಗಳಲ್ಲಿ ಅನೇಕವು ಮಾನವಜನಾಂಗಕ್ಕೆ ತುಂಬಾ ಸಹಾಯಕಾರಿಯಾಗಿವೆ; ಕೆಲವು ಮಾನವಸಂಹಾರಕ ವಸ್ತುಗಳೂ ಇವೆ. ಇವುಗಳಲ್ಲಿ ಮಾನವಜನಾಂಗವನ್ನು ಅನೇಕ ಘೋರ ರೋಗಗಳಿಂದ ರಕ್ಷಿಸುವ ಔಷಧಿಗಳೂ ಇವೆ, ಒಂದೇಟಿಗೆ ಸಾವಿರಾರು ಜನರನ್ನು ಬಲಿ ತೆಗೆದುಕೊಳ್ಳುವ ಶಕ್ತಿಯುಳ್ಳ ವಿಷ ಪದಾರ್ಥಗಳೂ ಸ್ಫೋಟಕ ದ್ರವ್ಯಗಳೂ ಇವೆ. ಹೊಸ ವಸ್ತುಗಳನ್ನು ನಿರ್ಮಿಸಿ ಯಾವ ವಸ್ತುವಿನ ಗುಣಧರ್ಮ ಹೇಗೆ ಇದೆ ಎಂಬುದನ್ನು ಕೂಲಂಕಷವಾಗಿ ವಿಮರ್ಶಿಸುವದು ಮಾತ್ರ ರಸಾಯನಶಾಸ್ತ್ರಜ್ಞನ ಕಾರ್ಯ. ಮಾನವಜನಾಂಗಕ್ಕೆ ಹಿತಕಾರಿಯಾದ ವಸ್ತುಗಳನ್ನಷ್ಟೇ ಸಾಕಷ್ಟು ಪ್ರಮಾಣದಲ್ಲಿ ನಿರ್ಮಿಸಿಕೊಂಡು, ಅಹಿತಕಾರಿಯಾದ ವಸ್ತುಗಳ ಉತ್ಪಾದನೆಗೆ ತಡೆ ಹಾಕುವ ಕಾರ್ಯ ರಸಾಯನ ಶಾಸ್ತ್ರಜ್ಞನ ಕಾರ್ಯಕ್ಷೇತ್ರಕ್ಕೆ ಹೊರತಾದುದು. ಅದು ಇಡಿಯ ಮಾನವಜನಾಂಗಕ್ಕೇ ಸೇರಿದ್ದು.

ಸೃಷ್ಟವಸ್ತುಗಳ ಮೂಲಸ್ವರೂಪದ ಸರಿಯಾದ ಜ್ಞಾನವೇ ರಸಾಯನಶಾಸ್ತ್ರಜ್ಞನಿಗೆ ಇಂತಹ ಮಹಾಸಾಮರ್ಥ್ಯವನ್ನು ಒದಗಿಸಿಕೊಟ್ಟಿದೆ. ವಸ್ತುಗಳ ಮೂಲಸ್ವರೂಪದ ಬಗ್ಗೆ ರಸಾಯನಶಾಸ್ತ್ರಜ್ಞನ ಕಲ್ಪನೆಗಳು ಯಾರಿಗೂ ಅಲ್ಪಶ್ರಮ ವಹಿಸಿದರೆ ಸಹಜವಾಗಿ ಅರ್ಥವಾಗುವಂತಿವೆ.

ಒಂದು ಮೂಲವಸ್ತುವನ್ನು ಸಣ್ಣ ಸಣ್ಣ ಚೂರಾಗಿ ವಿಭಾಗಿಸುತ್ತ ಹೋದೆವೆಂದು ಕಲ್ಪಿಸುವಾ. ಕಟ್ಟಕಡೆಗೆ ನಾವು ಅತ್ಯಂತ ಸೂಕ್ಷ್ಮ ಕಣರೂಪಿಯಾದ ಆ ಮೂಲ ವಸ್ತುವನ್ನು ಇನ್ನೂ ಮುಂದಕ್ಕೆ ವಿಭಾಜಿಸುವದು ಅಸಾಧ್ಯವಾಗುತ್ತದೆ. ಆ ಅತ್ಯಂತ ಸೂಕ್ಷ್ಮ ಕಣಕ್ಕೆ ಆಯಾ ಮೂಲ ವಸ್ತುವಿನ 'ಪರಮಾಣು' (Atom) ಎಂಬ ಹೆಸರು. ಅಂದರೆ ಸೃಷ್ಟಿಯಲ್ಲಿ ಒಟ್ಟು ೯೨ ಮೂಲ ವಸ್ತುಗಳಿರುವದರಿಂದ ೯೨ ಬಗೆಯ ಬೇರೆ ಬೇರೆ ಪರಮಾಣುಗಳಿವೆ ಎಂದಂತಾಯಿತು. ಈ ಪರಮಾಣುಗಳೇ ರಸಾಯನ ಕ್ರಿಯೆಯ ಕೊನೆಯ ಮೆಟ್ಟಲು. ಈ ಪರಮಾಣುಗಳನ್ನು ಯಾವದೇ ರೀತಿಯಿಂದ ವಿಭಾಜಿಸುವದೂ ಸಾಧ್ಯವಿಲ್ಲ ಹಾಗೂ ನಾಶಪಡಿಸುವದೂ ಸಾಧ್ಯವಿಲ್ಲ. ರಸಾಯನ ಕ್ರಿಯೆಯಲ್ಲಿ ಈ ಪರಮಾಣುಗಳು — ಒಂದೇ ಮೂಲವಸ್ತುವಿನವಾಗಲಿ ಅಥವಾ ಬೇರೆ ಬೇರೆ ಮೂಲವಸ್ತುವಿನವಾಗಲಿ—ವಿಶಿಷ್ಟ ಸಂಖ್ಯೆಯಲ್ಲಿ ಒಟ್ಟು ಸೇರಿ ಒಂದು ವಿಶಿಷ್ಟತರದ ವ್ಯೂಹವನ್ನು ರಚಿಸಿ 'ಅಣು'ಗಳ (molecules) ರಚನೆ ಮಾಡುತ್ತವೆ. ಈ ಅಣುಗಳೇ ಹೊಸ ಹೊಸ ಸೃಷ್ಟವಸ್ತುಗಳ ಅಡಿಗಲ್ಲಿದ್ದಂತೆ. ಎಷ್ಟು ಹೊಸ ಬಗೆಯ 'ಅಣು'ಗಳ ವ್ಯೂಹ ರಚನೆ ಸಾಧ್ಯವೊ ಅಷ್ಟು ಬಗೆಯ ಹೊಸ ವಸ್ತುಗಳನ್ನು ಸೃಷ್ಟಿಸುವದು ಸಾಧ್ಯವಿದೆ. ಅದ್ದರಿಂದ ಈ ಅಣುಗಳ 'ಸಂರಚನೆ'—ಅಂದರೆ ಒಂದು ಅಣುವಿನಲ್ಲಿ ಯಾವ ಯಾವ ಮೂಲವಸ್ತುವಿನ ಎಷ್ಟೆಷ್ಟು ಪರಮಾಣುಗಳು ಹೇಗೆ ಹೇಗೆ ಸೇರಿಕೊಂಡು ವ್ಯೂಹ ರಚಿಸಿವೆ—ಎಂಬುದನ್ನು ಅರಿತುಕೊಳ್ಳುವದೇ ವಸ್ತುಗಳ ಮೂಲಸ್ವರೂಪ ಜ್ಞಾನಕ್ಕೆ ತಳಹದಿ. ಒಮ್ಮೆ 'ಅಣು'ಗಳ ವ್ಯೂಹ ರಚನೆಯಲ್ಲಿ ಪರಮಾಣುಗಳು ಅನುಸರಿಸುವ ನಿಯಮಗಳನ್ನು ಕಂಡುಹಿಡಿದರೆ ಸಾಕು, ಆ ನಿಯಮಗಳನ್ನೇ ಉಪಯೋಗಿಸಿಕೊಂಡು ನಮಗೆ ಬೇಕಾದ ಹೊಸ ಅಣುಗಳನ್ನು ಸೃಷ್ಟಿಸಿಕೊಳ್ಳುವುದೇನೂ ಮಹಾಪ್ರಯಾಸಕರವಲ್ಲ. ಒಂದು ಉದಾಹರಣೆಯಿಂದ ಈ ವಿಷಯವನ್ನು ಹೆಚ್ಚು ಸ್ಪಷ್ಟಗೊಳಿಸಬಹುದು.

ಕಲ್ಲಿದ್ದಲು ಗಣಿಗಳಲ್ಲಿ ಆಗಾಗ್ಗೆ ಸಂಭವಿಸುವ ಸ್ಫೋಟಗಳಿಗೆ ಕಾರಣೀಭೂತವಾದ 'ಮಿಥೇನ್' (Methane) ಎಂಬ ಅನಿಲವನ್ನು ತೆಗೆದುಕೊಳ್ಳೋಣ. ಈ ಅನಿಲ ಮೂಲವಸ್ತುವಲ್ಲ. ಇದು ಕಾರ್ಬನ್ (ಅಂಗಾರ) ಹಾಗೂ ಹೈಡ್ರೋಜನ್ (ಜಲಜನಕ) ಎಂಬ ಎರಡು ಮೂಲವಸ್ತುಗಳು ಸೇರಿ ಆದ ಒಂದು ಸಂಯೋಗ (Compound). ಇದರ ಒಂದು ಅಣುವಿನಲ್ಲಿ ಕಾರ್ಬನ್ನಿನ ೧ ಪರಮಾಣುವೂ ಹೈಡ್ರೋಜನ್ನಿನ ೪ ಪರಮಾಣುಗಳೂ ಸೇರಿ ವ್ಯೂಹ ರಚಿಸಿವೆ. ಈ ಅಣುವಿನ ಸಂರಚನೆಯನ್ನು ಸೂತ್ರ ರೂಪವಾಗಿ ಬದಿಗೆ ತೋರಿಸಿದಂತೆ ಬರೆಯಬಹುದು. ಈ ಸೂತ್ರದಲ್ಲಿಯ ಇಂಗ್ಲೀಷ ಅಕ್ಷರಗಳು ಆಯಾ ಮೂಲವಸ್ತುವಿನ ಪರಮಾಣು ಪ್ರತೀಕಗಳಾಗಿವೆ. ಅಡ್ಡಗೆರೆಗಳು 'ಸಂಯೋಜಕಶಕ್ತಿ' (Valency) ಯ ಪ್ರತೀಕಗಳಾಗಿವೆ. ಪ್ರತಿಯೊಂದು ಮೂಲವಸ್ತುವಿನ ಪರಮಾಣುವಿಗೂ ತನ್ನದೇ ಆದ ಒಂದು ವಿಶಿಷ್ಟ 'ಸಂಯೋಜಕತೆ' ಇರುತ್ತದೆ. ಈ ಸಂಯೋಜಕತೆಗೆ ಅನುಗುಣವಾಗಿ ರಸಾಯನ ಸಂಯೋಗಗಳು ಉಂಟಾಗುತ್ತವೆ. ಮೇಲಿನ ಉದಾಹರಣೆಯಲ್ಲಿ ಕಾರ್ಬನ್ನಿನಸಂಯೋಜಕತೆ ೪ ಹಾಗೂ ಹೈಡ್ರೋಜನ್ನಿನ ಸಂಯೋಜಕತೆ ೧. ಅದ್ದರಿಂದ ೧ ಕಾರ್ಬನ್ ಪರಮಾಣು ನಾಲ್ಕು ಹೈಡ್ರೋಜನ್ ಪರಮಾಣುಗಳೊಡನೆ ಸೇರಿ ಮಿಥೇನ ಅಣುವಿನ ಸ್ಥಿರವ್ಯೂಹವನ್ನು ರಚಿಸಲು ಸಮರ್ಥವಾಯಿತು. ಅದೇ ಅಕ್ಸಿಜನ್ (ಪ್ರಾಣವಾಯು) ಎಂಬ ಇನ್ನೊಂದು ಮೂಲವಸ್ತುವಿನ ಸಂಯೋಜಕತೆ ೨ ಆಗಿರುವದರಿಂದ ಅದು ಕಾರ್ಬನ್ ಅಥವಾ ಹೈಡ್ರೋಜನ್ ಪರಮಾಣುಗಳೊಡನೆ ಸೇರಿದಾಗ ಕೆಳಗೆ ಸೂತ್ರ ರೂಪವಾಗಿ ಬರೆದ ಸಂಯೋಗಗಳು ಉಂಟಾಗುವವು.





I II III

I ಈ ಸಂಯೋಗವು ಕಾರ್ಬನ್ ಡಾಯ ಅಕ್ಸಾಯಿಡ (ಅಂಗಾರಾಮ್ಲವಾಯು) ಎಂಬ ಚಿರಪರಿಚಿತ ಅನಿಲವಾಗಿದೆ. ಸೋಡಾವಾಟರ ತಯಾರಿಸುವಾಗ ನೀರಿನಲ್ಲಿ ಬೆರಿಸುವ ವಸ್ತುವಿದು. II ಈ ಸಂಯೋಗವು ಬೇರೇನೂ ಆಗಿರದೆ ನಾವು ದಿನಾಲು ಕುಡಿಯುವ 'ನೀರು' ಆಗಿದೆ. III ಈ ಸಂಯೋಗವು ಫಾರ್ಮಲ್‌ಡಿಹಾಯ್ಡ (Formaldehyde) ಎಂಬ ದ್ರವರೂಪೀ ವಸ್ತು. ಇದನ್ನು ಸತ್ತ ಪ್ರಾಣಿಗಳು ಕೊಳೆಯದಂತೆ ಇಡಲು ಪ್ರಾಣಿಸಂಗ್ರಹಾಲಯಗಳಲ್ಲಿ ಉಪಯೋಗಿಸುತ್ತಾರೆ.

ನಾವು ಉಸಿರಾಡಿಸುವ ಹವೆಯಲ್ಲಿ ಅಕ್ಸಿಜನ್ ಹಾಗೂ ನೈಟ್ರೋಜನ್ (Nitrogen) ಎಂಬ

ಸಲುವಾಗಿ ಒಂದಿಲ್ಲೊಂದು ಬಗೆಯ ತೊಂದರೆ ಅನುಭವಿಸಬೇಕಾಗುವದು.

ಕರ್ಮೇಶ ಮತ್ತು ಲಾಭೇಶನಾದ ಶನಿಯು ಆಯಾ ಸ್ಥಾನಗಳಿಂದ ಅನುಕ್ರಮವಾಗಿ ದಶಮ ಮತ್ತು ನವಮದಂಥ ಶುಭಸ್ಥಾನಗಳಲ್ಲಿ ಮತ್ತು ತನ್ನ ಉಚ್ಚರಾಶಿಯಾದ ತುಲಾದಲ್ಲಿ ಇರುವದರಿಂದ ಧಂದೆಯವರ, ನೋಕರರ ದೈವವನ್ನು ಚೆನ್ನಾಗಿ ಮಾರ್ಪಡಿಸುವನೆಂಬಲ್ಲಿ ತಿಲಮಾತ್ರ ಸಂಶಯವಿಲ್ಲ. ಧಂದೆ ಮಾಡುವವನ ಆಸ್ತಿಯ ಪ್ರಮಾಣ ಮಿತಿಮೀರಿ ಬೆಳೆಯುವದು. ನಾಲ್ಕೂ ಕೈಗಳಿಂದ ಲಕ್ಷ್ಮಿಯು ಪ್ರಸನ್ನಳಾಗುವಳು. ಅದರಲ್ಲಿಯೂ ದಿಸೆಂಬರ ೧೧ರಿಂದ ಮತ್ತು ಮತ್ತೆ ಎಪ್ರಿಲ ೧೧ರಿಂದ ಸಪ್ಟೆಂಬರ ೧ರ ವರೆಗಿನ ಕಾಲ ಬಹಳ ಅನುಕೂಲ. ಜನೆವರಿ ೩೦ರ ನಂತರ ನೌಕರರಿಗೆ ಮೇಲಧಿಕಾರಿಗಳ ಮರ್ಜಿ ಬಹಳ ಆಗುವದು. ಇದರ ಪ್ರತ್ಯಯವು ಸಪ್ಟೆಂಬರ ೧ರ ನಂತರ ಮೇಲಿನ ಗ್ರೇಡು ಇಲ್ಲವೆ ಸಂಬಳದಲ್ಲಿ ಹೆಚ್ಚಳ ದೊರೆತು ಬರುವದು. ಬದಲಿಯಾಗುವ ಶಾಖೆಯಲ್ಲಿದ್ದರೆ ಎಪ್ರಿಲ ೧೧ರ ನಂತರ ಮುಂದೆ ೨-೩ ತಿಂಗಳುಗಳಲ್ಲಿ ನಿಶ್ಚಿತವಾಗಿ ನಿಮಗೆ ಬೇಕಾದ ಸ್ಥಳಕ್ಕೆ ಆಗುವ ಸಂಭವವಿದೆ. ಆದರೆ ಈ ವರ್ಷ ಕೈಕೆಳಗಿನವರು ಮಾತ್ರ ನಿಮ್ಮನ್ನು ನೀರಿಗಿಂತ ಕಡೆ ಮಾಡುವರು.

ದಾವೇ ಫಿರ್ಯಾದಿಗಳಲ್ಲಿಯೂ ಸ್ಪರ್ಧೆಗಳಲ್ಲಿಯೂ ಈ ವರ್ಷ ಪ್ರತಿಪಕ್ಷಗಳ ಬಣ್ಣ ಪೂರ್ಣ ಇಳಿಸುವಿರಿ. ವಿಶೇಷವಾಗಿ ನವೆಂಬರ ೩೦ ರ ವರೆಗೆ ನಂತರ ದಿಸೆಂಬರ ೨೪ ರಿಂದ ಜನೆವರಿ ೧೬, ಫೆಬ್ರುವರಿ ೯ ರಿಂದ ಮಾರ್ಚ ೫, ಅನಂತರ ಎಪ್ರಿಲ ೨೩ ರಿಂದ ಜುಲೈ ೭ ಮತ್ತು ಅಗಸ್ಟ ೩೧ರಿಂದ ಅಕ್ಟೋಬರ ೭ ರ ವರೆಗೆ ಒಳ್ಳೆ ಯಶಸ್ವಿಯಾಗುವ ಕಾಲ.

ಈ ವರ್ಷದಲ್ಲಿ ಹಡೆಯುವ ಈ ರಾಶಿಯ ಸ್ತ್ರೀಯರಲ್ಲಿ ಬಹುತರ ಎಲ್ಲರಿಗೆ ಪುತ್ರಲಾಭವಾಗುವದು ಮತ್ತು ದಿಸೆಂಬರ ೧೫ ರಿಂದ ಜನೆವರಿ ೧೪, ಫೆಬ್ರುಅರಿ ೧೨ ರಿಂದ ಮಾರ್ಚ ೧೪, ಎಪ್ರಿಲ ೧೩ ರಿಂದ ಜುಲೈ ೧೬, ಮತ್ತು ಅಗಷ್ಟ ೧೭ ರಿಂದ ಸಪ್ಟೆಂಬರ ೧೭ರ ಅವಧಿಯಲ್ಲಿ ಹಡೆದರೆ ಬಹಳ ಸುಖ ಪ್ರಸೂತವಾಗುವದು.

ಈ ರಾಶಿಯ ವಿದ್ಯಾರ್ಥಿಗಳ ಯಾವದೇ ಪರೀಕ್ಷೆ ಸಪ್ಟೆಂಬರ ೧ರ ವರೆಗೆ ಆಗುವದಿದ್ದರೆ ಸಹಜವಾಗಿ ತೇರ್ಗಡೆ ಹೊಂದುವ ಗ್ರಹಬಲ ಪ್ರಬಲವಿದೆ.

ವೃದ್ಧಿಯು ಆಶೆಯಂತೂ ಇಲ್ಲ. ಆದರೆ ಈ ರಾಶಿಯ ಯೋಗಕರ್ತನಾದ ಶನಿಯು ಇದೇ ವರ್ಷ ರಾಶಿ ಮತ್ತು ಸ್ಥಾನ ಇವೆರಡರಲ್ಲಿಯೂ ಬಲಿಷ್ಠನಿರುವದರಿಂದ ಹಾನಿ ಸಂಭವಿಸಲಿಕ್ಕೂ ಇಲ್ಲ.

ಹೆಂಡತಿಗೆ ಕೂಡ ಈ ವರ್ಷ ಆರೋಗ್ಯಕ್ಕೆ ಅಷ್ಟೊಂದು ಅನುಕೂಲವಿರುವದಿಲ್ಲ. ಅದರಲ್ಲಿಯೂ ದಿಸೆಂಬರ ೧೧ರಿಂದ ಫೆಬ್ರುಅರಿ ೧೩ ಮತ್ತು ಅಗಸ್ಟ ೩೧ರಿಂದ ಮುಂದೆ ಒಟ್ಟಾರೆ ಅವಳ ಆರೋಗ್ಯ ಸರಿಯಿರುವದು. ಆದರೆ ನಿಮ್ಮ ನಿಮ್ಮಲ್ಲಿ ಮಾತ್ರ ದಿಸೆಂಬರ ೧೧ ರಿಂದ ಫೆಬ್ರುಅರಿ ೧೩ರ ವರೆಗೆ ಎಷ್ಟು ಮಾನಿಸುವದೋ ಅಷ್ಟು ಉಳಿದ ಅವಧಿಯಲ್ಲಿ ಮಾನಿಸುವದು ಕಠಿಣ. ಆದರೂ ಸ್ವತಃ ನಿಮ್ಮ ವಿವಾಹವಾಗಿದ್ದಿಲ್ಲವಾದರೆ ಮತ್ತು ಈ ವರ್ಷ ಮಾಡಿಕೊಳ್ಳುವದಿದ್ದರೆ ಅದಕ್ಕೆ ಈ ಎಲ್ಲ ಅವಧಿಯಲ್ಲಿ ಗುರುಬಲವಿದ್ದೇ ಇದೆ. ಮತ್ತು ದಿಸೆಂಬರ ೧೩ರ ವರೆಗೆ ಮತ್ತು ಮುಂದೆ ಫೆಬ್ರುಅರಿ ೨ ರಿಂದ ಮಾರ್ಚ ೩೦ರ ವರೆಗೆ ಮತ್ತು ಅನಂತರ ಅಕ್ಟೋಬರ ೨ರ ನಂತರ ಪೂರ್ಣವಾಗಿ ಬಾಶಿಂಗಬಲವಿರುವದು. ಆದರೆ ವಧು ಇಲ್ಲವೆ ವರ ಬಹಳ ಮಟ್ಟಿಗೆ ಪರಸ್ಪರ ಅನುರೂಪವಿರುವದಿಲ್ಲ. ಕೂಡಿದ್ದು ಕೂಡ ಬಹಳ ಇಜ್ಜೋಡ ಎನಿಸುವದು. ಲಗ್ನದಲ್ಲಿ ಕೂಡ ಅನೇಕ ಅಡಚಣೆಗಳು ಬಂದು ಹೇಗೆ ಹೇಗೋ ನಡೆದುಹೋಗುವದು- ಪರಸ್ಪರ ಎರಡೂ ಪಕ್ಷಗಳಲ್ಲಿ ಅಸಂತೋಷ ಕಂಡುಬರುವದು.

ವೃಷಭ

ಈ ರಾಶಿಯವರಿಗೆ ಈ ವರ್ಷ ಶಾರೀರಿಕ ಮತ್ತು ಪ್ರಾಪಂಚಿಕ ತೊಂದರೆಗಳಿಂದ ಬಹಳ ಗೊಂದಲವೆದ್ದರೂ ಔದ್ಯೋಗಿಕ ಯಶಸ್ಸು ಮತ್ತು ಲಾಭಕ್ಕೆ ಅತ್ಯಂತ ಅನುಕೂಲವಾಗಿರುವದು.

ಈ ರಾಶಿಯವರು ಜನೆವರಿ ೨೮ ರಿಂದ ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ದಕ್ಷತೆ ವಹಿಸಬೇಕು. ಅಂದಿನಿಂದ ಬರುವ ೮ನೇ ರಾಹು, ತನ್ನ ನೀಚರಾಶಿಯಾದ ಧನುವಿನಲ್ಲಿರುವುದರಿಂದ ತಲೆಗೆ ಮತ್ತು ಗುಹ್ಯೇಂದ್ರಿಯಕ್ಕೆ ಬಹಳ ಪೀಡೆಯನ್ನು ಕೊಡುವನು- ಬ್ಲಡ್‌ಪ್ರೆಶ್ಯರವಿದ್ದವರಂತೂ ಸ್ವಲ್ಪಾದರೂ ಅಪಥ್ಯಮಾಡಬಾರದು. ಆದರಲ್ಲಿಯೂ ಮಾರ್ಚ ೩೦ರಿಂದ ಅಗಷ್ಟ ೯ರ ವರೆಗಿನ ಅವಧಿಯಲ್ಲಿ ವಿಶೇಷ ಕಾಳಜಿ ತೆಗೆದುಕೊಳ್ಳಬೇಕು. ಯಾರ ಲಗ್ನ ಮತ್ತು ರಾಶಿ ಕುಂಡಲಿಯಲ್ಲಿ ಇದೇ ಸ್ಥಳದಲ್ಲಿ ಈ ಗ್ರಹವು ಜನ್ಮಕಾಲಕ್ಕೆ ಇರುವದೋ ಅವರಿಗೆ ಭೂತ ಬಾಧೆ ಇಲ್ಲವೆ ಯಾರಾದರೂ ಮಾಟಮಾಡಿಸುವದರಿಂದ ಅಥವಾ ದುಃಸ್ವಪ್ನಗಳಿಂದ ಮನಸ್ಸು ತ್ರಸ್ತವಾಗಿ ಹೋಗುವದು. ಇಂಥ ಅದೃಷ್ಟ ಪೀಡೆ ಇವರಿಗೆ ಗಂಟುಬೀಳುವ ಸಂಭವವಿದೆ. ಆದರೂ ರಾಹು ಮತ್ತು ಕೇತು ಈ ಗ್ರಹದ ಸಂಪೂರ್ಣ ಜಪ ಮತ್ತು ಸರ್ವದಾನವನ್ನು ಅವಶ್ಯವಾಗಿ ಮಾಡಬೇಕು. ಅಂದರೆ ಗಂಡಾಂತರ ನಿಶ್ಚಿತವಾಗಿ ತಪ್ಪುವದು.

ಉಳಿದ ದೇಹಸುಖಗಳಿಗೆ ಕೂಡ ಈ ವರ್ಷ ಅಷ್ಟ ಕೃಷ್ಟೆ. ಜನೆವರಿ ೨೯ರಿಂದ ಬರುವ ಎರಡನೇ ಕೇತುವಿನಿಂದ ಬಂಧು, ಕಕ್ಕ ಮುಂತಾದವರಿದ್ದ ಏಕತ್ರ ಕುಟುಂಬದಲ್ಲಿ ಒಮ್ಮೆಲೆ ಜೋರಿನಿಂದ ಬಡೆದಾಟ ಹುಟ್ಟಿ ಕೊನೆಗೆ ವಿಭಕ್ತವಾಗುವ ವರೆಗೆ ಸರತಿ ಬರುವದು. ಪ್ರತಿ ಒಬ್ಬ ಎರಡನೆಯವರ ಮೇಲೆ ಕಣ್ಣು ತೆಗೆದು ಎಲ್ಲ ದೋಷವನ್ನು ಅವರ ಮೇಲೆಯೇ ಹೊರಿಸುವನು. ಮನೆಯಲ್ಲಿಯ ಉಚ್ಚ ಪದಾರ್ಥಗಳನ್ನು ಎತ್ತಿಹಾಕುವ ಇಲ್ಲವೆ ಸಾಗಿಸುವ ಕ್ರಮು ನಡೆಯುವದು. ಆದರೆ ಎಪ್ರಿಲ ೧೧ ರಿಂದ ಅಗಷ್ಟ ೩೧ರ ವರೆಗೆ ಇರುವ ಎರಡನೇ ಗುರುವಿನಿಂದ ಈ ಅವಧಿಯಲ್ಲಿ ವಿಭಕ್ತವಾದರೆ ಸರಳವಾಗಿ ಎಲ್ಲವೂ ಬಗೆಹರಿಯುವದು. ಮನೆಯ ಹೊರಗೆ ಯಾವ ಮಾತೂ ಹೋಗದೆ ನಿಮ್ಮ ನಿಮ್ಮಲ್ಲಿಯೇ ಉಳಿಯುವದು. ನಿಮ್ಮ ಮಾತಿನಲ್ಲಿ ಮೇಲಿಂದ ಮೇಲೆ ಕೆಟ್ಟ ಮಾತುಗಳು ಬೈಗಳು ಇರುವವು. ತಿನ್ನುಣ್ಣುವದರಲ್ಲಿಯೂ ನಿಮ್ಮ ಲಕ್ಷ್ಯ ಚನ್ನಾಗಿರುವದಿಲ್ಲ. ಅಲ್ಲದೆ ಅದು ಸುಸೂತ್ರ ಸಿಕ್ಕುವದೂ ಇಲ್ಲ. ಸ್ಥಾವರ ಜಂಗಮ ವಸ್ತುಗಳ ಅಭಿ

ನಿಮ್ಮ ಮಕ್ಕಳ ಮದುವೆಯಾಗುವದಿದ್ದರೆ ಡಿಸೆಂಬರ ೧೧ ರಿಂದ ಅಗಸ್ಟ ೩೧ ವರೆಗೆ ಒಳ್ಳೆ ಬಾಶಿಂಗಬಲವಿದೆ. ವಿವಾಹ ಕಾರ್ಯವೂ ಗೊತ್ತಾದ ಮುಹೂರ್ತದಲ್ಲಿ ಉಭಯಪಕ್ಷಗಳ ಐಕಮತ್ಯದಿಂದ ವಿಶೇಷ ಗದ್ದಲಿಲ್ಲದೆ ಜರಗಿ ಹೋಗುವದು. ಅಳಿಯ ಇಲ್ಲವೆ ಸೊಸೆ ನಿಮ್ಮ ಮಕ್ಕಳಿಗಿಂತ ಹೆಚ್ಚು ಸರಸ ಇರುವರು. ಇದಕ್ಕಿಂತ ಮೊದಲಿನವರು ನಿಮ್ಮೊಡನೆ ಅನುಕೂಲವರ್ತಿಸುವರು. ಉಳಿದ ಆಪ್ತರು ಸದಾ ತುಚ್ಛತೆಯಿಂದ ವರ್ತಿಸುವರು ಮತ್ತು ನಿಮ್ಮ ಹಿತದ ಮೇಲೆ ನೀರು ಚಲ್ಲುವ ಪ್ರಯತ್ನ ಮಾಡುವರು. ಉಳಿದ ನೋಕರಚಾಕರರು ಮಾತ್ರ ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆ ಬಹಳ ಮಮತೆಯಿಂದ ಮತ್ತು ನಿಶ್ವಾಸದಿಂದ ವರ್ತಿಸುವರು ಮತ್ತು

ಉಳಿದ ಸಮಯುದಲ್ಲಿಯೂ ಅಲ್ಪ ಸ್ವಲ್ಪ ಕಿರಿಕಿರಿಯಿಂದಾದರೂ ಕೆಲಸದಲ್ಲಿ ಎಂದಿಗೂ ವ್ಯತ್ಯಯುವನ್ನುಂಟು ಮಾಡಲಾರರು.

ಧಂದೆ ಉದ್ಯೋಗದಾರರಿಗೆ ಕರ್ಮೇಶ ಮತ್ತು ಭಾಗ್ಯೇಶ ಶನಿಯು ಅತ್ಯಂತ ಬಲಿಷ್ಠನಿರುವದರಿಂದ ಒಳ್ಳೇ ಉತ್ಕರ್ಷವಾಗುವದು ಮತ್ತು ಲಾಭೇಶ ಗುರು ಕೂಡ ಪೂರ್ಣ ಅನುಕೂಲನಿರುವನು. ಲಾಭ ಬಹಳವಾಗುವದು. ಸ್ವತಂತ್ರ ಧಂದೆಯುವರಿಗೆ ಸಟ್ಟಾದಂಥ ಸಾಹಸಕಾರ್ಯಗಳಲ್ಲಿ ದೈವ ತೆರೆಯುವದು. ಲಾಟರಿಗಳಲ್ಲಿಯೂ ಒಂದೆರಡು ಸಲ ಒಳ್ಳೆ ಅನುಕೂಲ ಯುಶಸ್ಸು. ಅದರಲ್ಲಿಯೂ ದಿಸೆಂಬರ ೧೫ ರಿಂದ ಎಪ್ರಿಲ ೧೩, ಜೂನ ೧೫ ರಿಂದ ಜುಲೈ ೧೫ ಮತ್ತು ಆಗಸ್ಟ ೧೭ ರಿಂದ ಅಕ್ಟೋಬರ ೧೭ರ ಅವಧಿಯು ಹೆಚ್ಚು ಅಸ್ತಿಯುದೆಂದೆನಿಸುವದು. ನೌಕರಿಯಿದ್ದವರಿಗೆ ನಿಶ್ಚಿತವಾಗಿ ಮೇಲಿನ ಗ್ರೇಡು ಸಿಕ್ಕುವದು. ವರಿಷ್ಠರು ಸರ್ವಸಾಧಾರಣವಾಗಿ ಎಲ್ಲ ಸೂತ್ರಗಳನ್ನು ನಿಮ್ಮ ಕೈಗೇ ಕೊಡುವರು. ಕೈಕೆಳಗಿನವರೂ ನಮ್ರತನದಿಂದ ವರ್ತಿಸುವರು. ಮೇಲಿನ ಗ್ರೇಡು ನಿಶ್ಚಯುವಾಗಿ ಎಪ್ರಿಲ ೧೧ ರಿಂದ ಅಗಸ್ಟ ೩೧ ರ ವರೆಗೆ ಸಿಕ್ಕುವದು. ಅದರಂತೆಯೇ ಬದಲಿಯಾಗುವ ಸಂಭವವಿದ್ದರೆ ಅತ್ಯಂತ ಅನುಕೂಲ ಸ್ಥಳಕ್ಕಾಗುವದು. ಸಾಮಾಜಿಕ ಪ್ರೇಮ ಮತ್ತು ಲೌಕಿಕವೂ ಹೆಚ್ಚುವವು. ಆದರೆ ಅದರಲ್ಲಿಯೂ ಈ ವರ್ಷ ಧಂದೆಯುವರಿಗಿಂತ ನೌಕರರಿಗೆ ಹೆಚ್ಚು ಉತ್ಕರ್ಷದ್ದು ಮತ್ತು ಶಾಶ್ವತ ಭಾಗ್ಯೋದಯುದ ಕಾಲವು.

ದಾವೆ, ಖಟ್ಲೆ ಇಲ್ಲವೆ ಖಾಸಗಿ ಸ್ಪರ್ಧೆ ಮತ್ತು ಅಹಮುಹಮಿಕೆಯು ಕೆಲಸಗಳಲ್ಲಿ ಜನೆವರಿ ೨೯ ರ ವರೆಗೆ ಮತ್ತು ಅಗಸ್ಟ ೩೧ ರಿಂದ ಮುಂದಿನ ಅವಧಿಯುಲ್ಲಿ ವಿಜಯುಶ್ರೀ ಸಂಪೂರ್ಣ ನಿಮ್ಮ ಕೊರಳಿನಲ್ಲಿ ಮಾಲೆ ಹಾಕುವಳು. ಉಳಿದ ಅವಧಿಯುಲ್ಲಿ ಮಾತ್ರ ಅವಳು ಪ್ರತಿಪಕ್ಷಿಗಳಿಗೆ ಒಲಿಯುವಳು.

ಈ ರಾಶಿಯು ಸ್ತ್ರೀಯುರು ಈ ವರ್ಷ ಹಡೆಯುುವವರಿದ್ದರೆ ಅವರ ಪ್ರಸವವು ಅಲ್ಪಸ್ವಲ್ಪ ಕಷ್ಟದಿಂದ ಸಂಭವಿಸುವದು. ಆದರೆ ಎಷ್ಟೇ ಕಷ್ಟವಾದರೂ ಜೀವಕ್ಕೆ ಸ್ವಲ್ಪೂ ಗಂಡಾಂತರವಿಲ್ಲ. ಪ್ರಸೂತಿಯು ನಂತರ ಬಾಳಂತಿತನವೂ ಚೆನ್ನಾಗಿ ಮೈಗೆ ಹತ್ತುವದು. ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆ ಹಡೆಯುುವವರಿಗೆ ಬಹುಶಃ ಗಂಡು ಮಗು ಹುಟ್ಟುವದು.

ಈ ರಾಶಿಯು ವಿದ್ಯಾರ್ಥಿಗಳ ಪರೀಕ್ಷೆ ದಿಸೆಂಬರ ೧೧ ರಿಂದ ಎಪ್ರಿಲ ೧೧ ರ ವರೆಗೆ, ಮೇ ೧೦ ರಿಂದ ಅಗಷ್ಟ ೨೦ ರ ವರೆಗೆ ಮತ್ತು ಸಪ್ಟಂಬರ ೪ ರಿಂದ ೨೩ರ ವರೆಗೆ ಈ ಅವಧಿಯುಲ್ಲಿ ಆಗುವದಿದ್ದರೆ ಅವರು ಪಾಸು ಆಗುವಷ್ಟು ಸರಸ್ವತಿಯು ಕೃಪೆ ಇರುವದು.

ಮಿಥುನ

ಈ ರಾಶಿಯುವರಿಗೆ ಈ ವರ್ಷ ಅಲ್ಪ ಸ್ವಲ್ಪ ಪ್ರಾಪಂಚಿಕ ತೊಂದರೆಯೆನಿಸಿದರೂ ಧಂದೆ ನೋಕರರಿಗೆ ಬಹಳ ಸುಖಪ್ರದವೆನಿಸುವದರಲ್ಲಿ ಸಂದೇಹವಿಲ್ಲ.

ಈ ರಾಶಿಯುವರು ಜನೆವರಿ ೨೯ ರ ವರೆಗೆ ಕೇವಲ ತಮ್ಮ ಆರೋಗ್ಯವನ್ನು ಜಪ್ಪಿಸಿಕೊಂಡಿರಬೇಕು. ಅನಂತರ ಅವರಿಗೆ ನೆಗಡಿ ಕೆಮ್ಮು ಕೂಡ ಬರುವದಿಲ್ಲ. ಆದರೆ ಮೇಲಿನ ಅವಧಿಯುಲ್ಲಿ ಮಾತ್ರ ಕೆಲವರಿಗೆ ನೇತ್ರ ವಿಕಾರವಾದರೆ, ಕೆಲವರಿಗೆ ಹೊಟ್ಟೆನೋವು, ಹಲವರಿಗೆ ದಮ್ಮು, ಕೆಲವರಿಗೆ ಬ್ಲಡ್ ಪ್ರೆಶರದಂಥ ಯಾವುದೊಂದು ವಿಕಾರ ಸದಾ ಇದ್ದದ್ದೆ. ಅನೇಕರಿಗೆ ಪೈಶಾಚಿಕ ಉಪದ್ರವವೂ ಆಗುವ ಸಂಭವವಿದೆ. ಅದರಂತೆಯೇ ಅಲ್ಲಿಯುವರೆಗೆ ಗೃಹಕಲಹ ಬಹಳ; ಮತ್ತು ಎಲ್ಲರೂ ನಿಮ್ಮ ಬಗ್ಗೆ ಅಸಮಾಧಾನ ಹೊಂದುವರು. ಸಣ್ಣ ದೊಡ್ಡ ಕಳವಾಗುವ ಅಂಜಿಕೆಯೂ ಇದೆ.

ಉಳಿದ ವಿಷಯುಗಳಲ್ಲಿ ದಿಸೆಂಬರ ೧೧ ರ ವರೆಗೆ ಮತ್ತು ಮುಂದೆ ಎಪ್ರಿಲ ೧೧ ರ ವರೆಗಿನ ಅವಧಿಯು ದೇಹಸುಖಕ್ಕೆ ಬಹಳ ಉತ್ತಮವಿದೆ. ಈ ಅವಧಿಯುಲ್ಲಿ ಮಕ್ಕಳ ಉತ್ಕರ್ಷ ಬಹಳವಾಗುವದು. ನಿಮ್ಮ ಮನಸ್ಸು ಸುವಿಚಾರಿ ಮತ್ತು ಪೂರ್ಣ ವಿವೇಕಿಯುಳಿದು ಕೆಟ್ಟದರಲ್ಲಿಯೂ ಒಳಿತನ್ನು ಹುಡುಕಿ ತೆಗೆಯುುವತ್ತ ದೃಷ್ಟಿ ಹೊರಳುವದು. ಸ್ಥಾವರ ಜಂಗಮ ಸಂಗ್ರಹದಲ್ಲಿ ಅಗಷ್ಟ ೩೧ ರ ನಂತರ ಸ್ವಲ್ಪಾದರೂ ಹೆಚ್ಚಳವಾಗುವದು. ಆದರೆ ಮಾರ್ಚ ೩೦ ರಿಂದ ಅಗಷ್ಟ ೯ ರವರೆಗೆ ಅಣ್ಣತಮ್ಮಂದಿರು ಇಲ್ಲವೆ ಆಸ್ತಿಯು ಎರಡನೆಯು ಹಕ್ಕುದಾರರು ಬಹಳ ಉಪದ್ರವ ಕೊಡುತ್ತ ನಡೆಯುುವರು.

ಹೆಂಡತಿಯು ಪ್ರಕೃತಿಗೆ ಜನೆವರಿ ೨೯ರ ನಂತರದ ಅವಧಿಯು ಸ್ವಲ್ಪ ಕಿರಿಕಿರಿಯುದೇ. ಅದರಲ್ಲಿಯೂ ಮೇ ೨೦ರಿಂದ ಅಗಸ್ಟ ೯ದ ವರೆಗೆ ಹೆಚ್ಚು ಜಪ್ಪಿಸಬೇಕು. ಕ್ವಚಿತ ಬೆಂಕಿಯಿಂದ, ಸೂಜಿ ನಟ್ಟು, ಚಾಕು ಚೂರಿ ಹತ್ತಿ ತೊಂದರೆ ಅನುಭೋಗಿಸುವ ಸರತಿ ಬರುವದು. ಉಭಯುತರಲ್ಲಿ ಮಾತ್ರ ಬಹಳ ಕೂಡಿ ನಡೆಯುುವದು—ಮತ್ತು ಅವಳ ಆಚಾರ ವಿಚಾರಗಳು ಕಲ್ಯಾಣಪ್ರದವಾದವುಗಳು. ಪೂರ್ಣವಾಗಿ ನಿಮ್ಮ ಮನಸ್ಸಿಗೆ ಬರುವವು. ನಿಮ್ಮ ಲಗ್ನ ವಿನ್ನೂ ಆಗಿದ್ದಿಲ್ಲವಾದರೆ ಮತ್ತು ಮಾಡಿಕೊಳ್ಳುವ ತಯಾರಿ ಇದ್ದರೆ ಎಪ್ರಿಲ ೧೧ರ ನಂತರ ಸಹಜವಾಗಿ ಕೂಡಿ ಬಂದು ಗೊತ್ತಾದಂತೆ ಸಾಂಗವಾಗುವದು. ಆದರೆ ಪತಿಪತ್ನಿಯುರಲ್ಲಿ ಅನೇಕ ದಿನ ಪರಸ್ಪರರಲ್ಲಿ, ಕೆಲಮಟ್ಟಿಗೆ ಅಸಮಾಧಾನವುಳಿಯುವುದು.

ನಿಮ್ಮ ಮಕ್ಕಳ ಮದುವೆಯಾಗುವದಿದ್ದರೆ ದಿಸೆಂಬರ ೧೧ರ ವರೆಗೆ ಮತ್ತು ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆ ಅಲ್ಪಸ್ವಲ್ಪ ಪ್ರಯಾಸದಿಂದ ಆದರೂ ೧೦೦ಕ್ಕೆ ೯೫ ರಷ್ಟು ನಿಶ್ಚಿತವಾಗಿ ಆಗುವದು. ಅಳಿಯು ಇಲ್ಲವೆ ಸೊಸೆ ನಿಮ್ಮ ಮಕ್ಕಳ ತಾಡಿಯುವರೇ ಸಿಕ್ಕುವರು. ಆದರೆ ಹೊಸ ಮತ್ತು ಹಳೆಯು ಸೊಸೆ ಇಲ್ಲವೆ ಅಳಿಯು ನಿಮ್ಮೊಡನೆ ಅಲ್ಪ ಸ್ವಲ್ಪ ಸಿರಿಕೆಯಿಂದಲೆ ವರ್ತಿಸುವರು. ಉಳಿದ ಆಪ್ತರೂ ಈ ವರ್ಷ ನಿಮ್ಮ ಮೇಲೆ ಸ್ವಲ್ಪರೊಚ್ಚಿನಲ್ಲಿಯೇ ಇರುವರು. ನೋಕರ ಚಾಕರರು ಚುಕಾರತಟ್ಟುಗಳಾಗುವರು. ಗೊತ್ತಾದ ಕೆಲಸದಲ್ಲಿ ಬಹಳ ತೊಂದರೆಯುುಂಟುಮಾಡುವರು. ವಾಹನ ಇಲ್ಲವೆ ದನಕರುಗಳಿಗೂ ಈ ವರ್ಷ ಅಷ್ಟೊಂದು ಅನುಕೂಲವಿಲ್ಲ.

ಧಂದೆ ನೌಕರರಿಗೆ ಈ ವರ್ಷ ಎಪ್ರಿಲ ೧೧ ರಿಂದ ಬಹಳ ಉತ್ಕರ್ಷದ ಕಾಲ. ಈ ವರ್ಷ

ಭಾಗ್ಯೇಶ ಶನಿ ಮತ್ತು ಕರ್ಮೇಶ ಗುರು ಬಹಳ ಪ್ರಬಲವಿರುವದರಿಂದ ಉದ್ಯೋಗದಲ್ಲಿ ಪ್ರಗತಿಯು ಬಹಳ ಜೋರಿನಿಂದ ಆಗಹತ್ತಿ ಪ್ರತಿಷ್ಠೆ ಮತ್ತು ಪತ್ತು ಬಹಳ ಹೆಚ್ಚುವವು. ಆಗಷ್ಟ ೩೧ರಿಂದ ಅಂತೂ ದೊಡ್ಡವರೊಡನೆ ಸಂಬಂಧ ಬರಹತ್ತುವದರಿಂದ ಬಹಳ ಭರಭರಾಟಿ. ಅದರಂತೆ ದ್ರವ್ಯಲಾಭವೂ ಮಾರ್ಚ ೩೦ ರ ವರೆಗೆ ಸ್ವಲ್ಪ ಆಳದಕ್ಕೆಯದಿದ್ದರೂ ಅನಂತರ ದಿನದಿನಕ್ಕೆ ಅದು ಹೆಚ್ಚುತ್ತ ಹೋಗುವದು. ಹಿಂದೆ ಇದ್ದ ಕೊಡ ತಕ್ಕೊಳ್ಳುವ ವ್ಯವಹಾರವೆಲ್ಲ ಮುಗಿಯುವವು. ನೋಕರರಿಗೆ ಕೂಡ ಮೇಲಿನ ಕಾಲವೇ ಹೆಚ್ಚು ಸುಖದ್ದಾಗಿ ಪರಿಣಮಿಸುವದು. ಎಪ್ರಿಲ ೧೧ರಿಂದ ಆಗಷ್ಟ ೩೧ ರ ನಡುವಿನ ಅವಧಿಯಲ್ಲಿ ಬಹುಶಃ ಮೇಲಿನ ಗ್ರೇಡು ಸಿಕ್ಕುವದು. ಇಲ್ಲದಿದ್ದರೆ ಸ್ವಲ್ಪಾದರೂ ಸಂಬಳ ಹೆಚ್ಚುವದು ನಿಶ್ಚಿತ. ದಿಸೆಂಬರ ೧೩ ರಿಂದ ಫೆಬ್ರುಅರಿ ೨ ರ ವರೆಗೆ ಮಾತ್ರ ವರಿಷ್ಠರಿಂದ ತೊಂದರೆ ಬಹಳ. ಅದರಂತೆ ಫೆಬ್ರುಅರಿ ೨ ರಿಂದ ಮಾರ್ಚ ೩೦ ರ ವರೆಗೆ ಮಿತ್ರರು ಮೋಸಮಾಡುವರು ಇಲ್ಲವೆ ಕ್ಷುಲ್ಲಕ ಕಾರಣಗಳಿಗಾಗಿ ಅಡ್ಡ ಹಿಡಿಯುವರು. ಅನಂತರ ಮಾತ್ರ ಅವರ ಸುಖ ಅನುಕೂಲ. ಅಕ್ಟೋಬರ ೨ ರ ನಂತರ ಗುಪ್ತ ಅರ್ಥಾತ್ ಅಕಲ್ಪಿತ ದ್ರವ್ಯಲಾಭದ ಸಂಭವವಿದೆ. ಬದಲಿಯಾಗುವ ಯೋಗ ಕಡಮೆಯೇ. ಆದರೆ ಬಹಳ ಪ್ರಯತ್ನ ಮಾಡಿದರೆ ಆಗಷ್ಟ ೩೧ ರ ನಂತರ ಆಗಬಹುದು. ಕೈಕೆಳಗಿನವರು ಮಾತ್ರ ಎಪ್ರಿಲ ೧೧ ರಿಂದ ನಿಮ್ಮ ಹುಕುಮಿನಂತೆ ನಡೆಯುವರು. ಒಟ್ಟಾರೆ ಧಂದೆಯವರಿಗಿಂತ ನೋಕರರಿಗೆ ಈ ವರ್ಷ ಹೆಚ್ಚು ಲಾಭದ್ದಾಗಿ ಪರಿಣಮಿಸುವ ಯೋಗವಿದೆ.

ದಾವೆ ಖಟ್ಲೆ ಇಲ್ಲವೆ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಈ ವರ್ಷ ನಿಮಗಿಂತ ಪ್ರತಿಪಕ್ಷದವರಿಗೇ ಹೆಚ್ಚು ಅನುಕೂಲವಿದೆ. ಆದರೆ ಫೆಬ್ರುಅರಿ ೨ ರಿಂದ ಮೇ ೨೦ ರ ವರೆಗೆ ನಿಮ್ಮ ಮೇಲ್ಗೈಯಾಗುವದು. ಈ ವರ್ಷ ಮೊದಲಿನ ಶತ್ರುಗಳು ಮಿತ್ರರಾದರೆ ಮಿತ್ರರು ಶತ್ರುಗಳಾಗುವ ಪ್ರಬಲ ಯೋಗವಿದೆ.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಅವರು ದಿಸೆಂಬರ ೧೧ ರ ವರೆಗೆ ಅನಂತರ ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆ ಆದರೆ ಬಹಳ ಸುಲಭವಾಗಿ ಹಡೆದು ಬಹುಶಃ ಗಂಡುಮಗುವೇ ಹುಟ್ಟುವದು. ದಿಸೆಂಬರ೧೧ರಿಂದ ಎಪ್ರಿಲ೧೧ವರೆಗೆ ಆಗುವ ಪ್ರಸವ ಸ್ವಲ್ಪ ಕಷ್ಟದ್ದಾಗಿ ಕನ್ಯಾರತ್ನವೇ ಹುಟ್ಟುವದು. ಅಗಷ್ಟ ೩೧ ರ ನಂತರ ಸುಲಭ ಪ್ರಸವವಾದರೂ ಹೆಣ್ಣೇ ಹುಟ್ಟುವದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ನವೆಂಬರ ೩೦ ರೊಳಗೆ ಮತ್ತು ಅನಂತರ ದಿಸೆಂಬರ ೨೪ ರಿಂದ ಜನೆವರಿ ೧೬, ಫೆಬ್ರುವರಿ ೯ ರಿಂದ ಮಾರ್ಚ ೫, ಮಾರ್ಚ ೨೯ ರಿಂದ ಎಪ್ರಿಲ ೨೩, ಮೇ ೧೭ ರಿಂದ ಅಗಸ್ಟ ೨ ಮತ್ತು ಅಗಷ್ಟ ೩೧ ರಿಂದ ಅಕ್ಟೋಬರ ೭ ರ ಅವಧಿಯಲ್ಲಿ ಆದರೆ ಯಶಸ್ಸು ನಿಶ್ಚಿತ.

ಕರ್ಕ

ಈ ರಾಶಿಯವರಿಗೆ ಈ ವರ್ಷ ಕೆಲ ಕಾಲ ಪ್ರಾಪಂಚಿಕ ಸುಖಕ್ಕೆ ಮತ್ತೆ ಕೆಲ ಕಾಲ ಔದ್ಯೋಗಿಕ ಯಶಸ್ಸಿಗೆ ಉತ್ತಮವಿದ್ದರೂ ಪ್ರಾಪಂಚಿಕ ಸುಖದ ಕಾಲಕ್ಕೆ ಆರ್ಥಿಕ ಅಡಚಣೆಗಳು ಮತ್ತು ಆರ್ಥಿಕ ಉನ್ನತಿಯ ಕಾಲದಲ್ಲಿ ಪ್ರಾಪಂಚಿಕ ಅಡಚಣೆಗಳು ಎನಿಸುವ ಅನುಭವ ನಿಮಗೆ ಬರುವದು.

ಈ ರಾಶಿಯ ಜನರು ತಮ್ಮ ಆರೋಗ್ಯವನ್ನು ದಿಸೆಂಬರ ೧೧ ರ ವರೆಗೆ ಬಹಳಮುಟ್ಟಿಗೆ ಮತ್ತು ಎಪ್ರಿಲ ೧೧ ರಿಂದ ಆಗಷ್ಟ ೩೧ರ ವರೆಗೆ ಸರ್ವಸಾಧಾರಣವಾಗಿ ಜಪ್ಪಿಸಿಕೊಳ್ಳಬೇಕು. ಉಳಿದ ದಿನಗಳಲ್ಲಿ ನಿರ್ಭಯದಿಂದ ಇರಬೇಕು. ಜನೆವರಿ ೨೯ರ ವರೆಗೆ ಸ್ವಭಾವದಲ್ಲಿ ಒಂದು ಬಗೆಯ ವೃತ್ತಿಯಿರುವದು. ಆದರೆ ಮುಂದೆ ಅದು ಬಹಳಮುಟ್ಟಿಗೆ ಬದಲಾಗುವದು. ಈಗ ಇರುವ ೮ನೇ ಶನಿಯಿಂದ ಮೇಲಿಂದ ಮೇಲೆ ಮೈಯಲ್ಲಿ ವಾತವಿಕಾರವಾಗಿ ಗ್ಯಾಸ ಹಿಡಿಯುವದು ಇಷ್ಟೇ. ಉಳಿದ ವಿಷಯಗಳಲ್ಲಿ ಪುಷ್ಟಿ ಮತ್ತು ಸೌಖ್ಯವರ್ಧಕನಾಗುವನು. ಆದರಂತೆ ಎಪ್ರಿಲ ೧೧ ರಿಂದ ಅಗಷ್ಟ ೩೧ರ ವರೆಗೆ ಇರುವ ೧೨ ನೇ ಗುರು ಸಹ ಸ್ವಲ್ಪ ಹೆಚ್ಚು ವೆಚ್ಚದಲ್ಲಿ ತರುವನಾದರೂ ಧಾರ್ಮಿಕ ತಿಳಿವಳಿಕೆಯಂತೆ ತನುಮನಧನಗಳಿಂದ ಪರಿಶ್ರಮ ಪಡುವಿರಿ. ಪುಣ್ಯಕೃತ್ಯಗಳನ್ನು ಬಹಳ ಮಾಡುವಿರಿ. ಕೆಲವರಿಗೆ ಮುಖ್ಯ ಮುಖ್ಯ ಯಾತ್ರೆ ಸಂಭವಿಸುವವು. ಕೆಲವರು ಯಜ್ಞಯಾಗಾದಿಗಳನ್ನು ಮಾಡುವಿರಿ. ದೊಡ್ಡ ದೊಡ್ಡ ಸ್ತುತ್ಯ ಕೆಲಸಗಳನ್ನು ಕೆಲವರು ಮಾಡುವರು. ಇನ್ನು ಕೆಲವರು ಅಕ್ಷಯ್ಯ ಕೆಲ ಲೋಕೋಪಯೋಗಿ ಕಾರ್ಯಮಾಡಿ ಅಜರಾಮರ ಕೀರ್ತಿಯನ್ನು ಸಂಪಾದಿಸುವರು. ಈ ಬಗೆಯ ಪಾರಮಾರ್ಥಿಕ ಕೃತಿಯ ಜೊತೆಯಲ್ಲಿಯೇ ಹೊಸ ಹೊಲ ತೋಟಪಟ್ಟಿ ಮನೆಮಾರು ಮಾಡುವುದಲ್ಲದೆ ವಾಹನಗಳನ್ನು ಕೊಳ್ಳುವರು. ಈ ಬಗೆಯ ಐಹಿಕಸುಖ ಹೆಚ್ಚುವದು. ಅರ್ಥಾತ್ ೮ನೇ ಶನಿ ಬಂದನೆಂದು, ೧೨ ನೇ ಗುರು ಬಂದನೆಂದು ಅಂಜುವ ಕಾರಣವಿಲ್ಲ.

ಹೆಂಡತಿಯ ಆರೋಗ್ಯ ಜನೆವರಿ ೨೯ ರ ವರೆಗೆ ಬಹಳ ಕಿರಿಕಿರಿಯದು. ಮೂಲವ್ಯಾಧಿ, ಮೈಮೇಲೆ ಹೋಗುವದು, ಸಂದುನೋವು ಮೊದಲಾದ ಉಪದ್ರವವಿದ್ದದ್ದೇ. ಅದರಂತೆ ಈ ತಾರೀಕಿನ ವರೆಗೆ ಉಭಯತರಲ್ಲಿ, ಮೇಲಿಂದ ಮೇಲೆ ವಾಗ್ಯುದ್ಧ ನಡೆಯುವದು. ಮುಂದೆ ಮಾತ್ರ ಪೂರ್ಣ ಪ್ರೇಮ ಮತ್ತು ಪರಸ್ಪರ ಏಕನಿಷ್ಠೆ. ಅವಳ ಆರೋಗ್ಯವೂ ಚೆನ್ನಾಗಿ ಸುಧಾರಿಸುವದು. ಒಂದು ವೇಳೆ ಇನ್ನೂ ನಿಮ್ಮ ಲಗ್ನವೇ ಆಗಿರದಿದ್ದರೆ ಮಾತ್ರ ಅದು ದಿಸೆಂಬರ ೧೧ ರಿಂದ ಎಪ್ರಿಲ ೧೧ ರ ವರೆಗೆ ನಾಲ್ಕು ತಿಂಗಳ ಮಾತ್ರ ಸರ್ವಸಾಧಾರಣ ಬಾಶಿಂಗ ಬಲವಿದೆ. ಆದರೆ ಯಾರ ಜನ್ಮಕುಂಡಲಿಯಲ್ಲಿ ಗುರು ಮತ್ತು ಶನಿಯ ಷಡಾಷ್ಟಕ ಇದ್ದರೆ ಅಂಥವರ ಲಗ್ನ ಕೂಡಿಬಂದರೂ ಮುರಿದು ಹೋಗುವ ಅಂಜಿಕೆ ಇದೆ. ವಧು ವರ ಅನುರೂಪ ಸಿಕ್ಕುವರು. ಆದರೆ

ಒದಗಿ ಬರಬೇಕಾದರೆ ನಡುವೆ ಅನೇಕ ಅಡಚಣೆಗಳು ಬಂದು ಮನಸ್ಸು ವಿರಸಗೊಳ್ಳುವದು.

ನಿಮ್ಮ ಮಕ್ಕಳ ಮದುವೆ ಆಗುವದಿದ್ದರೆ ಅದಕ್ಕೆ ಮಾತ್ರ ದಿಸೆಂಬರ ೧೧ ರಿಂದ ಎಪ್ರಿಲ ೧೧ ರ ವರೆಗೆ ಮತ್ತು ಮುಂದೆ ಆಗಷ್ಟ ೩೧ ರ ನಂತರ ಒಳ್ಳೆ ಬಾಶಿಂಗಬಲವಿದೆ. ಅಲ್ಪಾಯಾಸದಿಂದ ಲಗ್ನ ಕೂಡಿಬಂದು ಅನಾಯಾಸದಿಂದ ಆಗಿ ಬಿಡುವದು. ಅಳಿಯ ಇಲ್ಲವೆ ಸೊಸೆ ಸುಂದರ ಮತ್ತು ಒಳ್ಳೆ ಸುಬುದ್ಧ ಸಿಕ್ಕುವದರಿಂದ ಮನಸ್ಸಿನಲ್ಲಿ ಬಹಳ ಸಮಾಧಾನ. ಉಳಿದ ಆಪ್ತರಿಂದ ಬಹಳ ಸುಖವನ್ನು ಅಪೇಕ್ಷಿಸದಿದ್ದರೂ ಅವರಿಂದ ತೊಂದರೆಯೂ ಆಗುವದಿಲ್ಲ. ಔಪಚಾರಿಕ ರೀತಿಯಿಂದ ಅವರು ಚೆನ್ನಾಗಿ ವರ್ತಿಸುವರು. ಮನೆಯಲ್ಲಿಯ ನೋಕರ ಚಾಕರರು ದೀಪಾವಳಿಯ ಮೊದಲನೇ ವಾರದಲ್ಲಿಯೇ ಮತ್ತು ಮುಂದೆ ಎಪ್ರಿಲ ೧೩ ರಿಂದ ಮೇ ೧೪ ರ ವರೆಗೆ ಸ್ವಲ್ಪ ಒಡೆದಂತೆ ತೋರುವರು. ಆದರೆ ಉಳಿದ ವೇಳೆಯಲ್ಲಿ ಪೂರ್ತಿ ನಿಷ್ಠೆಯಿಂದ ನೋಕರಿ ಮಾಡುವರು. ಬಾಡಿಗೆ ಮನೆಯಲ್ಲಿದ್ದರೆ ಒಡೆಯರಿಂದ, ಸ್ವತಃ ನೀವೇ ಮನೆಯವರಾಗಿದ್ದರೆ ಬಾಡಿಗೆ ಇದ್ದವರಿಂದ ಒಂದಿಲ್ಲೊಂದು ಬಗೆಯ ಕಿಟಕಿಟಿಯಾಗುವ ಸಂಭವ ಬಹಳಿದೆ.

ಉಪಜೀವನದ ಮುಖ್ಯ ಸಾಧನದ ಬಗ್ಗೆ ಗ್ರಹಯೋಗವನ್ನು ನೋಡಿದರೆ ಈ ಅಂಶಗಳು ಕಂಡು ಬರುವವು. ಸ್ವತಂತ್ರ ಧಂದೆಯನ್ನು ನೀವು ಮಾಡುತಿದ್ದರೆ ಎಪ್ರಿಲ ೧೧ ರಿಂದ ಆಗಷ್ಟ ೧೧ ರ ವರೆಗಿನ ಅವಧಿಯು ಅದಕ್ಕೆ ಮಂದಿಯ ಕಾಲವು. ಜನರಿಂದ ಕೊಡತಕ್ಕೊಳ್ಳುವದೇ ಹೆಚ್ಚುವದು. ಆದರೆ ಉಳಿದ ಸಮಯದಲ್ಲಿ ಮಾತ್ರ ಅದು ಹೆಚ್ಚು ಅಭಿವೃದ್ಧಿ ಹೊಂದಿ ಆವಶ್ಯಕ ಕೊರತೆಗಳೆಲ್ಲ ಪೂರೈಸಲ್ಪಡುವವು. ಕೆಲದಿನಗಳು ಸ್ವಲ್ಪ ಕಠಿನವಾಗಿ ಪರಿಣಮಿಸಿದರೂ ಮಾನಹಾನಿಯ ಇಲ್ಲವೆ ದಿವಾಳಿಯ ಅಂಜಿಕೆ ಮಾತ್ರ ಸ್ವಲ್ಪೂ ಇಲ್ಲ. ನೋಕರರದು ಎಲ್ಲವೂ ಸುರಳಿತ ಸಾಗುವದು. ನವಂಬರ ೩೦ ರಿಂದ ದಿಸೆಂಬರ ೨೪, ಜನವರಿ ೧೬ ರಿಂದ ಫೆಬ್ರುಆರಿ ೯, ಮಾರ್ಚ ೫ರಿಂದ ೨೯, ಎಪ್ರಿಲ ೨೩ ರಿಂದ ಮೇ ೧೭, ಜೂನ ೧೧ ರಿಂದ ಜುಲೈ ೭ ಮತ್ತು ಅಕ್ಟೋಬರ ೭ ರ ನಂತರದ ಅವಧಿಯಲ್ಲಿ ಅನೇಕರಿಗೆ ಬಡತಿಯಾಗುವ ಪ್ರಬಲ ಯೋಗವಿದೆ. ಅದರಂತೆ ಟೆಂಪರರಿ ಇದ್ದವರಿಗೂ ಫೆಬ್ರುಆರಿ ೨ ರ ವರೆಗೆ ಇಲ್ಲವೆ ಎಪ್ರಿಲ ೧ ರಿಂದ ಅಕ್ಟೋಬರ ೨ ರ ವರೆಗಿನ ಅವಧಿಯಲ್ಲಿ ಮೇಲಿನ ಗ್ರೇಡು ಸಿಕ್ಕುವ ಪ್ರಬಲ ಯೋಗವಿದೆ. ಆದರೆ ದಿಸೆಂಬರ ೧೧ ರ ವರೆಗೆ ಮತ್ತು ಮುಂದೆ ಎಪ್ರಿಲ ೧೧ ರಿಂದ ಆಗಷ್ಟ ೩೧ ರ ವರೆಗೆ ಲಂಚದ ಬಗ್ಗೆ ಇಲ್ಲವೆ ಕೈಯಲ್ಲಿರುವ ಅಧಿಕಾರದ ಆಕ್ರಮಣ ಬಗ್ಗೆ ಬಹಳ ದಕ್ಷತೆಯಿಂದ ಇರಬೇಕು. ಬದಲಿ ಆಗುವ ಖಾತೆ ಇದ್ದರೆ ದಿಸೆಂಬರ ೧೩ ರ ವರೆಗೆ ಇಲ್ಲವೆ ಮಾರ್ಚ ೩೦ರಿಂದ ಆಗಷ್ಟ ೯ ರ ವರೆಗೆ ಆಗಬಹುದು. ಆದರೆ ಆ ಸ್ಥಳವು ಮಾತ್ರ ನಿಮ್ಮ ಮನಸ್ಸಿಗೆ ಬಹಳ ಮಟ್ಟಿಗೆ ಬರಲಿಕ್ಕಿಲ್ಲ. ಶುಭಕಾರ್ಯಗಳಲ್ಲಿಯಾದರೂ ಬಹಳ ಮಟ್ಟಿಗೆ ಫಾಜೀಲ ವೆಚ್ಚ ಮಾಡಬೇಕಾದ ಹ್ಯಾವು ಬಹಳ. ಇಲ್ಲವೆ ಹುಚ್ಚುಚ್ಚಾರ ಮಾತುಗಳ ಈರ್ಷೆಗಾಗಿಯೂ ಬಹಳ ವೆಚ್ಚ ಮಾಡುವ ಮೂರ್ಖತನ ಸೂಚಿತವಾಗುವದು. ಆದರೂ ಈ ಸೂಚನೆಗಳನ್ನು ಸದಾ ಕಣ್ಣುಮುಂದೆ ಇಟ್ಟುಕೊಂಡು ನಡೆಯಬೇಕು. ಒಟ್ಟಾರೆ ದ್ರವ್ಯಲಾಭ ಸಾಕಷ್ಟಿದ್ದರೂ ವೆಚ್ಚ ಅದಕ್ಕೂ ಹೆಚ್ಚಾಗುವ ವಿಷಮ ಪರಿಸ್ಥಿತಿ ಈ ವರ್ಷ ನಿಮಗೆ ಬರುವದು.

ಫಿರ್ಯಾದುಗಳಲ್ಲಿ ಇಲ್ಲವೆ ಖಾಸಗಿ ಸ್ಪರ್ಧೆಗಳಲ್ಲಿಯ ಬಹುತರ ಕೆಲಸಗಳು ಈ ವರ್ಷ ಯಶಸ್ವಿಯಾಗುವವು. ಆದರೆ ಅದರಲ್ಲಿ ಲೆಕ್ಕ ಹಾಕಿ ನೋಡಿದರೆ ಬಹಳಷ್ಟು ತುಂಬಿಬಂದಂತೆ ತೋರುವದಿಲ್ಲ. ತದ್ವಿರುದ್ಧವಾಗಿ ಆ ಯಶಸ್ಸನ್ನು ಪದರಿನಲ್ಲಿ ಹಾಕಿಕೊಳ್ಳುವದಕ್ಕಾಗಿ ಶಾರೀರಕ ಮತ್ತು ಮಾನಸಿಕ ತೊಂದರೆ ವಿಪರೀತವೆನಿಸುವದು ಮತ್ತು ಕೈಯಿಂದಲೂ ಹೆಚ್ಚು ವೆಚ್ಚ ಮಾಡಬೇಕಾಗಿ ಬರುವದು. ಅಲ್ಲದೆ ಪ್ರತಿಪಕ್ಷಿಗಳ ಕೂಗಾಟ ಮೊದಲಿನಂತೆ ಉಳಿದೇ ಉಳಿಯುವದು.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ, ಅವರಲ್ಲಿ ಯಾರು ದಿಸೆಂಬರ ೧೧ರಿಂದ ಎಪ್ರಿಲ ೧೧ ಮತ್ತು ಆಗಷ್ಟ ೩೧ ರ ನಂತರ ಹಡೆಯುವರೋ ಅವರು ಸುಲಭವಾಗಿ ಹಡೆಯುವರು. ಮುಂದೆಯೂ ಬಾಳಂತಿತನ ಚೆನ್ನಾಗಿ ಆಗುವದು. ಮಗುವೂ ಸುಖರೂಪ ಬೆಳೆಯುವದು. ಅರ್ಥಾತ್ ಉಳಿದ

ಅವಧಿಯಲ್ಲಿಯ ಪ್ರಸೂತಿಯಲ್ಲಿ ಬಹಳ ದಿನ ತುಂಬುವದರಿಂದ ಅಲ್ಪಸ್ವಲ್ಪ ಕ್ಲೇಶವಾಗುವದಲ್ಲದೆ ಕೂಸೂ ಬಹಳ ಅಶಕ್ತವಾಗುವ ಸಂಭವವಿದೆ. ದಿಸೆಂಬರ ೧೩ ರಿಂದ ಫೆಬ್ರುಅರಿ ೨, ಮಾರ್ಚ ೩೦ ರಿಂದ ಮೇ ೨೦ ಮತ್ತು ಅಕ್ಟೋಬರ ೨ರ ನಂತರ ಹಡೆದರೆ ಬಹುಶಃ ಗಂಡು ಹುಟ್ಟುವದು. ಉಳಿದ ವೇಳೆಯಲ್ಲಿ ಹಡೆದರೆ ಹೆಣ್ಣು ಹುಟ್ಟುವ ಯೋಗವಿದೆ. ಇದನ್ನೇನು ಪ್ರತ್ಯೇಕ ಹೇಳಬೇಕಾಗಿಲ್ಲ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ದಿಸೆಂಬರ ೧೩ರ ವರೆಗೆ ಇಲ್ಲವೆ ಫೆಬ್ರುಅರಿ ೨ ರಿಂದ ಮಾರ್ಚ ೩೦ ರ ವರೆಗೆ ಮುಂದೆ ಅಕ್ಟೋಬರ ೨ ರ ನಂತರ ಆಗುವದಿದ್ದರೆ ಅವರು ನಿಶ್ಚಿತವಾಗಿ ತೇರ್ಗಡೆ ಹೊಂದುವರೆಂದು ತಿಳಿಯಲು ಅಡ್ಡಿಯಿಲ್ಲ.

ಸಿಂಹ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಮಕ್ಕಳ ಸೌಖ್ಯವೊಂದನ್ನು ಬಿಟ್ಟರೆ ಉಳಿದ ವಿಷಯಗಳಲ್ಲಿ ಬಹಳ ಸಮಾಧಾನಕಾರಕ ಉತ್ಕರ್ಷದ ವರ್ಷವೆಂದು ವರ್ಷದ ಕೊನೆಯಲ್ಲಿ ನಿಶ್ಚಯವಾಗಿ ಪ್ರತ್ಯಯಕ್ಕೆ ಬರುವದು.

ಈ ರಾಶಿಯ ಜನರು ಸುಮಾರು ಕಳೆದ ಎಂಟು ವರ್ಷಗಳಿಂದ ಇದ್ದ ಶನಿಯ ಸಾಡೇಸಾತಿಯಿಂದ ಇದೇ ೨ ತಿಂಗಳುಗಳಿಂದ ಪೂರ್ಣವಾಗಿ ಮುಕ್ತರಾಗಿದ್ದು ಈಗ ಶನಿಯು ತನ್ನ ಉಚ್ಚರಾಶಿಯಾದ ತುಲಾದಲ್ಲಿ ನಿಮಗೆ ಮೂರನೆಯ ಅಂದರೆ ಅತ್ಯಂತ ಪ್ರೀತಿಯ ಸ್ಥಾನದಲ್ಲಿ ಬರುವದರಿಂದ ಬಹಳ ಆನಂದದಲ್ಲಿ ಇರುವಿರಿ. ಅಂತೆಯೇ ಸಾಡೇಸಾತಿಯಲ್ಲಿ ಆದ ಹಾನಿ ಬಹಳ ಮಟ್ಟಿಗೆ ತುಂಬಿಬರಹತ್ತುವದು. ಅನುಭವಿಸಿದ ದುಃಖದ ಗಾಯಗಳು ಒಂದಿಲ್ಲೊಂದು ರೂಪದಿಂದ ಮಾಯಹತ್ತುವವು. ತುಚ್ಛತೆಯಿಂದ ನಿಮ್ಮನ್ನು ಧಿಕ್ಕರಿಸಿದವರು ಈಗ ವಿಷಾದ ಪ್ರದರ್ಶಿಸಿ ನಿಮ್ಮೊಡನೆ ಮಿತ್ರತ್ವಕ್ಕಾಗಿ ಕೈ ಮುಂದೆ ಚಾಚುವರು. ನಾಗರಹಾವು ಹೇಗೆ ತನ್ನ ಪರಿಯನ್ನು ಬಿಟ್ಟುಗೊಟ್ಟ ಬಳಿಕ ಮೊದಲಿನಂತೆ ಸ್ವಚ್ಛ ಹಾಗು ಹುರುಪಿನಿಂದ ಕೂಡುವದೋ ಅದೇ ರೀತಿ ನೀವು ಹೊಸ ತರುಣರಂತೆ ಕಾಣಹತ್ತುವಿರಿ. ಮೈಯಲ್ಲಿ ಯಾವಾಗಲೂ ಉತ್ಸಾಹ ಕಾಣಹತ್ತುವದು.

ಈ ವರ್ಷ ನಿಮ್ಮ ಆರೋಗ್ಯ ಒಟ್ಟಾರೆ ಅನು-ಕೂಲವುಳಿಯುವದು ಮತ್ತು ಎಪ್ರಿಲ ೧೧ ರಿಂದ ಆಗಸ್ಟ ೩೧ ರ ವರೆಗೆಯಂತೂ ಬಹಳ ಉತ್ತಮ ಉಳಿಯುವದು. ನಿಮ್ಮ ವಯೋಮಾನಾನುಸಾರ ತೂಕವೂ ಹೆಚ್ಚುವದು. ಆದರೂ ಮಾರ್ಚ ೩೦ ರಿಂದ ಮೇ ೨೦ ರ ವರೆಗೆ ವಾಹನಗಳ ಅಪಘಾತದಿಂದ ನಾಲ್ಕೆಂಟು ದಿನ ಮನೆಯಲ್ಲಿ ಬಿದ್ದುಕೊಂಡಿರಬೇಕಾಗುವದು.

ಪ್ರಕೃತಿ ಉತ್ಸಾಹಜನಕ ಮತ್ತು ಆರೋಗ್ಯದಾಯಕವಿದ್ದಂತೆ ಅವಾಂತರ ದೇಹಸುಖವೂ ಉಳಿಯುವದು. ಸ್ಥಾವರ ಜಂಗಮ ಆಸ್ತಿಯಲ್ಲಿ ಬಹಳ ಹೆಚ್ಚಳವಾಗುವದು. ಮತ್ತು ಅನೇಕರು ನಿಮ್ಮ ಮೇಲೆ ಇರುವ ವೈಯಕ್ತಿಕ ಆದರದ ಮೂಲಕ ಕಡಿಮೆ ಬೆಲೆಯಲ್ಲಿ ಅದನ್ನು ಕೊಡುವ ಯೋಗವಿದೆ. ಅವಶ್ಯವಿಲ್ಲದಿದ್ದರೂ ಕೇವಲ ಹೌಸಿಗಾಗಿ ಕೆಲ ಹೊಸ ವಾಹನಗಳನ್ನು ಕೊಳ್ಳುವಿರಿ. ಮನೆಯಲ್ಲಿಯ ಎಲ್ಲ ಜನರು ನೀವು ಹೇಳಿದಂತೆ ನಡೆಯುವರು. ಅಣ್ಣ ತಮ್ಮಂದಿರು, ಅಕ್ಕತಂಗಿಯರಂತೂ ಆಶ್ಚರ್ಯಕಾರಕ ಪ್ರೇಮದಿಂದ ವರ್ತಿಸುವರು.

ಸ್ತ್ರೀಸುಖಕ್ಕಂತೂ ಈ ವರುಷ ಅತ್ಯಂತ ಅನುಕೂಲವಿದ್ದು ಉಭಯತರ ಅಭಿಪ್ರಾಯ, ವಿಚಾರ ಕಲ್ಪನೆಗಳಲ್ಲಿಯೂ ಐಕಮತ್ಯವಾಗುವದು. ಉಭಯತರಲ್ಲಿ ಮಕ್ಕಳ ಲಾಲನ ಪೋಷಣೆಯಲ್ಲಿ ಆಗಾಗ ಸ್ವಲ್ಪ ಘುಸಮುಸಿ ನಡೆದರೂ ಪರಸ್ಪರರಲ್ಲಿಯ ನಿಷ್ಠೆ ಮತ್ತು ಪ್ರೇಮಕ್ಕೆ ಭಂಗ ಬರಲಾರದು. ಅವಳು ಮನೆಯಲ್ಲಿರುವಾಗ ಭಾಗ್ಯವರ್ಧಕ ಸಂಗತಿಗಳು ನಡೆದಷ್ಟು ಅವಳು ತವರುಮನೆಗೆ ಇಲ್ಲವೆ ಎರಡನೇ ಊರಿಗೆ ಹೋವಾಗ ಸಂಭವಿಸುವದಿಲ್ಲೆಂಬ ಅನುಭವ ಬರುವದು. ನಿಮ್ಮ ಮದುವೆ ಇನ್ನೂ ಆಗುವದಿದ್ದರೆ ಅದು ಈ ವರ್ಷ ನಿಶ್ಚಿತವಾಗಿ ಆಗುವದು. ಅದಕ್ಕೆ ದಿಸೆಂಬರ ೧೧ ರ ವರೆಗೆ ಮತ್ತು ಮುಂದೆ ಎಪ್ರೆಲ ೧೧ ರಿಂದ ಆಗಸ್ಟ ೩೧ ರ ವರೆಗೆ ಗುರುಬಲ ಬಹಳ ಅನುಕೂಲವಿದೆ. ವಧೂ ಇಲ್ಲವೆ ವರ ಪರಸ್ಪರ ಅತ್ಯಂತ ಪ್ರೀತಿಯುವರು ದೊರೆಯುವರು. ಮತ್ತು ಅತ್ತೆಮನೆಯುವರೂ ಬಹಳ ಹೌಸಿನವರು ಸಿಕ್ಕುವರು. ನಿಮ್ಮ ಮಕ್ಕಳ ಮದುವೆ ಮಾಡುವದಿದ್ದರೆ ಅದಕ್ಕೆ ಮಾತ್ರ ದಿಸೆಂಬರ ೧೧ ರ ವರೆಗೆ ಬಹಳ ಉತ್ತಮ. ಮತ್ತು ಎಪ್ರಿಲ ೧೧ ರಿಂದ ಆಗಸ್ಟ ೩೧ ರ ವರೆಗೆ ಬಹಳ ಪ್ರಯಾಸದಿಂದ ಆಗುವ ಬಾಶಿಂಗಬಲವಿದೆ. ಜನೆವರಿ ೨೯ ರಿಂದ ಮಕ್ಕಳಲ್ಲಿ ಕೆಲವರಿಗೆ ಕಾಯಿಲೆ, ಕೆಲವರ ವರ್ತನೆ ಮನಸ್ಸಿನ ವಿರುದ್ಧ ಮತ್ತು ಕೆಲವರು ದೀರ್ಘ ಅವಧಿಯುವರೆಗೆ ದೂರಸ್ಥಳಕ್ಕೆ ಹೋಗುವದರಿಂದ ಅವರ ಸುಖದ ಬಗ್ಗೆ ಬಹಳ ಕಾಲ ವಿರಸವಾಗುವ ಯೋಗವಿದೆ. ಉಳಿದ ಆಪ್ತರು ಮತ್ತು ನೋಕರರು ಬಹಳ ಚನ್ನಾಗಿ ವರ್ತಿಸುವರು.

ಧಂದೆ ನೋಕರಿ ಮಾಡುವವರಿಗೆ ಈ ವರ್ಷ ಬಹಳ ಅನುಕೂಲ. ಅದರಲ್ಲಿಯೂ ಧಂದೆ ಮಾಡುವವರಿಗೆ ಕುಬೇರನೇ ಪ್ರಸನ್ನನಾದಂತೆನಿಸುವದು. ವಿಶೇಷತಃ ದಿಸೆಂಬರ ೬ ರ ವರೆಗೆ ಮತ್ತು ಮುಂದೆ ದಿಸೆಂಬರ ೨೬ ರಿಂದ ಜನೆವರಿ ೧೨, ಜನೆವರಿ ೩೦ ರಿಂದ ಎಪ್ರಿಲ ೨೫ ಮತ್ತು ಮೇ ೨೬ ರಿಂದ ಆಗಸ್ಟ ೧ ಮತ್ತು ಸಪ್ಟೆಂಬರ ೪ ರಿಂದ ಮುಂದಿನ ಅವಧಿಯಲ್ಲಿ ಬಹಳ ದುಡ್ಡು ಸಿಕ್ಕುವ ಸಂಭವವಿದೆ. ನೋಕರರಿಗೆ ಎಪ್ರಿಲ ೧೧ರ ವರೆಗೆ ಮೇಲಿನ ಗ್ರೇಡು ಸಿಕ್ಕು ಸಂಬಳ ಹೆಚ್ಚುವದು. ಆದರೆ ಆಗಸ್ಟ ೩೧ರ ವರೆಗೆ ಅಂತೂ ಮೆಹರಬಾನಿಗೆಯಿಂದ ಜನರು ನಿಮ್ಮ ಕಿಸೆ ತುಂಬುವರು. ವರಿಷ್ಠರು ಸದಾ ಸಮಾಧಾನದಲ್ಲಿರುವರು. ಆದರೆ ಕೈ ಕೆಳಗಿನವರು ಮಾತ್ರ ಯಾವಾಗಲೂ ನಿಮ್ಮ ಬಗ್ಗೆ ತಕರಾರು ಮಾಡುವರು. ಬಹಳ ದೂರ ಪ್ರವಾಸ ಸಂಭವಿಸುವದು. ಬದಲಿಯಾದರೆ ಅದು ಯೋಗ್ಯ ಸ್ಥಳಕ್ಕೆ ಆಗುವದು. ನವಂಬರ ೩೦ ರಿಂದ ದಿಸೆಂಬರ ೨೪, ಫೆಬ್ರುವರಿ ೯ ರಿಂದ ಮಾರ್ಚ ೫, ಇಲ್ಲವೆ ಅಕ್ಟೋಬರ ೩೦ ರ ನಂತರ ಬದಲಿಯಾಗುವ ಸಂಭವ ಬಹಳಿದೆ. ಒಟ್ಟಾರೆ ಈ ವರ್ಷ ಎಲ್ಲರಿಗೂ ಒಳ್ಳೆ ಅನುಕೂಲದ ಉಬ್ಬರ ಮತ್ತು ಬಹಳ ಭಾಗ್ಯೋದಯದ್ದಾಗಿ ಪರಿಣಮಿಸುವದೆಂಬಲ್ಲಿ ಸಂದೇಹವಿಲ್ಲ.

ಈ ರಾಶಿಯ ಸ್ತ್ರೀಯರು ಈ ವರ್ಷ ಹಡೆಯುವವರಿದ್ದರೆ ಅವರು ಜನೆವರಿ ೨೯ ರ ವರೆಗೆ ನಿರ್ಭೀತಿಯಿಂದಿರಬೇಕು. ಅನಂತರ ಹಡೆಯುವ ಕಾಲವಿದ್ದರೆ ಮಾತ್ರ ಅವರು ಮೇಲಿಂದ ಮೇಲೆ ಯೋಗ್ಯ ಡಾಕ್ಟರರ ಸಲಹೆ ತೆಗೆದುಕೊಳ್ಳಬೇಕು. ಬಹಳ ಮಟ್ಟಿಗೆ ಗಂಡು ಮಗುವೇ ಹುಟ್ಟುವದು. ಆದರೆ ದಿಸೆಂಬರ ೧೧ ರಿಂದ ಎಪ್ರೀಲ ೧೧ ರ ವರೆಗೆ ಹಡೆಯುವವರಿಗೆ ಮಾತ್ರ ಹೆಣ್ಣು ಹುಟ್ಟುವ ಸಂಭವವೇ ಬಹಳ. ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಗಳಲ್ಲಿ ಜನೆವರಿ ೨೯ ರ ವರೆಗೆ ಮತ್ತು ಎಪ್ರೀಲ ೧೧ ರಿಂದ ಆಗಸ್ಟ ೩೧ ರ ವರೆಗೆ ಒಳ್ಳೆ ಯಶಸ್ಸು ಸಿಕ್ಕುವದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ ೧೧ ರ ವರೆಗೆ ಇಲ್ಲವೆ ಎಪ್ರಿಲ ೧೧ ರಿಂದ ಆಗಸ್ಟ ೩೧ ರ ವರೆಗೆ ಆಗುವದಿದ್ದರೆ ಅವರು ನಿಶ್ಚಿತವಾಗಿ ತೇರ್ಗಡೆ ಹೊಂದುವರು.

ಕನ್ಯಾ

ಈ ವರ್ಷ ಈ ರಾಶಿಯವರು ಒಟ್ಟಾರೆ ಬಗೆಬಗೆಯ ಅಡಚಣಿಗಳು ಬಂದು ಮಾನಸಿಕ ತೊಂದರೆಯೆನಿಸಿದರೂ ಕೊನೆಯಲ್ಲಿ ಅಲ್ಪಸ್ವಲ್ಪಾದರೂ ಯಶಸ್ಸು ದೊರೆಯದೆ ಬಿಡದು ಎಂದು ನಿಃಸಂದೇಹವಾಗಿ ತಿಳಿಯತಕ್ಕದ್ದು.

ಈ ರಾಶಿಯವರಿಗೆ ಸಾಡೇಸಾತಿ ಇನ್ನೂ ಎರಡು ವರ್ಷ ಪೂರ್ಣವಿರುವದು (ವರ್ಷಭವಿಷ್ಯದ ಸಲುವಾಗಿ ಯಾವ ಪಂಚಾಂಗವನ್ನುಪಯೋಗಿಸುವೆವೊ ಆ ಶ್ರೀ ಅನಂತಶಾಸ್ತ್ರಿ ಕೃತ ಪಂಚಾಂಗಾನುಸಾರ) ೧೯೫೫ನೇ ಇಸ್ವಿಯ ನವಂಬರ ೯ಕ್ಕೆ ಅದು ಹೋಗುವದು. ಅಂದರೆ ಈಗ ತುಲಾರಾಶಿಯಲ್ಲಿದ್ದ ಶನಿಯು ವೃಶ್ಚಿಕರಾಶಿಗೆ ಹೋಗುವನು.

ಆದರೆ ಈ ರಾಶಿಯುವರಿಗೆ ಇರುವ ಕೊನೆಯ ೨॥ ವರ್ಷಗಳ ಶನಿಯು ಹಿಂದಿನ ಐದು ವರುಷಗಳಿಗಿಂತ ಬಹಳ ಸೌಮ್ಯವಾಗಿ ಪರಿಣಮಿಸುವನು. ಏಕೆಂದರೆ ಅವನೀಗ ತನ್ನ ಉಚ್ಚರಾಶಿಯಾದ ತುಲಾದಲ್ಲಿ ಇರುವದರಿಂದ. ಒಟ್ಟಾರೆ ಆರೋಗ್ಯ ಚೆನ್ನಾಗಿ ಉಳಿಯುವದು. ಆದರೂ ನಡುನಡುವೆ ಬದ್ಧಕೋಷ್ಠತೆ, ಮೈಮೇಲೆ ಬೊಕ್ಕೆಗಳೇಳುವದು, ವಿಪರೀತ ಮಾತುಗಳ ಬಗ್ಗೆ ಹವ್ಯಾಸವುಂಟಾಗಿ ಮನಸ್ಸು ಆರಾಮವಿಲ್ಲದಿರುವದು, ಮೈಯಲ್ಲಿ ಉಷ್ಣತೆಯೆನಿಸುವ ಮೊದಲಾದ ತೊಂದರೆಯಿರುವದು. ಆದರಲ್ಲಿಯೂ ದಿಸೆಂಬರ ೧೩ ರಿಂದ ಫೆಬ್ರುವರಿ ೨ ಮತ್ತು ಮೇ ೨೦ ರಿಂದ ಅಗಸ್ಟ ೯ ರ ವರೆಗೆ ಆಹಾರವಿಹಾರಗಳಲ್ಲಿ ಅತ್ಯಂತ ದಕ್ಷತೆಯಿಂದ ಇರುವ ಜಾಗ್ರತೆ ವಹಿಸಬೇಕು.

ಉಳಿದ ವಿಷಯಗಳಲ್ಲಿ ದೇಹಸುಖಕ್ಕೆ ಉಪಯುಕ್ತವಾಗುವಂಥ ಯಾವ ಸಂಗತಿಯ ಕೊರತೆಯೆನಿಸುವದಿಲ್ಲ. ತದ್ವಿರುದ್ಧ ಅವುಗಳ ಹೆಚ್ಚಳವಾದಂತೆನಿಸುವದು. ನವಂಬರ ೩೦ ರ ವರೆಗೆ ಮತ್ತೆ ದಿಸೆಂಬರ ೨೪ ರಿಂದ ಫೆಬ್ರುವರಿ ೯ರ ವರೆಗೆ, ಮಾರ್ಚ ೨೯ ರಿಂದ ಎಪ್ರಿಲ ೨೩ ರ ವರೆಗೆ, ಮೇ ೧೭ ರಿಂದ ಜುಲೈ ೯ ಮತ್ತು ಅಗಸ್ಟ ೩೧ ರಿಂದ ಅಕ್ಟೋಬರ ೭ ಈ ಅವಧಿಯಲ್ಲಿ ಇಂಥ ಪರಿಸ್ಥಿತಿ ಬರುವದು. ರೋಖ ಸಂಗ್ರಹ ಸ್ವಲ್ಪಾದರೂ ಹೆಚ್ಚುವದು ಮತ್ತು ಎಪ್ರಿಲ ೧೧ ರಿಂದ ಅಗಸ್ಟ ೩೧ ರ ಅವಧಿಯಲ್ಲಿ ಸ್ಥಾವರದಲ್ಲಿಯೂ ಹೆಚ್ಚಳವಾಗುವದು. ಆದರೆ ಜನೆವರಿ ೨೯ ರಿಂದ ಸ್ಥಾವರದಲ್ಲಿ ಅಣ್ಣತಮ್ಮಂದಿರ, ರೈತರ ಇಲ್ಲವೆ ನೆರೆಯ ಹಕ್ಕುದಾರರಿಂದ ಒಂದಿಲ್ಲೊಂದು ಬಗೆಯ ಕಿಟಕಿಟ ಬೇಕಂತೆ ಇದ್ದದ್ದೇ. ಆದೇ ರೀತಿ ಆ ದಿನಾಂಕದಿಂದ ಬರುವ ೪ನೇ ರಾಹು ಮತ್ತು ೧೦ನೇ ಕೇತು ನಿಮ್ಮ ತಾಯಿತಂದೆಗಳಿದ್ದರೆ ಅವರ ದೇಹಕ್ಕೆ ಅನುಕೂಲರಲ್ಲ. ಕ್ವಚಿತ್ ಅವರ ವಿಯೋಗವೂ ಆಗುವದು. ಆದರೆ ಈ ದಿನಾಂಕದಿಂದಲೆ ನಿಮ್ಮ ಮಕ್ಕಳು ಮರಿಗಳ ಉನ್ನತಿ ಅಪೇಕ್ಷೆ ಮೀರಿ ಆಗುವದು. ಮನೆಯಲ್ಲಿ ಸ್ವಲ್ಪ ಕಲಹ ನಡೆದೇ ಇರುವದು. ಆದರೆ ಅದು ಹೆಚ್ಚು ಪ್ರಸಾರ ಮಾತ್ರ ಆಗುವದಿಲ್ಲ. ನಿಮ್ಮ ಮಾತಿನಂತೆಯೇ ಎಲ್ಲರೂ ನಡೆಯುವರು.

ಹೆಂಡತಿಯ ಆರೋಗ್ಯ ದಿಸೆಂಬರ ೧೧ ರ ವರೆಗೆ ಮತ್ತು ಪುನಃ ಎಪ್ರೀಲ ೧೧ ರಿಂದ ಆಗಸ್ಟ ೩೧ ರ ಅವಧಿಯಲ್ಲಿ ಕಿರುಕಳ ಕಿರಿಕಿರಿ ಇರುವದು. ಆದರೆ ಉಳಿದ ಸಮಯದಲ್ಲಿ :ಅದು ನಿರೋಗಿ ಉಳಿಯುವದು. ಮತ್ತು ಉಭಯತರಲ್ಲಿ ಸದಾ ಐಕಮತ್ಯ. ಆದರೂ ದಿಸೆಂಬರ ೧೧ ರಿಂದ ಫೆಬ್ರುಅರಿ ೧೩ ರ ವರೆಗೆ ನೀವು ಇಲ್ಲವೆ ಅವಳು ಸ್ಥಳಾಂತರವಾಗುವದರಿಂದ ವಿರಹವಾಗುವದಿಷ್ಟೇ ಅಲ್ಲ, ಕೆಲಸಮಯ ಅವಳು ನಿಮ್ಮ ಮೇಲೆ ಸಿಟ್ಟಿಗೇಳುವಳು. ಇನ್ನೂ ನಿಮ್ಮ ಲಗ್ನವೇ ಆಗಿಲ್ಲವಾದರೆ ಮತ್ತು ಈ ಸಲ ಮಾಡಿಕೊಳ್ಳುವ ಇಚ್ಛೆ ಇದ್ದರೆ ದಿಸೆಂಬರ ೧೧ ರಿಂದ ಎಪ್ರಿಲ ೧೧ ರವರೆಗೆ ಮಧ್ಯಮ ಪ್ರಮಾಣದಲ್ಲಿ ಆದರೆ ಅಗಸ್ಟ ೩೧ ರ ನಂತರ ಮಾತ್ರ ಉತ್ತಮ ಬಾಶಿಂಗಬಲವಿದೆ. ವಧೂವರರಲ್ಲಿ ಪೂರ್ಣ ಪ್ರೇಮ. ಲಗ್ನ ಮಾತ್ರ ಸ್ವಲ್ಪ ಅಡಚಣೆಯಿಂದಲೇ ನಡೆದುಹೋಗುವದು.

ಅದರಂತೆ ನಿಮ್ಮ ಮಕ್ಕಳ ಲಗ್ನ ಮಾಡುವದಿದ್ದರೆ ಈ ಅವಧಿಯಲ್ಲಿ ಉತ್ತಮ ಬಾಶಿಂಗಬಲವಿದೆ. ಆದರೆ ದಿಸೆಂಬರ ೧೧ ರಿಂದ ಜನೆವರಿ ೨೯ ರವರೆಗೆ ಲಗ್ನವಾದರೆ ಬೀಗ ಬೀಗರಲ್ಲಿ ಪರಸ್ಪರ ಸಹಾನುಭೂತಿಯ ಬದಲು ತಪ್ಪು ತಿಳಿವಳಿಕೆ ಹೆಚ್ಚುವ ಸಂಭವ. ಅಳಿಯ ಇಲ್ಲವೆ ಸೊಸೆ ಪೂರ್ಣವಾಗಿ ಮನಸ್ಸಿಗೆ ಬರುವರು. ಉಳಿದ ಮಕ್ಕಳು ಸೊಸೆ ಮತ್ತು ಅಳಿಯಂದಿರಿಂದಲೂ ಈ ವರ್ಷ ಮನಸ್ಸಿನಂತೆ ವರ್ತನ ಮತ್ತು ಅವರೆಲ್ಲರ ಪ್ರಗತಿ ಯೋಗ್ಯತಾನುಸಾರ ಜನೆವರಿ ೨೯ ರ ನಂತರ ಆಗುವದು. ಆದರೆ ಇದೇ ದಿನಾಂಕದಿಂದ ಉಳಿದ ಆಪ್ತರಿಂದ, ನೆರೆಯವರಿಂದ, ಮನೆಯೊಡೆಯರಿಂದ ಅಥವಾ ಬಾಡಿಗೆಯವರಿಂದ, ಅಲ್ಪಸ್ವಲ್ಪ ತೊಂದರೆ.

ಧಂದೆ ನೋಕರಿಯುವರಿಗೆ ಈ ವರ್ಷ ಜನೆವರಿ ೨೯ ರಿಂದ ಮುಂದೆ ಕೆಲಸದ ದೃಷ್ಟಿಯಿಂದ ಬಹಳ ತೊಂದರೆ. ಎಷ್ಟೊಂದು ದಕ್ಷತೆಯಿಂದಿದ್ದರೂ ಧಂದೆಯವರಿಗೆ ಆಶ್ರಯದಾತರಿಂದ, ನೋಕರರಿಗೆ ವರಿಷ್ಠರಿಂದ ಮುಗ್ಗಲುತನದ ಖೊಟ್ಟಿ ಆರೋಪ. ಆದರೆ ಅಗಸ್ಟ ೩೧ ರ ನಂತರ ನಿಮ್ಮ ದೈವದ ಬಲುಮೆಯಿಂದ ಅವರು ಸುಮ್ಮನೆ ಕೂಡ್ರಬೇಕಾಗುವದು. ಪ್ರತ್ಯಕ್ಷ ದ್ರವ್ಯಲಾಭಕ್ಕಂತೂ ಈ ವರ್ಷ ಬಹಳ ಅನುಕೂಲ. ವಿಶೇಷವಾಗಿ ಧಂದೆಯವರಿಗೆ ದಿಸೆಂಬರ ೬ ರ ವರೆಗೆ ಅನಂತರ ದಿಸೆಂಬರ ೨೭ ರಿಂದ ಜನೆವರಿ ೧೨, ಎಪ್ರಿಲ ೭ ರಿಂದ ೨೫, ಮೇ ೨೭ ರಿಂದ ಅಗಸ್ಟ ೨೦ ಮತ್ತು ಸಪ್ಟಂಬರ ೪ ರ ನಂತರದ ಅವಧಿ ಬಹಳ ಉತ್ತಮ. ನೌಕರರಿಗೆ ದಿಸೆಂಬರ ೨೪ ರ ವರೆಗೆ ಮತ್ತು ಆ ಬಳಿಕ ಜನೆವರಿ ೧೬ ರಿಂದ ಫೆಬ್ರುಅರಿ ೯, ಮಾರ್ಚ ೫ ರಿಂದ ೨೯, ಎಪ್ರಿಲ ೨೩ ರಿಂದ ಜುಲೈ ೭ ಮತ್ತು ಅಗಸ್ಟ೩೧ ರ ನಂತರದ ಎಲ್ಲ ಕಾಲ ಉತ್ತಮ. ಮೇಲಿನ ಗ್ರೇಡು ಸಿಕ್ಕುವ ಹಕ್ಕು ಇದ್ದರೆ ಅದು ಎಪ್ರಿಲ ೧೧ ರಿಂದ ಅಗಸ್ಟ ೩೧ ರಲ್ಲಿ ಖಾತ್ರಿಯಿಂದ ಸಿಕ್ಕುವದು. ಆದರೆ ಇದೇ ಅವಧಿಯಲ್ಲಿಯೇ ಮೊದಲು ಮನೋಭಂಗವಾಗಿ ಅನಂತರ ಸ್ವಲ್ಪ ದಿನಗಳಲ್ಲಿ ಅದು ಸಿಕ್ಕುವ ಮನೋರಥ ಪೂರ್ಣವಾಗುವದು. ಬದಲೀ ಆಗುವ ಖಾತೆ ಇದ್ದರೆ ಅದು ಅರ್ಥ ಒಪ್ಪಿಗೆಯಿದ್ದ ಊರಿಗೆ ಎಪ್ರಿಲ ೨೩ ರಿಂದ ಜುಲೈ ೭ ರ ಅವಧಿಯಲ್ಲಿ ಆಗುವ ಯೋಗವಿದೆ.

ದಾವೆ ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಯ ಕೆಲಸದಲ್ಲಿ ಈ ವರ್ಷ ಯಶಸ್ಸು ಅನುಕೂಲ. ಆದರೆ ಪ್ರತಿಪಕ್ಷಿಗಳ ಉಪದ್ರವ ಹೆಚ್ಚೇ. ಅದರಲ್ಲಿಯೂ ದಿಸೆಂಬರ ೧೧ ರಿಂದ ಎಪ್ರಿಲ ೧೧ ಮತ್ತು ಅಗಸ್ಟ ೩೧ ರ ನಂತರ ಎಲ್ಲ ನಿರ್ಣಯ ನಿಮಗೆ ಅನುಕೂಲವೇ.

ಈ ರಾಶಿಯ ಸ್ತ್ರೀಯರು ಈ ವರ್ಷ ಹಡೆಯುವವರಿದ್ದರೆ ಅವರಲ್ಲಿ ಯಾರು ಜನೆವರಿ ೨೯ ರ ವರೆಗೆ ಹಡೆಯುವರೋ ಅಂಥವರಿಗೆ ಪ್ರಸೂತಿಕಷ್ಟ ಬಹಳೆನಿಸುವದು ಮತ್ತು ಹುಟ್ಟುವ ಮಗು ಬದುಕಿದರೂ ಬಹಳ ಅಶಕ್ತವಾಗುವದು. ಜನೆವರಿ ೨೯ ರಿಂದ ಮುಂದೆ ಸುಲಭ ಪ್ರಸೂತಿಯ ಯೋಗವಿದೆ. ಅಗಸ್ಟ ೩೧ರ ನಂತರ ಬಹುಶಃ ಪುತ್ರರತ್ನ ಹುಟ್ಟುವದು ಮತ್ತು ಅವನು ಬಲಿಷ್ಠ ಮತ್ತು ದೀರ್ಘಾಯುಷಿಯಾಗುವನು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಜನೆವರಿ ೨೯ ರಿಂದ ಎಪ್ರಿಲ ೧೧ ರ ವರೆಗೆ ಇಲ್ಲವೆ ಅಗಸ್ಟ ೩೧ ರ ನಂತರದ ಅವಧಿಯಲ್ಲಿ ಆದರೆ ಸರಸ್ವತಿಯ ಕೃಪೆ ಅವರ ಮೇಲೆ ಆಗುವದು ನಿಶ್ಚಿತ.

ತುಲಾ

ಈ ರಾಶಿಯವರಿಗೆ ಈ ವರ್ಷ ಒಟ್ಟಾರೆ ಸ್ತ್ರೀಸುಖಕ್ಕೆ ಸ್ವಲ್ಪ ವ್ಯಗ್ರತೆಯದಿದ್ದರೂ ಉಳಿದೆಲ್ಲ ವಿಷಯಗಳಲ್ಲಿ ಒಳ್ಳೆ ಪ್ರಗತಿ ಪರವೇ ಆಗಿದೆ.

ಈ ರಾಶಿಯವರಿಗೆ ಇನ್ನೂ ಬಹಳ ವರ್ಷ ಅಂದರೆ ಸುಮಾರು ೫ ವರ್ಷ ಸಾಡೇಸಾತಿಯಲ್ಲಿ ಕಳೆಯಬೇಕಾಗುವದು. ಆದರೂ ೧೨ನೇ ಶನಿಯು ಹೋಗಿ ಇದೇ ತಾನೆ ಜನ್ಮಸ್ಥ ಶನಿ ಪ್ರಾರಂಭವಾಗುವದರಿಂದ ಮತ್ತು ತನ್ನ ಪ್ರೀತಿಯ ಮತ್ತು ಉಚ್ಚ ತುಲಾ ರಾಶಿಯಲ್ಲಿ ಅವನು ಬರುವದರಿಂದ ಈ ನಡುವಿನ ಎರಡೂವರೆ ವರ್ಷ ತೊಂದರೆ ಕೊಡದೆ ಒಳ್ಳೆ ಸುಖವನ್ನು ಕೊಡುವನೆಂಬಲ್ಲಿ ಸಂದೇಹವಿಲ್ಲ.

ಆದರಲ್ಲಿಯೂ ಎಪ್ರಿಲ ೧೧ ರಿಂದ ಬರುವ ೯ನೇ ಗುರುವು ಹಿಂದೆ ೮ ನೆಯವನಿದ್ದಾಗ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡಿದ್ದರೆ ಈಗ ೯ ನೆಯವನಾದ್ದರಿಂದ ಅಲ್ಪಸ್ವಲ್ಪ ಉಪಾಯದಿಂದ ೮—೧೫ ದಿನಗಳಲ್ಲಿ ಸುಧಾರಿಸಿ ಮುಂದಿನ ಕಾಲದಲ್ಲೆಲ್ಲ ಪೂರ್ಣ ನಿರೋಗಿಯನ್ನಾಗಿಡುವನು. ಮೇಲಿನ ದಿನಾಂಕವರೆಗೆ ಮಾತ್ರ ಕೆಲವರಿಗೆ ಮಧುಮೇಹ, ಹೊಟ್ಟೆಯಲ್ಲಿ ಗ್ಯಾಸಿನ ವಿಕಾರ, ಅಪಚನ, ಗಂಟಲು ನಿಷ್ಕಾರಣವಾಗಿ ಹಿಡಿಯುವದು ಮತ್ತು ತರುಣ ಸ್ತ್ರೀಯರಿಗೆ ಕಡಿಗೆಯ ಸೂಲಿ ಮೊದಲಾದ ಯಾವದಾದರೂ ಬೇನೆ ಆಗುವದು. ಆದರೆ ಇದಾವದರಲ್ಲಿಯೂ ಗಂಡಾಂತರದ ಅಂಜಿಕೆ ನೂರರಲ್ಲಿ ಐದರಷ್ಟಾದರೂ ಇರುವದಿಲ್ಲ. ಅದರಲ್ಲಿಯೂ ಮಾರ್ಚ ೫ ರಿಂದ ಎಪ್ರಿಲ ೧೧ ರ ವರೆಗೆ ಆಹಾರ ವಿಹಾರಗಳಲ್ಲಿ ಹೆಚ್ಚು ಜಪ್ಪಿಸಬೇಕು.

ಇತರ ದೇಹಸುಖಕ್ಕೆ ಈ ವರ್ಷ ಬಹಳ ಉತ್ತಮವಿದ್ದು ಜನೆವರಿ ೨೯ ರಿಂದ ಮುಂದೆ ಆವಶ್ಯಕ ವಸ್ತುಗಳು ದೊಡ್ಡ ಪ್ರಮಾಣದಲ್ಲಿ ಬರಹತ್ತಿ ಅವುಗಳ ವೃದ್ಧಿಯಾಗುವದು. ಜನರಲ್ಲಿ ಪ್ರತಿಷ್ಠೆಯಾಗುವ ಮತ್ತು ಪ್ರೀತಿಯ ಆಪ್ತರು ಮತ್ತು ಮಿತ್ರರ ಕಣ್ಣಿನಲ್ಲಿ ಕೂಡ ನಡುವಂಥ ಯಾವದಾದರೊಂದು ಹೊಲ ಇಲ್ಲವೆ ಮನೆಯನ್ನು ಅಲ್ಪ ಬೆಲೆಯಲ್ಲಿ ಖರೀದಿ ಮಾಡುವ ಯೋಗ ಬರುವ ಸಂಭವ

ವಿದೆ. ಆದರೆ ಆ ವಿಷಯದಲ್ಲಿ ಬಂಧುಗಳು ಕೂಡಿ ಇದ್ದರೆ ನಿಮ್ಮಲ್ಲಿ ಬಹಳ ವಾಗ್ಯುದ್ಧವಾಗುವದು ಮತ್ತು ವಿಭಕ್ತರಾಗಿದ್ದರೆ ಅವರು ನಿಮ್ಮ ವಿರುದ್ಧ ಖರೀದಿ ಕೊಡುವವನ ಮನಸ್ಸನ್ನು ಕಲುಷಿತ ಮಾಡುವರು. ಮಕ್ಕಳ ಉನ್ನತಿ ಮಾತ್ರ ಹಿಂದೆಂದೂ ಆಗದಷ್ಟು ಚೆನ್ನಾಗಿ ಆಗುವದು.

ಸ್ತ್ರೀಸುಖಕ್ಕೆ ಮಾತ್ರ ಈ ವರ್ಷ ಬಹಳಷ್ಟು ಆನಂದದಾಯಕವಿಲ್ಲ. ಆವಳಿಗೆ ಮೇಲಿಂದ ಮೇಲೆ ಉಷ್ಣ, ಜ್ವರ, ಕಣ್ಣುನೋವು, ಜಳವೆನಿಸುವದು ಮೊದಲಾದ ಒಂದಿಲ್ಲೊಂದು ಕ್ಲೇಶದ ಅಂಜಿಕೆ. ಅದರಿಂದ ಅವಳು ಬಹಳ ರೊಚ್ಚಿಗೆದ್ದು ತಿರಸ್ಕಾರದಿಂದ ಎಲ್ಲರೊಡನೆ ವರ್ತಿಸುವಳು. ನಿಮ್ಮ ಕೂಡ ಅವಳ ಮತಭೇದ ಬಹಳ. ಅಲ್ಲದೆ ನೀವು ಇಲ್ಲವೆ ಅವಳು ಸ್ಥಳಾಂತರ ಹೋಗುವದರಿಂದ ವಿರಹವೂ ಆಗುವದು. ವಿಶೇಷವಾಗಿ ದಿಸೆಂಬರ ೧೩ ರಿಂದ ಫೆಬ್ರುವರಿ ೨, ಮೇ ೨೦ ರಿಂದ ಅಗಷ್ಟ ೯ ಈ ಅವಧಿಯು ಅವಳಿಗೆ ಬಹಳ ತೊಂದರೆಯದು. ನಿಮ್ಮ ಲಗ್ನವಿನ್ನೂ ಆಗುವದೇ ಇದ್ದರೆ ಅದಾಗುವದಕ್ಕೆ ಅನೇಕ ಅನಪೇಕ್ಷಿತ ಅಡಚಣಿಗಳು ಬಂದು ಮನಸ್ಸು ಬಹಳ ಉದ್ವಿಗ್ನವಾಗುವದು. ಅದರೂ ಡಿಸೆಂಬರ ೧೧ ರ ವರೆಗೆ ಮತ್ತು ಮಾರ್ಚ ೩೦ ರಿಂದ ಅಕ್ಟೋಬರ ೨ ರ ವರೆಗಿನ ಕಾಲ ಬಾಶಿಂಗಬಲಕ್ಕೆ ಬಹಳ ಅನುಕೂಲವಿದೆ. ಆದರೆ ಲಗ್ನದ ತಿಥಿಯನ್ನು ಮಾತ್ರ ಮೊದಲಸಲವಾದರೂ ಹಿಂದೆ ಮುಂದಕ್ಕೆ ಮಾಡಬೇಕಾಗುವದು. ವಧೂವರರಲ್ಲಿ ಒಬ್ಬರು ಮತ್ತೊಬ್ಬರ ಬಗ್ಗೆ ಸಂತುಷ್ಟರಿರಬಹುದು. ಆದರೆ ಅವರು ಮಾತ್ರ ಹಾಗೆ ಇರುವದಿಲ್ಲ. ನಿಮ್ಮ ಮಕ್ಕಳ ಲಗ್ನವಾಗುವದಿದ್ದರೆ, ಈ ವರ್ಷ ಅದನ್ನು ಮಾಡುವದಿದ್ದರೆ ಮೇಲಿನ ಅವಧಿಯಲ್ಲಿ ಅದು ಅಲ್ಪಾಯಾಸದಿಂದ ಕೂಡಿ ಬರುವದು. ಮುಂದೆ ನಾಲ್ಕೆಂಟು ದಿನಗಳಲ್ಲಿ ಮತ್ತು ಎಲ್ಲ ರೀತಿಯಿಂದ ಮನಸ್ಸಿಗೆ ಬರುವಂತೆ ಆಗುವದು. ಸೊಸೆ ಇಲ್ಲವೆ ಅಳಿಯ ಬಹಳ ಉತ್ಸಾಹಿ ಸ್ವಭಾವದ ಮತ್ತು ಎಲ್ಲರೊಡನೆ ಕೂಡಿ ನಡೆಯುವಂತಹರಿರುವರು.

ಧಂದೆ ನೌಕರವರ್ಗದವರಿಗೆ ಈ ವರ್ಷ ಬಹಳ ಉತ್ಕರ್ಷದ್ದಿರುವದು. ಎಪ್ರಿಲ ೧೧ ರ ನಂತರ ಅದು ಬಹಳ ಹೆಚ್ಚುವದು. ಧಂದೆಯುವರ ಕಿಸೆಯಲ್ಲಿಯಂತೂ ಲಕ್ಷ್ಮಿಯು ನಾಲ್ಕೂ ಕೈಬಿದ್ದಂತಾಗುವದು. ಜನೆವರಿ ೨೯ ರಿಂದ ಅತುಲ ಪರಾಕ್ರಮದ ಕಾರ್ಯ ಮಾಡಿ ತೋರಿಸುವ ಸ್ಫುರಣವಾಗುವದು ಮತ್ತು ಅದರಲ್ಲಿ ಸುದೈವದಿಂದ ಮೊದಲನೇ ದರ್ಜೆಯ ಯಶಸ್ಸು ಸಿಕ್ಕುವದು. ಕೇವಲ ಲಾಭಕ್ಕೆ ನವೆಂಬರ ೧೬ ರಿಂದ ಜನೆವರಿ ೧೪, ಮೇ ೧೪ ರಿಂದ ಜುಲೈ ೧೬ ಮತ್ತು ಅಗಷ್ಟ ೧೭ ರಿಂದ ಸಪ್ಟೆಂಬರ ೧೭ ರ ಅವಧಿಯು ಹೆಚ್ಚು ಉತ್ಕರ್ಷದ್ದಾಗುವದು. ನೋಕರರಿಗೂ ಮೇಲಿನ ಅವಧಿಯಲ್ಲಿ ನಾಲ್ಕು ದುಡ್ಡು ಹೆಚ್ಚಿಗೆ ಸಿಕ್ಕುವ ಯೋಗವಿದೆ. ಎಪ್ರಿಲ ೧೧ ರಿಂದ ಮುಂದೆ ಎಲ್ಲ ದಿನಗಳು ಬಹಳ ಆನಂದದ್ದು ಮತ್ತು ಉತ್ಸಾಹದ್ದು. ಮೇಲಿನ ಗ್ರೇಡಿನ ಅವಕಾಶವಿದ್ದರೆ ಮೇ ೨೦ ರಿಂದ ಅಗಷ್ಟ ೯ ರ ವರೆಗಿನ ಅವಧಿಯಲ್ಲಿ ಅವಶ್ಯ ಸಿಕ್ಕುವದು. ಜನೆವರಿ ೨೯ ರಿಂದ ವರಿಷ್ಠರು ಸಂತೋಷದಿಂದ ವರ್ತಿಸುವರು ಮತ್ತು ಎಪ್ರಿಲ ೧೧ ರಿಂದ ಕನಿಷ್ಠರು ವಿಶೇಷ ನಮ್ರತೆಯಿಂದಿರುವರು. ಬದಲಿ ಆಗುವ ಖಾತೆ ಇದ್ದರೆ ಪ್ರೀತಿಯ ಊರಿಗೆ ಆಗುವದು. ಸಾಮಾಜಿಕ ಗೌರವದ ಪ್ರಸಂಗ ಮೇಲಿಂದ ಮೇಲೆ ಬರುವದು ಮತ್ತು ಬಹಳ ದಿನ ಸಾಡೇಸಾತಿ ಇರುವ ಸ್ಮೃತಿಯೂ ಉಳಿಯದು.

ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಗಳಲ್ಲಿ ಮಾತ್ರ ನಿಷ್ಕಾರಣ ವಿವಂಚನೆಯಾಗಿ ಹಣ ಮತ್ತು ವೇಳೆಯ ನಿರರ್ಥಕ ಅಪವ್ಯಯ ಬಹಳಾಗುವದು. ಪ್ರತ್ಯಕ್ಷ ಶತ್ರುಗಳಿಗಿಂತ ಗುಪ್ತ ಶತ್ರುಗಳಿಂದಲೆ ಹೆಚ್ಚು ತೊಂದರೆ. ನ್ಯಾಯದಾತರು ಪ್ರತಿಪಕ್ಷಗಳ ಪಕ್ಷಪಾತ ಹಿಡಿಯುವರು. ಅದರೂ ಅಗಷ್ಟ ೩೧ ರ ನಂತರ ಯಾವದಾದರೂ ನಿರ್ಣಯ ಹೊರಬಿದ್ದರೂ ಸ್ವಲ್ಪ ಅನುಕೂಲ. ಕಳ್ಳ ಕಾಕರು ಕೆಲ ವಸ್ತುಗಳನ್ನು ಅಪಹರಿಸಿಕೊಂಡು ಹೋಗುವ ಅಂಜಿಕೆ.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಅವರಲ್ಲಿ ಎಪ್ರಿಲ ೧೧ ರ ವರೆಗೆ ಆಗುವ ಪ್ರಸೂತಿ ಸುಲಭವಾದರೂ ಹೆಣ್ಣು ಹುಟ್ಟುವದು ಮತ್ತು ಬಾಳಂತಿತನವೂ ಅಷ್ಟೊಂದು ವ್ಯೆ ಹಿಡಿಯುವದಿಲ್ಲ ಆದರೆ ಮೇಲಿನ ತಾರೀಕಿನ ನಂತರ ಆಗುವ ಪ್ರಸೂತಿ ಸುಲಭವಂತೂ ಆಗುವದು; ಅದರಲ್ಲಿಯೂ ಗಂಡು ಹುಟ್ಟುವದರಿಂದ ಹಾಲಲ್ಲಿ ಸಕ್ಕರೆ ಬಿದ್ದಂತಾಗುವ ಸಂಭವವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ ೧೧ ರ ವರೆಗೆ ಇಲ್ಲವೆ ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆ ಆಗುವದಿದ್ದರೆ ಖಾತ್ರಿಯಿಂದ ಯಶಸ್ವಿ.

ವೃಶ್ಚಿಕ

ಒಟ್ಟಾರೆ ಈ ರಾಶಿಯವರಿಗೆ ಈ ವರ್ಷ ಪ್ರಾಪಂಚಿಕ ಸುಖಕ್ಕೆ ಬಹಳ ತೊಂದರೆಯ ದಿದ್ದರೂ ಔದ್ಯೋಗಿಕ ಜೀವನಕ್ಕೆ ಯಶಸ್ಸು ಮತ್ತು ವಿಪುಲ ಲಾಭಕ್ಕೆ ಅನುಕೂಲವಾಗಿದೆ.

ಈ ರಾಶಿಯವರಿಗೆ ಇದೇತಾನೆ ಎರಡೂವರೆ ತಿಂಗಳಿಂದ ಸಾಡೇಸಾತಿ ಪ್ರಾರಂಭವಾಗಿದ್ದು ಅದಿನ್ನೂ ಬಹಳ ವರ್ಷ ಅಂದರೆ ೧೯೬೧ ಫೆಬ್ರುವರಿ ಮಾರ್ಚವರೆಗೆ ಉಳಿಯುವದು. ಈಗ ಬಂದಿರುವ ೧೨ ನೇ ಶನಿ ತನ್ನ ಉಚ್ಚ ರಾಶಿಯಲ್ಲಿ ಇರುವನಾದ್ದರಿಂದ ಮೊದಲಿನ ಎರಡೂವರೆ ವರ್ಷ ಅಷ್ಟೊಂದು ಕಠಿಣ ಕ್ಲೇಶ ಮತ್ತು ವಿಪರೀತ ಪರಿಣಾಮ ಎನಿಸದು. ಆದರೂ ಮಾನಸಿಕ ತೊಂದರೆ, ವಿಲಕ್ಷಣ ಮತ್ತು ಸದಾ ಇದ್ದು ಯಾವದೇ ಕೆಲಸ ಅದು ಸಣ್ಣದಿರಲಿ ದೊಡ್ಡದಿರಲಿ ಅದರಲ್ಲಿ ಕಲ್ಪನಾತೀತ ವೆಚ್ಚ, ವಿಪರೀತ ಓಡಾಟ, ವೃಥಾ ಶತ್ರುತ್ವ ಮತ್ತು ಅಲ್ಪ ಸ್ವಲ್ಪ ಲೋಕಾಪವಾದ ಬಂದು ಕೊನೆಗೆ ಅರ್ಧ ಮರ್ಧ ಯಶಸ್ಸು ಇಷ್ಟೇ. ದೀಪಾವಳಿಯಿಂದ ಮುಂದೆ ಒಂದು ತಿಂಗಳು ವಿಶೇಷ ಗೊಂದಲದ್ದೆನಿಸುವದು.

ಸ್ವತಃ ನಿಮ್ಮ ಆರೋಗ್ಯ ಮೊದಲಿಗಿಂತ ಹೆಚ್ಚು ಚೆನ್ನಾಗಿದ್ದರೂ ಮುಂದೆ ದಿಸೆಂಬರ ೧೧ ರ ವರೆಗೆ ಮತ್ತು ಎಪ್ರೀಲ ೧೧ ರಿಂದ ಅಗಷ್ಟ ೩೧ ರವರೆಗೆ ಇರುವ ೮ ನೇ ಗುರುವಿನಿಂದ ಮೇಲಿಂದ ಮೇಲೆ ಕಾಯಿಲೆಯಾಗುವ ಸಂಭವವಿದ್ದು ಅದರ ಔಷಧೋಪಚಾರದ ವಿಷಯದಲ್ಲಿ ಹೆಂಡತಿ ಮತ್ತು ನಿಮ್ಮದು ಭಿನ್ನಾಭಿಪ್ರಾಯವಾಗುವದು. ಅದರಿಂದ ಉಭಯತರಲ್ಲಿ ಅಂತಃಮನಸ್ತಾಪ ಬಹಳ. ಹೆಂಡತಿಯ ಆರೋಗ್ಯವೂ ಅಷ್ಟೊಂದು ಚೆನ್ನಾಗಿ ಉಳಿಯುವದಿಲ್ಲ. ಒಮ್ಮೆ ಪಿತ್ತಕ್ಷೋಭ, ಒಮ್ಮೆ ಅಜೀರ್ಣ, ಒಮ್ಮೆ ಶ್ರಮಾತಿರೇಕ, ಒಮ್ಮೆ ಅಷ್ಟೇ ಆಲಸ್ಯ ಇವುಗಳಲ್ಲಿ ಯಾವುದಾದರೊಂದು ತಕರಾರು ಇದ್ದದ್ದೇ. ಆದರೆ ೮ ನೇ ಗುರು ಇರುವಾಗ ಕುಟುಂಬಸ್ಥಾನದಲ್ಲಿ ಇದ್ದ ಧನು ಈ ಸ್ವರಾಶಿಯ ಮೇಲೆ ಪೂರ್ಣ ದೃಷ್ಟಿ ಕೆಡುಹುವನಾದ್ದರಿಂದ ಸ್ವಲ್ಪವೂ ಯಾರಿಗೂ ಗಂಡಾಂತರದ ಭೀತಿಯಿಲ್ಲ.

ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೇ ಸಿಕ್ಕುವ ಯೋಗ ಇದೆ. ಫೆಬ್ರುವರಿಯಿಂದ ಮನೆಯಲ್ಲಿ ನಿತ್ಯ ಕಲಹ ನಡೆಯುವದು. ಪ್ರತಿಯೊಬ್ಬ ಎರಡನೆಯವರಿಗೆ ಢೋಂಗಿ, ಕೆಲಸಕ್ಕೆ ಬಾರದವನೆಂದು ಆರೋಪಿಸುವರು. ಅಣ್ಣತಮ್ಮಂದಿರು ಏಕತ್ರವಿದ್ದರೆ ವಿಭಕ್ತರಾಗುವರಷ್ಟೇ ಅಲ್ಲ; ಆದರೆ ತಾಯಿ ತಂದೆ ಇದ್ದರೆ ಅವರು ಮತ್ತು ನೀವು ಕೂಡ ವಿಭಕ್ತ ಅಗುವ ಸರತಿ ಬರುವದು. ಕೆಲ ವಸ್ತು ಮನೆಯಲ್ಲಿಯೇ ಇದ್ದಕ್ಕಿದ್ದಂತೆ ಇಲ್ಲದಂತಾಗುವವು. ಸ್ಥಾವರ, ಜಂಗಮ ಸಂಗ್ರಹದಲ್ಲಿ ಹೊಸ ಸಂಗ್ರಹವಾಗುವದಂತೂ ದೂರೇಉಳಿಯುವದು. ಆದರೆ ಇದ್ದದ್ದು ಕಡಮೆ ಆಗದಿದ್ದರೆ ಸುದೈವವೆನ್ನಬೇಕು. ಆಪ್ತರು, ಆಶ್ರಿತರು, ನೋಕರರು ಮುಂತಾದವರು ಸಹಾಯ ಮಾಡುವ ಬದಲು ತಮ್ಮ ತಮ್ಮ ಕರ್ತವ್ಯಗಳನ್ನು ಬದಿಗೊತ್ತಿ ಮಜಾ ನೋಡುತ್ತ ಕೂಡುವರು. ವಾಹನಗಳಿದ್ದರೆ ಅವು ಮುರಿಯುವವು. ಅವುಗಳ ದುರಸ್ತಿ ವೆಚ್ಚ ಬಹಳ ಬರುವದು.

ನಿಮ್ಮ ವಿವಾಹವಿನ್ನೂ ಆಗಿರದಿದ್ದರೆ ದಿಸೆಂಬರ ೧೧ ರಿಂದ ಎಪ್ರೀಲ ೧೧ ರ ವರೆಗೆ ಅಲ್ಪಾಯಾಸದಿಂದ ಮತ್ತು ಅಗಷ್ಟ ೩೧ರ ನಂತರ ಸಾಯಾಸವಾಗಿ ಒದಗಿ ಬರುವದು. ಆದರೆ ವಧುವರರು ರೂಪ ಇಲ್ಲವೇ ಸ್ವಭಾವದೃಷ್ಟಿಯಿಂದ ಪರಸ್ಪರ ಅಷ್ಟೊಂದು ಒಪ್ಪಿಗೆ ಇರುವದಿಲ್ಲ. ಮತ್ತು ನಿಮ್ಮ ಮಕ್ಕಳ ವಿವಾಹವಾಗುವದಿದ್ದರೆ ಈ ವರ್ಷ ಅದನ್ನು ಬಿಟ್ಟುಗೊಟ್ಟರೆ ಒಳಿತು. ಏಕೆಂದರೆ ಅಗಷ್ಟ ೩೧ರ ನಂತರವೇ ಅವರಿಗೆ ನಿಜವಾಗಿ ಬಾಶಿಂಗಬಲ ಬರುವದು. ಒಂದು ವೇಳೆ ಮಧ್ಯದಲ್ಲಿ ಆದರೆ ವಿಪರೀತ ವೆಚ್ಚವಾದರೂ ಪ್ರತ್ಯಕ್ಷ ಕಾರ್ಯದಲ್ಲಿ ಮುರವು ಆಗುವಂತೆ ಅನೇಕ ಘಟನೆಗಳು ಸಂಭವಿಸುವವು. ಆದರೆ ಮಕ್ಕಳ ಉತ್ಕರ್ಷಕ್ಕೆ ದಿಸೆಂಬರ ೧೧ ರಿಂದ ಎಪ್ರಿಲ ೧೧ ರ ವರೆಗೆ ಸರ್ವಸಾಮಾನ್ಯ. ಸಪ್ಟಂಬರ ೧ ರಿಂದ ವಿಪರೀತ ಜೋರು. ಆ ಕಾಲದಿಂದಲೆ ಕೆಲ ಮಹತ್ವದ ಪುಣ್ಯಕೃತ್ಯಗಳು ಸಂಭವಿಸುವವು ಮತ್ತು ಅಪೂರ್ವ ಸ್ಥಳ ದರ್ಶನದ ಯೋಗವಾಗುವದು.

ಅತಿ ವೆಚ್ಚದ ಮತ್ತು ಪ್ರಪಂಚದಲ್ಲಿ ಬಗೆ ಬಗೆಯ ಕಿಟಕಿಟಿಯ ವರ್ಷವಿದಾಗಿದ್ದರೂ ಧಂದೆ ಕೂಲಿಯವರಿಗೆ ಮಾತ್ರ ಅಭೂತಪೂರ್ವ ಉತ್ಕರ್ಷದ ವರ್ಷ. ವ್ಯಯಕ್ಕೆ ಸಹಜವಾಗಿ ತುಂಬುವಂತೆ ಆಯವೂ ಹೆಚ್ಚುವದು. ಯಾರಿಗೆ ಗುರು ಮಹಾದಶಾ ಅಥವಾ ಅಂತರ್ದಶಾ ಇದೆಯೋ ಅವರಿಗೆ ಮಾತ್ರ ಎಪ್ರಿಲ ೧೧ ರಿಂದ ಭಾಗ್ಯ ಉಕ್ಕೇರಿ ಬರುವದು. ಧಂದೆಯವರು ಎದೆ ಉಬ್ಬಿಸಿಕೊಂಡು ನಡೆಯುವರು. ಅಗಷ್ಟ ೩೧ ರಿಂದ ಮುಂದೆ ಲಾಭದ ಅತಿವೃಷ್ಟಿಯಾಗುವದು. ನೋಕರರಿಗೆ ಮಾತ್ರ ಮೋರೆ ಕೆಳಗೆ ಮಾಡಿಕೊಂಡು ಗಾಡಿಯನ್ನು ನಡೆಸಬೇಕಾಗಿ ಬಂದರೂ ದ್ರವ್ಯರೂಪದಿಂದ ಅದು ತುಂಬಿಬರುವದು. ವರಿಷ್ಠರು ಯಾವಾಗಾದರೂ ಗುರಗುರು ಮಾಡುವರು. ಆದರೆ ಕೈಯಿಂದ ಮಾತ್ರ ಬಹಳ ಹಿತ ಮಾಡುವರು. ಮೇಲಿನ ಗ್ರೇಡ ಸಿಕ್ಕುವ ಕ್ರಮಾಂಕ ನಿಮ್ಮದಿದ್ದರೆ ಅಗಷ್ಟ ೯ರ ನಂತರ ನಿಶ್ಚಿತವಾಗಿ ಸಿಕ್ಕುವದು. ಮತ್ತು ಬದಲಿಯಾಗುವದಿದ್ದರೆ ಅದೇ ಕಾಲಕ್ಕೇ ಅಗುವದು. ಕೈಕೆಳಗಿನ ಜನರು ಮಾತ್ರ ಸ್ವಲ್ಪ ಮತ್ಸರ ತಾಳುವರು. ಮತ್ತು ನಿಮ್ಮ ಕೆಲಸವನ್ನು ಬೇಕಂತೆ ತಪ್ಪಿಸುವರು. ಅದರಂತೆಯೆ ಮಿತ್ರರು ದಿಸೆಂಬರ ೧೧ ರಿಂದ ಎಪ್ರಿಲ ೧೧ರ ವರೆಗೆ ಸ್ವಲ್ಪ ಪ್ರೇಮದಿಂದ ವರ್ತಿಸಿದರೂ ಉಳಿದ ಸಮಯದಲ್ಲಿ ನಿಮ್ಮನ್ನಗಲಿ ಹೋಗುವರು.

ದಾವೆ ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಯಶಸ್ಸು ಸಿಕ್ಕಲಿ, ಅಪಯಶಸ್ಸು ಸಿಕ್ಕಲಿ ಪ್ರತಿಪಕ್ಷಿಗಳು ಮತ್ತೆ ಕೈತೋರಿಸುವ ಸಿದ್ಧತೆಯಲ್ಲಿರುವರು. ಒಂದೆರಡು ಕೆಲಸ ಒಡಂಬಡಿಕೆಯಿಂದ ನಿಮ್ಮಲ್ಲಿ ಬಗೆಹರಿಯುವವು. ಆದರೆ ದಿಸೆಂಬರ ೧೩ ರ ವರೆಗೆ ಮತ್ತು ಅಗಷ್ಟ ೯ ರ ನಂತರ ಆಗುವ ನಿರ್ಣಯ ನಿಮ್ಮಂತೆ ಆಗುವದು.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಅವರಲ್ಲಿ ದಿಸೆಂಬರ ೧೩ ರ ವರೆಗೆ ಮತ್ತು ಮಾರ್ಚ ೩೦ ರಿಂದ ಮೇ ೨೦ ರ ವರೆಗಿನ ಅವಧಿಯಲ್ಲಿ ಆದರೆ ಅವರಿಗೆ ಸ್ವಲ್ಪ ತೀವ್ರ ಕ್ಲೇಶವೆನಿಸುವದು. ಅರ್ಥಾತ್ ಉಳಿದ ಸಮಯದಲ್ಲಿ ಆದರೆ ಹೆರಿಗೆ ಸುಲಭವಾಗುವದು. ಆದರೆ ಬಹುಶಃ ಅನೇಕರಿಗೆ ಹೆಣ್ಣು ಹುಟ್ಟುವ ಸಂಭವವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ದಿಸೆಂಬರ ೧೧ ರಿಂದ ಎಪ್ರಿಲ ೧೧ ರ ವರೆಗೆ ಇಲ್ಲವೆ ಅಗಷ್ಟ ೩೧ ರ ನಂತರ ಆದರೆ ಅವರು ಖಾತ್ರಿಯಿಂದ ಪಾಸಾಗುವರು. ಅಷ್ಟೇ ಅಲ್ಲ ಅಗಷ್ಟ ೩೧ ರ ನಂತರ ಪರೀಕ್ಷೆಯಾದರೆ ಒಂದನೇ ವರ್ಗದಲ್ಲಿ, ಕನಿಷ್ಠ ೨ ನೇ ವರ್ಗದಲ್ಲಿಯಾದರೂ ಪಾಸಾಗುವರು.

ಧನು

ಈ ರಾಶಿಯವರಿಗೆ ಈ ವರ್ಷ ನಿಮ್ಮ ಹಟವಾದಿತನದಿಂದಲೇ ಸ್ವಲ್ಪ ತೊಂದರೆಯಾದರೂ ಯಶಸ್ಸು, ಲಾಭ ಮತ್ತು ಉತ್ಕರ್ಷ ಇವುಗಳ ಹೆಚ್ಚಳ ಬಹಳ ಅಪೂರ್ವವೆನಿಸುವದರಲ್ಲಿ ಸ್ವಲ್ಪೂ ಸಂದೇಹವಿಲ್ಲ.

ಈ ವರ್ಷ ಈ ರಾಶಿಯ ಜನರಿಗೆ ಜನೆವರಿ ೨೯ರ ವರೆಗಷ್ಟೇ ಅಲ್ಪ ಸ್ವಲ್ಪ ಶರೀರಕ್ಲೇಶವಾಗುವದು. ಅನಂತರ ನೆಗಡಿಕೆಮ್ಮಿನ ಅಂಜಿಕೆಯೂ ಇಲ್ಲ. ಆದರೆ ಯಾವದೊಂದು ಭಯಾನಕ ಸ್ಥಳಕ್ಕೆಹೋಗುವ ಇಲ್ಲವೆ ಅಂಥ ಸ್ಥಳಕ್ಕೆ ಹೋದಾಗ ಭೂತಪ್ರೇತಗಳ ವಿಲಕ್ಷಣ ಮತ್ತು ಭಯಂಕರ ಕಲ್ಪನೆಯಿಂದ ಮನಸ್ಸಿನಲ್ಲಿ ವಿಪರೀತ ಅಂಜಿಕೆ ಕೂಡ್ರುವ ಸರತಿ ಒಮ್ಮೆಯಾದರೂ ಬರುವದು. ದಿಸೆಂಬರ ೧೧ ರ ವರೆಗೆ ಮತ್ತು ಎಪ್ರಿಲ ೧೧ ರಿಂದ ಆಗಷ್ಟ ೩೧ ರ ವರೆಗಿನ ದಿನಗಳು ಅತ್ಯಂತ ಆರೋಗ್ಯದ ಮತ್ತು ಬಗೆಬಗೆಯ ಮನೋತ್ಸಾಹದ್ದೆನಿಸುವವು. ಆಗಷ್ಟ ೩೧ ರ ನಂತರ ಮಾತ್ರ ಯಾವ

ದೊಂದು ಮಹತ್ವದ ಮಾತಿನ ಯಶ ಅಪಯಶಸ್ಸಿನ ಬಗ್ಗೆ ಮನಸ್ಸು ಬಹಳ ಚಿಂತಾಗ್ರಸ್ತವಾಗುವದು.

ಉಳಿದ ಅವಶ್ಯಕವಾದ ದೇಹಸುಖಕ್ಕೆ ಈ ವರ್ಷ ಸಮೃದ್ಧಿಯದು. ಆದರೆ ಜನೆವರಿ ೨೯ ರ ನಂತರ ತಲೆಯಲ್ಲಿ ಸೇರುವ ರಾಕ್ಷಸೀ ಮಹತ್ವಾಕಾಂಕ್ಷೆಯ ಪೂರ್ತತೆಗಾಗಿ ನಡೆಸಿದ ಸಾಹಸದಲ್ಲಿ ನಿಮ್ಮನ್ನಷ್ಟೇ ಅಲ್ಲ, ಉಳಿದವರನ್ನೂ ಕಷ್ಟದಲ್ಲಿ ನೂಕುವಿರಿ. ದಿಸೆಂಬರ ೧೧ ರಿಂದ ಎಪ್ರಿಲ ೧೧ರ ವರೆಗೆ ಆಪ್ತರು ಮತ್ತು ನೋಕರರು ಮೊದಲಾದ ಆಶ್ರಿತರು ನಿಮ್ಮಿಂದ ಬಹಳ ಅಲಿಪ್ತರಾಗಿ ಮತ್ತು ಪರಿಚಯವಿಲ್ಲದವರಂತೆ ವರ್ತಿಸುವರು. ಆದರೆ ಅನಂತರ ಮಾತ್ರ ನೀವು ಹಾಗೆ ವರ್ತಿಸುವದರಿಂದ ಒಟ್ಟಾರೆ ಯಾರದಾದರೂ ತಪ್ಪುತಿಳಿವಳಿಕೆಯಿಂದ ಯಾಕಾಗಲೊಲ್ಲದುಪ್ರಾಪಂಚಿಕ ಸುಖದ ನಿಜವಾದ ಆಸ್ವಾದವನ್ನು ಅನುಭೋಗಿಸುವ ಪ್ರಸಂಗಕಡಿಮೆ. ಎಪ್ರಿಲ ೧೧ ರ ನಂತರ ಮನೆಮಾರು ಹೊಲಪಟ್ಟಿ ಮೊದಲಾದ ಆಸ್ತಿಯ ಬಗ್ಗೆ ಮೊದಲಿದ್ದ ವಿವಂಚನೆಗಳೆಲ್ಲ ಅಪೇಕ್ಷೆಯಂತೆ ನಿವಾರಣೆಯಾಗಿ ಬಹಳ ಸಫಲವಾಗುವವು. ಮತ್ತು ಕೆಲ ಹೊಸಸಂಗ್ರಹವೂ ಆಗುವದು. ಅದರಂತೆ ಮೇಲಿನ ದಿನದಿಂದ ವಾಹನಗಳು, ದನಕರುಗಳ ಸುಖ ಮನಸ್ಸಿನಂತೆ ಸಿಕ್ಕು ನೆರೆಯವರು, ಮನೆ ಒಡೆಯ ಇಲ್ಲವೆ ಬಾಡಿಗೆದಾರರು ಮೊದಲಿಗಿಂತ ಬಹಳ ಪ್ರೇಮದಿಂದ ವರ್ತಿಸುವರು.

ಎಪ್ರಿಲ ೧೧ರಿಂದ ನೀವು ಮತ್ತು ನಿಮ್ಮ ಹೆಂಡತಿಯಲ್ಲಿ ಅನೇಕ ವಿಷಯಗಳಲ್ಲಿ ಐಕಮತ್ಯವುಳಿಯುವದು. ಆದರೂ ಜನೆವರಿ ೨೯ ರ ನಂತರ ಮಾತ್ರ ಅವಳ ಆರೋಗ್ಯ ಸಣ್ಣ ದೊಡ್ಡ ಕಾಯಿಲೆಯಿಂದ ಬಹಳ ಕೆಡುವದು. ಆದರೆ ಇದೇ ಅವಧಿಯಲ್ಲಿ ಕುಟುಂಬೇಶ ಶನಿ ಬಹಳ ಅನುಕೂಲನಿರುವದರಿಂದ ಅವಳ ವಿಯೋಗದ ಅಂಜಿಕೆಯನ್ನು ನೀವು ಸ್ವಪ್ನದಲ್ಲಿ ಕೂಡ ಇಟ್ಟುಕೊಳ್ಳಬೇಡಿರಿ; ನಿಮ್ಮ ಮದುವೆಯೇ ಇನ್ನೂ ಆಗಿರದಿದ್ದರೆ ಎಪ್ರಿಲ ೧೧ ರಿಂದ ಆಗಷ್ಟ ೩೧ ರ ವರೆಗೆ ಗುರುಬಲ ಬಹಳ ಅನುಕೂಲವಿರುವದು. ಆದರಿಂದ ಲಗ್ನ ಕೂಡಿಬರಲಿಕ್ಕೆ ಮತ್ತು ಗೊತ್ತಾದ ವೇಳೆಗೆ ಆಗುವದಕ್ಕೆಯಾವದೇ ಬಗೆಯ ಅಡಚಣೆ ಎನಿಸುವದಿಲ್ಲ. ಅತ್ತೆಯ ಮನೆಯವರು ಸ್ವಲ್ಪ ಖಾಷ್ಟ ಇದ್ದರೂ ವಧೂ ಇಲ್ಲವೆ ವರ ಸ್ವಭಾವದಿಂದ ಒಳ್ಳೇ ವಿನಯಶೀಲ ಮತ್ತು ನೋಡಲಿಕ್ಕೆ ಬಹಳ ಸುಂದರ ಇರುವರು. ಅದರಂತೆ ನಿಮ್ಮ ಮಕ್ಕಳ ಲಗ್ನವಾಗುವದಿದ್ದರೆ ಅದಕ್ಕೆ ಮಾತ್ರ ಈ ವರ್ಷ ಯಾವಾಗಲೂ ಅಷ್ಟೊಂದು ಬಾಶಿಂಗ ಬಲವಿಲ್ಲ. ಆದರೆ ಅದರಲ್ಲಿಯೂ ದಿಸೆಂಬರ ೧೧ ರಿಂದ ಎಪ್ರಿಲ ೧೧ ರ ನಡುವಿನ ಅವಧಿಯಲ್ಲಿ ಬಹಳ ಪ್ರಯತ್ನ ಮಾಡಿ ಓಡಾಡಿದರೆ ಒಂದು ವೇಳೆ ಲಗ್ನವಾಗಬಹುದು. ಅಳಿಯ ಇಲ್ಲವೆ ಸೊಸೆ ಉಳಿದವರ ಮನಸ್ಸಿಗೆ ಬಂದರೂ ಸ್ವತಃ ನಿಮಗೆ ಅಷ್ಟೊಂದು ಮನಸ್ಸಿಗೆ ಬರಲಿಕ್ಕಿಲ್ಲ. ಈ ವರ್ಷ ಮಕ್ಕಳ ಉನ್ನತಿ ಹೋದ ವರ್ಷಕ್ಕಿಂತ ಹೆಚ್ಚು ಅನುಕೂಲವಿದ್ದರೂ ಅದರ ಉಪಯೋಗ ಮಾತ್ರ ನಿಮಗೆ ಬಹಳ ಕಡಿಮೆ.

ಧಂದೆ ಕೂಲಿಯವರಿಗೆ ಈ ವರ್ಷ ಬಹಳ ಉತ್ತಮವಿದ್ದು ಅದರಲ್ಲಿಯೂ ಶನಿ ಏಕಾದಶ ಉರ್ಫ ಲಾಭಸ್ಥಾನದಲ್ಲಿ ಇರುವದರಿಂದ ಲಕ್ಷ್ಮೀದೇವಿಯು ನಾಲ್ಕೂ ದಿಕ್ಕುಗಳಿಂದ ಮನೆಯನ್ನು ಪ್ರವೇಶ ಮಾಡಿದಳೋ ಏನೋ ಎಂದೆನಿಸುತ್ತದೆ. ಯಾವದೇ ವಸ್ತುವಿನ ಧಂದೆ ಇರಲಿ ಅದರಲ್ಲಿ ಹಾಹಾ ಅನ್ನುವದರೊಳಗಾಗಿ ದುಡ್ಡಿಗೆ ನಾಲ್ಕು ದುಡ್ಡು ಆಗುವದು. ವರ್ಷದ ಕೊನೆಗೆ ಬಹಳ ಹಣ ಸಂಗ್ರಹವಾಗುವದು. ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆಯಂತೂ ಮಣ್ಣು ಕೂಡ ಹೊನ್ನಾಗುವಂತೆ ದೈವ ತೆರೆಯುವದು. ನಡೆದ ಧಂದೆಗೆ ಮತ್ತೊಂದನ್ನು ಕೂಡಿಸುವ ಸಂಭವವಿದೆ. ಮಾರ್ಚ ೩ರಿಂದ ಅಕ್ಟೋಬರ ೨ರ ವರೆಗಿನ ಅವಧಿಯಲ್ಲಿ ಈ ಯೋಗ ಬಹಳಿದೆ. ಧಂದೆಯಲ್ಲಿಯ ನಿಮ್ಮ ಸಾಹಸವನ್ನು ನೋಡಿ ಶತ್ರುಗಳು ಕೂಡ ಪ್ರಶಂಸೆ ಮಾಡುವರು. ಮಿತ್ರಸುಖ ಅನುಕೂಲ ಮತ್ತು ಅವರು ತಮ್ಮ ರೀತಿಯಿಂದ ನಿಮ್ಮ ಕಲ್ಯಾಣಕ್ಕೆ ಪ್ರಯತ್ನಿಸುವರು. ದೊಡ್ಡವರ ಮಿತ್ರತ್ವವಾಗಿ ಉದ್ಯೋಗದ ಸಂಬಂಧ ಕೂಡಿಬರುವದು.

ಸಾರ್ವಜನಿಕ ಕೆಲಸಗಳಲ್ಲಿಯೂ ಲೌಕಿಕ ಹೆಚ್ಚುವದು. ನೋಕರರಿಗೆ ವರಿಷ್ಠರ ಕೃಪಾದೃಷ್ಟಿಯಾಗುವದು ಮತ್ತು ಸದಾ ಉಳಿಯುವದು. ಕೈಕೆಳಗಿನ ನೋಕರರೂ ಪ್ರೀತಿಯೊಂದು ಮಾತು ನಡಿಸುವರು. ಸಪ್ಟೆಂಬರ ೧ ರ ನಂತರ ವಾರಸಾ ಲಾಟ್ರಿ ಮುಂತಾದ ರೀತಿಯಿಂದ ಗುಪ್ತಧನ ಸಿಕ್ಕುವ ಯೋಗವೂ ಇದೆ. ಅದರಂತೆ ಮೇಲಿನ ಗ್ರೇಡು ಕೂಡ ಸಿಕ್ಕುವವಿದ್ದರೆ ಮೇ ೨೦ ರಿಂದ ಅಗಷ್ಟ ೯ರ ಅವಧಿಯಲ್ಲಿ ಸಿಕ್ಕುವ ಮತ್ತು ಬದಲಿಆಗುವದಿದ್ದರೆ ಅಗಸ್ಟ ೯ ರಿಂದ ಅಕ್ಟೋಬರ ೨ ರೊಳಗಾಗಿ ಆಗುವ ಯೋಗವಿದೆ.

ದಾವೆ ಖಟ್ಲೆ ಇಲ್ಲವೆ ಖಾಸಗಿ ಸ್ಪರ್ಧೆಗಳಲ್ಲಿ ಡಿಸೆಂಬರ ೧೧ ರಿಂದ ಎಪ್ರಿಲ ೧೧ ರ ವರೆಗೆ ಒಳ್ಳೆ ಯಶಸ್ಸಿದೆ. ಆದರೆ ಶತ್ರುಗಳ ಚಟುವಟಿಕೆ ಮಾತ್ರ ಕಡಿಮೆಯಾಗದೆ ಮೊದಲಿನಂತೆಯೇ ಉಳಿಯುವದು.

ಈ ರಾಶಿಯ ಸ್ತ್ರೀಯರು ಈ ವರ್ಷ ಹಡೆಯುವವರಿದ್ದರೆ ಅವರಲ್ಲಿ ಬಹಳ ಜನರ ಪ್ರಸವವು ಸ್ವಲ್ಪ ಕಷ್ಟದಿಂದಲೇ ಆಗುವದಾದರೂ ಬಹುಶಃ ಗಂಡು ಹುಟ್ಟುವದರಿಂದ ಕಷ್ಟವನ್ನು ಮರೆಯುವ ಸಂಭವವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ ೧೩ ರ ವರೆಗೆ ಮತ್ತು ಅನಂತರ ಫೆಬ್ರುವರಿ ೧೨ ರಿಂದ ಮಾರ್ಚ ೧೩, ಎಪ್ರಿಲ ೧೪ ರಿಂದ ಮೇ ೧೫ ಮತ್ತು ಅಗಷ್ಟ ೯ ರಿಂದ ಅಕ್ಟೋಬರ ೨ ರೊಳಗಾಗಿ ಆಗುವದಿದ್ದರೆ ಪಾಸಾಗುವದರಲ್ಲಿ ಸ್ವಲ್ಪೂ ಸಂದೇಹವಿಲ್ಲ.

ಮಕರ

ಈ ರಾಶಿಯವರಿಗೆ ಈ ವರ್ಷ ಜನೆವರಿ ೨೮ ರ ನಂತರ ಬಹುಶಃ ಬಹಳ ಸುಖ ಸಮಾಧಾನಗಳೆನಿಸುವಲ್ಲಿ ಸಂಶಯವಿಲ್ಲ.

ಈ ರಾಶಿಯವರ ಆರೋಗ್ಯ, ಜನೆವರಿ ೨೯ ರ ವರೆಗೆ ಮತ್ತು ಮುಂದೆ ಎಪ್ರಿಲ ೧೧ ರಿಂದ ಅಗಷ ೩೧ ರ ವರೆಗೆ ಅಲ್ಪ ಸ್ವಲ್ಪ ಕ್ಲೇಶವೆನಿಸಿದರೂ ಉಳಿದ ದಿವಸ ಬಹಳ ನಿರೋಗಿ ಉಳಿಯುವಿರಿ. ಆದರೆ ಆಗಷ್ಟ ೩೧ ರ ವರೆಗೆ ಬಹಳ ಸಂಶಯದ ಮತ್ತು ಮನೆಮುರಕತನದ ಸ್ವಭಾವವಾಗಿ, ನಿಷ್ಕಾರಣವಾಗಿ ವಿಪರೀತ ವಿತಂಡ ವಾದ ಹಾಕಹತ್ತುವಿರಿ ಮತ್ತು ಜನೆವರಿ ೨೯ ರ ವರೆಗೆ ವಿಶೇಷ ಹಾನಿಯಾಗದಿದ್ದ ಕೆಲಸಗಳಲ್ಲಿಯೂ ನಿರರ್ಥಕವಾಗಿ ಸುಳ್ಳು ಮಾತಾಡಬೇಕಾಗುವದು.

ಉಳಿದ ದೇಹಸುಖದ ವಿಷಯದಲ್ಲಿ ದಿಸೆಂಬರ ೧೧ ರ ವರೆಗೆ ಮತ್ತು ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆ ಅಲ್ಪಸ್ವಲ್ಪ ದಗದಗಿ ಎನಿಸುವದು. ಆದರೆ ಉಳಿದ ವೇಳೆಯಲ್ಲಿ ಅದು ಮನಸ್ಸಿನಂತೆ ದೊರೆಯುವದು ಅದರಲ್ಲಿಯೂ ಜನೆವರಿ ೧೪ರಿಂದ ಮಾರ್ಚ ೧೪ ಮತ್ತು ಸಪ್ಟೆಂಬರ ೧೭ ರ ನಂತರ ಅದು ಬಹಳ ಅಹ್ಲಾದದಾಯಕವೆನಿಸುವದು. ಮನೆಯಲ್ಲಿ ಹೊಸ ಹೊಸ ವಸ್ತುಗಳ ಸಂಗ್ರಹ ಬಹಳಾಗುವದು ಮತ್ತು ಕೆಲಕೆಲವು ಆಧುನಿಕ ಪದ್ಧತಿಯ ಸುಧಾರಣೆಯನ್ನು ಮನೆಯಲ್ಲಿ ಮತ್ತು ಆಸ್ತಿಯಲ್ಲಿ ಮಾಡುವಿರಿ. ಜನೆವರಿ ೨೯ ರಿಂದ ಮೊದಲು ಯಾರು ನಿಮ್ಮನ್ನು ನೋಡಿ ಕುಚೇಷ್ಟೆಯಿಂದ ನಗುತಿದ್ದರೊ ಅವರು ಮುಂದೆ ಒಂದಿಲ್ಲೊಂದು ಬಗೆಯ ದುರ್ದೈವದಲ್ಲಿ ಬಿದ್ದು ಅಳಹತ್ತುವರು. ಆಪ್ತರು ಮತ್ತು ನೆರೆಯವರು ಅಗಷ್ಟ ೩೧ರ ನಂತರ ಪೂರ್ಣ ಸಹಾನುಭೂತಿಯಿಂದ ವರ್ತಿಸುವರು ಮತ್ತು ಮಿತ್ರರಲ್ಲಿ ಅನೇಕರೂ ಹಾಗೇ ನಡೆಯುವರು. ಅವರಲ್ಲಿ ಒಬ್ಬಿಬ್ಬರಿಗಾದರೂ ಎಪ್ರಿಲ ೧೧ರಿಂದ ಆಗಷ್ಟ ೩೧ ರ ವರೆಗೆ ವಿಪರೀತ ಪ್ರಾಪಂಚಿಕ ತೊಂದರೆಯಾಗುವ ಸಂಭವವಿದೆ. ನೋಕರರು ಮಾತ್ರ ಮಾರ್ಚ ೩೦ ರಿಂದ ಅಕ್ಟೋಬರ ೨ ರ ವರೆಗೆ ಬಹಳ ತೊಂದರೆ ಕೊಡುವರು ಮತ್ತು ಅವರಲ್ಲಿ ಕೆಲ ಜನರು ನೋಕರಿ ಬಿಡುವರು. ವಾಹನಗಳು ಮುರಿಯುವದು ಮತ್ತು ದನಕರುಗಳ ಕಾಯಿಲೆಗಾಗಿಯೂ ಬಹಳ ವೆಚ್ಚ ಮಾಡಬೇಕಾಗುವದು. ಮನೆಯ ಒಡೆಯರು ಇಲ್ಲವೆ ಭಾಡಿಗೆದಾರರು ಯಾವಾಗಾದರೂ ನಿಮ್ಮ ಮೂಗಿನೊಳಗಿನ ಕೂದಲು ಕಿತ್ತುತ್ತಿರುವರು.

ಹೆಂಡತಿಯ ಆರೋಗ್ಯಕ್ಕೆ ಮಾತ್ರ ಜನೆವರಿ ೨೯ ರ ವರೆಗೆ ಸ್ವಲ್ಪ ಜಪ್ಪಿಸಬೇಕು. ಅನಂತರ ಅವಳ ಆರೋಗ್ಯದಲ್ಲಿ ತಲೆನೋವು, ಬಾಯಿಯಲ್ಲಿ ಸದಾ ನೀರು ಸುರಿಯುವದು ಮತು ಒಂದು ಬಗೆ ಔದಾಸೀನ್ಯವೆನಿಸುವದು. ಇದಕ್ಕೂ ಹೆಚ್ಚು ಕೆಡುವ ಅಂಜಿಕೆಯಿಲ್ಲ ಮತ್ತು ಆ ಕಾಲದಿಂದ ಉಭಯತರಲ್ಲಿ ಮೊದಲಿನಂತೆ ವಿರೋಧ

ತ್ರಿಳಿಯದೆ ಬಹಳ ಮಾತಿನಲ್ಲಿ ಐಕ್ಯವುಳಿಯು ವದು. ಆದರೆ ಇನ್ನೂ ನಿಮ್ಮ ಮದುವೆಯಾಗಿರ ದಿದ್ದರೆ ಮತ್ತು ಈ ವರ್ಷ ಮಾಡಿಕೊಳ್ಳುವ ದಿದ್ದರೆ ಅದು ದಿಸೆಂಬರ ೧೧ ರಿಂದ ಎಪ್ರಿಲ ೧೧ ರ ವರೆಗೆ ಆಗಿಯೇ ತೀರುವದು. ಒಂದು ವೇಳೆ ಆಗದಿದ್ದರೆ ಮುಂದೆ ಅಗಷ್ಟ ೩೧ರ ನಂತರ ಖಂಡಿತ ಆಗುವದು. ವಧೂ ಇಲ್ಲವೆ ವರ ಪರಸ್ಪರ ಪೂರ್ಣವಾಗಿ ಮನಸ್ಸಿಗೆ ಬರುವರು. ಜನೆವರಿ ೨೯ರ ವರೆಗೆ ಲಗ್ನವಾದರೆ ವೆಚ್ಚ ಸ್ವಲ್ಪ ಹೆಚ್ಚಾಗಬಹುದು ಮತ್ತು ಗೊತ್ತಾದ ಮುಹೂರ್ತ ಯಾವದೊಂದು ಗೌತ್ರಿಕ ಅಡಚಣಿಯಿಂದ ಮುಂದೆ ಬೀಳುವ ಸಂಭವವಿದೆ ಮತ್ತು ಎರಡನೇ ಮುಹೂರ್ತ ಗೊತ್ತುಮಾಡಬೇಕಾಗುವದು. ಅದ ರಂತೆ ನಿಮ್ಮ ಮಕ್ಕಳ ಮದುವೆಯಾಗುವದಿದ್ದರೆ ಅದಕ್ಕೆ ದಿಸೆಂಬರ ೧೧ ರಿಂದ ಫೆಬ್ರುವರಿ ೧೧ ರ ವರೆಗೆ ಸಹಜವಾಗಿ ಕೂಡಿಬರುವದು ಮತ್ತು ಗೊತ್ತಾದ ವೇಳೆಗೆ ಅನಾಯಾಸವಾಗಿ ಆಗುವ ಯೋಗ ಪ್ರಬಲವಾಗಿದೆ. ಆದರೆ ಮುಂದೆ ಮಾತ್ರ ಅಷ್ಟು ಪ್ರಬಲ ಯೋಗ ಎಂದೂ ಇಲ್ಲ. ಅಳಿಯ ಇಲ್ಲವೆ ಸೊಸೆ ರೂಪ ಗುಣಗಳಿಂದ ಬಹಳ ಮನೋವೇಧಕರಿರುವರು. ಉಳಿದ ಮಕ್ಕಳು ಮತ್ತು ಪರಿವಾರದವರು ಕೂಡ ನಿಮ್ಮೊಡನೆ ಅನು ಕೂಲವಾಗಿ ವರ್ತಿಸುವರು. ಈ ವರ್ಷ ಮಕ್ಕಳ ಉತ್ಕರ್ಷ ಬಹಳವಾಗುವ ಯೋಗವಿದ್ದು ಅದರ ಪ್ರತ್ಯಂತರ ದಿಸೆಂಬರ ೨೪ರ ವರೆಗೆ ಮತ್ತು ಮುಂದೆ ಜನೆವರಿ ೧೬ ರಿಂದ ಮಾರ್ಚ ೨೯ ಮತ್ತು ಎಪ್ರಿಲ ೨೩ ರಿಂದ ಮೇ ೧೭ ಮತ್ತು ಅಗಷ್ಟ ೨ ರ ನಂತರವಾದರೂ ಬರುವದು. ಆದರೆ ಉತ್ಕರ್ಷ ಹೊಂದುವ ಮಗು ಬಹಳ ದೂರದ ಪ್ರಾಂತಕ್ಕೆ ಹೋಗುವದರಿಂದ ಆಗುವ ಆನಂದದಲ್ಲಿ ಸ್ವಲ್ಪ ವಿರಹದ ಛಟ ಎನಿಸುವದು. ಸಣ್ಣ ಮಕ್ಕಳೂ ತಮ್ಮ ತಮ್ಮ ರೀತಿಯಲ್ಲಿ ಪ್ರಗತಿ ಹೊಂದುವರು.

ಧಂದೆ ಕೂಲಿಯವರಿಗೆ ಅಂತೂ ಈ ವರ್ಷ ಬಹಳ ಉತ್ಸಾಹದ್ದೆನಿಸುವದು. ಏಕೆಂದರೆ ರಾಶಿ ಸ್ವಾಮಿಯಾದ ಶನಿಯು ಇಡಿ ವರ್ಷ ಉದ್ಯೋಗ ಧಂದೆಯ ಮುಖ್ಯಸ್ಥಾನವಾದ ದಶಮದಲ್ಲಿ ಮತ್ತು ತನ್ನ ಉಚ್ಚ ರಾಶಿಯಾದ ತುಲಾದಲ್ಲಿ ಇರುವದ ರಿಂದ ಅವನಿಗೆ ರಾಶಿ ಮತ್ತು ಸ್ಥಾನ ಎರಡರ ಬಲವೂ ಸಂಪೂರ್ಣವಿದೆ. ಅಲ್ಲದೆ ವರ್ಷಾರಂಭ ದಲ್ಲಿ ದಶಮೇಶ ಶುಕ್ರ, ಭಾಗ್ಯೇಶನವಮೇಶ ಬುಧ ಕ್ರಯವಿಕ್ರಯ ಸ್ಥಾನಾಧಿಪತಿ ಚಂದ್ರ ಇವರೂ ಇದೇ ಸ್ಥಾನದಲ್ಲಿ ಇದ್ದು ಲಾಭೇಶ ಮಂಗಳನಂತೂ ಭಾಗ್ಯಸ್ಥಾನದಲ್ಲಿರುವನು. ಇದರಿಂದ ಅಭೂತ ಪೂರ್ವ ಮತ್ತು ನಿಮಗೆ ಕೂಡ ಆಶ್ಚರ್ಯವೆನಿಸು ವಂತಹ ಭಾಗ್ಯೋದಯ ನಿಶ್ಚಿತವಾಗಿ ಆಗುವದು ಮತ್ತು ಇದಕ್ಕೆ ಜನೆವರಿ ೨೯ ರಿಂದ ವಿಶೇಷ ಪ್ರಬಲ ಯೋಗವಿದೆ. ಈ ರಾಶಿಯ ಪ್ರತಿಯೊಬ್ಬ ಧಂದೆ ಯವನು ಅತ್ಯಂತ ಸಂತೋಷದಲ್ಲಿ ಇರುವನು ಮತ್ತು ಬೇಕಾದಷ್ಟು ಸ್ವೇಚ್ಛೆಯಿಂದ ವರ್ತಿಸಿದರೂ ಪ್ರತಿಯೊಂದು ಕೆಲಸದಲ್ಲಿ ಸ್ವಲ್ಪೂ ಹಾನಿಯಾಗದೆ ತದ್ವಿರುದ್ಧ ಪೂರ್ಣ ಯಶಸ್ಸು ಮತ್ತು ಲಾಭವೇ ಆಗುವದು. ಬುದ್ಧಿಜೀವಿ ಧಂದೆ ಮಾಡುವವರಿಗೆ ಹಣದ ಕೂಡ ಲೌಕಿಕವೂ ಹೆಚ್ಚುವದು. ವಿಶೇಷ ವಾಗಿ ದಿಸೆಂಬರ ೨೭ ರ ವರೆಗೆ, ಅನಂತರ ಜನೆವರಿ ೧೨ ರಿಂದ ಎಪ್ರಿಲ ೨೫, ಮೇ ೧೦ ರಿಂದ ೨೭, ಅಗಷ್ಟ ೧ ರಿಂದ ೨೦ ಮತ್ತು ಸಪ್ಟೆಂಬರ ೪ ರಿಂದ ಮುಂದಿನ ಅವಧಿ ಹೆಚ್ಚು ಪ್ರಗತಿಯದೆನಿಸು ವದು. ನೋಕರರಿಗೆ ಮೇಲಿನ ಗ್ರೇಡು ಸಿಕ್ಕುವ ದಿದ್ದರೆ ಅಗಷ್ಟ ೩೧ ರ ನಂತರ ನಿಶ್ಚಯವಾಗಿ ಸಿಕ್ಕುವದು. ಆದರೆ ಬದಲಿಯಾದರೂ ಎಲ್ಲ ರೀತಿ ಯಿಂದ ಸುಖಸೌಕರ್ಯಗಳ ಸ್ಥಳಕ್ಕೆ ಆದರೂ ಈಗಿದ್ದ ಊರಿನಿಂದ ಬಹಳ ದೂರ ಮತ್ತು ವಿಷಮ ಹವೆಯ ಊರಿಗೆ ಆಗುವದು. ಕೈಕೆಳಗಿನವರು ವಿನಮ್ರರಾಗಿ ನಡೆದರೂ ವರಿಷ್ಠರು ಮಾತ್ರ ನಿಮ್ಮ ಕೆಲಸದ ಬಗ್ಗೆ ಬಹಳ ತಕರಾರು ಮಾಡುವರು. ದೊಡ್ಡವರ ಭೆಟ್ಟಿಯ ಯೋಗ ಬಹಳ ಸಲ ಬಂದು ಅವರ ಸಂಬಂಧವು ನಿಮ್ಮ ಹಿತದ ದೃಷ್ಟಿಯಿಂದ ಬಹಳ ಪೋಷಕವೆನಿಸುವದು ಯಾವದಾದರೊಂದು ಕಾರಣದಿಂದ ಈ ವರ್ಷ ಪ್ರವಾಸವೂ ಬಹಳ.

ದಾವೆ ಖಟ್ಲೆ ಇಲ್ಲವೆ ಖಾಸಗಿ ಸ್ಪರ್ಧೆಯ ಕೆಲ ಸಗಳಲ್ಲಿ ಪ್ರತಿಪಕ್ಷಿಗಳ ಮೇಲೆ ಜನೆವರಿ ೨೯ ರಿಂದ ಬಹಳ ವಿಜಯ ಸಂಪಾದಿಸುವಿರಿ. ಮತ್ತು ಹನ್ನೆರಡಾಣೆ ಕೆಲಸಗಳಾದರೂ ಯಶಸ್ವಿಯಾಗು ವವು. ಆದರೆ ದಿಸೆಂಬರ ೧೧ ರ ವರೆಗೆ ಮತ್ತು ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆ ಅವರಲ್ಲಿ ಕೆಲವರು ನಿಮ್ಮ ವಿರುದ್ಧ ಬಹಳ ದೂರಹತ್ತುವರು.

ಈ ರಾಶಿಯ ಸ್ತ್ರೀಯರು ಈ ವರ್ಷ ಹಡೆಯು ವದಿದ್ದರೆ ಅವರಲ್ಲಿ ಯಾರು ಮೇ ೨೦ ರಿಂದ ಅಗಷ್ಟ ೯ ರ ವರೆಗೆ ಹಡೆಯುವರೊ ಅವರಿಗೆ ಅಲ್ಪ ಸ್ವಲ್ಪ ಕಷ್ಟವಾಗುವ ಸಂಭವವಿದೆ. ಉಳಿದ ಸಮಯದಲ್ಲಿ ಬಹಳ ಸುಲಭ ಪ್ರಸವವು. ದಿಸೆಂಬರ ೧೧ ರ ವರೆಗೆ ಮತ್ತು ಎಪ್ರಿಲ ೧೧ ರಿಂದ ಅಗಷ್ಟ ೩೧ ರ ವರೆಗೆ ಹೆಣ್ಣು ಮತ್ತು ಉಳಿದ ಅವಧಿಯಲ್ಲಿ ಗಂಡು ಹುಟ್ಟುವ ಸಂಭವ ಹೆಚ್ಚು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ನವಂಬರ ೩೦ ರಿಂದ ದಿಸೆಂಬರ ೨೪, ಜನೆವರಿ ೧೬ ರಿಂದ ಫೆಬ್ರುಅರಿ ೯, ಮಾರ್ಚ ೫ ರಿಂದ ೨೯, ಎಪ್ರಿಲ ೨೩ ರಿಂದ ಮೇ ೧೭, ಜೂನ ೧೧ ರಿಂದ ಜುಲೈ ೭, ಅಗಷ್ಟ ೨ ರಿಂದ ೩೧ ಮತ್ತು ಅಕ್ಟೋಬರ ೭ ರಿಂದ ಮುಂದೆ ಆದರೆ ಅವರು ಖಾತ್ರಿಯಿಂದ ಯಶಸ್ವಿಯಾಗುವರು.

ಕುಂಭ

ಈ ರಾಶಿಯವರಿಗೆ ಈ ವರ್ಷ ಕೆಲ ಕಿರುಕುಳ ತೊಂದರೆಗಳನ್ನು ಬಿಟ್ಟರೆ ಅತ್ಯಂತ ಉತ್ಕರ್ಷದ್ದೆಂದು ಕೊನೆಗೆ ಪ್ರತ್ಯಯಕ್ಕೆ ಬಾರದೆ ಇರಲಾರದು.

ಈ ರಾಶಿಯ ಜನರಿಗೆ ದಿಸೆಂಬರ ೧೩ ರ ವರೆಗೆ ಮತ್ತು ಮುಂದೆ ಫೆಬ್ರುಅರಿ ೨ ರಿಂದ ಮಾರ್ಚ ೩೦ ರವರೆಗೆ ಆರೋಗ್ಯವನ್ನು ಕೆಲಮಟ್ಟಿಗೆ ಜಪ್ಪಿಸ ಬೇಕಾಗುವದು. ನೇತ್ರವಿಕಾರ, ರಕ್ತಪಿತ್ತವಿಕಾರ, ಅಂತರ್ಗಳ, ಮೂಲವ್ಯಾಧಿ ಇಲ್ಲವೆ ಯಾವದೊಂದು ದಾಹಕ ಪದಾರ್ಥದ ಸ್ಫೋಟದಿಂದಾಗುವ ಗಾಯ ಇಂಥ ಒಂದೆರಡು ಕಾರಣಗಳಿಂದ ಕ್ಲೇಶವೆನಿಸುವ ಅಂಜಿಕೆ. ಉಳಿದ ಸಮಯದಲ್ಲಿ ಆರೋಗ್ಯ ಪೂರ್ಣ ನಿರೋಗಿ ಇರುವ ಯೋಗವೂ ಅಷ್ಟೇ ಪ್ರಬಲವಿದೆ. ಜನೆವರಿ ೨೯ ರಿಂದ ಎಪ್ರೀಲ ೧೧ ರವರೆಗೆ ಕೆಲ ವಿಷಯಗಳಲ್ಲಿ ಮಕ್ಕಳು ಮತ್ತು ನಿಮ್ಮಲ್ಲಿ ತೀವ್ರ ವಿರೋಧವುಂಟಾಗುವದರಿಂದ ಮಾನಸಿಕ ಸಮಾಧಾನ ಬಹಳ ಕುಂದುವ ಅಂಜಿಕೆಯಿದ್ದರೂ ಉಳಿದ ಸಮಯದಲ್ಲಿ ದೇಹಸುಖಕ್ಕೆ ಈ ವರ್ಷ ಬಹಳ ಉತ್ತಮವಿದೆ. ಮನೆಯಲ್ಲಿ ಬಗೆಬಗೆಯ ವಸ್ತುಗಳ ಆಯಾತ ದೊಡ್ಡ ಪ್ರಮಾಣದಲ್ಲಿ ಆಗುವದು. ಮತ್ತು ಎಪ್ರಿಲ ೧೧ ರಿಂದ ಅಗಸ್ಟ ೩೧ ರ ಮಧ್ಯದಲ್ಲಿ ಯಾವದೊಂದು ಹೊಸ ಮನೆಯ ಖರೀದಿ ಇಲ್ಲವೆ ಕಟ್ಟಿಸುವ ಯೋಗವಿದೆ. ಇದು ಸಾಧ್ಯವಾಗದಿದ್ದರೂ ಪ್ಲಾಟ ಕೊಳ್ಳುವದು ಅದಕ್ಕೆ ಹತ್ತುವ ಸಾಮಾನುಗಳನ್ನು ಕೂಡಿ ಹಾಕುವದು ಮೊದಲಾದ್ದನ್ನಂತೂ ಮಾಡುವಿರಿ. ಅದರಂತೆ ಸ್ವಲ್ಪ ಭೂಮಿ ಸೀಮೆ ಕೊಳ್ಳುವ ಸಂಭವವೂ ಇದೆ. ಅಷ್ಟರಲ್ಲಿ ನಿಮ್ಮ ಬಗ್ಗೆ ಬಹಳ ಆದರ ಹೆಚ್ಚುವದು. ಅದರಂತೆ ನೆರೆಯುವರು ನೋಕರರು ಪ್ರೀತಿಯಿಂದ ನಡೆಯುವರು. ಮಿತ್ರರು ಮಾತ್ರ ಜನೆವರಿ ೨೯ ರಿಂದ ಸ್ವಲ್ಪ ದೂರ ದೂರ ಇದ್ದುಕೊಂಡು ಅಗಸ್ಟ ೩೧ರ ನಂತರ ಕೆಲವರು ನಿಮ್ಮ ಶತ್ರುಗಳಾದುದೂ ಪ್ರತ್ಯಯಕ್ಕೆ ಬರುವದು. ಹೊಸ ಹೊಸ ವಾಹನಗಳು ಮತ್ತು ದನಕರುಗಳು ಕೊಳ್ಳಲ್ಪಡುವ ಸಂಭವ. ಮತ್ತು ಅವುಗಳಿಂದ ಯಥಾಯೋಗ್ಯ ಸುಖವೂ ಸಿಕ್ಕುವದು. ಬಹುತರ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲವಿದ್ದರೂ ಮಕ್ಕಳಂತೆ ನಿಮ್ಮ ಬಂಧುಗಳು ಕೂಡ ನಿಮ್ಮ ಮನಸ್ಸಿನ ವಿರುದ್ಧ ವರ್ತಿಸಿ ನಿಜವಾಗಿ ಸಿಕ್ಕತಕ್ಕ ಆನಂದದಲ್ಲಿ ಸ್ವಲ್ಪ ವಿಷ ಬೆರಸುವರು.

ಹೆಂಡತಿಯ ಆರೋಗ್ಯ ನವಂಬರ ೧೬ ರ ವರೆಗೆ ಮತ್ತು ಅನಂತರ ಮಾರ್ಚ ೧೪ ರಿಂದ ಮೇ ೧೪ ಮತ್ತು ಜುಲೈ ೧೬ ರಿಂದ ಅಗಸ್ಟ ೧೬ ರ ವರೆಗಿನ ಅವಧಿಯಲ್ಲಿ ನಿಮ್ಮನ್ನು ಕೆಲಮಟ್ಟಿಗೆ ವಿನಮ್ರ ಮಾಡುವದು. ಆದರೆ ಉಳಿದ ವೇಳೆಯಲ್ಲಿ ಅದು ಉತ್ತಮ ಉಳಿಯುವದು ಮತ್ತು ನಿಮ್ಮಿಬ್ಬರಲ್ಲಿ ಸದಾ ಕೂಡಿ ನಡೆಯುವದು. ನಿಮ್ಮ ವಿವಾಹವಿನ್ನೂ ಆಗಿದ್ದಿಲ್ಲವಾದರೆ ಮತು ಈ ವರ್ಷ ಮಾಡಿಕೊಳ್ಳುವ ಇಚ್ಛೆಯಿದ್ದರೆ ಅದಕ್ಕೆ ಮಾತ್ರ ಗುರುಬಲ ದಿಸೆಂಬರ ೧೩ ರ ವರೆಗೆ ಮಧ್ಯಮ. ಎಪ್ರಿಲ ೧೧ ರಿಂದ ಅಗಸ್ಟ ೩೧ ರ ವರೆಗೆ ಸಂಪೂರ್ಣ ಗುರು ಬಲವಿದೆ. ವಧು ಮತ್ತು ವರ ಪರಸ್ಪರ ಮನಸ್ಸಿಗೆ ಬರುವರು ಕದಾಚಿತ್ ವಿವಾಹ ಪೂರ್ವದಲ್ಲಿಯೇ ಪರಸ್ಪರ ಪರಿಚಯವಾಗುವದು. ಅದರಂತೆಯೆ ನಿಮ್ಮ ಮಕ್ಕಳ ವಿವಾಹ ಮಾಡುವದಿದ್ದರೆ ಅದಕ್ಕೆ ಮಾತ್ರ ಡಿಸೆಂಬರ ೧೧ ರ ವರೆಗೆ ಗುರು ಬಲ ಉತ್ತಮವಿದ್ದಷ್ಟು ಮುಂದೆ ಇರುವದಿಲ್ಲ. ಎಪ್ರಿಲ ೧೧ ರಿಂದ ಅವಧಿಯು ಅಲ್ಪಸ್ವಲ್ಪ ಅನುಕೂಲವಿದ್ದರೂ ಅದು ಕೂಡಿಬರುವದಕ್ಕಿಂತ ಹೆಚ್ಚಿನ ಪ್ರಗತಿಯಾಗುವದಕ್ಕೆ ಅನೇಕ ಅಡಚಣೆಗಳು ನಡುವೆ ಬರುವ ಅಂಜಿಕೆಯಿದೆ. ಮಕ್ಕಳ ಆರೋಗ್ಯಕ್ಕೆ ಈ ವರ್ಷ ಜನೆವರಿ ೨೯ ರ ನಂತರದ ಕಾಲವು ಅಷ್ಟೊಂದು ಅನುಕೂಲವಿಲ್ಲದಿದ್ದರೂ ಉಳಿದ ದೃಷ್ಟಿಯಿಂದ ಅವರ ಉನ್ನತಿಗೆ ಸ್ವಲ್ಪೂ ಪ್ರತಿಕೂಲವಿರುವದಿಲ್ಲ

ಇನ್ನು ಮುಖ್ಯವಾಗಿ ಭವಿಷ್ಯ ನೋಡುವ ಉದ್ದೇಶವಾದ ಧನಲಾಭದ ಬಗ್ಗೆ ಯೋಗವನ್ನು ನೋಡಿದರೆ ಈ ವರ್ಷ ಇರುವ ೯ನೇ ಅಂದರೆ ಭಾಗ್ಯಸ್ಥನಾದ ಶನಿ ಮಹಾರಾಜನು ತನ್ನ ಉಚ್ಚ ರಾಶಿಯಾದ ತುಲಾದಲ್ಲಿ ಇರುವದರಿಂದ ಮತ್ತು ಸ್ವತಃ ನಿಮ್ಮ ಈ ಕುಂಭರಾಶಿಯ ಸ್ವಾಮಿಯಾಗಿರುವದರಿಂದ ಧಂದೆ ಮತ್ತು ಕೂಲಿಕಾರರಿಗೆ ಕಲ್ಪನಾತೀತ ಭಾಗ್ಯೋದಯವಾಗುವದರಲ್ಲಿ ಸಂದೇಹವಿಲ್ಲ. ಧಂದೆ ಯಾವದೇ ಇರಲಿ, ಅವರವರ ಶಕ್ತಿಯಿದ್ದಂತೆ ನೂರ್ಮಡಿ ಲಾಭವಾಗಿ ಅವು ಆಳವಾಗಿ ಬೇರು ಬಿಟ್ಟು ಭಾವೀ ಉತ್ಕರ್ಷಕ್ಕೆ ಅದರಿಂದ ಬಹಳ ಉಪಯೋಗವಾಗುವದು. ಫೆಬ್ರುವರಿ ೨ ರಿಂದ ಅಶ್ರಯದಾತರು, ಪತ್ತು, ಪ್ರತಿಷ್ಠೆ, ಶಬ್ದದ ವರ್ಚಸ್ಸು ಬಹಳ ಜೋರಿನಿಂದ ಬೆಳೆಯಹತ್ತುವದು. ಮತ್ತು ಜನೆವರಿ ೨೯ ರಿಂದ ಬರುವ ಹನ್ನೊಂದನೇ ರಾಹುವಿನಿಂದ ದ್ರವ್ಯಲಾಭ ಹೆಚ್ಚುತ್ತ ನಡೆದು ಎಪ್ರಿಲ ೧೧ ರಿಂದ ಅಗಸ್ಟ ೩೧ರ ವರೆಗೆ ಇರುವ ಪಂಚಮ ಗುರುವಿನಿಂದ ಬಹಳ ಮೇಲ್ಮಟ್ಟವನ್ನು ಮುಟ್ಟುವಿರಿ. ಆದರೆ ಆಗಸ್ಟ ೩೧ ರ ನಂತರ ರಾಕ್ಷಸೀ ಛಲ ಇಲ್ಲವೆ ಯಾವನೊಬ್ಬ ಕಪಟೀ ಮಿತ್ರನ ದುಷ್ಟ ಸಲಹೆಯಿಂದ ಸ್ವಲ್ಪ ವಿಪರೀತ ಬುದ್ಧಿಯಾಗಿ ಯಾವದೊಂದು ಅವ್ಯಾಪಾರೇಷು ವ್ಯಾಪಾರ ಮಾಡುವಿರಿ. ಅದರಲ್ಲಿ ಅಲ್ಪ ಸ್ವಲ್ಪ ತಾತ್ಸಾರವಾಗುವ ಅಂಜಿಕೆಯಿದೆ. ನೋಕರರಿಗೆ ಕೂಡ ಈ ವರ್ಷ ಬಹಳ ಉತ್ಕರ್ಷವಾಗುವದು. ಮೇ ೨೦ ರಿಂದ ಅಗಸ್ಟ ೯ ರ ವರೆಗೆ ಮೇಲಿನ ಗ್ರೇಡು ಅಕಸ್ಮಾತ್ತಾಗಿ ಸಿಕ್ಕುವದು. ಮತ್ತು ಫೆಬ್ರುಅರಿ ೨ ರಿಂದ ನಿಮ್ಮ ಕಾರ್ಯದಲ್ಲಿ ಪ್ರಾವೀಣ್ಯವನ್ನುನೋಡಿ ಅವರು ಬಹಳ ಸಂತುಷ್ಟರಾಗುವರು. ಮತ್ತು ಅದನ್ನು ನೋಡಿ ಕೈಕೆಳಗಿನವರೂ ಒಳ್ಳೆ ಮರ್ಯಾದೆ ಕೊಡುವರು. ಬದಲಿಯಾಗುವ ಖಾತೆ ಇದ್ದರೆ ಆಗಸ್ಟ ೩೧ ರೊಳಗಾಗಿ ಬದಲಿಯಾದರೆ ಸಂಪೂರ್ಣವಾಗಿ ಅನುಕೂಲ ಸ್ಥಳಕ್ಕೆ ಮತ್ತು ಅನಂತರ ಆದರೆ ಬಹಳ ಅನನುಕೂಲ ಸ್ಥಳಕ್ಕೆ ಆಗುವದು. ಇಲ್ಲವೆ ಅಂಥ ಕೆಲಸಕ್ಕೆ ಹೋಗಬೇಕಾಗುವದು. ನಿಮ್ಮ ಯೋಗ್ಯ ವೆಚ್ಚವೆಲ್ಲ ಬಾಯ್ಗೊಡಿ ಏನಾದರೂ ಶಿಲ್ಲಕು ಉಳಿಸುವಿರಿ. ಯಾರಿಗಾದರೂ ಸಾಲವಾಗಿದ್ದರೆ ಅದು ಮುಟ್ಟುವದು. ದೂರದ ಯಾತ್ರೆ ಇಲ್ಲವೆ ಅಂಥದೆ ಒಂದು ಧಾರ್ಮಿಕ ಕೃತ್ಯವು ನಿಮ್ಮಿಂದ ಸಂಭವಿಸುವದು ಜೀವನಸಾರ್ಥಕ್ಯದ ಇಂಥ ಸಂಗತಿಗಳು ಈ ವರ್ಷ ನಿಮ್ಮಿಂದ ಜರಗುವವು. ಇದೇ ಈ ವರ್ಷದ ವೈಶಿಷ್ಟ್ಯ.

ದಾವೆ ಖಟ್ಲೆ ಮತ್ತು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಜನೆವರಿ ೨೯ ರ ವರೆಗೆ ಪ್ರತಿಪಕ್ಷಿಗಳ ಮೇಲೆ ಒಳ್ಳೆ ವಿಜಯ ಸಂಪಾದಿಸುವಿರಿ. ಅನಂತರ ಅಗಸ್ಟ ೩೧ ರ ವರೆಗೆ ಇವುಗಳಲ್ಲಿಯ ಕೆಲ ಕೆಲಸಗಳು ಉಭಯತರ ಒಪ್ಪಿಗೆಯಿಂದ ಬಗೆಹರಿಯುವ ಸಂಭವವಿದೆ. ಆದರೆ ಅನಂತರ ಮಾತ್ರ ಶತ್ರುಗಳ ಪ್ರಾಬಲ್ಯವೇ ಹೆಚ್ಚಿ ತಿಳಿದೂ ತಿಳಿದು ನೀವು ಹಿಮ್ಮೆಟ್ಟಬೇಕಾಗುವದು.

ಈ ರಾಶಿಯ ಸ್ತ್ರೀಯರು ಈ ವರ್ಷ ಹಡೆಯುವವರಿದ್ದರೆ ಅವರಲ್ಲಿ ಜನೆವರಿ ೨೯ ರಿಂದ ಎಪ್ರೀಲ ೧೧ ರ ವರೆಗೆ ಹಡೆಯುವವರು ಪ್ರಸವಕಾಲಕ್ಕೆ ಮತ್ತು ಮುಂದೆ ಕಷ್ಟವನ್ನನುಭವಿಸಬೇಕಾಗುವದು. ಆದರೂ ಬಾಳಂತಿತನದಲ್ಲಿ ಜೀವಕ್ಕೆ ಯಾವ ಬಗೆಯ ಅಪಾಯವೂ ಇಲ್ಲ. ಉಳಿದ ಸಮಯದಲ್ಲಿ ಸುಲಭ ಪ್ರಸೂತಿಯ ಯೋಗವಿದ್ದು ಎಪ್ರಿಲ ೧೧ ರಿಂವ ಅಗಸ್ಟ ೩೧ ರ ವರೆಗೆ ಹಡೆಯುವವರಿಗೆ ಬಹುಶಃ ಗಂಡು ಹುಟ್ಟುವವು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ದಿಸೆಂಬರ ೬ ವರೆಗೆ ಮತ್ತು ಮುಂದೆ ದಿಸೆಂಬರ ೨೬ ರಿಂದ ಜನೆವರಿ ೧೨, ಜನೆವರಿ ೩೦ ರಿಂದ ಎಪ್ರಿಲ ೬, ಎಪ್ರಿಲ ೨೫ ರಿಂದ ಮೇ ೧೦, ಮೇ ೨೬ ರಿಂದ ಅಗಸ್ಟ ೧, ಅಗಸ್ಟ ೨೦ ರಿಂದ ಸಪ್ಟಂಬರ ೪ ಮತ್ತು ಸಪ್ಟಂಬರ ೨೩ ರ ನಂತರ ಆಗುವದಿದ್ದರೆ ಯಶಸ್ಸು ನಿಶಿತ.

ಮೀನ

ಈ ರಾಶಿಯವರಿಗೆ ಒಟ್ಟಿಗೆ ಪ್ರಾಪಂಚಿಕ ಮತ್ತು ಮಾನಸಿಕ ಪರಿಸ್ಥಿತಿ ಸ್ವಲ್ಪ ದಗದಗಿಯದಿದ್ದರೂ ದ್ರವ್ಯಲಾಭದ ದೃಷ್ಟಿಯಿಂದ ಒಳ್ಳೆ ಉತ್ಸಾಹದ್ದೆಂದು ಈ ವರ್ಷ ಎನಿಸದಿರಲಾರದು. ಈ ಬಗ್ಗೆ ಎಳ್ಳಷ್ಟು ಸಂಶಯವಿಲ್ಲ.

ಈ ರಾಶಿಯ ಜನರ ಆರೋಗ್ಯ ಅಷ್ಟೊಂದು ನೆಟ್ಟಗಿಲ್ಲದಿದ್ದರೂ ಹಾಸಿಗೆಯ ಮೇಲೆ ಬಿದ್ದುಕೊಂಡು ಇರುವಷ್ಟು ಕೆಡುವದಿಲ್ಲ. ದಿಸೆಂಬರ ೧೩ ರಿಂದ ಫೆಬ್ರುವರಿ ೨ರ ವರೆಗೆ ಈಗ ಬಂದ ೮ನೇ ಶನಿಯಿಂದ ಗೋಚರ ನುಂಗಳ ಬಂದಾಗ ಮಾತ್ರ ಸ್ವಲ್ಪ ಜಪ್ಪಿಸಿಕೊಂಡು ಇರಬೇಕು. ಅದರಂತೆ ನಿಮ್ಮ ಮಕ್ಕಳು ಮರಿಗಳ ಆರೋಗ್ಯವನ್ನು ಜನೆವರಿ ೨೯ ರ ವರೆಗೆ ಜಪ್ಪಿಸಬೇಕು ಮತ್ತು ತಂದೆ ತಾಯಿ ಇದ್ದರೆ ಅವರ ಆರೋಗ್ಯವನ್ನು ಮಾರ್ಚ ೩೦ ರಿಂದ ಅಕ್ಟೋಬರ ೨ರ ವರೆಗೆ ಜಪ್ಪಿಸಬೇಕಾಗುವದು. ಯಾರದಾದರೂ ಜನ್ಮ ಕುಂಡಲಿಯಲ್ಲಿ ಚತುರ್ಥಸ್ಥಾನದಲ್ಲಿ ರಾಹು ಇಲ್ಲವೆ ಕೇತು ಇದ್ದರೆ ಅವರ ತಂದೆತಾಯಿಗಳಲ್ಲಿ ಒಬ್ಬರು ಕದಾಚಿತ್ ಮರಣಹೊಂದುವ ಸಂಭವವೂ ಇದೆ.

ದೇಹ ಸುಖಕ್ಕೆ ಬಾಹ್ಯಪರಿಪೋಷಕವಾಗುವಂತಹ ವಸ್ತು ಇಲ್ಲವೆ ಘಟನೆ ಎಂದೂ ಅಡ್ಡ ಬರುವದಿಲ್ಲ. ಆದರೂ ೪ ನೇ ಗುರು ಮತ್ತು ಕೇತು ಏಕತ್ರ ಇರುವ ಕಾಲಕ್ಕೆ ಅಂದರೆ ಎಪ್ರಿಲ ೧೧ ರಿಂದ ಅಗಸ್ಟ ೩೧ರ ವರೆಗೆ ಪ್ರತಿಯೊಂದರಲ್ಲಿ ಒಂದು ಬಗೆಯ ದಗದಗಿ ಮತ್ತು ಜಿಕೇರಿ ಎನಿಸಿ ಅದರಿಂದ ಮೇಲಿಂದ ಮೇಲೆ ಮನೋಭಂಗವಾಗುವದು. ಈ ಕಾಲಕ್ಕೆ ತಂದೆತಾಯಿ ಮೊದಲಾದ ಹಿರಿಯರು ಮತ್ತು ನಿಕಟ ಆಪ್ತರಲ್ಲಿಯ ವೃದ್ಧರು ಶಕ್ಯವಿಲ್ಲದಷ್ಟು ಕೆಲ ವಸ್ತುಗಳನ್ನು ಬೇಡುವರು. ಇಲ್ಲವೆ ಹಣವನ್ನು ಕೇಳುವರು. ಮೇಲಿಂದ ಮೇಲೆ ಈ ಬಗೆಯ ಬೇಡಿಕೆಯನ್ನು ಮಾಡುವದರಿಂದ ನಿಮಗೆ ಬಹಳ ತೊಂದರೆಯೆನಿಸುವ ಸಂಭವ. ಆದರೆ ಇದೇ ಕಾಲಕ್ಕೆ ಮನೆಯಲ್ಲಿ ಭೂತಬಾಧೆಯಾದಂತಾಗಿ ಹತಬುದ್ಧಿಯಾಗುವ ಚಮತ್ಕಾರಿಕ ಘಟನೆಗಳು ಸಂಭವಿಸುವವು. ಆದರೆ ಮನಸ್ಸಿನಲ್ಲಿ ಅಂಜಿಕೆಯ ಹೊರತು ಉಳಿದ ಬಗೆಯ ಹಾನಿ ಸ್ವಲ್ಪೂ ಆಗುವದಿಲ್ಲ. ವಾಹನಗಳು ಹೊಸವಿದ್ದರೂ ಅವು ಮೇಲಿಂದ ಮೇಲೆ ಕೆಡುವವು. ನೋಕರರು ಮತ್ತು ದನಕರುಗಳಲ್ಲಿ ಕಾಯಿಲೆ ರೋಗರುಜಿಗಳಿಂನ ಬಹಳ ತೊಂದರೆ ಮತ್ತು ವೆಚ್ಚ. ಒಬ್ಬ ನೋಕರನು ನೋಕರಿ ಬಿಡಬಹುದು, ಇಲ್ಲವೆ ಒಂದು ಒಳ್ಳೆ ದನವನ್ನು ಯಾರಾದರೂ ಕಳವು

ಮಾಡುವರು, ಇಲ್ಲವೆ ಅದು ತಾನಾಗಿಯೇ ಹೋಗುವ ಅಂಜಿಕೆಯಿದೆ. ಸ್ಥಾವರ ಜಂಗಮದಲ್ಲಿ ಸ್ವಲ್ಪ ಹೊಸ ಸಂಗ್ರಹದ ಯೋಗ ನಿಶ್ಚಿತವಿದೆ. ಆದರೆ ಸ್ಥಾವರ ಜಂಗಮಗಳ ಉತ್ಪನ್ನ ಮೊದಲಿನಷ್ಟು ಬರದೆ ಕಡಮೆಯೇ ಬರುವದು. ಮನೆಯ ಒಡೆಯರು ಇಲ್ಲವೆ ಬಾಡಿಗೆಯವರು ದಿನವೂ ಒಂದಿಲ್ಲೊಂದು ಬಗೆಯ ತೊಂದರೆ ಕೊಡಹತ್ತುವರು. ನೆರೆಯವರೂ ದ್ವೇಷ ಮಾಡುವರು. ಒಟ್ಟಾರೆ ಮೊದಲು ಸುಸ್ಥಿತಿಯಲ್ಲಿದ್ದ ಮನುಷ್ಯನು ಈ ವರ್ಷ ಮಾನಸಿಕ ತೊಂದರೆಯನ್ನನುಭೋಗಿಸುವನು.

ಸ್ತ್ರೀಸುಖಕ್ಕೆ ಕೆಲಕಾಲ ಪೂರ್ಣ ಅನುಕೂಲವಿದ್ದರೆ ಕೆಲಕಾಲ ಪೂರ್ಣ ಕಷ್ಟದ್ದು. ದಿಸೆಂಬರ ೧೧ ರಿಂದ ಎಪ್ರಿಲ ೧೧ರ ವರೆಗೆ ಅವಳ ಆರೋಗ್ಯ ಪೂರ್ಣ ನಿರೋಗಿ. ಆದರೆ ಯಾವದೊಂದು ಮನೆತನದ ಹಿತಾಹಿತದ ದೃಷ್ಟಿಯಲ್ಲಿ ಉಭಯತರಲ್ಲಿ ಬಹಳ ವಿರೋಧವಾಗುವದು. ಕೊನೆಗೆ ಅವಳ ಪಿತ್ತ ಬಹಳ ಹೆಚ್ಚಬಾರದೆಂದು ಸ್ವತಃ ನೀವೇ ಹಿಂದಕ್ಕೆ ಸರಿಯಬೇಕಾಗುವದು. ಉಳಿದ ಕಾಲದಲ್ಲಿ ನಿಮ್ಮಿಬ್ಬರದು ಕೂಡಿ ನಡೆಯುವದು. ಆದರೆ ಅವಳ ಆರೋಗ್ಯದ ಬಗ್ಗೆ ಇದ್ದ ಅಲ್ಪ ಸ್ವಲ್ಪ ಕಿರಿಕಿರಿಯಿಂದ ಮನಸ್ಸಿನಲ್ಲಿ ಸ್ವಲ್ಪ ಅಸ್ವಸ್ಥತೆ, ಆದರಲ್ಲಿಯೂ ಸಪ್ಟಂಬರ ೧ ರಿಂದ ಏನೂ ಕಿಟಕಿಟಿಯಿಲ್ಲ. ನೀವು ಇನ್ನೂ ಅವಿವಾಹಿತರಾಗಿದ್ದರೆ ಮತ್ತು ಈ ವರ್ಷ ಚತುರ್ಭುಜರಾಗಬಯಸಿದರೆ ದಿಸೆಂಬರ ೧೧ ರಿಂದ ಎಪ್ರಿಲ ೧೧ ರ ವರೆಗೆ ಪ್ರಬಲ ಮತ್ತು ಸಪ್ಟಂಬರ ೧ ರಿಂದ ಮಧ್ಯಮ ಬಾಶಿಂಗಬಲವಿದೆ. ವರ ಮತ್ತು ವಧು ಪರಸ್ಪರ ಬುದ್ಧಿ ಮತ್ತು ರೂಪದೃಷ್ಟಿಯಿಂದ ಒಂದೇ ಮಾದರಿಯವರಿದ್ದರೂ ವೈವಾಹಿಕ ಕೊಡತಕ್ಕೊಳ್ಳುವ ವ್ಯವಹಾರದಲ್ಲಿ ಮಧ್ಯಸ್ಥರು ಹೇಳಿದ್ದೊಂದು ಮಾಡಿದ್ದು ಬೇರೆ ಎಂಬ ತಪ್ಪು ತಿಳಿವಳಿಕೆಯಿಂದ ಸ್ವಲ್ಪ ಅಸಂತುಷ್ಟರಾಗುವಿರಿ. ಒಂದು ವೇಳೆ ನಿಮ್ಮ ಮಕ್ಕಳ ವಿವಾಹವನ್ನು ಈ ವರ್ಷ ಮಾಡುವದಿದ್ದರೆ ಅದಕ್ಕೆ ಮಾತ್ರ ಮೇಲೆ ಹೇಳಿದ ಎರಡೂ ಕಾಲ ಒಳ್ಳೆ ಬಾಶಿಂಗಬಲದ್ದಿದೆ. ಪ್ರಥಮ ಪ್ರಯತ್ನದಲ್ಲಿಯೆ ಕೂಡಿಬರುವದು. ಎರಡನೇ ಮೆಟ್ಟಲಿನಲ್ಲಿಯೇ ಲಗ್ನವಾಗಿಯೇ ಹೋಗುವದು. ಜನೇವರಿ ೨೯ರ ನಂತರ ಎಲ್ಲ ಮಕ್ಕಳು ಮೊಮ್ಮಕ್ಕಳ ಆರೋಗ್ಯ ಅನುಕೂಲವಿರಬಲ್ಲದು. ಮತ್ತು ಅಗಸ್ಟ ೩೧ರ ವರೆಗೆ ಅವರ ಉನ್ನತಿ ಸ್ವಲ್ಪ ಸ್ವಲ್ಪ. ಆದರೆ ಮುಂದೆ ಒಳ್ಳೇ ಜೋರಿನಿಂದ ಕೂಡಿಬರುವದು.

ಧಂದೆಯುವರಿಗೆ ಮತ್ತು ನೋಕರರಿಗೆ ಈ ವರ್ಷ ೮ ನೇ ಶನಿಯಿಂದ ಕಷ್ಟದ್ದು ಮತ್ತು ಅವನತಿಯು ದೆನಿಸುವದೋ ಏನೊ ಎಂದು ಅನೇಕರಿಗೆ ಅಂಜಿಕೆ ಇದ್ದರೆ ಅದು ಮಾತ್ರ ಸುಳ್ಳು. ಏಕೆಂದರೆ ಶನಿಯೇ ಲಾಭೇಶ (ಈ ರಾಶಿಯ) ಇರುವನು. ಮತ್ತು ಅವನು ಅಷ್ಟಮದಲ್ಲಿ ಮತ್ತು ತನ್ನ ಉಚ್ಚ ರಾಶಿಯಾದ ತುಲಾದಲ್ಲಿ ಇರುವದರಿಂದ ಕಷ್ಟಾರ್ಜಿತ ಮತ್ತು ಗುಪ್ತ ಹೀಗೆ ಎರಡು ರೀತಿಯಿಂದ ಹಣ ದೊರೆತು ದೈನ್ಯಹರಣವಾಗುವ ಸಂಭವವಿದೆಂಬಲ್ಲಿ ಸಂದೇಹವಿಲ್ಲ. ಅಲ್ಲದೆ ವರ್ಷಾರಂಭದಲ್ಲಿ ಶನಿಯಂತೆ ಚತುರ್ಥೇಶ ಬುಧ, ಪಂಚಮೇಶ ಚಂದ್ರ ಮತ್ತು ಅಷ್ಟಮೇಶ ಶುಕ್ರ ಇವರಾದರೂ ಅಷ್ಟಮ ಸ್ಥಾನದಲ್ಲಿರುವದರಿಂದ ಗುಪ್ತ ಧನಲಾಭಕ್ಕೆ ಯೋಗ್ಯ ಸಹಾಯ ಮಾಡುವರು. ಸ್ವತಂತ್ರ ಧಂದೆಮಾಡುವವರಿಗೆ ಬಹಳ ವೇಗದಿಂದ ಚಕ್ರಗಳು ತಿರುಗಹತ್ತಿ ಪತ್ತು ಮತ್ತು ಪ್ರತಿಷ್ಠೆ ಬಹಳ ಮಟ್ಟಿಗೆ ಸುಧಾರಿಸುವದು. ಆದರೆ ಆತ್ಮಕಾರಕ ರವಿಯು ಶತ್ರುಗ್ರಹವಾದ ಶನಿಯಿಂದ ಯುಕ್ತನಾಗಿರುವದರಿಂದ ಯಾವಾಗಾದರೊಮ್ಮೆ ನಿಮ್ಮಿಂದಾಗುವ ಅತಿ ಚಿಕಿತ್ಸೆ ಇಲ್ಲವೆ ಒಮ್ಮೆಲೇ ತೋರುವ ಅಂಧ ವಿಶ್ವಾಸಗಳಿಂದ ಕೈಯಲ್ಲಿದ್ದ ಕೆಲ ಸುಸಂಧಿ ಹೊರಟುಹೋಗುವ ಅಂಜಿಕೆ ಇದೆ. ನೋಕರಿ ಇದ್ದವರಿಗೆ ಮೇ ೨೦ ರಿಂದ ಅಗಸ್ಟ ೯ರ ನಡುವಿನ ಅವಧಿಯಲ್ಲಿ ಖಾತ್ರಿಯಿಂದ ಮೇಲಿನ ಗ್ರೇಡು ಸಿಕ್ಕುವದು. ಸಿಕ್ಕದಿದ್ದರೆ ನಿದಾನ ಸ್ವಲ್ಪವಾದರೂ ಸಂಬಳ ಹೆಚ್ಚುವದು. ದಿಸೆಂಬರ ೧೧ ರಿಂದ ಎಪ್ರಿಲ ೧೧ರ ವರೆಗೆ ವರಿಷ್ಠರು ಮಾತ್ರ ಅಸಂತುಷ್ಟರಿದ್ದಂತೆಯೇ ತೋರುವದು. ಆದರೆ ಮುಂದೆ ಅವರು ಪೂರ್ಣಪ್ರೇಮದಿಂದ ವರ್ತಿಸುವರು. ಕೈಕೆಳಗಿನವರು ಮನಸ್ಸಿನಲ್ಲಿ ಮತ್ಸರ ತಾಳಿದರೂ ಮೇಲೆ ಮೇಲೆ ಚೆನ್ನಾಗಿ ವರ್ತಿಸುವರು. ಬದಲಿಯಾಗುವ ಖಾತೆ ಇದ್ದರೆ ಮಾರ್ಚ ೩೦ ರಿಂದ ಮೇ ೨೦, ಅಕ್ಟೋಬರ ೨೩ ರ ನಂತರ ಆಗುವ ಸಂಭವವಿದೆ. ಮಿತ್ರಸುಖ ಅನುಕೂಲ, ಆದರೆ ಅವರಲ್ಲಿ ಒಬ್ಬನು ದೊಡ್ಡ ಕೆಲಸದ ಬಗ್ಗೆ ಕೊಟ್ಟ ವಚನವನ್ನು ಬೇಕೆಂತಲೇ ಇಲ್ಲವೆ ನಿರುಪಾಯನಾಗಿ ಮುರಿಯುವನು.

ದಾವೆ, ಖಟ್ಲೆ, ಖಾಸಗಿ ಸ್ಪರ್ಧೆಗಳಲ್ಲಿ ಯಾರ ನಿರ್ಣಯವು ನವಂಬರ ೧೬ ರಿಂದ ಫೆಬ್ರುಅರಿ ೧೨ ಮತ್ತು ಮಾರ್ಚ ೧೪ ರಿಂದ ಎಪ್ರಿಲ ೧೩, ಮೇ ೧೪ ರಿಂದ ಜುಲೈ ೧೬ ಮತ್ತು ಅಗಸ್ಟ ೧೭ ರಿಂದ ನವಂಬರ ೧೭ ರ ಅವಧಿಯಲ್ಲಿ ಆದರೆ ನಿಮಗೆ ಪೂರ್ಣ ಯಶಸ್ಸು ಸಿಕ್ಕುವದು. ಆದರೂ ಶತ್ರುಗಳ ಪ್ರಾಬಲ್ಯ ಸ್ವಲ್ಪೂ ಕಡಮೆಯಾಗದೆ, ಅವರಲ್ಲಿ ಕೆಲವರದು ಮತ್ತೂ ಹೆಚ್ಚಿದ್ದು ಕಂಡು ಬರುವದು.

ಈ ರಾಶಿಯ ಸ್ತ್ರೀಯರು ಹೆಡೆಯುವವರಿದ್ದರೆ ಮತ್ತು ಅವರಲ್ಲಿ ಯಾರು ಜನೆವರಿ ೨೯ರೊಳಗಾಗಿ ಹಡೆಯುವರೋ ಅವರಿಗೆ ಅಲ್ಪಸ್ವಲ್ಪ ಕಷ್ಟವಾಗಿ ಬಹುಶಃ ಹೆಣ್ಣು ಹುಟ್ಟುವ ಸಂಭವವಿದೆ. ಜನೆವರಿ ೨೮ ರಿಂದ ಅಗಸ್ಟ ೩೧ರ ವರೆಗೆ ಆಗುವ ಪ್ರಸೂತಿಯು ಸುಲಭವಾಗುವದಿಷ್ಟೇ ಅಲ್ಲ, ಪುತ್ರರತ್ನವೂ ಹುಟ್ಟುವುದು. ಆದರೆ ಅದು ಬಹಳ ಅಶಕ್ತ, ಕಿರಿಕಿರಿ ಕೊಡುವದಾಗುವದು. ಅಲ್ಲದೆ ರೂಪ ಲಕ್ಷಣಗಳಲ್ಲಿಯೂ ಏನಾದರೂ ಕೊರತೆಯುಳಿಯುವದು. ಇದರಿಂದ ಬಾಣಂತಿತನವು ಬಹಳಷ್ಟು ಮೈಹಿಡಿಯುವದಿಲ್ಲ ಮತ್ತು ಅಗಷ್ಟ ೩೧ ರ ನಂತರ ಅತ್ಯಂತ ಸುಖದಿಂದ ಹಡೆಯುವರು. ಒಳ್ಳೆ ಸುಂದರ ಮಗ ಹುಟ್ಟಿದ ಆನಂದವನ್ನು ಭೋಗಿಸುವರು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಜನೆವರಿ ೨೯ ರಿಂದ ಎಪ್ರಿಲ ೧೧ ರ ವರೆಗೆ ಮತ್ತು ಅಗಸ್ಟ ೩೧ರ ನಂತರ ಮುಂದಿನ ಅವಧಿಯಲ್ಲಿ ಆದರೆ ಅವರು ಶ್ರೀ ಸರಸ್ವತಿಯ ಕೃಪೆಯಿಂದ ಖಾತ್ರಿಯಿಂದ ಯಶಸ್ವಿಯಾಗುವರು.

ಶುಭಂ ಭವತು



ಲೇಖಕರು :

ಶ್ರೀಕೃಷ್ಣ ಪಾಟೀಲ

ಕಾರಣಾಂತರದಿಂದ ಗೋಕಾವಿಗೆ ಹೋದ ಆನಂದರಾಯರು ಮಠದ ಸ್ವಾಮಿಗಳಾದ ಶ್ರೀ ಶ್ರೀ ಶ್ರೀಸತ್ಯೇಂದ್ರ ಶ್ರೀಪಾದಂಗಳವರ ಧರ್ಮ ಪ್ರವಚನವನ್ನು ಕೇಳುವ ಪ್ರಸಂಗ ಬಂದಿತು. ಸ್ವಾಮಿಗಳ ಧರ್ಮಬೋಧನೆಯ ವಿಷಯಗಳೇನೇ ಇರಲಿ, ಅದರ ನಿರ್ಣಯ, ಆಚರಣೆ, ನಂಬಿಗೆಗೆ ಆನಂದರಾಯರ ಲಕ್ಷ್ಯವಿರಲಿಲ್ಲ. ಅವೆಲ್ಲ ದಾಸರ ಹಾಡಿನ ಹಳೆಯ ಪಲ್ಲವಿಗಳೇ ಎಂದು ತಿಳಿವಳಿಕೆ. ಆದರೆ ಒಂದು ಮಾತನ್ನು ಅವರು ಸಂಪೂರ್ಣವಾಗಿ ಮರೆಯರು. ಅದೇ ಅವರ ಚಿರಪದವೆಂದರೂ ಸರಿಯೆ. ತಮ್ಮ ಜೀವನಕ್ಕೆ ಅದೆಂತಹ ಅಮೃತವಾಣಿ! ಎಂತಹ ಪವಿತ್ರವಾದ ಮುಕ್ತಿ ಸೂತ್ರ! ಒಮ್ಮೊಮ್ಮೆ ಇದೇ ತಮ್ಮ ನಿಷ್ಕಾಮ ಕರ್ಮಯೋಗದ ಗುರಿಯೆಂದೂ ಪ್ರಪಂಚದ ಲೋಪ-ದೋಷಕ್ಕಾಗಲಿ ಪುಣ್ಯಪಾಪಗಳಿಗಾಗಲಿ ತಾವು ಮೂಲತಃ ಪಾತ್ರರಲ್ಲೆಂದೂ ತಿಳಿದುಕೊಂಡು ತಾವೊಬ್ಬರು ಸಾಮಾನ್ಯ ಕಾರ್ಮಿಕರೆಂದು ಅರ್ಥಮಾಡಿಕೊಂಡಿದ್ದರು.—ಮಾನವನ ದುರ್ಭಾವನೆಗೆ, ದುರ್ಜಡತೆಗೆ, ದುಷ್ಟಚಾರಿತ್ರ್ಯಕ್ಕೆ ಸಮಾಜವು ಕಾರಣವಾದರೆ, ಅವನ ಒಳ್ಳೆತನಕ್ಕೆ, ಪುಣ್ಯದ ಕೆಲಸಗಳಿಗೆ, ಧರ್ಮಕಾರ್ಯಗಳಿಗೆ ಅವನ ಸ್ವಭಾವವು ಕಾರಣವಾಗಿರುವದು. ಮಾನವನು ಸ್ವಭಾವತಃ ದುಷ್ಟನಲ್ಲ. ಕ್ರೂರಿಯಲ್ಲ. ಅವನು ಒಳ್ಳೆಯದನ್ನೇ ಮಾಡಬಯಸುವ. ಮಾಡುವ. ಮಾಡುವ ಆತುರದಲ್ಲಿರುವ. ಕೆಟ್ಟದ್ದನ್ನು ಮಾಡಲು ಸಮಾಜವು ಪ್ರೇರಕವಾಗಿ ನಿಲ್ಲುವದು. ಆ ಕೆಟ್ಟ ಸಮಾಜದ ಸೇಡಿಗೆ ಕೆಟ್ಟವನಾಗುವನು. ಗೆಲುವಿನ ಉಬ್ಬಿನಲ್ಲಿ ಇನ್ನೂ ಕೆಟ್ಟವನಾಗುವನು. ಮುಂದೆ ದೈವವು ಕಣ್ಣು ತೆರೆದು ನೋಡಿದರೆ ಆ ಪಾಪರಾಶಿ ಬೂದಿಯುಳಿಯದಂತೆ ಸುಟ್ಟುಹೋಗುವದು. ಏಕೆಂದರೆ ಮಾನವನು ಮಾನವತೆಯನ್ನು ಬಿಟ್ಟು ಕೆಳಗೆ ಇಳಿಯಲಾರನು.—

ಇವು ಆನಂದರಾಯರು ತಾವು ನಿತ್ಯ ಪಾರಾಯಣ ಮಾಡುವ ಭಗವದ್‌ಗೀತೆಯ ಆರಂಭದ ರಕ್ಷಾಪತ್ರದ ಮೇಲೆ ಬರೆದುಕೊಂಡ ಬೀಜ ಮಂತ್ರ. ಭಗವದ್‌ಗೀತೆಯನ್ನು ಓದಬೇಕೆಂದು ಹೊರಟ ಆನಂದರಾಯರು ಮೊದಲು ಈ ಮಾತುಗಳನ್ನು ಓದಿ ಮನಸನ್ನು ಪ್ರಸನ್ನೀಕರಿಸಿಕೊಂಡು ಭಗವದ್ ಭಾವನೆಯ ತನ್ಮಯತೆಯನ್ನು ಪಡೆದು 'ಧರ್ಮಕ್ಷೇತ್ರೇ ಕುರುಕ್ಷೇತ್ರೇ'ದಿಂದ ಸಾಗುತ್ತಿದ್ದರು. ಒಮ್ಮೊಮ್ಮೆ ಕೆಲಸದ ಒತ್ತಡದ ಕರೆ ಬರಲು ಇದಿಷ್ಟನ್ನೇ ಓದಿ ಪುಸ್ತಕವನ್ನು ಕಟ್ಟಿ ಮಂಗಳಾರತಿ ಮಾಡುತ್ತಿದ್ದರು.

ಸ್ವಾಮಿಗಳ ಈ ಪ್ರಭಾವಮುದ್ರೆಯಿಂದ ಉತ್ತೇಜನಗೊಂಡ ಆನಂದರಾಯರು ಸ್ವಾಮಿಗಳು ಬೆಳಗಾವಿಗೆ ಹೋಗುವ ಮುಂದೆ ಅವರನ್ನು ತಮ್ಮಲ್ಲಿ ಇಳಿಸಿಕೊಂಡು ಪಾದಸೇವೆಯನ್ನು ಮಾಡಿ ಬೀಳ್ಕೊಟ್ಟು ಕಳಿಸಿದರು. ಸ್ವಾಮಿಗಳಿಗೂ ಇವರ ಈ ಧಾರಾಳ ಸ್ವಭಾವವನ್ನು ಕಂಡು ಆಶ್ಚರ್ಯವಾಯಿತು. ಒಬ್ಬಿಬ್ಬ ಕಿಡಿಗೇಡಿಗಳು ಸ್ವಾಮಿಗಳ ಕಿವಿಯಲ್ಲಿ ಆನಂದರಾಯರ ಬಗ್ಗೆ ಹುಳಿ ಹಿಂಡಿದರು. ಆದರೆ ಸ್ವಾಮಿಗಳು ನಂಬಲಿಲ್ಲ. ಏಕೆಂದರೆ ಅವರು ತಮ್ಮನ್ನು ಆಗ್ರಹದಿಂದ ಕರೆದುದು, ಎಲ್ಲೆ ಮೀರಿ ಸನ್ಮಾನಿಸಿದುದು ಸಜ್ಜನರ ರೀತಿಯೆಂದೇ ತಿಳಿದರು. ಅಹುದು. ಅವರು ನಿಜವಾಗಿ ಸಜ್ಜನರು. ಅಷ್ಟೇ ಅಲ್ಲ, ಆದರ್ಶ ಸಜ್ಜನರು, ಸನ್ಮಾನ್ಯ ಗೃಹಸ್ಥರು.

ಸ್ವಾಮಿಗಳು ಆನಂದರಾಯರಿಂದ ಬೀಳ್ಕೊಂಡು ಬೆಳಗಾವಿಗೆ ಹೊರಟರು. ಅವರ ಪರಿವಾರವು ಮುಂದೆ ಹೋಗಿದ್ದಿತು. ಹಿಂದೆ ಉಳಿದವರು ಸ್ವಾಮಿಗಳು, ದಿವಾನರು, ಮಠದ ೩-೪ ಜನ ಪ್ರತಿಷ್ಠಿತರು ಅಲ್ಲದೆ ಬೆಳಗಾವಿಯಿಂದ ಬಂದ ೪-೫ ಜನ ಅಭ್ಯಾಗತರು. ಮೋಟರು ಸುತಗಟ್ಟಿಯ ಸೀಮೆಯನ್ನು ದಾಟಿ ಮೆಲ್ಲಗೆ ಸಾಗಿದ್ದಿತು. ಆಗ ಮಳೆಗಾಲವಿರಲಿಲ್ಲ. ಸುಖಕರವಾದ ತಂಗಾಳಿಯು ಬೀಸುತ್ತಿದ್ದಿತು. ಗುಡ್ಡದ ಓರೆಯಿಂದ ದಾರಿಯು ನಾಗರಹಾವಿನಂತೆ ಉದ್ದವಾಗಿ ಮಲಗಿದ್ದಿತು. ಎಡಬಲದಲ್ಲಿಯ ಗಿಡಗಳು ಗಾಳಿಗೆ ಮೈಯೊಡ್ಡಿ ಬಗ್ಗಿ ಬಳುಕಿ ಕೈಟೊಂಗೆಗಳಿಂದ ಗಾಳಿಯ ವೇಗವನ್ನು ತಡೆಯುತ್ತ ಸೋಸಿ, ತಿಳಿಗೈದು ಮುಂದೆ ಸಾಗಿಸುತ್ತಿದ್ದವು. ಹಕ್ಕಿಗಳು ಟೊಂಗೆಗಳನ್ನು ಆಶ್ರಯಿಸಿ, ಗಾಳಿಯ ಭರಕ್ಕೆ ಅಂಜಿ ಮರೆಯಾಗಿ, ಮೌನವಾಗಿ ಕುಳಿತಿದ್ದವು. ಗಾಳಿಯಲ್ಲಿ ಇನ್ನೂ ತಂಪು ಹೆಚ್ಚಾಯಿತು. ಈಶಾನ್ಯದಿಕ್ಕಿನಲ್ಲಿಯ ಒಂದು ಕರಿ ಮೋಡವು ಮೇಲೆದ್ದು ಮುಗಿಲಿನ ಮಧ್ಯಕ್ಕೆ ಬಂದಿತು. ಗಾಳಿಯ ಬಿಲ್ಲಿಗೆ ಹಿಂಜಿ ತಿಳಿಯಾಗಿ ಮುಗಿಲನ್ನು ತುಂಬಿಬಿಟ್ಟಿತು. ಸೂರ್ಯನ ಕಿರಣ, ಅವನ ಕಾವು ಅಡಗಿತು. ಮುಗಿಲಿನ ನೆರಳಿನಂತೆ ತಿಳಿಗತ್ತಲೆಯು ನೆಲಕ್ಕೆ ಅಂಟಿಕೊಂಡಿತು. ರೊಯ್, ಎಂಬ ಗಾಳಿಯ ಸಂಗಡ ಹನಿಯುದಿರಹತ್ತಿದವು. ಜಿನುಗು ಹನಿಯ ಬೆನ್ನಿಗೆ ಹೊಂದಿಕೊಂಡು ದೊಡ್ಡ ಹನಿಗಳು ಉದಿರಹತ್ತಿದವು. ಮಳೆಯು ಹೆಚ್ಚಾಯಿತು. ಇನ್ನೂ ಹೆಚ್ಚಾಯಿತು. ಭೋರಿಟ್ಟು ಸುರಿಯಹತ್ತಿತು. ಸ್ವಾಮಿಗಳ ಸವಾರಿ ಇಷ್ಟರಲ್ಲಿ ಸುತಗಟ್ಟಿಯ ಡಾಕಬಂಗಲೆಯ ವರೆಗೆ ಬಂದಿದ್ದಿತು. ಅವರ ಸಂಗಡಿಗರು ಒಂದಿಷ್ಟು ನಿಲ್ಲುವದು ಒಳಿತೆಂದು ಸೂರೆಳೆದರು. ಎಲ್ಲರೂ ಅನುಮೋದಿಸಿದರು. ಮೋಟರು ಬಂಗಲೆಯನ್ನು ತಲುಪಿತು. ಇಳಿದು ಒಂದು ದೊಡ್ಡ ಕೋಣೆಯನ್ನು ಹಿಡಿದರು. ಹೊರಗೆ ಮಳೆಯು ಒಂದೇ ಸವನೆ ಕೀಸರಿಟ್ಟು ಸುರಿಯುತ್ತಿದ್ದಿತು. ಬಂಗಲೆಯ ಕಾವಲುಗಾರನು—ಸಮೀಪದಲ್ಲಿ ಇಂಥ ಮಳೆಯನ್ನೇ ಕಾಣೆನು—ಎಂದು ನುಡಿಯುತ್ತ ಅವರಿಗೆ ಎಲ್ಲ ಅನುಕೂಲತೆಯನ್ನು ಮಾಡಿಕೊಟ್ಟನು. ಸ್ವಾಮಿಗಳು, ಪರಿವಾರವು ಹಾಯಾಗಿ ಕುಳಿತು ಉಸಿರೆಳೆಯಹತ್ತಿದವು. ಅಷ್ಟರಲ್ಲಿ ಇನ್ನೊಂದು ಮೋಟರು ಬಂದಿತು. ಅವರೆಲ್ಲರು ಪೋಲೀಸಜಾತಿಯವರು. ಸ್ವಾಮಿಗಳು ಇರುವರೆಂದು ಪೋಲೀಸ ಅಧಿಕಾರಿಗೆ ತಿಳಿಯಿತು. ಅವರೂ ಸಂತೋಷಗೊಂಡು ತೊಯಿದ ತಮ್ಮ ಅರಿವೆಗಳನ್ನು ಬದಲಿಸಿ ಸ್ವಾಮಿಗಳ ಹತ್ತರ ಬಂದು ನಮಸ್ಕರಿಸಿದರು. ಸ್ವಾಮಿಗಳು ಸ್ವಾಗತಿಸಿದರು. ಎಲ್ಲರೂ ಬೆಚ್ಚಗೆ ಕುಳಿತರು. ಮಾತಿಗೆ ಆರಂಭವಾಯಿತು.

ಒಬ್ಬರು ಧರ್ಮರಕ್ಷಕರು.

ಇನ್ನೊಬ್ಬರು ಸಮಾಜರಕ್ಷಕರು.

ಮಾತಿನ ಮುನ್ನಡೆಯ ಆಶ್ರಯದಾತರಾದ ಪೋಲೀಸ ಅಧಿಕಾರಿಯೇ ಮಾತಿಗೆ ಆರಂಭಿಸಿದನು.

—ತಮ್ಮ ಪರಿವಾರವೆಲ್ಲವನ್ನು ಬೆಳಗಾವಿಯ ಸಮೀಪದಲ್ಲಿ ಕಂಡೆವು.

—ಅಹುದು. ಸ್ವಾಮಿಗಳು ಉತ್ತರಿಸಿದರು.

—ನೀವು ಇಲ್ಲೆ ?

—ನಾವೂ ಬೆಳಗಾವಿಗೆ ಹೊರಟಿದ್ದೆವು. ಮಳೆಗೆ ಸಿಕ್ಕೆವು. ಇಲ್ಲಿ ಉಳಿಯಬೇಕಾಯಿತು.

—ಗೋಕಾವಿಯಿಂದ ಬಂದಿರಾ?

—ಇಲ್ಲ ಸುತಗಟ್ಟಿಯಿಂದ.

—ಸುತಗಟ್ಟಿಯೇ? ಕುತೂಹಲದಿಂದ ಕೇಳಿದನು.

—ಅಹುದು.

—ಅಲ್ಲಿ ಯಾವ ಪುಣ್ಯಾತ್ಮನು ನಿಮಗೆ ಭಕ್ತನಾಗಿ ದೊರಕಿದ ?

—ನೀವು ಹೀಗೆ ಪ್ರಶ್ನವನ್ನು ಕೇಳುವಂತೆಯೇ ಒಬ್ಬ ಪುಣ್ಯಾತ್ಮನು ದೊರಕಿದನು.

—ಯಾರವರು ?

—ಆನಂದರಾಯರು.

—ಆನಂದರಾಯರೇ ? ಕಣ್ಣರಳಿಸಿ ಪೋಲೀಸ ಅಧಿಕಾರಿ ಕೇಳಿದನು.

—ಅಹುದು. ಆನಂದರಾಯ ಕುಲಕರ್ಣಿಯವರು. ಏಕೆ ?

ಪೋಲೀಸ ಅಧಿಕಾರಿಯು ಮಾತಾಡಲಿಲ್ಲ. ಮುಖದ ಮೇಲೆ ಆಶ್ಚರ್ಯ, ಆತುರ, ಕುತೂಹಲಗಳನ್ನು ತೋರಿಸುತ್ತ ಸ್ವಾಮಿಗಳನ್ನು ನೋಡಹತ್ತಿದನು. ಅಧಿಕಾರಿಯ ಈ ಮುಖಲಕ್ಷಣದ ಅರ್ಥವು ಸ್ವಾಮಿಗಳಿಗೆ ತಿಳಿಯಲು ತಡವಾಗಲಿಲ್ಲ. ಒಂದೆರಡು ಮಿನಿಟಿನ ಮಾತಿನ ಆವೇಶದಲ್ಲಿ ಎಲ್ಲವನ್ನು ಹೇಳಿದರು.

—ನಾವು ಗೋಕಾವಿಯಲ್ಲಿ ವಾಸಮಾಡಿದಾಗ ಆನಂದರಾಯರು ಅನೇಕ ಸಾರೆ ಬಂದಿದ್ದರು. ಪರಿಚಯ ಮಾಡಿಕೊಂಡರು. ದೇವರ ಪ್ರಸಾದಕ್ಕೆ ಆಮಂತ್ರಿಸಿದೆವು. ಮತ್ತು ನಮ್ಮ ಪ್ರವಚನದ ಪ್ರಸಂಗದಲ್ಲಿ ಉಪಸ್ಥಿತರಾಗಿರುತ್ತಿದ್ದರು. ನಡುನಡುವೆ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಆ ಪ್ರಶ್ನೆಗಳಿಂದ ಅವರ ಯೋಗ್ಯತೆಯನ್ನು ಸುಲಭವಾಗಿ ಅರಿಯಬಹುದು. ಗೀತೆ, ಉಪನಿಷತ್ತು, ಭಾಗವತ, ರಾಮಾಯಣ, ಮಹಾಭಾರತ ಮುಖೋದ್ಗತ. ಶಾಸ್ತ್ರ, ತರ್ಕ, ಮುಂತಾದ ಧಾರ್ಮಿಕಭಾವದಲ್ಲಿಯೂ ನಿಷ್ಣಾತರು. ನಮ್ಮನ್ನು ಸುತಗಟ್ಟಿಗೆ ಸ್ವಯಂಪ್ರೇರಣೆಯಿಂದ ಆಮಂತ್ರಿಸಿದರು. ನಾವು ಅವರ ಸರಳ ಸ್ವಭಾವ, ದೇವ-ಧರ್ಮದ ಮೇಲಿನ ಭಕ್ತಿ-ಶ್ರದ್ಧೆ, ಧಾರಾಳವಾದ ಮನಸು, ಆಚಾರ ವಿಚಾರದಲ್ಲಿ ನಮಗೆ ಸಮ್ಮತವಾದ ನಡೆ ಮುಂತಾದವುಗಳನ್ನು ಕಂಡು ಒಂದು ಬಗೆಯ ಆತ್ಮೀಯ ಭಾವನೆಯು ಕೆರಳಿತು. ಒಪ್ಪಿದೆವು. ನಿನ್ನೆ ಇಳಿದುಕೊಂಡೆವು. ಇಂದು ಅವರಲ್ಲಿಯೇ ಪೂಜೆ-ಪುರಸ್ಕಾರಗಳಾದವು. ತಮ್ಮ ತೋಟದಿಂದ ಬುಟ್ಟಿತುಂಬ ತುಳಸಿ, ಹೂ, ಹಣ್ಣು, ಕಾಯಿ ತರಿಸಿದರು. ಪಂಚಾಮೃತ ಅಭಿಷೇಕ ಮಾಡಿಸಿದರು. ಮೇಲೆ ಅಡಿಗೆಯಲ್ಲಿ ಪಕ್ವಾನ್ನದ ವ್ಯವಸ್ಥೆ ಮಾಡಿಸಿದರು. ಸುಮಾರು ಐನೂರು ರೂಪಾಯಿ ಖರ್ಚು ತಗಲಿರಬೇಕು. ನಮಗೂ ಯೋಗ್ಯ ಸನ್ಮಾನ ಮಾಡಿ ಕಳಿಸಿರುವರು. ಇಷ್ಟೊಂದು ಸಂತುಷ್ಟಿಯನ್ನು ಪಡೆದ ದೇವರು ಮತ್ತು ನಾವು ಅವರನ್ನು ಬಾಯಿತುಂಬ ವರ್ಣಿಸದೆ ಇರಬಹುದೇ ! . . . .

ಪೋಲೀಸ ಅಧಿಕಾರಿಯು ಬಾಯಿಬಿಚ್ಚಿ, ಕಣ್ಣು ಅರಳಿಸಿ ಇದೆಲ್ಲವನ್ನು ಕೇಳುತ್ತಿದ್ದನು. ದಿವಾನರು, ಉಳಿದವರು ಸೈಗುಟ್ಟುವಂತೆ ತಲೆಯನ್ನು ಅಲುಗಾಡಿಸುತ್ತಿದ್ದರು. ಸ್ವಾಮಿಗಳೇ ಮುಂದುವರಿದು—ಇಂದಿನ ಜನರಲ್ಲಿ ಧರ್ಮಭಾವನೆಯು ಕಡಿಮೆ. ಇದು ನಮ್ಮ ಪ್ರವಾಸದಲ್ಲಿ ಬಂದ ಅನುಭವ. ಇಂಥವರು ಸಿಕ್ಕುವದು ವಿರಳ. ಆನಂದರಾಯರು ಮಹಾದೇವಭಕ್ತರು, ಧರ್ಮಭೀರುಗಳು, ಸಜ್ಜನರು. ಧರ್ಮವು ಒಂದು ಕಾಲಮೇಲಾದರೂ ಇನ್ನೂ ನಿಂತುಕೊಂಡಿರಲು ಇಂತಹ ಸನ್ಮಾನ್ಯರೇ ಕಾರಣರೆಂದು ನನ್ನ ನಂಬಿಗೆ. —ಎಂದು ಮುಗಿಸಿ ತಮ್ಮ ಶಾಟಿಯಿಂದ ಮುಖವನ್ನು ಒರೆಸಿಕೊಂಡರು.

ಹೊರಗೆ ಮಳೆಯೂ ಗಾಳಿಯೂ ತಮ್ಮ ಶಕ್ತಿಯನ್ನು ಇನ್ನೂ ಪ್ರದರ್ಶಿಸುತ್ತಿದ್ದವು.

ಪೋಲೀಸ ಅಧಿಕಾರಿಯು ತೆರೆದ ಬಾಯನ್ನು ಮುಚ್ಚಿಕೊಂಡು, ಕಣ್ಣು ಪಿಳಿಕಿಸುತ್ತ ಒಂದೆರಡು ದೀರ್ಘ ಶ್ವಾಸವನ್ನು ಎಳೆದನು. ಆದರೆ ಅವನ ಹೃದಯದಲ್ಲಿದ್ದ ದ್ವಂದ್ವಭಾವನೆಗಳ ತುಮುಲ ಯುದ್ಧವನ್ನು ಮುಖದ ಮೇಲಿನ ಅಡ್ಡ-ಉದ್ದ ಗೆರೆಗಳಿಂದ ಸುಲಭವಾಗಿ ಗುರುತಿಸಬಹುದಿದ್ದಿತು.

ಡಾಕ ಬಂಗಲೆಯಲ್ಲಿಯ ಮೌನವನ್ನು ಕೀಸರಿಟ್ಟ ಮಳೆ ಗಾಳಿಯು ಭಂಗಿಸುತ್ತಿದ್ದವು.

—ಏಕೆ, ನನ್ನ ಅಭಿಪ್ರಾಯವು ತಪ್ಪಾದುದೇ ? ಸ್ವಾಮಿಗಳು ಕೇಳಿದರು.

—ಅದು ಹೇಗೆ ಹೇಳಲಿ? ತಮ್ಮ ಮಾತಿನಿಂದ ಆನಂದರಾಯರು ಸಜ್ಜನರೆಂದೇ ನುಡಿಯಬೇಕು. ಎಂದು ಉತ್ತರಿಸುವಷ್ಟರಲ್ಲಿ ಹೊರಗೆ ಯಾರೋ ಕೂಗಿದಂತಾಯಿತು. ಎಲ್ಲರು ಬಾಗಿಲ ಕಡೆಗೆ ನೋಡಿದರು. ಆನಂದರಾಯರು ಬಂದಿದ್ದರು. ಸಂಗಡ ನಾಲ್ಕಾರು ಜನರಿದ್ದರು. ಒಳಗೆ ಬರುತ್ತ "ತಾವು ಮಳೆಯಲ್ಲಿ ಸಿಕ್ಕಿರೆಂದು ತಿಳಿದು ಬಂದಿತು." ಸ್ವಾಮಿಗಳಿಗೆ ನಮ್ರತೆಯಿಂದ ನುಡಿದರು.

—ಬರ್ರಿ ಆನಂದರಾಯರೇ, ಒಳಗೆ ಬನ್ನಿರಿ, ಎಂದು ಕರೆಯುತ್ತ— ನಿಮಗೆ ಹೇಗೆ ತಿಳಿಯಿತು? ಸ್ವಾಮಿಗಳು ಆಶ್ಚರ್ಯೋದ್ಗಾರವನ್ನು ತೆಗೆದರು.

—ಇದು ನನಗೆ ತಿಳಿಯದೇ! ಒಂದು ಕಡೆಗೆ ಕುಳಿತುಕೊಂಡು— ನೀವು ಊರು ಮುಟ್ಟಲಿಲ್ಲವೆಂದೂ ಮಳೆಗೆ ಸಿಕ್ಕಿರೆಂದೂ ಇಲ್ಲಿ ಇಳಿದಿರುವಿರೆಂದೂ ನನಗೆ ಸಂಪೂರ್ಣ ತಿಳಿಯಿತು- ಆದಕ್ಕೇ ಧಾವಿಸಿ ಬಂದೆ. ಸೌಜನ್ಯದಿಂದ ನುಡಿದರು.

—ಇಂಥ ಮಳೆಯಲ್ಲಿ ಅದೇಕೆ ಬಂದಿರಿ? ಸ್ವಾಮಿಗಳೆಂದರು.

—ಸ್ವಾಮಿಗಳೇ, ನೀವು ದೇವರ ಪ್ರತಿನಿಧಿಗಳು. ಧರ್ಮಬೋಧೆಯಿಂದ ಅವನ ಅಸ್ತಿತ್ವವನ್ನು ಸಾರುವ ಭಕ್ತರು.

—ಎಂಥ ಮಾತು ! ಸ್ವಾಮಿಗಳು ತಲೆಯನ್ನು ಕೊಡಹಿದರು.

—ವ್ಯಾವಹಾರಿಕ ಪ್ರಪಂಚದಲ್ಲಿ ನಮ್ಮಂಥವರಿಗೆ ಧರ್ಮ ಒಂದು ಗೂಢ ವಿಷಯ. ನಿಮ್ಮ ಸಹವಾಸದಲ್ಲಿ ಧರ್ಮದ ತಿರುಳನ್ನು ಸಂಪೂರ್ಣ ಅರಿಯುವ ಸೂಕ್ಷ್ಮಜ್ಞಾನ ನಮ್ಮಲ್ಲಿ ಇಲ್ಲದಿದ್ದರೂ ಧರ್ಮವೆಂಬುವದು ಇದೆ ಎಂಬ ಶಬ್ದರೂಪವನ್ನಾದರೂ ಕೇಳುವೆವು. ನಮ್ಮಲ್ಲಿಯ ಈ ಲೋಪದೋಷವೇ ನಿಮ್ಮ ಕಡೆಗೆ ಧಾವಿಸುವದು. ಗೌರವಿಸುವದು. ಪೂಜಿಸುವದು. ಸನ್ಮಾನಿಸುವದು. ಅಂದ ಮೇಲೆ ನಿಮ್ಮನ್ನು ರಕ್ಷಿಸುವದು, ನಿಮ್ಮ ಯೋಗಕ್ಷೇಮವನ್ನು ವಿಚಾರಿಸುವದು ನಮ್ಮ ಕರ್ತವ್ಯವಲ್ಲವೇ !...

ಸ್ವಾಮಿಗಳೂ ಆ ಪೋಲೀಸ ಅಧಿಕಾರಿಯೂ ಅವರ ವಾಕ್‌ಧಾರೆಗೆ ವಿಸ್ಮಯಗೊಂಡರು. ಕುತೂಹಲದಿಂದ ಅವರನ್ನು ನೋಡುವ ವಿನಾ ಬೇರಾವದನ್ನು ಮಾಡುವ ಸಾಹಸವನ್ನೇ ಮಾಡಲಿಲ್ಲ. ಆನಂದರಾಯರೇ ಮಾತು ಮುಗಿಸುವಂತೆ-ಅಲ್ಲದೆ ಇದು ಸುರಕ್ಷಿತವಾದ ಸ್ಥಳವಲ್ಲ. ನಿಮ್ಮಂತಹ ಸಾತ್ವಿಕ ಸಂನ್ಯಾಸಿಗಳನ್ನು ಸಹ ಹರಿದುಕೊಂಡು ತಿನ್ನುವ ಸಮಾಜಕಂಟಕರು ಈ ಕಡೆಗೆ ಕಡಿಮೆಯಿಲ್ಲ. ಅದಕ್ಕೆ ಬಂದಿರುವೆ. ನೀವು ಸುಖವಾಗಿರುವದನ್ನು ಕಂಡೆ ಎಂದು ಆನಂದವನ್ನು ವ್ಯಕ್ತಮಾಡಿದರು.

—ಆನಂದರಾಯರೇ, ನಮಗೆ ಇನ್ನು ಹೆದರಿಕೆ ಇಲ್ಲ. ಈಗ ನಾವು ಈ ಪೋಲೀಸರ ಸ್ನೇಹದಲ್ಲಿರುವೆವು ಎಂದು ಸ್ವಾಮಿಗಳು ಮುಗುಳುನಗೆ ನಕ್ಕರು.

ಆನಂದರಾಯರು ವಿಸ್ಮಯದಿಂದ ಒಂದು ಕ್ಷಣ ಹೊತ್ತು ಪೋಲೀಸ ಅಧಿಕಾರಿಯನ್ನು ನೋಡಿ —ಬಹಳ ಸಂತೋಷ. ಶ್ರೀರಾಮಚಂದ್ರನೇ ಇವರನ್ನು ಇಲ್ಲಿಗೆ ಕಳಿಸಿರಬೇಕು. ನಿಮಗೂ ಭಯವಿಲ್ಲ. ನನಗೂ ಹೆದರಿಕೆಯಿಲ್ಲ. ನನ್ನ ಕೆಲಸವನ್ನು ಭಗವಂತನೇ ಪಾರುಗಾಣಿಸಿದನು. ಅಗಲಿ. ಇದನ್ನಷ್ಟು ತೆಗೆದುಕೊಂಡು ಸುಖದಿಂದ ರಾತ್ರಿಯನ್ನು ಕಳೆಯಿರಿ ಎಂದು ಜತೆಗೆ ತಂದ ಹಣ್ಣು ಖಜ್ಜೂರ, ಸಕ್ಕರೆಯನ್ನು ಅವರ ಮುಂದಿಟ್ಟರು.

—ಇದೇನು ? ಸ್ವಾಮಿಗಳು ಕೇಳಿದರು.

—ಒಂದಿಷ್ಟು ಫಲಾಹಾರ. ಮಧ್ಯಾಹ್ನ ಊಟ ಮಾಡಿರುವಿರಿ. ಈಗ ಈ ಪರಿವಾರ ಹಸಿದಿರಬೇಕು. ಇವರು ಉಪವಾಸವಿದ್ದು ನಾನೊಬ್ಬನೇ ಊಟ ಮಾಡಬೇಕೇ ? ಕೇವಲ ಹಣ್ಣು ತಂದಿರುವೆ. ನೀವು ಸ್ವೀಕರಿಸಿದರೆ ನನ್ನ ಮನೆಯು ಬಳಗ ಉಂಡ ಸಂತೋಷ ನನಗಾಗುವದು. ಎಂದು ಮೆಲ್ಲಗೆ ನುಡಿದರು.

—ಆನಂದರಾಯರೇ, ನಿಮ್ಮ ಸೌಜನ್ಯ ಹೊಗಳುವಂತಹದು.

—ಏನೋ ಅಲ್ಪ ಸೇವೆ. ವ್ಯಾವಹಾರಿಕರಾದ ನಾವು ಇಂಥ ಸೇವೆಯಿಂದ ಈ ಜನ್ಮದ ಮತ್ತು ಹೋದ ಜನ್ಮದ ಪಾಪಗಳನ್ನು ತೊಳೆದುಕೊಳ್ಳಲು ಅನುಕೂಲ ಮಾಡಿಕೊಳ್ಳುವೆವು. ಸ್ವೀಕರಿಸಬೇಕು. ಸವಿನಯದಿಂದ ನುಡಿದರು.

ಸ್ವಾಮಿಗಳು ಸಂತುಷ್ಟರಾಗಿ— ಸ್ವೀಕರಿಸಿದೆವು ಆಯಿತೇ ?

—ನನಗೆ ಆತ್ಮಾನಂದವಾಯಿತು. ಪೋಲೀಸ ಅಧಿಕಾರಿಗಳಿರುವರೆಂದು ತಿಳಿದಿದ್ದರೆ ಇನ್ನಷ್ಟು....

—ಓ ! ಇಷ್ಟು ಫಲಾಹಾರದಲ್ಲಿ ಒಂದು ಸಮಾರಾಧನೆಯನ್ನು ಮಾಡಬಹುದು. ನಾವು ಇವರನ್ನು ಬಿಟ್ಟು ತಿನ್ನುವದುಂಟೇ ? ನಕ್ಕರು.

—ಇನ್ನೂ ಸಂತೋಷ. ಇನ್ನು ನಾನು ಹೋಗುವೆ. ನಮಸ್ಕರಿಸಿದರು.

—ಹೊರಗೆ ಮಳೆಯು ಸುರಿಯುತ್ತಿದೆ. ತಾಸೆರಡು ತಾಸು ನಿಲ್ಲಿರಿ.

—ಅವಸರವಿದೆ. ನಾನು ಹೋಗಲೇಬೇಕು.

—ಇದು ಹೆದರಿಕೆಯ ಸ್ಥಳವೆನ್ನುವಿರಿ. ಮೇಲೆ ಕಗ್ಗತ್ತಲೆಯ ಗುಡ್ಡದ ದಾರಿ...

—ನಿಮ್ಮ ಕೃಪಾದೃಷ್ಟಿಯ ಮುಂದೆ ನನಗೆ ಯಾವ ಹೆದರಿಕೆಯಿಲ್ಲ. ಕತ್ತಲೆಯು ಏನು ಮಾಡೀತು ? ದಾರಿಯಲ್ಲಿ ಯಾರೇನು ಮಾಡಬಹುದು.

ಸ್ವಾಮಿಗಳು ಅವನ ಧೈರ್ಯದ ಮಾತಿಗೆ ಬೆರಗಾದರು.

—ಪೋಲೀಸ ಅಧಿಕಾರಿಗಳೇ, ಸ್ವಾಮಿಗಳ ರಕ್ಷಣೆಯ ಹೊರೆ ನಿಮ್ಮದು. ಅವರನ್ನು ಬೆಳಗಿನಲ್ಲಿ ಸುರಕ್ಷಿತವಾಗಿ ಕಳಿಸಿ ಮುಂದಿನ ನಿಮ್ಮ ಕೆಲಸಕ್ಕೆ ಹೋಗಬೇಕು. ಹೀಗೆ ನಿಮ್ಮನ್ನು ಪ್ರಾರ್ಥಿಸುವೆ ಎಂದು ಕೈಮುಗಿದರು.

ಆನಂದರಾಯರ ನಯವಿನಯಗಳಿಂದ ಸಂತುಷ್ಟರಾದ ಪೋಲೀಸ ಅಧಿಕಾರಿಯು ಮುಗುಳು ನಗೆಯಿಂದ— ಆಗಲಿ ಎಂದನು.

—ಹಾಗಾದರೆ ನಾನು ಹೋಗುವೆ. ಕೈಜೋಡಿಸಿದರು.

—ನಿಮ್ಮಿಚ್ಛೆ.

—ನನಗೆ ಇನ್ನು ಭಯವಿಲ್ಲ. ಕೆಲಸ ಪೂರ್ತಿಯಾಯಿತು. ನಡೆಯಿರಿ ಎಂದು ಆ ಕತ್ತಲೆಯ ರಾತ್ರಿಯಲ್ಲಿ, ಮಳೆ ಸುರಿವ ಸಮಯದಲ್ಲಿ, ಅಂಜಿಕೆಯ ಸ್ಥಳದಿಂದ ಆನಂದರಾಯರು ಅದೃಶ್ಯರಾದರು.

ಈ ಆಗಂತುಕ, ಅನಿರೀಕ್ಷಿತ' ಆನಂದರಾಯರ ಆಗಮನದಿಂದ ಎಲ್ಲರು ಅಚ್ಚರಿಗೊಂಡು ಕಲ್ಲು ಕಂಬದಂತೆ ಮೌನವನ್ನು ಆಶ್ರಯಿಸಿದ್ದರು. ಕೆಲಹೊತ್ತು ಯಾರೂ ಮಾತಾಡಲಿಲ್ಲ. ಕೊನೆಗೆ ಸ್ವಾಮಿಗಳೇ ಬಾಯಿ ತೆರೆದು— ಪೋಲೀಸ ಅಧಿಕಾರಿಗಳೇ' ಇಂಥ ಸಜ್ಜನರು ಇಂದಿನ ಸಮಾಜದಲ್ಲಿ ವಿರಳರಲ್ಲವೇ ? ಎಂದು ಪ್ರಶ್ನಿಸಿದರು.

ಪೋಲೀಸ ಅಧಿಕಾರಿಯು ಯಾವದೋ ವಿಚಾರದಲ್ಲಿದ್ದನು. ಉತ್ತರವನ್ನು ಕೊಡದೆ ಸುಮ್ಮನೆ ಕುಳಿತನು. ಸ್ವಾಮಿಗಳು ಮತ್ತೆ ಕೇಳಿದರು.

—ಅಹುದು. ಇಷ್ಟೇ ಮಾತನ್ನು ಉದ್ದವಾಗಿ ನುಡಿದನು.

—ನೀವು ಯಾವುದೋ ವಿಚಾರದಲ್ಲಿರುವಿರಿ. ಕೇಳಬಹುದೇ ?

ಪೋಲೀಸ ಅಧಿಕಾರಿಯು ಅಹುದೆನ್ನಲು, ಅಲ್ಲವೆನ್ನಲು ಸಂಕೋಚಪಡಹತ್ತಿದನು. ವಿಷಯವು ಅಷ್ಟು ಜಟಿಲವಾಗಿದ್ದಿತು.

ಸ್ವಾಮಿಗಳಲ್ಲಿಯ ಒಬ್ಬರು ಹಣ್ಣು, ಖಜೂರ, ಸಕ್ಕರೆಯನ್ನು ಹಂಚಿದರು. ತಿಂದು ಎಲ್ಲರೂ ಸಂತುಷ್ಟರಾದರು. ಕೈ ಬಾಯಿ ತೊಳೆದುಕೊಂಡ ಮೇಲೆ ಪೋಲೀಸ ಅಧಿಕಾರಿಯು ಸ್ವಾಮಿಗಳ ಪ್ರಶ್ನೆಕ್ಕೆ ಉತ್ತರಿಸುವ ಹವಣಿಕೆಯಲ್ಲಿ ಕುಳಿತನು.

ಸ್ವಾಮಿಗಳು ಅವನನ್ನು ಪುನಃ ಪ್ರಶ್ನಸೂಚಕ ದೃಷ್ಟಿಯಿಂದ ನೋಡಿದರು. ಎಲ್ಲರಿಗೂ ಒಂದಿಲ್ಲೊಂದು ಬಗೆಯ ಮಾತು, ಹರಟೆ ಬೇಕಿದ್ದಿತು. ಮೌನದ ಮುಸುಕೂ ನಿದ್ದೆಯ ಹಂಬಲವೂ ಯಾರಿಗೂ ಇರಲಿಲ್ಲ. ಸ್ವಾಮಿಗಳ ಪ್ರಶ್ನವಂತೂ ಎಲ್ಲರ ತಲೆಯನ್ನು ಸೇರಿ ಉತ್ತರದ ಆತುರದಲ್ಲಿ ಕುಳ್ಳಿರಿಸಿದ್ದಿತು. ಕೆಲಹೊತ್ತಿನ ಮೇಲೆ ಪೋಲೀಸ ಅಧಿಕಾರಿಯು— ಹೇಳಬೇಕೆಂದು ನನಗೂ ಲವಲವಿಕೆ. ಹೇಳುವೆ. ಕೈ ಬಾಯಿ ಒರಸಿಕೊಳ್ಳುತ್ತ —ನಾನು ಪೋಲೀಸ ಅಧಿಕಾರಿ. ನಿಮಗೆ ಬೇರೆ ಹೇಳಬೇಕಿಲ್ಲ. ನನ್ನ ಖಾತೆಯು ಒಂದು ಅವಶ್ಯಕ ಕೆಲಸದ ಸಲುವಾಗಿ ಬಂದಿರುವೆ. ಈಗ ೨-೩ ದಿನಗಳ ಹಿಂದೆ ಬೆಳಗಾವಿಯಲ್ಲಿ ಒಬ್ಬ ವೇಶ್ಯೆಯ ಮನೆಯಲ್ಲಿ ಒಬ್ಬ ಸಾವುಕಾರನ ಕೊಲೆಯಾಯಿತು. ಕೊಲೆಯು ಗೂಢವಾದುದು. ವೇಶ್ಯೆಯ ಮನೆಯಲ್ಲಾದರೂ ವೇಶ್ಯೆಯು ಅರಿಯಳೆನ್ನುವಳು. ಸಾಮ ದಾನ ಭೇದ ದಂಡಕ್ಕೂ ಮಣಿಯಳು. ಕೊಲೆಯು ಹೊರಗೆ ಆಗಿ ಹೆಣ ಬಿದ್ದಿದೆಯೇ ? ಎಂಬ ಸಂಶಯಕ್ಕೂ ಎಡೆಯಿದೆ. ವಿಚಾರಾಂತ್ಯದಲ್ಲಿ ಈ ಕೊಲೆಗೆ ಆನಂದರಾಯರು ಕಾರಣರೆಂದು ನಮಗೆ ದಟ್ಟವಾಗಿ ಸಂಶಯವು ಬಂದಿದೆ. ಅದನ್ನು ಕೆದರುತ್ತ ಹೋದಂತೆ ನಮಗೆ ಮತ್ತೆ ಬೇರೆ ಸಂಗತಿಗಳು ತಿಳಿದುಬಂದವು. ಈಗ ತಿಂಗಳ ಹಿಂದೆ ಇದೇ ಗುಡ್ಡದ ಓರೆಯಲ್ಲಿ ಒಂದು ಮದುವೆಯ ದಿಬ್ಬಣದವರನ್ನು ಬಡಿದು ೨-೩ ನೂರು ತೊಲೆಯಷ್ಟು ಬಂಗಾರದ ಒಡವೆಗಳನ್ನು ದೋಚಿಕೊಂಡು ಹೋಗಿರುವರು. ಗೋಕಾಕದಲ್ಲಿ ಒಬ್ಬ ಸಾವುಕಾರನ ಮನೆಯು ದರೋಡೆಯಾಗಿದೆ. ಇವುಗಳ ತಳದಲ್ಲಿ ಆನಂದರಾಯರ ಕೈವಾಡವಿದೆಯೆಂದು ನಮಗೆ ವಾಸನೆ ಬಂದಿದೆ. ಆದಕ್ಕೆ ಅವರನ್ನು ಅನಿರೀಕ್ಷಿತವಾಗಿ ಒಮ್ಮೆಲೆ ಹಿಡಿದು, ಮನೆಯನ್ನು ಜಪ್ತಮಾಡಬೇಕೆಂದು ಬಂದಿರುವೆವು. ಮಳೆಯ ಅನಾಹುತದಿಂದ ಇಲ್ಲಿ ತಂಗಬೇಕಾಯಿತು? ಇಲ್ಲದಿದ್ದರೆ ರಾತ್ರಿಯ ಮೊದಲಜಾವದಲ್ಲಿ ಅವರು ನಮ್ಮ ಬಂದಿಗಳಾಗುತ್ತಿದ್ದರು.

—ಇವೆಲ್ಲಕ್ಕೆ ಆನಂದರಾಯರು ಕಾರಣರೆಂದು ನಿಮ್ಮ ಸಂಶಯವೇ ? ಸ್ವಾಮಿಗಳು ಚಕಿತರಾಗಿ ಕೇಳಿದರು.

—ನಮಗೆ ಹಾಗೆ ದಟ್ಟವಾಗಿ ತಿಳಿದು ಬಂದಿದೆ.

ಸ್ವಾಮಿಗಳು ಇನ್ನೂ ವಿಸ್ಮಯಬಟ್ಟರು. ಏನು ಮಾತಾಡಬೇಕು ಏನು ಕೇಳಬೇಕು ಎಂಬುದು ತಿಳಿಯದಾಯಿತು. ಅವರ ಭಾವನೆಯಲ್ಲಿ ಅವನೊಬ್ಬ ಸದ್ಭಕ್ತ, ಸಜ್ಜನ, ಸನ್ಮಾನ್ಯ. ಈ ಮಾತುಗಳಿಗೆ ತಮ್ಮಲ್ಲಿ ಸಂಪೂರ್ಣ ಪ್ರಮಾಣಗಳಿದ್ದವು. ಇಂಥವರನ್ನು ಪೋಲೀಸನ ಹೇಳಿಕೆಯ ಮೇರೆಗೆ ದುರ್ಜನ, ವಂಚಕ, ಮೋಸಗಾರನೆಂದರಿಯಬೇಕೆ? ಹೇಗೆ ನಂಬುವದು ? ವ್ಯವಹಾರದ ಆಳತೆಗೋಲಿಗೂ ಧರ್ಮದ ಮಾನದಂಡಕ್ಕೂ ಇಷ್ಟು ವ್ಯತ್ಯಾಸವೇ ? ಎಂದು ವಿಚಾರಿಸಿಕೊಂಡರು. ಆದರೂ ಅವರ ಮನಸು ಒಪ್ಪಲಿಲ್ಲ. ಇದೆಲ್ಲ ಸಂಶಯ. ಶುದ್ಧ ಸಂಶಯ. ಎಂಥ ಮನುಷ್ಯನ ಮೇಲೆ ಎಂಥ ಸಂಶಯ ! ಸಾಧ್ಯವಿಲ್ಲ. ಆನಂದರಾಯರು ಲೋಕೋತ್ತರ ಸಜ್ಜನರು ಎಂದೇ ದೃಢಪಡಿಸಿಕೊಂಡರು.

—ನೀವು ನಂಬುವಿರಾ ? ಬಹಳ ಹೊತ್ತಿನ ಮೇಲೆ ಸ್ವಾಮಿಗಳೆಂದರು.

ಪೋಲೀಸ ಅಧಿಕಾರಿಯು ಉತ್ತರವನ್ನು ಕೊಡಲಿಲ್ಲ.

—ಹಾಗಾದರೆ ನೀವು ಅವರನ್ನು ಇಲ್ಲಿಯೇ ಬಂಧಿಸಲಿಲ್ಲವೇಕೆ ?

—ಸ್ವಾಮಿಗಳೇ, ಹೇಗೆ ಬಂಧಿಸಲಿ? ಮೂಲತಃ ಅವರು ಅಪರಾಧಿಯೆಂದು ಸಂಶಯವೇಪ್ರಮಾಣ. ಮೇಲೆ ನಿಮ್ಮ ಸಾತ್ವಿಕ ಮತ್ತು ಪ್ರಮಾಣಯುಕ್ತವಾದ ಪ್ರಶಂಸೆ. ಕೊನೆಗೆ ಇಲ್ಲಿ ಕಂಡುದು ಅವರ ಉಪಕಾರ, ಆದರ, ನಿಮ್ಮ ಮೇಲಿನ ಪ್ರೇಮ, ದೇವ ಧರ್ಮದ ಮೇಲಿನ ಭಕ್ತಿ, ನಿಮ್ಮ ಸುರಕ್ಷತತೆಯ ತಳಮಳ. ಇಷ್ಟನ್ನು ನಾನು ಕಣ್ಣಾರೆ ಕಂಡು ಹಿಡಿಯಬಹುದೇ ? ಹಿಡಿದಿದ್ದರೆ ನೀವು ಏನೆನ್ನಬಹುದಿದ್ದಿತು ? ಪೋಲೀಸ ಅಧಿಕಾರಿಯು ನಿಜವಾಗಿ ಸಂಕಟದಲ್ಲಿ ಸಿಕ್ಕು ತಳಮಳಗೊಂಡು ನುಡಿದನು.

—ನಿಮ್ಮ ಸಂಶಯವು ಒಮ್ಮೊಮ್ಮೆ ಸುಳ್ಳು ಆಗುವದು ?

—ಆಗುವದು.

—ಮುಂದೆ ಏನು ಮಾಡುವಿರಿ ?

—ಏನು ಮಾಡುವದು ? ಅಪ್ಪಣೆಯ ಮೇರೆಗೆ ನಾಳೆ ನಾನು ಸುತಗಟ್ಟಿಗೆ ಹೋಗಲೇಬೇಕು. ಆನಂದರಾಯರನ್ನು ಕಾಣಲೇಬೇಕು.

—ಅವರನ್ನು ಬಂಧಿಸಲೇಬೇಕು.

—ಈ ಮಾತಿನಿಂದ ನನಗೂ ಸಂಕಟವೆನಿಸುವದು. ಪೋಲೀಸರಲ್ಲಿಯೂ ದಯೆ, ದಾಕ್ಷಿಣ್ಯ, ವ್ಯವಹಾರವಿರುವವು. ಮೇಲಿನ ಆಜ್ಞೆಯ ಭಾರವೂ ಇರುವದು. ಇಂತಹ ಮುಳ್ಳು ಹಾಸಿಗೆಯ ಮೇಲೆ ನಡೆದರೇ ನಮ್ಮ ಕರ್ತವ್ಯಸಿದ್ಧಿ.

—ಅವರು ನಿರುಪರಾಧಿಯೆಂದು ನನ್ನ ಸ್ಪಷ್ಟ ಅಭಿಪ್ರಾಯ.

—ನನಗೂ ಹಾಗೆನಿಸುವದು. ಆದರೆ ಅದನ್ನು ನಾನು ಬಾಯಿಂದ ಹೇಳುವದೆಂತು? ಅವರು ನಿರಪರಾಧಿಗಳೆಂದು ನನ್ನ ಮೇಲಿನವರು ನಿರ್ಣಯಿಸಬಹುದು. ಅದು ಅವರ ಅಧಿಕಾರ. ನಾಳೆ ನನಗೆ ದೇವರು ಹೇಗೆ ಪ್ರೇರಣೆಯನ್ನು ಮಾಡುವನೋ ಹಾಗೆ ನಡೆಯುವೆ. ಆದರೆ ಇಂದಿನ ಪ್ರಸಂಗ, ನಿಮ್ಮ ಪ್ರಶಂಸೆಯನ್ನು ಮರೆಯುವದಿಲ್ಲ.

ಬೆಳಗಾಯಿತು. ಸ್ವಾಮಿಗಳು ಪೋಲೀಸ ಅಧಿಕಾರಿಯಿಂದ ಬೀಳ್ಕೊಂಡು ಬೆಳಗಾವಿಯ ಹಾದಿಯನ್ನು ಹಿಡಿದರು. ಇತ್ತ ಇವರು ಸುತಗಟ್ಟಿಯನ್ನು ತಲುಪಿದರು.

ಊರಲ್ಲಿ ಪೋಲೀಸರು ಬಂದಿರುವರೆಂಬ ಸುದ್ದಿ ಕೂಡಲೆ ಹಬ್ಬಿತು. ಗೌಡರು ಅವರನ್ನು ಚಾವಡಿಯಲ್ಲಿ ಇಳಿಸಿ ಎಲ್ಲ ಅನುಕೂಲತೆಯನ್ನು ಮಾಡಿಕೊಟ್ಟರು.

ಪೋಲೀಸ ಅಧಿಕಾರಿಯ ಹೃದಯದಲ್ಲಿ ಒಂದು ಕಡೆಗೆ ಕರ್ತವ್ಯ, ಇನ್ನೊಂದು ಕಡೆಗೆ ದಯಾಧರ್ಮದ ಕೂಗು ಎದ್ದು ಹೊಸೆದಾಡುತ್ತಿದ್ದವು. ಈ ಇತ್ತಂಡದ ಉಗ್ರಭಾವನೆಯಿಂದ ದಿಙ್ಮೂಢನಾಗಿದ್ದನು. ಆದರೂ ಕರ್ತವ್ಯದ ಹೊರೆಯನ್ನು ಸಾಮಾನ್ಯರೂಪವಾಗಿಯೂ ಆನಂದರಾಯರ ಮೇಲಿನ ಕೊಲೆ, ದರವಡೆ, ಮೋಸ ಮುಂತಾದವುಗಳು ಪ್ರಕಟವಾಗದಂತೆಯೂ ನೆರವೇರಿಸಿಕೊಂಡು ಹೋಗಬೇಕೆಂದು ನಿರ್ಧರಿಸಿಕೊಂಡು — ಗೌಡರೇ, ಆನಂದರಾಯರನ್ನು ಒಂದಿಷ್ಟು ಕರೆದು ಬನ್ನಿರಿ, ಅಥವಾ ಮನೆಯಲ್ಲಿರುವರೇನು ನೋಡಿ ಬನ್ನಿರಿ ಎಂದು ಗೌಡರನ್ನು ಕಳಿಸಿದನು. ಮನಸು ನೂರಾರು ಬಿಸಿ, ಹಸಿ ಶಬ್ದಗಳನ್ನು ಮೆಲುಕಾಡಿಸುತ್ತ ಪ್ರಸಂಗದ ಆರಂಭ, ಕೊನೆಯನ್ನು ಹೊಂದಿಸುತ್ತಿದ್ದಿತು. ಈ ಉಭಯ ಸಂಕಟದಿಂದ ಪಾರಾಗುವ ದಾರಿಯೇ ಕಾಣದಂತಾಗಿದ್ದಿತು. ಮನಸು ನೊಂದುಕೊಂಡಿದ್ದಿತು.

ಗೌಡರು ತಿರುಗಿ ಬಂದು—ಅವರು ಊರಲ್ಲಿ ಇಲ್ಲ. ಎಂದರು.

—ಊರಲ್ಲಿ ಇಲ್ಲ! ಪೋಲೀಸ ಅಧಿಕಾರಿಯು ಹೌಹಾರಿ ಕೇಳಿದನು.

—ಇಲ್ಲವಂತೆ. ನಿರ್ವಿಕಾರದಿಂದ ಉತ್ತರಿಸಿದರು.

—ಯಾರು ಹೇಳಿದರು? ಕಣ್ಣು ಅರಳಿತು.

—ಅವರ ಮನೆಯವರು. ಸಾವಧಾನದಿಂದ ಹೇಳಿದರು.

—ಏನೆಂದರು? ಮಾತಿನಲ್ಲಿ ಕಾವೇರಿದ್ದಿತು.


—ಒಂದಿಷ್ಟು ಹೆಚ್ಚು ವಿಚಾರಿಸಲು "ಈ ಮನೆಯಲ್ಲಿ ಹಿರಿಯರೆಂಬುವವರು ಅವರೊಬ್ಬರೇ! ತನ್ನ ಹಿರಿತನದ ಹೊಣೆಯನ್ನು ಇನ್ನೊಬ್ಬರಿಗೆ ಒಪ್ಪಿಸಿಲ್ಲ. ಅದಕ್ಕೆ ಅವರು ಮನೆಯಿಂದ ಹೊರಡುವ ಮುಂದೆ ನೀವು ಎಲ್ಲಿಗೆ ಹೋಗುವಿರಿ? ಯಾವಾಗ ತಿರುಗಿ ಬರುವಿರಿ? ಎಂಬುದನ್ನು ಯಾರೂ ಕೇಳುವದಿಲ್ಲ. ಅವರು ಈಗ ಮನೆಯಲ್ಲಿ ಇಲ್ಲ. ಇಷ್ಟು ನಮಗೆ ಗೊತ್ತು. ಎಂದು ಖಡಾಖಡಿಯಾಗಿ ಅವರ ಹೆಂಡತಿಯು ಹೇಳಿದಳು.

ಪೋಲೀಸ ಅಧಿಕಾರಿಗೆ ಕುಳಿತ ನೆಲವು ನಡುಗಿದಂತೆನಿಸಿತು. ತಲೆಯ ಕಡೆಗೆ ಒತ್ತರದಿಂದ ಹರಿವ ಬಿಸಿ ರಕ್ತದ ಪ್ರಭಾವದಿಂದ ಕಣ್ಣು ಕೆಂಪೇರಹತ್ತಿದವು. ದೀರ್ಘ ಶ್ವಾಸದಿಂದ ಮೂಗು ಹಿಗ್ಗುತಗ್ಗಾಗಹತ್ತಿತು. ತೆರೆದ ಬಾಯ ತುಟಿಗಳು ಅದುರಹತ್ತಿದವು. ತಲೆಯ ಕೂದಲು ನಿಮಿರಿನಿಂತವು. ಕಿವಿಯ ಹಾಲೆಗಳು ಬಿಸಿಬಿಸಿಯಾದವು. ಅವರ ದಟ್ಟವಾದ ಸಂಶಯವು ಹೆಡೆಯೆತ್ತಿ— ಆನಂದರಾಯರು ಫರಾರಿಯಾದರು? ಎಂದು ಫೂತ್ಕರಿಸಹತ್ತಿತು.

ವಿವಾಹಿತ ಜೀವನದ ಶಾಂತಿಯನ್ನು ಅನುಭವಿಸಬೇಕು ಎಂದೊಬ್ಬ ಬ್ರಹ್ಮಚಾರಿಗಳು ಬಯಸುತ್ತಾರೆ.

—ಈ ಶಾಂತಿಯನ್ನು ಮದುವೆಯಾದ ಅನೇಕ ಪುರುಷರೂ ಬಯಸುತ್ತಿರುತ್ತಾರೆ.

"ಗೀತಂ ವಾದ್ಯಂ ನೃತ್ಯಂಚ ತ್ರಯಂ ಸಂಗೀತ-ಮಿತ್ಯುಚ್ಯತೆ" ಎಂದರೆ ಗೀತ, ವಾದ್ಯ, ನೃತ್ಯ ಈ ಮೂರರ ಮಧುರ ಮೇಳವೇ ಸಂಗೀತವಾಗಿದೆ ಯೆಂದರ್ಥ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಅದನ್ನರಿತರೆ ವಾದ್ಯ, ನೃತ್ಯ, ಗೀತಗಳ ಮಧುರ ಮಿಲನವೂ ನೃತ್ಯವಾಗಿದೆಯೆಂದು ಹೇಳಲಡ್ಡಿಯಿಲ್ಲ. ಏಕೆಂದರೆ ನೃತ್ಯದಲ್ಲಿ ಸಂಗೀತ ಮತ್ತು ವಾದ್ಯಗಳೊಂದಿಗೆ ಕಾವ್ಯ, ತಾಳ, ಲಯ, ಗತಿ, ಛಂದಸ್ಸು ನಾದಗಳೆಲ್ಲವೂ ಕೂಡಿವೆ.



ಲೇಖಕ: ಶ್ರೀ. ಎ. ವಿ. ಪಂಡಿತ

ಅನಾದಿಕಾಲದಿಂದಲೂ ಭಾರತೀಯ ನೃತ್ಯಕಲೆಯು ಜಗತ್ಪ್ರಸಿದ್ಧ ವಾಗಿದೆ. ಭರತನಿಂದ ಭಾನುಸಿಂಹನ ವರೆಗೆ ಎಲ್ಲರೂ ವೈಭವ ಪೂರ್ಣವಾದ ಈ ಕಲೆಯನ್ನು ಬೆಳಗಿಸಿದರು. ಧ್ಯಾನಮಗ್ನರೂ ಯೋಗಮಗ್ನರೂ ಆಗಿದ್ದ ವಿರಕ್ತ ಋಷಿಗಳೂ ಈ ಶಾಸ್ತ್ರ ವನ್ನು ಬರೆದರು ಮತ್ತು ಆಚರಣೆಯಲ್ಲಿ ತಂದರೆಂದು ಹೇಳಿದರೆ ಯಾರಿಗೆ ತಾನೆ ಆಶ್ಚರ್ಯವಾಗಲಿಕ್ಕಿಲ್ಲ!

ಭಾರತೀಯ ಸಂಗೀತವನ್ನು ಶ್ರಾವ್ಯ ಮತ್ತು ದೃಶ್ಯ ಎಂದು ಇಬ್ಬಗೆಯಾಗಿ ವರ್ಗೀಕರಿಸ ಬಹುದು. ಮೊದಲನೆಯದು ಭಾವಸೂಚಿ; ಎರಡ ನೆಯದು ಇಂದ್ರಿಯಗಮ್ಯ. ಒಂದು ಮಧುರ ಗೀತಗಾನದಿಂದ ಪ್ರೇರಕವಾಗುತ್ತದೆ. ಇನ್ನೊಂದು ತಾಳಕ್ಕನುಗುಣವಾದ ಪದಗತಿಯಿಂದ ಅನುಭವ ವಾಗುತ್ತದೆ. ಆದುದರಿಂದ ಶ್ರಾವ್ಯ ದೃಶ್ಯಗಳೆರಡಕ್ಕೂ ಛಂದಸ್ಸೂ ಸ್ವರವೂ ಬಲ ಕೊಟ್ಟಿರುತ್ತವೆ. ಸಂಗೀತಕ್ಕೆ ಛಂದಸ್ಸೇ ಸತ್ವವನ್ನಿತ್ತಿದ್ದರೆ ನೃತ್ಯಕ್ಕೆ ಸ್ವರಮಾಧುರ್ಯ ಮತ್ತು ತಾಳ—ಲಯಗಳ ಲಾಲಿತ್ಯ ಜೀವಜಲವನ್ನೆರೆದಿವೆ. ಗೀತ, ಸ್ವರ, ತಾಳ, ಲಯ, ಛಂದಸ್ಸು ಮೊದಲಾದವುಗಳನ್ನೆಲ್ಲ ಮಧುರವಾಗಿ ಹೆಣೆದು ಒಂದು ವೈಭವಾತ್ಮಕ ವಾದ ಕಲೆಯನ್ನು ಸೃಷ್ಟಿಸಲು ಭರತನಿಂದ ಭಾನುಸಿಂಹನ ವರೆಗಿನ ಎಲ್ಲರ ಆದರ್ಶವಾಗಿದ್ದಿತು.

ರಸ ಮತ್ತು ಭಾವ

ಅನಾದಿಕಾಲದಿಂದಲೂ ಭಾರತೀಯರು ತಮ್ಮ ನೃತ್ಯವನ್ನು ಪರಿಪೂರ್ಣ ಮಟ್ಟಕ್ಕೆ ಮುಟ್ಟಿಸಿದರು. ಸಂಗೀತಕ್ಕೆ ನೃತ್ಯ ಹೊಂದಿಕೊಳ್ಳುವಂತೆ ಮಾಡಿದರು. ಸಂಗೀತದ ಶಬ್ದಗಳ ಭಾವಾರ್ಥಕ್ಕೆ ಚೇತನ ಸ್ವರೂಪ ಕೊಡುವ ಬಗೆ ಹೇಗೆಂದು ಚಿಂತಿಸುತಿದ್ದರು. ಶಬ್ದಗಳ ಹಿಂದೆ ಮುಖಭಾವವಿದೆ ಯೆಂದು ಕಂಡರು. ಆ ಮುಖಭಾವ ಅಥವಾ ಸಂಜ್ಞೆಗಳೇ ಶಬ್ದಗಳನ್ನು ವಿದ್ಯುಲ್ಲತೆಯಂತೆ ಹೊರಡಿಸುತ್ತವೆಯೆಂದರಿತರು. ಈ ಸಂಜ್ಞಾರ್ಥಕ ಭಾಷೆಯೇ 'ನೃತ್ಯ'ವೆಂದರೂ ಅಡ್ಡಿಯಿಲ್ಲ. ಈ ರಸ ಮತ್ತು ಭಾವಗಳು ನೃತ್ಯದ ಜೀವಾಳ.

ಹಾವಭಾವ

ಭಾವವು ಮನಸ್ಸಿನ ರಸೋತ್ಪತ್ತಿಯ ಲಕ್ಷಣ. ಆ ಭಾವವು ಕೆರಳಿದಾಗ ಕಣ್ಣು, ಹುಬ್ಬು, ಇವುಗಳು ಚಲಿಸುತ್ತವೆ. ಆಗ ಅದಕ್ಕೆ ಹಾವ ಎಂದು ಅನ್ನುವರು. ಹಾವಗಳಲ್ಲೂ ಹತ್ತು ಲಕ್ಷಣಗಳಿವೆ. ನಾಯಕಿಯಲ್ಲಿರಬೇಕಾದ ಇಪ್ಪತ್ತು ಅಲಂಕಾರಿಕ ಗುಣಗಳಲ್ಲಿ ಈ ಹತ್ತನ್ನು ಸೇರಿಸಲಾಗಿದೆ.

೧. ಲೀಲಾ: ಪ್ರೇಮಿಯ ಅನುಕರಣ
೨. ವಿಲಾಸ: ಆನಂದ ಪ್ರದರ್ಶನ
೩. ವಿಚ್ಛಿತಿ: ರೂಪಶೃಂಗಾರ
೪. ವಿಭ್ರಮ: ಮನೋಗೊಂದಲ
೫. ಕಿಲಿಕಿಂಚಿತ: ಸುಖದುಃಖ, ರೋಷ ಆವೇಶ
೬. ಮೊತ್ತಾಯಿತ: ಪ್ರೇಮಿಯ ನಾಮೋಚ್ಚಾರದಿಂದ ಆನಂದ
೭. ಕುತ್ತಮಿತ: ಕಪಟ ರೋಷ
೮. ಬಿಬ್ಬೋಕ: ಅಲಕ್ಷ್ಯ
೯. ಲಲಿತ: ಅಂಗಚಲನೆ
೧೦. ವಿಹೃತ: ಲಜ್ಜಾಸ್ಥಿತಿಯ ಮೌನ.

ಭಾವವು ಮನಃಸ್ಥಿತಿಯ ನಿದರ್ಶನ. ಅದು ಅವ್ಯಕ್ತ. ಆದರೆ ಹಾವವು ಸಂಜ್ಞೆ ಅಥವಾ ಚೇಷ್ಟೆಯಾಗಿದೆ. ಆದುದರಿಂದ ಭಾರತೀಯ ನೃತ್ಯವು ಭಾವ, ರಸ, ಸಂಜ್ಞೆಗಳನ್ನೂ ತುಂಬಿಕೊಂಡಿದೆ. ಅದು ಆಂಗ್ಯೈಕಾಭಿನಯವೂ ಆಗಿದೆ. ಒಂದು ಸಂಗೀತವನ್ನು ದೇಹದ ಅಂಗಾಂಗಗಳ ಅಭಿನಯದಿಂದ ಪ್ರದರ್ಶಿಸುವುದು ಅಥವಾ ಹಾವಭಾವಗಳ ಅಂಗಚೇಷ್ಟೆಗಳ ಮೂಕಾಭಿನಯವು ನೃತ್ಯವೆಂದರೂ ಸರಿಯೇ.

ಆಧ್ಯಾತ್ಮಿಕ ಅಂತಃಸ್ಫೂರ್ತಿ

ಸಂಗೀತವು ಕೊರಳಲ್ಲಿ ಪ್ರಾಯವೊಡೆಯಬೇಕು, ಹಸ್ತಗಳ ವಿನ್ಯಾಸದಿಂದ ಅದರ ಅರ್ಥ ಸೂಚಿಸಬೇಕು, ಭಾವವನ್ನು ನೋಟದಲ್ಲಿ ಪ್ರದರ್ಶಿಸಬೇಕು ಮತ್ತು ತಾಳವನ್ನು ಪಾದಗತಿಯಲ್ಲಿ ತೋರಿಸಬೇಕು ಎಂದು ಸಾಧಾರಣ ಭಾರತದ ಎಲ್ಲ ಕಲಾವಿದರ ಅಭಿಪ್ರಾಯವಾಗಿದೆ. ಎತ್ತ ನೀಡಿತು ಹಸ್ತ, ಅತ್ತ ದೃಷ್ಟಿಯು ಹೊರಳುತ್ತದೆ. ಮನಸ್ಸೂ ಆ ಕಡೆ ಸರಿಯುತ್ತದೆ. ಮನಸ್ಸು ಹೋದ ಕಡೆ ಭಾವವೂ ರೂಪ ಹೊಂದುತ್ತದೆ. ಆಗ ರಸ ಸ್ಫುರಿಸಿ ಹರಿಯುತ್ತದೆ. ಮಾನವನ ಸಮಸ್ತ ಕ್ರಿಯೆಗಳಲ್ಲೂ ಈ ರಸೋದಯವಿದೆ.

ನೃತ್ಯದಲ್ಲಿ ಕಲಾವಿದನು ಈ ದೃಶ್ಯಪ್ರಪಂಚದ ಸಂಕೋಲೆಗಳನ್ನು ಮುರಿಯಲು ಯತ್ನಿಸುತ್ತಾನೆ. ಅದರಲ್ಲಿ ಅವನ ಶಾರೀರಿಕ ಅಂಗವಿನ್ಯಾಸ ಪ್ರದರ್ಶನವಿದೆಯೇನೊ ನಿಜ. ಅದರೊಂದಿಗೆ ಅವನ ಅಂತಃಪ್ರೇರಣೆಗಳನ್ನೂ ಅವನು ಪ್ರದರ್ಶಿಸಲೆತ್ನಿಸುತ್ತಾನೆ. ಭಾರತೀಯ ನೃತ್ಯದಲ್ಲಿರುವ ಹಾವ ಭಾವ, ಅಂಗಾಭಿನಯಗಳ ಅರ್ಥವೆಲ್ಲ ಅದೇ. ಆ ಭಾವವೂ ಹೆಚ್ಚಾಗಿ ನಮ್ಮ ಆಧ್ಯಾತ್ಮಿಕ ಚೈತನ್ಯದ ಫಲವೂ ಆಗಿದೆಯೆಂದೆನಬಹುದು. ಆದುದರಿಂದ ಕಲಾವಿದನು ನಮ್ಮ ಊಹೆಗೆ ನಿಲುಕದ ವಸ್ತುವಿನ ಮೇರೆ ಮೀರಬೇಕು. ಮತ್ತು ಆ ಲಲಿತಕಲೆಯಿಂದ ನಮ್ಮ ಜೀವನದ ಮೇಲೆ ಮಧುರ ಪ್ರಭಾವ ಬೀರಬೇಕೆಂದು ಬಯಸುವುದು ಸಹಜವೇ ಆಗಿದೆ. ಕಲೆಯು ಒಂದು ಕ್ರಿಯೆಯಲ್ಲ. ಏಕೆಂದರೆ ಕ್ರಿಯೆಯ ದೃಷ್ಟಿ ಯಾವಾಗಲೂ ಲಾಭದ ಕಡೆ. ಕಲೆಯು ಚರ್ಯೆಯಲ್ಲ. ಏಕೆಂದರೆ ಅದು ನೀತಿಯಾಗುತ್ತದೆ. ನೃತ್ಯಕಲೆಯು ನಮ್ಮ ನಡೆ ನುಡಿ, ಜೀವನಕ್ಕೇ ಸಂಬಂಧಿಸಿದೆ.

ನೀರೆರೆವ ಶಕುಂತಲೆ

ಶಕುಂತಲೆ ಗಿಡಗಳಿಗೆ ನೀರೆರೆವ ಒಂದು ನೃತ್ಯದ ಉದಾಹರಣೆಯನ್ನು ಕೊಡೋಣ. ಮೊದಲು ಹಸ್ತಗಳನ್ನು ಕೆಳಗೆ ನಳಿನಿಪದ್ಮಾಕ್ಷ ವಿನ್ಯಾಸದಲ್ಲಿ ಹಿಡಿಯಬೇಕು. ಆ ಮೇಲೆ ಅವನ್ನು ಭುಜದ ವರೆಗೆ ಎತ್ತಿ ಹಿಡಿಯಬೇಕು. ತಲೆಯನ್ನು ಓರೆ ಮಾಡಿ ಶರೀರವನ್ನು ಬಾಗಿಸಿ ನೀರೆರೆಯಬೇಕು. ಅಂಗಾಂಗ ವಿನ್ಯಾಸದಿಂದ ಹೂಗಳನ್ನು ಕೊಯ್ಯುವುದನ್ನು ಪ್ರದರ್ಶಿಸಬೇಕು. ಎಡಹಸ್ತವನ್ನು 'ಅರಾಳ' ಭಂಗಿಯಲ್ಲೂ ಬಲಗೈಯನ್ನು 'ಹಂಸ' ಭಂಗಿಯಲ್ಲೂ ಹಿಡಿಯಬೇಕು. ಎಡಗೈಯಲ್ಲಿ ಒಂದು ಬುಟ್ಟಿಯನ್ನು ಹಿಡಿದಂತೆಯೂ ಬಲಗೈಯಲ್ಲಿ ಪುಷ್ಪಗಳನ್ನು ಹೆಕ್ಕಿ ಆ ಬುಟ್ಟಿಗೆ ತುಂಬಿಸುವಂತೆಯೂ ಆಗುತ್ತದೆ. ತಲೆಯನ್ನು ಅತ್ತಿತ್ತ

ಅಲುಗಿಸಿ ತುಂಬಿಯ ಹೆದರಿಕೆಯನ್ನು ತೋರಿಸ ತಕ್ಕದ್ದು. ಆಗಲೇ ತುಟಿಗಳು ನಡುಗಬೇಕು ಮತ್ತು ಕೈಗಳನ್ನು ಆಗಾಗ ಮೋರೆಗೆ ತಂದು ಮುಚ್ಚಿಕೊಳ್ಳಬೇಕು.

ರಾಗ ಮತ್ತು ನೃತ್ಯ

ನೃತ್ಯ ಮತ್ತು ಸಂಗೀತಗಳೊಳಗಿನ ಸಂಬಂಧವನ್ನು ವಿವರಿಸುವುದು ಸುಲಭವಲ್ಲ. ಸಂಗೀತವು ಮಾನಸಿಕ ಹಾಗೂ ಭಾವೋದ್ರೇಕಗಳ ಸಂಯೋಗವಾಗಿರುವಂತೆ, ವಾಕ್, ಭಾಷೆ ಹಾಗೂ ಹಾವಭಾವಗಳ ಛಾಯೆಯಾಗಿರುವಂತೆ, ನೃತ್ಯವೂ ರಾಗದ ನೆರಳೆಂದೆನಬಹುದು. ಜನಪದವೇ ರಾಗವನ್ನು ಕಾಣಿಕೆಯಾಗಿ ಕೊಟ್ಟಿದೆ. ಆ ರಾಗದ ಮೂರ್ತಿಮಂತ ಸ್ವರೂಪವೇ ನೃತ್ಯ. ವಾಕ್‌ಪ್ರವಾಹದಲ್ಲಿ ಭಾಷೆಯು ಮೇಲಾಗಿರುವಂತೆ ಸಂಗೀತದಲ್ಲೂ ನೃತ್ಯವು ರಾಗವನ್ನು ನಿಯಂತ್ರಿಸುತ್ತದೆ. ರಾಗವು ಅಂತರ್ಹೇತುವನ್ನು ಬಹಿರಂಗಗೊಳಿಸುತ್ತದೆ. ಮತ್ತು ನೃತ್ಯವು ಅದರ ಬಾಹ್ಯ ಅಂಗವಿನ್ಯಾಸಗಳ ಪ್ರದರ್ಶನ.

ರಾಗವು ಒಳಗಿನ ಪ್ರೇಮದ ಸುಂದರ ಚಿಹ್ನ. ನೃತ್ಯವು ಅದರ ಹೊರಗಿನ ಪರಿಣಾಮಗುಣ. ಒಂದು ಒಳಗಿನ ಆತತಿಯ ಚಲನವಾದರೆ ಇನ್ನೊಂದು ಅದರ ವಿಸ್ತರಣ. ಅವೆರಡೂ ಸಂಗೀತದ ದೇಹಾತ್ಮಗಳಂತಿವೆ. ಒಂದು ಕಲಾವಿದನ ಅತ್ಮಭಾವವನ್ನೂ ಇನ್ನೊಂದು ಅವನಲ್ಲಿ ಆದ ಸಾಮಾಜಿಕ ಜಾಗೃತಿಯನ್ನೂ ತೋರಿಸುತ್ತದೆ. ರಾಗ ಮತ್ತು ನೃತ್ಯಗಳು ಒಂದಕ್ಕೊಂದು ಪರಿಪೋಷಕವಾದಾಗ ಮತ್ತು ವಿಚಾರವು ಉದಾತ್ತವಿದ್ದಾಗ ಅದರ ಪರಿಣಾಮವು ವಿಶೇಷವಾಗುತ್ತದೆ. ಅದನ್ನೆ ಸಂಗೀತವೆಂದೂ ಕರೆಯಬಹುದಾಗಿದೆ.



ಭರತನಾಟ್ಯದ ಒಂದು ಭಂಗಿ

ಸ್ವತಂತ್ರವಾದ ಅಸ್ತಿತ್ವ

ಆದರೆ ಭಾರತೀಯ ನೃತ್ಯಕ್ಕೆ ಸಂಗೀತದಂತೆ ಸ್ವತಂತ್ರವಾದ ಅಸ್ತಿತ್ವವಿದೆ. ಆ ಕ್ಷಣದಲ್ಲಿ ಏನು ತೋಚಿತೋ ಹಾಗೆ ನರ್ತಿಸಲಾಗುವದಿಲ್ಲ. ತೆರೆ ಮೇಲಕ್ಕೆ ಎಳೆದಾಗ ನರ್ತಕನು ರಂಗಸ್ಥಳದಲ್ಲಿರುತ್ತಾನೆ. ಆಗ ನೂತನವಾದುದೊಂದು ಕಲಾಕೌಶಲ್ಯವನ್ನು ಆರಂಭಿಸಲು ಅವನಿಗೆ ಅವಕಾಶವಿಲ್ಲ. ಪ್ರತಿಯೊಂದು ನೃತ್ಯಾಭಿನಯವೂ ಬಹಳ ಚೆನ್ನಾಗಿ ಪಾಠವಾಗಿರತಕ್ಕುದು. ಹಾಡುವವರು ಯಾರೇ ಇರಲಿ, ಸಂಗೀತದ ಪದಗಳು ಬದಲಾಯಿಸುವುದಿಲ್ಲ. ಹಾಗೆಯೇ ಯಾರೇ ನರ್ತಿಸಿದರೂ ಆ ನೃತ್ಯದ ನಿಶ್ಚಿತ ರೂಪರೇಷೆಗಳೂ ಕ್ರಮಗಳೂ ಬದಲಾಗಲಾರವು. ಈ "ದೃಶ್ಯಸಂಗೀತ"ದಲ್ಲಿ ನರ್ತಕನು ಮುಖ್ಯವಲ್ಲ; ಅವನ ಅಭಿನಯ ಮುಖ್ಯ.

ಭಕ್ತಿಮಾರ್ಗ

ದೇವತಾರಾಧನೆಯ ಕಾಲದಲ್ಲಿ ಹಾಡುವುದೂ ನಲಿಯುವುದೂ ಬ್ರಾಹ್ಮಣನ ಕರ್ತವ್ಯವೆಂದು ಸ್ಮೃತಿಗಳಲ್ಲಿ ಉಲ್ಲೇಖಿಸಲಾಗಿದೆ. ಭಗವದ್ಭಕ್ತರೂ ಹಾಗೆ ನುಡಿಯುತ್ತಾರೆ. ಭಾರತದಲ್ಲಿ ಮಾತ್ರವಲ್ಲ, ಜಗತ್ತಿನ ಇನ್ನಿತರ ಭಾಗಗಳಲ್ಲೂ ಮನೆ ಮತ್ತು ಮಂದಿರಗಳಲ್ಲಿ ಈ ಸಂಪ್ರದಾಯವಿದೆ; ದಾವೀದನು ನರ್ತಿಸಿದ ಐತಿಹ್ಯವಿದೆ. ಪ್ರಾಚೀನ ಗ್ರೀಸ್, ಇಜಿಪ್ತ್, ಅಸ್ಸೀರಿಯಾಗಳಲ್ಲಿ ಅಂತಹ ನರ್ತಕರ ಪ್ರತ್ಯೇಕ ಕುಟುಂಬಗಳೇ ಇದ್ದುವು. ಅವರು ಮನೋವಾಕ್ಕಾಯಗಳಲ್ಲಿ ಪವಿತ್ರರಾಗಿದ್ದರು. ಭಕ್ತಿ-ನೃತ್ಯಗಳಲ್ಲಿ ಪರಿಪೂರ್ಣರಾಗಲು ಅವರು ಸದಾ ಯತ್ನಿಸುತ್ತಿದ್ದರು. ಅನೇಕರು ಅಂತಹ ಉನ್ನತ ಯೋಗ್ಯತೆಯನ್ನು ಗಳಿಸಿದರು. ಅವರಲ್ಲಿ ಅದ್ಭುತ ಯೋಗಶಕ್ತಿಯನ್ನು ಪಡೆದವರೂ ಇದ್ದಾರೆ. ಪ್ರಾಚೀನ ಇಜಿಪ್ತ್ ಮತ್ತು ಗ್ರೀಸ್ ದೇವಾಲಯಗಳ ಮಂದಿರಗಳಲ್ಲಿ ದೇವತಾರಾಧನೆ ಮಾಡಿದ ಅರ್ಚಕರೂ ನೃತ್ಯಸೇವೆ ಸಲ್ಲಿಸುತ್ತಿದ್ದ ಅರ್ಚಕಿಯರೂ ಭಾರತದ ದೇವಸ್ಥಾನಗಳಲ್ಲಿ ಅನಾದಿಕಾಲದಿಂದ ಇದ್ದ ಪೂಜಾರಿ ಮತ್ತು ದೇವದಾಸಿಯರನ್ನೇ ಹೋಲುತ್ತಾರೆ. ಭಾರತದ ಪ್ರತಿಯೊಂದು ಪ್ರಾಚೀನ

ವೈಭವವು ಕಾಲಾನುಗತಿಯಲ್ಲಿ ನಶಿಸಿದಂತೆ ನೃತ್ಯದ ಸ್ಥಿತಿಯೂ ಆಗಿದೆ.

ನೃತ್ಯದ ಉಗಮ

ಘೋರಾರಣ್ಯ ಮತ್ತು ಗವಿಗಳಲ್ಲಿ ಧ್ಯಾನ ಮಗ್ನರೂ ಯೋಗಮಗ್ನರೂ ಆಗಿದ್ದ ವಿರಕ್ತ ಹಿಂದೂ ಋಷಿಗಳು ಸಂಗೀತ, ತಾಳ, ಲಯ, ಸ್ವರ, ವಾದ್ಯ, ನೃತ್ಯಗಳನ್ನೆಲ್ಲ ಬರೆದರು ಮತ್ತು ಆಚರಣೆಯಲ್ಲಿ ತಂದರೆಂದು ಹೇಳಿದರೆ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ! ಮಾತಂಗ, ದತ್ತಕ, ನಾರದ, ಆಗಸ್ತ್ಯ, ಭಾರದ್ವಾಜ ಹಾಗೂ ಇನ್ನಿತರ ಅನೇಕ ದೊಡ್ಡ ದೊಡ್ಡ ಋಷಿಗಳು ಈ ಕಲೆಯನ್ನು ಬೆಳಗಿಸಿದರೆಂದು ಪ್ರತೀತಿ ಇದೆ.

ಶ್ರೀಕೃಷ್ಣನ ಆಸ್ಥಾನದಲ್ಲಿದ್ದ ಜಯದೇವ ತನ್ನ ಪತ್ನಿಯಾದ ಪದ್ಮಾವತಿಗೆ ಗೀತ ಮತ್ತು ನೃತ್ಯವನ್ನು ಕಲಿಸಿದನಂತೆ. ನಾರಾಯಣತೀರ್ಥರು ಶ್ರೀಕೃಷ್ಣನ ನೃತ್ಯಾಚಾರ್ಯರಾಗಿದ್ದರಂತೆ. ಸಂಗೀತದ ತರಂಗಗಳಿಗೆ ಸರಿದೂಗುವಂತೆ ಗುರುಗಳ ಮುಂದೆ ಶ್ರೀಕೃಷ್ಣ ತನ್ನ ನೃತ್ಯವನ್ನು ಪ್ರದರ್ಶಿಸುತಿದ್ದನಂತೆ. ಆದರೆ ಕಾಲಕ್ರಮೇಣ ಈ ಕಲೆ ಅವನತಿ ಹೊಂದಿದಂತೆ ತೋರುತ್ತದೆ. ನೃತ್ಯ ಮತ್ತು ಸಂಗೀತದ ಕಡೆ ವಿಶೇಷ ಗಮನ ಕೊಡಬಾರದೆಂದು ಶ್ರೀರಾಮನು ಭರತನಿಗೆ ಎಚ್ಚರಿಕೆ ಕೊಟ್ಟಿರುವುದನ್ನು ರಾಮಾಯಣದಲ್ಲಿ ಉಲ್ಲೇಖಿಸಲಾಗಿದೆ. ಆ ಮೇಲೆ ಪ್ರಾಚೀನಕಾಲದಲ್ಲಿ ಗಂಧರ್ವರು ಸಂಗೀತಶಾಸ್ತ್ರದಲ್ಲಿ ಎಲ್ಲರನ್ನೂ ಮೀರಿಸಿದರು. ಶಿವನು ಆನಂದತಾಂಡವ ನೃತ್ಯವನ್ನಾಡಿದಾಗ ತುಂಬುರು ಮತ್ತು ನಾರದರು ವಾದ್ಯಗಳೊಂದಿಗೆ ಹಾಡಿದರಂತೆ! ಸಂಗೀತದಲ್ಲಿ ಆ ಇಬ್ಬರು ಋಷಿಗಳು ಎಲ್ಲರಿಗೂ ಪೂಜ್ಯರಾಗಿದ್ದಾರೆ. ಚಿತ್ರಸೇನನ ಹೆಸರೂ ಅಜರಾಮರವಾಗಿಯೇ ಇದೆ. ಸಂಗೀತಶಾಸ್ತ್ರಕ್ಕೆ ಗಂಧರ್ವವೇದ ಎಂಬ ಇನ್ನೊಂದು ಹೆಸರೂ ಬಂದಿದೆ.

ಆದರೆ ಪ್ರಾಚೀನ ಕಾಲದ ನೃತ್ಯಕಲೆಯ ಅಭಿವೃದ್ಧಿಗಾಗಿ ಶ್ರಮವಹಿಸಿದವರು ಬಹಳವಿಲ್ಲ. ದೇವಲೋಕದಲ್ಲಿ ಮಾತ್ರ ಈ ನೃತ್ಯಕ್ಕೆ ವಿಶೇಷ ಪ್ರಾಧಾನ್ಯ ಕೊಡುತಿದ್ದರು. ದೇವತೆಗಳ ದೊರೆ ಇಂದ್ರನಿಗೂ ನೃತ್ಯದ ಮೇಲೆ ತುಂಬಾ ಅಭಿಲಾಷೆ; ಅಭಿಮಾನ. ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆ ಎಂಬ ನಾಲ್ವರು ಅಪ್ಸರ ಸ್ತ್ರೀಯರು ಈ ನೃತ್ಯಕಲೆಯಲ್ಲಿ ಸ್ವರ್ಗ ಮರ್ತ್ಯ ಪಾತಾಳಗಳಲ್ಲೂ ಪ್ರಸಿದ್ಧರಾಗಿದ್ದಾರೆ. ಸ್ವತಃ ನಾರದರೇ ಅಲ್ಲಿ ಬಂದು ನಾಟ್ಯಾಭಿನಯ ಮಾಡಿಸುತಿದ್ದರಂತೆ.

ಕಥಕ್ಕಳಿ

ಕೇರಳದಲ್ಲಿ 'ಕಥಕ್ಕಳಿ' ಎಂಬ ಹೆಸರಿನ ಇನ್ನೊಂದು ನೃತ್ಯಪದ್ಧತಿ ಇದೆ. 'ಕಥಕ್ಕಳಿ' ಕಥಾನೃತ್ಯವೆನ್ನಲಡ್ಡಿಯಿಲ್ಲ. ಇದು ಒಂದು ರೀತಿಯ ಮೂಕಾಭಿನಯ ನಾಟಕವೆಂದರೂ ತಪ್ಪಲ್ಲ. ಹಿಮ್ಮೇಳದವರು ವಾದ್ಯಗಳನ್ನು ನುಡಿಸುತ್ತ ಹಾಡುಗಳನ್ನು ಹಾಡಿ ಕಥೆಯನ್ನು ನಿರೂಪಿಸುವರು. ಆ ಕಥೆಯ ಸನ್ನಿವೇಶಗಳಿಗೆ ತಕ್ಕಂತೆ ಕಲಾವಿದರು ಆ ಹಾವಭಾವಗಳನ್ನು ಅಭಿನಯಿಸಿ ಪ್ರದರ್ಶಿಸುವರು. ಹಾವಭಾವ, ಅಭಿನಯವು ಬಹಳ ಕಠಿಣ. ನೈಪುಣ್ಯ ಗಳಿಸಲು ದೀರ್ಘಕಾಲ ಕಲಾವಿದನು ಪರಿಶ್ರಮಪಡದೆ ಗತ್ಯಂತರವಿಲ್ಲ. ಕಥಕ್ಕಳಿ ನೃತ್ಯಕಲಾಕೋವಿದನು ಸಾಮಾನ್ಯವಾಗಿ ಚತುರ್ವಿಂಶತ ಮೂಲಮುದ್ರೆಗಳನ್ನು, ನವ ಶಿರೋಭೇದಗಳನ್ನು, ಅಷ್ಟ ದೃಷ್ಟಿರಹಸ್ಯಗಳನ್ನು, ಷಷ್ಠ ಹುಬ್ಬುಚಲನೆಗಳನ್ನು ತಿಳಿದುಕೊಂಡಿರಬೇಕು. ಅಲ್ಲದೆ ಹಿಮ್ಮಡಿ, ಬೆರಳು, ಮೊಣಗಂಟು, ತೊಡೆ, ತುಟಿ, ಕಟಿ, ಕೈ, ಭುಜ, ಹಸ್ತ, ಇತ್ಯಾದಿ ಅಂಗಾಂಗಗಳನ್ನು ಚಲಿಸುವ ಚತುಷಷ್ಟಿ ಭೇದಗಳಲ್ಲಿ ಪಾರಂಗತನಾಗತಕ್ಕುದು.

ನೃತ್ಯಭೇದ

ಕಥಕ್ಕಳಿಯಲ್ಲಿ ಸಾಧಾರಣ ೩೦ ಸಶಾಸ್ತ್ರೀಯ ನೃತ್ಯಭೇದಗಳಿವೆ. ಆಧುನಿಕ ನಾಗರಿಕತೆಯನ್ನು ಸವಿದಿರುವೆವೆಂಬ ಬಿಂಕವುಳ್ಳವರಿಗೆ ಇದು ಸ್ವಲ್ಪ ಅನಾಗರಿಕವಾಗಿ ತೋರಬಹುದು. ಅದಕ್ಕೆ ಕಾರಣವಿಷ್ಟೆ. ಪಾಶ್ಚಾತ್ಯ ಪದ್ಧತಿಯಂತೆ ಕಥಕ್ಕಳಿಯಲ್ಲಿ ಸೌಂದರ್ಯ ಅಥವಾ ಮೈಸೊಗಸಿನ ಬದಲು ಇಲ್ಲಿ ಶಕ್ತಿ, ಚೈತನ್ಯ ಮತ್ತು ಕ್ರಿಯೆಗಳಿಗೆ ಪ್ರಾಧಾನ್ಯವಿತ್ತಿರುವರು. ಅದು ವರ್ಣನಾವೈಖರಿಯಿಂದಲೂ ವಾಸ್ತವಿಕ ಶೋಭೆಯಿಂದಲೂ ಕಂಗೊಳಿಸುತ್ತದೆ. ಕಥಕ್ಕಳಿಯಲ್ಲಿ ರೂಪಿಸುವ "ಕೇಕಿ ನೃತ್ಯ"ವು ಕಣ್ಣಿಗೊಂದು ಹಬ್ಬ. ಅದರಂತೆ ರಾಮಾಯಣ, ಮಹಾಭಾರತಗಳನ್ನು 'ಕಥಕ್ಕಳಿ'ಯಲ್ಲಿ ನಿರೂಪಿಸಲಾಗುತ್ತಿದೆ. ವ್ಯಕ್ತಿ, ಅವನ ಹಾವಭಾವ, ಆಶೆ ಆಕಾಂಕ್ಷೆ, ಹುಟ್ಟು ಸಾವು, ಸುಖ ದುಃಖಗಳೆಲ್ಲವನ್ನೂ ಮುದ್ರಾಭೇದದಿಂದ ಕಥಕ್ಕಳಿಯಲ್ಲಿ ಅಭಿನಯಿಸುವರು. ಹಾಗೆಯೇ ಭೂಮಿ, ನೀರು, ಆಕಾಶಗಳನ್ನೂ ಅಭಿನಯದಿಂದ ತೋರಿಸುವರು. ದೇವತೆಗಳು, ನರರು, ಪುರಾಣಪುಣ್ಯ ಪುರುಷರು ಕೂಡ 'ಕಥಕ್ಕಳಿ'ಯಲ್ಲಿ ಬರುತ್ತಾರೆ.

ವಿಚಿತ್ರ ವೇಷಭೂಷಣ

ಕಥಕ್ಕಳಿ ನೃತ್ಯದಲ್ಲಿ ಕಲಾವಿದರು ತೊಡುವ ವೇಷಭೂಷಣವು ಬಹಳ ವಿಚಿತ್ರವಾಗಿದೆ. ಆ ರೀತಿಯ ಶೃಂಗಾರ ಮಾಡುವವರ ಒಂದು ವರ್ಗವೇ ಇದೆ. ಮೊದಲು ಮುಖಕ್ಕೆ ಕೆಂಪು, ಹಸರು, ನೀಲ ಇತ್ಯಾದಿ ಬಣ್ಣ ಹಚ್ಚಿಕೊಳ್ಳುವರು. ಅದರ ಮೇಲೆ ಕುದಿಸಿದ ಅಕ್ಕಿ ಹಿಟ್ಟನ್ನು ಕ್ರಮವರಿತು ಮೆತ್ತಿಕೊಳ್ಳುವರು. ತಲೆಗೆ ನಾನಾ ಬಗೆಯ ಕಿರೀಟಗಳಿರುತ್ತವೆ. ಅನೇಕ ಬಣ್ಣದ ಉಡುಗೆಗಳನ್ನೂ ಧರಿಸುವರು. ಸಂಜೆ ಒಂಬತ್ತು ಗಂಟೆಗೆ ಆರಂಭವಾದ ಕಥಕ್ಕಳಿ ನೃತ್ಯ ರಾತ್ರಿ ಇಡೀ ನಡೆಯುತ್ತದೆ. ಸರ್ವಸಾಧಾರಣವಾಗಿ ಈ ನರ್ತಕರ ಗುಂಪಿನಲ್ಲಿ ಸ್ತ್ರೀಯರು ಇರುವುದು ಅತಿ ವಿರಳ. ಪುರುಷರೇ ಸ್ತ್ರೀಪಾತ್ರವನ್ನು ವಹಿಸುವುದು ಅನಾದಿಕಾಲದಿಂದ ಬಂದ ರೂಢಿ.

ನೃತ್ಯ ಪದ್ಧತಿಗಳ ಸುಧಾರಣೆ

ಪ್ರಾಚೀನವಾದ ಈ ಭಾರತೀಯ ನೃತ್ಯಪದ್ಧತಿಗಳ ಪುನರುಜ್ಜೀವನ ಕಾರ್ಯವು ಅತಿ ಅಗತ್ಯವಾಗಿದೆ. ಸೌಂದರ್ಯದ ಸುಖಸನ್ನಿವೇಶಗಳನ್ನು ರೂಪಿಸುವುದರ ಜೊತೆಗೆ, ನವನವೋನ್ಮೇಷಶಾಲಿನಿಯಾದ ನೃತ್ಯವಿಧಾನಗಳ ಕಡೆ ಗಮನವನ್ನೀಯಬೇಕು. ಶಾಸ್ತ್ರೀಯ ನೃತ್ಯವನ್ನು ಕಡೆಗಣಿಸಬಾರದು. ಅದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುವುದು ಸರಕಾರದ ಕರ್ತವ್ಯವಾಗಿದೆ. ಆ ದೃಷ್ಟಿಯಿಂದ ಸರಕಾರವು ಒಂದು ರಾಷ್ಟ್ರೀಯ ನೃತ್ಯಮಂದಿರವನ್ನು ತೆರೆಯುವದು ಒಳ್ಳೆಯದು. ಅದರಿಂದ ಕಲೆಯ ರಕ್ಷಣೆಯಾಗಬಹುದು ಮಾತ್ರವಲ್ಲ, ಕಲಾವಿದರಿಗೂ ಪ್ರೋತ್ಸಾಹ ದೊರೆತೀತು.

ನಗರಗಳಲ್ಲಿ

ಮಧ್ಯಮ ವರ್ಗದ ಕುಟುಂಬವ್ಯವಸ್ಥೆ

ಲೇಖಕರು: ಶ್ರೀ. ವ್ಯಾಸರಾಯ ಬಲ್ಲಾಳ

ಇಂದು ಬೆಳಕಿಗೆ ಬರುತ್ತಿರುವ ಹೊಸ ಹೊಸ ತತ್ವಗಳ, ಸಿದ್ಧಾಂತಗಳ ಹಿನ್ನೆಲೆಯಲ್ಲಿ ನಗರದ ಮಧ್ಯಮ ವರ್ಗದ ನಾಗರಿಕನು ಬದುಕನ್ನು ವಿಮರ್ಶಿಸುವ ಗೊಡವೆಗೇ ಹೋಗುವುದಿಲ್ಲ. ಹಳೆಯ ನೀತಿಮೂಲ್ಯಗಳು ಸರಿಯಲ್ಲವೆನ್ನುತ್ತಿರುವಂತೆ ಹೊಸವನ್ನು ಕಂಡುಕೊಳ್ಳಲು ಆತ ಸಿದ್ಧನಿಲ್ಲ. ಆತನ ಜೀವನವನ್ನು ನಿಯಂತ್ರಿಸುವುದು ಗತಿಸಹಜ ಸಿದ್ಧಾಂತ. ನಗರದ ಕೇಂದ್ರೀಕರಣದೊಂದಿಗೆ ಕುಟುಂಬದ ವಿಕೇಂದ್ರೀಕರಣವಾಗುತ್ತಿದೆ.

ಅತೃಪ್ತಿ ಪರಿವರ್ತನೆಯ ಮೂಲ. ದುಃಖ ಯಾವಾಗಲೂ ಸಂಪ್ರದಾಯವಿರೋಧಿ. ತೃಪ್ತಿ ಸಂಪ್ರದಾಯದ ಬಂಧು. ಸುಖ ಹೆಚ್ಚಾಗಿ ಪ್ರಗತಿ-ವಿರೋಧಿ. ಆದರೆ ವಿಧಿಯನ್ನೆ ಬಹಳ ಮಟ್ಟಿಗೆ ನೆಚ್ಚಿಕೊಂಡಿರುವ, ಧರ್ಮದ ವರ್ಚಸ್ಸು ವಿಶೇಷವಾಗಿ ಕಂಡು ಬರುತ್ತಿರುವ ಭಾರತದಲ್ಲಿ ಸುಖ ದುಃಖಗಳನ್ನು ಹೊಂದಿಸಿಕೊಂಡು ಹೋಗುವ ಪ್ರಯತ್ನ ನಮ್ಮ ಸಾಮಾಜಿಕ ಜೀವನದಲ್ಲಿ ಕಂಡು ಬರುವುದಾದರೂ ಈ ಭಾರತೀಯ ವೈಶಿಷ್ಟ್ಯವು ವೈಜ್ಞಾನಿಕ ಹಾಗೂ ನಾಗರಿಕತೆಯ ಪ್ರಗತಿಯಿಂದ ಪ್ರೇರಿತವಾದ, ಹೊರ ಜಗತ್ತಿನ ಸಂಪರ್ಕದಿಂದ ರೂಪಿತವಾದ ಹೊಸ ಹೊಸ ಶಕ್ತಿಗಳೊಂದಿಗೆ ಸ್ಪರ್ಧಿಸಿ ಗೆಲ್ಲುವಷ್ಟು ಶಕ್ತಿಯುತವಾಗಿದೆಯೇ ಎಂಬುದು ಸಂದೇಹಾಸ್ಪದ ಪ್ರಶ್ನೆ. ಈ ಮಾತಿಗೆ ಒಂದು ಉತ್ತಮ ಉದಾಹರಣೆ ಬದಲಾಗುತ್ತಿರುವ ನಮ್ಮ ಕುಟುಂಬವ್ಯವಸ್ಥೆ. ನಮ್ಮ ಜೀವನದ ವಿವಿಧ ಅಂಗಗಳಲ್ಲಿ ಮಾರ್ಪಾಟುಗಳಾಗುತ್ತಿರುವಂತೆಯೇ, ಈ ವ್ಯವಸ್ಥೆಯಲ್ಲೂ ಮಾರ್ಪಾಟುಗಳಾಗುತ್ತಿವೆ. ಆದರೆ ಇವು ಹೆಚ್ಚಾಗಿ ಶಿಥಿಲತೆಯ ಕಡೆಗೆ ಒಲವನ್ನು ತೋರುತ್ತಿರುವುದರಿಂದಲೇ, ಇವು ತೀವ್ರವಾದ ಯಾವುದೊಂದು ಅತೃಪ್ತಿಯಿಂದ ಪ್ರೇರಿತವಾದ ಪರಿವರ್ತನೆಗಳಲ್ಲ ಎಂದು ಹೇಳಬಹುದು. ಇವುಗಳ ಕಾರಣಗಳನ್ನು ನಾವು ನೆಚ್ಚಿಕೊಂಡಿರುವ ನಾಗರಿಕತೆಯಲ್ಲೆ, ನಾವು ಮನ್ನಣೆ ಕೊಡುತ್ತಿರುವ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸಿದ್ಧಾಂತಗಳಲ್ಲೆ ಗುರುತಿಸಬೇಕಾಗಿದೆ.

ಈ ಕುಟುಂಬವ್ಯವಸ್ಥೆ, ಅದೂ ಮಧ್ಯಮ ವರ್ಗದ ಕುಟುಂಬವ್ಯವಸ್ಥೆ, ಮುಂಬಯಿಯಂಥ ಕೇಂದ್ರೀಕೃತ ಶಹರಗಳಲ್ಲಿ, ಅರ್ವಾಚೀನ ನಾಗರಿಕತೆಯ ಸಂಕೇತದಂತಿರುವ ಇಂಥ ಶಹರಿನ ಜೀವನದಲ್ಲಿ ಯಾವ ರೀತಿ ಶಿಥಿಲವಾಗುತ್ತಿದೆ? ಈ ವ್ಯವಸ್ಥೆಯ ಭವಿಷ್ಯವೆಂಥದು ಎಂಬುದು ನಮ್ಮ ಸಮಾಜಶಾಸ್ತ್ರಜ್ಞರನ್ನು ಕಾಡಬೇಕಾದ ಪ್ರಶ್ನೆಗಳು. ಅವರಿಂದ ಇವಕ್ಕೆ ಸಶಾಸ್ತ್ರೀಯ ಸಮಾಧಾನಗಳು ದೊರಕಬಹುದಾದರೂ ಈ ಶೈಥಿಲ್ಯದ ಗತಿಯನ್ನು ನಿಯಂತ್ರಿಸಲು ಈ ಸಮಾಧಾನಗಳು ಸಾಕೇ ಎಂಬ ಸಂದೇಹ ಉದ್ಭವಿಸುವಷ್ಟು ತೀವ್ರವಾಗಿ ನಮ್ಮ ಕುಟುಂಬಸಂಸ್ಥೆಯ ಅವನತಿಯನ್ನು ನಾವು ಕಾಣುತ್ತಿದ್ದೇವೆ. ಪ್ರಸ್ತುತ ಲೇಖನದಲ್ಲಿ, ಒಂದು ಕುತೂಹಲಪ್ರೇರಿತ, ಸಾಮಾನ್ಯ ದೃಷ್ಟಿಯಿಂದ ಈ ಸಮಸ್ಯೆಯ ವಿವೇಚನೆಯನ್ನು ಮಾಡಲಾಗಿದೆ, ಅಷ್ಟೆ. ಅಷ್ಟರ ಮಟ್ಟಿಗೆ ಈ ಅಭಿಪ್ರಾಯಗಳು ಮರ್ಯಾದಿತವೂ ಆಗಿವೆ.

ಕುಟುಂಬವ್ಯವಸ್ಥೆಯ ಹಿಂದಿರುವ ಆರ್ಥಿಕ ಸತ್ಯವನ್ನು, ಅದರಲ್ಲಿ ಅಡಕವಾಗಿರುವ ಶ್ರಮವಿಭಜನೆಯ ಸಿದ್ಧಾಂತವನ್ನು ನಾವು ಸರಿಯೆಂದು ಒಪ್ಪಿಕೊಂಡರೂ ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಪರಂಪರೆ ಹಾಗೂ ಆವರಣಗಳು ಉಂಟು ಮಾಡಿರುವ ಕೆಲವು ಗುಣವಿಶೇಷಗಳನ್ನು ನಾವು ಕಡೆಗಣಿಸಲಾಗುವುದಿಲ್ಲ. ಭಾರತೀಯ ಕುಟುಂಬ ಪದ್ಧತಿಯಲ್ಲಿ ಕಂಡುಬಂದಿರುವ ಸೌಂದರ್ಯಪ್ರಿಯತೆ, ಅದು ಸಾಧಿಸಿರುವ ಸಾಮರಸ್ಯ, ಇವುಗಳನ್ನು ಬೆಳೆಸಿಕೊಂಡು ಹೋಗಲು ಅನುಕೂಲವಾಗುವಂತೆ ಅದು ನಿಯಮಿಸಿಕೊಂಡಿರುವ ಕಟ್ಟುಪಾಡುಗಳು ವಿಶಿಷ್ಟ ಭಾರತೀಯ ಆದರ್ಶಗಳಾಗಿಯೇ ಮೆರೆದಿವೆ. ಈ ದೃಷ್ಟಿಯಲ್ಲಿ ಭಾರತೀಯ ಕುಟುಂಬ ಸಮಾಜದ ಸಂಕೇತ. ಅವಿಭಕ್ತ ಹಿಂದೂ ಕುಟುಂಬದಲ್ಲಿ, ಪ್ರವೃತ್ತಿವಿಶೇಷಗಳಿಂದ ಪ್ರೇರಿತವಾದ ಭಿನ್ನತೆಗಳಿರಬಹುದು; ಈರ್ಷೆ, ಅಸೂಯೆಗಳೂ ಇರಬಹುದು; ಒಡಕಿನ ಅಪಸ್ವರವೂ ಕೇಳಿಬರಬಹುದು. ಆದರೆ ಇವೆಲ್ಲವುಗಳನ್ನೂ ಮರೆಸುವಷ್ಟರ ಮಟ್ಟಿಗೆ ಅಲ್ಲಿ ಕೂಡ ಜೀವನದ ಸೌಂದರ್ಯವು ಇದ್ದಿತು. ನಮ್ಮ ಹಬ್ಬ ಹುಣ್ಣಿಮೆಗಳಲ್ಲಿ, ಹುಟ್ಟು ಸಾವುಗಳಲ್ಲಿ, ನೋವು ನಲಿವುಗಳಲ್ಲಿ, ಆ ಸಂಭ್ರಮವನ್ನೋ, ಸೋಲನ್ನೋ ಹಂಚಿಕೊಂಡು ಹೋಗುವ ಒಂದು ಪರಂಪರೆಯಿತ್ತು. ಇಂದು ನಾಗರಿಕತೆಯ ಪ್ರಭಾವ ವಿಶೇಷವಾಗಿ ಬಿದ್ದಿರುವ ನಮ್ಮ ಶಹರಗಳಲ್ಲಿ ಈ ಪರಂಪರೆ ಬುಡಮೇಲಾಗುತ್ತಿದೆ. ಶತ-ಶತಮಾನಗಳಿಂದ ಒಪ್ಪಿಕೊಂಡು ಬಂದಿದ್ದ ನೀತಿಮೂಲ್ಯಗಳು ಬದಲಾಗುತ್ತಿವೆ. ಇದಕ್ಕಾಗಿ ಯಾರೂ ಅಸಮಾಧಾನ ಪಡಬೇಕಾಗಿಲ್ಲವಾದರೂ ನಾವು ಹೊಸದಾಗಿ ಪರಿಗ್ರಹಿಸುತ್ತಿರುವ ನೀತಿಮೂಲ್ಯಗಳು ಈ ಕುಟುಂಬ ಸಂಸ್ಥೆಯ ಅವನತಿಗೆ ಕಾರಣವಾಗವೇ; ನಮ್ಮನ್ನು ತ್ರಿಶಂಕು ಸ್ವರ್ಗಕ್ಕೆ ಒಯ್ಯುವೇ ಎಂಬುದು ಮಾತ್ರ ಯೋಚಿಸಬೇಕಾದ ವಿಚಾರ.

ನಮ್ಮ ಕುಟುಂಬಪದ್ಧತಿಯ ಮೇಲೆ ಪರಂಪರೆಯಿಂದ ಆಗಿರುವ ಪ್ರಭಾವವನ್ನು ಒಂದು ಗುಣ-ವಿಶೇಷವೆಂದು ನೆಚ್ಚಿಕೊಳ್ಳುವಾಗ ಇಲ್ಲಿ ಯಾವ ಆದರ್ಶವಿದೆಯೆಂಬ ಪ್ರಶ್ನೆಯೊಂದು ಸಹಜವಾಗಿಯೇ ಉದ್ಭವಿಸಬಹುದು. ಇಲ್ಲಿ ಸೌಂದರ್ಯವಿದೆಯೆಂದು ಆದರ್ಶವಿದೆ. ಆ ಸೌಂದರ್ಯದೃಷ್ಟಿಗೆ ಭಾರತೀಯ ಆವರಣದಲ್ಲೆ ನೆಲೆಯಿದೆಯೆಂದು ಅದು ಪರಿಗ್ರಾಹ್ಯವಿದೆ. ಅರ್ಥಹೀನ ಸಂಪ್ರದಾಯದ ಒತ್ತಡ ಯಾವುದೊಂದು ಸಮಾಜದ ಮೇಲೆ ವಿಪರೀತ ಪರಿಣಾಮಗಳನ್ನೆ ಮಾಡಬಹುದು. ಪೀಳಿಗೆಯಿಂದ ಪೀಳಿಗೆಗೆ ಪರಂಪರೆಯಿಂದ ಉಪಲಬ್ಧವಾಗುವ ಸಂಸ್ಕಾರ ಈ ಸಂಪ್ರದಾಯದ ಪ್ರವಾಹದಲ್ಲಿ ಕಾಣದೆಯೇ ಹೋಗಬಹುದು. ಆದರೆ ಇಂದು ಭಾರತೀಯ ಕುಟುಂಬ ವ್ಯವಸ್ಥೆಯ ಮೇಲೆ ಶಹರಗಳ ನಾಗರಿಕತೆ ಬೀರುತ್ತಿರುವ ಪ್ರಭಾವವನ್ನು ನಮ್ಮ ಕುಟುಂಬಪದ್ಧತಿಯ ದೋಷಗಳೊಂದಿಗೆ ತೂಗಿ ನೋಡುವುದು ತಪ್ಪಾಗುವದು. ನಮ್ಮವೇ ಆದ ಕೆಲವು ಸಂಪ್ರ-ದಾಯಗಳು ಇಂದು ಅರ್ಥಹೀನವಾಗಿ ಕಾಣಬಹುದಾದರೂ ಎಲ್ಲ ಸಂಪ್ರದಾಯಗಳನ್ನು ಬದಲಿಸಿಕೊಳ್ಳುವಲ್ಲಿ ಇಂದು ನಾವು ವಿಚಾರಕ್ಕಿಂತ ಹೆಚ್ಚಾಗಿ ಪರಿಸ್ಥಿತಿಯನ್ನೇ ಅವಲಂಬಿಸುವಂತಿದೆ. ಅಜ್ಞಾನದಿಂದ ಆಗುತ್ತಿರುವ ತಪ್ಪುಗಳನ್ನು ಅವಶ್ಯಕತೆಯ ಹೆಸರಿನಿಂದ ಸಮರ್ಥಿಸುವಂತೆ ಕಂಡು ಬರುತ್ತಿದೆ.

ಹಿಂದೆ ಧರ್ಮವು ಭಾರತದಲ್ಲಿ ಸಾಮಾಜಿಕ ರಕ್ಷೆಯಾಗಿತ್ತು. ಇಂದು ಹಾಗೆಯೇ ಇದೆ ಎಂದು ಹೇಳುವದು ಕಷ್ಟ. ನಮ್ಮ ಕುಟುಂಬಪದ್ಧತಿಯ ಮೇಲೆ ಧರ್ಮದ ವರ್ಚಸ್ಸು ಅಪಾರವಾಗಿ ಬಿದ್ದಿದೆ; ಉಳಿದಿದೆ ಎನ್ನುವುದು ಕಷ್ಟ. ಏಕೆ ಉಳಿದಿಲ್ಲ

ಎಂದು ಕೇಳುವಾಗ ಆ ಪ್ರಶ್ನೆಗೆ ಉತ್ತರ ದೊರಕಬೇಕಾದುದು ನಾವು ನೆಚ್ಚಿಕೊಂಡಿರುವ ನಾಗರಿಕತೆಯಿಂದಲೆ. ಯಾವುದಾದರೊಂದು ವಿಶೇಷ ಸಂದರ್ಭದಲ್ಲಿ ಹಿರಿಯರಿಗೆ ಮಣಿಯುವುದು ಒಂದು ಭಾರತೀಯ ಆದರ್ಶ. ಈ ಸಂಪ್ರದಾಯವನ್ನು ಕಾಲಕ್ಕೆ, ವಯಸ್ಸಿಗೆ, ಹಿರಿತನಕ್ಕೆ, ಮಾನವತೆಗೆ ನಮಸ್ಕರಿಸುವ ಒಂದು ಸಂಪ್ರದಾಯವೆಂದು ಬಗೆಯುವವರು ಇಂದು ಬಹಳ ಕಡಿಮೆ ಮಂದಿ. ಇದನ್ನು ಅರ್ಥಹೀನವೆಂದು ಕರೆಯುವವರು, ನಮ್ಮ ರಾಷ್ಟ್ರಗೀತೆ ಹಾಡಲ್ಪಡುವಾಗ ಎದ್ದು ನಿಂತು ಗೌರವ ತೋರಿಸುವಲ್ಲಿಯೂ ಅರೆಮನಸ್ಸಿನಿಂದ ಬೆನ್ನು ಬಾಗಿಸುವುದನ್ನು ಕಂಡರೆ, ನಮ್ಮ ಸಾಮಾಜಿಕ ಜೀವನಕ್ಕೆ ಅಂಟಿಕೊಂಡಿರುವ ಕೊಳೆರೋಗದ ಪರಿಚಯ ಚೆನ್ನಾಗಿಯೇ ಆಗುವುದು. ಗೌರವ, ಶ್ರದ್ಧೆಗಳು ಇಂದಿನ ನಮ್ಮ ವ್ಯವಹಾರದಿಂದ ಬಹಳ ದೂರ. ಇದು ಒಂದು ಉದಾಹರಣೆ. ಹೀಗೆಯೇ ಇಂದಿನ ವಿವಾಹಪದ್ಧತಿ ಇನ್ನೊಂದು ಉತ್ತಮ ಉದಾಹರಣೆಯನ್ನು ಒದಗಿಸುತ್ತದೆ. ಹಿಂದೆ ವಿವಾಹ ಒಂದು ಕೂಟಸಂಭ್ರಮವಾಗಿದ್ದಂತೆ ಇಂದು ಉಳಿದಿಲ್ಲ. ಹಿಂದೆ ನಾಲ್ಕೈದು ದಿನಗಳ ಒಂದು ಸಾಮಾಜಿಕ ಸಂಭ್ರಮವಾಗಿದ್ದುದು ಇಂದು ಬರಿ ಒಂದೆರಡು ತಾಸಿನ ಔಪಚಾರಿಕ ಪ್ರದರ್ಶನವಾಗಿ ನಿಂತಿದೆ. ಈ ಎರಡು ತಾಸಿನ ಸಂಭ್ರಮವೂ ಆದಷ್ಟು ಬೇಗ ಮುಗಿದರೆ ಸಾಕು ಎನ್ನುವ ಅವಸರಭಾವ, ಈ ಸಂಭ್ರಮಕ್ಕೆ ಬಂದಿರುವ ಸಂಪ್ರದಾಯದ ಸ್ವರೂಪವನ್ನು ಚೆನ್ನಾಗಿಯೇ ವಿವರಿಸುತ್ತದೆ. ಇದು ಸ್ವಾಭಾವಿಕ ಪರಿವರ್ತನೆಯೆನ್ನೋಣವೆ? ರಕ್ತಸಂಬಂಧಿಗಳೆಲ್ಲ ಒಂದು ಸಂಭ್ರಮದಲ್ಲಿ ಭಾಗವಹಿಸಬೇಕು ಎಂದು ಹಿಂದಿನ ಕುಟುಂಬವ್ಯವಸ್ಥೆಯಲ್ಲಿ ಆಶೆ-ಆಶಯಗಳು ವ್ಯಕ್ತಪಡುತ್ತಿದ್ದರೆ, ಇಂದು ನಿಕಟಸಂಬಂಧಿಗಳಿದ್ದರಷ್ಟೆ ಸಾಕು ಎಂಬ ಭಾವ ಬೆಳೆಯುತ್ತಿದೆ. ಹಿಂದೆ ಕೂಟಜೀವನಕ್ಕೆ ಪ್ರಚೋದನೆ ಕೊಡುವಂತಿದ್ದ, ಪೋಷಕವಾಗಿದ್ದ ಸಭೆ-ಸಂಭ್ರಮಗಳೆಲ್ಲ ಇಂದು ಅನವಶ್ಯಕವಾದುವೆಂದು ತೋರುವಾಗ, ಈ ಭಾವದಲ್ಲಿ ನಾವು ಯಾವ ಪ್ರಗತಿಪರ ಮನೋವೃತ್ತಿಯನ್ನೂ ಗುರುತಿಸುವಂತಿಲ್ಲ. ದಿನದಿಂದ ದಿನಕ್ಕೆ ಸಂಕುಚಿತತೆಯ ಹಾದಿ ಹಿಡಿದು ಸಾಗುತ್ತಿರುವ ಈ ಕುಟುಂಬಸಂಸ್ಥೆಯ ಶೈಥಿಲ್ಯಕ್ಕೆ ಕಾರಣಗಳೇನು? ಇದರ ಪರಿಣಾಮ ಇನ್ನು ಮುಂದಿನ ಪೀಳಿಗೆಗಳ ಮೇಲೆ ಯಾವ ರೀತಿಯದಾಗಬಹುದು ಎಂದು ಮಾತ್ರ ನಾವು ಚೆನ್ನಾಗಿ ಯೋಚಿಸಬೇಕಾಗಿದೆ. ಈ ಮೊದಲೇ ಹೇಳಿದಂತೆ, ಹಿಂದೆ ಭಾರತದಲ್ಲಿ ಕುಟುಂಬವ್ಯವಸ್ಥೆ ಒಂದು ಸಾಮಾಜಿಕ ಸಂಕೇತವಾಗಿ ಮೆರೆದಿತ್ತು. ಇಂದು ವೈಯಕ್ತಿಕತೆಗೇ ಹೆಚ್ಚು ಪ್ರಾಶಸ್ತ್ಯ ಕೊಡುವಂತೆ ಆ ಸಂಸ್ಥೆ ಶಿಥಿಲವಾಗುತ್ತಿರುವಾಗ, ಭವಿಷ್ಯದ ಕುರಿತು ಚಿಂತೆಯುತ್ಪನ್ನವಾಗುವದು ಸಹಜವೇ. ಅದೂ ಕೇಂದ್ರೀಕೃತ ಶಹರಗಳಲ್ಲಿ ಜೀವನ ಹೆಚ್ಚು ಹೆಚ್ಚು ಯಾಂತ್ರಿಕವಾಗುತ್ತ ಮುಂದುವರಿದಂತೆ, ಮನುಷ್ಯನಲ್ಲಿ ಇರಬೇಕಾದ, ಅವನ ಕೌಟುಂಬಿಕ ಹಾಗೂ ಸಾಮಾಜಿಕ ಜೀವನಗಳಲ್ಲಿ ಪರಿಮಳಿಸಬೇಕಾದ ಮಧುರಭಾವನೆಗಳೆಲ್ಲ ಒಂದೊಂದೆ ನಷ್ಟವಾಗುತ್ತಿವೆ. ಇದಕ್ಕೆ ಕಾರಣಗಳೇನು?

ಶಹರಿನ ಆಕರ್ಷಣೆ, ದಾರಿದ್ರ್ಯ, ನಿರುದ್ಯೋಗತನಗಳು ವೈಜ್ಞಾನಿಕ ಪ್ರಗತಿ, ಔದ್ಯೋಗೀಕರಣಗಳೊಂದಿಗೆ ಸ್ಪರ್ಧಿಸುತ್ತ ಮುಂದುವರಿದ ಇಂದಿನ ಯುಗದಲ್ಲಿ ಸೂಜಿಕಲ್ಲಿನಷ್ಟು ಪ್ರಬಲವಾಗಿದೆ. ಹಳ್ಳಿಯಿಂದ ಪಟ್ಟಣಕ್ಕೆ, ಪಟ್ಟಣದಿಂದ ಶಹರಿಗೆ ಇರುವ ವ್ಯತ್ಯಾಸಗಳಂತೆಯೇ ನಮ್ಮ ಸಾಮಾಜಿಕ ಜೀವನದಲ್ಲೂ ನಾವು ಪರಿವರ್ತನೆಯನ್ನು ಕಾಣುತ್ತೇವೆ. ಹಳ್ಳಿಯಲ್ಲಿ ಕೂಟಜೀವನದ ಸಂಭ್ರಮದಿಂದಾಗಲಿ, ನೋವಿನಿಂದಾಗಲಿ ಯಾರೊಬ್ಬರೂ ತಪ್ಪಿಸಿಕೊಳ್ಳುವುದು ಕಷ್ಟ. ಪಟ್ಟಣದಲ್ಲಿ ತಪ್ಪಿಸಿಕೊಳ್ಳುವದು ಸುಲಭ. ಶಹರಿನಲ್ಲಿ ಕೂಟಜೀವನವೇ ಇಲ್ಲ ಎನ್ನುವ ಪರಿಸ್ಥಿತಿ ಬರುವಾಗ, ತಪ್ಪಿಸಿಕೊಳ್ಳುವ ಪ್ರಶ್ನೆಯೇ ಉಳಿಯುವುದಿಲ್ಲ.

ಹೀಗೆ ಕೂಟಜೀವನ ಕಡಿಮೆಯಾಗುತ್ತಿರುವಂತೆ, ತನ್ನ ನಿಕಟ ಸಂಬಂಧಿಗಳನ್ನೆ, ನಿಕಟ ಅನುವರ್ತಿಗಳನ್ನೆ ಆತ್ಮೀಯವಾಗಿ ಅವಲಂಬಿಸುವ ಒಂದು ಪ್ರವೃತ್ತಿ ಸ್ವಾಭಾವಿಕವಾಗಿಯೇ ಬೆಳೆಯುತ್ತದೆ. ಆಗ ಅದೇ ಒಂದು ವಿಶಿಷ್ಟ ವರ್ತುಲ. ಈ ವರ್ತುಲದಲ್ಲಿ ಪ್ರಧಾನವ್ಯಕ್ತಿ ತಾನು ಸರಿಯೆಂದು ನಿರ್ಧರಿಸುವ ರೀತಿ ನೀತಿಗಳೇ ಆತನ ಕುಟುಂಬಜೀವನದ ಹಾಗೂ ಸಾಮಾಜಿಕ ಜೀವನದ ಮಾನದಂಡಗಳಾಗಬಹುದು. ಹೀಗೆ ಭಿನ್ನತೆ ಬೆಳೆಯಲು ಅವಕಾಶ ಬಹಳವಿರುವಾಗ ಸಾಮರಸ್ಯದ ಮಾತೆಲ್ಲಿ ಉಳಿಯಿತು? ಎಂತಲೇ ಶಹರಗಳಲ್ಲಿ ಬಂದು ನೆಲೆಸುವ ಮಧ್ಯಮವರ್ಗದ ಜನರ ಕುಟುಂಬಜೀವನವನ್ನು ಒಂದೇ ತಕ್ಕಡಿಯಲ್ಲಿ ತೂಗಲು ಸಾಧ್ಯವಿಲ್ಲ ಎಂದಾಗುತ್ತದೆ. ದುಡಿಯುವ ಪ್ರತಿಯೊಂದು ವ್ಯಕ್ತಿಗೂ ತನ್ನದೇ ಆದ ಒಂದು ವಿಶಿಷ್ಟ ವಿಚಾರಪ್ರಣಾಲಿ; ಅದನ್ನು ಉಪಯೋಗಿಸಿಕೊಳ್ಳಲು ಮಹಾಶಹರಿನಲ್ಲಿ ಸಂಪೂರ್ಣ ಸ್ವಚ್ಛಂದ, ಸ್ವಾತಂತ್ರ್ಯ. ಶಹರಗಳಲ್ಲಿ ವಿವಿಧ ಜನಾಂಗಗಳ, ವಿವಿಧ ಭಾಷೆಗಳನ್ನಾಡುವ, ವಿವಿಧ ಆಚಾರ ವಿಚಾರಗಳ ಜನ ಸೇರಿರುತ್ತ, ಇವರಿಗೆ ಸಾರ್ವತ್ರಿಕವಾಗಿ ಅನ್ವಯಿಸಬಹುದಾದ ಒಂದು ಮಾನದಂಡವನ್ನು ನಿರ್ಧರಿಸುವುದೆಂತು?

ಈ ರೀತಿಯ ಸ್ವಾತಂತ್ರ್ಯ, ಪ್ರತ್ಯೇಕತೆಗಳನ್ನು ದೊರಕಿಸಿ ಕೊಟ್ಟಿರುವ ಶಹರಿನ ಜೀವನ ಮಧ್ಯಮವರ್ಗದ ಕುಟುಂಬವ್ಯವಸ್ಥೆಯ ಮೇಲೆ ಎಂಥ ಪರಿಣಾಮಗಳನ್ನು ಮಾಡಿದೆ? ಬದುಕಿನ ಸೌಂದರ್ಯವೆಲ್ಲ ಪ್ರತಿಬಿಂಬಿಸಿರುವಂಥ ಮಧುರಭಾವನೆಗಳೆಲ್ಲ ನಷ್ಟವಾಗುವಂತೆ ಪ್ರಭಾವಿಸುತ್ತಿರುವ ಈ ಜೀವನ ಎಂಥದು ಎಂದು ನಾವು ನಮ್ಮನ್ನೆ ಪ್ರಶ್ನಿಸಿಕೊಳ್ಳಬೇಕಾಗಿದೆ.

ವೇಗವಾಗಿ ಹೋಗುತ್ತಿರುವ ಒಂದು ವಿದ್ಯುತ್ ರೈಲುಬಂಡಿಯಡಿ ಒಬ್ಬ ಕೂಲಿಕಾರ ಬಿದ್ದು ಮೃತನಾದನೆಂದು ತಿಳಿದುಕೊಳ್ಳಿ. ಆಗ ಗಾಡಿಯಲ್ಲಿರುವ ಬಹಳ ಮಂದಿ 'ಆಫೀಸಿಗೆ ತಡವಾಯಿತು' ಎಂದು ಹಲುಬುತ್ತಾರೆ. ಹಾಗೆ ಮೃತಪಟ್ಟ ವ್ಯಕ್ತಿ, ತಮ್ಮಂತೆಯೇ ವೇಷಭೂಷಣಗಳನ್ನು ಧರಿಸಿರದೆ, ಯಾರೋ ಸಾಮಾನ್ಯ ಕೂಲಿಕಾರ ಎಂದಾದರೆ 'ಯಾರೋ, ಘಾಟಿ' ಎಂದು ಸುಮ್ಮಗಾಗುತ್ತಾರೆ. ಸಾವಿನ ಸಾನ್ನಿಧ್ಯದಲ್ಲಿ ಸುಶಿಕ್ಷಿತ ಮಧ್ಯಮವರ್ಗವು ಶಹರಗಳಲ್ಲಿ ವರ್ತಿಸುವ ರೀತಿ ಇದು. ಹಾಗೆಯೇ ತಿರುಪೆ ಬೇಡಲು ಕಣ್ಣಿಲ್ಲದ ಕುರುಡನೊಬ್ಬ ಗಾಡಿಯೊಳಗೆ ಬಂದರೆ, 'ಇವರೆಲ್ಲ ಠಕ್ಕರು; ಸುಲಿಯಲು ಒಂದು ಉಪಾಯ ಇದು' ಎಂದು ಬಿಡುತ್ತಾರೆ. ಬಡ ಕಾರ್ಮಿಕನೊಬ್ಬ ಬಳಿಯಲ್ಲಿ ಕುಳಿತಿದ್ದರೆ, ತನ್ನ ಬಟ್ಟೆಯ ತುದಿಗೆ ಕಟ್ಟಿದ್ದ ಗಂಟು ಬಿಚ್ಚಿ, ಕಾಲಾಣೆಯನ್ನೋ ಅರ್ಧಾಣೆಯನ್ನೋ ಕೊಡುತ್ತಾನೆ. ಆತ ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ. ಯಾವ ಸಮಾಧಾನ

ವನ್ನೂ ಅಪೇಕ್ಷಿಸುವುದಿಲ್ಲ. ಆದರೆ ಮಧ್ಯಮ ವರ್ಗದ ಜನಕ್ಕೆ ಈ ತಾತ್ವಿಕ ಕಳಕಳಿ ಸಹಾಯ ಮಾಡದಿರಲು ಒಂದು ನೆಪ. ಭಿಕ್ಷುಕರಿಗೆ ಸಹಾಯ ಮಾಡಿದಷ್ಟಕ್ಕೆ ಭಿಕ್ಷಾಟನೆಯ ಸಮಸ್ಯೆಯ ನಿವಾರಣೆಯಾದಂತಾಗುವುದಿಲ್ಲವೆಂಬ ತಿಳಿವಳಿಕೆಯಿಂದ ಅವರು ಆ ರೀತಿ ಮೂಗು ಮುರಿಯುತ್ತಿರುವುದಲ್ಲ. ಹೇಗಾದರೂ ತೊಲಗಿ ಹೋಗಲಿ ಎಂಬ ಸ್ವಾರ್ಥಪ್ರೇರಿತಭಾವ ಮನದಲ್ಲಿ; ಪ್ರತ್ಯಕ್ಷವಾಗಿ ಒಂದು ತತ್ವದ ಸಮರ್ಥನೆ. ಈ ವಿರೋಧಾಭಾಸವೇ ಶಹರಿನ ಮಧ್ಯಮ ವರ್ಗದ ಜನರ ಕುಟುಂಬಜೀವನದ ಒಂದು ವೈಶಿಷ್ಟ್ಯ. ಅಲ್ಲಿ ಹೆಡೆಯರಳಿಸಿ ನಿಂತಿರುವುದು ಸಮಾಜಜೀವನವನ್ನೇ ವಿರೋಧಿಸುವ ಒಂದು ಸ್ವಾರ್ಥಪ್ರವೃತ್ತಿ.

ಈ ರೀತಿಯ ಅಪ್ರಾಮಾಣಿಕ ಜೀವನ ನಡೆಸುವುದು ವ್ಯವಹಾರವೆನ್ನುವಷ್ಟರ ಮಟ್ಟಿಗೆ ಮುಂದುವರಿದಿರುವುದನ್ನು ಶಹರಗಳಲ್ಲಿ ನಾವು ಕಾಣಬಹುದು. ಇದಕ್ಕೆ ಕಾರಣಗಳು ಹಲವಾರು. ಮೊದಲಾಗಿ ಶಿಕ್ಷಣ ಕುದುರಿಸಿದ ಚಿಕಿತ್ಸಕ ಪ್ರವೃತ್ತಿ ನಮ್ಮ ನೀತಿಮೂಲ್ಯಗಳಲ್ಲಿ ಬದಲಾವಣೆಯಾಗಬೇಕೆಂಬ ಭಾವನೆಗೆ ಎಡೆಗೊಟ್ಟಿದೆ. ಆದರೆ ಇದೇ ಭಾವನೆಯನ್ನು ಅದರ ಕ್ರಮಾನುಗುಣ ಮುಗಿತಾಯದೆಡೆ ಕೊಂಡೊಯ್ಯದಂತೆ ಶಹರಿನ ಅವರಣವೂ ಯಾಂತ್ರಿಕ ಜೀವನವೂ ನಿಯಂತ್ರಿಸಿ ರೂಪಿಸಿದ ಒಂದು ಸ್ವಾರ್ಥಪ್ರವೃತ್ತಿ ತಡೆಯಾಗಿ ನಿಂತಿದೆ. ಶಹರಿನ ಜೀವನದಲ್ಲಿ ಸಹಜವಾಗಿಯೇ ಅಡಕವಾಗಿರುವ ಏರುಪೇರುಗಳ ಭೀತಿಯು, ದುಡ್ಡನ್ನೇ ದೈವವೆಂದು ಭಾವಿಸಲು ಎಡೆಗೊಡುತ್ತಿದೆಯಾಗಿ, ಜೀವನದಲ್ಲಿ ಅದರ ಆರಾಧನೆಯಷ್ಟೇ ಪ್ರಾಮಾಣಿಕ ವ್ಯವಹಾರವಾಗಿ ಉಳಿಯುತ್ತಿದೆ. ದುಡಿಮೆಯೊಂದೆ ಜೀವನದ ಮಹತ್ತರ ದರ್ಶನವಾಗಿ, ಗಳಿಕೆಯೊಂದೆ ಹಿರಿಯ ಆದರ್ಶವಾಗಿ, ತನ್ನನ್ನು ಹೊಂದಿಕೊಂಡವರನ್ನುಳಿದು ಇತರರೆಲ್ಲರನ್ನು ಮರೆಯುವುದು ಸ್ವಾಭಾವಿಕವೆನ್ನುವಂತೆ ಅವಕಾಶದ ನೆಪ ಮುಂದೆ ಬರುತ್ತಿದೆ. ಇವೆಲ್ಲವುಗಳ ಜೊತೆಗೆ, ಶಹರ ಒಡ್ಡುವ ಪ್ರಲೋಭನಗಳ ಮುಂದೆ ಪತಂಗದಂತೆ ಭ್ರಮಿಸುತ್ತಿರುವ ಚಿತ್ತವೃತ್ತಿಯನ್ನು ನಿಯಂತ್ರಿಸಲು ಸಮರ್ಥವಾಗದೆ, ಅಡ್ಡದಾರಿ ಹಿಡಿಯದೆ ಹೋದರೂ ವ್ಯಕ್ತಿ ತನ್ನ ಹಾಗೂ ತನ್ನವರ ಕುರಿತು ಅತೃಪ್ತಿ, ಅಗೌರವ, ಅಸಮಾಧಾನಗಳನ್ನು ತಳೆಯುವಂತಾಗುತ್ತದೆ. ಇದರಿಂದ ಕುಟುಂಬಜೀವನದ ಮೇಲಾಗುವ ಪರಿಣಾಮಗಳನ್ನು ಊಹಿಸಿಕೊಳ್ಳಬಹುದು.

ಇವೆಲ್ಲ ಕಾರಣಗಳಿಂದಾಗಿ ತೋರುವ ಒಂದೇ ಒಂದು ದಾರಿ ಪಲಾಯನವಾದ. ಮಧ್ಯಮ ವರ್ಗದ ಕುಟುಂಬಗಳು ಬಹಳ ಮಟ್ಟಿಗೆ ಅನುಸರಿಸುತ್ತಿರುವುದು ಅದನ್ನೇ. ಹೊಣೆಗಾರಿಕೆಯನ್ನೆಲ್ಲ ಮರೆತು ಜೀವನದಿಂದ ಸಾಧ್ಯವಾಗುವಷ್ಟು ಪ್ರಯೋಜನಗಳನ್ನು ಪಡೆಯೋಣ ಎಂಬ ಭಾವನೆಯನ್ನೇ ಹೆಚ್ಚಿನ ಜನ ಆಶ್ರಯಿಸುತ್ತಾರೆ. ಶಹರಿನ ಜೀವನದ ಯಾಂತ್ರಿಕ ಸ್ವರೂಪವನ್ನು ಎಲ್ಲ ಒಪ್ಪಿಕೊಳ್ಳುತ್ತಾರೆ. ಅದರಿಂದ ಬಿಡುಗಡೆ ಪಡೆಯಬೇಕೆಂಬ ಆಶೆಯನ್ನು ವ್ಯಕ್ತಪಡಿಸುತ್ತಾರೆ. ಆದರೆ ಒಂದು ವೇಳೆ ಅಂಥ ಅವಕಾಶ ಬಂದೊದಗಿದರೂ ಅದನ್ನು ಉಪಯೋಗಿಸಿಕೊಳ್ಳುವವರು ಬಹಳ ಕಡಿಮೆ ಮಂದಿ.

ಶಹರಗಳಲ್ಲಿ ಕುಟುಂಬವ್ಯವಸ್ಥೆಯ ಶೈಥಿಲ್ಯಕ್ಕೆ ಆರ್ಥಿಕ ಒತ್ತಡ ಅಥವಾ ಉತ್ತಮ ಬದುಕಿನ ಪ್ರಲೋಭನ ಒಂದು ಮುಖ. ವಸತಿಯ ಸಮಸ್ಯೆ ಇದಕ್ಕೆ ಪೋಷಕವಾಗಿರುವ ಇನ್ನೊಂದು ಮುಖ. ಗಂಡ ಹೆಂಡತಿ ಮಕ್ಕಳನ್ನುಳಿದು ಇತರರು ಜೊತೆಗೆ ನಿಲ್ಲುವುದು ಸಾಧ್ಯವೇ ಇಲ್ಲವೆನ್ನುವಂತೆ ನಿರ್ಬಂಧಿಸಲಾಗುತ್ತಿರುವ ವಸತಿಯ ಕೊರತೆ. ಯಂತ್ರದಂತೆ ಒಂದು ವ್ಯವಸ್ಥಿತ ಜೀವನಕ್ಕೆ ಹೊಂದಿಕೊಂಡಿರುವ ಮಧ್ಯಮ ವರ್ಗದ ನಾಗರಿಕ ತನ್ನೆಡೆಗೆ ಆಪ್ತರ ಆಗಮನವೂ ಅನಧಿಕೃತ ಪ್ರವೇಶ ಎಂದು ತಿಳಿಯುತ್ತಾನೆ. ಹಿಂದೆ ಧರ್ಮದ ಭೀತಿ ಸಾಮಾಜಿಕ ರಕ್ಷೆಯಾಗಿದ್ದಂತೆ ಕುಟುಂಬದ ರಕ್ಷೆಯೂ ಆಗಿದ್ದಿತು. ಇಂದು ಬೆಳಕಿಗೆ ಬರುತ್ತಿರುವ ಹೊಸ ಹೊಸ ತತ್ವಗಳ, ಸಿದ್ಧಾಂತಗಳ ಹಿನ್ನಲೆಯಲ್ಲಿ ಶಹರಿನ ಮಧ್ಯಮ ವರ್ಗದ ನಾಗರಿಕ ಬದುಕನ್ನು ವಿಮರ್ಶಿಸುವ ಗೊಡವೆಗೇ ಹೋಗುವುದಿಲ್ಲ. ಹಳೆಯ ನೀತಿಮೌಲ್ಯಗಳು ಸರಿಯಲ್ಲವಾದರೆ ಹೊಸವನ್ನು ಕಂಡುಕೊಳ್ಳಲು ಆತ ಸಿದ್ಧನಿಲ್ಲ. ಆತನ ಜೀವನವನ್ನು ನಿಯಂತ್ರಿಸುವುದು ಗತಿಸಹಜ ಸಿದ್ಧಾಂತ: ಪ್ರತಿಭಟನೆಯಿರದ ದಾರಿಯನ್ನೆ ಅನುಸರಿಸುವುದು. ಶಹರಿನ ಕೇಂದ್ರೀಕರಣದೊಂದಿಗೆ ಕುಟುಂಬದ ವಿಕೇಂದ್ರೀಕರಣ ಹೀಗೆ ಆಗುತ್ತಿದೆ.

ಒಂದೆಡೆ ಕುಟುಂಬಸಂಸ್ಥೆಯ ಅವನತಿ ಆರ್ಥಿಕ ಕಾರಣಗಳಿಂದಾಗಿ ಆಗುತ್ತಿದೆಯಾದರೆ, ಇನ್ನೊಂದೆಡೆ ಶಹರಿನ ಪ್ರಲೋಭನಗಳ ಸೀಮೆಯಲ್ಲಿ, ಮಾನವನ ನಿಸರ್ಗಸಹಜ ಪ್ರವೃತ್ತಿಗಳಿಂದ ಇನ್ನೊಂದು ವಿಧದ ಪರಿಣಾಮವಾಗುತ್ತಿದೆ. ಅದು ಗಂಡುಹೆಣ್ಣಿನ ಸಮಸ್ಯೆಗೆ ಸಂಬಂಧಿಸಿದುದು. ಈ ಮೊದಲೇ ಹೇಳಿದಂತೆ, ವಸತಿಯ ಸಮಸ್ಯೆಯಿರುವ ಶಹರಿನ ನಾಗರಿಕನ ಜೀವನದಲ್ಲಿ ಗೃಹಸುಖವೆನ್ನುವುದು ಅದರ ವಿಶಾಲ ಅರ್ಥದಲ್ಲಿ ದೊರಕದಂತೆ ಮಾಡಿದೆ. ಒಂದೆರಡು ಕೋಣೆಗಳಲ್ಲಿ ಎಲ್ಲ ಸೌಖ್ಯಗಳ ಬ್ರಹ್ಮಾಂಡವನ್ನು ನಿರ್ಮಿಸಿಕೊಳ್ಳಬೇಕಾದ ಪ್ರಮೇಯವಿರುತ್ತ, ಇಂಥ ಜೀವನದಲ್ಲಿ ಸೌಂದರ್ಯದ ಕಲ್ಪನೆಯೂ ಉದಯಿಸುವದು ಸಾಧ್ಯವಿಲ್ಲವೆನ್ನುವಂಥ ಪರಿಸ್ಥಿತಿಯಲ್ಲಿ, ತನ್ನನ್ನೇ ಹೊಂದಿಕೊಂಡಿರುವ ಹೆಂಡಿರುಮಕ್ಕಳ ಯೋಗಕ್ಷೇಮವೂ ಹೊರೆಯಾಗಿ ಕಾಣಿಸುವುದು ಸ್ವಾಭಾವಿಕವೆ. ಇಂಥ ದಾಂಪತ್ಯಜೀವನದಲ್ಲಿ ಗಂಡ-ಹೆಂಡಿರು ಸಮಾನಧರ್ಮದವರಾದರೆ ಆ ಜೀವನ ಸ್ವಲ್ಪಮಟ್ಟಿಗಾದರೂ ಸಹ್ಯವಾಗಬಹುದು. ಹಾಗಿರದೆ ಹೋದರೆ, ಗೃಹಸುಖವನ್ನು ಕಾದುಕೊಂಡು ಬರುವ ಹಿರಿಯರ ಭೀತಿಯ ರಕ್ಷೆಯೂ ಇಲ್ಲದಂಥ ಶಹರಿನಲ್ಲಿ, ದಾಂಪತ್ಯದಲ್ಲಿ ವಿರಸ ಮೂಡಿದಾಗ, ಅದು ನಿತ್ಯ ನರಕ. ಹೊರಗೆ ಹೆಜ್ಜೆಹೆಜ್ಜೆಗೂ ಪ್ರಲೋಭನ. ಇಂಥ ಪರಿಸ್ಥಿತಿಯಲ್ಲಿ ಗಂಡು ತನ್ನ ಚಾಪಲ್ಯವನ್ನು ತೀರಿಸಿಕೊಳ್ಳುವಷ್ಟರ ಮಟ್ಟಿಗೆ ಮುಂದುವರಿಯದಿದ್ದರೂ ಹೊರಗೆ ಅಡ್ಡಾಡಿಯಾದರೂ ಮನಸ್ಸಿನ ತೊಳಲಾಟವನ್ನು ಸೀಮಿತಗೊಳಿಸಬಲ್ಲುದು. ಆದರೆ ಹೆಣ್ಣಿಗೆ ಅದೂ ಸಾಧ್ಯವಿಲ್ಲ. ಪಾರಿವಾಳದ ಗೂಡಿನಂಥ ಒಂದೆರಡು ಕೋಣೆಗಳಲ್ಲಿ ವಿರಸ ವೈಮನಸ್ಯಗಳು ಹೊಗೆಯಾಡುವಲ್ಲಿ, ಮುಂದಿನ ಪೀಳಿಗೆಗೆ ಹೊಸದಾದ ಯಾವ ನೀತಿಮೂಲ್ಯಗಳನ್ನು ಕೊಡಲು ಆಕೆ ಸಮರ್ಥಳಾದಾಳು?

ಕುಟುಂಬಜೀವನ ಉತ್ತಮವಾಗಿರಲು ಅವಶ್ಯವಾಗಿ ಬೇಕಾದ ದಾಂಪತ್ಯದ ಸಮರಸತೆಗೆ ಭಂಗ

ಬರುವಂಥ ಸ್ಥಿತಿಗತಿಗಳ ಮಾತು ಹೀಗಾದರೆ, ಸಂತಾನದ ಪ್ರಶ್ನೆಯೂ ಇನ್ನೊಂದು ರೀತಿಯಲ್ಲಿ ಮಧ್ಯಮ ವರ್ಗದ ನಾಗರಿಕರನ್ನು ಕಾಡುತ್ತಿದೆ. ಆತ ಉತ್ತಮ ಬದುಕಿಗಾಗಿ ಮಾಡುತ್ತಿರುವ ಹೋರಾಟದಲ್ಲಿ ಒಂದು ವೇಳೆ ಅಪ್ರಾಮಾಣಿಕತೆ, ಅನ್ಯಾಯಗಳನ್ನೆ ಆಶ್ರಯಿಸಿದರೂ ಸುಖಜೀವನದ ಕಲ್ಪನೆ ಮರೀಚಿಕೆಯೆ ಆಗಬಹುದು. ಕಾರಣ, ನಾಗರಿಕತೆ ಒದಗಿಸುವ ಸೌಕರ್ಯಗಳಿಗೆ ಮಿತಿಯಿಲ್ಲ. ಹೀಗಿರುತ್ತ, ಸಾಮಾನ್ಯ ಜೀವನ ನಡೆಸುವ ಮಧ್ಯಮ ವರ್ಗದ ನಾಗರಿಕನ ಹೋರಾಟ, ಬರೀ ರೊಟ್ಟಿ ಬಟ್ಟೆಯ ಹೋರಾಟವಾಗಿಯೇ ಕೊನೆಯತನಕವೂ ಸಾಗುವುದು. ಇಂಥ ಪರಿಸ್ಥಿತಿಯಲ್ಲಿ, ಹೊಣೆಗಾರಿಕೆಯಿಂದ ವಿಮುಕ್ತವಾದ ಸುಖಜೀವನದ ಕಲ್ಪನೆಗೆ ವಿಘಾತಕವಾದ ಹೆಚ್ಚಿನ ಸಂತಾನವನ್ನು ಆತ ಸ್ವಾಭಾವಿಕವಾಗಿಯೇ ಅಪೇಕ್ಷಿಸುವುದಿಲ್ಲ. ಆದರೆ ಸಂಯಮದ ಜೀವನ ನಡೆಸುವುದೂ ಆತನಿಗೆ ಆಗದ ಮಾತು. ಈ ರೀತಿ ಸಂತಾನವನ್ನೆ ಉಪೇಕ್ಷೆಯಿಂದ ನೋಡುವ ದೃಷ್ಟಿ ಮೊಳೆಯಲು ಶಹರಿನ ಜೀವನ ಸಹಕಾರಿಯಾಗಿರುತ್ತ, ಇದಕ್ಕೆ ಒಳಪಟ್ಟ ನಾಗರಿಕನಿಂದ ಮುಂದಿನ ಪೀಳಿಗೆ ಯಾವ ರೀತಿಯ ನಿಯಂತ್ರಣ, ನಿರ್ದೇಶನಗಳನ್ನು ಸಂಪಾದಿಸೀತು?

ಶಹರಗಳ ಜೀವನದ ಕುಟುಂಬವ್ಯವಸ್ಥೆಯಲ್ಲಿ ಈಗೀಗ ಆರ್ಥಿಕ ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳುತ್ತಿರುವ ಸ್ತ್ರೀಯೂ ಒಂದು ಸಮಸ್ಯೆಯೇ ಆಗಿದ್ದಾಳೆ. ನಮ್ಮ ವಿವಾಹಪದ್ಧತಿಯಲ್ಲಿ ವರದಕ್ಷಿಣೆಯ ಸಮಸ್ಯೆ ತನ್ನ ಹಾವಳಿಯನ್ನು ನಡೆಸಿಕೊಂಡು ಬಂದಿರುವ ವಿಚಾರ ತಿಳಿದುದೇ. ಮುಂಬಯಿಯಂಥ ಶಹರುಗಳಲ್ಲಿ ಇದು ಇನ್ನಷ್ಟು ಹೆಚ್ಚು. ವಸತಿ ದೊರಕಿಸಿಕೊಳ್ಳಲು ಹಣ ಬೇಕು; ಅದಕ್ಕಾಗಿ ವರದಕ್ಷಿಣೆ ಬೇಕು. ಸಂಸಾರ ಹೂಡಲು ಹಣ ಬೇಕು; ಅದಕ್ಕಾಗಿ ಹಣ ಬೇಕು. ಹೀಗೆ ವಿಕ್ರಯದ ತಳಹದಿಯಲ್ಲಿ ನಿಂತ, ನಿಲ್ಲುವ ದಾಂಪತ್ಯದಲ್ಲಿ ವಿರಸ ಬೆಳೆಯಲು ಎಷ್ಟು ಅವಕಾಶ ಬೇಕು ಎಂಬ ಸತ್ಯವನ್ನು ಕಡೆಗಣಿಸಿದರೂ ಆರ್ಥಿಕ ಸ್ವಾತಂತ್ರ್ಯ, ಸ್ವಾವಲಂಬನಗಳ ಭರವಸೆಯ ಜಗತ್ತು ಕಣ್ಣ ಮುಂದಿರುವ ಸ್ತ್ರೀ ಇನ್ನೊಂದು ರೀತಿಯಿಂದ ಒಂದು ಸಮಸ್ಯೆಯಾಗಿದ್ದಾಳೆ ಎಂದು ಹೇಳಬೇಕಾಗುವುದು. ದಂಪತಿಗಳಿಬ್ಬರೂ ದುಡಿಯತೊಡಗಿದರೆ, ಪರಸ್ಪರರನ್ನು ಅರಿತುಕೊಳ್ಳಲು, ಸಹಕಾರದ ದಾಂಪತ್ಯಜೀವನ ಸಾಗಿಸಲು ಅನುಕೂಲವಿರುವುದಾದರೂ ಪರಸ್ಪರರ ರೀತಿ ನೀತಿಗಳಿಗೆ ಅಪಾರ್ಥ ಕಲ್ಪಿಸಲೂ ಅವಕಾಶವಿದೆ. ಹಾಗಲ್ಲದೆ ಹೋದರೂ ದಂಪತಿಗಳಿಬ್ಬರೂ ದುಡಿಯುವ ಸಂದರ್ಭದಲ್ಲಿ ಸ್ವಾಭಾವಿಕವಾಗಿಯೇ ನಮ್ಮ ಕುಟುಂಬಪದ್ಧತಿಯಲ್ಲಿ ಉಂಟಾಗುವ ಕ್ರಾಂತಿಕಾರಕ ಪರಿವರ್ತನ ಹೊಸತೊಂದು ಸಾಮರಸ್ಯವನ್ನು ಸಾಧಿಸಬೇಕಾಗಿದೆ. ಹೊಸದೊಂದು ತಳಹದಿಯ ಮೇಲೆಯೇ ಆ ವ್ಯವಸ್ಥೆ ನಿಲ್ಲಬೇಕಾಗಿದೆ. ಆ ವ್ಯವಸ್ಥೆಗೆ ಭಾರತೀಯ ಬೇರುಗಳಿಲ್ಲವೆಂಬುದು ಸುಸ್ಪಷ್ಟವಿರುತ್ತ ಅದು ಕಂಡುಕೊಳ್ಳಬಹುದಾದ ನೆಲೆ, ಪಾಶ್ಚಿಮಾತ್ಯ ದಾಂಪತ್ಯಪದ್ಧತಿಯ ಒಂದು ದುರ್ಬಲ ಅನುಕರಣ ಮಾತ್ರ ಆಗದೇ ಎಂಬ ಸಂದೇಹವನ್ನು ಇಲ್ಲಿ ವ್ಯಕ್ತಪಡಿಸಬೇಕಾಗಿದೆ.

ಭಾರತೀಯ ಕುಟುಂಬಪದ್ಧತಿಯಲ್ಲಿ ಭಾರತೀಯವೇ ಆದ ಸಂಸ್ಕಾರವನ್ನುಳಿಸಲು ಸ್ವಲ್ಪ ಮಟ್ಟಿಗಾದರೂ ಸಹಾಯ ಮಾಡುತ್ತಿರುವುದು ಮಾತೃಭಾಷೆ. ಈ ಭಾಷೆಯ ಬಾಂಧವ್ಯ ಶಹರಿನಲ್ಲಿ ನಷ್ಟವಾಗುತ್ತಿರುವ ಬಗೆಯನ್ನು ಪರಿಶೀಲಿಸಿದಾಗ, ನಮ್ಮ ಕುಟುಂಬವ್ಯವಸ್ಥೆಯ ಅವನತಿಗೆ ಇದೂ ಒಂದು ಕಾರಣವೇ ಎಂದು ಶಂಕಿಸಬೇಕಾಗಿದೆ. ಅದೂ ಕನ್ನಡಿಗರಿಗೆ ಈ ಮಾತು ಇನ್ನಷ್ಟು ಸ್ಪಷ್ಟವಾಗಿ ಅನ್ವಯಿಸುತ್ತದೆ. ಮುಂಬಯಿಯಲ್ಲೇ ಈ ಮಾತಿನ ಹಿಂದಿರುವ ಸತ್ಯವನ್ನು ನಾವು ಕಾಣಬಹುದು. ಒಂದೇ ಭಾಷೆಯ ಜನ ಯಾವ ವಿಭಾಗದಲ್ಲಿ ಗುಂಪು ಗುಂಪಾಗಿ ನಿಲ್ಲುವುದು ಸಾಧ್ಯವಿದೆಯೋ, ಅಲ್ಲಿ ಕುಟುಂಬಜೀವನದ ಹಾಗೂ ಸಮಾಜಜೀವನದ ಸೌಂದರ್ಯವನ್ನು ಒಂದಲ್ಲ ಒಂದು ವಿಧದಿಂದ ಕಾಣುತ್ತೇವೆ. ತಮಿಳರಲ್ಲಿ, ಮರಾಠೀ, ಗುಜರಾತೀ ಜನರಲ್ಲಿ ನಾವು ಕಾಣುತ್ತಿರುವ ಸಮಾಜಜೀವನವನ್ನು ಕನ್ನಡಿಗರಲ್ಲಿ ಕಾಣುತ್ತಿಲ್ಲ. ತಮಿಳರಿಗಿಂತ ಹೆಚ್ಚು ಸಂಖ್ಯೆಯಲ್ಲಿರುವ ಕನ್ನಡಿಗರಿಗೆ ಈ ಗತಿ ಯಾಕೆ? ಅವರು ಶಹರಿನೊಳಗೆ ಚೆದುರಿ ಹೋಗಿದ್ದಾರೆ. ಈ ಚೆದುರುವಿಕೆ, ಭೀತಿಯ ರಕ್ಷೆಯಿಲ್ಲದ ಪ್ರವೃತ್ತಿವಿಶೇಷಗಳು ಬೆಳೆಯಲು ಆಸ್ಪದವಿರುವ ಶಹರಿನಲ್ಲಿ ಸಮಾಜಜೀವನಕ್ಕೆ ಘಾತಕವಾಗಿ ಪರಿಣಮಿಸಿದೆ. ತನ್ನ ಭಾಷೆ, ತನ್ನ ಸಂಸ್ಕೃತಿ, ತನ್ನ ನಾಡು ಎಂಬ ವಿಚಾರ ಹೆಮ್ಮೆ ಬೆಳೆಯದಂತೆ ತಡೆಯಾಗಿ ನಿಂತಿದೆ.

ಹೀಗೆ ಶಹರಗಳಲ್ಲಿ ಮಧ್ಯಮ ವರ್ಗದ ಕುಟುಂಬ ವ್ಯವಸ್ಥೆಯ ಮೇಲೆ ವಿವಿಧ ರೀತಿಗಳಿಂದ ಆಗುತ್ತಿರುವ ದಾಳಿ ನಾಗರಿಕತೆಯ ಬಳುವಳಿ. ಈ ದಾಳಿಯ ಹಾವಳಿ ಪಟ್ಟಾಗಲು ಸುಶಿಕ್ಷಿತ ಮಧ್ಯಮ ವರ್ಗದ ಜನತೆಯ ಅಜ್ಞಾನವೂ ಸಹಾಯಮಾಡಿದೆ. ಈ ಶಿಥಿಲತೆಯ ಕುರಿತಾದ ಜ್ಞಾನವಾದರೂ ಶಹರಿನ ಮಧ್ಯಮ ವರ್ಗದ ನಾಗರಿಕರಲ್ಲಿ ಮೊಳೆಯ ತೊಡಗಿದರೆ, ಈ ಅವನತಿಯ ಗತಿಯನ್ನು ಸ್ವಲ್ಪಮಟ್ಟಿಗಾದರೂ ನಿಯಂತ್ರಿಸಲು ಸಾಧ್ಯವಾಗಬಹುದು. ಶಹರಗಳಲ್ಲಿ ಇಂದು ಆಗುತ್ತಿರುವ ಕೇಂದ್ರೀಕರಣವನ್ನು ತಡೆಗಟ್ಟುವುದರಿಂದ ಇನ್ನಷ್ಟು ಸುಧಾರಣೆ ಸಾಧ್ಯವಾಗಬಹುದು. ಇದೇನಿದ್ದರೂ ನಮ್ಮ ಶಹರಗಳಲ್ಲಿ ಮುಂದಿನ ಪೀಳಿಗೆಯ ಹಿತದೃಷ್ಟಿ, ಸಾಮಾಜಿಕವಾಗಿ ಬೆಳೆಯ ತೊಡಗದೆ, ಸಾಮಾಜಿಕ ನೀತಿಮೂಲ್ಯಗಳಿಂದ ಪ್ರೇರಿತವಾಗದೆ, ಸಮಾಜವಿರೋಧಿ ಪ್ರವೃತ್ತಿಯಿರುವ ವೈಯಕ್ತಿಕ ನೀತಿಮೂಲ್ಯಗಳಿಗೆ ಒಳಪಡುವಂತಾದರೆ, ಭಾರತೀಯ ಕುಟುಂಬ ವ್ಯವಸ್ಥೆಯ ಅವಸಾನವನ್ನು ಶಹರಗಳಲ್ಲಿ ಕಾಣಲು ಬಹಳ ದಿನ ಕಾಯಬೇಕಾಗಿಲ್ಲವೆಂದು ತೋರುತ್ತದೆ.

ಭಾಗ್ಯವು ಮನುಷ್ಯರನ್ನು ಬದಲಾಯಿಸುವದಿಲ್ಲ;
ಕೇವಲ ಅವರ ನಿಜಸ್ವರೂಪವನ್ನು ಬಯಲಿಗಿಡುತ್ತದೆ. —ರಿಕೊಬೊನಿ

ಮಾತೆಗೆ! ಮಾತು

ಮಾತೇ! ಸುಮ್ಮಾನದ
ಜ್ಯೋತೀಯ ಮಾತಾಗಿ
ನೀತಿ ಸಂಜೀವಿನಿಯೆ
ಓತು ಜನಮನವನ್ನೆತ್ತ ಬಾ ॥೧॥

ಗಜಗೌರಿ! ನೀನೆನ್ನ
ಭುಜದಲ್ಲಿ ಅಡಿಯಿಟ್ಟು
ಅಜಲೋಕದಿಂದಿಳಿದು
ಅಜಗಜಾಂತರ ತೋರು ಬಾ ॥೨॥

ಬಾನ ಬಾಗಿಲ ತನಕ
ಬಾಣದೇಣಿಯ ಕಟ್ಟಿ
ಜಾಣ ನಾಲಿಗೆ ಕುಣಿಸಿ
ಬಾಣಿ! ಎನ್ನಾ ವೀಣೆಗೈ ಬಾ ॥೩॥

ಮಾತು ಮಾತೆಗೆ ಸೋತು
ಓತು ಒಳ್ನುಡಿಯಾಗಿ
ಮಾತು ಮಾತಿಗೆ ಸತ್ಯ
ಚೇತನದ ಚೆಲುವಾಗಿ ಬಾ ॥೪॥

ಬಗೆಭಾವ ಕೆನೆಯಾಗಿ
ನಗುನನೆಯನರಳೀಸಿ
ಜಗರಂಗ ಬೆಳಗೀಸಿ
ಮಗನನುದ್ಧರಿಸಲೋಡಿ ಬಾ ॥೫॥

—ಗಿರೀಶ

ಮರಣರಹಿತನ ಬೆರೆಯಲು*

ಆ ನಿರಾಕಾರನ ಸುಚಿದ್ಘನ
ರೂಪ ಮೌಕ್ತಿಕ ಪಡೆಯಲು
ನಾನಿಳಿವೆ ಸಾಕಾರಕೋಟಿಯ
ಬಲುಗಡಲ ತಳದೊಡಲೊಳು

ಗಾಳಿ ಮಳೆ ಬಿಸಿಲುಗಳ ಬಿರುಬಿಗೆ
ಸೀಳಿಹುದು ತನುನೌಕೆಯು
ಸಾಲದಿದು ದಡದಡಕೆ ಸಾಗಲು;
ಛಿದ್ರವಿದರ ಪತಾಕೆಯು

ತುಂಗ ಜಲಧಿತರಂಗರಂಗದಿ
ನಾನು ಕ್ರೀಡಿಪ ಕಾಲವು
ಹಿಂಗಡೆಗೆ ಹೋಗಿಹುದು; ಬಾರದು
ಮರಳಿ ಗತಿಸಿದ ಕಾಲವು

ಮರಣವನು ಪ್ರತಿ ಕ್ಷಣವು ಕರೆವೆನು
ಮರಣರಹಿತನ ಬೆರೆಯಲು,
ಬೆರೆತು ಬದುಕಿನ ವಿವರವಿವರವ
ನವನ ಸನ್ನಿಧಿಗೊರೆಯಲು

ಶ್ರೋತೃವೃಂದದ ಮಂದಿರದ ನಡು-
ಮಧ್ಯದತಲಾಗಾಧದ
ಒತ್ತಿನಲಿ ಪುಟಿಪುಟಿದು ಬಹ ಶ್ರುತಿ
ರಹಿತ ತಂತಿಯ ನಾದದ

ಜೊತೆಯೊಳೀ ಜೀವನದ ವೀಣೆಯ-
ನೆತ್ತುವೆನು ಸರಿಪಡಿಸಲು
ಶ್ರುತಿಗೊಳಿಪೆನಿದನಾ ಚಿರಂತನ
ರಾಗಮಾಲೆಯ ನುಡಿಸಲು

ವೀಣೆಯಿದು ನುಡಿನುಡಿದು ಕಡುಬಸ-
ವಳಿದು ಮೌನವನಾಂತೊಡೆ
ಕಾಣಿಸುವೆನಿದನಾ ಮಹಾ ಮೌ-
ನೀಂದ್ರ ಪದಪಂಕಜದೆಡೆ

—ಗಂಗಪ್ಪಾ ವಾಲಿ

* ಶ್ರೀ ರವೀಂದ್ರನಾಥ ಟಾಗೋರ ಅವರ ಆಂಗ್ಲ ಗೀತಾಂಜಲಿಯ ಒಂದು ವಚನದ ಭಾವಾನುವಾದ.



ಲೇಖಕ: ಶ್ರೀ. ಕುತ್ತ್ಯಪಾಡಿ ಗೋಪಾಲಕೃಷ್ಣ ಹೆಗ್ಗಡೆ, ಮುಂಬಯಿ

ಭಾರತ ದೇಶವು ದೇಶ-ವಿದೇಶ ಪ್ರವಾಸಿಗಳ ಭೂಸ್ವರ್ಗ. ಭೂಲೋಕದ ಯಾವೆಡೆಗೂ ಕೀಳೆನಿಸದ-ಏಕೆ-ಮಿಗಿಲೆನಿಸುವ ಅಪೂರ್ವ ಕಲಾವಸ್ತುಗಳು, ಸೃಷ್ಟಿ ಸೌಂದರ್ಯದ ಸ್ಥಳಗಳು ನಮ್ಮಲ್ಲಿವೆ. ಭೂಸ್ವರ್ಗವನ್ನು ನೋಡಬೇಕಾದರೆ ಭಾರತವನ್ನು ನೋಡಬೇಕು ಎಂದು ಜರ್ಮನಿಯ ಮ್ಯಾಕ್ಸಮುಲ್ಲರ್ ಹೇಳಿದ್ದಾರೆ. ಶ್ರೀ. ಕೆ. ಜಿ. ಹೆಗ್ಗಡೆಯವರು ಭಾರತ ರೇಲ್ವೆಯ ಶತಾಬ್ದಿ ಸವಲತ್ತಿನಲ್ಲಿ ಭಾರತದ ಅನೇಕ ದರ್ಶನೀಯ ಸ್ಥಳಗಳನ್ನು ಕಂಡು ಬಂದು ತಮ್ಮ ಅನುಭವವನ್ನು ಇಲ್ಲಿ ವಿವರಿಸಿದ್ದಾರೆ.

ನಾನು ಪ್ರವಾಸಪ್ರಿಯ; ಸಂಚಾರಿ. ಸೌಂದರ್ಯವನ್ನು ಸೌಮ್ಯರೀತಿಯಲ್ಲಿ ಸವಿಯುವ ಪ್ರಬುದ್ಧ ಸಂಸ್ಕಾರ ನನಗಿನ್ನೂ ಒದಗಿಬಂದಿಲ್ಲವಾದರೂ ಕಾಲಡಿಯಲ್ಲಿದ್ದ ಕಮಲವನ್ನು ಕೆಸರು ಕೊಂಪೆಯ ಪುಷ್ಪವೆಂದು ಛೀಗಳೆಯುವಷ್ಟು ಮೂರ್ಖನಲ್ಲ. ಈಗಾಗಲೇ ಮುಂಬಯಿಯ ಸುತ್ತುಮುತ್ತಲಿನ ವಿಹಾರ ಪ್ರವಾಸಗಳನ್ನು ಮುಗಿಸಿದ್ದ ನಾನು ಉತ್ತರ ಭಾರತದ ಕೆಲವೊಂದು ಪ್ರೇಕ್ಷಣೀಯ ಸ್ಥಳಗಳನ್ನಾದರೂ ಕಂಡು ಕೃತಾರ್ಥನಾಗಬೇಕೆಂದು ಬಯಸಿದೆ. ಮುಂಬಯಿ ಜೀವನದಿಂದ ಮುಕ್ತಿ ಯಾಚಿಸಿದೆ.

ನಾನು ಯಾಚಿಸಿದ ಮುಕ್ತಿ ಅಥವಾ ಶಾಂತಿ ಮಾರ್ಗ ಪಾರಮಾರ್ಥಿಕವಲ್ಲ. ಅಂದರೆ ಮರಣಾನಂತರದ ಸದ್ಗತಿಯಲ್ಲ. ಆದರೂ ಹಿಂದುಗಳ ಪವಿತ್ರ ತೀರ್ಥಕ್ಷೇತ್ರ ಕಾಶೀನಗರ ನನಗೆ ಪ್ರವಾಸ ಯೋಗ್ಯವೆನಿಸಿತು.

ಹೆಚ್ಚಿನ ಸಾಧನ ಸಲಕರಣೆಗಳಿಲ್ಲ. ಬಟ್ಟೆ ಬರೆಗಳ ಪೆಟ್ಟಿಗೆ--ಹಾಸುಗೆ ಒಂದೂ ಇಲ್ಲ. ಜೋಲು ಚೀಲವನ್ನು ಹೆಗಲ ಮೇಲೆ ನೇತುಬಿಟ್ಟು ಕಲ್ಕತ್ತಾ ಮೆಯಿಲಿನಿಂದ ಒಂದು ಸಂಜೆ ನಾವು ಮಿತ್ರರು ಪ್ರವಾಸ ಹೊರಟೆವು. ಉಗಿಬಂಡಿ ಓಡಲಾರಂಭಿಸಿತು. ಬೋರಿಬಂದರ ಅಥವಾ ವ್ಹಿಕ್ಟೋರಿಯಾ ನಿಲ್ದಾಣೆಯಿಂದ ಕಲ್ಯಾಣ--ಮನಮಾಡ, ಭೂಸಾವಳ, ಇಟಾರಸಿ, ಜಬ್ಬಲ್‌ಪೂರ, ಕಟ್ನಿ ಮುಂತಾದ ಪ್ರಮುಖ ನಿಲ್ದಾಣಗಳನ್ನು ದಾಟಿದಂತೆ ಮರುದಿನ ರಾತ್ರೆ ಸುಮಾರು ಹನ್ನೊಂದಕ್ಕೆ ಅಲಹಾಬಾದ. ಮರುದಿನ ಕಾಶಿ.

ಕಾಶೀ ನಗರದಲ್ಲಿ ಪ್ರಥಮ ದರ್ಶನವಾದುದು 'ಪಂಡ' ರೆಂಬ ಪೂಜಾರಿಗಳದು. ಧರ್ಮದೇವರ ಹೆಸರಿನಲ್ಲಿ ಈ ಜನರು ಜನಸಾಮಾನ್ಯರನ್ನು ನಿರ್ದಾಕ್ಷಿಣ್ಯವಾಗಿ ಸುಲಿಯುತ್ತಾರೆ. 'ಪರೋಪಕಾರವೇ ಪುಣ್ಯ; ಪರಪೀಡನೆಯೇ ಪಾಪ' ಎಂಬ ಧರ್ಮೋಕ್ತಿ ಕಾಶಿಯ ಶ್ರೀ ವಿಶ್ವನಾಥ ದೇಗುಲದಲ್ಲಿ ಸುವರ್ಣಾಕ್ಷರಗಳಿಂದ ಕೆತ್ತಿರುವದಾದರೂ ಈ ಜನರ ಚಿತ್ರಹಿಂಸೆಯೋ ಅಸಹನೀಯವಾದುದು!

ಹಿಂದೊಂದು ದಿನ ನಮ್ಮೀ ಶ್ರೇಷ್ಠ ಪುಣ್ಯ ಭೂಮಿ ಭಾರತದ ಧಾರ್ಮಿಕ, ಸಾಂಸ್ಕೃತಿಕ, ತೀರ್ಥ ಕ್ಷೇತ್ರವಾಗಿದ್ದ ಕಾಶಿ ಇಂದು ಬರಿ ರೂಪಾಯಿ, ಆಣೆ, ಪೈಗಳ ಲೆಕ್ಕಾಚಾರದ—ಧಾರ್ಮಿಕ ವ್ಯವಹಾರ ಸಂಕೇತವಾದುದನ್ನು ಕಂಡು ನನಗೆ ಬಹಳ ದುಃಖವಾಯಿತು.

ಆದರೂ ಗಂಗೆ ಸಾವಿರಾರು ವರ್ಷಗಳಿಂದಲೂ ಒಂದೇ ಹೃದಯದ ಹರಿವಿನಿಂದ ತುಂಬಿ ತುಳುಕಿ ನಡೆಯುತ್ತಾಳೆ. ಅವಳ ಅಂತಃಕರಣ ನಿರ್ಮಲವಾಗಿದೆ. ಪರಿಶುದ್ಧವೂ ಪವಿತ್ರವೂ ಆಗಿದೆ. ಸ್ಫಟಿಕದಂತಿದ್ದ ಗಂಗಾಜಲ ನಿಜಕ್ಕೂ ಪೂಜನೀಯವೆನಿಸಿತು. ಗಂಗೆಯಲ್ಲಿ ಮಿಂದಾದ ಬಳಿಕ ವಿಶ್ವನಾಥನ ದರ್ಶನಕ್ಕೈದೆವು. ಮೊತ್ತ ಮೊದಲಿನ ವಿಶ್ವನಾಥನ ದೇಗುಲ ಔರಂಗಜೇಬನ ಕೃಪೆಯಿಂದಾಗಿ ಮಸೀದೆಯಾಗಿದೆ. ಅದರ ಮಗ್ಗುಲಲ್ಲೇ ಹೊಸ ದೇವಾಲಯ ನಿರ್ಮಾಣವಾಗಿದೆ. ಬಳಿಯಲ್ಲಿರುವ ಮಸೀದೆಗೂ ನವೀನ ದೇವಸ್ಥಾನಕ್ಕೂ ಎಷ್ಟೊಂದು ಸಾಮ್ಯ! ದೇವಸ್ಥಾನ ಮಹಮ್ಮದೀಯರ ಧರ್ಮ ಅಸಹಿಷ್ಣುತೆಯಿಂದಾಗಿ ಮಸೀದೆಯಾಗಿದ್ದರೂ ಹಿಂದೂ ಶಿಲ್ಪಕೆತ್ತನೆಗಳಿಂದ ತುಂಬಿದ ಪ್ರಾಕಾರಗಳು ತಮಗಾದ ಅನ್ಯಾಯಕ್ಕಾಗಿ ಮೊರೆಯಿಡುವುವೋ ಎಂಬಂತೆ ಭಾಸವಾಗುತ್ತದೆ. ಸುವರ್ಣದ ಹಾಳೆ ಹೊದೆಸಿದ ಗುಮ್ಮಟ ಗೋಪುರಗಳ ವಿಶ್ವನಾಥನ ಮಂದಿರವನ್ನು ಕಂಡು ವಿಶ್ವನಾಥನಿಗೆ ಕೈಮುಗಿದು ನಾವು ಸಾರನಾಥದತ್ತ ರಿಕ್ಷಾಸವಾರಿ ಗೈದೆವು.

ಸುಪ್ರಸಿದ್ಧ ಆಂಗ್ಲಸಾಹಿತಿ ಸಾಮರಸೆಟ್ ಮಾಮರು 'ಚೀನಾದಲ್ಲಿ ಬಳಲುವ ಪ್ರಾಣಿಯೆಂದರೆ ಮನುಷ್ಯ' ಎಂದು ತಮ್ಮ ಒಂದು ಪ್ರಬಂಧದಲ್ಲಿ ಬರೆದಿರುತ್ತಾರೆ. ಭಾರತದಲ್ಲೇನು ಕುದುರೆಯೇ, ಕತ್ತೆಯೇ? ಯಾಂತ್ರಿಕ ವಾಹನಗಳು ಬರುವ ಮುನ್ನ ಮನುಷ್ಯನೇ, ಇಲ್ಲೂ ಕತ್ತೆ-ಕುದುರೆಯಂತೆ ಗೇಯುತಿದ್ದ. ರಿಕ್ಷಾಗಾಡಿ ಎಳೆಯುತಿದ್ದ. ಈಗ ಸಾಯಿಕಲ್ಲು ರಿಕ್ಷಾ ಬಂದಿದ್ದರೂ ಸುಖವೇನು! ಯಂತ್ರದ ಗಾಲಿಗಿಂತಲೂ ಹೆಚ್ಚು ಪ್ರಾಮಾಣಿಕತೆಯಿಂದ ನಮ್ಮ ರಿಕ್ಷಾವಾಲ ಬಂಡಿ ಕಾಲಿಂದ ತಿರುಗಿಸುತಿದ್ದ. ಆತ ಎದ್ದು ಬಿದ್ದು ನಮ್ಮೆರಡು ಜೀವಗಳನ್ನು ಬಂಡಿಯಲ್ಲಿ ಒಯ್ಯುತಿದ್ದ. ಆತನ ಅಸಾಮಾನ್ಯ ತಾಳ್ಮೆ, ಕಷ್ಟಸಹಿಷ್ಣುತೆಯನ್ನು ಕಂಡು ನನಗೆ ಬಹಳ ಕನಿಕರವಾಯಿತು. ಆದರೂ ಗಾಡಿಯನ್ನು ಬಿಟ್ಟುಕೊಟ್ಟು ಕಾಲ್ನಡೆಯಿಂದಲೇ ಸಾಗುವ ಉದಾರ ಬುದ್ಧಿ ಬಾರದಿದ್ದುದಕ್ಕಾಗಿ ಇನ್ನೂ ಮನಸ್ಸು ಮರುಗುತ್ತದೆ.

ಇಕ್ಕಡೆಯಲ್ಲೂ ಹಚ್ಚಹಸುರಿನಿಂದ ಕಂಗೊಳಿಸುವ ಕಹಿ ಬೇವಿನ ಮರಗಳ ತೋಪಿನ, ಬಿಸಿಗಾಳಿ ನಮ್ಮನ್ನು ಸುಂಯಿ ಸುಯ್ಯೆಂದು ಬಾಧಿಸುತಿದ್ದರೂ ಒಡನೆ ಸಾರನಾಥ ಬಂತು.

ಗೌತುಮನು ಬುದ್ಧನಾದ ಬಳಿಕ ಶಾಂತಿ ಸುವಾರ್ತೆಯನ್ನು ಮೊತ್ತಮೊದಲು ಜಗತ್ತಿಗೆ ಸಾರಿದ ಪವಿತ್ರ ಪುಣ್ಯಸ್ಥಳ ಸಾರನಾಥ. ಇಲ್ಲಿನ ಹರಿಣೋದ್ಯಾನದಲ್ಲಿ ಬುದ್ಧ ಬೌದ್ಧೋಪದೇಶವನ್ನು ಮಾಡಿದನಂತೆ. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಕಟ್ಟಲಾದ ವಿಹಾರ, ಚೈತ್ಯ ಮತ್ತು ಬೌದ್ಧ ದೇಗುಲ ಮಂದಿರಗಳು ಇಂದು ಕಾಲನಾಟದಿಂದ ತಮ್ಮ ರೂಪವನ್ನೆ ಕಳಕೊಂಡಿದ್ದರೂ ಅಳಿದುಳಿದ ಅಸ್ತಿವಾರಗಳು ಅಂದಿನ ನಾಗರಿಕ ಸಾಂಸ್ಕೃತಿಕ ನೆಲೆಗಟ್ಟಿನ ಗುಟ್ಟನ್ನು ಪ್ರಕಟಪಡಿಸುತ್ತವೆ. ಧರ್ಮರಾಜಿಕೆಯೆಂಬ ಸ್ತೂಪ ಇಂದೂ ವಿರಾಜಮಾನವಾಗಿ ಶೋಭಿಸುತ್ತ ಬೌದ್ಧಧರ್ಮದ ಹಿರಿಮೆಯನ್ನು ಹೊಗಳುತ್ತಿದೆ. 'ಸತ್ಯಂ ಶಿವಂ ಸುಂದರಂ' ಎಂಬ ಮಾತು ನಿಜವಾದರೆ ಇನ್ನೂರು ಅಡಿಗಿಂತಲೂ ಎತ್ತರವಾಗಿ ತೇರಿನಾಕೃತಿಯಲ್ಲಿ ಇಟ್ಟಂಗಿಗಳಿಂದ ಕಟ್ಟಲ್ಪಟ್ಟ ಈ ಸ್ತೂಪ ಅತ್ಯಾಶ್ಚರ್ಯಕರವಾಗಿದೆ. ಇದಕ್ಕೆ ಬಾಗಿಲ ಕಿಟಕಿಗಳಿಲ್ಲ. ದ್ವಾರ--ಮಹಾದ್ವಾರಗಳಿಲ್ಲ. ತೋರಣ--ಆವರಣವೆಂದಿಲ್ಲ. ಬೋಳು ಮಹಾರಚನೆ. ಇದರರ್ಥವೇನೆಂದು ಪ್ರೇಕ್ಷಕನು ಮಂತ್ರಮುಗ್ಧನಾಗಿ ಮಂಕಾದರಾಯಿತು !

ಸಾರನಾಥದ ವಸ್ತುಸಂಗ್ರಹಾಲಯ ಭಾರತದಲ್ಲೇ ಅಪ್ರತಿಮವಾದುದು. ಬುದ್ಧನ ವಿವಿಧ, ಅಂಗ, ಭಂಗಿ, ಮುಖ ಮುದ್ರೆಗಳ ಶಿಲ್ಪ ವಿಗ್ರಹಗಳನ್ನು ಕಾಣಬೇಕಾದರೆ ಇದರ ದರ್ಶನ ಲಾಭವಾದರೆ ಸಾಕು. ಒಂದಕ್ಕಿಂತ ಇನ್ನೊಂದು ಭಿನ್ನವಾಗಿ, ಚೆಲುವಿನಲ್ಲಿ, ಕೃತಿಯಲ್ಲಿ ಮಿಗಿಲೆನಿಸಿ ಈ ಕೆತ್ತನೆಯ ಸೊಬಗನ್ನು ಸವಿದು ಮನ ದಣಿಯಿತು-ತಣಿಯಿತು ಎಂದಿಲ್ಲ.

ಮೂಲ ಗಂಧಕುಟಿಯೆಂಬುದು ಇನ್ನೊಂದು ಸಮೀಪದಲ್ಲೇ ಇರುವ ಬೌದ್ಧ ವಿಹಾರ. ಇದರ ನಿರ್ಮಾಣ, ಫಿಲಿಫಾಯಿನ್ ದೇಶದ ಒಬ್ಬ ವಿದೇಶಿ ಮಹಿಳೆಯಿಂದಾಯಿತು. ವಿದೇಶೀಯರಿಂದ ಪ್ರೇರಿತವಾಗಿ ಜನ್ಮತಾಳಿದ ಬೌದ್ಧ ದೇಗುಲವಿದು. ಹಿಂದೀಯ ಗೌತಮನಿಗಿಂದು ಹಿಂದೂಸ್ಥಾನದಲ್ಲಿ ಆದರವಿಲ್ಲ ! ಪರದೇಶೀಯ ಚೀನಿ, ಜಪಾನಿ, ಬರ್ಮಿ, ಸಯಾಮಿ ಮತ್ತು ಸಿಂಹಳೀಯರು ಅವನ ಬೌದ್ಧಸಿದ್ಧಿ ಸುಖವುಣ್ಣುವಂತಿದೆ.

ಈ ದೇಗುಲದಲ್ಲಿ ಪದ್ಮಾಸನ ಮಂಡಿತ ಬುದ್ಧದೇವನ ಶಾಂತಿಮುದ್ರೆಯ ಹಿತ್ತಾಳೆಯ ಪ್ರತಿಮೆ ಪ್ರತ್ಯಕ್ಷವಾದಂತೆ ಅಂದರೆ ಜೀವಂತವಾಗಿ ಗೋಚರಿಸುತ್ತದೆ. ಇಲ್ಲಿ ಪೂಜೆಯ ಪೀಡೆಯಾಗಲಿ 'ಪಂಡ'ರ ಕಾಟವಾಗಲಿ ಇಲ್ಲವೇ ಇಲ್ಲ. ದೇಗುಲದೊಳಗೆ ಜಪಾನೀ ಚಿತ್ರಕಾರನೊಬ್ಬ ಬುದ್ಧನ ಜನ್ಮದಿಂದ ಮರಣ ಅಥವಾ ನಿರ್ವಾಣದವರೆಗಿನ ಕಥಾವಿಶೇಷಗಳನ್ನು ಅಳವಡಿಸಿಕೊಂಡು ರಮ್ಯವಾದ ಚಿತ್ರಗಳನ್ನು ಬಣ್ಣಗಳಿಂದ ಬರೆದಿರುತ್ತಾನೆ. ಬುದ್ಧನ ಬಾಲ್ಯ, ಬೆಳವಣಿಗೆ, ವಿದ್ಯಾಭ್ಯಾಸ, ಮದುವೆ, ರಾಜ್ಯತ್ಯಾಗ--ಸಂನ್ಯಾಸ ಮತ್ತು ಧರ್ಮಬೋಧನೆಗಳನ್ನು ನಯನಮನೋಹರವಾಗಿ ಬರೆಯಲಾಗಿದೆ. ನಾನು ಚಿತ್ರಕಲಾವಿದನಲ್ಲ; ಕಲಾವಿಮರ್ಶಕನೂ ಅಲ್ಲ. ಭಾರತೀಯ ಕಲೆಯ ದೃಷ್ಟಿಯಿಂದ ಇದನ್ನು ತುಲನೆ ಮಾಡುವ ಅಥವಾ ವಿಮರ್ಶೆ ಮಾಡುವ ಮಹಾನುಭಾವರಿಗೆ ಅದೆಂತು ಗೋಚರಿಸುವುದೋ ನಾನರಿಯೆ. ನನಗೋ ಇವು ಅತ್ಯಂತ ಪ್ರಿಯವೆನಿಸಿದುವು. ಚಿತ್ರಗಳ ಅನುಪಮ ಸೌಂದರ್ಯವನ್ನು ಕಂಡು ಮನಸ್ಸು ಹಿರಿ ಹಿಗ್ಗಿತು. ಜಪಾನೀ ಶ್ರೇಷ್ಠ ಕಲಾವಿದನ ತಾಳ್ಮೆ, ಶ್ರದ್ಧೆ, ಕೃತಿಗಳಿಗಾಗಿ ತಲೆ ಬಾಗಿತು. ಮುಂಬಯಿಯ ಬಳಿಯಲ್ಲಿನ ಹಾಳುಬಿದ್ದ ಬೌದ್ಧಯುಗದ ಶಿಲ್ಪ-ಗವಿ-ಕಂದರ ದೇಗುಲಗಳನ್ನು ಕಂಡು ಅಸಂತೃಪ್ತನಾಗಿದ್ದ ನನಗೆ ಈ ಶಕಪುರುಷನಿಗೆ ಇಲ್ಲೊಂದು ಜೀವಂತ ಸ್ಮಾರಕವಿದೆಯೆಂದು ತಿಳಿದು, ಬೋಧಿಸತ್ವವನ್ನೂ ನಾವಿನ್ನು ಮರೆಯಲಿಲ್ಲವೆಂದು ಸಂತೋಷವೆನಿಸಿತು. ಅನಂತರ ಅಲ್ಲೇ ಇದ್ದ ಬ್ರಾಹ್ಮಣ ಶಿಲ್ಪಸಮುದಾಯದ ಸಂಗ್ರಹವೊಂದನ್ನು ಕಂಡು ಕಾಶಿಗೆ ಹಿಂದಿರುಗಿದೆವು.

ಮೂರು ಸಾವಿರ ವರ್ಷಗಳಿಗಿಂತಲೂ ಹೆಚ್ಚಿನ ಧಾರ್ಮಿಕ, ಚಾರಿತ್ರಿಕ, ಹಿಂದೂ ಸಾಂಸ್ಕೃತಿಕ ಮಹತ್ವವುಳ್ಳ ನಗರ ಕಾಶಿ. ಗಂಗಾನದಿಯ ಎರಡು ದಡದಲ್ಲೂ ಬೆಳೆದು ಬಂದ ಪ್ರಾಚೀನ ಪಟ್ಟಣ. ಹಿಂದೂಗಳಿಗೆಲ್ಲ ಪವಿತ್ರ ತೀರ್ಥ ಕ್ಷೇತ್ರ. ಕಂಡಕಂಡಲ್ಲಿ ಗುಡಿಗಳು, ಗೋಪುರಗಳು, ಅರಮನೆ—ಮಹಲುಗಳಿಂದ ತುಂಬಿದ ಸುಂದರ ಶಹರ. ಹಿಂದೂ ಧರ್ಮದ ಕರ್ಮಪೀಠ. ಇಲ್ಲೇ ಪಂಡಿತ ಮದನಮೋಹನ ಮಾಲವೀಯರು ಸಂಸ್ಥಾಪಿಸಿದ ಹಿಂದೂ ವಿಶ್ವವಿದ್ಯಾಲಯವಿದೆ. ಮೂರು ಮೈಲಿ ವಿಸ್ತೀರ್ಣವನ್ನು ಆವರಿಸಿಕೊಂಡ ವಿದ್ಯೆಯ ದೇಗುಲದ ಕಟ್ಟಡಗಳು ವಿಚಕ್ಷಣೀಯವಾಗಿವೆ.

ಕಾಶಿ—ಸಾರನಾಥಗಳನ್ನು ಕಂಡಾದ ಬಳಿಕ ನಾವು ಪುನಃ ಅಲಹಾಬಾದಕ್ಕೆ ಹಿಂತಿರುಗಿ ತ್ರಿವೇಣೀ ಸಂಗಮದತ್ತ ದಾರಿ ಹಿಡಿದೆವು. ಕಾಶಿಯಲ್ಲಿ ಕಾಸಿಗೊಂದು ಕುದುರೆಯಂತೆ; ಪೀತಾಂಬರ ಪುಕ್ಕಟೆ ಬೆಲೆಗೆ ದೊರೆಯುವುದಂತೆ. ನಮ್ಮ ದುರಾದೃಷ್ಟದಿಂದ ಒಂದು ನೂರು ಕುದುರೆಗಳಾದರೂ ಕಾಣಸಿಗಬೇಕೇ?

ಅಲ್ಲಿಂದ ಮುಂದೆ ಸಂಗಮಕ್ಕೆ ತೆರಳಿದೆವು. ಗಂಗೆ, ಯಮುನೆಯರ ಸಂಗಮವೇ ತ್ರಿವೇಣೀ ಸಂಗಮ. ಸರಸ್ವತಿಯೆಂಬಾಕೆ ಗುಪ್ತಗಾಮಿನಿಯಾಗಿ ಈ ಪವಿತ್ರ ಸಂಗಮ ಸ್ಥಾನದಲ್ಲಿ ಕೂಡುವಳೆಂದು ಪ್ರತೀತಿ. ಬಹುಶಃ ಪುಣ್ಯವಂತರು ಮತ್ತು ಅಲ್ಲಿನ ನಾವಿಕರು ಮಾತ್ರ ಅವಳ ದರ್ಶನ ಪಡೆಯಬಲ್ಲರು ! ಅದೆಂತಿದ್ದರೂ ಸಂಗಮದ ಸೌಂದರ್ಯ ಅವರ್ಣನೀಯ. ವಿಶಾಲವಾದ ನದಿಗಳು ವೈಯಾರದಿಂದ ಹೆಣ್ಣುಮಗಳು ಹೆಜ್ಜೆ ಇಡುವಂತೆ, ಗೆಜ್ಜೆ ಕುಣಿಯುವಂತೆ ಮೋಡಿ ಮಾಟಗಳಿಂದ ಹರಿಯುತ್ತವೆ.

ಅರುಣೋದಯ ಆಗಲೇ ಆಗಿತ್ತು. ಸುಂದರ ಪ್ರಭಾತ; ಸೂರ್ಯನ ಹೊಂಬಣ್ಣದ ರಶ್ಮಿಗಳು ನದಿಯ ನೀರಲ್ಲಿ ಬಣ್ಣಬಣ್ಣದ ಬೆಳಕನ್ನು ಬೀರಿ ಪ್ರತಿಬಿಂಬಿಸುವ ನೋಟ ಚಿರಸ್ಮರಣೀಯವಾದುದು. ನದಿ-ನೀರು-ನಿಸರ್ಗ-ಬಾನು ಇವುಗಳ ತಾಳ ಮೇಳ. ಇಂತಹ ಚಿತ್ರಮಯ ಸನ್ನಿವೇಶ ಸಿಕ್ಕಾಗ ಯಾವ ಕವಿ ಕಾವ್ಯ ಕಡೆಯಲಿಕ್ಕಿಲ್ಲ! ಸಂಗಮದಲ್ಲಿ ಸ್ನಾನವಾಯಿತು; ನಮಗಾನಂದವಾಯಿತು. ಎದುರಿಗಿದ್ದ ಅಕ್ಬರ ಬಾದಶಹ ಕಟ್ಟಿಸಿದ ಕೋಟೆಯೊಂದನ್ನು ಕಂಡು ಅಲಹಾಬಾದಿನಲ್ಲಿ ದಣಿವು-ಹಸಿವುಗಳನ್ನು ತಣಿಸಿದೆವು. ಕೊನೆಗೆ ಅಲ್ಲಿನ ಬೀದಿಗೀದಿಗಳನ್ನು ಸುತ್ತಿ ಭಾರತ ದೇಶಪ್ರೇಮಿ ಮೋತೀಲಾಲರು ಕಟ್ಟಿಸಿದ ಪ್ರಧಾನಿ ನೆಹರೂರವರ ಆನಂದಭವನವನ್ನು ಸಂದರ್ಶಿಸಿ ದೆಹಲಿಗೆ ಪ್ರಯಾಣ ಬೆಳೆಸಿದೆವು.

ದೆಹಲಿ ನಮ್ಮ ರಾಜಧಾನಿ. ಹಲವಾರು ರಾಜಭೋಜರು ಆಳಿ, ಅಳಿದು, ಉಳಿದು, ಎದ್ದು ಬಿದ್ದು, ಜೀವನ್ಮೃತವಾದ ಅರಸೊತ್ತಿಗೆಯ ನಗರ. ಇಂದಿಗೂ ನಾಲ್ಕೂ ನಿಟ್ಟಿನಲ್ಲೂ ಪ್ರಾಚೀನ ಕೋಟೆ-ಕೊತ್ತಲ, ಪ್ರಾಕಾರ-ಪ್ರಾಂಗಣಗಳ ಅವಶೇಷದ ಕುರುಹು ಕಾಣಿಸುತ್ತಿದೆ. ವೀರಾಗ್ರಣಿ ಅನಂಗಪಾಲನ ದೆಹಲಿ; ಕುತುಬುದ್ದೀನ, ಅಲ್ಲಾ-ಉದ್ದೀನ, ಫೀರೋಜಶಾರ ದೆಹಲಿ; ಮೊಗಲ ಸಮ್ರಾಟರ ದೆಹಲಿ. ಇತಿಹಾಸದ ಬಲವತ್ತರವಾದ ಕೈವಾಡ ಈ ನಗರದ ಬಣ್ಣವನ್ನು ನೂರಾರು ಸಲ ಬದಲಾಯಿಸಿ ಬಿಟ್ಟಿದೆ. ಅಮೃತಶಿಲೆಯ ಮಹಲುಗಳು – ಮಂಟಪಗಳು – ಸುಂದರವಾದ ಉದ್ಯಾನ-ರಾಜಬೀದಿಗಳು – ಭರ್ಜರಿ ಮಸೀದೆಗಳು — ಎಲ್ಲ ಪ್ರೇಕ್ಷಕನ ಕಣ್ಣುಕಟ್ಟಿಸುತ್ತವೆ. ಅಲ್ಲಾಉದ್ದೀನ ವಿಷಯಲಂಪಟನಾದರೇನು ! ಅಕ್ಬರ ಮಹಾಶಯ ಬಾದಶಹನಾದರೇನು ! ಕಾಲನ ಕೈವಾಡಕ್ಕೆ, ವಿಧಿ ವಿಲಾಸದ ಅನಿಶ್ಚತತೆಗೆ ಯಾರು ಎಣೆ ಎಂಬ ನಗ್ನ ಸತ್ಯವನ್ನು ಸಾರುತ್ತದೆ ದೆಹಲಿ.

ದೆಹಲಿಯಲ್ಲಿನ ವಾಸ್ತುಶಿಲ್ಪ ಅಪ್ರತಿಮವಾದುದು. ಮೊಗಲರ ಹಾಲುಗಲ್ಲಿನ ಮಹಲುಗಳು-ಮಸೀದೆಗಳು, ಅರಮನೆ-ಭವನಗಳು ಪ್ರೇಕ್ಷಕನನ್ನು ದಂಗುಬಡಿಸುತ್ತವೆ. ಮುಗ್ಧನನ್ನಾಗಿ ಮಾಡುತ್ತವೆ. 'ಶಹಾನಶಹ' ಶಹಾಜಹಾನನ ಅರಮನೆಯ ಆವಾರ, ಕೋಟಿಕೊತ್ತಲದ ಬೆರಗು, ರಂಗಮಂಟಪದ ಮಿರುಗು, ವಿಲಾಸಗೃಹದ ಸೊಬಗು—ಇವನ್ನೆಲ್ಲ ಕಾಣಲು ಕೆಂಪುಕೋಟೆಗೆ ಹೋಗಬೇಕು. ಆ ವೈಭವಯುಕ್ತವಾದ ಅಮೃತಶಿಲೆಯ ಶಿಲ್ಪಕೌಶಲವನ್ನು ಕಾಣಬೇಕು. ಶಹಾಜಹಾನನ ರಾಜಸಭಾ ಮಂಟಪ, ರಂಗಮಹಲುಗಳನ್ನು ಕಂಡು ಯಾರೂ ಬೆರಳು ಕಚ್ಚಬೇಕು! ದಿವಾನಿ ಆಮ್ ಮತ್ತು ದಿವಾನಿ ಖಾಸ ಎಂಬ ಎರಡು ರಾಜಮಂದಿರಗಳನ್ನು ಸಂದರ್ಶಿಸಿದ ಯಾವನೂ ಕಂಗಾಲಾಗಬೇಕು! ಇಲ್ಲೇ ದಿವಾನಿ ಖಾಸ್ ನಿವಾಸ ಗೃಹದೊಳಗೆ ಗೋಡೆಯಲ್ಲಿ 'ಭೂತಲದ ಮೇಲೊಂದು ಸ್ವರ್ಗವಿದೆಯೆಂದರೆ, ಅದು ಇದೇ-ಅದು ಇದೇ-ಅದು ಇದೇ' ಎಂದು ಫಾರಸಿಕ ಭಾಷೆಯಲ್ಲಿ ಕೆತ್ತಲಾಗಿದೆಯೆಂದರೆ ಈ ರಾಜನಿವಾಸದ ಹಿರಿಮೆ ವ್ಯಕ್ತವಾದೀತು. ಇನ್ನೂ ಇಲ್ಲಿನ ಸ್ನಾನಗೃಹ, ಕ್ರೀಡಾಕುಂಡ, ಅಂತಃಪುರ, ರಾಣೀವಾಸ ಮುಂತಾದ ಬೇರೆ ಬೇರೆ ಬಿಳಿ-ಕೆಂಪು ಹಾಲುಗಲ್ಲಿನ ರಚನೆಗಳನ್ನು ಪರಿಶೀಲಿಸಿದಾಗ ಬೆಕ್ಕಸಬೆರಗಾಗಬೇಕು! ಇಲ್ಲಿನ ಜುಮ್ಮಾಮಸೀದೆ ಸಾಮಾನ್ಯವೇನು! ಗೋಲ-ಗುಂಬಜ ಮಿನಾರಗಳಿಂದ ಜಗಜ್ಜನಿತವಾಗಿದೆ. ಹುಮಾಯೂನನ ಗುಲಾಬಿ ಬಣ್ಣದ ಮರಳುಕಲ್ಲಿನಿಂದ ನಿರ್ಮಿತವಾದ ಗೋರಿ ಸರ್ವಸಾಧಾರಣವಾದುದಲ್ಲ. ಎಷ್ಟೊಂದು ಕರ್ಮಶಿಲ್ಪಿಗಳ ಮಿದುಳು ಇವುಗಳ ರಚನೆಗಾಗಿ ನೀರಾಗಿಲ್ಲ!

ದೆಹಲಿಗೆ ಪ್ರವಾಸ ಹೋದ ಪ್ರವಾಸಿ ಕುತುಬ್ ಮಿನಾರವನ್ನು ಕಾಣದೆ ಹಿಂತಿರುಗಿದರೆ ಆ ಪ್ರಯಾಣ ಖಂಡಿತ ಅಪೂರ್ಣ. ಸುಮಾರು ಹತ್ತು ಶತಮಾನಗಳ ಹಿಂದೆ ಕುತುಬುದ್ದೀನ ಭಾರತವನ್ನು ಕೊಳ್ಳೆ ಹೊಡೆದ ನೆನಹಿಗಾಗಿ ಕಟ್ಟಿದ ವಿಜಯ ಗೋಪುರವಿದು. ಬುಡದಲ್ಲಿ ವಿಶಾಲವಾಗಿ ಮರಳು ಕಲ್ಲಿನಿಂದ ಕಟ್ಟಿದ ಈ ಗೋಪುರ ಸುಮಾರು ಇನ್ನೂರೈವತ್ತಡಿ ಎತ್ತರವಿದ್ದು ಜಗತ್ತಿನ ಅತ್ಯುತ್ತಮ ಗೋಪುರಗಳಲ್ಲೊಂದು ಎಂದು ಹೆಸರುವಾಸಿಯಾಗಿದೆ. ಹಿಂದೂ ದೇವಸ್ಥಾನಗಳನ್ನು ಸೂರೆಗೈದು ಅವುಗಳ ಕಲ್ಲಿನಿಂದಲೇ ವಿರಚಿತವಾದ ಕಟ್ಟಡದ ಮಾದರಿಗಳು ಈ ಮಿನಾರದ ಸುತ್ತು ಮುತ್ತಲಿದ್ದು ಮತಪ್ರೇಮಿಗಳು ಸಿಟ್ಟಿನಿಂದ ಸುಟ್ಟು ಹೋಗುವಷ್ಟು ಕೆಟ್ಟ ನಿದರ್ಶನಗಳಿವೆಯಿಲ್ಲಿ; ಆದರೆ ನಾವು ಧರ್ಮಪ್ರೇಮಿಗಳಾಗಬಹುದಷ್ಟೆ, ವಿನಾ ಪಿಶಾಚಿಗಳಾಗಲು ಸಾಧ್ಯವಿದೆಯೆ!

ಇಲ್ಲೇ ಸನಿಹದಲ್ಲಿ ತುಕ್ಕು ಹಿಡಿಯದ ಕಬ್ಬಿಣದ ಸ್ತಂಭವೊಂದಿದೆ. ಪಾಶ್ಚಾತ್ಯರು ಲೋಹರಸಾಯನ ಶಾಸ್ತ್ರದಲ್ಲಿ ಪ್ರವೀಣರು— ಮೇಧಾವಿಗಳೆಂದು ಇದ್ದರು ಕೂಡ ಹದಿನೈದು ಶತಮಾನಗಳಿಗಿಂತಲೂ ಹಿಂದಣ ಈ ಕಬ್ಬಿಣದ ಕಂಭ ತುಕ್ಕು ಹಿಡಿಯದೆ ನೆಲೆ ನಿಂತಿದೆಯೆನ್ನುವಾಗ ಪೌರ್ವಾತ್ಯರ ಲೋಹ ಎರಕ (Metallurgy) ವಿದ್ಯೆಯ ಪಾಂಡಿತ್ಯವನ್ನು ಅಳೆಯುವವರಾರು? ಇದೊಂದು ಭಾರತದ ಅಸಾಮಾನ್ಯ ಜ್ಞಾನ ಸಂಕೇತದ ವಿಜಯಸ್ತಂಭ.


ದೆಹಲಿಯಲ್ಲಿನ ನಿರಾಡಂಬರ ಪೂಜನೀಯ ಸ್ಥಳ ಭಾರತ ಭಾಗ್ಯವಿಧಾತ ಬಾಪುವಿನ ಸಮಾಧಿ-ರಾಜಘಾಟ. ಯಮುನಾನದಿಯ ತಟದಲ್ಲಿ ಅಂದ-ಚಂದವಿಲ್ಲದ ಸರಳ ಸಮಾಧಿಯೊಂದು ಈ ಮಹಾತ್ಮನ ಸ್ಮರಣೆಯನ್ನು ದೇಶ-ವಿದೇಶೀ ಪ್ರವಾಸಿಗಳಿಗೆ ತಂದೊಡ್ಡುತ್ತಿದೆ. ಈ ರಾಷ್ಟ್ರಪಿತನ ಋಣವನ್ನು ಸಲ್ಲಿಸಲು ದಿನಾಲೂ ಬಡವ ಬಲ್ಲಿದರೆನ್ನದೆ ಸಾವಿರಾರು ಜನ ಬಂದು ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿ ಹೋಗುತ್ತಾರೆ.

ಬಿರ್ಲಾ ಮಂದಿರ ಇನ್ನೊಂದು ಭಾವ್ರಕರ ದೇಗುಲ. ದೇವಸ್ಥಾನ ಲಕ್ಷ್ಮೀನಾರಾಯಣನದ್ದಾದರೂ ಬಿರ್ಲಾ ಬಂಧುಗಳು ಲಕ್ಷೋಪಲಕ್ಷ ರೂಪಾಯಿ ಸುರಿದು ಕಟ್ಟಿಸಿದ ಮಂದಿರವಾದ್ದರಿಂದ ಜನಸಾಮಾನ್ಯರೆಲ್ಲ ಅದನ್ನು ಬಿರ್ಲಾ ಮಂದಿರ ಎಂದೇ ಕರೆಯುತ್ತಾರೆ. ಈ ಮಂದಿರದ ದರ್ಶನವನ್ನು ಪ್ರತಿಯೊಬ್ಬನೂ ಪಡೆಯಲೇಬೇಕು. ಈ ದೇಗುಲದ ಬಾಹ್ಯರಚನೆ-ನೋಟ ರಮಣೀಯವಾಗಿದೆ. ಭಾರತೀಯ ವಾಸ್ತುಶಿಲ್ಪದ ಮಾದರಿಯಾಗಿದೆ. ಒಳಗಣ ಸೌಂದರ್ಯದ ಕೆಲಸ, ಚಿತ್ರ-ಬಣ್ಣ ಬರೆಯುವಿಕೆ ಮುಂತಾದುವುಗಳನ್ನು ಯೋಗ್ಯ ಕಲಾವಿದರಿಂದಲೇ ನೆರವೇರಿಸಿದ್ದರೆ ಮಂದಿರ ಮತ್ತೂ ಉತ್ಕೃಷ್ಟವಾಗುತಿತ್ತು. ಜೀವಕಳೆಯಿಂದ ತುಂಬಿಸಿ ಸಕಲರನ್ನು ಆಕರ್ಷಿಸುವಂತೆ ಮಾಡಬಹುದಾಗಿತ್ತು.


ನವದೆಹಲಿ ನಿಜಕ್ಕೂ ಭಾರತ ಸರಕಾರದ ಹಿರಿಮೆಯನ್ನು ವ್ಯಕ್ತಪಡಿಸುತ್ತದೆ. ಇಲ್ಲಿನ ನಗರ ರಚನಾಯೋಜನೆ ಅದ್ವಿತೀಯವೆನಿಸಿ ವಿದೇಶೀಯರಿಂದಲೂ ಮನ್ನಿಸಲ್ಪಟ್ಟಿದೆ. ನೇರಾದ, ವಿಶಾಲವಾದ ಮಾರ್ಗಗಳು, ಕಾಲ್ದಾರಿಗಳು, ಇಕ್ಕಡೆಗಳಲ್ಲೂ ಕ್ರಮವಾಗಿ ನೆಟ್ಟ ಸಾಲುಮರದ ತೋಪುಗಳು, ಕಿಂಗ್ಸ್‌ವೇ ವರ್ತುಲದಿಂದ ಅಷ್ಟದಿಕ್ಕುಗಳಲ್ಲೂ ಸೆಟೆಯುವ ಮಾರ್ಗ, ಉದ್ಯಾನದಾವರಣಗಳಲ್ಲಿನ ಬಂಗಲೆಗಳು, ಆಧುನಿಕ ರೀತ್ಯಾ ಕಟ್ಟಿಸಿದ ಕಟ್ಟಡ ರಚನೆಗಳು ಮನೋಮೋಹಕವಾಗಿವೆ. ಪಾರ್ಲಿಮೆಂಟ್ ಸಭಾಸದನ ನವೀನ ವಾಸ್ತುಶಿಲ್ಪದ ಸಾಹಸ. ಭಾರತ ರಾಷ್ಟ್ರಪತಿಗಳ ರಾಜಭವನ, ಸೆಕ್ರೆಟರಿಯೆಟ್‌ದ ಖಾತೆಯ ಕಟ್ಟಡಗಳು, ಭಾರತದ ದ್ವಾರ (India Gate) ಇವೆಲ್ಲ ಉಕ್ಕಿನ ಯುಗದ, ಸಿಮೆಂಟು-ಕಾಂಕ್ರೀಟಿನ ಚಮತ್ಕಾರಗಳು. ನವದೆಹಲಿ ನವೀನದೃಷ್ಟಿಯಿಂದ ಪರಿಪೂರ್ಣವಾಗಿದೆ.

ಈ ನವದೆಹಲಿಯಲ್ಲಿ ಹಳೆಯ ಕಾಲದ ಜಂತ್ರ-ಮಂತ್ರವೆಂದು ಕರೆಯಲ್ಪಡುವ ವೇಧಶಾಲೆಯ ಅವಶೇಷಗಳಿವೆ. ಇನ್ನೂರೈವತ್ತು ವರ್ಷಗಳ ಹಿಂದೆ ಜಯಪುರದ ಮಹಾರಾಜರೊಬ್ಬರು ಕಟ್ಟಿಸಿದ ಈ ವಿಚಿತ್ರ ರಚನೆಗಳಿಂದ ನಕ್ಷತ್ರಚಲನೆ, ಗ್ರಹಕೂಟಗಳ ತಿರುಗುವಿಕೆಯನ್ನೆಲ್ಲ ತಿಳಿಯಬಹುದು. ಅರ್ಥಾತ್ ಜ್ಯೋತಿಷ್ಯಶಾಸ್ತ್ರದಾಧಾರದ ಮೇಲೆ ಇದನ್ನು ರಚಿಸಿರುತ್ತಾರೆ. ಅವುಗಳನ್ನು ಬಳಸುವ ಕ್ರಮ ನಮಗೆ ಸುಲಭವಾಗಿ ತಿಳಿಯದಾದರೂ ಜಂತ್ರ--ಮಂತ್ರ--ಪ್ರೇಕ್ಷಕನ ಮನಸೆಳೆಯುತ್ತದೆ. ಭಾರತದ ವಿಶ್ವವಿಜ್ಞಾನದ ಸ್ಮೃತಿಯನ್ನು ತಂದೊಡ್ಡುತ್ತದೆ. ಹೀಗೆಲ್ಲ ದೆಹಲಿಯ ಐತಿಹಾಸಿಕ ಮತ್ತು ಆಧುನಿಕ ಕಟ್ಟಡ ಪರಂಪರೆಯನ್ನು ಕಂಡಾದ ಬಳಿಕ ನಾವು ಹರಿದ್ವಾರಕ್ಕೆ ತೆರಳಿದೆವು.

ಹರಿದ್ವಾರ ಹಿಮಾಲಯದ ತಪ್ಪಲಲ್ಲಿದೆ. ಹಿಮಾಚ್ಛಾದಿತ ಹಿಮಾಲಯದ ಸೊಬಗನ್ನು ಸವಿಯಬೇಕೆಂದು ನಮ್ಮ ಬಯಕೆಯಾಗಿತ್ತು. ಆದರೆ ಹರಿದ್ವಾರದ ಪ್ರಯಾಣ ತೀರ್ಥಯಾತ್ರೆಯಲ್ಲೇ ಮುಗಿಯಿತು. ಹನ್ನೆರಡು ವರ್ಷಗಳಿಗೊಮ್ಮೆ ಇಲ್ಲಿ ಪ್ರಚಂಡ ಜಾತ್ರೆ ಜರಗುತ್ತದೆ. ಹಿಂದೂಗಳ ಪವಿತ್ರ ಯಾತ್ರಾ ಕ್ಷೇತ್ರ. ಗಂಗಾ ನದಿಯ ದಡದಲ್ಲಿ ನೂರಾರು ದೇಗುಲಗಳಿವೆ. ಹರಕಿ ಪಾಯ್ರಿ ಎಂಬಲ್ಲಿ ಸ್ನಾನ-ತೀರ್ಥ ಕುಂಡಗಳಿವೆ. ದೇಗುಲಗಳಲ್ಲಿ ದಿನಾಲೂ ವೈದಿಕರೀತ್ಯಾ ಪೂಜೆ ಪುನಸ್ಕಾರಗಳು ಜರಗುತ್ತವೆ. ಸಂಜೆ ಸಮಯ ಜನತೆಯೆಲ್ಲ ದೇಗುಲದ ಮುಂದೆ ನದೀ ತಟದಲ್ಲಿ ಕೂಡುತ್ತದೆ. ತಮ್ಮ ಕಷ್ಟ, ನಿಷ್ಠುರಗಳನ್ನೆಲ್ಲ ಮರೆತು ಆಧ್ಯಾತ್ಮಿಕ-ಪಾರಮಾರ್ಥಿಕ ವ್ಯವಹಾರದಲ್ಲಿ ಲೀನವಾಗುತ್ತದೆ. 'ಗಂಗಾ ಮಾಯಿಕೀ ಜೈ' ಎಂದು ಜಯಘೋಷ ಮಾಡುತ್ತದೆ.



ಲಕ್ಷ್ಮಣಝೂಲಾ ಸೇತುವೆ



ಹರಕೀಪಾಯುರಿ ತೀರ್ಥಕುಂಡ ಮತ್ತು ದೇವಸ್ಥಾನಗಳು, ಹರಿದ್ವಾರ.

ಇಲ್ಲಿಂದ ಹದಿನಾಲ್ಕು ಮೈಲಿ ದೂರದಲ್ಲಿ ಋಷೀಕೇಶವಿದೆ. ಅಲ್ಲಿಂದ ತುಸು ಮುಂದೆ ಲಕ್ಷ್ಮಣಝೂಲಾವೆಂಬ ಪವಿತ್ರ ಸ್ಥಳವಿದೆ. ಪೌರಾಣಿಕ ರಾಮಚಂದ್ರನ ತಮ್ಮ ಲಕ್ಷ್ಮಣ ಗಂಗೆಯನ್ನು ದಾಟಲು ಸೇತುವೆಕಟ್ಟಿದ ಜಾಗದಲ್ಲೇ ಇಂದು ಉತ್ತರ ಪ್ರದೇಶದ ಸರಕಾರ ಉಕ್ಕಿನ ಮಿಣೆಗಳಿಂದ ತೂಗು ಸಂಕವೊಂದನ್ನು ರಚಿಸಿರುತ್ತದೆ. ಈ ಸೇತುವೆ ತೂಗುಯ್ಯಾಲೆಯಂತಿದ್ದು ನಡೆಯುವಾಗ ಮೆಲ್ಲನೆ ನಡುಗುತ್ತದೆ. ಸುತ್ತಮುತ್ತಲೂ ಅನೇಕ ದೇವ ದೇವಿಯರ ಮಂದಿರಗಳಿವೆ. ವೇದ ಪಾರಾಯಣ-ಪಠನಗಳು ಎಡೆಬಿಡದೆ ಸಾಗುತ್ತಲೇ ಇರುತ್ತವೆ.

ಇಲ್ಲಿ ನನ್ನ ಮನ ಸೆಳೆದುದು ಮಾತ್ರ ಗಂಗಾ ನದಿ. ಹಿಮಾಲಯದಿಂದ ಇಳಿದು ಬಂದ ಗಂಗೆ ಇಲ್ಲಿಂದ ಮುಂದೆ ಧಾವಿಸುತ್ತಾಳೆ. ಅವಳ ನರ್ತನ ಕಾಣಬೇಕು; ಚೆಲುವು ನೋಡಬೇಕು. ಮಂಜುಗಡ್ಡೆಯ ನೀರೇ ಕರಗಿ ಗಂಗೆ ಭೂತಲಕ್ಕಿಳಿಯುತ್ತಾಳೆ. ಈ ಶೀತಲ ಹೊನಲು ಹರಿಯುವ ದೃಶ್ಯ, ಪ್ರಕೃತಿಯ ಪ್ರಶಾಂತ ಶೋಭೆಯನ್ನು ದ್ವಿಗುಣಿತವಾಗಿ ಮಾಡಿರುತ್ತದೆ. ಇದೊಂದು ತಪೋವನ, ಅರಣ್ಯರಮ್ಯ ಪ್ರದೇಶ. ಇಲ್ಲಿ ನಿರಂತರ ಸಾಧು ಸಂತರ ಬೀಡು. ಜಟಾಧಾರಿಗಳು--ಭಸ್ಮಧಾರಕರು--ಭಂಗಿಸೇವಕರು ಸತ್ಯಶೋಧನದ ಸಂನ್ಯಾಸಿಗಳು--ಸಂಸಾರದ ಬಂಧನದಿಂದ ವಿಮುಕ್ತರಾದ ವಿರಾಗಿಗಳು, ಠಕ್ಕರು ಎಲ್ಲರೂ ಇದ್ದಾರೆ. ಈ ಪುಣ್ಯಭೂಮಿಯ ಮಗ್ಗುಲಲ್ಲೇ ಸ್ವರ್ಗಾಶ್ರಮವಿದೆ. ಅಲ್ಲೇ ಗೀತಾಭವನವಿದೆ. ಎಲ್ಲ ಧಾರ್ಮಿಕ ಗ್ರಂಥಗಳನ್ನು ಒದಗಿಸುವ ವ್ಯವಸ್ಥೆ ಇಲ್ಲಿ ಮಾಡಲಾಗಿದೆ.

ಇಲ್ಲಿನ ಗಂಗಾ ಸಲಿಲದಲ್ಲಿ ಒಂದು ಒಂದೂವರೆ ಅಡಿ ಗಾತ್ರದ ಮೀನಗಳು ಧಾರಾಳವಾಗಿವೆ. ಯಾತ್ರಿಕರೆಲ್ಲ ಅವುಗಳಿಗೆ ತಿನಸನ್ನು ಎಸೆಯುತ್ತಾರೆ. ಅವನ್ನು ಹಿಡಿದು ತಿನ್ನಲು ನಿರ್ಬಂಧವಿದೆ. ಹೀಗಾಗಿ ಅವು ಒಂದು ಕಡಲೆ ಕಾಳಿಗೋ, ರೊಟ್ಟಿಯ ತುಣುಕಿಗೋ ನೀರ ಮೇಲೆದ್ದು ಲಾಗ ಹಾಕುವ ಮೋಜಿನ ದೃಶ್ಯ ನನ್ನ ಮನದಲ್ಲಿ ಅಚ್ಚಳಿಯದೆ ನಿಂತಿರುತ್ತದೆ. ಜನರ ಸಹೃದಯತೆಯಿಂದಾಗಲಿ, ಸರಕಾರದ ಕೃಪೆಯಿಂದಾಗಲಿ, ಅವುಗಳೂ ನಿರ್ಭೀತವಾಗಿ ಸೊಕ್ಕಿ ಸುಂದರ ಕ್ರೀಡೆಯನ್ನು ಪ್ರದರ್ಶಿಸುತ್ತವೆ. ಲಕ್ಷ್ಮಣಝೂಲಾ, ಋಷಿಕೇಶ ಮತ್ತು ಹರಿದ್ವಾರ ಈ ಮೂರೆಡೆಯಲ್ಲಿ ನಮ್ಮ ತೀರ್ಥಸ್ನಾನವಾಯಿತು. ಈ ನಿಸರ್ಗದ ಧಮನಿಯಲ್ಲಿ ನೂರುಸಲ ಮಿಂದರೂ ತೃಪ್ತಿಯೆಂದಿಲ್ಲ. ಸಂಜೆಯ ಹೊತ್ತಿಗೆ ಭಯಭಕ್ತಿಯ ಭಾವುಕ ಜನ, ಗಂಗೆಗೆ ಪುಷ್ಪವನ್ನರ್ಪಿಸುತ್ತಾರೆ. ಸಣ್ಣ ಸಣ್ಣ ಪತ್ರದೊನ್ನೆಯೊಳಗೆ ಹೂವನ್ನು ತುಂಬಿ ನಡುವೆ ಕರ್ಪೂರವನ್ನು ಉರಿಸಿ ನೀರಲ್ಲಿ ಹರಿಯಬಿಡುವ ದೀವಳಿಗೆಯ ದೃಶ್ಯ ಎಂದೆಂದಿಗೂ ಮರೆಯದಂತಹುದಾಗಿದೆ. ಪ್ರಪಂಚದ ವಿವಿಧ ಭಾಗದಲ್ಲಿ ಎಣಿಸಲಸಾಧ್ಯವಾದ ಬದಲಾವಣೆಗಳು ಅಡಿಗಡಿಗೆ ಆಗುತ್ತಲಿದ್ದರೂ ಹರಿದ್ವಾರದ ಧಾರ್ಮಿಕ ವ್ಯವಹಾರ ಅನಂತವಾಗಿ ಸಾಗುತ್ತಿದೆ.

ಹರಿದ್ವಾರದ ನಂತರ ನಾವು ತಿರುಗಿ ದೆಹಲಿಗೆ ಬಂದೆವು. ದೆಹಲಿಯಿಂದ ಮಥುರಾ ಮತ್ತು ಬೃಂದಾವನಗಳ ದರ್ಶನ ಪಡೆದೆವು. ಶ್ರೀಕೃಷ್ಣ ಪರಮಾತ್ಮನು ಬೆಳೆದುದು ಮಥುರಾಪುರದಲ್ಲಿ. ಕೃಷ್ಣಭಕ್ತಪರಾಯಣೆ ಮೀರಾಬಾಯಿಯ ಬೃಂದಾವನವಿಂದು ಸ್ಮಶಾನ ಸದೃಶವಾದರೂ ಆ ಸಾಧ್ವೀಮಣಿಯ ನಿಷ್ಕಾಮ ಪ್ರೇಮ, ನಿರಂತರ ಭಕ್ತಿ, ಅಮರ ಸಂಗೀತ ಹಿಂದೂ ರಮಣಿಯರ ಮನೆಮನೆ ಮಾತಾಗಿದೆ. ಮಥುರಾ ಪಟ್ಟಣದಲ್ಲೂ ನೂರಾರು ದೇಗುಲಗಳಿವೆ. ಸಾಧ್ವೀ ಮೀರಾಬಾಯಿಯ ಪ್ರಖ್ಯಾತಿಗೆ ಅಸೂಯೆಗೊಂಡ ಅಕ್ಬರ ಬಾದಶಹ ಬೃಂದಾವನವನ್ನು ವೇಷಧಾರಿಯಾಗಿ ಸಂದರ್ಶಿಸಿ ಅವಳ ಭಕ್ತಿ ಪರಾಯಣತೆಗೆ ಮೆಚ್ಚಿ, ಭಜನೆ-ಸಂಗೀತಗಳಿಗೆ ಮರುಳಾಗಿ, ಮೀರಾಳಿಗಾಗಿ ಅನೇಕ ಮಂದಿರಗಳನ್ನು ಕಟ್ಟಲು ಸಾಮಂತರಾಜ ಪ್ರೇರೇಪಿಸಿದನಂತೆ. ರಾಜಾ ಮಾನಸಿಂಗನು ಕಟ್ಟಿಸಿದ ಕೆಂಪು ಶಿಲೆಯ ಗೋವಿಂದ ದೇವನ ದೇವಸ್ಥಾನ ಇಂದಿಗೂ ಅಪೂರ್ಣವಾಗಿದ್ದರೂ ಆಶ್ಚರ್ಯಕರವಾಗಿದೆ. ಬಹಳ ನಾಜೂಕಾಗಿ ಇದನ್ನು ರಚಿಸಲಾಗಿದೆ. ಶ್ರೀಕೃಷ್ಣ ಚಾರಿತ್ರ್ಯ ಮಹಿಮೆಯಿಂದಾಗಿ ಮಥುರಾ ಮಹತ್ವವನ್ನುಗಳಿಸಿರುತ್ತದೆ. ಬಿರ್ಲಾಬಂಧುಗಳು ಇಲ್ಲೂ ಒಂದು ಗೀತಾ ಮಂದಿರವನ್ನು ಅಪಾರ ಹಣ ವೆಚ್ಚಮಾಡಿ ಕಟ್ಟಿಸಿರುತ್ತಾರೆ.

ಹಿಂದೊಂದು ಕಾಲ ಮಥುರಾ ಹಿಂದೂ, ಬೌದ್ಧ ಮತ್ತು ಜೈನ ಧರ್ಮಗಳ ಪ್ರಸಿದ್ಧ ಕೇಂದ್ರ ಸ್ಥಾನವಾಗಿತ್ತು. ಇಂದು ಮಾತಿನಲ್ಲಿ ಮಥುರೆಯ ಗತ-ವೈಭವವನ್ನು ಕೇಳಬಹುದಾಗಿದೆ.

ಮಥುರಾದಿಂದ ಮುಂದೆ ನಡೆದುದು ನಮ್ಮ ಪಯಣ ಆಗ್ರಾಕ್ಕೆ, ತಾಜಮಹಲನ್ನು ಕಾಣಲು. ಆಗ್ರಾ ಯಮುನಾ ನದೀ ತಟದಲ್ಲಿದೆ. ಮೊತ್ತಮೊದಲು ಇತಿಹಾಸದ ದೃಷ್ಟಿಯಲ್ಲಿ ಈ ನಗರವನ್ನು ಸೂರೆಗೈದುದು ಬಾಬರ. ಇಂದು ಇಂಗ್ಲೆಂಡಿನ ರಾಣಿ ಎಲಿಜಾಬೇತಳ ಕಿರೀಟದಲ್ಲಿರುವ ಕೊಹಿನೂರು ವಜ್ರ ಬಾಬರನ ಕೊಳ್ಳೆಯಾಗಿತ್ತಂತೆ. ಅನಂತರ ಅಕ್ಬರ ಇದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಈತನ ಮೊಮ್ಮಗ ಶಹಾಜಹಾನ ಜಗತ್ತಿನ ಅದ್ಭುತಗಳಲ್ಲೊಂದಾದ ತಾಜಮಹಲನ್ನು ರಚಿಸಿದ-ಮಡದಿ ಮುಮತಾಜಳ ನೆನಹಿಗಾಗಿ. ಅಮರ ಪ್ರೇಮದ ಸರ್ವಶ್ರೇಷ್ಠ ಸ್ಮಾರಕ ಇದು. ಸಾಧಾರಣ ಮುನ್ನೂರು ವರ್ಷಗಳ ಹಿಂದೆ ಇದನ್ನುರಚಿಸಲಾಗಿದ್ದರೂ ನೋಟಕ್ಕೆ ನವೀನವಾಗಿ ಇಂದು ನಿನ್ನೆಯದೇ ಎಂಬಂತೆ ಭಾಸವಾಗುತ್ತದೆ. ಈ ತಾಜಮಹಲಿನ ಚೆಲುವು, ಅಸದಳ ವಾಸ್ತುಶಿಲ್ಪದ ದೃಷ್ಟಿಯಲ್ಲಿ ಇದಕ್ಕಿಂತಲೂ ಹೆಚ್ಚಿನ ಪಾಂಡಿತ್ಯಪೂರ್ಣ ಕೃತಿಯಿಲ್ಲವೆಂದಿಲ್ಲ; ಅಥವಾ ಕೈಕುಸುರಿನ ಕೆಲಸದಲ್ಲಾದರೂ ಇದನ್ನು ಮಿಗಿಸುವ ವಸ್ತುವಿಶೇಷಗಳಿವೆ. ಆದರೆ ಎರಡೂ ದೃಷ್ಟಿಯಿಂದಲೂ ಉತ್ತಮವಾಗಿ ಆಕರ್ಷಣೀಯವಾಗಿ ಜನರ ಕಣ್ಮನಗಳನ್ನು ತಣಿಸುವ ತೇಜ ಮಾತ್ರ ತಾಜಮಹಾಲಿಗೇನೇ.

ಈ ಅನುಪಮ ಮಹಲು ಸಂಪೂರ್ಣ ಅಮೃತಶಿಲೆಯಿಂದಲೇ ವಿರಚಿತವಾಗಿದೆ. ನಡುವೆ ಹಿರಿದಾದ ಗೋಲಗುಂಬಜ. ಅದರ ನಾಲ್ಕೂ ಸುತ್ತ ಕಿರಿದಾದ ಗುಂಬಜಗಳು. ಮತ್ತು ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಿನಾರಗಳು. ಆಕೃತಿಯಲ್ಲಾಗಲಿ ಶಿಲ್ಪ ವೈಖರಿಯಲ್ಲಾಗಲಿ ಕಲಾಪೂರ್ಣವಾದ ವಾಸ್ತುವಿದು. ಒಳಗಿನ ಹೂಬಳ್ಳಿಗಳ ಕೆತ್ತನೆ ಬಣ್ಣದ ಬೆಲೆ ಬಾಳುವ ಕಲ್ಲುಗಳ ಜೋಡಣೆ ಅಪ್ರತಿಮವಾಗಿದೆ. ತಾಜಿನ ಮುಂಭಾಗದಲ್ಲಿ ಸುಂದರವಾದ ಉದ್ಯಾನವಿದೆ. ಇಕ್ಕೆಡೆಗಳಲ್ಲಿ—


ಒಂದು ಮಸೀದೆ; ಇನ್ನೊಂದು ರಾಜಭವನ. ತೇಜಃಪುಂಜವಾದ ಈ ಮಹಾಮಹಲನ್ನು ಚಂದ್ರಮನ ಬೆಳಕಲ್ಲಿ ಕಂಡರೆ ಸ್ವರ್ಗೀಯ ಆನಂದವಾಗುವುದಂತೆ. ಈ ಸಂದರ್ಭ ತುಸು ಹೊತ್ತಾದರೂ ಅನುಭವಿಸುವ ಸೌಭಾಗ್ಯ ನಮಗೊದಗಿ ಬಂತು. ಪ್ರಿಯತಮೆಗಾಗಿ ರಾಜಪ್ರೇಮಿ ರಚಿಸಿದ ಈ ಸ್ಮಾರಕ ಪ್ರಪಂಚದ ಇತಿಹಾಸದಲ್ಲೇ ಅಗ್ರಗಣ್ಯವಾಗಿ ಹೋಗಿ ಬಿಟ್ಟಿದೆ. ಈ ರಾಜ ಪ್ರಣಯಿಗಳ ಸಮಾಧಿಯನ್ನು ಅಲ್ಲೇ ಕಾಣಬಹುದಾಗಿದೆ.

ಆಗ್ರಾದಲ್ಲಿ ಅನೇಕ ಪ್ರೇಕ್ಷಣೀಯ ರಚನೆಗಳಿವೆ. ಆದರೆ ನಾವು ನೋಡಿದುದು ಕೋಟೆ ಮಾತ್ರ. ಕೆಂಪುಕೋಟೆಯೊಳಗಣ ರಂಗಮಂಟಪ, ಮಹಲುಗಳಂತೆ ಈ ಕೊತ್ತಲದೊಳಗೂ ಹಾಲುಗಲ್ಲಿನ ಅನೇಕ ವಿಸ್ಮಯಕಾರಕ ವಾಸ್ತು-ರಚನೆಗಳಿವೆ. ಎಪ್ಪತ್ತು ಅಡಿಯಷ್ಟು ಎತ್ತರವಾದ ಗೋಡೆಗಳಿದ್ದರೂ ಕೋಟೆ ಅಜೇಯ ಸೊಬಗಿನಿಂದ ವಿರಾಜಿಸುತ್ತದೆ.

ತದನಂತರದ ನಮ್ಮ ಕೇಂದ್ರ ಸಾಂಚಿ. ಇದು ಭೋಪಾಲದಿಂದ ಸುಮಾರು ಇಪ್ಪತ್ತೈದು ಮೈಲು ದೂರ ಉತ್ತರಕ್ಕಿದೆ. ಸಾಂಚಿ ಒಮ್ಮೆ ಭಾರತಾದ್ಯಂತ ಬೌದ್ಧಧರ್ಮ, ಸಾಹಿತ್ಯ, ಸಂಸ್ಕೃತಿಗಳ ತವರುಮನೆಯಾಗಿ, ರಾಜಧಾನಿಯಾಗಿ ಮೆರೆದಿದ್ದರೂ ಇಂದು ಹೇಳ ಹೆಸರಿಲ್ಲದ ಹಳ್ಳಿಕೊಂಪೆಯಾಗಿ ಬಿಟ್ಟಿದೆ. ಆದರೆ ಸಾಂಚಿಯ ಸ್ತೂಪವನ್ನು ಕಂಡ ನನಗೆ ನಮ್ಮ ಪ್ರಯಾಸದ ಪ್ರವಾಸ ಸಾರ್ಥಕವೆನಿಸಿತು. ಜಂಬೂದ್ವೀಪದಲ್ಲಿನ ಬೌದ್ಧ ವಾಸ್ತು-ಶಿಲ್ಪ ಅವಶೇಷಗಳಲ್ಲೆಲ್ಲಾ ಇದು ಪುರಾತನವಾದುದು ಮಾತ್ರವಲ್ಲ ಶ್ರೇಷ್ಠವಾದುದು. ಮಹಾಸ್ತೂಪಕ್ಕೆ ನಾಲ್ಕು ದ್ವಾರಗಳಿವೆ; ಅಥವಾ ತೋರಣಗಳಿವೆ. ಕ್ರಿಸ್ತಪೂರ್ವ ಎರಡನೆಯ ಶತಮಾನಕ್ಕಿಂತಲೂ ಹಿಂದೆ ಕಲ್ಲಲ್ಲಿ ಕೆತ್ತಿದ್ದ ಶಿಲ್ಪಿಯ ಚಮತ್ಕಾರಿಕ ಕೃತಿಗಳು ಇಂದಿಗೂ ಚಿತ್ರವಿಚಿತ್ರವಾಗಿ ಗೋಚರಿಸುತ್ತವೆ. ಇದನ್ನು ಎಷ್ಟು ಹೊಗಳಿದರೂ ಸಾಲದು. ಬುದ್ಧ ಜಾತಕಗಳ ಕಥಾಸನ್ನಿವೇಶಗಳನ್ನು ಆಯ್ದು ಈ ಕಲ್ಲ ತೋರಣಗಳಲ್ಲಿ ಹೃದಯಂಗಮವಾಗಿ ಕಡೆಯಲಾಗಿದೆ. ಭರತವರ್ಷದ ಈ ಶಿಲ್ಪಿಗಳ ಸೂಕ್ಷ್ಮ ಕೆತ್ತನೆ ಇಂದಿಗೂ ಜೀವಂತವಾಗಿದೆ. ಬಣ್ಣನೆಗೆ ನಿಲುಕದ ಈ ಕೃತಿಗಳು ಶಿಲ್ಪ ಶಾಸ್ತ್ರದಾಧಾರದಲ್ಲೇ ರಚಿತವಾಗಿರಬೇಕು. ಇಲ್ಲೂ ಒಂದು ವಸ್ತು ಸಂಗ್ರಹಾಲಯವಿದೆ. ಆದರೆ ಇಲ್ಲಿನ ಸಂಗ್ರಹ ಸಾರನಾಥಕ್ಕೆ ಸರಿ ಸಾಟಿಯಾಗಿಲ್ಲ. ಬುದ್ಧನ ಶಿಷ್ಯಪರಂಪರೆಯ ಸಾರಿಪುಟ್ಟ ಮತ್ತು ಮೊಗ್ಗಲಾಯಿನರ ಅಸ್ಥಿಗಳನ್ನು ಇತ್ತೀಚೆಗೆ ಬ್ರಿಟಿಷ್ ಸರಕಾರದಿಂದ ಪಡೆಕೊಂಡು ಇಲ್ಲೂ ಒಂದು ವಿಹಾರವನ್ನು ಸ್ಥಾಪಿಸಲಾಗಿದೆ.

ಬಳಿಕ ಭೋಪಾಲವನ್ನು ಸುತ್ತಿ ಅಲ್ಲಿನ ಸುಂದರ ಸರೋವರವನ್ನು ಬಳಸಿ ಔರಂಗಾಬಾದಿಗೆ ರೈಲು ಹಿಡಿದೆವು. ಜಗತ್ಪ್ರಸಿದ್ಧ ಎಲ್ಲೋರ ಮತ್ತು ಅಜಂತೆಯ ಗುಹಾಂತರ್ಗತ ದೇವಾಲಯಗಳನ್ನು ನೋಡುವುದು ನಮ್ಮ ಕಾರ್ಯಕ್ರಮವಾಗಿತ್ತು. ಔರಂಗಾಬಾದಿನಲ್ಲಿನ ಬೀಬಿಕಾ ಮುಖಬಾರಾವನ್ನೂ ಕಂಡೆವು. ಇದು ಔರಂಗಜೇಬನ ಪತ್ನಿಯ ಗೋರಿ. ಆ ಕೃಪಣ ಇದನ್ನು ತಾಜಮಹಲನ್ನು ಮಿಗಿಸುವ ರೀತಿಯಲ್ಲಿ ಕಟ್ಟಬೇಕೆಂದು ಯತ್ನಿಸಿದ್ದರೂ ಅವನ ಪ್ರಯತ್ನವೆಲ್ಲ ವಿಫಲವಾಗಿದೆ. ನೋಟಕ್ಕೆ ಸುಂದರವಾಗಿ ತಾಜಮಹಲಿನಂತೆಯೇ ಗೋಚರಿಸಿದರೂ ನೂರು ಬೀಬಿಕಾ ಮುಖಬಾರಗಳನ್ನು ಒತ್ತಟ್ಟಿಗಿಟ್ಟರೂ ಒಂದು ತಾಜಮಹಲಾಗದು! ಅಲ್ಲೇ ಮೂರು ನಾಲ್ಕು ಮೈಲು ದೂರದಲ್ಲಿ ಔರಂಗಾಬಾದ ಕೋಟೆಯಿದೆ. ಇದೂ ದರ್ಶನೀಯವಾಗಿದೆ.

ಎಲ್ಲೋರ ಅಥವಾ ವೆರೂಳದ ಗವಿದೇಗುಲಗಳು ಎಲಿಫೆಂಟಾ ಮತ್ತು ಕನ್ಹೇರಿಯ ಗವಿಗಳ ಮಾದರಿಯಲ್ಲೇ ಇವೆ. ಇಲ್ಲಿ ಬ್ರಾಹ್ಮಣ, ಬುದ್ಧ ಮತ್ತು ಜೈನ ಧರ್ಮಗಳ ಗವಿ ದೇಗುಲಸಮೂಹವಿದೆ. ಶಿಲಾ ಬೆಟ್ಟದ ಅಂಚನ್ನು ಕೊರೆದು ಇವುಗಳನ್ನು ನಿರ್ಮಿಸಿದ ರೀತಿ ಆತ್ಯಾಶ್ಚರ್ಯಕರ. ಹೈದರಾಬಾದು ಭಾರತ ಸರಕಾರದೊಳಗೆ ವಿಲೀನವಾದರೂ ಪ್ರಾಚ್ಯ-ವಾಸ್ತು-ಶಿಲ್ಪ-ಸಂಶೋಧನ ಸಂರಕ್ಷಣ ಇಲಾಖೆ ನಮ್ಮ ಸರಕಾರದ ಕೈಕೆಳಗಿದ್ದರೂ ದೇಶೀಯ ರಾಜರ ಸ್ವಚ್ಛಂದ ವೃತ್ತಿ, ದರ್ಪ, ಅಹಂಕಾರ, ಅಧಿಕಾರಿಗಳ ವರ್ಚಸ್ಸು ಇನ್ನೂ ಮಾಸಿಹೋಗಿಲ್ಲ. ನನ್ನ ಕಿಸೆ ಕ್ಯಾಮೆರಾದಿಂದ ನೆನಹಿಗಾಗಿ ಕೆಲವು ಚಿತ್ರಗಳನ್ನು ಕೊಳ್ಳುವೆನೆಂದರೆ ಅದಕ್ಕೂ ನಕಾರ ನಿರ್ಬಂಧಗಳನ್ನು ತಂದೊಡ್ಡಿ ಕ್ಯಾಮೆರಾವನ್ನೇ ಕಸಿದುಕೊಳ್ಳುವಷ್ಟು ದರೋಡೆ ಪ್ರಸಂಗ ಬಂದಾಗ ನಾನು ಗವಿ ಸಂದರ್ಶನಗಳಿಗೆ ಬಹಿಷ್ಕಾರ ಹಾಕಿದೆ. ದೇಶವಿದೇಶಗಳಿಂದ ಬರುವ ಎಲ್ಲ ಪ್ರವಾಸಿ-ವಿಹಾರಿಗಳು ಈ ರೀತಿಯ ಹಿಂಸೆಗೆ ತಲೆಬಾಗಿ ಸುಮ್ಮನಾಗುವರೆಂದು ತಿಳಿದಾಗ ನನ್ನಂತಹ ಸರ್ವಸಾಮಾನ್ಯ ಪ್ರಜೆಯ ಅಸಮಾಧಾನವನ್ನು ಕೇಳುವವರಾರು?



ಬೀಬಿಕಾ ಮುಖಬಾರಾ, ಔರಂಗಾಬಾದ

ಜಗದ್ವಿಖ್ಯಾತ ಅಜಂತೆಯ ಚಿತ್ರಕಲೆಯನ್ನು ಈಕ್ಷಿಸುವುದೂ ನಮ್ಮ ಪ್ರವಾಸದ ವಿಷಯವಾಗಿತ್ತು. ಆದರೆ ಅಲ್ಲೂ ಚಿತ್ರಗ್ರಹಣಕ್ಕೆ ರಾಹುಗ್ರಾಸವಿದೆಯೆಂದು ತಿಳಿದ ನಾನು ವೆರೂಳದ ಹುಚ್ಚು ಸತ್ಯಾಗ್ರಹವನ್ನೇ ಕೈಗೊಂಡೆ. ಭಾರತ-ಚಿತ್ರಕಲಾಪ್ರವೀಣತೆಯ ಹೆಮ್ಮೆಯ ಈ ಕಲಾಮಂದಿರವನ್ನು ಕಾಣದೆ ಬಂದುಬಿಟ್ಟೆನಲ್ಲಾ ಎಂದು ಮನಸ್ಸು ಮುಂದೆ ಪರಿತಪಿಸಿತು.

ನಂತರ ನಮ್ಮ ಪಯಣ ಪುಣೆಗೆ. ಗಾಂಧೀಜಿಯವರ ಸಮಾಧಿಯನ್ನು ದೆಹಲಿಯಲ್ಲಿ ಕಂಡ ನಮಗೆ ಅವರ ಧರ್ಮಪತ್ನಿ ಕಸ್ತೂರಿಬಾರ ಸಮಾಧಿಗೂ ದರ್ಶನವೀಯಬೇಕೆನಿಸಿತು. ಪುಣೆಯ ಆಗಾಖಾನರ ಅರಮನೆಯ ಆವರಣದಲ್ಲೇ 'ಬಾರ

ಸಮಾಧಿಯಿದೆ. ಬಳಿಯಲ್ಲೇ ಗಾಂಧೀಜಿಯವರ ಬಲಗೈಯಾಗಿದ್ದ ಅವರ ಕಾರ್ಯದರ್ಶಿ ಮಹಾ-ದೇವ ದೇಸಾಯಿಯವರ ಸ್ಮಾರಕವಿದೆ. ಇವರೀರ್ವರೂ ಸ್ವಾತಂತ್ರ್ಯ ಚಳವಳಿಯ ಬಂಧನದ ಅವಧಿಯಲ್ಲೇ ಕಣ್ಮರೆಯಾದ ಸಂಗತಿ ಸರ್ವವಿದಿತವಾಗಿದೆ. ಪುಣೆಯ ವೇಧಶಾಲೆಯನ್ನೂ, ಶನಿವಾರವಾಡೆ ಮುಂತಾದ ಇನ್ನಿತರ ಪ್ರೇಕ್ಷಣೀಯ ಸ್ಥಳಗಳನ್ನೂ ಸಂದರ್ಶಿಸಿ ಕೊನೆಗೆ ಮುಂಬಯಿಗೆ ಮರಳಿದೆವು.

ನಮ್ಮ ಭಾರತ ದೇಶ-ವಿದೇಶೀ ಪ್ರವಾಸಿಗಳ ಭೂಸ್ವರ್ಗ. ಪೃಥ್ವಿಯಲ್ಲಿ ಸುಖ, ಸೌಂದರ್ಯ ಮತ್ತು ಸಂಪತ್ತನ್ನು ಕಾಣಬೇಕಾದರೆ ನಾವು ಅಮೇರಿಕಾವನ್ನೆ ಆದರ್ಶವನ್ನಾಗಿ ಇಟ್ಟುಕೊಳ್ಳಬೇಕೆಂದಿಲ್ಲ. ಯುರೋಪೇ ಭೂಕೈಲಾಸವೆಂದು ಬಗೆಯಬೇಕಾಗಿಲ್ಲ. ಭೂಲೋಕದ ಯಾವೆಡೆಗೂ ಕೀಳೆನಿಸದ, ಸರಿ ಸಾಟಿಯಾದ, ಏಕೆ-ಮಿಗಿಲೆನಿಸುವ ವಿಷಯ, ಸ್ಥಳ, ವೈವಿಧ್ಯಗಳು ನಮ್ಮಲ್ಲಿ ಇವೆ.

ಭಾರತದ ನಾಡಿನ ಆಧ್ಯಾತ್ಮಿಕ, ತಾತ್ವಿಕ, ನೈಸರ್ಗಿಕ ಮಹತ್ವವನ್ನು ಮನಗಂಡ ಜರ್ಮನ್ ದೇಶದ ಮ್ಯಾಕ್ಸ್ ಮುಲ್ಲರ್ (Max Muller) ಎಂಬೊಬ್ಬ ವಿದ್ವಜ್ಜ ಸಾಹೇಬರು 'ಈ ಜಗತ್ತಿನಲ್ಲಿ ಶಕ್ತಿ-ಸಂಪತ್ತು ಮತ್ತು ಸೌಂದರ್ಯವನ್ನು ನಿಸರ್ಗ ದಯಪಾಲಿಸಿರುವ ಒಂದು ದೇಶವನ್ನು ಹುಡುಕ ಬಯಸುವುದಾದರೆ-ಕೆಲವೆಡೆ ಭೂಸ್ವರ್ಗವನ್ನೆ ನೋಡಲೆಳಸಿದರೆ-ಅದು ಭಾರತವೆಂದು ನಾನ ಕೈಯೆತ್ತಿ ತೋರಿಸಬೇಕಾಗಿದೆ'-ಎಂದು ಬರೆದಿರುತ್ತಾರೆ.

ಧವಳಗಿರಿ ಹಿಮಾಲಯ ಬೇಕೇ? ಹೆಬ್ಬುಲಿಯಿಂದ ತುಂಬಿದ ಸುಂದರ ಬನ ಬೇಕೇ! ಕಗ್ಗಾಡಿನ ವನಗಳಿವೆ. ವಿವಿಧ ಜಾತಿಯ ಮೃಗ ಪಕ್ಷಿಗಳಿವೆ. ರಾಜಸ್ಥಾನದ ಮರುಭೂಮಿ, ಗಂಗಾನದಿಯ ಹಚ್ಚ ಹಸುರಿನ ಬಯಲು ಭೂಮಿ, ನೂರಾರು ಬಗೆಯ ದವಸ ದಾನ್ಯಗಳನ್ನು ಕೊಡುವ ದಕ್ಷಿಣದ ಪೀಠ ಭೂಮಿ-ಪ್ರವಾಸಿಗೆ ಇನ್ನೇನು ಬೇಕು?

ರೋಗ ಯಾವಾಗಲೂ ಕುದುರೆಯನ್ನೇರಿ ಬಂದು ಕಾಲ್ನಡಿಗೆಯಲ್ಲಿ ಮರಳುತ್ತದೆ.

— ಲುಯಿಸ್ ನಿಝುರ್.

ತಪ್ಪು ಮಾಡಿಯೂ ಅದನ್ನೊಪ್ಪಿಕೊಳ್ಳದ ಮನುಷ್ಯ ಯಾವಾಗಲೂ ಸಿಟ್ಟಿಗೇಳುತ್ತಾನೆ.

— ಹ್ಯಾಲಿ ಬರ್ಟನ್

ಒಂದು ಪ್ರಾತರ್ವಿಹಾರ

ಹಗಲಿರುಳು ಬಿಡದೆ ಒಂದೇ ಸವನೆ ಸುರಿದ ಮಳೆ
ಇಂದಿನೀ ಬೆಳಗಿನಿಂದೇಕೊ ನಿಂತಿಹುದು! ಇಳೆ
ಮೈದೊಳೆದು ಹಸರು ಸೀರೆಯನುಟ್ಟು, ಗಲ್ಲಕ್ಕೆ
ಹಳದಿಯನು ಹಚ್ಚಿಕೊಂಡಂತೆ ಹೊಂಬಿಸಿಲುಕ್ಕೆ
ನನ್ನ ದೈನಂದಿನದ ಪ್ರಾತರ್ವಿಹಾರಕ್ಕೆ
ರೆಕ್ಕೆ ಬಲಿದಂತಾಯ್ತು—ಬಿರುಗಾಳಿ ಬಡಿತಕ್ಕೆ
ರೇವು ಸೇರಿದ ನೌಕೆ ಕಡಲ ಸೌಮ್ಯಕೆ ಸೋತು
ಮರುಪಯಣ ಹೊರಟಂತೆ ಮನೆಯ ಹೊರವಂಟೆನಿದೊ!
ಹುಬ್ಬಳ್ಳಿ—ಧಾರವಾಡದ ನಡುವಿನೀ ದಾರಿ
ಇಬ್ಬದಿಯ ಹಸುರಿನಸ್ತವ್ಯಸ್ತವನು ತೋರಿ
ಕರೆದೊಯ್ಯುತಿದೆ ಹಸುರ ಸ್ವಪ್ನಲೋಕಕ್ಕೆನ್ನ!
ಮುಗಿಲಟ್ಟಳೆಯನೇರಿ ಮಳೆಯನಿಳಿಸಿದ ಗಾಳಿ
ಬಳಲಿ ನಿಡುಸುಯ್ಯುತಿದೆ, ಜೋಲಿ, ಮೆಲ್ಲನೆ ತೇಲಿ
ಬಂದಪ್ಪಿಕೊಳುತಲಿದೆ, ಮೆಲ್ಲ ಮುನ್ನಡೆಸುತಿದೆ. . . . .
ಇದೊ ಬಂತು ನಗರಸೀಮಾರೇಖೆ, ಎಡಬದಿಗೆ
ಗಡಿಗಂಬದಂತೆ ನಿಂತಿದೆ ವೃಕ್ಷ ಏಕಾಕಿ—
ಯಕ್ಷನಾಟಕದ ಕೈರಾತ ನಾಯಕನಂತೆ
ಹಸುರಂಗಿಯನೆ ತೊಟ್ಟು, ದಿಟ್ಟಡಿಯನಿಟ್ಟು!
ಬಳಿಯೊಳಿಹ ನೀರ ಕಿರುಹರಹ ಕನ್ನಡಿಯಲ್ಲಿ
ಅರುಣೋದಯದ ಬಾನತುಣುಕು ಹೊಳೆಹೊಳೆಯುತಿರೆ,
ಅದರ ಹೃದಯದಿ ಬೆಟ್ಟ ಹುದುಗಿದಚ್ಚರಿ ಕಂಡೆ!
ಹಸುರ ಹೆಮ್ಮೆಯೆ ಗುಡ್ಡಗಟ್ಟಿದಂತೆಸೆಯುತಿಹ
ಮೈಲಾರಲಿಂಗ ಗಿರಿ! ಗಿರಿಶಿರದಿ ಶಿಲ್ಪಕಲೆ
ಹಸುರ ಪರಿಧಾನದಲೆ ತಲೆ ಎತ್ತಿ ನಿಂತಿಹುದು!
ಸುಪ್ರಭಾತದ ನಭದ ನೀಲಿ-ಕೆಂಪನೆ ಮೆದ್ದು
ತಂಗಾಳಿಯೊಳಗದ್ದು ಈಜಿಬಹ ಪಕ್ಷಿಕುಲ
ಗುಡಿಗೆ ಗಾನಾಮೃತದಿನಭಿಷೇಕ ಗೆಯ್ಯುತಿದೆ!
ದಿಟ್ಟಯಟ್ಟದೆ ಮುಂದೆ. . . . . ಮಾವು, ಪೇರಿಳೆ ತೋಟ,
ಬತ್ತ, ಜೋಳದ ಹೊಲದ ಹಸುರು ಹೊಳೆ ಹರಿಯುತಿದೆ!
ಅನತಿದೂರದೊಳಲ್ಲಿ, ಶಾಲ್ಮಲಿಯ ಸೆಲೆಯೊಡೆದ
ಸೋಮೇಶ್ವರನ ಜಟಾಜೂಟದೈಸಿರಿಯ ಮುಡಿ!
ಕಿಡಿಗೆದರಿ, ಹೊಗೆ ಕಾರಿ ಸಾರುತಿದೆ ಬುಸುಗುಡುತ
ಹಸರು ಹಬ್ಬಿದ ರೈಲದಿಬ್ಬದಲಿ ರೈಲೊಂದು!
ಹಸುಳೆ ಮೊಗದಲ್ಲಿ ಹುಬ್ಬುಗಂಟಿಕ್ಕಿದಂತೆ!
ನವಿಲೂರ ಗ್ರಾಮದಂಚಿದೊ ಚುಂಚುಕವ ಚಾಚಿ
ತಡೆಗಟ್ಟಿತೆನ್ನ ನಡೆ; ಕೈಯ ಗಡಿಯಾರದಲಿ
ಗಂಟೆ ಏಳಾಗಿತ್ತು—ಹಸುರ ಹಬ್ಬವನಿಂತು
ಕಣ್ತುಂಬ ಕಂಡೆ, ಬಗೆಗೊಂಡೆ ಹಸುರಿನ ಹರ್ಷ
ಹಳೆಯರನು ಎಳೆಯರಾಗಿಸುವ ಅಮೃತಸ್ಪರ್ಶ
ಎಂಬುದನು—ಬಂದವನೆ ಬರೆದೆನೀ ಚಿತ್ರವನು!

—ಗಣಪತಿರಾವ್ ಪಾಂಡೇಶ್ವರ್


ಕನಸಿನ ಕಥೆ
ರಾಮೂ, ನೀ ಬರೆದ ಕಥೆ ಓದೋ
ಒಂದು ಒಳ್ಳೆ ಕಥೆ ಬರೆಯಬೇಕೆಂದು ಯೋಚಿಸುತ್ತ ಮಲಗಿದ್ದೆ. ಹಾಗೆಯೇ ನಿದ್ದೆ ಬಂದು ಹೋಯಿತು ಸರ್
ಅಲ್ಲ! ನಿಲ್ಲು ಬೆಂಚಿನಮೇಲೆ
ಬೆಳಿಗ್ಗೆ ಏಳುವಾಗ ಹೊತ್ತಾಗಿ ಹೋಗಿತ್ತು.
ನಿದ್ದೆಯಲ್ಲಿ ಒಂದು ಕನಸು ಬಿತ್ತು ಸರ್, ಇಲ್ಲವಾದರೆ,
ಏನು? ಕನಸು ಬೇರೆ ಬಿತ್ತೇನು
ಏನು ಕನಸು ಬಿತ್ತು? ನನ್ನ ಕೈಯಲ್ಲಿ ಛಡಿ ಏಟು ತಿಂದ ಹಾಗೇನು?
ಅಲ್ಲ, ಕನಸಿನಲ್ಲಿ ನಾನು ಒಂದು ತೋಟದಲ್ಲಿದ್ದೆ. ಅಲ್ಲಿಗೆ ನನ್ನಷ್ಟೇ ದೊಡ್ಡದಾದ ಒಂದು ಸುಂದರ ಪಾತರಗಿತ್ತಿ ಬಂದಿತು.
ನಾನು ಅದನ್ನೇರಿ ಕುಳಿತೆ. ಅದು ನನ್ನನ್ನು ಪುಟ್ಟ ಮಕ್ಕಳ ಲೋಕಕ್ಕೆ ಕರೆದೊಯ್ಯಿತು
ಅಲ್ಲಿಯ ಮಕ್ಕಳಿಗೆ ರೆಕ್ಕೆಗಳಿದ್ದವು. ನಾನು ಭೂಲೋಕದವನೆಂದು ಅವಕ್ಕೆ ನನ್ನ ಮೇಲೆ ಪ್ರೀತಿ ಹುಟ್ಟಿತು
ನಾನವರಿಗೆ ಹೇಳಿದ ಮೋಟರ್ ವಿಮಾನ ಸಿನಿಮಾ ವಿಚಾರಗಳನ್ನು ಕೇಳಿ ಅವು ಸಂತೋಷಪಟ್ಟು ತಮ್ಮಲ್ಲಿದ್ದ ರುಚಿಯಾದ ತಿಂಡಿಯನ್ನು ನನಗೆ ಕೊಟ್ಟವು.
ನಾನು ಪಾತರಗಿತ್ತಿಯ ಬೆನ್ನನ್ನೇರಿ ತಿರುಗಿ ಮನೆಗೆ ಬಂದು —
—ನೀವು ಹೇಳಿದಂತೆ ಕಥೆ ಬರೆಯತೊಡಗಿದೆ.
ಅಷ್ಟರಲ್ಲಿ ನಾನು ಬರೆದದ್ದನ್ನು ಕಸಿದುಕೊಳ್ಳಲು ಒಬ್ಬ ಧಾಂಡಿಗ ಹುಡುಗ ಬಂದ.
ನಾನು ಓಡತೊಡಗಿದೆ ಆ ಹುಡುಗ ನನ್ನನ್ನು ಬೆನ್ನಟ್ಟಿ ಹಿಡಿದು ಎರಡೇಟು ಕೊಟ್ಟ
ನಾನು "ಅಯ್ಯೋ" ಎಂದು ಕಣ್ಣು ತೆರೆದೆ.
ಹೊತ್ತಾಯಿತು ಶಾಲೆಗೆ ಹೋಗುವದಿಲ್ಲವೇನೊ? ಎಂದು ಅಪ್ಪ ಕಿವಿ ಹಿಂಡುತ್ತಿದ್ದರು
ನಾನು ಎದ್ದುಹಾಗೇ ಶಾಲೆಗೆ ಬಂದೆ ಇಂದು ಕಾಫಿ ಕೂಡ ಕುಡಿಯಲಿಲ್ಲ. ಈಗ ಮನೆಗೆ ಹೋಗಿ ಬರಲೇ ಸರ್
ಸರಿ ನೀನು ಕಥೆ ಬರೆದಿರದಿದ್ದರೂ ನಿನ್ನ ಕನಸಿನ ವಿಚಾರ ಹೇಳಿದ್ದರೂ ನಿನ್ನ ಊಹಾಶಕ್ತಿ ಚನ್ನಾಗಿದೆಯಾದ್ದರಿಂದ
ನಿನ್ನನ್ನು ಕ್ಷಮಿಸಿದ್ದೇನೆ. ಮನೆಗೆ ಹೋಗಿ ಕಾಫಿ ಕುಡಿದು ಬಂದು ಈಗ ಹೇಳಿದ್ದನ್ನೇ ಸುಂದರವಾದ ವಾಕ್ಯಗಳಲ್ಲಿ ಬರೆದು ತೋರಿಸು
P. Anant

ಯಂತೆ ತನ್ನ ಸತೀತ್ವವನ್ನು ಕಾಯ್ದುಕೊಂಡು ಬಂದಿರುವ ಆ ವೀರ ವೇಶ್ಯಾಪುತ್ರಿಯ ಧೀರ ವೃತ್ತಿಯು ಶ್ಲಾಘನೀಯವೇ ಸರಿ. ಇಷ್ಟೆಲ್ಲ ತಾನು ಛೀ ಮಾಡಿದ ಬಳಿಕ ತನ್ನ ಮಗಳು ತನ್ನ ಜೈಗಳಿಗಂಜಿ ಹಳೆಯ ಗಂಡನನ್ನು ಬಿಟ್ಟು ಹೊಸಬರಾರನ್ನಾದರೂ ವರಿಸಿರಬಹುದೆಂದು ಮರುದಿನ ಕೇಳಲಾಗಿ ಆ ವೇಶ್ಯಾಪುತ್ರಿಯು ಚಮತ್ಕಾರವಾಗಿ ಉತ್ತರಕೊಟ್ಟು ಪಾರಾಗುತ್ತಾಳೆ.

'ಕಾಂತೇ ತಲ್ಪಮುಪಾಗತೇ ವಿಗಲಿತಾ
ನೀವೀ ಸ್ವಯಂಬಂಧನಾತ್
ವಾಸಶ್ಚ ಶ್ಲ ಥಮೇಖಲಾ ಗುಣಧೃತಂ
ಕಿಂಚಿನ್ನಿತಂಬೇ ಸ್ಥಿತಂ ॥
ಏತಾವನ್ನನುವೇತ್ಥಿ ಕೇವಲಮಹಂ ತಸ್ಯಾಂಗ
ಸಂಗೇ ಪುನಃ
ಕೋಽಸೌ ಕಾಸ್ಮಿ ರತಂ ಚ ಕೀದೃಶಮಿತಿ
ಸ್ವಲ್ಪಾಪಿ ಮೇ ನ ಸ್ಮೃತಿಃ ॥
(ವಿಕಟ ನಿತಂಬಾ)

'ವಿಹಾರ ಕ್ರೀಡೆಯಲ್ಲಿ ವಿಕರಸಳಾದ ನನಗೆ ಅವನು ಯಾರು ನಾನು ಯಾರು ಎಂಬ ಸ್ಮರಣೆಯೇ ಉಳಿಯಲಿಲ್ಲ' ಎಂದು ಹೇಳುತ್ತಾಳೆ.

ಇದು ವೇಶ್ಯಾಕುಲದಲ್ಲಿ ಹುಟ್ಟಿದ ಗರತಿಯೋರ್ವಳ ಮನೋಭಾವವಾದರೆ ಗರತಿಯರ ವಂಶದಲ್ಲಿಯೇ ಬೆಳೆದ ಕುಲಟೆಯೋರ್ವಳ ಕುತ್ಸಿತ ವಿಚಾರವನ್ನೂ ತುಚ್ಛ ಮನೋಭಾವನೆಯನ್ನೂ ಕೇಳಿರಿ. (ಮಧುರವಾಣಿ)

ಆಕಾರೇಣ ಶಶೀ ಗಿರಾ ಪರಭೃತಃ
ಪಾರಾವತಶ್ಚುಂಬನೇ
ಹಂಸಶ್ಚಂದ್ರಮಣಿ ಸಮುಂದಯಿತಯಾ
ರತ್ಯಾ ವಿಮರ್ದೇ ಗಜಃ ॥
ಇತ್ಥಂ ಭರ್ತರಿಮೇ ಸಮಸ್ತ ಯುವತಿ
ಶ್ಲಾಘ್ಯೈರ್ಗುಣೈಃ ಕಿಂಚನಂ
ನ್ಯೂನಂ ನಾಸ್ತಿ ಪರಂ ವಿವಾಹಿತ
ಇತಿ ಸ್ಯಾನ್ನೈಕ ದೋಷೋಯದಿ॥

"ನನ್ನ ಪತಿಯು ವಾಸ್ತವಿಕವಾಗಿ ವಿಚಾರಿಸಿದರೆ ಆಕಾರದಿಂದ ಚಂದ್ರನಂತೆ ಸುಂದರನೂ ಕೋಕಿಲದಂತೆ ಮಧುರಕಂಠನೂ ಹಂಸದಂತೆ ಗಂಭೀರ ಗಮನನೂ ಮದ್ದಾನೆಯಂತೆ ವಿಹಾರ ಚತುರನೂ ಇದ್ದು ಅವನಲ್ಲಿ ತರುಣಿಯರು ಬಯಸುವ ತರುಣನಲ್ಲಿರಬೇಕಾದ ಎಲ್ಲ ಸದ್ಗುಣಗಳೂ ಇವೆ. ಯಾವುದಕ್ಕೂ ಅವನಲ್ಲಿ ನ್ಯೂನತೆ ಇಲ್ಲ. ಆದರೆ ಅವನಲ್ಲಿರುವ ಒಂದೇಒಂದು ದೋಷವೆಂದರೆ ಅವನು 'ವಿವಾಹಿತ'. ಮದುವೆಯಾಗಿ ನನ್ನ ಕೈ ಹಿಡಿದವ ಎಂಬುದೊಂದೇ ಅವನಲ್ಲಿರುವ ಕುಂದು. ಆ ಗಂಡ ಎಂಬ ಶಬ್ದವೇ ನನಗೆ ಅವನಲ್ಲಿ ವೈರಾಗ್ಯವನ್ನು ಹುಟ್ಟಿಸಿದೆ" ಎಂದು ಹೇಳುತ್ತಾಳೆ. ಈ ಅನ್ಯತೋಪವನದಲ್ಲಿ ವಿಷಬಳ್ಳಿಯಂತೆ ಬೆಳೆದ ಇಂಥ ಕುಲೀನ ಕನ್ಯೆಯರ ಮುಂದೆ ಮೇಲಿನಂಥ ಕುಲಟಾಕುಮಾರಿಯರೇ ಸತೀಶಿರೋಮಣಿಯರಾಗಿ ತೋರುವದಿಲ್ಲವೇ? ಇಂಥ ನಾರಿಯರಿಂದಾಗಿಯೇ 'ವಿಶ್ವಾಸೋ ನೈವ ಕರ್ತವ್ಯಃ ಸ್ತ್ರೀಷು' 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' 'ನಾರೀ ಪ್ರತ್ಯಕ್ಷ ರಾಕ್ಷಸೀ' 'ನಾರೀ ಕ್ವನಾರೀಯತಿ' ಯೋಷಿತಾಂ ಹೃದಿ ಹಾಲಾಹಲಮೇವಕೇವಲಂ 'ಭಾರ್ಯಾ ರೂಪವತೀ ಶತ್ರುಃ' ಮುಂತಾದ ವಾಕ್ಯಗಳು ಹುಟ್ಟಿಕೊಳ್ಳುತ್ತವೆ. ಗಂಡನೆಂಬುವ ಒಂದೇ ಕಾರಣಕ್ಕಾಗಿ ಪತಿಯನ್ನು ಸೇರದ ಕುಲಟೆಯ ಮೇಲಿನ ಶ್ಲೋಕಕ್ಕೆ ವಿರುದ್ಧವಾಗಿ ಗರತಿಯೋರ್ವಳ ಪದ್ಯವನ್ನು ಪರಿಶೀಲಿಸಿರಿ.

"ಯಃ ಕೌಮಾರಹರಃ ಸ ಏವ ಹಿ ವರಸ್ತಾ ಏವ
ಚೈತ್ರಕ್ಷಪಾಃ
ತೇಚೋನ್ಮೀಲಿತ ಮಾಲತೀ ಸುರಭಯಃ
ಪ್ರೌಢಾಃ ಕದಂಬಾನಿಲಾಃ ॥
ಸಾಚೈವಾಸ್ಮಿ ತಥಾಪಿ ತತ್ರ ಸುರತ
ವ್ಯಾಪಾರಲೀಲಾವಿಧೌ
ರೇವಾರೋಧಸಿವೇತಸೀ ತರುತಲೇಚೇತಃ
ಸಮುತ್ಕಂಠತೇ ॥

"ನನ್ನ ತಾರುಣ್ಯವನ್ನೆಲ್ಲ ಅಪಹರಿಸಿದ ಅದೇ ವರನು. ಅವೇ ಚೈತ್ರರಾತ್ರಿಗಳು. ಅದೇ ಮಂದಾನಿಲ. ಅದೇ ನಾನು, ಅದೇ ಅವನು. ಎಲ್ಲಿಯೂ ಯಾವದೂ ಬದಲಿಲ್ಲ, ಹೊಸತಿಲ್ಲ. ಎಲ್ಲವೂ ಹಳೆಯದೇ. ಆದರೂ ರೇವಾತೀರದ ವೇತಸಲತಾ ಮಂಟಪದಲ್ಲಿ ಪುನಃ ಪುನಃ ಅವನೊಂದಿಗೇ ವಿಹಾರಕ್ಕಾಗಿ ಮನಸ್ಸು ಕಾತರವಾಗಿ ಹಾತೊರೆಯುತ್ತದೆ, ಉತ್ಕಂಠಿತವಾಗುತ್ತಲಿದೆ." ಇದೀಗ ತಲೆತಲಾಂತರಗಳಿಂದ ಭಾರತೀಯರ ಸಾಮಾಜಿಕ ವೈವಾಹಿಕ ಸಂಸ್ಥೆಯನ್ನು ಸುಸ್ಥಿರವಾಗಿ ಬಿಗಿದು ಶಾಂತಿಸುವ್ಯವಸ್ಥೆಗಳು ಚಿರಂತನವಾಗಿ ನೆಲೆಗೊಳ್ಳುವಂತೆ ಮಾಡುವ ಪ್ರಣಯದ ಒಳಸೂತ್ರ. ಇಂಥ ದಿವ್ಯಪ್ರೇಮಕ್ಕೆ ಗಂಡನೆಂಬುವನು ಎಂದಿಗೂ ಹಳೆತಾಗುವದೂ ಇಲ್ಲ. ಹಳಸುವದೂ ಇಲ್ಲ. ಇಂಥ ಪ್ರಣಯಪಾಶದಿಂದ ಬಿಗಿಯಲ್ಪಟ್ಟ ಸತಿ-ಪತಿಯರು 'ಕ್ಷಣೇಕ್ಷಣೇಯನ್ನವತಾಮುಪೈತಿ' ಎಂಬಂತೆ 'ನಿತ್ಯನೂತನರು' ಸತ್ಯಸುಂದರರು. (ಶೀಲಾ ಭಟ್ಟಾರಿಕೆಯ ಈ ಸ್ವಯಂಸುಂದರವೂ ಭಾವಬಂಧುರವೂ ಆದ ಮಧುರ ಪದ್ಯವನ್ನು ಸಾಹಿತ್ಯಾಚಾರ್ಯನಾದ ಮಮ್ಮಟನು ತನ್ನ ಕಾವ್ಯಪ್ರಕಾಶಿಕೆ ಎಂಬ ಉದ್ಗ್ರಂಥದಲ್ಲಿ ಉತ್ತಮೋತ್ತಮ ಕಾವ್ಯಕ್ಕೆ ಉದಾಹರಣೆಯೆಂದು ಮೊತ್ತಮೊದಲು ಉದಾಹರಿಸಿದ್ದಾನೆ.)

ಪ್ರಣಯದ ಈ ಒಳಸೂತ್ರದಿಂದ ಬಂಧಿಸಲ್ಪಟ್ಟ ಸತಿಯರು ಪತಿಯು ಅಪರಾಧ ಮಾಡಿದರೂ ಅವನನ್ನು ತ್ಯಾಗ ಮಾಡುವದಿಲ್ಲ. ಪ್ರಣಯ ಕುಪಿತರಾಗಿ ಅವನನ್ನು ಅವನ ತಪ್ಪಿಗಾಗಿ ನಿಂದಿಸುತ್ತಾರೆ, ಆಕ್ರೋಶಿಸುತ್ತಾರೆ. ಕರಳು-ಕರಗುವಂತೆ ತಮ್ಮ ದುಃಖವನ್ನು ತೋಡಿಕೊಂಡು ದೀನರಾಗಿ ವಿಲಪಿಸುತ್ತಾರೆ. ಹೆಣ್ಣುಹೃದಯದ

ಈ ಕೊರಗು ಕರುಳನ್ನು ಕೊರೆಯುತ್ತದೆ. ಅವಂತೀಸುಂದರಿ ಎಂಬ ಕವಯಿತ್ರಿಯು ತಾನು ಎಂದಿನಿಂದಲೂ ನೆಚ್ಚಿ ನಂಬಿದ ನಲ್ಲನು ಅನ್ಯಾಸಕ್ತನಾದದ್ದನ್ನು ತಿಳಿದು ದುಃಖ ಉಮ್ಮಳಿಸಿ ದುಮ್ಮಾನವಿಮ್ಮಡಿಸಿ ತನ್ನ ಉನ್ಮಾದ ಪ್ರಣಯದ ಪ್ರಸಂಗವೊಂದನ್ನು ನೆನಸಿ "ಇಂಥ ಉತ್ತ್ರಾನ ಪ್ರೇಮಪರವಶಳಾಗಿ ನಿನ್ನನ್ನೇ ನಂಬಿದ ನನ್ನನ್ನೂ ಆ ಅಮೂಲ್ಯ ಪ್ರಣಯವನ್ನೂ ಹೇಗೆ ಮರೆತೆ ಎಂದು ಕೇಳುತ್ತಾಳೆ.

"ಕಿಂತದಪಿ ಹಾ ವಿಸ್ಮೃತಂ ನಿಷ್ಕೃಪ।
ಯದ್ ಗುರುಜನಸ್ಯ ಮಧ್ಯೇಽಪಿ।
ಅಭಿಧಾಹ್ಯ ಗೃಹೀತಸ್ತ್ವಂ ಮಯಾ
ಪ್ರಸ್ತೋತ್ತರೀಯಯಾ ॥"

ಅಂದು ಒಂದು ದಿನ ಗುರುಹಿರಿಯರೆಲ್ಲರೂ ಎದುರು ಕುಳಿತಾಗಲೇ ನಿನ್ನನ್ನು ಕಂಡು ನನ್ನ ಕುರುಡಕಾಮ ಕೆರಳಿ ಪ್ರೇಮೋದ್ರೇಕದಿಂದ ನಿನ್ನೆಡೆಗೆ ಧಾವಿಸಿದೆ. ನಾಚಿಕೆ ತೊರೆದು ಹಿರಿಯರ ಸಾನ್ನಿಧ್ಯವನ್ನೂ ಮರೆತು ಜರಿದು ಸರಿಯುವ ಮೇಲುದವನ್ನೂ ಸರಿಪಡಿಸಿಕೊಳ್ಳದೆ ಆ ನನ್ನ ಉದ್ಭ್ರಾಂತ ಪ್ರಣಯಕಥೆಯನ್ನು ನಿಷ್ಕರುಣನೇ ಅದೆಂತು ಮರೆತೆ?" ರೇವಾದೇವಿ ಎಂಬ ಕವಿಕಾಮಿನಿಯು ಪುನಃ ಪುನಃ ಪರಸ್ತ್ರೀಕಾಮುಕನಾದ ತನ್ನ ಪತಿಯು ಕ್ಷಮಿಸೆಂದು ಕೇಳಿಕೊಂಡಾಗ ಬೇಸತ್ತು,

"ಕಿಂತಾವತ್ ಕೃತಾ ಅಥವಾ ಕರೋಷಿ
ಕರಿಷ್ಯಸಿ ಸುಭಗೇದಾನೀಮ್ ॥
ಅಪರಾಧಾನಾಮುಲಜ್ಜಾಶೀಲ ಕಥಯ
ಕತಮೋ ಕ್ಷಮ್ಯಂತಾವತ್ ॥

ಪ್ರಿಯನೇ ಹಿಂದೆಯೂ ಇಂಥ ಅನೇಕ ತಪ್ಪುಗಳನ್ನು ಮಾಡಿರುವಿ. ಇಂದಿಗೂ ಮಾಡುತ್ತಲೇ ಇರುವಿ, ಮುಂದೆಯಾದರೂ ಮಾಡಿಯೇ ಮಾಡುವಿ. ಅಂದ ಬಳಿಕ ಎಲೆ ನಿರ್ಲಜ್ಜನೇ, ನಿನ್ನ ಎಷ್ಟು ತಪ್ಪುಗಳನ್ನು ಅದೆಷ್ಟು ಸಲ ಕ್ಷಮಿಸಬೇಕು? ಎಂದು ನಿರ್ವಾಣ ಪ್ರಶ್ನೆಯನ್ನೇ ಕೇಳುತ್ತಾಳೆ.

ಇದೇ ಗುಣದ ಮತ್ತೊಬ್ಬ ಪುರುಷನು ತನ್ನ ತಪ್ಪನ್ನು ಕ್ಷಮಿಸೆಂದು ಪಾದಾನತನಾದಾಗ ಭಾವದೇವಿಯೆಂಬ ಭಾಮಿನಿಯು—

"ಕಿಂಪಾದಾಂತೇ ಪತಸಿ ವಿರಮ
ಸ್ವಾಮಿನೋ ಹಿ ಸ್ವತಂತ್ರಾಃ
ಕಂಚಿತ್ ಕಾಲಂ ಕ್ವಚಿದಸಿ
ರತಸ್ತೇನ ಕಸ್ತೇಽಪರಾಧಃ
ಆಗಸ್ಕಾರಿಣ್ಯಹಮಿಹ ಮಯಾಜೀವಿತಂ
ತ್ವದ್ವಿಯೋಗೇ
ಭರ್ತೃಪ್ರಾಣಾಸ್ತ್ರಿಯ ಇತಿ ನನು ತ್ವಂ
ಮಯೈವಾನುಮೇಯಃ"

"ನೀನೇಕೆ ನನಗೆ ನಮಸ್ಕರಿಸುವಿ, ನೀವು ಗಂಡಸರಲ್ಲವೇ! ಅದರಲ್ಲಿಯೂ ಗಂಡಂದಿರು! ಗಂಡಂದಿರು ಸ್ವತಂತ್ರರು ಅರ್ಥಾತ ನಿರಂಕುಶರು. ನೀವು ಬೇಕಾದಾಗ ಬೇಕಾದವಳಲ್ಲಿ ಅನುರಕ್ತರಾದರೂ ಅದು ಏನು ಅಪರಾಧವೇ ಅಲ್ಲ. ಆದರೆ ನಿನ್ನ ವಿಯೋಗದಲ್ಲಿ ಬದುಕಿ ಉಳಿದ ನಾನೇ ಮಹಾಪರಾಧಿನಿ. ಇನ್ನು ಮೇಲೆ ಮಾತ್ರ ಸ್ತ್ರೀಯರು ಪತಿಪ್ರಾಣರು ಎಂಬುವದನ್ನು ನನ್ನಿಂದಲೇ ಕಂಡುಕೊಳ್ಳುವಿಯಂತೆ."

ಈ ಶ್ಲೋಕದಲ್ಲಿ ಉಚ್ಛೃಂಖಲವಾದ ಗಂಡಿನ ಇಂದ್ರಿಯಲಾಲಸೆ ಕಾಮಪಿಪಾಸೆಗಳಿಗೆ ಪಕ್ಕಾಗಿ ಬೆಂದುಬೇಗುದಿಗೊಂಡ ಹೆಣ್ಣುಹೃದಯದ ಅಸಹಾಯದೀನತೆ ಬದುಕಿನಲ್ಲಿಯೇ ಒಂದು ನಿರ್ವೇದ. ಜೀವನದಲ್ಲಿ ಒಂದು ಜುಗುಪ್ಸೆ ಹುಟ್ಟಿದ್ದು ಕಂಡುಬರುವದು. ವಿದಗ್ಧ ವನಿತೆಯ ವಿಲಾಪಮಯವಾದ ಈ ವಕ್ರೋಕ್ತಿಯಲ್ಲಿ ಪುರುಷನು ಹೂವಿಂದ ಹೂವಿಗೆ 'ಹೊಸನಾತು' ಎಂದು ಹಾರುತ್ತ ಪಶುಪ್ರಾಯನಾದರೆ ನಾರಿಯರಿಗೆ ಸತೀತ್ವವೇ ಶಾಪವಾಗಿ ಸಾವೇ ಶರಣಾಗುವ ಪ್ರಸಂಗ ಬರುವದು ಎಂಬ ಮಾತು ಸೂಚ್ಯವಾಗಿಯೂ ಸೂಕ್ಷ್ಮವಾಗಿಯೂ ವ್ಯಕ್ತವಾಗಿದೆ. ಆದರೂ ಆರ್ಷಸಂಸ್ಕೃತಿಗೆ ನೆಲೆವೀಡಾದ ಈ ಪುಣ್ಯಭೂಮಿಯಲ್ಲಿ ಎಷ್ಟೋ ಆರ್ಯಾಂಗನೆಯರು ಇಂಥ ಮಂಗಮನದ ಪುರುಷಾಮೃಗಗಳನ್ನೇ ಎಷ್ಟೇ ತಪ್ಪು ಮಾಡಿದರೂ ನಂಬಿ ತುಂಬುಜೀವನವನ್ನು ಬಾಳಿದ್ದಾರೆ. ಅವರೆಲ್ಲ ತಪ್ಪುಗಳನ್ನೂ ತಮ್ಮ ತಿರೆಯಗಲವಾದ ತಾಯೊಡಲಿನ ತಣ್ಪಿನಿಂದ ತಾಳಿಕೊಂಡು ಆ ಅಪ

ರಾಧಿಗಳನ್ನೂ ನಾಚಿಸುವ ಆರ್ಯನಾರಿಯರ ಮೇಲ್ಮೆಯನ್ನು ನೋಡಿರಿ.

"ಯೇನ ವಿನಾ ನ ಜೀವ್ಯತೇಽನುನೀಯತೇ
ಸ ಕೃತಾಪರಾಧೋಽಪಿ।
ಪ್ರಾಪ್ತೇಽಪಿ ನಾಗರದಾಹೇ ಭಣ ಕಸ್ಯ
ನ ವಲ್ಲಭೋಽಗ್ನಿಃ" (ರಾಧಾದೇವಿ)

ಅಗ್ನಿಯಿಂದ ಊರೆಲ್ಲ ಉರಿದು ಹೋದರೂ ಆ ಬೆಂಕಿಯನ್ನು ಬಿಟ್ಟು ಬದುಕಬಹುದೋ? ಹಾಗೆಯೇ ಎಷ್ಟೇ ತಪ್ಪು ಮಾಡಿದರೂ ಪ್ರಿಯನನ್ನು ಬಿಟ್ಟು ಬದುಕುವದು ಹೇಗೆ? ಅವನನ್ನೇ ಎಂತಾದರೂ ಆರಾಧಿಸುವೆನು. ಇನ್ನೊಬ್ಬ ರಾಗಿಣಿಯಾದ ಕವಯಿತ್ರಿಯ ಪ್ರಣಯಕಲಹದ ರಸಾನುಭವವೊಂದನ್ನು ಕೇಳಿರಿ:

"ಏಕಂ ಪ್ರಹಾರೋದ್ವಿಗ್ನಂ ಹಸ್ತಂ ಮುಖಮಾರುತೇನ ವೀಜಯನ್
ಸೋऽಪಿ ಹಸಂತ್ಯಾ ಮಯಾಗೃಹೀತೋ
ದ್ವಿತೀಯೇನ ಕಂಠೇ॥

ಅವನ ತಪ್ಪಿನಿಂದ ಸಿಟ್ಟಾದ ನಾನು ಅವನನ್ನು ಒಂದು ಕೈಯಿಂದ ಹೊಡೆಯಲು ಅವನು ಆ ನನ್ನ ಹೊಡೆದ ಕೈಗೇ ಪೆಟ್ಟುಹತ್ತಿತೋ ಏನೋ ಎಂದು ಬಾಯಿಂದ ಊದಹತ್ತಿದ. ಆಗ ನನ್ನ ನಗು ಉಕ್ಕೇರಿ ಇನ್ನೊಂದು ಕೈ ಅವನ ಕೊರಳನ್ನು ಬಳಸಿಬಿಟ್ಟಿತು. ಮತ್ತೋರ್ವ ಪತಿಪರಾಯಣೆಯಾದ ಸಾಧ್ವೀಶಿಖಾಮಣಿಯ ಆತ್ಮಾರ್ಪಣೆಯ ಮಧುರೋಕ್ತಿಯನ್ನು ಸವಿಯಿರಿ.

ಯಥಾ ಯಥಾ ವಾದಯತಿ ಪ್ರಿಯಸ್ತಥಾ
ತಥಾ ನೃತ್ಯಾಮಿ ಚಂಚಲೇ ಪ್ರೇಮ್ಣಿ ವಲ್ಲೀ-
ವಲಯತ್ಯಂಗಂ ಸ್ವಭಾವಸ್ತಬ್ಧೋಽಪಿ ವೃಕ್ಷೇ॥
(ಶಶಿಪ್ರಭಾ)

ಗಿಡವು ಅಚಲವಿದ್ದು ಅದನ್ನಂಬಿಕೊಂಡ ಬಳ್ಳಿ ಮಾತ್ರ ವೈಯ್ಯಾರದಿಂದ ಬಳಕುವಂತೆ ನನ್ನ ಪ್ರಿಯಕರನ ಪ್ರೇಮವು ಚಂಚಲವಾದರೂ ಅವನನ್ನೇ ನಂಬಿದ ನಾನು ಮಾತ್ರ ಅವನು ಹೇಳಿದಂತೆ ಕೇಳುವೆನು. ಹಾಡಿದಂತೆ ಬಾರಿಸುವೆನು. ಅವನು ಕುಣಿಸಿದಂತೆ ಹೆಜ್ಜೆ ಹಾಕುವೆನು.

ಹೀಗೆ ಭಾರತೀಯ ನಾರಿಯರ ಕವನಕಲಾ-ಕೌಶಲ್ಯವನ್ನೂ ಸ್ವಭಾವಸಾರಲ್ಯವನ್ನೂ ಸದ್ಗುಣ-ಸೌಶೀಲ್ಯಗಳನ್ನೂ ಎತ್ತಿ ತೋರುವ ಸಹಸ್ರಾರು ಶ್ಲೋಕಗಳು ಸಂಸ್ಕೃತ ವಾಙ್ಮಯದಲ್ಲಿ ಹೇರಳವಾಗಿ ದೊರಕುತ್ತವೆ. ಅದೆಷ್ಟೋ ಆರ್ಯಲಲನೆಯರು ತಮ್ಮ ರಾಗಭೋಗಮಯವಾದ ಜೀವನಕ್ಕೆ ತಿಲಾಂಜಲಿಯನ್ನಿತ್ತು ತ್ಯಾಗವಿರಾಗಮಯವಾದ ದೈವೀಭಾವನೆಗಳಿಂದ ಪಾಶವೀವೃತ್ತಿಗಿಳಿದ ಪುರುಷಪ್ರಪಂಚವನ್ನೂ ಪಾವನವನ್ನಾಗಿರಿಸಿದ್ದಾರೆ. ಇಂಥ ಮಹಾಮಹಿಮೆಯರಾದ ಮಹಿಳೆಯರ ಮಮತಾಮಯ ಮಾತೃಹೃದಯಕ್ಕೆ ಮಾನವಕುಲವೇ ಭಯಭಕ್ತಿಗಳಿಂದ "ಜಗದ್ವಂದ್ಯಾಂದೇವೀಮುಷಸಮಿವವಂದೇ ಭಗವತೀಮ್" ಎಂದು ಭವಭೂತಿಯಂತೆ ಹೇಳಿ ಗೌರವವನ್ನು ನಿವೇದಿಸುತ್ತದೆ. ಈ ತರಹದ ಪ್ರೇಮಯೋಗಿನಿಯರಾದ ಕವಿಕಾಮಿನಿಯರು ಎಲ್ಲಿ ಗೌರವಿಸಲ್ಪಡುವರೋ ಅಲ್ಲಿಯೆ ದೇವದೇವಿಯರು ನಲಿದುಲಿಯುವರು.

"ಯತ್ರ ನಾರ್ಯಸ್ತು ಪೂಜ್ಯಂತೇ
ರಮಂತೇ ತತ್ರ ದೇವತಾಃ"

ಅಭಿನಂದನೆಗಳು

ಈ ಶುಭ ದಿನದಲ್ಲಿ ಹೊಸ ವರುಷದ ನಮ್ಮ ಶುಭೇಚ್ಛೆಗಳನ್ನು ಹಾಗು ಹಾರ್ದಿಕ ಅಭಿನಂದನೆಗಳನ್ನು ಕಳಿಸಲು ನಮಗೆ ಅತ್ಯಾನಂದ ವಾಗುತ್ತಿದೆ.

ನಮ್ಮ ದೇಶದ ಪ್ರಗತಿಗಾಗಿ ನಾವು ಸರ್ವ ಪ್ರಯತ್ನ ದಿಂದ ನಮ್ಮ ಕಾರ್ಯವನ್ನು ಮುಂದುವರಿಸುತ್ತೇವೆಂದು ದೃಢೀಕರಿಸುತ್ತೇವೆ.

ಓರಿಯಂಟಲ್

ಗವ್ಹರ್ನಮೆಂಟ ಸೆಕ್ಯುರಿಟಿ ಲಾಯಿಫ ಅಶ್ಯುರನ್ಸ್ ಕಂ. ಲಿ.,

ಓರಿಯಂಟಲ್

ಫಾಯರ ಮತ್ತು ಜನರಲ್ ಇನ್ಸುರನ್ಸ ಕಂ. ಲಿಮಿಟೆಡ್.,



ಭಾರತದ

ಪ್ರಖ್ಯಾತ ವಿಮಾ ಕಂಪನಿ

ಶಾಖೆಗಳು ಮತ್ತು ಏಜನ್ಸಿಗಳು ಭಾರತಾದ್ಯಂತ ಹಾಗೂ ಪೂರ್ವದಲ್ಲಿ

ಗುಂಡಿಗೆ ಗುಂಡು

ಶ್ರೀ. ದೇಸಾಯಿ ಪಾಂಡುರಂಗರಾಯರು, ಎಂ. ಎ.

"ಢಂ—ಢಂ—ಢಂ"

ಅಬ್ಬಬ್ಬ ! ಎಂಥ ಭಯಂಕರ ಶಬ್ದ!! ಅದನ್ನು ಕೇಳಿದ ಕಿವಿಗಳು ಗಡಚಿಕ್ಕಿದವು. ಮೈಗಳು ಅಲುಗಾಡಿದವು. ಎದೆಗಳು ಡವಡವನೆ ಬಡಿದುಕೊಂಡವು.

ಸಮುದ್ರದ ಮಧ್ಯದಲ್ಲಿ ನಿಂತಿದ್ದ ಆ ನಡುಗಡ್ಡೆ ಗಡಗಡನೆ ನಡುಗಿತು. ಆ ನಡುಕದಿಂದ ಅಲ್ಲಿಯ ನಿವಾಸಿಗಳಿಗೆ ದಿಕ್ಕು ತಪ್ಪಿತು.

ಆ ನಡುಗಡ್ಡೆಯ ಅರಸು ಸಿಂಗಭೂಪಾಲ. ಆತನ ತಲೆ ಸ್ವಲ್ಪ ಹೊತ್ತಿನ ವರೆಗೆ ಗಿಮಿಗಿಮಿ ತಿರುಗಿತು. ಬಳಿಕ ಆತನು ಬಸವ ಮಂತ್ರಿ ಮತ್ತು ಡಾಕ್ಟರ್ ಕಪಿ ಇವರನ್ನು ತನ್ನಲ್ಲಿಗೆ ಬರಮಾಡಿಕೊಂಡನು. ಡಾ. ಕಪಿ ಮಹಾವಿದ್ವಾಂಸನು. ಹಲವು ಹೊಸ ಶೋಧಗಳನ್ನು ಮಾಡಿ ಕೀರ್ತಿಯನ್ನು ಗಳಿಸಿದ್ದನು.



ಈ ಇಬ್ಬರು ಅರಮನೆಗೆ ಬಂದಾಗ ಸಿಂಗಭೂಪಾಲನ ಶಿರಸ್ಸು ಇನ್ನೂ ವಕ್ರವಾಗಿಯೇ ನಿಂತಿತ್ತು. ಬಸವ ಮಂತ್ರಿಯ ಕೊಂಬುಗಳು ಕೆಳಗೆ ಇಳಿದು ಗಡ್ಡದಂತೆ ಜೋತಾಡುತ್ತಿದ್ದವು. ಡಾ. ಕಪಿಯ ಬಾಲವು ಊದಿಕೊಂಡು ಒಂದಡಿ ಉದ್ದಕ್ಕೆ ಬೆಳೆದಿತ್ತು.

"ಇದೇನು ವಿಚಿತ್ರ ಘಟನೆ?" ಸಿಂಗಭೂಪಾಲನು ಗಾಬರಿಯಿಂದಲೇ ಪ್ರಶ್ನೆ ಮಾಡಿದನು.

"ನಮ್ಮ ಹಿರಿಯರು ಪ್ರಳಯಕಾಲದ ಕಥೆಯನ್ನು ಹೇಳುತ್ತಿದ್ದರು. ಅಂಥ ಪ್ರಳಯಕಾಲವು ಈಗ ಸಮೀಪಿಸಿದಂತೆ ತೋರುತ್ತಿದೆ." ಬಸವಮಂತ್ರಿ ತೂಗಾಡುವ ತನ್ನ ಕೋಡುಗಳನ್ನು ತಡೆಯುತ್ತ ಉಸುರಿದನು.

"ಈ ವಿಚಾರದಲ್ಲಿ ಈಗ ಕೆಲ ದಿನಗಳ ಹಿಂದೆ ನಾನು ಮಹಾರಾಜರಿಗೆ ಅರಿಕೆ ಮಾಡಿದ್ದೇನೆ. ನಮ್ಮ ಚಂದ್ರದ್ವೀಪದಿಂದ ಸುಮಾರು ಐದು ನೂರು ಮೈಲಿ ದೂರದಲ್ಲಿ ಅಮೇರಿಕೆ ಎಂಬ ದೇಶವಿದೆ. ಆ ದೇಶದಲ್ಲಿ ಅಣು ಗುಂಡುಗಳನ್ನು ಸಿದ್ಧಮಾಡುತ್ತಿರುವರು. ಇದೊಂದು ಯುದ್ಧದಲ್ಲಿ ಉಪಯೋಗಿಸಬೇಕಾದ ಅಸ್ತ್ರ. ಹೆಸರಿಗೆ ಇದು ಅತಿ ಚಿಕ್ಕದಾಗಿದ್ದರೂ ಇದರ ಶಕ್ತಿ ಅದ್ಭುತ. ಈ ಅಣು ಗುಂಡಿನ ಮೊದಲ ಪ್ರಯೋಗವು ಆ ದೇಶದಲ್ಲಿ ಈಗ ನಡೆದಿರಬೇಕು". ಹಲ್ಲನ್ನು ಕಿರಿದು ಕಣ್ಣುಗುಡ್ಡೆಗಳನ್ನು ತಿರುಹುತ್ತ ಡಾ. ಕಪಿ ವಿವರಿಸಿದನು.

ಸಿಂಗಭೂಪಾಲ: "ಇಷ್ಟು ಭಯಂಕರವೇ ಆ ಅಣು ಗುಂಡು?"

ಡಾ. ಕಪಿ : "ಭಯಂಕರವೆಂದು ಹೇಳಬೇಕೆ? ಇಂತಹ ಒಂದು ಗುಂಡು ಸಿಡಿದರೆ ಸಾಕು. ದೇಶಕ್ಕೆ ದೇಶವೇ ಹಾಳಾಗುತ್ತದೆ. ಸಾವಿರಾರು ಪ್ರಾಣಿಗಳು ಪ್ರಾಣಕ್ಕೆ ಎರವಾಗುತ್ತವೆ. ಈಗ ಹಾರಿದ ಗುಂಡು ಪರೀಕ್ಷೆಯ ಗುಂಡು. ಅದು ಎಲ್ಲಿಯೋ ಸಮುದ್ರದಲ್ಲಿ ಬಿದ್ದಿರಬೇಕು. ಅದರ ಪರಿಣಾಮವಾಗಿ ಈ ಮಹಾಸಾಗರವು ಉಬ್ಬೇರಿದೆ. ಅದರ ಅಲೆಗಳು ಆನೆಯ ಗಾತ್ರವಾಗಿ ಎದ್ದು ಬಂದು ನಮ್ಮ ಚಂದ್ರದ್ವೀಪದ ಮೇಲೆ ಅಪ್ಪಳಿಸುತ್ತಿರುವವು."

ಬಸವ ಮಂತ್ರಿ : "ಇಂತಹ ವಿನಾಶಕಾರಕ ವಸ್ತುಗಳನ್ನು ತಯಾರಿಸಿ ಆ ದೇಶದವರಿಗೆ ಲಾಭವೇನು?"

ಸಿಂಗಭೂಪಾಲ : "ಅಮೇರಿಕೆ ದೇಶವು ಜನತಾರಾಜ್ಯ, ಅಲ್ಲವೆ?"

ಡಾ. ಕಪಿ : "ನಿಜ. ಅಮೇರಿಕೆ ಜನರ ಆಳಿಕೆಯ ದೇಶ. ಲೋಕದ ಜನಗಳು ಸುಖದಿಂದ ಬಾಳಬೇಕು ಎಂದು ಅಲ್ಲಿಯ ನಾಯಕರು ಕೂಗುತ್ತಾರೆ. ಈ ಜಗತ್ತಿನಲ್ಲಿ ಯುದ್ಧಗಳು ನಡೆಯಬಾರದು, ಒಬ್ಬರನ್ನೊಬ್ಬರು ಗೆಲ್ಲಬಾರದು ಎಂದು ಅಲ್ಲಿಯ ಮುಖಂಡರು ವಾದಿಸುತ್ತಾರೆ. ಅದಕ್ಕಾಗಿಯೇ ತಾವು ಅಣುಗುಂಡುಗಳನ್ನು ತಯಾರಿಸುತ್ತಿರುವದು ಎಂದು ಆ ರಾಜ್ಯದ ಪ್ರಮುಖರು ಸಮಾಧಾನ ಹೇಳುತ್ತಾರೆ. ಇವರನ್ನು ಕಂಡು ಬೇರೆ ದೇಶದವರು ಇನ್ನೂ ಇಂಥ ಪ್ರಾಣಘಾತಕ ಗುಂಡುಗಳನ್ನು ತಯಾರಿಸಲು ತೊಡಗಿದ್ದಾರೆ."

ಸಿಂಗಭೂಪಾಲ : "ಇದೆಲ್ಲವು ಶುದ್ಧ ಮೋಸ ಎಂಬಂತೆ ತೋರುತ್ತದೆ."

ಬಸವಮಂತ್ರಿ : "ಒಂದು ಮನೆಯ ಉರಿಯನ್ನು ನಂದಿಸಲು ನೂರು ಮನೆಗಳಿಗೆ ಉರಿಯನ್ನು ಹಚ್ಚಿರಿ ಎಂದಹಾಗಾಯಿತು. ಇಂತಹ ಜನರ ಆಳಿಕೆಗಿಂತ ನಮ್ಮ ಚಂದ್ರದ್ವೀಪದಂತೆ ಒಬ್ಬ ಮಹಾರಾಜರ ಅಧಿಕಾರವೇ ಮೇಲು."

ಸಿಂಗಭೂಪಾಲ : "ಅದಿರಲಿ. ಡಾ. ಕಪಿಗಳು ಹೇಳುವಂತೆ ಇನ್ನು ಮುಂದೆ ಈ ಸುಧಾರಿಸಿದ ದೇಶಗಳಲ್ಲಿ ಇಂಥ ಅಣುಗುಂಡುಗಳ ಹಾವಳಿ ಹೆಚ್ಚಾಗುವ ಹೆದರಿಕೆ ಇದೆ. ಈ ಹಾವಳಿಯಿಂದ ನಮ್ಮ ಜನಗಳನ್ನು ರಕ್ಷಿಸುವ ಬಗೆ ಯಾವದು?"

ಡಾ. ಕಪಿ : "ನಾನಾದರೂ ಅದನ್ನೇ ಆಲೋಚಿಸುತ್ತಾ ಇದ್ದೇನೆ."

ಸಿಂಗಭೂಪಾಲ : "ಡಾ. ಕಪಿಗಳೇ! ನಿಮ್ಮ ಶೋಧಕಬುದ್ಧಿ ಅಪಾರವಾಗಿದೆ. ಈ ವರೆಗೆ ನೀವು ಅನೇಕ ಹೊಸ ಶೋಧಗಳನ್ನು ಮಾಡಿದ್ದೀರಿ. ಆದ್ದರಿಂದ ಈ ಗಂಡಾಂತರಕ್ಕೆ ತಕ್ಕ ಉಪಾಯವನ್ನು ಕಂಡು ಹಿಡಿಯಲು ನೀವು ಸಮರ್ಥರು ಎಂದು ನಾವು ತಿಳಿದಿದ್ದೇವೆ."

ಬಸವಮಂತ್ರಿ : "ಸಂದೇಹವೇನು? ಮಹಾರಾಜರು ಕೂಡಲೆ ಈ ಕೆಲಸವನ್ನು ಅವರಿಗೆ ಒಪ್ಪಿಸಬಹುದು."

ಸಿಂಗಭೂಪಾಲ : "ಡಾ. ಕಪಿಗಳೇ! ನಾನು ಹೇಳುತ್ತೇನೆ. ಅಣುಗುಂಡಿನಿಂದ ಕಾಪಾಡುವ ಹಂಚಿಕೆಯನ್ನು ನೀವು ನಿಮ್ಮ ಪ್ರಯೋಗಶಾಲೆಯಲ್ಲಿ ಬೇಗನೆ ಕಂಡು ಹಿಡಿಯಿರಿ. ಇದಕ್ಕೆ ಬೇಕಾದಷ್ಟು ಧನ ಮತ್ತು ಜನಸಹಾಯವನ್ನು ಮಾಡಲು ಬಸವಮಂತ್ರಿಗಳಿಗೆ ಸೂಚಿಸುತ್ತೇನೆ."

ಬಸವಮಂತ್ರಿ : "ಆಗಬಹುದು, ಮಹಾಸ್ವಾಮೀ."

ಡಾ. ಕಪಿ ತನ್ನ ಕಾರ್ಯಾಲಯಕ್ಕೆ ಹೊರಟುಹೋದನು.

ಸುಮಾರು ಮೂರು ವಾರಗಳು ಕಳೆದವು. ಚಂದ್ರದ್ವೀಪದ

ಲೋಕಪಾಲ ಎಂಬ ಪತ್ರಿಕೆಯಲ್ಲಿ ಇದ್ದಕ್ಕಿದ್ದ ಹಾಗೆ ಒಂದು ಸುದ್ದಿ ಪ್ರಕಟವಾಯಿತು. ಅದು ಹೀಗೆ:

> ಗುಂಡಿಗೆ ಗುಂಡು! ಅಣುಗುಂಡಿಗೆ ಪ್ರತಿಗುಂಡು!! ಡಾ. ಕಪಿ ಅವರ ಅಪೂರ್ವ ಶೋಧ!!! ಅಣು ಗುಂಡಿನಿಂದ ಜೀವವನ್ನು ಉಳಿಸುವ ಯುಕ್ತಿ ದೊರೆತಿತು. ಈ ಶೋಧದ ಪ್ರಯೋಗವು ಬೇಗನೆ ನಡೆಯುವದು. ಹೆಚ್ಚಿನ ವಿವರಗಳಿಗೆ ಇದಿರು ನೋಡಿರಿ.

ಈ ಹೊತ್ತು ಚಂದ್ರದ್ವೀಪದ ಅರಮನೆಯಲ್ಲಿ ಜನಗಳು ನೆರೆದಿದ್ದಾರೆ. ರಾಜ್ಯದ ಪ್ರಮುಖರು ಸೇರಿದ್ದಾರೆ. ಇಂದು ಡಾ. ಕಪಿ ಅವರ ಹೊಸ ಶೋಧದ ಮೊದಲು ಪ್ರಯೋಗ.

ಒಬ್ಬೊಬ್ಬರ ಮುಂದೆ ಒಂದು ಚಿಕ್ಕ ಮೇಜು. ಆದರ ಮೇಲೆ ಒಂದು ಬೆಳ್ಳಿಯ ತಟ್ಟೆ. ತಟ್ಟೆಯಲ್ಲಿ ಯಾವುದೋ ಒಂದು ಪದಾರ್ಥ.



ಅದನ್ನುಮುಚ್ಚಳವು ಮರೆ ಮಾಡಿತ್ತು.

ಡಾ. ಕಪಿ ಅಂದಿನ ವಿಷಯವನ್ನು ಸಂಕ್ಷೇಪವಾಗಿ ಹೀಗೆ ಹೇಳಿದನು: "ಅಣು ಗುಂಡಿಗೆ ಪ್ರತಿ ಗುಂಡನ್ನು ನಾನು ಕಂಡು ಹಿಡಿದಿದ್ದೇನೆ. ಈ ನನ್ನ ಶೋಧದ ಪ್ರಯೋಗವು ಈಗ ನಡೆಯುವದು.

"ಗುಂಡಿನ ಪ್ರಯೋಗವನ್ನು ಅರಮನೆಯಲ್ಲಿ ಮಾಡುವರೇ? ಎಂದು ತಮಗೆ ಆಶ್ಚರ್ಯವಾಗಿರಬಹುದು. ಅಹುದು. ನನ್ನ ಶೋಧವು ಆಶ್ಚರ್ಯಕರವಾದುದು. ಅರಮನೆಯೇ ಅದಕ್ಕೆ ತಕ್ಕ ಸ್ಥಳ.

"ನನ್ನ ಶೋಧದ ಬೀಜಮಂತ್ರ 'ಅಪಾಯಕ್ಕೆ ಉಪಾಯ'. ಅಣುಗುಂಡು ದೇಶದ ಹೊರಗೆ ಹಾರಿತು. ನನ್ನ ಗುಂಡು ಒಳಗೆ ಹಾರುತ್ತದೆ. ಸದ್ದಿಲ್ಲದೆ ಕೆಲಸ ಮಾಡುತ್ತದೆ. ನಾನು ಶೋಧಿಸಿದ ಗುಂಡು ಜೀವಿಗಳನ್ನು ಕೊಲ್ಲುವದಿಲ್ಲ; ಕಾಪಾಡುತ್ತದೆ.

"ಇನ್ನು ನಾನು ಗುಂಡನ್ನು ಪ್ರಯೋಗಿಸುತ್ತೇನೆ. ದಯೆಯಿಟ್ಟು ತಾವು ನನ್ನಂತೆಯೇ ಮಾಡಿರಿ. ಭಯಪಡಬೇಡಿರಿ. ಈ ಗುಂಡಿನಿಂದ ಅಣುಗುಂಡನ್ನು ಇದಿರಿಸುವ ಶಕ್ತಿ ಬರುವದು"

ಹೀಗೆ ಹೇಳಿ ಡಾ. ಕಪಿ ತನ್ನ ಮುಂದಿನ ತಟ್ಟೆಯ ಮೇಲಿನ ಮುಚ್ಚಳವನ್ನು ತೆಗೆದನು. ಎಲ್ಲರೂ ಹಾಗೆಯೇ ಮಾಡಿದರು.

ಆ ತಟ್ಟೆಯಲ್ಲಿ ಏನಿತ್ತು? ಸುಂದರವಾದ ನುಣುಪಾದ ಬೆಣ್ಣೆಯ ಮುದ್ದೆಯಂಥ ಎರಡು ಗುಂಡುಗಳು! ಅವುಗಳ ಬಣ್ಣ ಗೋದಿಯ ನಸುಗೆಂಪು. ಅವುಗಳೊಳಗಿಂದ ಮಧುರವಾದ ಸುಗಂಧ ಬರುತ್ತಿತ್ತು.

ಡಾ. ಕಪಿ ಅವುಗಳನ್ನು ಗಪಗಪನೆ ತಿಂದುಬಿಟ್ಟನು. ಉಳಿದವರಿಗೆ ತಡೆಯಲಿಕ್ಕೆ ಆಗಲಿಲ್ಲ. ಅವುಗಳ ವಾಸನೆ ಅಷ್ಟು ರುಚಿಕರವಾಗಿತ್ತು. ಐದು ನಿಮಿಷದಲ್ಲಿ ಎಲ್ಲರ ತಟ್ಟೆಯೊಳಗಿನ ಎಲ್ಲ ಗುಂಡುಗಳು ಮಾಯವಾದವು!

ಇನ್ನೊಂದು ದಿನ ಈ ಶೋಧದ ಎರಡನೆಯ ಪ್ರಯೋಗ ನಡೆಯಿತು. ಇದಕ್ಕಾಗಿ ಹೆಚ್ಚು ಜನರು ಹೆಚ್ಚು ಉತ್ಸುಕತೆಯಿಂದ ಬಂದಿದ್ದರು. ಅನೇಕರು ಡಾ. ಕಪಿ ಅವರ ಮಾತುಗಳು ಸಂಪೂರ್ಣ ನಿಜವೆಂದು ಹೊಗಳಿದರು. ಕೆಲವರು ಅಣು ಗುಂಡಿನ ಹೊಡೆತದಿಂದ ತಮಗೆ ಉಂಟಾಗಿದ್ದ ವ್ಯಾಧಿಗಳು ಈಗಾಗಲೆ ಗುಣವಾಗಿವೆ ಎಂದು ತಮ್ಮ ಅನುಭವಗಳನ್ನು ಹೇಳಿದರು.

ಅಂದಿನಿಂದ ಡಾ. ಕಪಿ ಅವರ ಹೊಸ ಶೋಧದ ಹೊಗಳಿಕೆ ಪ್ರಾರಂಭವಾಯಿತು. ಈ ಪ್ರಶಂಸೆಗೆ ಮನಸೋತು ಅನೇಕರು ಅಲ್ಲಲ್ಲಿ ಅದರ ಪ್ರಯೋಗಗಳನ್ನು ಮಾಡಿದರು. ಚಂದ್ರದ್ವೀಪದ ಪತ್ರಿಕೆಗಳಲ್ಲಿ ಅವುಗಳ ಸ್ವಾರಸ್ಯವಾದ ವರ್ಣನೆಗಳು ಪ್ರಕಟವಾದವು.

ಆದರೆ ಕೆಲ ಕುಚೋದ್ಯಗಾರ ಪತ್ರಿಕೆಗಳು ಮಾತ್ರ, "ಇದು ಹೊಸ ಶೋಧವಲ್ಲ. ಇಂಥ ಉಣು ಗುಂಡುಗಳಿಂದ ಅಣು ಗುಂಡನ್ನು ಇದಿರಿಸುವ ಶಕ್ತಿ ಬರಲಾರದು" ಎಂದು ಟೀಕೆ ಮಾಡಿದವು.

ಇಂಥ ಒಂದು ಪತ್ರಿಕೆ ಹೀಗೆ ಬರೆದುಕೊಂಡಿತು: "ಇದು ನಿಜವಾಗಿ ಒಂದು ತಿಂಡಿ. ದಕ್ಷಿಣ ಭಾರತ ಎಂಬ ದೇಶದಲ್ಲಿ ಇದಕ್ಕೆ ರವೆಯ ಇಡ್ಲಿ ಎನ್ನುತ್ತಾರೆ. ಇಂಥ ಇಡ್ಲಿಯಲ್ಲಿ ಸ್ವಲ್ಪ ಸೈಂಧವಲವಣದ ಉಪ್ಪನ್ನು ಮತ್ತು ಆಮಸೋಲದ ತುಂಡುಗಳನ್ನು ಬೆರೆಸಿ ಅದನ್ನು ಹೆಚ್ಚು ರುಚಿಕರವಾಗಿ ಮಾಡಿದ ಚಾತುರ್ಯ ಮಾತ್ರ ಡಾ. ಕಪಿ ಅವರದು"

ಈ ಪರಿಯ ಕುಚೋದ್ಯಗಾರರ ದುಷ್ಟ ಮಾತುಗಳನ್ನು ಚಂದ್ರದ್ವೀಪದ ನಿವಾಸಿಗಳು ಲಕ್ಷಿಸಲಿಲ್ಲ. ಈ ಶೋಧವು ಅರಮನೆಯಿಂದ ಗುರುಮನೆಗೆ, ಗುರುಮನೆಯಿಂದ ಗುಡಿಸಲಿಗೆ, ಹೀಗೆ ಎಲ್ಲೆಲ್ಲಿಯೂ ಹಬ್ಬಿತು. ಎಲ್ಲರು ಅಂಥ ಗುಂಡನ್ನು ತಯಾರಿಸಿ ತಿನ್ನತೊಡಗಿದರು. ಅದು ಬಹಳ ಲೋಕಪ್ರಿಯವಾಯಿತು.

"ಅಮೇರಿಕದವರಾಗಲಿ, ರಶಿಯದವರಾಗಲಿ, ಬೇಕಾದವರು ಬೇಕಾದಂಥ ಅಣು ಗುಂಡುಗಳನ್ನು ಸಿದ್ಧಮಾಡಲಿ. ಅವುಗಳಿಗೆ ನಾವು ಸೊಪ್ಪು ಹಾಕುವದಿಲ್ಲ." ಎಂದು ಚಂದ್ರದ್ವೀಪದ ನಿವಾಸಿಗಳು ಈಗ ಧೈರ್ಯವಾಗಿ ಹೇಳುತ್ತಿದ್ದಾರೆ; ನಿರ್ಭೀತಿಯಿಂದ ಬಾಳುತ್ತಿದ್ದಾರೆ.



ಭಾರತೀಯ ಚಲಚ್ಚಿತ್ರಗಳು

ಸ್ಥಿತಿಗತಿಯ ಒಂದು ಸಮೀಕ್ಷೆ

ಲೇಖಕ: ಶ್ರೀ ಎಸ್. ವಿ. ಪಾಟೀಲ, ಬಿ. ಎ. (ಆನರ್ಸ)

ಜಗತ್ತಿನಲ್ಲಿ ಇಂದು ಚಲಚ್ಚಿತ್ರಗಳು, ಶಿಕ್ಷಣ ಪ್ರಚಾರ ಮತ್ತು ಸಂಸ್ಕೃತಿ ದರ್ಶನಗಳ ಅವಶ್ಯ ಸಾಧನಗಳಾಗಿವೆ. ಚಲಚ್ಚಿತ್ರದ ಮುಖಾಂತರ ಆಯಾ ದೇಶಗಳ ರೀತಿನೀತಿಗಳ ಬಗ್ಗೆ ನಾವು ಪರಿಚಯಮಾಡಿಕೊಳ್ಳಬಹುದಾಗಿದೆ. ಆ ಯಾ ದೇಶಗಳನ್ನರಿತುಕೊಳ್ಳಲು ಚಲಚ್ಚಿತ್ರಗಳು ಒಂದು ಬಗೆಯಿಂದ ಮಾಧ್ಯಮವಾಗಿವೆಯೆಂದರೆ ತಪ್ಪಾಗಲಾರದು. ಆದರೆ ಚಲಚ್ಚಿತ್ರಗಳ ಗುರಿ ಕೇವಲ ಶೈಕ್ಷಣಿಕವಾಗಲಿ, ಪ್ರಚಾರವಾಗಲಿ, ಸಂಸ್ಕೃತಿ ದರ್ಶನವಾಗಲಿ, ಆಗಿರದೆ ಕೋಟ್ಯ-ವಧಿ ಜನರಿಗೆ ಮನೋರಂಜನೆಯೊದಗಿಸುವದೂ ಅವುಗಳ ಕಾರ್ಯವಾಗಿದೆ. ಭಾರತದಲ್ಲಿಯ ಕೆಲ ಚಿತ್ರನಿರ್ಮಾಪಕರಂತೂ ಮನೋರಂಜನೆಯೇ ಚಲಚ್ಚಿತ್ರಗಳ ಮುಖ್ಯಗುರಿಯೆಂದು ಹೇಳಿದ್ದುಂಟು.

ಭಾರತವು ಪ್ರತಿವರ್ಷ ಸುಮಾರು ೩೦೦ ಚಲ-ಚ್ಚಿತ್ರಗಳನ್ನು ನಿರ್ಮಿಸಿ ಜಗತ್ತಿನಲ್ಲಿ ಚಿತ್ರ ಉತ್ಪಾದನೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದೆ. ಅಮೇರಿಕೆಯಲ್ಲಿ ೮, ಇಂಗ್ಲಂಡದಲ್ಲಿ ೧೩ ಸ್ಟುಡಿಯೊಗಳಿದ್ದರೆ ಭಾರತದಲ್ಲಿ ೭೦ ಸ್ಟುಡಿಯೊಗಳಿವೆ. ಆದರೆ ಅಮೇರಿಕೆಯ ಒಂದು ಸ್ಟುಡಿಯೊ-ದಲ್ಲಿ ವರ್ಷಕ್ಕೆ ೪೨ ಚಿತ್ರಗಳು ತಯಾರಾಗುತ್ತಿದ್ದರೆ, ಭಾರತದಲ್ಲಿ ಪ್ರತಿವರ್ಷ ಕೇವಲ ೫ ಚಿತ್ರಗಳು ತಯಾರಾಗುತ್ತಿವೆ. ಇಷ್ಟು ಸ್ಟುಡಿಯೊಗಳಿದ್ದು ಇಷ್ಟು ಚಿತ್ರಗಳು ತಯಾರಾಗುತ್ತಿದ್ದರು ಭಾರತದಲ್ಲಿ ಕೇವಲ ೩ ಸಾವಿರದಷ್ಟು ಚಿತ್ರಮಂದಿರಗಳಿರುವವು. ಅದೇ ರಸಿಯದಲ್ಲಿ ೫೦ ಸಾವಿರ, ಅಮೇರಿಕೆಯಲ್ಲಿ ೧೬,೮೧೪, ಬ್ರಿಟನ್ನದಲ್ಲಿ ೫೧೦೦, ಮೆಕ್ಸಿಕೊದಂತಹ ಅತಿ ಚಿಕ್ಕ ರಾಷ್ಟ್ರದಲ್ಲಿ ೧೬೭೨ ಚಿತ್ರಮಂದಿರಗಳಿವೆ. ಈ ಲೆಕ್ಕದ ಪ್ರಕಾರ ಭಾರತದಲ್ಲಿ ಪ್ರತಿ ೧೦ ಲಕ್ಷ ಜನರಿಗೆ ೭ ಚಿತ್ರಮಂದಿರಗಳಿದ್ದಂತಾಗಿದೆ. ಅದೂ ಪಟ್ಟಣಗಳಲ್ಲಿಯೇ ಈ ಚಿತ್ರಮಂದಿರಗಳಿದ್ದು ಹಳ್ಳಿಗರಿಗೆ ಸುಲಭವಾಗಿ ಚಿತ್ರಗಳನ್ನು ನೋಡುವದು ಸಾಧ್ಯವಾಗುತ್ತಿಲ್ಲ. ಸಂಚಾರಿ ಟಾಕಿಗಳು ಹಳ್ಳಿಗೆ ಬಂದಾಗ ನೋಡಬೇಕು ; ಇಲ್ಲವೆ ಹಳ್ಳಿಗರು ಸಂತೆ ಪೇಟೆಗೆ ಪಟ್ಟಣಕ್ಕೆ ಬಂದಾಗ ನೋಡಬೇಕು. ಚಿತ್ರಗಳು ಹೆಚ್ಚೆಚ್ಚು ಸ್ಥಳಗಳಲ್ಲಿ ಪ್ರದರ್ಶಿತವಾಗಬೇಕಾದರೆ ಚಲಚ್ಚಿತ್ರ ಹಿತ ಸಂಬಂಧಿಗಳು ಹಳ್ಳಿಗರ ಈ ಅನಾನುಕೂಲತೆಯನ್ನು ಗಮನಿಸಬೇಕು.

ಪ್ರತಿವರ್ಷ ಇಷ್ಟು ಅಧಿಕ ಸಂಖ್ಯೆಯಲ್ಲಿ ತಯಾ-ರಾಗುತ್ತಿರುವ ಚಿತ್ರಗಳು ದೇಶದಲ್ಲಿ ಅನೇಕರಿಗೆ ಉದ್ಯೋಗ ಒದಗಿಸಿವೆ. ಅಲ್ಲದೆ ಸರಕಾರಕ್ಕೆ ಕೋಟಿಗಟ್ಲೆ ಆದಾಯವನ್ನು ಈ ಚಿತ್ರಗಳು ತಂದುಕೊಡುತ್ತವೆ. ಈ ಆದಾಯವು ವರ್ಷ ವರ್ಷಕ್ಕೆ ಹೆಚ್ಚುತ್ತ ನಡೆದಿರುವದು. ೧೯೪೫-೪೬ ನೇ ವರ್ಷದಲ್ಲಿ ೨೩೧.೭೧ ಲಕ್ಷ ರೂ ಆದಾಯ ತಂದಿದ್ದರೆ ೧೯೪೮-೪೯ ರಲ್ಲಿ ಅದು ೪೩೨.೫೧ ಲಕ್ಷ ರೂ. ಗಳಿಗೇರಿತು. ಅದರ ಮುಂದಿನ ವರ್ಷದಲ್ಲಿ ಅದಕ್ಕೂ ಹೆಚ್ಚು ೫೩೦.೨೬ ಲಕ್ಷ ರೂ. ಗಳನ್ನು ಸರಕಾರಕ್ಕೆ ತಂದುಕೊಟ್ಟಿರುವದು. ಇಷ್ಟು ಆದಾಯ ಸರಕಾರಕ್ಕೆ ಸಲ್ಲಿಸುವ ಈ ಚಿತ್ರ ಉದ್ದಿಮೆಯಲ್ಲಿ ೪೦ ಕೋಟಿ ರೂ. ಬೆಲೆಯ ಸೊತ್ತುಗಳಿದ್ದು ವಾರ್ಷಿಕ ೧೦ ಕೋಟಿ ರೂ. ದುಡಿಯುವ ಬಂಡವಲು ಇರುವದು. ಚಿತ್ರೋದ್ಯಮಿಗಳಿಗೆ ಸುಮಾರು ೩೦ ಕೋಟಿ ರೂ. ಆದಾಯ ಬರುವದು.

ಆದರೆ ಇತ್ತೀಚೆಗೆ ಕೆಲದಿನಗಳಲ್ಲಿ ಚಲಚ್ಚಿತ್ರ ಉದ್ದಿಮೆಯಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಿರುವದು. ಬಂಗಾಲದ ಅನೇಕ ಕಲಾವಿದರು ದಿಗ್ದರ್ಶಕರು, ತಾರಾಗಣ ಅಧಿಕ ಸಂಖ್ಯೆಯಲ್ಲಿ ಮುಂಬಯಿಗೆ ಬರುತ್ತಿರುವರು. ಭಾರತದಲ್ಲಿ ಸುವ್ಯವಸ್ಥೆಗೆ ಹೆಸರಾದ ಜೇಮಿನಿ ಸ್ಟುಡಿಯೋದವರು ಕೆಲಸಗಾರರ, ಕಲಾವಿದರ ಸಂಖ್ಯೆಯಲ್ಲಿ ಕಡಿತ ಮಾಡಿದ್ದು, ಮುಂಬಯಿಯ ಕೆಲ ಚಿತ್ರಮಂದಿರಗಳು ದರಗಳನ್ನು ಕಡಿಮೆ ಮಾಡಿವೆ ಇನ್ನೂ ಇಂತಹ ಕೆಲ ಘಟನೆಗಳು ಈ ಅರ್ಥಿಕ ಮುಗ್ಗಟ್ಟನ್ನು ಎತ್ತಿ ತೋರಿಸುತ್ತಿವೆ.

ಭರದಿಂದ ಅಭಿವೃದ್ಧಿ ಹೊಂದಬೇಕಾದ ಚಲಚ್ಚಿತ್ರೋದ್ಯಮದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಲು ಕಾರಣಗಳೇನಿರಬಹುದು. ಮುಖ್ಯವಾಗಿ ಚಲಚ್ಚಿತ್ರಗಳ ಉತ್ಪಾದನ ವೆಚ್ಚವು ಮೊದಲಿಗಿಂತ ಅತಿ ಹೆಚ್ಚಾಗಿದೆ; ಆದರೆ ಅದಕ್ಕೆ ತಕ್ಕರೀತಿಯಲ್ಲಿ ಲಾಭ ಸಂದಾಯವಾಗುವದಿಲ್ಲ. ಅಂದರೆ ಪ್ರೇಕ್ಷಕರು ಚಲಚ್ಚಿತ್ರಗಳನ್ನು ನೋಡುವದು ಕಡಿಮೆಯಾಗಿರುವದು. ಅವರು ನೋಡಲು ಒಳ್ಳೆಯವಾದ ಚಲಚ್ಚಿತ್ರಗಳನ್ನು ನಿರ್ಮಿಸದಿರುವದೇ ಅವರ ಪ್ರೋತ್ಸಾಹ ಕಡಿಮೆಯಾಗಲು ಕಾರಣ. ಇನ್ನು ಉತ್ಪಾದನ ವೆಚ್ಚವು ಹೆಚ್ಚಾಗಲು ಮುಖ್ಯ ಕಾರಣವೆಂದರೆ ತಾರೆಯರ ಅಧಿಕ ಸಂಬಳ. ಒಂದು ಚಿತ್ರದಲ್ಲಿ ಪಾತ್ರವಹಿಸಲು ನಾಯಕ-ನಾಯಕಿಯರು ಒಂದು, ಒಂದುವರಿ ಲಕ್ಷ ರೂ. ಗಳನ್ನು ಕೇಳುವರು. ಅವರು ಹೀಗೆ ಕೇಳುವಂತೆ ಮಾಡಿದವರು ನಮ್ಮ ಚಿತ್ರನಿರ್ಮಾಪಕರು. ಒಂದು ಚಿತ್ರದಲ್ಲಿ ಯಶಸ್ವಿಯಾದ ತಾರೆಗೆ ಹತ್ತಾರು ಕರೆಗಳು ಒಮ್ಮೆಲೇ ಬಂದಾಗ, ತಮ್ಮ ಚಿತ್ರಗಳಿಗಾಗಿ ಒಪ್ಪಬೇಕೆಂದು ಸ್ಪರ್ಧಿಸುತ್ತಿರುವಾಗ, ಅವರು ತಮ್ಮ ಸಂಬಳವನ್ನು ಏರಿಸದಿರುವರೆ! ಬಿನಾರಾಯಳ ಉದಾಹರಣೆಯನ್ನೇ ತೆಗೆದುಕೊಂಡರೆ ಈ ಮಾತು ಸ್ಪಷ್ಟವಾಗುವದು. ಕಿಶೋರಶಾಹುರವರ ಕಾಲಿಘಟಾದಲ್ಲಿ ಮೊದಲು ಸಲ ಕಾಣಿಸಿಕೊಂಡು, ಯಶಸ್ವಿ ಅಭಿನಯ ನೀಡಿದ್ದಾಳೆಂದು ಕಂಡಕ್ಷಣವೇ ಹತ್ತಾರು ಚಿತ್ರ ನಿರ್ಮಾಪಕರು ಮುಗಿಬಿದ್ದರು. ಅವಳ ತಂದೆ ಇದೇ ಸಮಯವೆಂದು ೨೫ ಸಾವಿರ ರೂ. ಗಳಿಂದ ಒಮ್ಮೆಲೇ ೪೦ ಸಾವಿರ ರೂ. ಗಳಿಗೆ ಕಾಂಟ್ರಾಕ್ಟುಗಳನ್ನು ಏರಿಸಿದರು. ಸಪನಾದಲ್ಲಿ ಅಭಿನಯಿಸಲು ೨೫ ಸಾವಿರ ರೂ, ಶೋಲೆದಲ್ಲಿ ಅಭಿನಯಿಸಲು ೪೦ ಸಾವಿರ ರೂ, ಅನಾರಕಲಿಗಾಗಿ ೪೦ ಸಾವಿರ ರೂ, ಔರತ ಚಿತ್ರಕ್ಕಾಗಿ ೪೦ ಸಾವಿರ ರೂ, ಸಂಗಮ ಚಿತ್ರಕ್ಕಾಗಿ ೬೫ ಸಾವಿರ ರೂ, ಅವಳು ತೆಗೆದುಕೊಂಡಿರುವಳು. ಈ ಸ್ಪರ್ಧಾತ್ಮಕ ಕರೆ ಕಡಿಮೆಯಾಗಿ ಹೊಸಬರಿಗೆ ಇಂಬುಗೊಡುತ್ತ ಹೋಗಬೇಕು.

ಇನ್ನು ಉತ್ಪಾದ ವೆಚ್ಚದನ ಹೆಚ್ಚಳಕ್ಕೆ ಮತ್ತೊಂದು ಕಾರಣವೆಂದರೆ, ಮಿತಿಮೀರಿ ಬೆಲೆ ಹೆಚ್ಚಿರುವ ಕಚ್ಚಾ ಫಿಲ್ಮಿನ ಉಪಯೋಗದ ಬಗ್ಗೆ ಯಾವುದಾದರೊಂದು ಕ್ರಮಬದ್ಧ ಯೋಜನೆ ಮಾಡಿ ಚಿತ್ರಿಸದೆ ಒಂದೊಂದು ಚಿತ್ರಕ್ಕೂ ೩೦-೪೦ ಸಾವಿರ ಅಡಿ ಕಚ್ಚಾ ಫಿಲ್ಮು ಉಪಯೋಗಿಸಿ ಹಿಂದಿನಿಂದ ಕತ್ತರಿ ಹಾಕುತ್ತ ಹೋಗುವದಾಗಿದೆ. ಇದರಿಂದ ಉತ್ಪಾದನ ವೆಚ್ಚ ಅನಾವಶ್ಯಕವಾಗಿ ಬೆಳೆಯುವದು- ೧೯೪೧-೪೨ ರಲ್ಲಿ ಸುಮಾರು ೨೭೫ ಚಿತ್ರಗಳನ್ನು ತಯಾರಿಸುವಾಗ ೯೨೫೦ ಲಕ್ಷ ಅಡಿ ಕಚ್ಚಾ ಫಿಲ್ಮನ್ನು ಅಯಾತ ಮಾಡಿಕೊಂಡಿದ್ದರೆ (ಅದರ ಬೆಲೆ ೩೯ ಲಕ್ಷ ರೂ.) ಈಗ ೧೯೫೨-೫೩ ರಲ್ಲಿ ಸುಮಾರು ೩೦೦ ಚಿತ್ರಗಳನ್ನು ಅಂದರೆ ಆಗಿನಗಿಂತ ೨೫ ಚಿತ್ರಗಳನ್ನು ಮಾತ್ರ ಹೆಚ್ಚು ತಯಾರಿಸುತ್ತಿರುವಾಗ ೨೪೭೬೦ ಲಕ್ಷ ಅಡಿ ಕಚ್ಚಾ ಫಿಲ್ಮನ್ನು (ಅದರ ಬೆಲೆ ೧೬೬ ಲಕ್ಷ ರೂ) ಆಯಾತ ಮಾಡಿಕೊಳ್ಳುವದನ್ನು ನೋಡಿದರೆ ಈ ಮಾತು ಸ್ಪಷ್ಟವಾಗುವದು.

ಚಿತ್ರೋದ್ಯಮದ ಮೇಲಿನ ಅಧಿಕ ಕರಭಾರ ಆರ್ಥಿಕ ಮುಗ್ಗಟ್ಟು ತಲೆದೋರಲು ಇನ್ನೊಂದು ಕಾರಣ. ಹತ್ತು ಸಾವಿರಕ್ಕಿಂತ ಹೆಚ್ಚು ಜನವಸತಿ ಇರುವ ಪ್ರದೇಶದಲ್ಲಿ ಮನೋರಂಜನ ಕರ, ಇದ-ಲ್ಲದೆ ಸ್ಥಳೀಯ ಕರಗಳು, ಪ್ರದರ್ಶನದ ಮೇಲಿನ ಕರಗಳು, ಇಷ್ಟೆಲ್ಲ ಸಂದು ಉತ್ಪಾದಕರಿಗೆ ಉಳಿಯುವ ಹಣದ ಮೇಲೆ ಉತ್ಪಾದನ ಕರ ಹೀಗೆ ನೂರಕ್ಕೆ ೬೦ ರಷ್ಟು ಕರ ತೆತ್ತಬೇಕಾಗುವದು. ಹೀಗಾಗಿ ಚಿತ್ರನಿರ್ಮಾಪಕರಿಗೆ ಮತ್ತೊಂದು ಚಿತ್ರ ತೆಗೆಯಲು ಉತ್ಸಾಹವೇ ಬಾರದಂತಾಗುವದು. ಇದಲ್ಲದೆ ಕೆಲ ಚಿತ್ರಗಳಲ್ಲಿ ಅಭಿನಯಿಸಿ ಹಣ

ಗಳಿಸಿಕೊಂಡ ತಾರೆಯರು ಇಂದು ನಿರ್ಮಾಪಕ ವೃತ್ತಿಗಿಳಿಯತೊಡಗಿದ್ದಾರೆ. ಒಂದು ಚಿತ್ರ ಮುಗಿಯುವಷ್ಟರಲ್ಲಿ ಕೈಯಲ್ಲಿದ್ದ ಗಂಟನ್ನು ಬರಿದುಮಾಡಿಕೊಂಡು ಚಿತ್ರೋದ್ಯಮಕ್ಕೆ ಕುಂದು ತರುತ್ತಿರುವರು. ಹೀಗೆ ಚಲಚ್ಚಿತ್ರೋದ್ಯಮದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಲು ಮುಖ್ಯವಾಗಿ ಪ್ರೇಕ್ಷಕರ ಪ್ರೋತ್ಸಾಹ ಕಡಿಮೆಯಾಗಿರುವದು, ಉತ್ಪಾದದ ವೆಚ್ಚ ಹೆಚ್ಚುತ್ತಿರುವದು, ಅಧಿಕ ಕರ ಭಾರ ಇವು ಕಾರಣವಾಗಿವೆ.

ಈ ಉದ್ದಿಮೆಯ ಬೃಹದಾಕಾರದ ಬಗ್ಗೆ ಸರಕಾರಕ್ಕೆ ಅರಿವಿದೆ. ಅದಕ್ಕೆಂದೇ ಅದು ಚಲಚ್ಚಿತ್ರ ವಿಚಾರಣಾ ಸಮಿತಿಯನ್ನು ನೇಮಿಸಿತು. ವ್ಯಾಪಕವಾದ ಈ ಉದ್ದಿಮೆಯನ್ನು ಯೋಗ್ಯಸ್ಥಿತಿಯಲ್ಲಿ ಕಾಪಾಡಿಕೊಂಡು ಬರಲು ಸರಕಾರವು ಈ ವಿಚಾರಣ ಸಮಿತಿಯು ಒಪ್ಪಿಸಿದ ವರದಿಯನ್ನನು ಲಕ್ಷಿಸಿ, ತಕ್ಕ ಸಹಾಯ ಸೌಕರ್ಯಗಳನ್ನು ಒದಗಿಸಬೇಕಾಗಿರುವದು. ಚಲಚ್ಚಿತ್ರ ಪರಿಶೀಲನ ಪದ್ಧತಿಯಲ್ಲಿ ಸುಧಾರಣೆಮಾಡಿ ಎಲ್ಲರೂ ನೋಡುವಂತಹುದು ಮತ್ತು ಪ್ರೌಢರಿಗೆ ಮಾತ್ರ ಎಂದು ನಿಯಮ ಹಾಕಿಕೊಟ್ಟು ನೈತಿಕಮಟ್ಟ ಕಾಪಾಡಿಕೊಳ್ಳಲು ಸರಕಾರವು ಸಹಾಯ ನೀಡಿದೆ. ಮೇಲಾಗಿ ಪ್ರಾಂತಿಕ ಪರಿಶೀಲನ ಮಂಡಲಗಳನ್ನು ರದ್ದುಗೊಳಿಸಿದ್ದು ಅಂತರ್‌ಪ್ರಾಂತೀಯ ನಿರ್ಬಂಧಗಳಿಗೆ ಚಿತ್ರಗಳು ಸಿಲುಕುವದು ತಪ್ಪಿದೆ. ಆದರೆ ಸರಕಾರವು ವಿದೇಶೀ ಚಿತ್ರಗಳ ಹಾವಳಿಯನ್ನು ತಪ್ಪಿಸಬೇಕು. ಹಾಲಿವುಡ್‌ದ ಅಪರಾಧಿವೃತ್ತಿಯ, ಹಾಗೂ ಲೈಂಗಿಕ ಪ್ರದರ್ಶನದ ಚಿತ್ರಗಳು ಈಗೀಗ ಹೆಚ್ಚೆಚ್ಚಾಗಿ ಪ್ರವೇಶಿಸಿ ಭಾರತದ ಚಲಚ್ಚಿತ್ರೋದ್ಯಮಕ್ಕೆ ಪೆಟ್ಟು ತಗಲುವ ರೀತಿಯಲ್ಲಿ ಒಂದು ರೀತಿಯಿಂದ ಸ್ಪರ್ಧೆಯನ್ನೇ ನಡೆಸಿವೆ. ಅದಕ್ಕಾಗಿ ವಿದೇಶಿ ಚಿತ್ರಗಳ ಬಗ್ಗೆ ಸರಕಾರವು ಒಂದು ನಿಯಮವನ್ನು ಮಾಡಿ, ಕೆಲವೊಂದು ಉತ್ತಮ ಚಿತ್ರಗಳಿಗೆ ಮಾತ್ರ ಪ್ರವೇಶ ಕೊಡಬೇಕು. ಹೊರಗಿನ ಚಿತ್ರಗಳು ಬರದಿದ್ದರೆ ಚಿತ್ರಮಂದಿರಗಳು ಮುಚ್ಚುವವೆಂದು ಪಾಕಿಸ್ತಾನದಂತಹ ಭೀತಿ ಭಾರತಕ್ಕೇನೂ ಇರುವದಿಲ್ಲ. ಅಂದಬಳಿಕ ಸರಕಾರವು ಈ ವಿಷಯದಲ್ಲಿ ನಿಷ್ಠುರವಾದ ಕ್ರಮ ಕೈಕೊಂಡರೆ ತಪ್ಪೇನು? ಸರಕಾರದವರಂತೆ ಚಲಚ್ಚಿತ್ರ ನಿರ್ಮಾಪಕರು ತಮ್ಮ ಪಾಲಿನ ಕರ್ತವ್ಯವನ್ನು ನೆರವೇರಿಸಲು ಮುಂದೆ ಬರಬೇಕು.

ಭಾರತದಲ್ಲಿ ಪ್ರತಿವರ್ಷ ಇಷ್ಟು ಚಿತ್ರಗಳು ತಯಾರಾಗುತ್ತಿದ್ದರೂ ಉತ್ತಮ ಚಿತ್ರಗಳು ಹೊರಡುವದು ಕಡಿಮೆ. ವರ್ಷದಲ್ಲಿ ೧೫-೨೦ ಉತ್ತಮವಾದ ಚಿತ್ರಗಳು ಹೊರಡುವದೂ ಪರಾಕಾಷ್ಠೆ. ಈ ವರ್ಷದ ಚಿತ್ರಗಳನ್ನು ನೋಡೋಣ. ಬಂಗಾಲದಲ್ಲಿಯ ಒಂದು ಕ್ರಾಂತಿಯ ಪ್ರಸಂಗವನ್ನು ಭವ್ಯವಾಗಿ ನಿರೂಪಿಸುವ ಫಿಲ್ಮಿಸ್ತಾನದವರ ಆನಂದಮಠ, ಮದ್ಯಪಾನವು ಮನುಷ್ಯನನ್ನು ಅಧೋಗತಿಗಿಳಿಸಿ, ಜೀವನ ಹಾಳುಮಾಡಿ ಸಮಾಜದಲ್ಲಿ ಅವನ ಬೆಲೆ ಕಡಿಮೆಮಾಡುವದೆಂದು ಬೋಧಿಸುವ ಮಾರ್ಸ ಮುವಿಟೋನದವರ ಡಾಗ, ಪರದೇಶಿ ಮಕ್ಕಳ ಹೃದಯದ್ರಾವಕ ಪರಿಸ್ಥಿತಿ, ಕೆಲಸಗಾರರನ್ನು ಸಮಾಜವು ನೋಡುವ ದೃಷ್ಟಿಯನ್ನು ಹೃದಯಂಗಮವಾಗಿ ಚಿತ್ರಿಸಿದ ಅಲ್ಪಾದ ಚಿತ್ರದವರ ನನ್ನೆಮುನ್ನೆ, ಮಾನವತ್ವದ ದರ್ಶನಮಾಡಿಸುವ ಅದೇ ಸಂಸ್ಥೆಯ ಇನ್ನೊಂದು ಚಿತ್ರ ಮಹಾತ್ಮಾ, ಮಾನವನೊಬ್ಬನ ಹೃದಯವಿದ್ರಾವಕ ಜೀವನ, ಅವನಲ್ಲಿ ನಡೆದ ವಿಚಾರಗೊಂದಲ, ಹದಿಬದೆಯ ಪ್ರಭಾವ ಇವುಗಳನ್ನು ರಮ್ಯವಾಗಿ ನಿರೂಪಿಸಿರುವ ದೇವಕೀಬೋಸರ ರತ್ನದೀಪ, ಮಾನವನ ಜೀವನ ಯಾತ್ರೆಯ ಘಟ್ಟಗಳನ್ನೊಳಗೊಂಡ ನ್ಯೂಥಿಯೇಟರ್ಸದವರ ಯಾತ್ರಿಕ, ಭಾಷಾಪ್ರಶ್ನೆಯನ್ನು ಬಿಡಿಸಲೆತ್ನಿಸಿರುವ ರಾಜಕಮಲದವರ ತೀನ ಬತ್ತಿ ಚಾರ ರಾಸ್ತಾ, ತಾನಸೇನನ ಕಾಲದ ಒಂದು ದಂತಕಥೆಯನ್ನು ಆಧರಿಸಿ ಚಿತ್ರಿಸಿದ ಬೈಜುಬಾವರಾ, ಜಮೀನದಾರರ ಉಪಟಳ ಬಡರೈತರ, ಅವರ ವಿರೋಧ ಕಟ್ಟಿಕೊಂಡರೆ ಆಗುವ ಪರಿಣಾಮಗಳನ್ನು ಚಿತ್ರಿಸಿರುವ ದೋ ಬಿಘಾ ಜಮೀನ. ದಿ. ಶರಚ್ಚಂದ್ರ ಚಟರ್ಜಿಯವರ ಕಥೆಯೊಂದನ್ನು ಚಿತ್ರಿಸಿದ ಅಶೋಕ ಕುಮಾರನ ಪರಿಣೀತಾ, ಸಾಮಾನ್ಯ ಜೀವಿಗಳ ಅಸ್ತವ್ಯಸ್ತ ಜೀವನದರ್ಶನ ಮಾಡಿಸುವ ಹಮಲೋಗ, ಇವೇ ಕೆಲವೊಂದು ಹಿಂದಿ ಚಿತ್ರಗಳನ್ನು ಬಿಟ್ಟರೆ ಉಳಿದ ಹಿಂದಿ ಚಿತ್ರಗಳಲ್ಲಿ ಯಾವ ವೈಶಿಷ್ಟ್ಯವನ್ನೂ ಕಾಣಲಾರೆವು.

ವರ್ಣ ಚಿತ್ರಗಳಾಗಿ ಹೊರಟ ಆನ ಮತ್ತು ಝಾಂಸಿ ಕಿ ರಾಣಿ ಚಿತ್ರಗಳಲ್ಲಿ ಆನ್ ತಾಂತ್ರಿಕ ದೃಷ್ಟಿಯಿಂದ ಯಶಸ್ವಿಯಾಗಿದ್ದರೂ ವರ್ಣಚಿತ್ರವಾಗಿ ಯಶಸ್ವಿಯಾಗಿಲ್ಲ. ಕಥೆಯೂ ಆಕರ್ಷಕವಿಲ್ಲ. ಝಾಂಸಿ ಕಿ ರಾಣಿ ಮೆಹತಾಬಳ ಸಪ್ಪೆ ಅಭಿನಯದಿಂದ ಸ್ವಾರಸ್ಯವನ್ನು ಕಳೆದುಕೊಂಡಿದೆ. ಜೇಮಿನಿಯವರ ಮಿ. ಸಂಪತ್ ಹೆಚ್ಚು ನೃತ್ಯಗಳನ್ನು ಬಿಟ್ಟು, ಮೂಲ ಕಥೆಯಲ್ಲಿ ವಿಡಂಬನೆಯನ್ನು ಇನ್ನು ಹೆಚ್ಚು ಯಥಾರ್ಥವಾಗಿ ಚಿತ್ರಿಸಿದ್ದರೆ ಉತ್ತಮ ಮನೋರಂಜಕ ಚಿತ್ರವಾಗಬಹುದಿತ್ತು. ಆರ್. ಕೆ. ಫಿಲ್ಮ್ಸದವರ ಆಹ ಅಸಂಬದ್ಧ ಕಥೆಯಿಂದಾಗಿ ಉತ್ತಮ ಚಿತ್ರಗಳ ಮಾಲಿಕೆಯಲ್ಲಿ ಬರುವದಿಲ್ಲ. ಏಕ ದೋ ತೀನ, ಅಲಬೇಲಾ ಮೊದಲಾದ ಕೆಲ ಮನೋರಂಜಕ ಚಿತ್ರಗಳೂ ಹೊರಬಂದಿವೆ.

ಇನ್ನು ಪ್ರಾದೇಶಿಕ ಭಾಷೆಗಳಲ್ಲಿಯ ಚಿತ್ರಗಳನ್ನು ನೋಡಿದರೆ ಅಲ್ಲಿಯೂ ಇದೇ ಪರಿಸ್ಥಿತಿ ಕಂಡುಬರುವದು. ಬಂಗಾಲಿ, ಮರಾಠಿ, ಗುಜರಾತಿ, ಪಂಜಾಬಿ, ಕನ್ನಡ, ತಮಿಳು, ತೆಲುಗು ಈ ಭಾಷೆಗಳಲ್ಲಿ ತಯಾರಾಗುವ ಚಿತ್ರಗಳು ಹೆಚ್ಚಾಗಿ ಆಯಾ ಪ್ರದೇಶಗಳಲ್ಲಿಯೇ ಪ್ರದರ್ಶಿತವಾಗುತ್ತಿದ್ದು ವೈಶಿಷ್ಟ್ಯಪೂರ್ಣವಾದ ಚಿತ್ರಗಳು ಇಲ್ಲಿಯೂ ಕೆಲವೇ ಎಂದು ಕಂಡುಬರುವದು. ಬಂಗಾಲಿ ಚಿತ್ರಗಳು ಹಾಗೂ ಮರಾಠಿಯಲ್ಲಿಯ



ಹಲವರ ಹೃದಯವನ್ನು ಸೂರೆಗೊಂಡಿರುವ ತಾರೆ—ಸುರೈಯ್ಯಾ

ಅಮರಭೂಪಾಳಿ, ಶ್ಯಾಮ ಚಿ ಆಯಿ, ಪೇಡ-ಗಾಂವಾಚೆ ಶಹಾಣೆ, ಬಾಳಾಜೋಜೋರೆ, ಚಿಮಣಿ ಪಾಖರೆ ಇತ್ಯಾದಿ ಚಿತ್ರಗಳು ಪ್ರಗತಿಪರವಾಗಿರುವವು.

ಇಷ್ಟು ಹೆಚ್ಚು ಚಿತ್ರಗಳು ತಯಾರಾಗುತ್ತಿದ್ದರೂ ಕೆಲವೇ ಉತ್ತಮ ಚಿತ್ರಗಳು ಹೊರಡಲು ಯಾವ ಕಾರಣವಿರಬಹುದು ? ಚಿತ್ರಗಳ ಮಟ್ಟ ಕೆಳಗಿಳಿಯಲು ಯಾರು ಕಾರಣರು? ಇದು ವಿವಾದಸ್ಪದ ವಿಷಯವೆಂದೆನಿಸಿದರೂ ಚಿತ್ರನಿರ್ಮಾಪಕರೇ ಬಹುಮಟ್ಟಿಗೆ ಇದಕ್ಕೆ ಹೊಣೆಗಾರರಾಗುವರು. ಕೀಳುಅಭಿರುಚಿಯ ಚಿತ್ರಗಳನ್ನು ಅವರು ತಯಾರಿಸದಿದ್ದರೆ, ವಿದೇಶಗಳಿಂದ ಬಂದ ಚಿತ್ರಗಳ ಅನುಕರಣ ಮಾಡಿ, ಅಲ್ಲಿ ಚಿತ್ರಿಸಿರುವ ಜೀವನಕ್ಕೆ ಭಾರತದ ಮೇಲ್ಹೊದಿಕೆಯನ್ನು ಹಾಕದಿದ್ದರೆ, ಸಂಗೀತ ನೃತ್ಯಗಳಲ್ಲಿ ಹಾಲಿವುಡ್‌ನ್ನು ಅನುಸರಿಸದಿದ್ದರೆ ಚಿತ್ರಗಳ ಮಟ್ಟ ಇಷ್ಟು ಕೆಳಗಿಳಿಯುವದು ಸಾಧ್ಯವಿರಲಿಲ್ಲ. ಜನರು ಅವಕ್ಕೆ ಪ್ರೋತ್ಸಾಹ ಏಕೆ ಕೊಡಬೇಕು; ಅವರು ಉತ್ತೇಜನ ಕೊಡುವದನ್ನು ನಿಲ್ಲಿಸಿದರೆ ಇಂಥ ಚಿತ್ರಗಳು ತಾವಾಗಿಯೇ ಕಡಿಮೆಯಾಗುವವು; ಅವರೇ ಇಂತಹ ಚಿತ್ರಗಳ ತಯಾರಿಕೆಗೆ ಕಾರಣರು ಎಂದು ಚಿತ್ರನಿರ್ಮಾಪಕರ ವಾದ. ಆದರೆ ಇತ್ತೀಚೆಗೆ ಚಿತ್ರೋದ್ಯಮದಲ್ಲಿ ಆರ್ಥಿಕ ಮುಗ್ಗಟ್ಟುಂಟಾದುದನ್ನನುಲಕ್ಷಿಸಿದರೆ ಚಿತ್ರನಿರ್ಮಾಪಕರ ವಾದದಲ್ಲಿ ಹುರಳಿಲ್ಲವೆಂದು ತಾನೇ ವ್ಯಕ್ತವಾಗುವದು.

ಚಲಚ್ಚಿತ್ರಗಳಲ್ಲಿಯ ಕೀಳ್ಮಟ್ಟವು ಹೋಗಿ ಪರಿಸ್ಥಿತಿಯು ಸುಧಾರಿಸಬೇಕಾದರೆ ಅನುಕರಣೆ ತಪ್ಪಬೇಕು. ಒಂದು ಚಿತ್ರದಲ್ಲಿಯ (ಭಾರತೀಯವಾಗಿರಲಿ ವಿದೇಶಿಯಾಗಿರಲಿ) ಒಂದು ದೃಶ್ಯ, ಹಾಡು, ನರ್ತನ ಜನಪ್ರಿಯವಾಗಿದೆಯೆಂದು ಕಂಡು ಬಂದಾಕ್ಷಣವೇ ಉಳಿದ ಚಿತ್ರನಿರ್ಮಾಪಕರು ಅವನ್ನು ತಮ್ಮ ಚಿತ್ರಗಳಲ್ಲಿ ಅನವಶ್ಯಕವಾಗಿಯಾದರೂ ಎಳೆದು ತಂದು ಸೇರಿಸಿಕೊಳ್ಳುವದು ತಪ್ಪಬೇಕು. ಹೀಗೆ ಅನುಕರಿಸುವದು ತಮ್ಮಲ್ಲಿ ಕ್ರಿಯಾತ್ಮಕ ಶಕ್ತಿಯಿಲ್ಲೆಂಬುದನ್ನೂ ಕಲಾತ್ಮಕ ದೃಷ್ಟಿಕೋನವಿಲ್ಲೆಂಬುದನ್ನೂ ವ್ಯಕ್ತಪಡಿಸಿದಂತಾಗುವದು. ಮುಖ್ಯವಾಗಿ ವಿದೇಶಿ ಚಿತ್ರಗಳ ಅನುಕರಣ ತಪ್ಪಿ ಭಾರತೀಯ ದೃಷ್ಟಿಕೋನ ಬೆಳೆದು ಬರಬೇಕು; ರಾಷ್ಟ್ರೀಯ ಚಿತ್ರಗಳಾಗಬೇಕು. ಭಾರತದ ಚಿತ್ರನಿರ್ಮಾಪಕರು ಭಾರತೀಯ ಕಥೆ, ಜೀವನ, ಸನ್ನಿವೇಶ, ಸೃಷ್ಟಿಸೌಂದರ್ಯಗಳಿಂದ ಸ್ಫೂರ್ತಿಪಡೆದು ಅವುಗಳ ಪ್ರಯೋಜನ ಮಾಡಿಕೊಂಡು ಚಿತ್ರನಿರ್ಮಿಸಬೇಕು.

ನರ್ತನ ಹಾಗೂ ಸಂಗೀತಗಳಲ್ಲಿಯೂ ಭಾರತೀಯ ಪದ್ಧತಿ, ಸಂಪ್ರದಾಯಗಳನ್ನು ಅನುಸರಿಸಬೇಕು. ಶಾಸ್ತ್ರೀಯ ಸಂಗೀತವನ್ನು ಜನತೆ ಹೆಚ್ಚಾಗಿ ಮೆಚ್ಚುವದೆಂಬುದನ್ನು ಬೈಜುಬಾವರಾ ಗಳಿಸಿದ ಖ್ಯಾತಿಯಿಂದ ಚಿತ್ರನಿರ್ಮಾಪಕರು ಕಂಡುಕೊಳ್ಳಲಿ. ನರ್ತನವೆಂದರೆ ಜಿಗಿದಾಟವೆಂದು ಬಗೆಯುವಂತಹ ರೀತಿಯಲ್ಲಿ ಅದನ್ನು ಉಪಯೋಗಿಸಬಾರದು. ಭಾರತೀಯರೇ ಅವನ್ನು ಕಂಡು ನಾಚುವಂತಹ ಇಂದಿನ ಪರಿಸ್ಥಿತಿಯನ್ನು ದೂರಮಾಡಬೇಕು.

ಭಾರತೀಯ ಚಲಚ್ಚಿತ್ರಗಳು ವಿದೇಶಗಳಿಗೆ ಹೋದಾಗ ಇಂತಹ ಚಿತ್ರಗಳಿಂದ ಭಾರತದ ಸಂಸ್ಕೃತಿ, ಪರಂಪರೆಗಳಿಗೆ ಬಲವಾದ ಪೆಟ್ಟು ಬೀಳದಿರದು. ಶಕುಂತಲಾ ಚಿತ್ರ ಅಮೇರಿಕೆಯಲ್ಲಿ ಪ್ರದರ್ಶಿತವಾದಾಗ ನಡೆದ ಚರ್ಚೆಯನ್ನು ಲಕ್ಷಿಸಬೇಕು. ಈಗ ಆವಾರಾ ಜಗತ್ತಿನಲ್ಲೆಲ್ಲ ಪ್ರದರ್ಶಿತವಾಗುವ ಹವಣಿಕೆಯಲ್ಲಿದೆ. ಹೀಗೆ ಭಾರತದ ಚಿತ್ರಗಳು ವಿದೇಶಗಳಲ್ಲಿ ಪ್ರದರ್ಶಿತವಾಗುವಾಗ ಅವನ್ನು ಕಂಡವರು ಇದೆಂತಹ ಭಾರತದ ಸಂಸ್ಕೃತಿ, ಇದೆಂತಹ ಭಾರತೀಯ ಜೀವನ ಎಂದು ಅವರು ಮೂಗು ಮುರಿಯುವಂತಾಗಬಾರದು. ನಮ್ಮ ಚಿತ್ರಗಳು ವಿದೇಶಗಳಲ್ಲಿ ಭಾರತದ ಸಾಂಸ್ಕೃತಿಕ ಪ್ರತಿನಿಧಿಗಳಾಗಬೇಕು; ವಿದೇಶಿಯರು ಭಾರತೀಯ ಜೀವನ ಪದ್ಧತಿಯನ್ನು ಅರಿಯುವಂತಿರಬೇಕು.

ಇನ್ನು ಕನ್ನಡ ಚಲಚ್ಚಿತ್ರಗಳ ಬಗ್ಗೆ ಕೆಲ ಮಟ್ಟಿಗೆ ವಿಚಾರಿಸೋಣ. ಪ್ರದರ್ಶನಕ್ಕೆ ಹೆಚ್ಚು ಇಂಬಿರುವ ಹಿಂದಿ ಚಿತ್ರಗಳ ಪರಿಸ್ಥಿತಿಯೇ ಈ ರೀತಿಯಾಗಿರುವಾಗ ವರ್ಷಕ್ಕೆ ೫-೬ ಚಿತ್ರಗಳನ್ನು ಹೊರಡಿಸುವ ಕನ್ನಡ ಚಲಚ್ಚಿತ್ರೋದ್ಯಮದ ಪರಿಸ್ಥಿತಿ ಹೇಗಿರಬೇಕೆಂಬುದು ಊಹಿಸದಷ್ಟು ಕಠಿಣವಾಗುವದು. ಇತ್ತೀಚೆಗೆ ಹೊರಟ ಮಹಾತ್ಮಾರವರ ಜಗನ್ಮೋಹಿನಿ, ದಲ್ಲಾಳಿ,

ಸೌಭಾಗ್ಯಲಕ್ಷ್ಮಿ, ಗುಬ್ಬಿಯುವರ ಗುಣಸಾಗರಿ ಮತ್ತು ಭಕ್ತಕುಂಬಾರ ಹಾಗೂ ಮಾಡರ್ನ ಥಿಯೇಟರ್ಸದವರ ಮಂಗಳಗೌರಿ ಈ ಚಿತ್ರಗಳನ್ನು ಅವಲೋಕಿಸಿದಾಗ ಕನ್ನಡ ಚಿತ್ರಗಳ ಬಗೆಗಿದ್ದ ನಿರಾಸೆ ಹೆಚ್ಚಾಗುವದೆ ಹೊರತು ಕಡಿಮೆಯಾಗಲಾರದು.

ಈ ವರ್ಷದಲ್ಲಿ ಇದ್ದುದರಲ್ಲಿಯೇ ಸೌಭಾಗ್ಯಲಕ್ಷ್ಮಿ ಕನ್ನಡದಲ್ಲಿಯು ಒಂದು ಸಾಧಾರಣವಾದ ಚಿತ್ರವೆಂದು ಹೇಳಬಹುದು. ಗೀತಗಳನ್ನು ಹಾಡುವ ಪದ್ಧತಿಯಲ್ಲಿ ಅನುಕರಣೆಯನ್ನು ಬಿಟ್ಟಿದ್ದರೆ, ಚಿತ್ರದ ಕೊನೆಯು ಹೃದಯಂಗಮವಾಗಿದ್ದರೆ, ಲಕ್ಷ್ಮಿಯು ಮರಣದನಂತರ ಅವಳ ಸಿರಿವಂತ ಮಾವ ಬುದ್ಧಿಗಲಿಯುವಲ್ಲಿ ಮುಕ್ತಾಯವಾಗಿದ್ದರೆ ಸೌಭಾಗ್ಯಲಕ್ಷ್ಮಿ ನಿಜವಾಗಿಯೂ ಒಂದು ಉತ್ತಮವಾದ ಕನ್ನಡ ಚಿತ್ರವಾಗಬಹುದಿತ್ತು. ಅದೇ ರೀತಿಯ ಮಹಾತ್ಮಾರವರ ಇನ್ನೊಂದು ಚಿತ್ರದಲ್ಲಾಳಿ ತಾಂತ್ರಿಕ ದೋಷಗಳು ಹೆಚ್ಚಾಗಿದ್ದರಿಂದ ಒಂದು ಸಾಧಾರಣವಾದ ಚಿತ್ರವಾಗಿದೆ. ಮಂಗಳಗೌರಿ ಒಂದು ಜಾನಪದ ಕಥೆಯನ್ನು ಅನುಸರಿಸಿದ್ದು ಹೆಸರಿನ ದುರುಪಯೋಗವಾಗಿದೆಯೆಂದೂ ಅಯಶಸ್ವಿ ಚಿತ್ರವಾಗಿದೆಯೆಂದೂ ತಿಳಿದುಬಂದಿದೆ. ನಾಗೇಂದ್ರರಾಯರ 'ಜಾತಕಫಲ' ದ ಬಗ್ಗೆ ಕಾದುನೋಡಬೇಕಾಗಿದೆ. ಕನ್ನಡ ಚಿತ್ರನಿರ್ಮಾಪಕರು ಕನ್ನಡನಾಡಿನಲ್ಲಿ ಬೇಕಾದಷ್ಟು ಸೃಷ್ಟಿಸೌಂದರ್ಯವಿದ್ದರೂ ಅದನ್ನು ತಕ್ಕರೀತಿಯಲ್ಲಿ ಅಳವಡಿಸಿಕೊಳ್ಳದಿರುವದು, ಐತಿಹಾಸಿಕ ಪ್ರಸಂಗಗಳನ್ನು ಅಲಕ್ಷಿಸಿರುವದು ವಿಷಾದಕರವಾಗಿದೆ.

ಇಂತಹ ದುಃಸ್ಥಿತಿಯಿರುವಾಗಲೇ ಭಾರತೀಯರು ಜಗತ್ತಿನೊಂದಿಗೆ ಸ್ಪರ್ಧಿಸಬಹುದಾದ ಬೈಜುಬಾವರಾ, ರತ್ನದೀಪ, ದೋಬಿಘಾಜಮೀನ, ಅಮರ ಭೂಪಾಳಿಗಳಂತಹ ಚಿತ್ರಗಳನ್ನು ನಿರ್ಮಿಸುವದು ಸಾಧ್ಯವಾದಾಗ, ಪರಿಸ್ಥಿತಿ ಸುಧಾರಿಸಿದರೆ, ಚಿತ್ರನಿರ್ಮಾಪಕರು ಹೆಚ್ಚು ಲಕ್ಷ್ಯಹಾಕಿ, ಮನಸ್ಸುಗೊಟ್ಟು ಪ್ರತಿಯೊಂದು ಅಂಶವನ್ನು ತೂಗಿನೋಡಿ ಚಿತ್ರಗಳನ್ನು ತಯಾರಿಸಿದರೆ, ಇದಕ್ಕೂ ಉತ್ತಮವಾದ ಅನೇಕ ಚಿತ್ರಗಳ ನಿರ್ಮಾಣ ಸಾಧ್ಯವಾಗಬಹುದು. ಇದೀಗ ಸಂಶೋಧನ ಮಾಡಿ ಕೃತಿಗಿಳಿಸುತ್ತಿರುವ ಚಲಚ್ಚಿತ್ರದ ಅತ್ಯಾಧುನಿಕ ರೂಪವಾದ ತ್ರಿಗಾತ್ರ ಚಿತ್ರಗಳ ತಯಾರಿಕೆಯನ್ನು ಭಾರತೀಯರೂ ಹೆಚ್ಚೆಚ್ಚಾಗಿ ಕೈಕೊಳ್ಳಬಹುದಾಗಿದೆ.

ಶ್ರೇಷ್ಠ ಕಲಾವಿದೆ - ಸುರೈಯಾ

"ದಾದಾಭಾಯಿ ನವರೋಜಿ ರಸ್ತೆಯಲ್ಲಿ ಲಾಠಿ ಪ್ರಯೋಗ! ಮುಂಬಯಿ ಪೋಲೀಸರ ಪ್ರಹಾರಕ್ಕೂ ಜನತೆ ಮಣಿಯಲಿಲ್ಲ!!" ಇದು ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹದ ಕತೆಯಲ್ಲ. ಆಗಸ್ಟ ಚಳುವಳಿಯ ಹಳೆಯ ವಾರ್ತಾ ವರದಿಯಲ್ಲ. ಕಾರ್ಮಿಕರ ಮುಷ್ಕರ-ಸತ್ಯಾಗ್ರಹ-ಚಟುವಟಿಕೆಗಳನ್ನು ಹತ್ತಿಕ್ಕಲು ಅಧಿಕಾರಿಗಳು ನಡೆಸಿದ ಪ್ರಯತ್ನವಲ್ಲ. ನಿನ್ನೆ ಮೊನ್ನೆ ಎಂಬಂತೆ ಸುಪ್ರಸಿದ್ಧ ಸಿನಿಮಾ ನಟಿ ಸುರೈಯಾಳನ್ನು ಚಲಚ್ಚಿತ್ರ ಪ್ರೇಮಿಗಳು, ತಾರಾಧಾರಕರು ಮುತ್ತಿದಾಗ ನಡೆದ ಸಂಗತಿ. ಸಭ್ಯ, ಸುಸಂಸ್ಕೃತರೆನಿಸಿದ ಮುಂಬಯಿಯ ನಾಗರಿಕರು ಈ ತಾರಾಮಣಿಯನ್ನು ಬರೇ ದರ್ಶನ ಲಾಭಕ್ಕಾಗಿ ಕೀಟಲೆಕೊಟ್ಟ ವೃತ್ತಾಂತವಿದು.

ತಾರೆಯರ ಜೀವನದಲ್ಲಿ—ರಜತ ಪರದೆಯ ಅಥವಾ ವಾಸ್ತವಿಕ ಸಂದರ್ಶನದಲ್ಲಿ ಪ್ರೇಕ್ಷಕರ ಮನಸೆಳೆಯುವ ಅಥವಾ ಅಭಿರುಚಿಗೊಪ್ಪುವ ವಸ್ತು ವೈವಿಧ್ಯ, ವಿಶೇಷ ಸಂಗತಿ ಏನಿರುವುದೊ? ಸೌಂದರ್ಯವಿರಬಹುದು; ಸಂಗೀತವಿರಬಹುದು. ನಟನೆಯೋ, ನುಡಿಯೋ, ಮಾಟವೋ, ಮೋಡಿಯೋ, ವೇಷವೋ, ವೈಯ್ಯಾರವೊ ಇರಬಹುದು. ಅದು ಯಾವುದೇ ಇರಲಿ ಸಿನಿಮಾ ತಾರೆಯರ ಆಕರ್ಷಣೆ ಎಲ್ಲೆಡೆಯಲ್ಲಿ, ಎಲ್ಲರಲ್ಲಿ ಹುಟ್ಟುತ್ತಿದೆ.

ಇಲ್ಲವಾದರೆ ಈ ಸುರೈಯಾಳ ಮಹಲ ಮನೆಯ ಮುಂದೆ ರಾತ್ರಿ-ಹಗಲೆನ್ನದೆ, ಬಿಸಿಲು-ಮಳೆಯೆನ್ನದೆ, ಹಸಿವು-ನೀರಡಿಕೆಗಳನ್ನು ಒತ್ತಟ್ಟಿಗಿಟ್ಟು ಮೂರು ತಿಂಗಳ ಕಾಲ ಪ್ರಣಯ ಲೇಖನ ವ್ಯವಸಾಯ ಕೈಕೊಂಡ ಮೂರ್ಖ ಪ್ರೇಮಿಯ ಕತೆ ಘಟಿಸುತ್ತಿತ್ತೆ? ಪಾಪ, ಅವನ ಪ್ರೇಮ ಸಮಾಧಿಯಾಯಿತು. ಬರೆದ ಪತ್ರಗಳನ್ನೆಲ್ಲ ಕಸದ ಬುಟ್ಟಿ ನುಂಗಿತು. ಚಿರ ವಿರಹಿಯಾಗಿ, ಭಗ್ನ ಹೃದಯದಿಂದ ಆತ ಊರು ಬಿಟ್ಟು ಎಲ್ಲೋ ಫರಾರಿಯಾದನಂತೆ. ಆದರೆ ಸುರೈಯಾ ಇಂತಹ ಪ್ರೇಮ ಭಿಕ್ಷುಗಳನ್ನು ಕಣ್ಣೆತ್ತಿ ಕೂಡಾ ನೋಡಲಿಲ್ಲ.

ಕಾಲ ಬದಲಾದಂತೆ, ಚಲಚ್ಚಿತ್ರವು ಕಲಾಪೂರ್ಣ ಉದ್ಯಮವಾದಂತೆ ನಟನಟಿಯರಿಗೂ ವೈಯಕ್ತಿಕ ಗೌರವ ಪುರಸ್ಕಾರ ಸಲ್ಲಲೇ ಬೇಕು. ಲಕ್ಷೋಪಲಕ್ಷ ಜನರನ್ನು ಸುರೈಯಾ ತನ್ನ ಕೋಕಿಲ ಕಂಠದಿಂದ ಆನಂದ ತುಂದಿಲರನ್ನಾಗಿ ಮಾಡಿರುತ್ತಾಳೆ. ತನ್ನ ಅಸಾಮಾನ್ಯ ನಟನೆಯಿಂದ ಅತ್ಯುತ್ತಮ ಚಿತ್ರಗಳಿಂದ ಅಪೂರ್ವ ಅಭಿನಯವನ್ನು ಪ್ರದರ್ಶಿಸಿ ಪ್ರೀತ್ಯಾದರಗಳನ್ನು ಪ್ರೇಕ್ಷಕರಿಂದ ಗಳಿಸಿರುತ್ತಾಳೆ.

ಸುರೈಯಾ ನಕ್ಕರೆ ರಸಿಕರೆಲ್ಲ ನಗಬೇಕು. ಕುಣಿದರೆ ಪ್ರೇಕ್ಷಕರೂ ಕುಣಿಯಬೇಕು! ತನ್ನ ಸರಳ ಸಹಜ, ಸ್ವಾಭಾವಿಕ ನಟನಾ ವೈಖರಿಗಳಿಂದ ಸುರೈಯಾ ರಜತಪರದೆಯ ರಾಣಿಯಾಗಿ ಮೆರೆದಿದ್ದಾಳೆ-ಇಂದಿಗೂ ಮಿನುಗುತ್ತಾಳೆ. ಇಂತಹ ಸುಂದರಿ ನಟಿಯನ್ನು, ಸುಶೀಲ ಅಭಿನಯಗಾರ್ತಿಯನ್ನು, ಸಂಗೀತ ಸುಧಾಕರೆಯನ್ನು ಕಾಣಲು ಕಾಶಿಯಿಂದಲೂ ಯಾತ್ರಾರ್ಥಿಗಳು ಬಂದರೆ ಆಶ್ಚರ್ಯವೇನು?

ಈ ನಟಿ ಜನಿಸಿದ್ದು ಲಾಹೋರಿನಲ್ಲಿ; ೧೯೨೯ ರ ಜೂನ ಹದಿನೈದರಂದು. ಅಂದರೆ ಅವಳೀಗ ಇಪ್ಪತ್ತೈದು ವರ್ಷದ ತರುಣಿ. ಹತ್ತರ ವಯಸ್ಸಿನಲ್ಲೇ ಅಭಿನಯಕ್ಕೆ ಧುಮುಕಿ ಹದಿನೈದು ವರ್ಷದೊಳಗಾಗಿ ಇಪ್ಪತ್ತು-ಮೂವತ್ತು ಜಯಪ್ರದ ಚಿತ್ರಗಳಲ್ಲಿ ನಟಿಸಿದ ಈ ತಾರೆಯ ಕೀರ್ತಿ ಸಾಮಾನ್ಯವಲ್ಲ. ತಾನೊಂದು ನಟಿಯಾಗಿ ಮೆರೆಯಬೇಕೆಂಬ ಹಿರಿಯ ಬಯಕೆ ಸುರೈಯಾಳಿಗೆ ಇದ್ದಿಲ್ಲವಾದರೂ ಅವಳ ಬಾಲ್ಯ ಜೀವನ ನೈಸರ್ಗಿಕವಾಗಿಯೇ ಭಾವೀ ಉದ್ಯೋಗಕ್ಕೆ ಪುಟಗೊಂಡಿತ್ತು. "ಸರಿಗಮ"ವನ್ನಾಗಲಿ, "ತ ರಾ ನಾ" ವನ್ನಾಗಲಿ ಯಾರಿಂದಲೂ ಕಲಿಯದ ಈಕೆ ಸುಶ್ರಾವ್ಯವಾಗಿ ಶಾಸ್ತ್ರೀಯ ಸಂಗೀತವನ್ನಾದರೂ ಹಾಡಬಲ್ಲವಳಾಗಿದ್ದಳೆಂದರೆ ಅದೊಂದು ಅದ್ಭುತವಲ್ಲವೇ? ಕುಣಿತವೂ ಹಾಗೆಯೆ. ಅವಳು ಒಂದು ಗಳಿಗೆಯಾದರೂ ನಾಟ್ಯ ಶಾಲೆಗೆ ಹೋಗಿಲ್ಲ. ಅವಳ ಗುರು ಗ್ರಾಮ-ಫೋನ್ ಪೆಟ್ಟಿಗೆ. ತಾರಾಮಂಡಳದ ಶ್ರೇಷ್ಠ ಗಾಯಕ ಸೈಗಲನ ಮಧುರ ಸ್ವರಕ್ಕೆ ಸುರೈಯಾ ಮೊದಲು ಮರುಳಾಗಿದ್ದಳು. ಮತ್ತು ಕಾನನ-ಬಾಲಾ, ಖುರ್ಷೀದರ ಹಾಡುಗಳೂ ಅವಳ ಎಳೆಯ ಮನಸ್ಸಿನಲ್ಲಿ ತುಂಬಾ ಪರಿಣಾಮವನ್ನುಂಟು ಮಾಡಿದ್ದವು.

ಸುರೈಯಾ ಮೊದಲು ನಟಿಸಿದ ಚಿತ್ರ ದಿಗ್ದರ್ಶಕ ನಾನಾಭಾಯಿ ವಕೀಲರ "ಮುಮತಾಜ್ ಮಹಲ್". ಅದು ೧೯೪೧ ರಲ್ಲಿ. ಮರುವರ್ಷ ಕರ್दಾರರ "ಶಾರದಾ" ಚಿತ್ರದಲ್ಲಿ ಮೆಹತಾಬಳ ಹಾಡೊಂದಕ್ಕೆ ನೇಪಥ್ಯಗಾಯನ ಒದಗಿಸಿದಳು. "ಪಂಚೀ ಜಾ... ಪೀಚೇ ರಹಾ ಬಚಪನ್ ಮೇರಾ" ಎಂಬ ಗೀತ ಜಗಜ್ಜನಿತವಾಯಿತು. ಮುಂದೆ ಬಾಂಬೆಟಾಕೀಸಿನವರ "ಹಮಾರಿ ಬಾತ್" ಚಿತ್ರದಲ್ಲಿ ಒಂದು ನೃತ್ಯ ಕೊಟ್ಟಳು. ಇದು ಆಕೆಗೆ ಬಹಳ ಪ್ರಖ್ಯಾತಿಯೊಂದಿಗೆ ಕೈತುಂಬ ಕಾಸನ್ನು ಗಳಿಸಿಕೊಟ್ಟಿತು. ಪ್ರಗತಿ ಪ್ರಾರಂಭವಾಯಿತು.

"ಇಷಾರ" ಚಿತ್ರದ ಬಳಿಕ ಸುರೈಯಾಳಿಗೆ ಕರಾರಿನ ಸುರಿಮಳೆ. ಅವಳು ಹಲವು ಚಿತ್ರಗಳಲ್ಲಿ ನಟಿಸಿ ಜನಪ್ರೀತಳಾದಳು. ೧೯೪೮ ರಲ್ಲಿ ಜೆ. ಕೆ. ನಂದಾರವರ "ಪರವಾನ" ಚಿತ್ರದಲ್ಲಿ ಸೈಗಾಲನೊಟ್ಟಿಗೆ ಅಭಿನಯಿಸಿದಾಗ ಅವಳ "ಪಪಿ ಪಪಿಹಾರೇ" ಹಾಡು, ಮನೆ ಮನೆ ಮಕ್ಕಳ ಬಾಯಲ್ಲೂ ಕೇಳುವಂತಾಯಿತು! ೧೯೫೦ ರಲ್ಲಿ ಸುರೈಯಾ ಆ ವರ್ಷದ ಶ್ರೇಷ್ಠ ತಾರಿಕೆಯೆಂದು ಅವಳಿಗೊಂದು ಬಂಗಾರದ ಬಹುಮಾನ ಪದಕ ಕೊಡಲಾಯಿತು. ಆ ವರ್ಷ ಆಕೆ ಅಭಿನಯಿಸಿದ ಹಲವಾರು ಚಿತ್ರಗಳು ರೌಪ್ಯ—ಸುವರ್ಣಮಹೋತ್ಸವವನ್ನು ಕಂಡಿರುತ್ತವೆ.

ಎಳೆಯ ಪ್ರಾಯದಲ್ಲೇ ಸಿನಿಮಾದ ಸಂಬಂಧ

ಬಂದಿದ್ದರಿಂದಾಗಿ ಸುರೈಯಾಳಿಗೆ ಶಾಲೆ ಕಾಲೇಜುಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸಂಗ ಮಾಡುವ ಸಮುಯವಾಗಲಿ ಅನುಕೂಲತೆಯಾಗಲಿ ಸಿಗಲಿಲ್ಲ. ಆದರೂ ಅವಳಿಗೆ ಹಿಂದೀ, ಉರ್ದೂ, ಫಾರಸಿಕ ಭಾಷೆಗಳು ಬರುತ್ತವೆ. ಇಂಗ್ಲೀಷಿನಲ್ಲೂ ಸಾಕಷ್ಟು ಪ್ರಾವೀಣ್ಯವನ್ನು ಪಡೆದಿರುತ್ತಾಳೆ. ರೂಪರಂಗದ ಕೆಲಸ ಅಹೋರಾತ್ರಿಯಿದ್ದರೂ ಬಿಡುವಿನಲ್ಲಿ ಕತೆ ಕಾದಂಬರಿಗಳನ್ನು ಓದುವದು ಅವಳ ದಿನಚರಿಯಲ್ಲಿದೆ. ಬೇಸರವೆಂಬುದು ಅವಳಿಗಿಲ್ಲ. ತಾಯಿ ಮಲಿಕಾ ಬೇಗಮ್ ಮಗಳನ್ನು ಮಮತೆಯಿಂದ ಕಾಣುತ್ತಾರೆ. ಅಜ್ಜಿ ಪಾದಶಾಳ ಲಾಲನ-ಪಾಲನ ಅಮಿತವಾಗಿದೆ. ಹಾಗೆಲ್ಲಾದರೂ ದಿನವಹಿ ಕಾರ್ಯ-ಕ್ರಮದಿಂದ ಬಿಡುಗಡೆ ಬೇಕೆಂದಾದರೆ ಮನೆ ಬಳಗವನ್ನು ಕಟ್ಟಿಕೊಂಡು ಲೋಣಾವಳಕ್ಕೋ, ಮಥೆಗಿನಿಗೋ ವಿಹಾರ ಹೊರಡುತ್ತಾಳೆ. ಅಲ್ಲಿ ನಾಲ್ಕಾರು ದಿನ ನಿಂತು ನಿಸರ್ಗ ಸೌಂದರ್ಯ-ಸೌಮ್ಯತೆ-ಶಾಂತಿಯನ್ನುಂಡು ಮುಂಬಯಿಗೆ ಮರಳುತ್ತಾಳೆ.

ಆದರೂ ಹೆಣ್ಣು ಯೌವನದ ಹೊಸಲು ದಾಟುವದರೊಳಗಾಗಿ ಗಂಡಿನ ಸ್ನೇಹ ಬಯಸುವುದು ನೈಸರ್ಗಿಕ. ಬಡವರಿರಲಿ, ಬಲ್ಲಿದರಿರಲಿ, ಇದೊಂದು ಬಯಕೆ ಅವ್ಯಾಹತವಾಗಿ ಜೀವನದಲ್ಲಿ, ಪೃಥ್ವಿಯಲ್ಲಿ ಸಾಗುತ್ತದೆ. ಸುರೈಯಾ ಕೂಡ ಇದಕ್ಕೆ ಅಪವಾದವಾಗಿಲ್ಲ. ಹಿಂದೊಂದು ದಿನ ಅಮೇರಿಕೆಯ ದಪ್ಪ ಪುಷ್ಟ ಸುಂದರ ನಟ ಗ್ರೆಗರಿ ಪೆಕ್ಕನ್ನು ಕಂಡು ಸುರೈಯಾ ಅವನ ದಾಂಪತ್ಯ ಸ್ನೇಹದ ಕನಸಿನ ಮಂಡಿಗೆ ತಿನ್ನುತ್ತಿದ್ದಳು. ತಾರುಣ್ಯದ ಭರದಲ್ಲಿ, ಲೋಕಾಭಿಪ್ರೇಮ ಪರಾಯಣ ಪಾತ್ರಗಳ ರೋಮಾಂಚಕಾರಕ ಸನ್ನಿವೇಶ ಚಿತ್ರಣಗಳು ಅವಳನ್ನೂ ಮಂಕುಗೊಳಿಸಿದ್ದುವು. ಸುರೈಯಾಗೆ ಹಾಲಿವುಡ್ಡಿನ ಪೆಕ್ಕನ ಮೇಲೆ ಪ್ರೇಮ ಮೂಡಿತು. ತಾನು ಮದುವೆಯಾಗುವದಾದರೆ 'ಪೆಕ್ಕನನ್ನೆ' ಎಂದು ಅನೇಕ ಬಾರಿ ತನ್ನ ಪ್ರೇಮ ಪ್ರಲಾಪವನ್ನು ಪ್ರದರ್ಶಿಸಿದ್ದಳಾಕೆ. ಆದರೆ ಅವಳ ಅಮೇರಿಕೆಯ ಪಯಣ ಅದೀಗಲೂ ಮುಂದೂಡಲಾಗಿದೆ. ನಡುವೆ ಇನ್ನಿತರ ಪ್ರೇಮಘಟನೆಯಲ್ಲೂ ಸುರೈಯಾಳ ಹೆಸರು ಪ್ರಸಿದ್ಧಿಯಾಗಿತ್ತು. ಚೆಲುವ ನಟ ದೇವ ಆನಂದನ ಕೆಲ ದಿನದ ಸ್ನೇಹದಿಂದಾಗಿ ಅವರೀರ್ವರ ಪ್ರೇಮಬಂಧನ ಮದುವೆಯ ಮಂಗಲದಲ್ಲೇ ಮುಕ್ತಾಯ ಗೊಳ್ಳುವದೆಂದು ಚಲಚ್ಚಿತ್ರ ಪ್ರೇಕ್ಷಕ ವರ್ಗವೆಲ್ಲ ಎಣಿಕೆ ಹಾಕುತ್ತಿತ್ತು! ಈ ಪ್ರಣಯವಾರ್ತೆ ಸುಳ್ಳೆಂದು ಸಾರುವುದರೊಳಗಾಗಿ ನಟ ರಹೆಮಾನ ಸುರೈಯಾರ ಪ್ರೇಮಾಲಾಪದ ಕಥನ ಹೊರಬಂತು. ಹೆಣ್ಣು ಗಂಡನ್ನು ಬಯಸುವುದು-ಪ್ರೀತಿಸುವುದು ತಪ್ಪಲ್ಲ! ಫಿಲ್ಮ್ ಬಾತ್ಮೀದಾರರ, ಮೈಗಳ್ಳ ಪತ್ರಿಕೋದ್ಯಮಿಗಳ ಊಹಾಪೋಹ ವದಂತಿ ಬಾತ್ಮಿಗಳಿಗೆ ಸುರೈಯಾ ಜವಾಬ್ದಾರಳಲ್ಲ.

ಸುರೈಯಾ ಪ್ರತಿದಿನವೂ ಕುರಾನನ್ನು ಓದುತ್ತಾಳೆ. ಫಾರಸಿಕ ಜಗದ್ವಿಖ್ಯಾತ್ ಕವಿ ಉಮರ್ ಖಯ್ಯಾಮನ ಗೀತಗಳನ್ನು ಪಠಿಸುತ್ತಾಳೆ. ಪರಿಚಯವಿಲ್ಲದವರೊಡನೆ ಮಾತುಕತೆಯೆಂದರೆ ಸುರೈಯಾಳಿಗೆ ತಲೆ ಸಿಡಿತ. ಅಂತೆಯೇ ಅವಳು ಸಾಮಾಜಿಕ ಆಟ ಕೂಟ-ವಿನೋದ ಸತ್ಕಾರಗಳಲ್ಲೂ ಭಾಗವಹಿಸುವದೆಂದರೆ ಹಿಂಜರಿಯುತ್ತಾಳೆ. ಆದರೆ ಗೆಳೆಯ ಗೆಳತಿಯರೊಡನೆ, ಪರಿಚಿತರೊಡನೆ ಬಾಯ್ತುಂಬ ಮಾತನಾಡಬೇಕು ಅವಳಿಗೆ.

ಸುರೈಯಾಳ ದುಂಡಗಾದ ಮುಖ ಗುಂಡುಗುಂಡಾಗಿ ಶೋಭಿಸುತ್ತದೆ. ಅವಳ ದಂತ ಪಂಕ್ತಿಯೋ ಜೋಳದ ಕಾಳುಗಳಂತೆ ಸುಂದರ. ವಿಶಾಲ ಕಣ್ಣು ದೃಷ್ಟಿ ಮನೋಮೋಹಕ. ಗುಂಗುರು ಕೂದಲಿನ ಕರ್ರಗಾದ ಅವಳ ಕೇಶರಾಶಿ ಎಂತು ಬಾಚಿದರೂ ಶೋಭಿಸುವದು. ಯಾವ ಉಡುಪಿನಲ್ಲಿಯೂ ಸುಂದರಿಯಾಗಿಯೇ ಅವಳು ಕಾಣಿಸುತ್ತಾಳೆ. ಮುಖಮೈ ವರ್ಣ ಬೆಳ್ಳಗೆ.

ಚಲಚ್ಚಿತ್ರೋದ್ಯಮವು ಬೆಳೆಯುತ್ತ ಹೋದಂತೆ ಅನೇಕ ತಾರೆಯರು ಬೆಳಗಬಹುದು. ಅದರಂತೆ ಮುಂದವರ ಹೆಸರು ಜನರ ಸ್ಮೃತಿಪಥದಿಂದ ಅಳಿಸಿ ಹೋಗಲೂಬಹುದು. ಆದರೆ ಸುರೈಯಾ ಮಾತ್ರ ಚಲಚ್ಚಿತ್ರ ಪ್ರೇಕ್ಷಕರ ಸ್ಮರಣೆಯಲ್ಲಿ ಸದಾ ಉಳಿಯಬಹುದು ಎಂದು ಹೇಳಬಹುದಾಗಿದೆ.

—ಕೆ. ಜಿ. ಹೆಗ್ಗಡೆ

ಬಂಗಾರದ ಭವಿಷ್ಯ

ಲೇಖಕರು: ಶ್ರೀ ಧೀರೇಂದ್ರ ಕೃಷ್ಣ ಗುಂಜೀಕರ, ಬಿ. ಕಾಮ್

ಪ್ರಪಂಚದಲ್ಲಿನ ಸಕಲ ಚಟುವಟಿಕೆಗಳಿಗೂ ಬಂಗಾರವೇ ಮೂಲವಾಗಿದೆ. ಅದರ ಉತ್ಪಾದನೆ, ಬೆಲೆಗಳಲ್ಲಿಯ ಏರಿಳಿತ ಮೊದಲಾದ ಸಂಗತಿಗಳಲ್ಲಿ ಎಲ್ಲರಿಗೂ ಆಸ್ಥೆ ಇರುವದು ಸ್ವಾಭಾವಿಕ. ಈ ಎಲ್ಲ ಸಂಗತಿಗಳನ್ನು ಈ ಲೇಖದಲ್ಲಿ ರಸವತ್ತಾಗಿ ನಿವೇದಿಸಲಾಗಿದೆ.

ಪ್ರಪಂಚದಲ್ಲಿನ ಸಕಲ ಚಟುವಟಿಕೆಗಳಿಗೂ ಶ್ರಮವೇ ಮೂಲ ಆಧಾರ. ತನ್ನ ಅನುಕೂಲತೆಗಳಿಗಾಗಿ ಮಾನವನು ಇಂಥ ಶ್ರಮದ ಮೂಲಕ, ರಕ್ಷಣ ಮೊದಲಾದ ಯೋಜನೆಗಳನ್ನು ಮಾಡಿಕೊಂಡಿರುವನು. ಈ ಯೋಜನೆಗಳಿಗೆ ಚಿನ್ನ ಬೆಳ್ಳಿಗಳೇ ಮೂಲ. ಎಲ್ಲ ನಾಣ್ಯಕ್ಕೂ ಆಧಾರ, ನಾಣ್ಯವಸ್ತುಗಳಾದ ಚಿನ್ನ ಬೆಳ್ಳಿಗಳು. ಇತ್ತೀಚೆಗೆ ಜಗತ್ತಿನಲ್ಲಿ ಬೆಳ್ಳಿಯನ್ನು ನಾಣ್ಯವಸ್ತುವೆಂದು ಉಪಯೋಗ ಮಾಡುವದು ಮಾಯವಾಗತೊಡಗಿದೆ ಎಂದು ಹೇಳಬಹುದು. ಆದರೆ ಚಿನ್ನ ಮಾತ್ರ ತನ್ನ ಮಹತ್ವವನ್ನು ಕಳೆದುಕೊಳ್ಳದೆ ಇಂದಿಗೂ ನಾಣ್ಯವಸ್ತುವೆಂದೂ ಪ್ರಪಂಚದ ಎಲ್ಲ ಆಗು-ಹೋಗುಗಳ ಪ್ರೇರಕವೆಂದೂ ಮೆರೆಯುತ್ತಿದೆ. ನಾಣ್ಯ ಚಲನಕ್ಕೆ ನಾಣ್ಯವಸ್ತುವಾದ ಚಿನ್ನದ ಮಹತ್ವವು ಅವಾಸ್ತವವಾಗಿ ಬೆಳೆದಿದೆ ಎಂದೂ ಅದನ್ನು ತಪ್ಪಿಸಬೇಕೆಂದೂ ಜಗತ್ತಿನ ಬೇರೆಬೇರೆ ರಾಷ್ಟ್ರಗಳಲ್ಲಿ ಬೇರೆಬೇರೆ ಕಾಲಕ್ಕೆ ನಾಣ್ಯ ಶಾಸ್ತ್ರಜ್ಞರು ಅನೇಕ ಬಗೆಯ ಉಪಕ್ರಮಗಳನ್ನು ಕೈಕೊಂಡು ಪ್ರಯೋಗಗಳನ್ನು ಮಾಡಿ ನೋಡಿದರು. ನಾಣ್ಯ ವಸ್ತುವಿನ ಆಧಾರವಿಲ್ಲದೆ ನಾಣ್ಯವನ್ನು ಚಲನದಲ್ಲಿಡುವದು ಅವರಿಗೆ ಸಾಧ್ಯವಾಗಿಲ್ಲವೆಂದೇ ಹೇಳಬಹುದು. ಆದರೆ ಆ ಕಥೆಯೆ ಬೇರೆ. ಇಂದು ಜಗತ್ತಿನಲ್ಲಿ ಎಲ್ಲ ನಾಣ್ಯಗಳಿಗೆ ಚಿನ್ನವೇ ಮೂಲ ವಸ್ತುವಾಗಿದೆ ಎಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಹೀಗೆ ಜಗದೇಕ ವಸ್ತುವಾದ ಈ ಚಿನ್ನದ ವಿಷಯವಾಗಿ ವಿವೇಚಿಸುವದು ಮನೋರಂಜಕವೂ ಉದ್ಬೋಧಕವೂ ಆಗುವದು.

ನಾಣ್ಯವಸ್ತುವಾದ ಚಿನ್ನದ ಬೆಲೆಯನ್ನು ನಾಣ್ಯ ರೂಪದಲ್ಲಿಯೇ ನಿರ್ಧರಿಸುವರು ಮತ್ತು ಇಂಥ ನಿರ್ಧಾರವನ್ನು ಮೇಲಿಂದಮೇಲೆ ಬದಲು ಮಾಡಬಾರದೆಂದು ನಾಣ್ಯ ಶಾಸ್ತ್ರದ ಸಾಂಪ್ರದಾಯಿಕ ಸಿದ್ಧಾಂತಗಳಲ್ಲೊಂದು. ಕಾಲಮಾನ ಪರಿಸ್ಥಿತಿಗನುಸರಿಸಿ ಎಲ್ಲವೂ ಬದಲಾಗುತ್ತ ನಡೆದಂತೆ ನಾಣ್ಯಶಾಸ್ತ್ರ ಸಿದ್ಧಾಂತದಲ್ಲಿಯೂ ಅನೇಕ ಬದಲಾವಣೆಗಳಾದವು. ಯಾವ ಶಾಸ್ತ್ರವಾದರೂ ಮಾನವನ ಸುಖಕ್ಕಾಗಿ. ಅಂದ ಮೇಲೆ ನಾಣ್ಯ ಶಾಸ್ತ್ರವೂ ಮಾನವನ ಸುಖಕ್ಕಾಗಿ ಎಂದು ಬೇರೆ ಹೇಳಬೇಕಾಗಿಲ್ಲ. ಯುದ್ಧ, ಯುದ್ಧೋತ್ತರದ ವಿಷಮ ಪರಿಸ್ಥಿತಿ, ನೈಸರ್ಗಿಕ ಅನಾಹುತಗಳು, ಆರ್ಥಿಕ ಮುಗ್ಗಟ್ಟು ಮೊದಲಾದ ವಿಷಮಕಾಲದಲ್ಲಿ ನಾಣ್ಯವಸ್ತುವಿನ ನಿರ್ಧಾರದ ಬೆಲೆಯನ್ನು ಬದಲಿಸುವ ಪ್ರಸಂಗವು ಅನೇಕ ರಾಷ್ಟ್ರಗಳನ್ನು ಎದುರಿಸಿವೆ. ಸನ್ನಿಹಿತವಾದ ಪ್ರಸಂಗವನ್ನು ಎದುರಿಸಿ ದಾಟ ಪಾರಾಗಲು ಅದೊಂದು ಯುಕ್ತಿಯೆಂದು ಉಪಯೋಗಿಸಲಾಗುತ್ತಿದೆ. ಕಳೆದ ಮಹಾಯುದ್ಧದ ಕಾಲದಿಂದ ಅಮೇರಿಕೆಯೊಂದನ್ನು ಬಿಟ್ಟರೆ ಉಳಿದೆಲ್ಲ ದೊಡ್ಡ ರಾಷ್ಟ್ರಗಳಿಗೆ ತಮ್ಮ ದೇಶದಲ್ಲಿ ಚಲನದಲ್ಲಿದ್ದ ನಾಣ್ಯಗಳ ಆಧಾರವಸ್ತುವಾದ ಚಿನ್ನದ ಬೆಲೆಯನ್ನು ಏರಿಸಬೇಕಾದ ಪ್ರಸಂಗವೂ ಬಂದಿದೆ. ಅಮೇರಿಕೆಯೊಂದೇ ಈ ಮಾದರಿಯಾಗಿ ಚಿನ್ನದ ಬೆಲೆಯನ್ನು ಏರಿಸಲು ಒಪ್ಪಿಲ್ಲ. ಇದೆಲ್ಲಕ್ಕೆ ಕಾರಣವೇನು ಎಂದು ನಾವು ವಿಚಾರಿಸತೊಡಗಿದರೆ ಬಲು ಮಹತ್ವದ ಪ್ರಶ್ನೆಗಳನ್ನು ಎದುರಿಸಬೇಕಾಗುವದು.

ಯುದ್ಧಕಾಲದಲ್ಲಿ ಪ್ರಪಂಚವೇ ಎರಡು ಭಾಗವಾಗಿ ವಿಭಾಗಿಸಲ್ಪಟ್ಟಿತು. ಎಲ್ಲ ದೊಡ್ಡ ರಾಷ್ಟ್ರಗಳು ಒಂದಿಲ್ಲೊಂದು ಬಣದಲ್ಲಿ ಸೇರಿಕೊಂಡವು. ಯಾವದೂ ಬಣಕ್ಕೆ ಸೇರದ ರಾಷ್ಟ್ರಗಳು ಅತಿ ವಿರಳವಾಗಿದ್ದವು. ಆ ವಿಶ್ವಮೇಧಕ್ಕೆ ಅಪರಿಮಿತ ಸಂಪತ್ತು ಆಹುತಿಯಾಯಿತು. ಲಭ್ಯವಿದ್ದ ವಸ್ತುಸಂಗ್ರಹ ಸಾಲದಾಯಿತು. ವಸ್ತುಗಳ ಉತ್ಪಾದನೆ ಹೆಚ್ಚಿಸುವದು ಅತ್ಯಗತ್ಯವಾಯಿತು. ಉತ್ಪಾದನೆ ಹೆಚ್ಚಿಸಲು ಬೇಕಾಗುವ ಮೂಲ ವಸ್ತುಗಳ ಸಂಗ್ರಹ ಮಾತ್ರ ಪ್ರಮಾಣದಲ್ಲಿ ಬೆಳೆಯಲಿಲ್ಲ ಹೀಗಾಗಿ ಇದ್ದ ಸಂಗ್ರಹದ ಮೇಲೆ ತೂಕ ತಪ್ಪಿ ಅಪರಿಮಿತವಾಗಿ ಬೆಳೆದ ಯುದ್ಧಾವಶ್ಯಕ ಉದ್ಯಮಗಳ ಬೇಡಿಕೆ ಬೆಳೆದು ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿದವು. ಚಿನ್ನವು ಒಂದು ವಸ್ತುವೆಂದು ಮೇಲೆ ಹೇಳಲಾಗಿದೆ. ಸರಕುಗಳ ಬೆಲೆ ಬೆಳೆದಂತೆ ನಾಣ್ಯದ ಸಂಗ್ರಹ ಮತ್ತು ಅದರ ಪ್ರವಾಹದ ಗತಿ ಬೆಳೆದು ಚಿನ್ನಕ್ಕೂ ಬೇಡಿಕೆ ಬೆಳೆಯಿತು. ಹೀಗಾಗಿ ಅದರ ಬೆಲೆಯೂ ಬೆಳೆಯಿತು. ಇದರಿಂದ ದೇಶಕ್ಕೆ ಹಿತವಾಗುವದಿಲ್ಲೆಂಬದು ಗೊತ್ತಿದ್ದರೂ ಅದನ್ನು ಸರಿಪಡಿಸಿಕೊಂಡು ಹೋಗುವಷ್ಟು ಸಮಾಧಾನ ಯುದ್ಧಕಾಲದಲ್ಲಿ ಬರಲಿಲ್ಲ. ಸಮಯವೂ ಇರಲಿಲ್ಲ. ಇಂಥ ಸಮಸ್ಯೆಗೆ ಅತಿ ಪ್ರಸರಣ ಎಂದು ಅರ್ಥಶಾಸ್ತ್ರದ ಪರಿಭಾಷೆ. ಯುದ್ಧ ಮುಗಿದಮೇಲೆ ಈ ಸಮಸ್ಯೆಯನ್ನೆದುರಿಸಿ ಅಂತಾರಾಷ್ಟ್ರೀಯ ವಿಷಮತೆಯನ್ನು ಸುಗಮಗೊಳಿಸಿ, ನಾಶಹೊಂದಿದ ಉತ್ಪಾದನ ಶಕ್ತಿಯನ್ನು ಪುನಾರಚಿಸಿಕೊಂಡು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಉತ್ತೇಜನಕೊಟ್ಟು, ಅತಿಪ್ರಸರಣವನ್ನು ತಡೆಗಟ್ಟುವ ಪ್ರಯತ್ನಗಳು ಸಾಮೂಹಿಕವಾಗಿ ಸಾಗಿದವು. ಈ ಎಲ್ಲ ಚಟುವಟಿಕೆಗಳು ಯುಕ್ತ ರಾಷ್ಟ್ರಸಂಘದ ಆರ್ಥಿಕ ವಿಭಾಗದ ನೆರವಿನಲ್ಲಿ ಸಾಗಿದವು. ಇದೆಲ್ಲವೂ ಕಳೆದ ಯುದ್ಧದಲ್ಲಿಯ ಒಂದುಬಣಕ್ಕೆ ಸಂಬಂಧಿಸಿದ ರಾಷ್ಟ್ರಗಳಲ್ಲಿ ಮಾತ್ರ ನಡೆಯಿತೆಂಬದನ್ನು ನಾವು ಮರೆಯುವಂತಿಲ್ಲ.

ಅಂತಾರಾಷ್ಟ್ರೀಯ ಹಣಕಾಸಿನ ನಿಧಿಮಂಡಲವೊಂದನ್ನು ಸ್ಥಾಪಿಸಿಕೊಂಡು, ಅದರ ಮುಖಾಂತರ ಬಂಗಾರದ ಬೆಲೆ, ವ್ಯವಹಾರ ಮೊದಲಾದ ಚಟುವಟಿಕೆಗಳನ್ನು ನಿಯಂತ್ರಿಸುವ ಏರ್ಪಾಡು ಮಾಡಿಕೊಳ್ಳಲಾಗಿತ್ತು. ಜಗತ್ತಿನಲ್ಲಿ ಹೊಸದಾಗಿ ಉತ್ಪಾದನೆಯಾಗುವ ಬಂಗಾರವನ್ನೆಲ್ಲವನ್ನೂ ಆಯಾ ದೇಶಗಳು ಈ ನಿಧಿಗೆ ನಿರ್ಧಾರದ ಬೆಲೆಯಲ್ಲಿ ಮಾರಬೇಕೆಂಬ ನಿರ್ಬಂಧನೆ ಹಾಕಿದರು. ಇಂಥ ಬೆಲೆ ಔಂಸಿಗೆ ೩೫ ಡಾಲರ ಎಂದು ನಿರ್ಧರಿಸಲಾಗಿದ್ದಿತು. ಈ ನಿರ್ಧಾರ ಅಮೇರಿಕಾ ಸರ್ಕಾರದವರದು. ಇದನ್ನು ೧೯೩೪ರಲ್ಲಿ ಅಮಲಿನಲ್ಲಿ ತರಲಾಗಿತ್ತು. ಮತ್ತು ಯುದ್ಧಾನಂತರದ ಕಾಲದಲ್ಲಿ ಅದು ಸುಸಂಪನ್ನ ದೇಶವಾಗಿ ಉಳಿಯಿತು. ಉಳಿದೆಲ್ಲ ರಾಷ್ಟ್ರಗಳ ಉತ್ಪಾದನ ಶಕ್ತಿ ನಾಶವಾಯಿತು. ಹೀಗಾಗಿ ಅವೆಲ್ಲವೂ ಅಮೇರಿಕೆಯ ಸಹಾಯವನ್ನು ಅಪೇಕ್ಷಿಸಬೇಕಾಗಿ ಬಂದಿತು. ಅಮೇರಿಕೇತರ ರಾಷ್ಟ್ರಗಳಲ್ಲಿಯೇ ಬಂಗಾರದ ಉತ್ಪಾದನೆ ಹೆಚ್ಚಿಗಿದೆ. ಅವು ತಮ್ಮ ಉತ್ಪಾದಿತ ಬಂಗಾರಕ್ಕೆ ಹೆಚ್ಚಿನ ಬೆಲೆ ಬರಬೇಕೆಂದು ಅಪೇಕ್ಷಿಸುವದು ಸ್ವಾಭಾವಿಕವಿತ್ತು. ಅಮೇರಿಕೆ ಇದಕ್ಕೆ ಸಿದ್ಧವಿರಲಿಲ್ಲ. ಪೇಟೆಗಳಲ್ಲಿ ಮಾತ್ರ ಚಿನ್ನಕ್ಕೆ ಅಮೇರಿಕೆಯ ಬೆಲೆಗಿಂತ ಹೆಚ್ಚಿನ ಬೆಲೆ ದೊರಕುತ್ತಿತ್ತು. ಆದುದರಿಂದ ಬಂಗಾರದ ದೊಡ್ಡ ಕಳ್ಳಪೇಟೆಯೇ ನಿರ್ಮಾಣವಾಯಿತು. ಹೊಸ ಉತ್ಪಾದನೆಯ ಬಂಗಾರವು ಕಳ್ಳಪೇಟೆಗೆ ಬರತೊಡಗಿತು. ಇಲ್ಲಿ ಅಂತಾರಾಷ್ಟ್ರೀಯ ನಿರ್ಧಾರದ ಬೆಲೆಗಿಂತ ರೂಪಾಯಿಗೆ ಎಂಟಾಣೆ ಹೆಚ್ಚಿಗೆ ಸಿಗುತ್ತಿತ್ತು. ಪರಿಸ್ಥಿತಿಯ ಒತ್ತಡದ ಮೂಲಕ ಅಂತಾರಾಷ್ಟ್ರೀಯ ನಿಧಿಮಂಡಲದವರೂ ತಮ್ಮ ಬಂಗಾರದ ಮಾರಾಟದ ವಿಷಯಕ ನಿರ್ಬಂಧನೆಗಳನ್ನು ಶಿಥಿಲಗೊಳಿಸಬೇಕಾಯಿತು. ಇಂದು ಬಂಗಾರದ ಉತ್ಪಾದಕರು ತಮ್ಮ ಉತ್ಪಾದನೆಯ ಬಂಗಾರವನ್ನು ಬೇಕಾದಲ್ಲಿ ಮಾರುವ ಅನುಕೂಲತೆ ಇದೆ. ಹೀಗಾಗಿ ಎಲ್ಲ ಹೊಸ ಉತ್ಪಾದನೆಯ ಬಂಗಾರವು ಪೇಟೆಗೆ ಬರತೊಡಗಲು ಅದರ ಬೆಲೆ ಇಳಿಮುಖವಾಗತೊಡಗಿತು. ಇದರಿಂದ ಜಗತ್ತಿನಲ್ಲಿ ಒಂದು ದೊಡ್ಡ ಸಮಸ್ಯೆಯೇ ಉದ್ಭೂತವಾಗಿದೆ. ಇನ್ನುಮುಂದೆ ಬಂಗಾರದ ಬೆಲೆಯ ಭವಿಷ್ಯವೇನು? ಎಂಬುದೇ ಆ ಸಮಸ್ಯೆ.

ಈ ಸಮಸ್ಯೆಯ ವಿವೇಚನೆ ಮಾಡುವ ಮೊದಲು ಜಾಗತಿಕ ಬಂಗಾರ ಉತ್ಪನ್ನದ ಮತ್ತು ಸಂಗ್ರಹದ ಕೆಲವೊಂದು ವಿವರಗಳನ್ನು ಕೊಡುವದು ಕಾಲೋಚಿತವಾಗುವದು. ೧೯೫೨ ರಲ್ಲಿಯ ಜಾಗತಿಕ ಬಂಗಾರದ ಉತ್ಪಾದನೆ ೩೫ ಡಾಲರಿಗೆ ೧ ಔಂಸಿನಂತೆ ಲೆಕ್ಕ ಹಿಡಿದರೆ ೮೫ ಕೋಟಿ ಡಾಲರಿನಷ್ಟು ಆಯಿತು. ೧೯೫೧ ರ ಉತ್ಪಾದನೆ ೮೨.೮ ಕೋಟಿ ಡಾಲರಿನಷ್ಟಿತ್ತು. ೧೯೫೦ ರಲ್ಲಿ ಅದು ೮೪.೪ ಕೋಟಿ ಡಾಲರಿನಷ್ಟಾಯಿತು. ೧೯೪೫ ರಲ್ಲಿ ಕೇವಲ ೭೩.೬ ಕೋಟಿ ಡಾಲರಿನಷ್ಟಿತ್ತು. ಹೀಗಾಗಿ ಯುದ್ಧಾನಂತರ ಬಂಗಾರದ ಉತ್ಪಾದನೆ ಬೆಳೆಯುತ್ತ ಹೋಗಿದ್ದರೂ ಯುದ್ಧ ಪೂರ್ವದ ಉತ್ಪಾದನೆಗೆ ಇನ್ನೂ ಮುಟ್ಟಿಲ್ಲ. ಗೋಲ್ಡ-ಕೋಸ್ಟ, ಕೋಲಂಬಿಯಾ ಮತ್ತು ಬ್ರಾಝಿಲ ಹೊರ್ತುಪಡಿಸಿ ಉಳಿದೆಲ್ಲ ಬಂಗಾರದ ಉತ್ಪಾದನೆಯ ದೇಶಗಳಲ್ಲಿ ಉತ್ಪಾದನೆಯು ಬೆಳೆದಿದೆ. ಹೆಚ್ಚಾಗಿ ಬೆಳೆದದ್ದು ದಕ್ಷಿಣ ಆಫ್ರಿಕೆಯಲ್ಲಿ. ಬಂಗಾರದ ಅತಿ ದೊಡ್ಡ ಉತ್ಪಾದಕ ದೇಶವೆಂದರೆ ದಕ್ಷಿಣ ಆಫ್ರಿಕೆಯೆ. ಬಂಗಾರದ ಉತ್ಪಾದನೆಯ ವೆಚ್ಚವು ಇತ್ತೀಚೆಗೆ ವಿಪರೀತವಾಗಿ ಏರಿದೆ. ಇದರಿಂದಾಗಿ ಮಧ್ಯಮ ಮತ್ತು ಕನಿಷ್ಟ ಅದರಿನ ಕಣಿಗಳಲ್ಲಿ ಕಾರ್ಯ ಮಾಡುವದು ಲಾಭದಾಯಕವಾಗದೆ ಉತ್ಪಾದನೆಯು ಎಷ್ಟೋ ತಗ್ಗಿದೆ. ಒಂದು ಡಾಲರಿಗೆ ಇಂದಿನ ವಿನಿಮಯದಂತೆ ಭಾರತೀಯ ನಾಣ್ಯದಲ್ಲಿ ನಾಲ್ಕು ರೂಪಾಯಿ ೧೩ ಆಣೆ ಆಗುವದು. ಇದರ ಮೇಲಿಂದ ಬಂಗಾರದ ಉತ್ಪಾದನೆಯ ಮತು ಸಂಗ್ರಹದ ನಾಣ್ಯರೂಪಿ ವ್ಯಾಪದ-ಮಹತ್ವವು ಎದ್ದು ಕಾಣುವದು. ಜಾಗತಿಕ ನಾಣ್ಯಾಧಿಕಾರಿಗಳ ಕಡೆ ಇದ್ದ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳ ಕಡೆಗಿದ್ದ ಒಟ್ಟು ಬಂಗಾರ ಸಂಗ್ರಹದ ಅಂದಾಜು ೧೯೫೨ ರ ಕೊನೆಗೆ ೩೫೫೦ ಕೋಟಿ ಡಾಲರಿನಷ್ಟಿತ್ತೆಂದು ಹೇಳಲಾಗುತ್ತಿದೆ. ಜಗತ್ತಿನಲ್ಲಿಯ ಇತ್ತೀಚಿನ ವಾರ್ಷಿಕ ಬಂಗಾರದ ಉತ್ಪಾದನೆಯ ಸಂಗ್ರಹವನ್ನು ಜಗತ್ತಿನ ನಾಣ್ಯಾಧಿಕಾರಿಗಳ ಕಡೆಗಿದ್ದ ಒಟ್ಟು ಬಂಗಾರದ ಸಂಗ್ರಹದ ಜೊತೆಗೆ ಹೋಲಿಸಿ ನೋಡಿದರೆ ಜಾಗತಿಕ ಉತ್ಪಾದನೆಯ ಬಹು ದೊಡ್ಡ ಭಾಗವು ವೈಯಕ್ತಿಕ ನಾಣ್ಯೇತರ ಸಂಘವನ್ನು ಸೇರುತ್ತಲಿದೆ ಎಂಬ ಸಂಗತಿಯು ಎದ್ದು ಕಾಣುವದು. ಈ ಪರಿಸ್ಥಿತಿ ಇನ್ನೂ ಕೆಲವು ದಿನ ಹೀಗೆಯೇ ಮುಂದೆ ಸಾಗುವ ಲಕ್ಷಣಗಳೂ ಸಾಕಷ್ಟಿವೆ. ಇಲ್ಲಿಯವರೆಗೆ ಮತ್ತು ಇನ್ನು ಮುಂದೆ ಕೇಳಿದ ಮತ್ತು ಕೇಳಬಹುದಾದ ಅಂಕಿ ಸಂಖ್ಯೆಗಳೆಲ್ಲವು ರಶಿಯಾ ಮತ್ತು ಅದರ ವರ್ಚಸ್ಸಿನೊಳಗಿದ್ದ ಉಳಿದೆಲ್ಲ ರಾಷ್ಟ್ರಗಳನ್ನು ಹೊರ್ತು ಪಡಿಸಿ ಹೇಳಲಾಗಿದೆ. ಜಗತ್ತಿನಲ್ಲಿ ಇಂದು ಜಾಗತಿಕ ನಾಣ್ಯಾಧಿಕಾರಿಗಳ ಬಂಗಾರದ ಬೆಲೆ ೧ ಔಂಸಿಗೆ ೩೫ ಡಾಲರ ಇದೆ. ಇದು ಅಮೇರಿಕೆಯ ನಾಣ್ಯ ಅಧಿಕಾರಿಗಳು ತಮ್ಮ ಸಂಗ್ರಹಕ್ಕೆಂದು ಕೊಳ್ಳುವ ಬೆಲೆ. ಈ ಬೆಲೆಯನ್ನು ಅಮೇರಿಕಾ ಸರಕಾರವು ೧೯೩೫ ರಲ್ಲಿ ಗೊತ್ತು ಮಾಡಿತು. ಅಂದಿನಿಂದ ಇಂದಿನವರೆಗೆ ಈ ಬೆಲೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಈ ಸಂಗತಿಯನ್ನು ನಾವು ಗಮನಿಸಿದರೆ ಜಗತ್ತಿನ ಬಂಗಾರದ ಉತ್ಪಾದಕ ದೇಶಗಳಲ್ಲಿ ಅದರ ಬೆಲೆಯ ವಿಷಯವಾಗಿದ್ದ ಬೊಬ್ಬೆಯ ಮರ್ಮವು ಥಟ್ಟನೆ ಅರ್ಥವಾಗುವದು. ಬಂಗಾರಕ್ಕೆ ಜಗತ್ತಿನಲ್ಲಿ ಸರಕಾರೀ ಪೇಟೆಗಳಲ್ಲದೆ ಮುಕ್ತ ಪೇಟೆಯೂ ಇದೆಯೆಂದು ಈ ಮೊದಲೆ ಹೇಳಿರುವೆವು. ಈ ಪೇಟೆಗಳಲ್ಲಿಯ ಬಂಗಾರದ ಬೆಲೆ ಅರ್ಥಿಕ ಶಾಸ್ತ್ರಕ್ಕನುಸರಿಸಿ ಆ ಆ ಪೇಟೆಗಳ ಬೇಡಿಕೆ ಮತ್ತು ಪೂರೈಕೆಯನ್ನವಲಂಬಿಸಿದೆ. ಯಲ್ಲದೆ ಬೇರೆ ಬೇರೆ ದೇಶಗಳ ನಾಣ್ಯ ಧೋರಣೆಯ ಕಾನೂನಿಗೂ ಸಂಬಂಧಿಸಿದೆ. ಇಂಥ ಮುಕ್ತಪೇಟೆಯ ಬಂಗಾರದ ಬೆಲೆ ಯುದ್ಧಾನಂತರದಲ್ಲಿ ೧ ಔಂಸಿಗೆ ೫೨ ಡಾಲರಿನ ವರೆಗೂ ಮುಟ್ಟಿತ್ತು. ಅದು ಈಗ ಕ್ರಮೇಣ ಇಳಿಯುತ್ತ ೩೬ ಡಾಲರಿನ ವರೆಗೆ ನಿಂತಿದೆ. ಬಂಗಾರದ ಮುಖ್ಯ ಮುಕ್ತಪೇಟೆಗಳಾದ ಬೇರೂಟ, ಮುಂಬಯಿ, ಹಾಂಗಕಾಂಗ, ಮಕಾಓ, ಮತ್ತು ಪ್ಯಾರಿಸ ಮೊದಲಾದ ಕಡೆಗೆ ಬಂಗಾರದ ಬೆಲೆ ಕ್ರಮೇಣ ಇಳಿಯುತ್ತ ಸಾಗಿದೆ. ಮುಂಬಯಿ ಪೇಟೆಯಲ್ಲಿ ಸಹ ಬಂಗಾರದ ಬೆಲೆ ೧ ತೊಲಿಗೆ ೧೨೦ ರೂ. ವರೆಗೆ ಹೋದದ್ದು ಇಳಿಯುತ್ತ ಈಗ ೮೦ ರೂ. ಯಲ್ಲಿದೆ. ೧೯೫೨ನೇ ಇಸ್ವಿ ಮೇ ೫ ನೇ ತಾ. ಗೆ ಅದು ೭೨ ರೂ. ೧೨ ಆಣೆ ಕಂಡಿತ್ತು. ಇದರ ಡಾಲರ ಬೆಲೆ ೧ ಔಂಸಿಗೆ ೪೦.೭೪ ದಷ್ಟಾಗುವದು. ೧೯೫೦ ಮತ್ತು ೧೯೫೧ ರ ಕಿಂತ ೧೯೫೨ ರ ಬೆಲೆಯಲ್ಲಿ ಮುಂಬಯಿ ಬಂಗಾರದ ಪೇಟಿಯಲ್ಲಿ ೧೦-೧೫ ಡಾಲರಿನ ವರೆಗೆ ಇಳಿತಾಯವಾಗಿದೆ.

ಪ್ರತಿ ವರ್ಷದ ಹೊಸ ಬಂಗಾರದ ಉತ್ಪಾದನೆಯನ್ನು ಜಾಗತಿಕ ನಾಣ್ಯಾಧಿಕಾರಿಗಳಿಗೆ ಸರಕಾರಿ ಬೆಲೆಯಲ್ಲಿ ಮಾರಬೇಕೆಂಬ ನಿರ್ಬಂಧ ಇರುವವರೆಗೆ ಜಾಗತಿಕ ಪೇಟೆಗಳಲ್ಲಿ ಬಂಗಾರದ ಸಂಗ್ರಹವು ವಿಪರೀತವಾಗಿ ಕಡಿಮೆ ಆಗಿ ಮುಕ್ತಪೇಟೆಗಳಲ್ಲಿಯ ಬಂಗಾರದ ಬೆಲೆ ಅವಾಸ್ತವವಾಗಿ ಬೆಳೆಯಿತು. ಇದನ್ನು ನೋಡಿ ಬಂಗಾರದ ಉತ್ಪಾದಕರ ಬಾಯಿಗೆ ನೀರು ಬಿಟ್ಟಿತು. ಅವರು ಬಂಗಾರದ ಉತ್ಪಾದನೆ ವೆಚ್ಚವು ಬೆಳೆದ ಕಾರಣ ಸರಕಾರೀ ಬೆಲೆಯಲ್ಲಿ ತಮಗೆ ಮಾರುವದು ಸಾಧ್ಯವಿಲ್ಲವೆಂದೂ ಮುಕ್ತಪೇಟೆಗಳಲ್ಲಿ ಮಾರಲು ತಮಗೆ ಅವಕಾಶ ಸಿಗಬೇಕೆಂದೂ ಅಂದೋಲನವನ್ನು ಹೂಡಿದರು. ಮತ್ತು ಹಾಗೆ ಅವಕಾಶ ಕೊಡದಿದ್ದರೆ ಅಂತಾರಾಷ್ಟ್ರೀಯ ನಾಣ್ಯಸಂಸ್ಥೆಯಿಂದ ತಾವು ಸಿಡಿದು ಹೊರಬೀಳುವ ಬೆದರಿಕೆ ಹಾಕಿದರು. ಇದರ ಪರಿಣಾಮವಾಗಿ ಅವರ ಬೇಡಿಕೆಯಂತೆ ಅವರಿಗೆ ಇಂದು ತಮ್ಮೆಲ್ಲ ಸಂಗ್ರಹವನ್ನು ಮುಕ್ತಪೇಟೆಗಳಲ್ಲಿ ಮಾರಲು ಅವಕಾಶ ಸಿಕ್ಕಿದೆ. ಉತ್ಪಾದಕರಿಗೆ ಇದರಿಂದ ಲಾಭ ಮಾತ್ರ ಆಗಿಲ್ಲವೆಂದೇ ಹೇಳಬಹುದು. ಹೀಗೆ ಜಾಗತಿಕ ಬಂಗಾರದ ಉತ್ಪಾದನೆಯ ಎಲ್ಲ ಸಂಗ್ರಹವು ಮುಕ್ತಪೇಟೆಗಳಿಗೆ ಮಾರಲಿಕ್ಕೆ ಬರಲು ಬಂಗಾರದ ಸಂಗ್ರಹ ಒಮ್ಮೆಲೆ ಬೆಳೆದು ಕೊಳ್ಳುವವರು ಕಡಿಮೆಯಾಗಿ ಬೆಲೆ ಬಿತ್ತು. ಆದರೆ ಹೀಗೆ ಮುಕ್ತಪೇಟೆಗಳಲ್ಲಿ ಬಂಗಾರದ ಬೆಲೆ ಇಳಿಯಲು ಬೆಳೆದ ಸಂಗ್ರಹವೊಂದೇ ಕಾರಣವಲ್ಲವೆಂದು ಹೇಳಬಹುದು. ಅದಕ್ಕೆ ಬೇರೆ ಅನೇಕ ಕಾರಣಗಳೂ ಇವೆ. ಅವುಗಳಲ್ಲಿ ಮೂರು ಮುಖ್ಯವಾದವುಗಳೆಂದರೆ- (೧) ಜಾಗತಿಕ ರಾಜಕೀಯ ಪರಿಸ್ಥಿತಿಯ ಸುಧಾರಣೆ. (೨) ಅಮೇ-

ರಿಕೆ ಬಂಗಾರದ ಬೆಲೆ ಏರಿಸುವದಿಲ್ಲೆಂಬ ಅಭಿಪ್ರಾಯ. (೩) ಯುರೋಪಿನ ರಾಷ್ಟ್ರಗಳು ಇನ್ನು ಮುಂದೆ ತಮ್ಮ ನಾಣ್ಯಗಳ ಮೌಲ್ಯವಿಚ್ಛೇದನ ಮಾಡಲಿಕ್ಕಿಲ್ಲೆಂಬಧೋರಣೆ.

ಇವೆಲ್ಲ ಕಾರಣಗಳಲ್ಲದೆ ಬಂಗಾರದ ಬೆಲೆಯಲ್ಲಿ ಬದಲಾವಣೆಯನ್ನು ಮಾಡಬಹುದಾದ ಇನ್ನೂ ಒಂದು ಮುಖ್ಯ ಕಾರಣವಿದೆ. ಅದು ರಶಿಯಾ ಮತ್ತು ಅದರ ವರ್ಚಸ್ಸಿನೊಳಗಿದ್ದ ರಾಷ್ಟ್ರಗಳಲ್ಲಿಯ ಬಂಗಾರದ ಉತ್ಪಾದನೆಯ ಸಂಗ್ರಹ ಮತ್ತು ಅದರ ಮಾರಾಟದ ಧೋರಣೆ. ರಶಿಯಾ ದೇಶವು ತನ್ನ ಸಂಗ್ರಹವನ್ನು ಮುಕ್ತಪೇಟೆಗಳಲ್ಲಿ ಮಾರಬಹುದೇ' ಎಂಬ ಪ್ರಶ್ನಾರ್ಥಕ ಚಿಹ್ನವು ಜಾಗತಿಕ ಸರಕಾರಗಳಿಗೆ ಮತ್ತು ಚಿನಿವಾಲರಿಗೆ ತಲೆನೋವನ್ನುಂಟುಮಾಡಿದೆ.

ಹಿಂದೆ ರಶಿಯಾದ ೧೯೩೬ರ ರಲ್ಲಿಯು ಬಂಗಾರದ ಉತ್ಪಾದನೆ ೬೩ ಲಕ್ಷ ೫೦,೦೦೦ ಔಂಸಿನಷ್ಟಿದೆ ಎಂದು ಪ್ರಸಿದ್ಧವಾದಕೂಡಲೆ ಜಾಗತಿಕ ಬಂಗಾರದ ಪೇಟೆಯಲ್ಲಿ ಕೋಲಾಹಲವೇ ಎದ್ದು ಬೆಲೆ ಒಮ್ಮೆಲೇ ಬಿದ್ದಿತು. ರಶಿಯಾದ ಬಂಗಾರದ ಉತ್ಪಾದನೆಯ ವಿವರಗಳು ಅಧಿಕೃತವಾಗಿ ತಿಳಿಯುವಂತಿಲ್ಲವಾದರೂ ಯುದ್ಧಕಾಲದಲ್ಲಿ ತಗ್ಗಿದ ಬಂಗಾರದ ಉತ್ಪಾದನೆ ಯುದ್ಧಪೂರ್ವದ ಉತ್ಪಾದನೆಗೆ ಮುಟ್ಟಿರಲಿಲ್ಲವಾದರೂ ಅದು ಇಂದು ಬಂಗಾರದ ಉತ್ಪಾದನೆಯಲ್ಲಿ ಎರಡನೇ ಅತಿ ದೊಡ್ಡ ರಾಷ್ಟ್ರವಾಗಿದೆಯೆಂದು ಹೇಳಲು ಸಾಕಷ್ಟು ಆಧಾರಗಳಿವೆ. ಅಂದ ಮೇಲೆ ಇಲ್ಲಿಯವರೆಗೆ ರಶಿಯಾ ದೇಶವು ತನ್ನ ಬಂಗಾರದ ಸಂಗ್ರಹವನ್ನು ಯಾಕೆ ಮುಕ್ತಪೇಟೆಗಳಲ್ಲಿ ಮಾರಲು ಮುಂದೆ ಬಂದಿಲ್ಲ ಎಂಬದು ಒಡೆಯಲಾಗದ ಒಗಟವಾಗಿದೆ. ಹಾಗೆ ಮಾರಿ ಮುಕ್ತ ಪೇಟೆಗಳಲ್ಲಿಯ ಹೆಚ್ಚಿನ ಬೆಲೆಯ ಲಾಭವನ್ನು ಮಾಡಿಕೊಂಡು ಪರದೇಶಗಳಿಂದ ತನ್ನ ಆಯಾತಕ್ಕೆ ಕೊಡಬೇಕಾದ ಪರನಾಣ್ಯ ಸಂಗ್ರಹವನ್ನು ಮಾಡಿಕೊಳ್ಳಬಹುದಿತ್ತು. ಹೀಗೂ ಮಾಡದೆ ಅದು ಕಟ್ಟಿಗೆ ಮತ್ತು ಆಹಾರ ಧಾನ್ಯಗಳನ್ನು ಮಾರಿ ತನ್ನ ಪರನಾಣ್ಯ ಸಮಸ್ಯೆಯನ್ನು ನಿವಾರಣೆ ಮಾಡಿಕೊಂಡಿದೆ. ಇದಕ್ಕೊಂದೇ ಉತ್ತರವಿದೆ. ರಶಿಯಾ ದೇಶವು ಇಂದು ಜಗತ್ತಿನ ಉಳಿದೆಲ್ಲ ರಾಷ್ಟ್ರಗಳಿಂದ ದಿಗ್ಬಂಧಿಸಲ್ಪಟ್ಟಿದೆ. ಕಾರಣ ಅದು ತನ್ನ ಸಂರಕ್ಷಣೋಪಾಯಗಳಲ್ಲಿ ತೊಡಗಿದೆ. ಇದರ ಒಂದು ಮುಖ್ಯ ಅಂಗವೆಂದು ಅದು ತನ್ನೆಲ್ಲ ಬಂಗಾರದ ಉತ್ಪಾದನೆಯನ್ನು ಸಂಗ್ರಹಿಸತೊಡಗಿದೆ. ಇದು ಇಲ್ಲಿಯ ವರೆಗಿನ ಅದರ ಧೋರಣೆ. ಅದರ ಈ ಧೋರಣೆಯಲ್ಲಿ ಇನ್ನುಮುಂದೆ ಬದಲಾವಣೆಯಾಗಲಿಕ್ಕಿಲ್ಲವೆಂದು ಹೇಳಲು ಬರುವದಿಲ್ಲ. ಇಲ್ಲಿಯ ವರೆಗಿದ್ದ ತನ್ನ ಬೆಳ್ಳಿಯ ಧೋರಣವನ್ನು ಅದು ಬದಲಾಯಿಸಿ ಒಮ್ಮೆಲೇ ಬೆಳ್ಳಿಯನ್ನು ಮಾರಿತು. ಅದಕ್ಕೆ ಇಂದು ತನ್ನ ರಾಜ್ಯದಲ್ಲಿ ಗ್ರಾಹಕರ ವಸ್ತುಗಳ ಸಂಗ್ರಹವನ್ನು ಬೆಳೆಸಬೇಕೆಂಬ ಆತುರವಿದೆ. ರಶಿಯಾದ ಹೊಸ ಸರಕಾರದ ರಾಜಕೀಯ ಧೋರಣೆಯಲ್ಲಿಯೂ ಬದಲಾವಣೆಯಾಗಿದೆಯೆಂಬ ಸಂಗತಿಯನ್ನು ಜಾಗತಿಕ ರಾಜಕಾರಣಿಗಳು ಚರ್ಚಿಸುತ್ತಲಿರುವರು. ಇವೆಲ್ಲ ಕಾರಣಗಳ ಪರಿಣಾಮವಾಗಿ

ರಶಿಯಾ ದೇಶವು ಇಂದು ತನ್ನ ಬಂಗಾರದ ಸಂಗ್ರಹವನ್ನು ಒಮ್ಮೆಲೆ ಮುಕ್ತಪೇಟೆಗಳಲ್ಲಿ ಮಾರಲು ತೆಗೆದರೆ ಅಚ್ಚರಿ ಪಡುವ ಕಾರಣವಿಲ್ಲ. ಯಾಕಂದರೆ ಅದಕ್ಕೆ ಇಂದು ತನ್ನ ದೇಶದಲ್ಲಿ ಗ್ರಾಹಕ ವಸ್ತುಗಳ ಸಂಗ್ರಹವನ್ನು ಒಮ್ಮೆಲೆ ಹೆಚ್ಚಿಸುವದು ಸಾಧ್ಯವಿಲ್ಲ. ಇಂಥ ಸಂಗ್ರಹವನ್ನು ಹೆಚ್ಚಿಸಲು ಅದು ಅವುಗಳ ಆಯಾತ ಮಾಡಿಕೊಳ್ಳಬೇಕು. ಇಂಥ ಆಯಾತದ ಬೆಲೆಯನ್ನು ಅದು ಬಂಗಾರದಲ್ಲಿಯೇ ಕೊಡಬೇಕು. ಅಂದರೆ ಮುಕ್ತಪೇಟೆಗಳಲ್ಲಿ ಭಂಗಾರವನ್ನು ಮಾರಬೇಕು. ಈ ವಿಚಾರಸರಣಿಯಂತೆ ಅದು ಬಂಗಾರವನ್ನು ಮಾರಲು ಪ್ರಾರಂಭಿಸಿದ್ದೇಅದರೆ ಅಮೇರಿಕೆಯು ತನ್ನ ಬಂಗಾರದ ಬೆಲೆಯನ್ನು ಏರಿಸುವದು ಸಾಧ್ಯವಿಲ್ಲವೆಂಬದನ್ನು ಬೇರೆ ಹೇಳಬೇಕಾಗಿಲ್ಲ. ರಶಿಯಕ್ಕೆ ಸಹಾಯವಾಗುವಂಥ ಯಾವುದೇ ಕೃತಿಯನ್ನು ಅಮೇರಿಕೆ ಇಂದು ಕೈಕೊಳ್ಳುವದು ಕಲ್ಪನೆಗೆ ಕೂಡ ಬಾಹಿರವಾಗಿದೆ. ಈ ಎಲ್ಲ ಸಂಗತಿಗಳ ಪೂರ್ವಾಪರ ವಿಚಾರದ ಫಲಿತಾಂಶವೆಂದರೆ ಅಂತೂ ಇಂತೂ ಬಂಗಾರದ ಬೆಲೆಯಲ್ಲಿ ಮಂದಿ.

Regd. No. B. 3148 | LICENCE No. 3 Licensed to post without prepayment | Karmaveer 7-II-53